UNIVERSAL LIBRARY
OU_200626
UNIVERSAL LIBRARY

OSMANIA UNIVERSITY LIBRARY

Call No. K92 B/H15S. Accession No. K526

Author ಹನುಮಂತಪ್ಪ, P. G.

Title ಶಿವಶರಣರ ಚರಿತ್ರೆಗಳು ಭಾಗ 3 1951

This book should be returned on or before the date last marked below.

ಇದನ್ನು ವಿಜಾಪೂರದಲ್ಲಿ
ರಾ|| ಬ|| ಫ. ಗು. ಹಳಕಟ್ಟಿ ಇವರು ತಮ್ಮ
" ಹಿತಚಿಂತಕ ಪ್ರಿಂ. ಪ್ರೆಸ್ಸಿ " ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪೂರದಲ್ಲಿ
ವಾರ್ಡ ನಂ|| ೨, ಮನೆ ನಂ|| ೧೩೬೪ ನೇ ಮನೆಯಲ್ಲಿ
ಪ್ರಕಟಿಸಿದರು.

# ಪ್ರಸ್ತಾವನೆ.

ಈ ಗ್ರಂಥವು ನಾವು ಕಾಲಕಾಲಕ್ಕೆ ಪ್ರಸಿದ್ಧ ಮಾಡುತ್ತ ಬಂದ "ಶಿವಶರಣರ ಚರಿತ್ರೆಗಳು" ಇವರ ಮೂರನೆಯ ಭಾಗವಾಗಿದೆ. ೧ ನೇ ಭಾಗದಲ್ಲಿ ಶಿವಶರಣರ ಕಾಯಕಗಳು ಈ ವಿಷಯವನ್ನು ಮುಖ್ಯವಾಗಿಟ್ಟುಕೊಂಡು ಅದರಲ್ಲಿ ಕಾಯಕ ಮತ್ತು ಸಮಾಜಸೇವೆ ಇವುಗಳನ್ನು ಉದಹರಿಸುವ ೫೧ ಜನ ಶಿವಶರಣರ ಚರಿತ್ರೆಗಳನ್ನು ಕೊಟ್ಟಿದ್ದೇವೆ. ನಮ್ಮ ದೇಶದಲ್ಲಿ ಜನರು ಸಾಮಾನ್ಯವಾಗಿ ಯೋಗಾಭ್ಯಾಸಕ್ಕೆ ಮಹತ್ವದ ಸ್ಥಾನವನ್ನು ಕೊಡುವದುಂಟು. ಅವರು ಅದರ ಮೂಲಕ ಸಿದ್ಧಿಗಳನ್ನು ಸಂಪಾದಿಸಲು ಆತುರರಾಗಿರುವದು ಕಂಡುಬರುತ್ತದೆ. ಇದಕ್ಕೋಸ್ಕರ ಅವರು ಪ್ರಪಂಚವನ್ನು ಬಿಟ್ಟು ಏಕಾಂತವಾಸಿಗಳಾಗುವದುಂಟು. ಅಲ್ಲಿದ್ದುಕೊಂಡು ದೇಹೇಂದ್ರಿಯಗಳನ್ನು ಕ್ಲೇಶಪಡಿಸುವದುಂಟು. ನಮ್ಮ ನಾಡಿನಲ್ಲಿ ಇಂಥ ಅನೇಕ ಉದಾಹರಣೆಗಳಿರುತ್ತವೆ. ಬಸವಾದಿ ಪ್ರಮಥರ ಕಾಲದಲ್ಲಿಯೂ ಈ ಪ್ರವೃತಿಯು ದೇಶದಲ್ಲಿ ಬಹು ಹೆಚ್ಚಾಗಿದ್ದಿತು. ಇದು ಸಾಮವೇದಿ ಶ್ವಪಚಯ್ಯಗಳು, ಗೋರಕ್ಷ ಅಲ್ಲಮಪ್ರಭುಗಳು, ಸಿದ್ಧರಾಮ ಅಲ್ಲಮಪ್ರಭುಗಳು, ಇವರ ಚರಿತ್ರೆಗಳಿಂದ ಕಂಡುಬರುತ್ತದೆ. ಇದರಿಂದ ಹಿಂದಿನ ಕಾಲದಲ್ಲಿ ನಮ್ಮ ಸಮಾಜವು ಧರ್ಮ ಮತ್ತು ನೀತಿ ಇವುಗಳಿಂದ ದೂರಾಗಹತ್ತಿತು. ಆಗ ಶಿವಶರಣರು ಉದಯರಾಗಿ ಈ ಪ್ರವೃತ್ತಿಯನ್ನು ತಡೆದಿದ್ದಾರೆ. ಈ ಸಂಗತಿಯನ್ನು ನಾವು ಪ್ರಕಟಿಸಿದ ಚರಿತ್ರಗ್ರಂಥಗಳ ೧ ನೇ ಭಾಗದಲ್ಲಿ ವಾಚಕರು ಕಾಣಬಹುದು. ಅದರಲ್ಲಿ ಅನೇಕ ಸಿದ್ಧ ಪುರುಷರ ಚರಿತ್ರೆಗಳನ್ನು ಕೊಟ್ಟಿದ್ದೇವೆ. ಇವುಗಳಿಂದ ಸಿದ್ಧಿಗಳನ್ನು ಸಾಧಿಸುವ ಮಾರ್ಗವು ಫಲಕಾರಿಯಲ್ಲೆಂದು ಶಿವಶರಣರು ತಿಳಿದಿದ್ದು ಸ್ಪಷ್ಟವಾಗುತ್ತದೆ.

ಈ ಚರಿತ್ರೆಗಳ ೨ ನೇ ಭಾಗದಲ್ಲಿ ಕರ್ನಾಟಕದಲ್ಲಿ ಆಗಿ ಹೋದ ೬೩ ಜನ ಶಿವಶರಣರ ಚರಿತ್ರೆಗಳನ್ನು ಕೊಟ್ಟಿದ್ದೇವೆ. ಅವರು ವೀರ

ಶೈವ ಧರ್ಮದ ಉಚ್ಚ ತತ್ತ್ವಗಳಂತೆ ನಡೆದವರಿದ್ದಾರೆ. ಅವರ ನಡೆಗಳಿಂದ ಶಿವಾನುಭವದ ರೀತಿಗಳನ್ನು ನಾವು ಅರಿಯಬಹುದು. ಅವರಲ್ಲಿ ಅನೇಕರು ವೀರಶೈವ ಸಮಾಜದ ಅಸ್ತಿತ್ವ ಮತ್ತು ಧರ್ಮಾಭಿವೃದ್ಧಿ ಇವುಗಳಿಗಾಗಿ ಹೆಣಗಾಡಿದವರಿದ್ದಾರೆ. ಹೀಗೆ ೧ ನೇ ಮತ್ತು ೨ ನೇ ಭಾಗಗಳಲ್ಲಿ ಬಂದಿರುವ ೧೧೫ ಜನ ಶಿವಶರಣರ ನಡೆಗಳಲ್ಲಿ ಕಂಡುಬರುವ ಶಿವಾನುಭವದ ತತ್ತ್ವಗಳನ್ನು ೨ ನೇ ಭಾಗದ ಪೀಠಿಕೆಯಲ್ಲಿ ನಾವು ಸವಿಸ್ತಾರವಾಗಿ ನಿರೂಪಿಸಿದ್ದೇವೆ.

ಈಗ ಈ ೩ ನೇ ಭಾಗದಲ್ಲಿ ೨೮ ಜನರ ಚರಿತ್ರೆಗಳು ಬಂದಿವೆ. ಈ ಭಾಗವು ಹಿಂದಿನ ಗ್ರಂಥಗಳಿಗಿಂತಲೂ ಭಿನ್ನ ತೆರನಾದದ್ದಿದೆ. ವೀರಶೈವ ಧರ್ಮವು ಕರ್ನಾಟಕ ದೇಶದ ಹೊರಗೆ ಹಿಂದುಸ್ತಾನದ ಬೇರೆ ಬೇರೆ ಭಾಗಗಳಲ್ಲಿ ಪಸರಿಸಿರುತ್ತದೆ. ಅಲ್ಲಿ ಸಹ ಅನೇಕ ಶಿವಶರಣರು ಉದಯವಾಗಿದ್ದಾರೆ, ಇಷ್ಟೇ ಅಲ್ಲ ಅವರು ಜಾವಾ, ಅರಬಸ್ತಾನಗಳಲ್ಲಿ ಸಹ ಪ್ರವೇಶಮಾಡಿದ್ದಾರೆ. ಇವುಗಳ ವಿವರಣೆಗಳು ಈ ಗ್ರಂಥದಲ್ಲಿ ಬಂದಿರುತ್ತವೆ. ಇದರಲ್ಲಿ | ದೇವರದಾಸಿಮಯ್ಯ ಮೊದಲಾದ ಒಂಬತ್ತು ಜನ ಶಿವಶರಣರ ಚರಿತ್ರೆಗಳು ಬಂದಿವೆ. ಅಲ್ಲದೆ ಆಂಧ್ರದೇಶದವರು ಆರು ಜನರು, ಗುಜರಾಥದವರು ಇಬ್ಬರು, ಅಫಗಾಣಿಸ್ತಾನದವರು ಇಬ್ಬರು, ಹಿಂದುಸ್ತಾನದ ಬೇರೆ ಪ್ರಾಂತದವರು ಆರು ಜನರು, ಮತ್ತು ಪರದೇಶಗಳಿಗೆ ಪ್ರವಾಸಮಾಡಿದವರು ನಾಲ್ವರು ಹೀಗೆ ೨೯ ಜನ ಶಿವಶರಣರ ಚರಿತ್ರೆಗಳು ಇದರಲ್ಲಿ ಬಂದಿವೆ.

ಈ ಚರಿತ್ರೆಗಳ ಮೇಲಿಂದ ಶೈವ ಧರ್ಮೀಯರು ತಮ್ಮ ಸಂಸ್ಕೃತಿಯನ್ನು ಹೇಗೆ ನಾನಾ ದೇಶಗಳಲ್ಲಿ ಪ್ರಸಾರವಮಾಡಲು ಪ್ರಯತ್ನಿಸಿದರೆಂಬುದರ ಸಾಮಾನ್ಯ ಕಲ್ಪನೆಯು ವಾಚಕರಿಗೆ ಉಂಟಾಗಬಹುದು. ಶೈವ ಧರ್ಮದ ಇತಿಹಾಸವು ಇನ್ನೂ ಸಂಶೋಧಿಸಲ್ಪಟ್ಟಿಲ್ಲ. ಪುರಾತನ ವಾಙ್ಮಯ ಸಂಶೋಧಕರು ಈ ವಿಷಯಕ್ಕೆ ಸಾಕಷ್ಟು ತಮ್ಮ ಲಕ್ಷವನ್ನು ಪೂರೈಸಿಲ್ಲ. ಆದರೆ ಈ ಗ್ರಂಥದಲ್ಲಿ ನಾವು ಪ್ರಸಿದ್ಧಿಸಿದ ಚರಿತ್ರೆಗಳ ಮೇಲಿಂದ ಶೈವ ಧರ್ಮದ ಪುರಾತನ ಇತಿಹಾಸದ ಮೇಲೆ ಪ್ರಕಾಶವು ಬೀಳುವಂತೆ ಇದೆ.

ಹೀಗೆ ನಾವು ಈ ಮೂರೂ ಗ್ರಂಥಗಳಲ್ಲಿ ಒಟ್ಟಿಗೆ ೧೪೩ ಜನ ಶಿವಶರಣರ ಚರಿತ್ರೆಗಳನ್ನು ಸಂಶೋಧಿಸಿ ಪ್ರಕಟಿಸಿದ್ದೇವೆ. ಮಹಾಪುರುಷರ ಇಷ್ಟು ದೊಡ್ಡ ಸಮುದಾಯವು ಹಿಂದುಸ್ಥಾನದ ಬೇರೆ ಯಾವ ಭಾಗದಲ್ಲಿಯೂ ಇರಲಿಕ್ಕಿಲ್ಲೆಂದು ನಮಗೆ ತೋರುತ್ತದೆ.

ಈ ಮೂರನೇಯ ಭಾಗದ ಅಂತ್ಯದಲ್ಲಿ ನಾವು ಜಂಗಮವರ್ಗದವರು ಶೈವಧರ್ಮದ ಪ್ರಸಾರದ ಸಲುವಾಗಿ ಹೇಗೆ ಪ್ರಯತ್ನಿಸುತ್ತ ಬಂದರೆಂಬುದರ ವಿವರಣೆಯು ಇದೆ. ಅದರಲ್ಲಿ ಅನೇಕ ನೂತನ ವಿಷಯುಗಳು ಇರುತ್ತವೆಂಬುದು ವಾಚಕರಿಗೆ ಗೋಚರವಾಗಬಹುದು. ಜಂಗಮರಲ್ಲಿ ದೋಷಗಳಿರುತ್ತವೆಂಬದನ್ನು ಎಲ್ಲರೂ ಬಲ್ಲರು. ಜಂಗಮ ಪ್ರೇಮಿಗಳಾದ ವಚನಕಾರರೂ ಸಹ ಅವರನ್ನು ಟೀಕಿಸಿದ್ದುಂಟು. ಆದರೆ ಜಂಗಮರು ಕಾಲಕಾಲಕ್ಕೆ ಮಾಡುತ್ತಬಂದ ಸಮಾಜ ಸೇವೆಯನ್ನು ವೀರಶೈವರು ಮರೆಯತಕ್ಕದ್ದಲ್ಲ. ಶಿವಶರಣರ ಚರಿತ್ರೆಗಳಿಂದ ಈ ವಿಷಯದ ಮೇಲೆ ಯಾವ ಪ್ರಕಾಶವು ಬೀಳುತ್ತದೆಂಬುದನ್ನು "ಜಂಗಮರು" ಈ ಶೀರ್ಷಿಕೆಯ ಕೆಳಗೆ ನಾವು ಗ್ರಂಥದ ಅಂತ್ಯದಲ್ಲಿ ಸವಿಸ್ತಾರವಾಗಿ ನಿರೂಪಣೆ ಮಾಡಿದ್ದನ್ನು ವಾಚಕರು ಅವಲೋಕಿಸಬೇಕು.

ಇನ್ನು ಮುಂದೆ "ಶಿವಶರಣರ ಚರಿತ್ರೆಗಳು" ಇದರ ನಾಲ್ಕನೆ ಭಾಗವನ್ನು ಪ್ರಾರಂಭಿಸುವೆವು. ಅದರಲ್ಲಿ ಬಸವೇಶ್ವರನಿಗೆ ಸಮಕಾಲೀನರಾದ ಮಹಾಸಭಾವರ ಮತ್ತು ಇನ್ನೂ ವಿವರಿಸದೆ ಇದ್ದ ಪಂಚಾಚಾರ್ಯರ ಚರಿತ್ರೆಗಳನ್ನು ಕೊಡುವೆವು. ಕಟ್ಟಕಡೆಗೆ ಬಸವೇಶ್ವರನ ಚರಿತ್ರೆಯನ್ನುಕೊಡುವೆವು. ಈ ಚರಿತ್ರೆಯಲ್ಲಿ ನಾವು ಬಸವೇಶ್ವರನ ಮತ್ತು ಅವನ ಸಮಕಾಲೀನರಾದ ಶಿವಶರಣರ ವಚನಗಳಿಂದ ಅವನ ಚರಿತ್ರೆಯ ಮೇಲೆ ಯಾವ ಪ್ರಕಾಶವು ಬೀಳುತ್ತದೆ ಎಂಬುದನ್ನು ನಿರೂಪಿಸುತ್ತ ಅವನ ಪವಾಡಗಳನ್ನು ಸಹ ಅಭ್ಯಸಿಸಿ ಅವುಗಳ ಸಹಾಯದಿಂದ ಬಸವೇಶ್ವರನ ವ್ಯಕ್ತಿತ್ವವು ಯಾವ ರೀತಿಯದಾಗಿತ್ತೆಂಬುದನ್ನು ನಿರೀಕ್ಷಿಸುವೆವು. ಅಲ್ಲದೆ ಅವನನ್ನು ಉಲ್ಲೇಖಿಸುವ ಶಿಲಾಶಾಸನಗಳು, ಅವನಿಗೆ ಸಂಬಂಧಿಸಿದ ಕುರುಹುಗಳು ಇವುಗಳು ಸಹ ಅವನ ಚರಿತ್ರೆಯಮೇಲೆ ಯಾವ ಪ್ರಕಾಶವನ್ನು ಕೊಡಹುತ್ತಿವೆ ಇದನ್ನು ವಾಚಕರ ಮುಂದಿಡಲು ಉದ್ದೇಶಪಟ್ಟಿದ್ದೇವೆ.

ಈ ಎಲ್ಲ ಸಂಗತಿಗಳನ್ನು ನಾವು ಗ್ರಂಥರೂಪವಾಗಿ ಶೀಘ್ರವಾಗಿಯೇ ಪ್ರಸಿದ್ಧಿಸಬಹುದಾಗಿದೆ. ಆದರೆ ಸಮಾಜದ ಈಗಿನ ಪರಿಸ್ಥಿತಿಯಲ್ಲಿ ಇದು ಶಕ್ಯವೆಂದು ನಮಗೆ ತೋರುವದಿಲ್ಲ. ಆದ್ದರಿಂದನಾವು ವಚನವಾಙ್ಮಯಪ್ರಕಟನೆ, ಶಿವಶರಣರ ಚರಿತ್ರೆಗಳ ಮತ್ತು ರಗಳೆಗಳ ಸಂಶೋಧನೆ ಇವುಗಳನ್ನು ಹೇಗೆ ಶಿವಾನುಭವ ಪತ್ರಿಕೆಯ ದ್ವಾರಾ ಪ್ರಕಟಮಾಡುತ್ತ ಬಂದಿರುತ್ತೇವೆಯೋ ಹಾಗೆಯೇ ಈ ಕೆಲಸವನ್ನು ಮುಂದುವರಿಸಬೇಕೆಂದು ಸಂಕಲ್ಪಿಸಿದ್ದೇವೆ.

ವಿಜಾಪೂರ<br>೨೮—೬—೫೧

ಫ. ಗು. ಹಳಕಟ್ಟಿ<br>ಸಂಪಾದಕ<br>ಶಿವಾನುಭವ

# ವಿಷಯಾನುಕ್ರಮಣಿಕೆ.


| | ಹೆಸರುಗಳು. | ಪುಟ. |
|---|---|---|
| ೧ | ದೇವರದಾಸಿಮಯ್ಯ | ೧ |
| ೨ | ಶ್ವಪಚಯ್ಯ | ೮೭ |
| ೩ | ತೆಲುಗು ಜೊಮ್ಮಯ್ಯ | ೯೫ |
| ೪ | ಶಂಕರ ದಾಸಿಮಯ್ಯ | ೧೦೬ |
| ೫ | ವೀರ ಶಂಕರದೇವ | ೧೩೦ |
| ೬ | ಢಕ್ಕೆಯ ಮಾರಯ್ಯ | ೧೩೭ |
| ೭ | ಗಾಣದ ಕನ್ನಪ್ಪ | ೧೪೯ |
| ೮ | ದೀಪವ ಕಲಿ | ೧೫೩ |
| ೯ | ರಕ್ಕಸ ಬ್ರಹ್ಮಯ್ಯ | ೧೫೪ |
| ೧೦ | ಶಿವಶರಣರು ಮಾಡಿದ ಕ್ರಾಂತಿ | ೧೫೯ |
| | **ಆಂಧ್ರ ಶಿವಶರಣರು.** | |
| ೧೧ | ಧವಳೇಶ್ವರ | ೧೬೪ |
| ೧೨ | ರೇವಯ್ಯ ದೇವ | ೧೬೭ |
| ೧೩ | ವೆಲ್ಲಗೊಂಡದ ಮಹಾದೇವಯ್ಯ | ೧೭೧ |
| ೧೪ | ಗುರುಭಕ್ತ | ೧೭೨ |
| ೧೫ | ಮಲ್ಲಿಕಾರ್ಜುನ ಪಂಡಿತಾರಾಧ್ಯ | ೧೭೬ |
| ೧೬ | ಪಾಲ್ಕುರಿಕೆ ಸೋಮ | ೧೯೭ |
| | **ಗುಜರಾಥ ದೇಶದ ಶಿವಶರಣರು** | ೨೨೨ |
| ೧೭ | ಓಹಿಲ | ೨೨೬ |
| ೧೮ | ಉದ್ಭಟ | ೨೩೪ |
| | **ಅಫಗಾಣಿಸ್ತಾನದಲ್ಲಿಯ ಶಿವಶರಣರು** | ೨೪೧ |
| ೧೯ | ಹಲಾಯುಧ | ೨೪೪ |
| ೨೦ | ಮರುಳ ಶಂಕರದೇವ | ೨೪೯ |
| | **ಇತರ ಹಿಂದುಸ್ತಾನದಲ್ಲಿಯ ಶಿವಶರಣರು** | ೨೧೭ |
| ೨೧ | ಧನಶೀಲ ಸೆಟ್ಟಿ | ೨೫೭ |
| ೨೨ | ಘಂಟಾಕರ್ಣ | ೨೫೮ |
| ೨೩ | ಸೋಮಾಶಿಮಾರ | ೨೫೯ |
| ೨೪ | ಸಿಂಧುಮರಾಳ | ೨೬೩ |
| ೨೫ | ಸಿಂಧುಸೇನ | ೨೬೪ |
| ೨೬ | ಕಲಾವತಿ | ೨೬೬ |
| | **ಪರದೇಶಗಳಲ್ಲಿ ಆಗಿಹೋದ ಶೈವ ಮಹಾನುಭಾವರು** | ೨೬೮ |
| ೨೭ | ರೇಣುಕ | ೨೬೮ |
| ೨೮ | ಅಗಸ್ತ್ಯ (ಇಂಡೋನೇಶಿಯಾ) | ೨೭೦ |
| ೨೯ | ಅರಬಸ್ತಾನದ ಮಕ್ಕೇಶ್ವರ | ೨೭೬ |
| ೩೦ | ಶಿಶುನಾಗ | ೨೭೮ |
| ೩೧ | ಜಂಗಮರು | ೨೮೨ |

# ಶಿವಶರಣರ ಚರಿತ್ರೆಗಳು.

## ಭಾಗ ೩.

### ದೇವರ ದಾಸಿಮಯ್ಯ.

ದೇವರ ದಾಸಿಮಯ್ಯನು ಮುದನೂರು ಎಂಬ ಗ್ರಾಮದವನು. ಈ ಗ್ರಾಮವು ವಿಜಾಪುರ ಜಿಲ್ಲೆಯಲ್ಲಿ ಒಂದು ತಾಲೂಕು ಸ್ಥಳವಾದ ಸಿಂದಗಿಯ ಆಗ್ನೇಯ ದಿಕ್ಕಿಗೆ ೩೦ ಮೈಲುಗಳ ಮೇಲೆ ಇರುತ್ತದೆ. ಇದು ಈಗ ಕಲಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನಲ್ಲಿದೆ. ಇಲ್ಲಿ ಅಸಂಖ್ಯ ಪುರಾತನ ದೇವಾಲಯಗಳೂ ತೀರ್ಥಗಳೂ ಇದ್ದು ಅವುಗಳಲ್ಲಿ ಅನೇಕ ದೇವಾಲಯಗಳು ಈಗ ನೆಲಸಮವಾಗಿವೆ. ಈ ದೇವಾಲಯಗಳಲ್ಲಿ ರಾಮನಾಥ ದೇವಾಲಯವೇ ಮಹತ್ವವಾದುದು. ಅಲ್ಲದೆ ಮಲ್ಲಿಕಾರ್ಜುನನ ಗುಡಿಯೊಂದಿದ್ದು ಇದಾದರೂ ಮುಖ್ಯವಾದುದು. ಈ ದೇವಾಲಯಗಳ ಗೋಡೆಗಳ ಮೇಲೆ ಭಾವಪೂರ್ಣವಾದ ಗೊಂಬೆಗಳೂ ಸೂಕ್ಷ್ಮತರವಾದ ಕೆತ್ತಿಗೆಯ ಕುಸುರುಗಳೂ ತುಂಬಿ ಹೋಗಿದ್ದು ಈ ಸ್ಥಾನಗಳು ಚಿತ್ರಗಳಂತೆ ಕಂಗೊಳಿಸುತ್ತವೆ. ಈ ಗ್ರಾಮದಲ್ಲಿ ಚಾಲುಕ್ಯ, ರಾಷ್ಟ್ರಕೂಟ, ಕಲಚೂರ್ಯ, ಮೊದಲಾದ ರಾಜಮನೆತನಗಳ ಅನೇಕ ಶಿಲಾಶಾಸನಗಳಿದ್ದು ಅವುಗಳಲ್ಲಿ ಈ ಸ್ಥಳವು ದಕ್ಷಿಣ ವಾರಣಾಸಿ ಎಂದು ಕರೆಯಲ್ಪಟ್ಟಿರುತ್ತದೆ. ಇಲ್ಲಿ ರಾಮತೀರ್ಥ, ಲಕ್ಷ್ಮಣ ತೀರ್ಥ, ಹಾಲು ತೀರ್ಥ, ಸಂಗಮ ತೀರ್ಥ, ಪಾಂಡು ತೀರ್ಥ, ಮರುಳು ತೀರ್ಥ, ಸಕ್ಕರೆ ತೀರ್ಥ, ಎಂಬ ಹೆಸರಿನ ಏಳು ತೀರ್ಥಗಳಿವೆ. ಇವುಗಳಲ್ಲಿ ರಾಮತೀರ್ಥ ಮತ್ತು ಲಕ್ಷ್ಮಣ ತೀರ್ಥಗಳು ದೊಡ್ಡವಿದ್ದು ಅವುಗಳೊಳಗಿಂದ ನೀರಿನ ಪ್ರವಾಹವು ಯಾವಾಗಲೂ ಹರಿಯುತ್ತಿರುತ್ತದೆ. ಹಾಲು ತೀರ್ಥ ಮತ್ತು ಸಂಗಮ ತೀರ್ಥಗಳಲ್ಲಿ ಬರಗಾಲದಲ್ಲಿಯೂ ಕೂಡ ನೀರು ಸರಿಯುವದಿಲ್ಲ. ಈ ನೀರಿನ ಪ್ರವಾಹಗಳ ಮೂಲಕ ಗ್ರಾಮದ ಸುತ್ತಲೆಲ್ಲ ಅಸಂಖ್ಯ ತೋಟಪಟ್ಟಿಗಳು ಉಂಟಾಗಿದ್ದರಿಂದ ಈ ಭಾಗದ

ಈ ವಸ್ತ್ರಕಾರರಿಗೆ ಶಿವನ ನಡೆ, ಶಿವನ ನುಡಿ, ಶಿವನ ಭಾವ, ಶಿವನ ಭಕ್ತಿ, ಶಿವಲಿಂಗ ದೀಕ್ಷೆಗಳುಂಟಾಗಿ ನಾಡಿನಲ್ಲಿ ಬಹು ಬಲಿಷ್ಠರಾಗಿ ಆಚರಿಸುವವರಾದರು. ಅವರಿಗೆ ದೇವಾಂಗರು, ವೀರಶೈವ ಮಹಾದೇವಾಂಗರು, ದೇವಾಂಗ ವೀರಶೈವರು, ಪಟಕಾರರು, ಸಾಲಿಗರು, ನೆಯ್ಗೆಯುವರು, ಇವೇ ಮೊದಲಾದ ನಾಮಗಳನ್ನು ದೇಶ ಮಧ್ಯದಲ್ಲಿ ಧರಿಸುವವರಾದರು.

ಈ ದೇವಾಂಗ ಗಣೇಶ್ವರನು ಮುಂದೆ ವಿದ್ಯಾಧರ, ವರರುಚಿ, ದೇವಸಾಲಿ ಎಂಬಿವೇ ಮೊದಲಾದ ಕೆಲವು ಅವತಾರಗಳನ್ನು ಕಾಲ ಕಾಲಕ್ಕೆ ತಾಳಿ ಲೋಕವನ್ನು ಉದ್ಧರಿಸುವವನಾದನು. (೧)

ದೇವಾಂಗ ಗಣೇಶ್ವರನ ಅಸ್ತಿತ್ವವನ್ನೂ ಮಹತ್ವವನ್ನೂ ಹಿಂದಿನ ಕಾಲದ ಶಿವಶರಣರು ಒಪ್ಪಿಕೊಂಡಿರುತ್ತಾರೆ. ಅವರು ಅವನನ್ನು ತಮ್ಮ ಉಕ್ತಿಗಳಲ್ಲಿ ಸ್ಮರಿಸಿರುತ್ತಾರೆ. ಪ್ರಮಥ ಶ್ರೇಷ್ಠನಾದ ಚನ್ನ ಬಸವೇಶ್ವರನು ತನ್ನ ಒಂದು ವಚನದಲ್ಲಿ ಪ್ರಭುದೇವರ ಮತ್ತು ಬಸವೇಶ್ವರನ ಪೂರ್ವಾಪರವನ್ನು ಹೇಳುವಲ್ಲಿ ನುಡಿದಿರುವದೇನೆಂದರೆ:—

"ಕೃತಯುಗದಲ್ಲಿ ದೇವಾಂಗನೆಂಬ ಗಣೇಶ್ವರನಾಗಿ ನೀನು ಬಂದು ಆರಾಧಿಸುವಲ್ಲಿ ಸ್ಥೂಲಕಾಯನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆ ಮಾಡಿ ಹೋದನು, ಅದರ ಕ್ರಿಯಾಂಗವನು ಮರೆದೆಯಲ್ಲ ಬಸವಣ್ಣ. ತ್ರೇತಾಯುಗದಲ್ಲಿ ಘಂಟಾಕರ್ಣನೆಂಬ ಗಣೇಶ್ವರನಾಗಿ ನೀನು ಬಂದು ಆರಾಧಿಸುವಲ್ಲಿ ಶೂನ್ಯ ಕಾಯನೆಂಬ ಜಂಗಮನಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು, ಅದರ ಕ್ರಿಯಾಂಗವನು ಮರೆದೆಯಲ್ಲ ಬಸವಣ್ಣ. ದ್ವಾಪರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿ ಬಂದು ಆರಾಧಿಸುವಲ್ಲಿ ಅನುಮಿಷನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿಹೋದನು, ಅದರ ಕ್ರಿಯಾಂಗವನು ಮರೆದೆಯಲ್ಲ ಬಸವಣ್ಣ. ಕಲಿಯುಗದಲ್ಲಿ ನೀನು ಬಸವಣ್ಣ

---

ಟೀಪು—(೧) ಮನು ಪುರಾಣ ಎಂಬುದರಲ್ಲಿ ದೇವಾಂಗನ ಹೆಸರಿನ ಬದಲು ಮನು ಎಂಬ ಹೆಸರು ಬಂದಿರುತ್ತದೆ. ಈ ಮನುವು ದೇವದತ್ತೆಯನ್ನು ಲಗ್ನವಾದನೆಂತಲೂ ಅವನಿಗೆ ೭೨ ಮಾನಸ ಪುತ್ರರು ಉದಯವಾದರೆಂತಲೂ ಈ ಪುತ್ರರಿಂದ ವಸ್ತ್ರಕಾರರು ಜನಿಸಿದರೆಂತಲೂ ಹೇಳಲ್ಪಟ್ಟಿರುತ್ತದೆ. ಈ ಮನುವು ವೀರಶೈವ ದೀಕ್ಷೆಯನ್ನು ಹೊಂದಿದ್ದನೆಂದು ಇದರಲ್ಲಿ ಹೇಳಿದೆ.

ನೆಂಬ ಗಣೇಶ್ವರನಾಗಿ ಬಂದು ಆರಾಧಿಸುವಲ್ಲಿ ಪ್ರಭುದೇವರೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಬಂದ ಕಾರಣ, ಇಂತೀ ದೇವಭಕ್ತನೆಂಬ ನಾಮ ನಾಟಕ ಬಿನ್ನಾಣವಲ್ಲದೆ ಬೇರೆಂದು ಕಂಡವರಿಗೆ ನರಕ ತಪ್ಪದು ಕೂಡಲ ಚನ್ನ ಸಂಗಮ ದೇವಾ" ಹೀಗೆ ಚನ್ನಬಸವನು ನುಡಿದಿದ್ದು. ಇದನ್ನು ಗೂಳೂರು ಸಿದ್ಧವೀರಣಾಚಾರ್ಯರು ತಮ್ಮ ಶೂನ್ಯ ಸಂಪಾದನೆಯ ಗ್ರಂಥದಲ್ಲಿ ಉದಹರಿಸಿದ್ದಾರೆ (ಶೂನ್ಯ ಸಂಪಾದನೆ ಪುಟ ೩೧೨.)

ಈ ದೇವಾಂಗ ಗಣೇಶ್ವರನ ಸಂತತಿಯವರು ಕರ್ನಾಟಕ, ದ್ರಾವಿಡ ಮತ್ತು ಆಂಧ್ರ ದೇಶಗಳಲ್ಲಿ ವಾಸಿಸುವವರಾಗಿದ್ದಾರೆ. ಅಲ್ಲಿ ಅವರಿಗೆ ಮೇಲೆ ಹೇಳಿದಂತೆ ಅನೇಕ ತರದ ಅಭಿಧಾನಗಳುಂಟಾಗಿರುತ್ತದೆ. ಅವರಲ್ಲಿ ಅನೇಕರು ಪೂರ್ಣ ವೀರಶೈವರಾಗಿಯೂ ಕೆಲವರು ಮಿಶ್ರ ಶೈವರಾಗಿಯೂ ಈಗ ವ್ಯವಹರಿಸುವದು ಕಂಡುಬರುತ್ತದೆ.

ಆಂಧ್ರ ದೇಶದಲ್ಲಿ ಕರ್ನಾಟಕದಲ್ಲಿಯಂತೆಯೇ ವೀರಶೈವ ವಸ್ತ್ರಕಾರರಿದ್ದಾರೆ. ಅವರ ವಿಷಯವಾಗಿ ಶ್ರೀ ಜಗದ್ಗುರು ಕಾಶೀ ವಿಶ್ವಾರಾಧ್ಯ ಸಿಂಹಾಸನ ಪೀಠಾಧಿಪತಿಗಳಾದ ಈಗಿನ ಮಹಾಸ್ವಾಮಿಗಳವರು (ಮೊದಲು ಅವರು ಚಿದರೆ ಮಠದ ವೀರಭದ್ರ ಶರ್ಮರು ಬನಾರಸ ಸಿಟಿ) ಶಿವಾನುಭವ ಪತ್ರಿಕೆಯ ೪ನೇ ಸಂಪುಟ ಸಂಚಿಕೆ ೧ ಪುಟ ೬ ಮತ್ತು ೧೩ ಇವುಗಳಲ್ಲಿ 'ಆಂಧ್ರ ವೀರಶೈವರು' ಎಂಬ ಶಿರೋನಾಮೆಯುಳ್ಳ ತಮ್ಮ ಒಂದು ಲೇಖದಲ್ಲಿ ಕೆಳಗೆ ಕಾಣಿಸಿದಂತೆ ನಿರೂಪಿಸಿರುತ್ತಾರೆ. ಅದು ಹೇಗೆಂದರೆ:—

ಶೀಲವಂತರು:-"ಆಂಧ್ರ ದೇಶದ ವೀರಶೈವರಲ್ಲಿ ಕಟ್ಟು ನಿಟ್ಟುಗಳಾದ ಆಚಾರ (ಶೀಲ)ಗಳುಳ್ಳವರೆಂದರೆ ಇವರೇ! ಈ ವಿಷಯದಲ್ಲಿ ವರನ್ನು ಮಾಹೇಶ್ವರರು ಕೂಡಾ ಸರಿಗಟ್ಟಲಾರರು. ಪಾಲ್ಕುರಿಕೆ ಸೋಮನಾರಾಧ್ಯರ ತರುವಾಯ ಅರುವತ್ತುಮೂರು ಶೀಲಗಳಲ್ಲಿ ಕೆಲವನ್ನಾದರೂ ದೀಕ್ಷೆಯಿಂದ ಉಳಿಸಿಕೊಂಡು ಬಂದಿರುತ್ತಾರೆ. ಇವರ ಸಂಖ್ಯೆ ಬಹಳ ಅಲ್ಪವಾದುದು. ಇವರನ್ನು ಆಂಧ್ರಭಾಷಿಗಳು 'ಶೀಲವಂತುಲು' ಎಂದು ಕರೆಯುತ್ತಾರೆ. ಇವರು ಕೇವಲ ಮಾಹೇಶ್ವರರೊಡನೆ ಭುಂಜಿಸುತ್ತಾರಷ್ಟೇ. ಇವರ ಮುಖ್ಯ ವೃತ್ತಿ ನೆಯಿಗಾರಿಕೆ. ವಿದ್ಯಾಗಂಧರಹಿತ

ರಾದಾಗ್ಯೂ ತಕ್ಕ ಮಟ್ಟಿಗೆ ವೀರಶೈವ ಮತದ ಪ್ರಾಶಸ್ತ್ಯವನ್ನೂ ಕೆಲವು ವಿಶೇಷ ವಿಷಯಗಳನ್ನೂ ತಿಳಿದವರಾಗಿರುತ್ತಾರೆ. ಬಣಜಿಗರಿಗೂ ಶೀಲವಂತರಿಗೂ ಪರಸ್ಪರವಾಗಿ ಮನಸ್ಪರ್ಧೆಗಳಿವೆ. ಆದುದರಿಂದ ಇವರನ್ನವರೂ ಅವರನ್ನಿವರೂ ಕಡಿಮೆ ಕುಲದವರೆಂದು ತಿಳಿಯುವದುಂಟು. ಈ ಜಾತಿಯವರಲ್ಲಿ ವಿಶೇಷವಾಗಿಯುರುಹಬೇಕಾದುದಿಷ್ಟೇ ! ”

**ದೇವಾಂಗರು:**—“ಇವರಲ್ಲಿ ಶೈವ ವೈಷ್ಣವ ಸ್ಮಾರ್ತ ಭೇದದಿಂದ ಮೂರು ಪಂಗಡಗಳಾಗಿವೆ. ಶೈವರೆಂಬುವರೇ ಲಿಂಗವಂತರು. ಉಳಿದವರಲ್ಲಿ ಕೆಲವರು ಜನಿವಾರ ಹಾಕಿ ತಿಲಕವನ್ನಿಟ್ಟುಕೊಂಡು ಸ್ಮಾರ್ತರಾಗಿಯೂ ಮತ್ತೆ ಕೆಲವರು ಹಣೆಯ ಮೇಲೆ ಮೂರು ಉದ್ದನ್ನ ಗೀಟು (ಉರ್ಧ್ವ ಪುಂಡ್ರ)ಗಳನ್ನು ಧರಿಸಿಕೊಂಡು ವೈಷ್ಣವರಾಗಿಯೂ ಕಾಣಿಸುತ್ತಾರೆ. ಲಿಂಗಧಾರಿಗಳ ಹವ್ಯಕವ್ಯಾದಿಗಳನ್ನು ಮಾಹೇಶ್ವರರು ನೆರವೇರಿಸುತ್ತಾರೆ. ವಿಶೇಷವಾಗಿ ‘ಸ್ಥಳಪತಿ ಜಂಗಮ’ರೊಡನೆ ಇವರಿಗೆ ಸಂಬಂಧವಿದೆ. ಆಚಾರ ವಿಚಾರಗಳಿಂದಲೂ ಇವರು ಸ್ಥಳಪತಿ ಜಂಗಮರನ್ನೇ ಹೋಲುತ್ತಾರೆ. ವೈಷ್ಣವರಿಗಿಂತಲೂ ಶೈವದೇವಾಂಗಿಗಳು ಸಂಖ್ಯೆಯಿಂದ ಹೆಚ್ಚಿರಬಹುದು... ಗಂಜಾಂ, ಗೋದಾವರೀ, ಕೃಷ್ಣಾ, ಗುಂಟೂರು, ವಿಶಾಖಪಟ್ಟಣ ಜಿಲ್ಲೆಗಳು ಇವರಿಗೆ ಮುಖ್ಯ ವಾಸಸ್ಥಾನವು. ಅದರಂತೆ ಇವರ ಮುಖ್ಯ ವೃತ್ತಿ ನೆಯಿಗಾರಿಕೆಯೇ-ಆಂಧ್ರ ದೇಶದಲ್ಲಿಯವರಿಗೆ ‘ದೇವಾಂಗುಲು’ ಎಂದು ಹೆಸರುಂಟು. ಸಂಗೀತ ಸರಸ್ವತಿ ಎನಿಸಿದ ಶ್ರೀ ತ್ಯಾಗರಾಜರು ದೇವಾಂಗ ಜಾತಿಗೆ ಸೇರಿದವರೆಂದು ಪ್ರತೀತಿ. ಇವರ ತೆಲುಗು ಕೃತಿ (ಪದ)ಗಳನ್ನು ಇಡೀ ದಕ್ಷಿಣ ಭಾರತ ದೇಶದ ಸಂಗೀತ ವಿದ್ವಾಂಸರೆಲ್ಲರೂ ಅವಶ್ಯವಾಗಿ ಅಭ್ಯಾಸಿಸುತ್ತಾರೆನ್ನುವದು ವಿಜ್ಞರಿಗೆ ಪರಿಚಯವೇ ಸರಿ.

“ಲಿಂಗವಂತ ದೇವಾಂಗರಿಗೆ ಜಂಗಮರೇ ಗುರುಗಳಾಗಿರುತ್ತಾರೆ. ದೇವಾಂಗಿಗಳ ಮೂಲ ಪುರುಷನ ಉತ್ಪತ್ತಿಯನ್ನು ಕುರಿತು ‘ದೇವಾಂಗ ಪುರಾಣ’ದಲ್ಲಿ—“ಈಶ್ವರನ ಶರೀರದಿಂದ ದೇವಲ (ದೇವಾಂಗ)ನೆಂಬ ಋಷಿ ಹುಟ್ಟಿ ಬ್ರಹ್ಮನಿಗೂ ಅಶಕ್ಯವಾದ ತಂತುಕಾರಕ ವಿದ್ಯೆಯನ್ನು ಸಂಪಾದಿಸಿ ವಸ್ತ್ರಗಳನ್ನು ಸಿದ್ಧಗೊಳಿಸಿ ದೇವತೆಗಳಿಗೆ ಕೊಟ್ಟನು. ಅಲ್ಲದೆ ಮತ್ತು ಶಂಕರನ ಅಪ್ಪಣೆಯ ಮೇರೆಗೆ ಆಮೋದಪುರಕ್ಕೆ ರಾಜನಾಗಿ

ಶೇಷನ ಪುತ್ರಿಯಾದ ಚಂದ್ರರೇಖೆಯನ್ನೂ ಸೂರ್ಯನ ಸೋದರಿಯಾದ ದೇವದತ್ತೆಯನ್ನೂ ಲಗ್ನಮಾಡಿಕೊಂಡು, ದಿವ್ಯಾಂಗ, ವಿಮಲಾಂಗ, ಧವಳಾಂಗರೆಂಬ ಮಕ್ಕಳನ್ನು ಪಡೆದನು. ಆ ಮೇಲೆ ರಂಭಾಶಾಪದಿಂದ ೫ ಸಾವಿರ ವರುಷಗಳ ವರೆಗೆ ಶೂದ್ರನಾಗಿಯೂ ೫ ಸಾವಿರ ವರುಷಗಳ ವರೆಗೆ ಬ್ರಾಹ್ಮಣನಾಗಿಯೂ ಜೀವಿಸಿದನು, ಎಂದು ಇದರಲ್ಲಿ ವರ್ಣಿಸಲ್ಪಟ್ಟು ಕಡೆಗೆ ದೇವಾಂಗಿಗಳು ಅವನ ವಂಶದವರೆಂದೇ ನಿರೂಪಿಸಲ್ಪಟ್ಟದೆ. 'ಪಟ್ಟುಸಾಲೆ ವಾರೆ'ಂಬ ಜಾತಿಯೂ ಇವರೊಳಗೆ ಮತ್ತೊಂದಿದೆಯೆಂದು ತಿಳಿದುಬರುತ್ತಿದೆ. ಇವರು ಪಶ್ಚಿಮಾಂಧ್ರ ದೇಶದಲ್ಲಿ ವಾಸಿಸುತ್ತಾರೆ. "

ಹಿಂದೆ ವಿವರಿಸಿದ ಪ್ರಕಾರ ದೇವಾಂಗ ಗಣೇಶ್ವರನು ಕೆಲವು ಅವತಾರಗಳನ್ನು ತಾಳಿ ಹೋದಬಳಿಕ ಭೂಲೋಕದಲ್ಲಿ ಅಧರ್ಮವೂ ಅನಾಚಾರಗಳೂ ಪುನಃ ಹೆಚ್ಚಾದ್ದನ್ನು ನಾರದಮುನಿಯು ತಿಳಿದು ಅದನ್ನು ಶಿವನಿಗೆ ಅರಿಕೆ ಮಾಡಬೇಕೆಂದು ಅವನಿದ್ದೆಡೆಯಾದ ಕೈಲಾಸಕ್ಕೆ ಹೋಗಿ ಇದನ್ನು ನಿವೇದಿಸಲು, ಶಿವನು ಇದನ್ನು ದೂರಮಾಡಲು ದೇವಾಂಗ ಗಣೇಶ್ವರನೇ ಸಮರ್ಥನೆಂದು ತಿಳಿದು ಪುನಃ ಅವನಿಗೆ— ನೀನು ಭೂಲೋಕದಲ್ಲವತರಿಸಿ ಧರ್ಮೋದ್ಧಾರ ಮಾಡಬೇಕೆಂದು ತಿಳಿಸಲು ಅವನು ಅದಕ್ಕೆ ಒಪ್ಪಿ ಕರ್ನಾಟಕದಲ್ಲಿ ಪುಣ್ಯಭೂಮಿ ಎಂದೆನಿಸಿಕೊಂಡ ಮುದನೂರಲ್ಲಿ ಕಾಮಯ್ಯ ಮತ್ತು ಶಂಕರೀ ಇವರಲ್ಲಿ ಮಗನಾಗಿ ಜನಿಸಿದನು. ಆ ಸಮಯದಲ್ಲಿ ರಾಮನಾಥಲಿಂಗದೊಳಗಿಂದ ಒಬ್ಬ ಜಂಗಮನು ಉದ್ಭವಿಸಿ, ಅವನು ಆ ಮಗುವನ್ನು ಕಂಡು ಆಶೀರ್ವದಿಸಿ, ಅವನಿಗೆ ದೇವರದಾಸಿಮಯ್ಯನೆಂಬ ಹೆಸರನ್ನಿಟ್ಟು ತಾನು ಅದೇ ಲಿಂಗದಲ್ಲಿ ಅಂತರ್ಧಾನನಾದನು. ಅಂದಿನಿಂದ ದೇವರದಾಸಿಮಯ್ಯನು ರಾಮನಾಥನ ಪೂರ್ಣ ಭಕ್ತನಾಗಿ ಆಚರಿಸಹತ್ತಿದನು.

ಶಿವಶರಣರಲ್ಲಿ ಅವತಾರಿಕ ಪುರುಷರೆಂತಲೂ ಮಹಾತ್ಮರೆಂತಲೂ ನಾವು ಎರಡು ವಿಭಾಗಗಳನ್ನು ಮಾಡಬಹುದು. ಅವತಾರಿಕ ಪುರುಷರು ಶಿವನಿಂದ ನಿರೂಪಣೆ ಹೊಂದಿ ಕೆಲವೊಂದು ವಿಶಿಷ್ಟ ಕಾರ್ಯವನ್ನು ಮಾಡಲು ಜಗತ್ತಿಗೆ ಬಂದವರು ಮತ್ತು ಮಹಾತ್ಮರಾದವರು ಶಿವನಿಂದ ನಿರೂಪಣೆ ಹೊಂದದಿದ್ದರೂ ತಮ್ಮ ಆಚರಣೆಯಿಂದ ಉಚ್ಚ

ಸ್ಥಾನವನ್ನು ಹೊಂದಿದವರು, ಮಹಾದೇವಿಯಕ್ಕ, ಅಲ್ಲಮಪ್ರಭು, ಬಸವಾದಿಪ್ರಮಥರೂ ರೇವಣಸಿದ್ಧಾದಿ ಪಂಚಪೀಠಗಳ ಮೂಲ ಸಂಸ್ಥಾಪಕರೂ ಮೊದಲಿನ ವರ್ಗದಲ್ಲಿ ಬರುತ್ತಾರೆ. ಇವರು ಕಾಲಕಾಲಕ್ಕೆ ಸಮಾಜದಲ್ಲಿ ಉದ್ಭವಿಸಿ ಕ್ರಾಂತಿಯನ್ನುಂಟು ಮಾಡುತ್ತಾರೆ. ಬೇರೆ ಶಿವಶರಣರು ಹೀಗೆ ಅನುಜ್ಞೆಯನ್ನು ಹೊಂದದೆ ಇದ್ದರೂ ತಮ್ಮ ಆಚರಣೆಯಿಂದ ನಾಡಿನಲ್ಲಿ ಧರ್ಮಜಾಗ್ರತಿಯ ಕಾರ್ಯವನ್ನು ಮಾಡುತ್ತಾರೆ. ಈ ಉಭಯತರಲ್ಲಿ ಅವತಾರಿಕ ಪುರುಷರ ಸಂಖ್ಯೆಯು ಸ್ವಾಭಾವಿಕವಾಗಿ ಬಹಳ ಕಡಿಮೆ ಇರುತ್ತದೆ. ಆದರೂ ಅವರು ಯಾವ ಯಾವ ಕಾಲದಲ್ಲಿ ಉದ್ಭವಿಸಿದರು, ಅವರು ಯಾವ ಯಾವ ಕಾರ್ಯಗಳನ್ನು ಮಾಡಿದರು ಎಂಬುದನ್ನು ನಾವು ನಿರೀಕ್ಷಿಸುವದು ಬಹು ಮಹತ್ವವಾದುದು. ಇದರಿಂದ ಸಮಾಜದಲ್ಲಿ ಉತ್ಕ್ರಾಂತಿಯು ಹೇಗೆ ಆಗುತ್ತ ಬಂದಿತೆಂಬುದನ್ನು ತಿಳಿಯಲು ನಮಗೆ ಬಹಳ ಸಹಾಯವಾಗುತ್ತದೆ.

ನಾವು ಇದುವರೆಗೆ ಪ್ರಸಿದ್ಧಪಡಿಸಿದ ಶಿವಶರಣರ ಚರಿತ್ರೆಗಳನ್ನು ನಿರೀಕ್ಷಿಸಿದಲ್ಲಿ ವರದಾನಿಗುಡ್ಡಮ್ಮ, ಬಹುರೂಪಿಚೌಡಯ್ಯ, ಶಿವಯೋಗಿ ಮಲ್ಲರಸ, ಸಕಲೇಶಮಾದರಸ ಇವರು ಅವತಾರಿಕ ಪುರುಷರೆಂದು ನಾವು ತಿಳಿಯಬಹುದು. ಅವರು ಶಿವನಿಂದ ನಿಶ್ಚಿತ ಆಜ್ಞೆಯನ್ನು ಹೊಂದಿ ಲೋಕದಲ್ಲಿ ಅವತರಿಸಿ ಧರ್ಮೋದ್ಧಾರದ ವಿಶಿಷ್ಟಕಾರ್ಯಗಳನ್ನು ಮಾಡಿದ್ದಾರೆ. ಇವರಲ್ಲಿ ಬಹುರೂಪಿಚೌಡಯ್ಯನು ಶಿವನ ಸನ್ನಿಧಿಯಲ್ಲಿ ಶ್ರೀಧರ ಗಣೇಶ್ವರನಾಗಿದ್ದನು. ಅವನು ಭೂಲೋಕದಲ್ಲಿ ಜನಿಸಿ ಶೈವಧರ್ಮೀಯರಲ್ಲಿ ಕ್ರಾಂತಿಯನ್ನು ಮಾಡಿದನು. ವರದಾನಿಗುಡ್ಡಮ್ಮೆಯು ಪಾರ್ವತಿಯ ಅವತಾರಳು. ಅವಳು ಇಡೀ ಕರ್ನಾಟಕದಲ್ಲಿಯೂ ಶ್ರೀಶೈಲ ಪರ್ವತದ ಪ್ರಾಂತದಲ್ಲಿಯೂ ಧರ್ಮಕ್ರಾಂತಿಯನ್ನು ಮಾಡಿದಳು. ಸಕಲೇಶಮಾದರಸ, ಶಿವಯೋಗಿಮಲ್ಲರಸರು ಸಹನೇಶ ಮತ್ತು ಗಗನೇಶ ಎಂಬ ಇಬ್ಬರು ಗಣಾಧೀಶ್ವರರು. ಇವರು ಕ್ರಿಯಾ ಮಾರ್ಗ, ಜ್ಞಾನ ಮಾರ್ಗ ಇವುಗಳಲ್ಲಿರುವ ತಿಕ್ಕಾಟವನ್ನು ದೂರ ಮಾಡಲು ಅವತರಿಸಿದರು. ಇವರಲ್ಲಿ ಸಕಳೇಶ ಮಾದರಸನು ಧರ್ಮ ಜಾಗ್ರತಿಯನ್ನು ಮಾಡಿದ ರಾಜತ್ರಯರಲ್ಲಿ ಒಬ್ಬನೆಂದು ಭಾವಿಸಲ್ಪಟ್ಟಿದ್ದು ಅವನನ್ನು ಆಂಧ್ರ ವೀರಶೈವರು ಬಹಳ ಪೂಜ್ಯಭಾವದಿಂದ ಕಾಣುತ್ತಾರೆ.

ಅವತಾರ ಪುರುಷರು ತಾಳಿದ ಬೇರೆ ಬೇರೆ ಅವತಾರಗಳಲ್ಲಿ ಅವರಲ್ಲಿ ಭಿನ್ನ ಭಿನ್ನ ವರ್ತನಗಳಿರುವದನ್ನು ನಾವು ಕಾಣಬಹುದು. ಆದರೂ ಈ ಭಿನ್ನತೆಗಳ ನಿರೀಕ್ಷಣೆಯಿಂದ ಸಮಾಜದ ಉತ್ಕ್ರಾಂತಿಯನ್ನು ಕಂಡು ಹಿಡಿಯಲು ನಮಗೆ ಬಹಳ ಸಹಾಯವಾಗುತ್ತದೆ.

ಶಿವಶರಣರಲ್ಲಿ ದೇವರದಾಸಿಮಯ್ಯನನ್ನು ನಾವು ಇಂಥ ಮಹತ್ವದ ಅವತಾರಪುರುಷರಲ್ಲಿ ಎಣಿಸಬಹುದು. ಅವನು ದೇವಾಂಗ ಗಣೇಶ್ವರನ ಅವತಾರವೆಂದು ತಿಳಿಯಲ್ಪಟ್ಟಿದ್ದರಿಂದ ಅವನ ಮೊದಲನೆಯ ಅವತಾರವಾದ ದೇವಾಂಗನ ಸಂಕ್ಷಿಪ್ತ ವೃತ್ತಾಂತವನ್ನು ನಾವು ಇಲ್ಲಿ ಕೊಟ್ಟಿದ್ದೇವೆ. ಆದರೆ ಕರ್ನಾಟಕದಲ್ಲಿಯ ವೀರಶೈವ ನೆಯ್ಗೆಯವರಿಗೆ ದೇವಾಂಗರೆಂಬ ಹೆಸರು ಇರುವದಿಲ್ಲ. ಆಂಧ್ರದೇಶದಲ್ಲಿಯವರಿಗೆ ಈ ಹೆಸರು ಇದ್ದಹಾಗೆ ತೋರುತ್ತದೆ. ಆದರೆ ಶಿವಶರಣರು ವೀರಶೈವರಲ್ಲಿ ಭೇದ ವಿಭೇದಗಳನ್ನು ಒಪ್ಪದೆ ಎಲ್ಲರೂ ವೀರಶೈವರು, ಲಿಂಗಿಗಳು ಎಂದು ಭಾವಿಸಬೇಕೆಂದು ತಮ್ಮ ಉಕ್ತಿಗಳಲ್ಲಿ ಪ್ರತಿಪಾದಿಸುವದನ್ನು ನಾವು ಲಕ್ಷಿಸತಕ್ಕದ್ದು.

ದೇವರದಾಸಿಮಯ್ಯನು ತನ್ನ ಬಾಲ್ಯವನ್ನು ಮುದನೂರಲ್ಲಿ ಕಳೆದ ಹಾಗೆ ತೋರುತ್ತದೆ. ಆದರೆ ಮುಂದೆ ಅವನಲ್ಲಿ ತನ್ನ ಶಿವಜ್ಞಾನವನ್ನು ಹೆಚ್ಚಿಸಬೇಕೆಂಬ ಆಕಾಂಕ್ಷೆಯು ಬಲಿಯಿತು. ಆಗ ಅವನು ಶ್ರೀಶೈಲ ಪರ್ವತ ಪ್ರದೇಶಕ್ಕೆ ತೆರಳಿದನು. ಹಿಂದುಸ್ತಾನದಲ್ಲಿ ಅತ್ಯಂತ ಪ್ರಸಿದ್ಧಿ ಹೊಂದಿದ ದ್ವಾದಶಲಿಂಗಗಳಲ್ಲಿ ಶ್ರೀಮಲ್ಲಿಕಾರ್ಜುನ ಲಿಂಗವು ಒಂದಾಗಿರುತ್ತದೆ.. ಈ ಪರ್ವತಪ್ರಾಂತವು ಶಿವಜ್ಞಾನಿಗಳ ಮತ್ತು ಯೋಗಿಗಳ ಕೇಂದ್ರಸ್ಥಾನವಾಗಿರುತ್ತದೆ. ಇದು ಪೂರ್ವಕಾಲದಲ್ಲಿ ಒಂದು ಪಟ್ಟಣವಾಗಿತ್ತೆಂದು ಅಲ್ಲಿಯ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ತಪಸ್ಸನ್ನಾಚರಿಸಬೇಕೆಂದು ದೇವರದಾಸಿಮಯ್ಯನು ಅಲ್ಲಿಗೆ ಹೊರಟು ಬಂದನು. ಈ ಭಾಗವು ನಿಬಿಡವಾದ ವೃಕ್ಷಲತೆಗಳಿಂದಲೂ ಅರಣ್ಯಪ್ರದೇಶಗಳಿಂದಲೂ ಬಹಳ ಮನೋಹರವಾದುದು. ಅಲ್ಲಿ ಅಷ್ಟಾಂಗ ನಿಷ್ಠರಾದ ಮುನಿಗಳೂ ತಪಸ್ಸನ್ನಾಚರಿಸುವವರೂ ಇದ್ದು, ಅವರನ್ನು ಅವನು ಸಂದರ್ಶಿಸುತ್ತ ಪಾತಾಳಗಂಗೆಗೆ ಬಂದು, ಅಲ್ಲಿಯ ಪವಿತ್ರ ತೀರ್ಥದಲ್ಲಿ ಮಿಂದು, ಅಲ್ಲಿಂದ ಭೀಮೇಶ್ವರ ಲಿಂಗದ ದರ್ಶನವನ್ನು ಹೊಂದಿ ಬಿಲ್ವಾರಣ್ಯವನ್ನು ಪ್ರವೇಶಿಸಿದನು. ಅಲ್ಲಿ ಅವನು ಪರಮಾತ್ಮನ ಧ್ಯಾನದಲ್ಲಿ ಇರಹತ್ತಿದನು.

ಹೀಗೆ ಅವನು ತಪಸ್ಸು ಮಾಡುತ್ತ ಕೆಲವುಕಾಲ ಕಳೆದಬಳಿಕ ಶ್ರೀಮಲ್ಲಿಕಾರ್ಜುನ ದೇವನು ಅವನ ನಿಷ್ಠೆಗೆ ಮೆಚ್ಚಿ ಅವನಿಗೆ ಪ್ರತ್ಯಕ್ಷನಾಗಿ ನಿನ್ನ ಇಷ್ಟವೇನೆಂದು ಕೇಳಲು ದೇವರದಾಸಿಮಯ್ಯನು ತನಗೆ ಮುಕ್ತಿಯ ಮಾರ್ಗವನ್ನು ತೋರಿಸಬೇಕೆಂದು ವಿಜ್ಞಾಪಿಸಿಕೊಂಡನು. ಆಗ ಶ್ರೀಮಲ್ಲಿಕಾರ್ಜುನನು ಅವನಿಗೆ ಇಂಥ ಕಷ್ಟಕರವಾದ ತಪಸ್ಸನ್ನು ಆಚರಿಸಬೇಡ, ತ್ರಿಲಿಂಗಗಳನ್ನು ಅರಿ, ಎಂದು ಹೇಳಿ ತನ್ನ ಸಮ್ಮುಖದಲ್ಲಿ ಶಿವಯೋಗಮಂಟಪವನ್ನು ರಚಿಸಿ, ಮಾಹೇಶ್ವರ ಮೂರ್ತಿಗಳನ್ನು ಬರಮಾಡಿಕೊಂಡು ದಾಸಿಮಯ್ಯನಿಗೆ ಲಿಂಗದೀಕ್ಷೆಯನ್ನು ಮಾಡಿ ಇಷ್ಟಲಿಂಗವನ್ನು ಅನುಗೊಳಿಸಿ, ಪರಶಿವಲಾಂಛನಗಳನ್ನು ಅವನಿಗೆ ತೊಡಿಸಿ, ಅಲ್ಲಿಯ ಸಿಂಹಾಸನೇಶನಾದ ಚಂದ್ರಗುಂಡ ದೇಶಿಕೇಂದ್ರನ ಶುಶ್ರೂಷೆಯಲ್ಲಿ ಇರಬೇಕೆಂದು ಆಜ್ಞಾಪಿಸಿದನು. ಹೀಗೆ ಆಜ್ಞಾಪಿಸಿ ಅವನಿಗೆ ವಸ್ತ್ರರಚನಾ ಕಾಯಕವನ್ನು ಕೈಕೊಂಡು ಅವರ ಮೂಲಕ ದಾಸೋಹದಲ್ಲಿರಲು ನಿಯಾಮಿಸಿದನು. ಮುಂದೆ ದೇವರದಾಸಿಮಯ್ಯನು ಚಂದ್ರಗುಂಡ ಅಥವಾ ಶಶಿಗುಂಡ ದೇಶಿಕನಿಂದ ಶಿವಾನುಭವದ ಪರಮರಹಸ್ಯಾರ್ಥಗಳನ್ನು ತಿಳಿದುಕೊಂಡು ವಸ್ತ್ರಗಳನ್ನು ಮಾಡುವದನ್ನೇ ತನ್ನ ಕಾಯಕವಾಗಿ ಇಟ್ಟುಕೊಂಡು ಅದರಿಂದ ಆರ್ಜಿಸಿದ ದ್ರವ್ಯದಿಂದ ಗುರು ಲಿಂಗ ಜಂಗಮದ ದಾಸೋಹವನ್ನು ಜರಿಗಿಸುತ್ತ ವಿರಕ್ತಾಶ್ರಮಿಯಾಗಿ ಕೆಲವುಕಾಲ ಶ್ರೀಶೈಲದಲ್ಲಿ ಕಳೆದನು. ಶಿವಶರಣರು ಶರೀರಕ್ಕೆ ಅತ್ಯಂತ ಕಷ್ಟಕರವಾಗಿರುವ ತಪಸ್ಸನ್ನಾಚರಿಸದೆ, ಲಿಂಗಧಾರಿಗಳಾಗಿ ಲಿಂಗದ ನೆಲೆಕಲೆಗಳನ್ನು ಅರಿತುಕೊಂಡು ಲಿಂಗನಿಷ್ಠರಾಗಿ ತ್ರಿಲಿಂಗಗಳನ್ನರಿಯುವದೇ ಅವರ ಮಾರ್ಗವಾಗಿದೆ. ಇದೇ ರೀತಿಯಾಗಿ ಆಚರಿಸುತ್ತ ದೇವರದಾಸಿಮಯನ್ಯ ಶ್ರೀಶೈಲದಲ್ಲಿ ಶ್ರೀಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ಇರಹತ್ತಿದನು.

ಈ ಕಾಲದಲ್ಲಿ ದೇವರ ದಾಸಿಮಯ್ಯನು ವಿರಕ್ತಾಶ್ರಮವನ್ನು ವಹಿಸಿ ವೀರಶೈವ ಮತಪ್ರಚಾರ ಕಾರ್ಯವನ್ನು ಮಾಡುತ್ತ ಈ ನಾಡಿನಲ್ಲಿ ಕೆಲಕಾಲವಿದ್ದನು. ಅವನು ಈ ಭಾಗದಲ್ಲಿದ್ದ ವಸ್ತ್ರಕಾರರಿಗೆಲ್ಲ ಶಿವಾನುಭವವನ್ನು ಬೋಧಿಸಿ ಅವರನ್ನು ಲಿಂಗಧಾರಿಗಳನ್ನಾಗಿ ಮಾಡಿದನು. ಆ ಮೇಲೆ ಅವನು ಶ್ರೀಶೈಲ ಪ್ರಾಂತವನ್ನು ಬಿಟ್ಟು ಸ್ವಗ್ರಾಮಕ್ಕೆ ಹೊರಡಲು ಉದ್ಯುಕ್ತನಾದನು.

ದೇವರ ದಾಸಿಮಯ್ಯನು ಹೀಗೆ ಮುದನೂರಿಗೆ ಬರುತ್ತಾ ಇರುವಲ್ಲಿ ಅವನು ದಾರಿಯಲ್ಲಿದ್ದ ಒಂದು ಮಹತ್ತಾದ ಅರಣ್ಯದಲ್ಲಿ ಒಂದು ಬಿಲ್ವ ವೃಕ್ಷದ ಕೆಳಗೆ ಕುಳಿತು ವಿಶ್ರಮಿಸುತ್ತಿದ್ದನು. ಆಗ ಅವನು ಅಲ್ಲಿ ಬೇಟೆಯಾಡುತ್ತ ಮೃಗಗಳನ್ನು ಹಿಂಸಿಸಿ ಅವುಗಳ ಮಾಂಸವನ್ನು ತಿಂದು ಉಪಜೀವನ ಮಾಡುತ್ತಿದ್ದ ಕಾಡು ಜನರ ಅನೇಕ ತಂಡಗಳನ್ನು ನೋಡಿದನು. ಅವರನ್ನು ಕಂಡು ಅವರ ಆಚರಣೆಯ ವಿಷಯವಾಗಿ ಅತ್ಯಂತ ಕನಿಕರ ಪಟ್ಟು ಅವರಿಗೆ ಶಿವಜ್ಞಾನವನ್ನು ಬೋಧಿಸಬೇಕೆಂಬ ಆಕಾಂಕ್ಷೆಯು ಅವನಲ್ಲಿ ಹುಟ್ಟಿತು. ಮಹಾನುಭಾವರಾದ ಶಿವಾನುಭವಿಗಳಿಗೆ ಈ ತರದ ಬುದ್ಧಿಯು ಉಂಟಾಗುವದು ಸ್ವಾಭಾವಿಕವಾದುದು.

ಈ ಕಾಡು ಜನರು ಕಾರ್ತವೀರ್ಯಾರ್ಜುನನ ವಂಶದವರು. ಇವರು ರಾಜ್ಯಪದಭ್ರಷ್ಟರಾಗಿ ಇಂಥ ಕಾಡು ಸ್ಥಿತಿಗೆ ಬಂದಿದ್ದರ ವಿವರವು ಪುರಾಣೋಕ್ತವಾಗಿ ಇರುವದು ಹೇಗೆಂದರೆ:—

ಕಾರ್ತವೀರ್ಯಾರ್ಜುನನು ತಾನಿದ್ದ ಕಾಲದಲ್ಲಿ ಅತ್ಯಂತ ಪ್ರಬಲ ರಾಜನು. ಅವನು ಒಂದು ದಿನ ತನ್ನ ದಂಡಾಳುಗಳೊಂದಿಗೆ ಬೇಟೆಯಾಡುತ್ತ ಜಮದಗ್ನಿ ಮತ್ತು ಅವನ ಹೆಂಡತಿ ರೇಣುಕಾದೇವಿ ಇವರು ಇದ್ದ ಆಶ್ರಮಕ್ಕೆ ಅಕಸ್ಮಾತ್ತಾಗಿ ಬಂದನು. (೧) ಆಗ ಜಮದಗ್ನಿಯು ತನ್ನ ಆಶ್ರಮದಲ್ಲಿ ಕಾಮಧೇನುವಿನನ್ನು ಬರಮಾಡಿಕೊಳ್ಳಲು ಅದರ ಮಹತ್ವದಿಂದ ರೇಣುಕಾದೇವಿಯು ರಾಜನ ಇಡೀ ಸೈನ್ಯಕ್ಕೆ ಭೋಜನವನ್ನು ಪೂರೈಸಿ ಎಲ್ಲರನ್ನೂ ಉಪಚರಿಸಿದಳು. ಇದನ್ನು ಕಾರ್ತವೀರ್ಯಾರ್ಜುನನು ನೋಡಿ ರೇಣುಕಾದೇವಿಯನ್ನೂ ಕಾಮಧೇನುವಿನನ್ನೂ ಅಪಹರಿಸಿಕೊಂಡು ಹೋಗಬೇಕೆಂಬ ದುರ್ಬುದ್ಧಿಯು ಅವನಲ್ಲಿ ಉಂಟಾಯಿತು. ಇದಕ್ಕೆ ರೇಣುಕಾದೇವಿಯು ಅನುಕೂಲಳಾಗಿ ಅವನಿಗೆ-ಜಮದಗ್ನಿಯ ಶಿರಸ್ಸನ್ನು ಕೊಯ್ದು ಕಾಮಧೇನುವಿನ ಕೊರಳಿಗೆ ನೀನು ಅದನ್ನು ಕಟ್ಟಿ ಹೊಡೆದುಕೊಂಡು ಹೋದರೆ ಆಧೇನುವು ನಿನ್ನೊಡನೆ ಬರುವದೆಂದು ಸಲಹೆ ಕೊಟ್ಟಳು. ಅದೇ ರೀತಿ ಕಾರ್ತವೀರ್ಯನು ಜಮದಗ್ನಿಯ ಶಿರಸ್ಸನ್ನು ಕತ್ತರಿಸಿ ಕಾಮಧೇನುವಿನ ಕೊರಳಲ್ಲಿ ಕಟ್ಟಲು ಅದು ಅವನೊಡನೆ ಬರಲಿಲ್ಲ. ಅದರ ಬದಲು ಅದು ಮಾಯವಾಗಿ ಹೋಗಿಬಿಟ್ಟಿತು!

---

(೧) ಈ ಸ್ಥಾನವು ಬೆಳಗಾವಿ ಜಿಲ್ಲಾ ಸವದತ್ತಿಯ ನೆರೆಯಲ್ಲಿದೆ.

ಜಮದಗ್ನಿಯ ಮಾನಸಪುತ್ರನಾದ ಪರಶುರಾಮನು ಅಲ್ಲಿಗೆ ಅಷ್ಟರಲ್ಲಿ ಬಂದು ಹೀಗೆ ಅನಾಹುತಗಳಾದುದನ್ನು ನೋಡಿ ಸಂತಾಪ ಹೊಂದಿ ಕಾರ್ತವೀರ್ಯನಿಗೂ ಅವನ ವಂಶದವರಿಗೂ ಶಾಪವನ್ನು ಕೊಟ್ಟನು. ಅದರಿಂದ ಅವರೆಲ್ಲರೂ ರಾಜ್ಯಪದಭ್ರಷ್ಟರಾಗಿ ಕಾಡನ್ನು ಸೇರಿ ಮೃಗ ಹಿಂಸಕರಾಗಿ ಬೇಟೆಯಾಡುತ್ತ ಘೋರಾರಣ್ಯದಲ್ಲಿ ಉಪಜೀವಿಸುವವರಾದರು. ದೇವರ ದಾಸಿಮಯ್ಯನು ಅರಣ್ಯದಲ್ಲಿ ಕಂಡ ಕಾಡುಜನರು ಕಾರ್ತವೀರ್ಯಾರ್ಜುನ ವಂಶದವರೇ ಆಗಿದ್ದರು.

ದೇವರ ದಾಸಿಮಯ್ಯನು ಶ್ರೀಶೈಲದಿಂದ ಸಂಚಾರ ಮಾಡುತ್ತ ಬಿಲ್ವವೃಕ್ಷದಡಿಯಲ್ಲಿ ಕುಳಿತಿದ್ದಾಗ ಈ ಕಾಡು ಜನರು ಅವನನ್ನು ಕಂಡು ಅವನ ತೇಜಃಪುಂಜವಾದ ಕಾಯ ಕಾಂತಿಯನ್ನು ನೋಡಿ ಭಯಭಕ್ತಿಯುಳ್ಳವರಾಗಿ ಅವನಿದ್ದೆಡೆಗೆ ಬಂದು–ಈ ಅರಣ್ಯದಲ್ಲಿ ನೀವೇಕೆ ಬಂದಿರಿ? ಇಲ್ಲಿ ಭೀಕರವಾದ ಕಾಡು ಮೃಗಗಳಿವೆ. ಹೆಬ್ಬಾವುಗಳ ಉಪಟಳವಿದೆ. ನಾವು ಯಾವಾಗಲೂ ಕಾಡಿನಲ್ಲಿರುವವರು. ನಮಗೆ ಸಹ ಇಲ್ಲಿರಲು ದಿಗಿಲು ಬೀಳುತ್ತಿದೆ. ತಾವಿಲ್ಲಿ ನಿಲ್ಲಬಾರದು ಎಂದು ಹೇಳಲು, ದಾಸಿಮಯ್ಯನು ಗಹಗಹಿಸಿ ನಕ್ಕು ಅವರ ನೀಚ ವೃತ್ತಿಯನ್ನು ಬಿಡಿಸಿ ಅವರನ್ನು ಶಿವಮತದೊಳಗೆ ಅಳವಡಿಸಬೇಕೆಂಬ ಭಾವವು ಅವನಲ್ಲಿ ಬಲಿದು ಅವರನ್ನು ಅಲ್ಲಿಯೇ ಕುಳ್ಳಿರಿಸಿಕೊಂಡು, ಮಧುರೋಕ್ತಿಯಿಂದ ಹೇಳಿದುದೇನೆಂದರೆ:—

ಬೇಟೆಗಾರರೇ, ನಿಮ್ಮ ಸಾಹಸವು ಬಹು ಹೆಚ್ಚಿನದು. ನೀವು ಬಲು ಶೂರರು. ಆದರೆ ನಿಮ್ಮದು ದುರಿತ ಕರ್ಮವು. ಇದರಿಂದ ನಿಮ್ಮ ದಾರಿದ್ರ್ಯವು ತೊಲಗದು. ನೀವು ನರಕದಲ್ಲಿ ಯಾವಾಗಲೂ ತೊಳಲಾಡುವಿರಿ. ಇಹದಲ್ಲಿಯೂ ಪರದಲ್ಲಿಯೂ ನೀವು ದುರ್ಗತಿಗಿಳಿಯುವಿರಿ. ನೀವು ಹೀಗೆ ಬಲವಂತವಾಗಿ ಪ್ರಾಣಿಗಳ ಹಿಂಸೆ ಮಾಡಬೇಡಿರಿ. ಇದು ಪಾಪಕರ್ಮವು. ಇದರಿಂದ ಜನ್ಮಜನ್ಮಗಳಲ್ಲಿಯೂ ನೀವು ನಿಮ್ಮ ಸಂಕಟಗಳಿಂದ ಮುಕ್ತರಾಗಲಾರಿರಿ. ನಿಮಲ್ಲಿ ಮದನಹರನ ಚಿಂತೆಯು ಇರಲಿ. ತಲ್ಲಿಂಗ ಪೂಜಾ ಧ್ಯಾನದಲ್ಲಿ ಇರಿರಿ. ಪರಶುರಾಮನು ಕನಲಿ ನಿಮ್ಮನ್ನು ಮೊದಲು ಶಪಿಸಿದ್ದಾನೆ. ಇದರಿಂದ ನೀವು ಕಷ್ಟ ಬಡುತ್ತೀರಿ. ನೀವು ಅವನ ಶಾಪದಿಂದ ಮುಕ್ತರಾಗಬೇಕಾದರೆ ಈ ಕ್ರೂರ ಕರ್ಮಗಳನ್ನು ತ್ಯಜಿಸಬೇಕು. ಶಮ ದಮ ದಾನ ಧರ್ಮ

ದಲ್ಲಿ ನೀವು ಇರಬೇಕು. ನೀವು ಸದ್ಗುರುಪಾದವನ್ನು ನಂಬಬೇಕು. ಈ ದುಷ್ಟವೃತ್ತಿಯನ್ನು ಬಿಟ್ಟುಬಿಡಬೇಕು. ಇದರಿಂದ ನೀವು ಪರಮ ಸುಖವನ್ನು ಪಡೆಯುವಿರಿ. ಹೀಗೆ ದಾಸಿಮಾರ್ಯನು ಅನೇಕ ವಿಧವಾಗಿ ಅವರಿಗೆ ವಿನಯೋಕ್ತಿಗಳಿಂದ ಬೋಧಿಸಿದನು. ಅವನ ಬೋಧೆಯನ್ನು ಆ ಕಾಡುಜನರು ಕೇಳಲು ಅವರ ಮೊದಲಿನ ಮನೋವೃತ್ತಿಯು ಬದಲಾಯಿತು. ಈ ವೃತ್ತಿಯು ಬದಲಾದ ಕೂಡಲೆ ಅವರ ಸಂಚಿತ ಪ್ರಾರಬ್ಧ ಕರ್ಮಗಳು ಅಳಿದುಹೋದವು. ಅವರ ಹೃದಯಗಳು ಪರಿಪಕ್ವವಾದವು. ಅವರಲ್ಲಿ ಸುಜ್ಞಾನವು ಉದಯವಾಯಿತು. ಆಗ ಅವರು ದಾಸಿಮಯ್ಯನಿಗೆ— ನಾವು ಅಪರಾಧಿಗಳು. ನೀವು ನಮ್ಮ ಶಾಪವಿಮೋಚನೆಯ ಹಾದಿಯನ್ನು ತೋರಿಸಿರಿ, ಎಂದು ನುಡಿದು ಅವನಿಗೆ ಸಾಷ್ಟಾಂಗವೆರಗಿದರು. ದಾಸಿಮಾರ್ಯನು ಅವರನ್ನು ನೋಡಿ ಹರುಷಿತನಾಗಿ ಅವರಿಗೆ ಲಿಂಗಧಾರಣೆಯನ್ನು ಮಾಡಿ ಅವರಿಗೆ ಅದರ ಕ್ರಿಯಾಪದ್ಧತಿಗಳನ್ನು ಅರುಹಿದನು. ಆಮೇಲೆ ಅವನು ಅವರಿಗೆ— ನೀವು ಇನ್ನುಮೇಲೆ ನಿಮ್ಮ ಹಿಂಸಾಕರ್ಮವನ್ನು ಬಿಟ್ಟುಕೊಟ್ಟು ತಿಲಗಾಣವನ್ನಾಡಿಸಿ, ತೈಲವನ್ನು ತೆಗೆದು ಅದನ್ನು ಶ್ರೀಮಲ್ಲಿಕಾರ್ಜುನಲಿಂಗಕ್ಕೆ ಎರೆಯುತ್ತ ಹೋಗಬೇಕು ಮತ್ತು ಅದನ್ನು ಅಲ್ಲಿಯ ದೀಪಾರಾಧನೆಗೆ ಅರ್ಪಿಸುತ್ತ ಹೋಗಬೇಕು. ಇದನ್ನೇ ನೀವು ನಿಮ್ಮ ಸತ್ಕಾಯಕವನ್ನಾಗಿ ಇಟ್ಟುಕೊಳ್ಳಿರಿ. ಇದೇ ನಿಮ್ಮ ಆಚರಣೆಯು, ಎಂದು ಬೋಧಿಸಿದನು. ಆ ಕಾಡುಜನರು ಅಂದಿನಿಂದ ತಮ್ಮ ಹಿಂಸಾಚರಣೆಗಳನ್ನು ಬಿಟ್ಟುಕೊಟ್ಟು ತಿಲಕಾಯಕವನ್ನು ಕೈಕೊಂಡು ಪರ್ವತಸಿಂಹಾಸನಕ್ಕೆ ನಡೆದುಕೊಳ್ಳುತ್ತ ಅದರ ಶಿಷ್ಯರೆಂದೆನಿಸಿಕೊಂಡರು ಮತ್ತು ದೇವಮಧ್ಯದಲ್ಲಿ ಭಕ್ತಶ್ರೇಷ್ಠರೆಂದು ಪ್ರಸಿದ್ಧರಾದರು.

ಹೀಗೆ ದೇವರದಾಸಿಮಯ್ಯನು ಅರಣ್ಯವಾಸಿಗಳಾಗಿದ್ದ ಕಾಡು ಜನರಿಗೆ ಸನ್ಮಾರ್ಗವನ್ನು ಬೋಧಿಸಿ, ಮುಂದೆ ತೆರಳುವವನಾದನು. ಅವನು ಶ್ರೀಶೈಲಪರ್ವತ ಪ್ರಾಂತಕ್ಕೆ ಸಮೀಪವಿರುವ ನಂದಿ ಎಂಬ ಗ್ರಾಮಕ್ಕೆ ಬಂದು ಅಲ್ಲಿದ್ದ ಒಂದು ಜಲಾಶಯದ ಬಳಿಯಲ್ಲಿ ಒಂದು ದೇವಾಲಯದ ಸಮೀಪದಲ್ಲಿ ಇಳಿದುಕೊಂಡನು. ಆ ಕಾಲದಲ್ಲಿ ಆ ಗ್ರಾಮದ ಕೆಲವು ಬ್ರಾಹ್ಮಣರು ಕೆರೆಯಲ್ಲಿ ಸ್ನಾನಮಾಡಿ ಶುಚಿಯಾದ ವಸ್ತ್ರಗಳನ್ನು ಧಾರಣಮಾಡಿಕೊಂಡು ತಿರುಗಿ ಬರುತ್ತಿರುವಾಗ ಶಿವಲಾಂಛನಧಾರಿ

ಯಾದ ಆ ದೇವರದಾಸಿಮಯ್ಯನನ್ನು ದಾರಿಯಲ್ಲಿ ಕಂಡು ಅವರು ಅವನಿಗೆ— ನೀವು ಶಿವನು ಹೆಚ್ಚೆನ್ನುತ್ತೀರಿ. ಇದು ಹುಸಿ, ಎಂದು ಅವನನ್ನು ಕೆಣಕಿ ನುಡಿದರು. ಅದಕ್ಕೆ ಅವನು— ಇದು ಹೇಗೆ ಎಂದು ಕೇಳಲು, ಅವರು— ಶಿವನು ಭೂತಗಳರಸ, ಅವನು ಹೊದೆಯುವದು ತೊಗಲುಡಿಗೆ, ಬೂದಿಮಯ್ಯನು, ಇಂಥವನು ನಮ್ಮ ಕಂಸಾರಾತಿ (ವಿಷ್ಣು) ಗೆ ಹೇಗೆ ಸರಿಯಾದಾನು? ಈ ಗ್ರಾಮವು ಹರಿಯು ಇರುವ ಪುಣ್ಯಗ್ರಾಮವು. ಇಂಥಲ್ಲಿ ನೀನು ಇರಕೂಡದು. ಇರುವಿಯಾದರೆ ನೀನು ವಿಷ್ಣುವಿನ ಭಜಕನಾಗಬೇಕು ಎಂದು ನುಡಿದರು. ಅದಕ್ಕೆ ದೇವರದಾಸಿಮಯ್ಯನು— ನೀವು ಶಿವನು ತೊಗಲುಡಿಗೆಯವನೆಂದೆನ್ನುತ್ತೀರಿ. ಆದರೆ ನಿಮ್ಮ ವಿಷ್ಣುವು ನಂದಿಯ ಬಸಿರಲ್ಲಿ ಬಂದಿದ್ದಾನೆ. ನಿಮ್ಮ ವರಾಹಾವತಾರದ ಕತೆಯು ಏನು ಹೇಳುತ್ತಿದೆ? ನಿಮ್ಮ ವಿಷ್ಣುವು ಮಡಿಸೀರೆಯನ್ನು ಕದ್ದು ವೃಕ್ಷವನೇರಿದ್ದಾನೆ. ಬೆಣ್ಣೆಯನ್ನು ಕದ್ದಿದ್ದಾನೆ. ಇದು ಎಂಥ ನೀತಿ! ಆದರೆ ನಮ್ಮ ಶಿವನು ಸರ್ವಮಯನು. ನೀವು ಅವನನ್ನು ಧಿಕ್ಕರಿಸಿ ನುಡಿಯಬೇಡಿರಿ ಎಂದನು. ಅದಕ್ಕೆ ಆ ವಿಪ್ರರು— ನಿಮಗೆ ಜಾತಿ ಎಂಬುದು ಇಲ್ಲ. ಕುಲವಿಲ್ಲ. ನಮ್ಮ ವಿಪ್ರಕುಲವು ಶ್ರೇಷ್ಠವಾದುದು ಎಂದು ತಿರುಗಿ ನುಡಿದರು. ಅದಕ್ಕೆ ದಾಸಿಮಯ್ಯನು— ನೀವು ಋಷಿಗಳ ಗೋತ್ರ ಹೇಳುತ್ತೀರಿ. ಆದರೆ ಆ ನಿಮ್ಮ ಋಷಿಗಳು ಯಾರು? ಅವರಲ್ಲಿ ಒಬ್ಬನು ಮಚ್ಚಿಗ, ಒಬ್ಬನು ಹಡಪಿಗ, ಮತ್ತೊಬ್ಬನು ಅಂಬಿಗಳ ಮಗ. ಇಂಥವರಲ್ಲಿ ಹುಟ್ಟಿದ ನೀವು ಕುಲಜರೆಂಬುದು ಹೇಗೆ? ಆದರೆ ಶಿವಭಕ್ತರು ಗುರುವಿನಲ್ಲಿ ಪುನರ್ಜಾತರಾದವರು. ಅವರಿಗೆ ಕುಲ ಜಾತಿ ಎಂಬುದಿಲ್ಲ ಎಂದು ನುಡಿದು ವಿಪ್ರರು ಹೆರವರಲ್ಲಿ ತಿರಿತಂದು ಹೊಟ್ಟೆಹೊರೆದುಕೊಳ್ಳುತ್ತಾರೆ. ಅವರಿಗೆ ಕಾಯಕದ ರೀತಿ ಗೊತ್ತಿಲ್ಲ. ಅವರು ಯಜ್ಞದ ನೆವಮಾಡಿ ಕುದುರೆ, ಹೋತುಗಳನ್ನು ತಿನ್ನುತ್ತಾರೆ. ಅವರದು ಹಿಂಸಾಕರ್ಮವು. ನೀವು ಇಂಥ ಮಾರ್ಗವನ್ನು ಬಿಟ್ಟುಕೊಟ್ಟು ಈಶ್ವರನನ್ನು ಭಜಿಸಬೇಕು. ಅಂದರೆ ನಿಮ್ಮ ಪಾಪವು ಹೋಗುವದು, ಕರ್ಮಕ್ಷಯವಾಗುವದು, ಎಂದು ದೇವರದಾಸಿಮಯ್ಯನು ಅವರಿಗೆ ಅನೇಕ ರೀತಿಯಿಂದ ಬೋಧಿಸಿದನು. ಅದಕ್ಕೆ ಅವರು ಇದಿರು ನುಡಿಯಲಾರದೆ ಅವನಿಗೆ— ನಿನ್ನ ಮಾತಿನಲ್ಲಿ ನಮಗೆ ಭರವಸೆ ಉಂಟಾಗುವದಿಲ್ಲ. ಆದರೆ

ಇಗೋ ನೋಡು, ಇಲ್ಲಿ ದೇವಾಲಯವಿದೆ. ಇದರಲ್ಲಿ ನಿನ್ನ ಪರಮೇಶ್ವರನನ್ನು ತಂದು ತೋರಿಸು. ಅಂದರೆ ಮಾತ್ರ ನಿನ್ನ ವಾಕ್ಯವು ಸತ್ಯವೆಂದು ನಾವು ನಂಬುತ್ತೇವೆ, ಇಲ್ಲದಿದ್ದರೆ ಇಲ್ಲ, ಎಂದು ಹೇಳಲು ದೇವರದಾಸಿಮಯ್ಯನು— ಹಾಗೆಯೇ ಆಗಲಿ. ಶಿವನು ಜಗದ್ಭರಿತನಾಗಿದ್ದಾನೆ. ನೀವು ಅಪೇಕ್ಷಿಸಿದಂತೆಯೇ ನಾನು ಇಲ್ಲಿಯೇ ಅವನನ್ನು ತೋರಿಸುವೆನು ಎಂದು ನುಡಿದು, ಶಿವನನ್ನು ಆಹ್ವಾನಿಸುತ್ತ ಆ ದೇವಾಲಯದ ಬಾಗಿಲನ್ನು ತೆರೆಯಲು, ಒಳಗೆ ನೋಡುತ್ತಿರೆಯೇ, ಅಲ್ಲಿ ಮೊದಲಿದ್ದ ಮುಕುಂದನ ಮೂರ್ತಿಯು ಇರಲಿಲ್ಲ. ಅದರ ಸ್ಥಳದಲ್ಲಿ ಶಿವಲಿಂಗವು ನೆಲಸಿತ್ತು. ಬ್ರಾಹ್ಮಣರು ಇದನ್ನು ನೋಡಿ ಆಶ್ಚರ್ಯಭರಿತರಾಗಿ ತಮ್ಮನ್ನು ಉದ್ಧಾರ ಮಾಡಬೇಕೆಂದು ದೇವರದಾಸಿಮಯ್ಯನಿಗೆ ಶರಣಾಗತರಾದರು. ಆಗ ದೇವರದಾಸಿಮಯ್ಯನು ಅವರಿಗೆ ವೀರಶೈವ ದೀಕ್ಷಾ ಸಂಸ್ಕಾರವನ್ನು ಮಾಡಿ ಲಿಂಗದ ನೆಲೆ ಕಲೆಗಳನ್ನೂ ಕ್ರಿಯಾಚಾರಗಳನ್ನೂ ತಿಳಿಸಿ ಅವರೆಲ್ಲರಿಗೆ ಲಿಂಗಧಾರಣೆಯನ್ನು ಮಾಡಿದನು.

ದೇವರದಾಸಿಮಯ್ಯನ ಮೂಲಕ ಉತ್ಪನ್ನವಾದ ಈ ಲಿಂಗಕ್ಕೆ ರಾಮೇಶ್ವರಲಿಂಗವೆಂಬ ಹೆಸರಾಯಿತು.

ದೇವರ ದಾಸಿಮಯ್ಯನು ಈ ಪವಾಡವನ್ನು ಮಾಡಿದ ಬಳಿಕ ನಂದಿಗ್ರಾಮದಿಂದ ಹೊರಟು ಮುಂದೆ ಪ್ರವಾಸ ಮಾಡುತ್ತ, ಗೌಡಗೆರೆ ಎಂಬ ಗ್ರಾಮಕ್ಕೆ ಬಂದನು. ಆ ಊರಿಗೆ ಮುದ್ದಯ್ಯನೆಂಬುವನು ಗೌಡನಿದ್ದು ಅವನು ಅನೇಕ ಹೊಲ ಗದ್ದೆಗಳನ್ನು ಮಾಡಿಕೊಂಡು ಬೇಸಾಯದಿಂದ ಬಹಳ ಧಾನ್ಯ ಬೆಳೆದು ಶ್ರೀಮಂತನಾಗಿದ್ದನು. ಅವನು ದೊಡ್ಡ ಕುಟುಂಬಸ್ಥನು, ವ್ಯವಹಾರ ಚತುರನು, ಗ್ರಾಮದಲ್ಲಿ ಯಾರಾದರೂ ಮೀರಿದಪ್ಪಿ ನಡೆದರೆ, ಪಕ್ಷಪರಪಕ್ಷ ಮಾಡದೆ, ಅನ್ಯಾಯ ಮಾಡಿದವರನ್ನು ಶಿಕ್ಷಿಸುವನು. ಮನೆಗೆ ಯಾರು ಬಂದರೂ ಇಲ್ಲೆನ್ನನು. ಬಹಳ ಉದಾರಿಯು. ಹೀಗೆ ಅವನು ಎಲ್ಲ ಜನರಿಗೂ ಹಿತವಾದುದನ್ನೇ ಮಾಡುತ್ತ ಬರುವನು.

ಅವನು ಜಾತಿಯಿಂದ ಕಡಿಮೆ ಕುಲದವನು. ಆದರೂ ಬಹಳ ಧರ್ಮಿಷ್ಠನು. ಹೀಗಿರುವಲ್ಲಿ ಒಂದು ದಿವಸ ಅವನು ತನ್ನ ಗ್ರಾಮದಲ್ಲಿದ್ದ ಒಬ್ಬ ಜಂಗಮನು 'ಮಾಹೇಶ್ವರಾಚಾರ' ಎಂಬ ಗ್ರಂಥದಲ್ಲಿಯ

ಒಂದು ಕಾಂಡವನ್ನು ಓದುತ್ತಿರಲು ಅದನ್ನು ಕೇಳಿ ಅವನ ಮನಸ್ಸು ಅದರ ಕಡೆಗೆ ಒಲಿದು ಅದನ್ನು ಕೇಳಲು ನಿತ್ಯವೂ ಅವನ ಮನೆಗೆ ಬರಹತ್ತಿದನು ಆಗ ಅವನಲ್ಲಿ ವೀರಶೈವಾಚಾರವನ್ನು ಹೊಂದಬೇಕೆಂಬ ಅಪೇಕ್ಷೆಯುಂಟಾಯಿತು. ಮತ್ತು ತಾನು ಎಂದಿಗೆ ಲಿಂಗ ದೀಕ್ಷೆಯನ್ನು ಹೊಂದಿ ಭವಿಜನ್ಮವನ್ನಳಿದು ಪುನೀತನಾಗುವೆನೋ ಎಂಬ ಆತುರತೆಯು ಅವನಲ್ಲಿ ಹೆಚ್ಚಿತು. ಇಂಥ ಸಮಯದಲ್ಲಿ ದೇವರ ದಾಸಿಮಯ್ಯನು ಅವನ ಗ್ರಾಮಕ್ಕೆ ಬಂದನು.

ಮುದ್ದಯ್ಯನು ಅವನನ್ನು ಕಂಡು ಅವನಿಗೆ ನಮಸ್ಕರಿಸಿ ತನ್ನ ಗ್ರಾಮದಲ್ಲಿದ್ದ ವೃಷಭೇಶ್ವರಾಲಯದಲ್ಲಿ ಅವನನ್ನು ಇಳಿಸಿ, ಅನೇಕ ರೀತಿಯಿಂದ ಅವನನ್ನು ಉಪಚರಿಸಿದನು. ಬಳಿಕ ಅವನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ ತನ್ನ ನಿಜಾಭಿಪ್ರಾಯವನ್ನು ಅವನಿಗೆ ಅರುಹಿ ತನಗೆ ವೀರಶೈವ ದೀಕ್ಷೆಯನ್ನು ಕೊಡಬೇಕೆಂದು ಬಹುಪರಿಯಿಂದ ಅವನನ್ನು ಪ್ರಾರ್ಥಿಸಿಕೊಂಡನು.

ಆಗ ದಾಸಿಮಯ್ಯನು ಅವನಿಗೆ -- ಹೋ! ಹೋ!! ನೀನು ಹೇಳುವದು ಆಶ್ಚರ್ಯವು! ನೀನು ಡಂಭಕನಂತೆ ನಟಿಸುವಂತೆ ನನಗೆ ತೋರುತ್ತಿದೆ. ನೀನು ಪಾರಕ್ಯಾಂಪಾವತೀ ಸ್ನಾನ ಮಾಡುತ್ತೀ. ಹೊತ್ತು ಹೊರಟ ಕೂಡಲೆ ಮಿಂಡಿ ನೇಗಿಲುಗಳನ್ನು ಹೊತ್ತುಕೊಂಡು ಹೊಲಕ್ಕೆ ಹೋಗುತ್ತೀ. ಮನೆಗೆ ಬಂದ ಬಳಿಕ ಮುಂಗಾಲುಗಳ ಮೇಲೆ ನೀರು ಸುರಿದುಕೊಂಡು ಸಿಕ್ಕಿದ್ದನ್ನು ಹೊಟ್ಟೆ ಬಿರಿಯುವ ಹಾಗೆ ತಿನ್ನುತ್ತೀ. ಕುರಿ, ಮೇಕೆ ದನಗಳ, ಕಾಲುದೆಸೆಯಲ್ಲಿ ಬಿದ್ದ ಕಸವಲ್ಲಿಯೇ ಮಲಗುತ್ತೀ. ನಿನಗೆ ಮಡಿ ಮೈಲಿಗೆ ಎಂಬುವಿಲ್ಲ. ದುರಗಿ, ಮಾರಿ, ಮಸಣಿ ಇಂಥ ದೈವಗಳಿಗೆರಗಿ, ಅವುಗಳನ್ನು ಅರ್ಚಿಸುತ್ತೀ. ಇಂಥವನಿಗೆ ನಮ್ಮ ವೀರಶೈವಾಚಾರವು ಸಲ್ಲದು. ಆದರೆ ಲಿಂಗ ದೀಕ್ಷೆಯನ್ನು ನೀನು ಹೊಂದಿದರೆ ನಿನ್ನ ಕುಲವು ನಶಿಸುವದು, ಹುಟ್ಟುಗೆಡುವುದು, ಕುಳವರ್ಣ ವಳಿವುದು. ಆದ್ದರಿಂದ ನೀಚ ಕುಲದವರಿಗೆ ಗುರುದೈವವೆಂಬುದು ಎತ್ತಣದು? ಆದ್ದರಿಂದ ನೀನು ಇಂಥ ವಿಚಾರವನ್ನು ಬಿಟ್ಟುಕೊಡಬೇಕು, ಎಂದು ದಾಸಿಮಯ್ಯನು ದ್ವಂದ್ವಾರ್ಥವಾಗಿ ಅವನ ಮನಸ್ಸನ್ನು ಪರೀಕ್ಷಿಸಲು ನುಡಿದನು. ಆದರೆ ದಾಸಿಮಯ್ಯನು ತನ್ನನ್ನು ಹೀಗೆ ಜರಿದು

ನುಡಿದಷ್ಟೇ ತನಗೆ ಕೊಟ್ಟ ಬುದ್ಧಿವಾದವೆಂದು ತಿಳಿದು ಮುದ್ದಯ್ಯನು ಸಿಟ್ಟಿಗೇಳದೆ ಅವನಿಗೆ ನಯಭಕ್ತಿಯಿಂದ ನಮಸ್ಕರಿಸಿ– ಎಲೋ ದೇಶಿಕನೇ, ನಿನ್ನ ಪಾದದರ್ಶನದಿಂದ ನಾನು ಪುನೀತನಾದೆನು. ಶರಣಾಗತನಾದ ನನ್ನನ್ನು ಕರುಣದಿಂದ ನೋಡು. ನೀನು ಹೇಳಿದಂತೆ ನಾನು ನಡೆಯುತ್ತೇನೆ. ಹರನ ಭಕ್ತರ ಪರಿಚರ್ಯದಲ್ಲಿ ನನ್ನನ್ನು ಇರಿಸು. ಪರಮಾತ್ಮನ ಸ್ಮರಣೆಯನ್ನು ಮಾಡುವ ರೀತಿಯನ್ನು ನನಗೆ ತಿಳಿಸು, ಎಂದು ಬೇಡಿಕೊಂಡನು.

ಆಗ ದಾಸಿಮಯ್ಯನು ಮುದ್ದಯ್ಯನು ದೃಢಮನಸ್ಕನಾಗಿ ನಿಜವಾಗಿ ಭಕ್ತಾಚಾರದಲ್ಲಿರಲು ಬಯಸುತ್ತಾನೆ, ಎಂಬುದನ್ನು ತಿಳಿದು ಅವನ ಹೆಂಡತಿ, ಮಕ್ಕಳು ಸಂಬಂಧಿಕರನ್ನೆಲ್ಲ ತನ್ನಲ್ಲಿ ಬರಮಾಡಿಕೊಂಡು ಅವರೆಲ್ಲರೂ ಇದೇ ಮನಸ್ಸಿನವರಾಗಿರುತ್ತಾರೆಂಬುದನ್ನು ತಿಳಿದು ಅವರಿಗೆ— ಗೌಡರುಗಳೇ ಕೇಳಿರಿ, ನೀವು ಈ ವರೆಗೆ ಕೀಳುಕುಲದವರೆಂದು ಮುಗ್ಧರಾಗಿದ್ದಿರಿ. ಗುರುಹಿರಿಯರೆಂಬುದನ್ನು ಲಕ್ಷಿಸದೆ ಬಿರುಸು ಮಾತುಗಳನ್ನಾಡುತ್ತಲಿದ್ದಿರಿ. ಎಂಜಲೆನ್ನದೆ ದವಡೆಯಲ್ಲಿ ಸಿಕ್ಕಿದುದನ್ನು ತಿಂದು ಬಾಯ್ತೊರಿಸುತ್ತಿದ್ದಿರಿ. ಇವೇ ನಿಮ್ಮ ಶೀಲ. ಇಂಥವರಾದ ನೀವು ಇಂದು ಲಿಂಗಧಾರಿಗಳಾಗಿ ಹೇಗೆ ಭಕ್ತರೆನ್ನಿಸಿಕೊಳ್ಳುವಿರಿ? ಹೀಗೆ ದಾಸಿಮಯ್ಯನು ಅವರ ದುಶ್ಚಟಗಳನ್ನು ಹೀಯಾಳಿಸಿ ನುಡಿಯಲು, ಅದಕ್ಕೆ ಅವರು ಅವನಲ್ಲಿ ಬೇಸರಗೊಳ್ಳದೆ ನಿಷ್ಕಲ್ಮಷ ಮನಸ್ಸಿನವರಾಗಿ ದಾಸಿಮಾರ್ಯನ ಪಾದಕ್ಕೆರಗಿ ಅವನಿಗೆ— ನಾವು ಶಿವಭಕ್ತಿಯನ್ನು ಹಿಡಿದು ಮುಕ್ತಿಯನ್ನು ಪಡೆಯುವೆವೆಂದು ನಂಬುಗೆಯನ್ನು ಕೊಡಲು, ದಾಸಿಮಯ್ಯನು ಅವರಿಗೆ ದೀಕ್ಷಾ ಸಂಸ್ಕಾರ ಪೂರ್ವಕವಾಗಿ ಲಿಂಗಧಾರಣಾದಿ ಕ್ರಿಯೆಗಳನ್ನು ವಿಜೃಂಭಣೆಯಿಂದ ಅನುಗೊಳಿಸಿದನು.

ಈ ಪ್ರಕಾರ ದೇವರದಾಸಿಮಯ್ಯನು ಅವರಿಗೆ ಲಿಂಗಧಾರಣೆಯನ್ನು ಮಾಡಿ, ಅವರಿಗೆ ಪಂಚಾಕ್ಷರಿಯನ್ನು ಉಪದೇಶಿಸಿ, ಅವರಿಗೆ ಚರಪಾದ ತೀರ್ಥ ಪ್ರಸಾದಗಳನ್ನು ಸಲ್ಲಿಸಿ, ಗಿರೀಶಾರ್ಚನಾದಿ ಆಚಾರಧರ್ಮಗಳನ್ನು ತಿಳಿಸಿ ಅವರಿಗೆ— ಇನ್ನುಮೇಲೆ ನೀವು ನಿಮ್ಮ ಕೃಷಿಕಾಯಕವನ್ನೇ ಇಟ್ಟುಕೊಳ್ಳಿರಿ. ಅದನ್ನು ಬಿಡಬೇಡಿರಿ. ಅದರ ಮೂಲಕ ಪ್ರಮಥಗಣ ದಾಸೋಹವನ್ನು ನಡಿಸುತ್ತ ಇರ್ರಿ. ನೀವು ಗೋಡಗೆರೆಯವರೆಂದು ನಾಡಿನಲ್ಲಿ ವಿಖ್ಯಾತರಾಗಿ ಬಾಳಿರಿ. ಶ್ರೀಶೈಲಮಲ್ಲಿಕಾರ್ಜುನನ ಭಕ್ತ

ರಾಗಿ ನಡೆಯಿರಿ, ಎಂದು ಉಪದೇಶಿಸಿದನು. ಆಮೇಲೆ ಮುದ್ದಯ್ಯನ ಕೂಡ ಅವನ ಪಂಗಡದ ೧೨ ಸಾವಿರ ಜನರು ದೇವರದಾಸಿಮಯ್ಯನಿಂದ ದೀಕ್ಷಾಸಂಸ್ಕಾರವನ್ನು ಹೊಂದಿದರು. ಆಮೇಲೆ ದೇವರದಾಸಿಮಯ್ಯನು ಕೆಲವು ದಿನ ಗೌಡಗೆರೆಯಲ್ಲಿದ್ದು ಅಲ್ಲಿಂದ ಮುಂದೆ ಸಾಗುವವನಾದನು.

ದೇವರದಾಸಿಮಯ್ಯನು ಈಪ್ರಕಾರ ಗೌಡಗೆರೆಯಿಂದ ಹೊರಟು ನಾಲ್ಕಾರು ದಿವಸ ದಾರಿ ನಡೆಯುತ್ತ ಈಗ ನಿಜಾಮನ ರಾಜ್ಯದಲ್ಲಿರುವ ಪೊಟ್ಟಲಕೆರೆಗೆ ಬಂದನು. ಈ ಎಲ್ಲ ವಿವರಣೆಗಳ ಮೇಲಿಂದ ಗೌಡಗೆರೆಯು ಮತ್ತು ಮುದ್ದಯ್ಯನ ಪಂಗಡದವರಾದ ಒಕ್ಕಲಿಗರು ಕರ್ನೂಲ, ಮೆಹಬೂಬನಗರ ಮತ್ತು ಮೇಡಕ್ಕ ಈ ಜಿಲ್ಹೆಗಳಲ್ಲಿರುವವರೆಂದು ತೋರುತ್ತದೆ.

ಈ ಪೊಟ್ಟಲಕೆರೆಯು ಚಾಲುಕ್ಯರ ಬಲಾಢ್ಯ ಚಕ್ರವರ್ತಿಯಾದ ೧ನೇ ಜಯಸಿಂಹ (ಜಗದೇಕಮಲ್ಲ) ರಾಜನ ರಾಜಧಾನಿಯಾಗಿತ್ತು. ಇವನು ಕ್ರಿ. ಶ. ೧೦೦೮ ರಿಂದ ೧೦೪೨ ರ ವರೆಗೆ ರಾಜ್ಯವಾಳಿದನು. ೧೦೧೯ ನೆ ಇಸ್ವಿಯ ಒಂದು ಶಿಲಾಶಾಸನದಲ್ಲಿ [೧] ಬಳ್ಳಿಗಾವಿ ಎಂತಲೂ, ೧೦೩೬ [೨]. ೧೦೩೯ [೩], ಮತ್ತು ೧೦೪೦ [೪] ಈ ವರ್ಷಗಳ ಶಿಲಾಶಾಸನಗಳಲ್ಲಿ ಪೊಟ್ಟಲಕೆರೆ ಎಂತಲೂ ಹೀಗೆ ಈ ಪಟ್ಟಣಗಳು ಅವನ ರಾಜಧಾನಿಯ ಸ್ಥಳಗಳಾಗಿದ್ದವೆಂದು ತಿಳಿದುಬರುತ್ತದೆ. ಪೊಟ್ಟಲಕೆರೆಯು ಹೈದ್ರಾಬಾದಿನಿಂದ ಬೀದರಕ್ಕೆ ಹೋಗುವ ಮಾರ್ಗದಲ್ಲಿ ಅದರ ಬಲ ಮಗ್ಗಲು ಹೈದರಾಬಾದಿನಿಂದ ೨೦ ಮೈಲುಗಳ ಮೇಲೆ ಮೇಡಕ್ಕ ಜಿಲ್ಲೆಯಲ್ಲಿ ಈಗ ಇದೆ. ಇಲ್ಲಿ ಈಗ ತೆಲುಗು ಭಾಷೆಯು ಪ್ರಾಬಲ್ಯವಿದ್ದು ಅದಕ್ಕೆ ಈಗ 'ಪೊಟ್ಲಚೇರು' ಅಥವಾ 'ಪಟಂಚೇರು' ಎಂಬ ಹೆಸರುಗಳು ಇವೆ. ಇಲ್ಲಿ ಈಗಲೂ ಅನೇಕ ಕನ್ನಡ ಶಿಲಾಶಾಸನಗಳಿದ್ದು ಅವುಗಳಲ್ಲಿಯು ಕೆಲವು ಶಾಸನಗಳಲ್ಲಿ ಈ ಗ್ರಾಮವು ಪೊಟ್ಟಲಕೆರಿ ಎಂದು ಕರೆಯಲ್ಪಟ್ಟಿದೆ.

---

(೧) ಎಪಿ-ಕರ್ನಾ-ಶಿವಮೊಗ್ಗಾ ವ್ಹಾ. ೧ ನಂ। ೧೨೫.

(೨) ,, ,, ,, ,, ನಂ। ೧೨೬.

(೩) ,, ,, ,, ,, ನಂ। ೧೫೩.

(೪) ಇಂಡಿ-ಆ್ಯಂಟಿ ೧೯ ಪುಟ ೧೬೧.

ಇದರಿಂದ ಇದೇ ಗ್ರಾಮವು ಜಯಸಿಂಹನ ರಾಜಧಾನಿಯಾದ ಪೊಟ್ಟಲ ಕೆರೆ ಇರುತ್ತದೆಂದು ತೋರುತ್ತದೆ. ಇಲ್ಲಿ ಪುರಾತನಕಾಲದ ಅವಶೇಷ ಗಳು ಈಗಲೂ ಇರುತ್ತವೆ.

ದೇವರದಾಸಿಮಯ್ಯನು ಇಲ್ಲಿಗೆ ಬಂದಬಳಿಕ ಅವನ ಕೂಡ ಬಂದ ಗೌಡಗೆರೆಯ ಭಕ್ತರನ್ನೆಲ್ಲ ಅವರವರ ಗ್ರಾಮಗಳಿಗೆ ತಿರುಗಿ ಕಳಿಸಿ ಕೊಟ್ಟನು. ಮತ್ತು ತನ್ನ ಧರ್ಮೋಪದೇಶದ ಕಾರ್ಯಗಳನ್ನು ಅಲ್ಲಿ ಕೆಲವು ದಿವಸ ಹಾಗೆಯೇ ಮುಂದುವರಿಸಿದನು. ಅವನು ಇಲ್ಲಿಯ 'ಮಹಾದೇವಾಂಗ' ಸಮಾಜದವರನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವ ರಿಗೆ— ನೀವು 'ಭಕ್ತಾಚಾರ ಸಂಪನ್ನರಾಗಿ ನೇಗಿಯ ಕಾಯಕವನ್ನಾಚ ರಿಸುತ್ತ ಶಿವಗಣಾರಾಧನೆಯ ಮಾಡುತ್ತ ನಿಯಮವಾಗಿ ಬಾಳಿರೆಂದು ಉಚಿತ ಸ್ಥಾನಗಳಿಗಂ ಬೀಳ್ಕೊಟ್ಟು ತಾನು ನಿಶ್ಚಲಭಕ್ತಿ ನಿಷ್ಠಾಯೋಗಾನು ಭವ ಸಾಮ್ರಾಜ್ಯದೊಳಗೆ ಪರಿ ಇರ್ಪನು' ಎಂದು ಅವನ ಚರಿತ್ರೆಯಲ್ಲಿ ಹೇಳಿದೆ. ಇವರಿಂದ ಅವನು ಇಲ್ಲಿ ಕೆಲವು ದಿನ ಧರ್ಮಪ್ರಸಾರಕಾರ್ಯ ಮಾಡಿದನೆಂದು ತೋರುತ್ತದೆ. ಆಮೇಲೆ ಅಪನಿಗೋಸ್ಕರ ಅಲ್ಲಿಯ ಭಕ್ತರು ಅದೇ ಸ್ಥಳದಲ್ಲಿ ಒಂದು ಮಠವನ್ನು ಕಟ್ಟಿಸಿ ಕೊಟ್ಟರು. ಅದರಲ್ಲಿ ದೇವರದಾಸಿಮಯ್ಯನು ಕೆಲವು ದಿನವಿದ್ದು ಮುಂದೆ ಅವನು ಅಲ್ಲಿಂದ ಹೊರಟು ಮಾರ್ಗಕ್ರಮಣ ಮಾಡುತ್ತ ತನ್ನ ಗ್ರಾಮವಾದ ಮುದನೂರಿಗೆ ಬಂದುಮುಟ್ಟಿದನು. ಪೊಟ್ಟಲಕೆರೆಯಿಂದ ಈ ಗ್ರಾಮವು ಅದರ ಪಶ್ಚಿ ಮಕ್ಕೆ ಸುಮಾರು ೧೫೦–೧೬೦ ಮೈಲುಗಳ ಮೇಲೆ ಇರುತ್ತದೆ. ಅಲ್ಲಿಗೆ ಬಂದಬಳಿಕ ದೇವರದಾಸಿಮಯ್ಯನು ತನ್ನ ಇಷ್ಟದೇವತೆಯಾದ ರಾಮ ನಾಥನ ಸೇವೆಯಲ್ಲಿರತೊಡಗಿದನು.

ಈ ಕಾಲದಲ್ಲಿ ಅವನು ರಾಜನಾದ ಜಯಸಿಂಹನನ್ನೂ ಅವನ ಹೆಂಡತಿಯಾದ ಸುಗ್ಗಲೆಯನ್ನೂ ಕಂಡಂತೆ ಅವನ ಚರಿತ್ರೆಗಳಲ್ಲಿ ಉಲ್ಲೇಖ ಗಳಿರುವದಿಲ್ಲ.

ದೇವರದಾಸಿಮಯ್ಯನು ಮುದನೂರು ಗ್ರಾಮಕ್ಕೆ ಬಂದ ಬಳಿಕ ಅವನು ತನ್ನ ನೆಯ್ಗೆಯ ಕಾಯಕವನ್ನು ಮಾಡುತ್ತ ಯಾವಾಗಲೂ ಶಿವಾನುಭವ ಗೋಷ್ಠಿಯಲ್ಲಿರುವನು. ಅವನು ಬೋಧಿಸುತ್ತಿದ್ದ ಶಿವಾ ನುಭವದ ತತ್ವಗಳು ಅವನು ರಚಿಸಿರುವ ಗಂಭೀರವಾದ ಮತ್ತು ಉದಾ

ತ್ರವಾದ ವಚನಗಳಲ್ಲಿರುತ್ತವೆ. ಆದ್ದರಿಂದ ಅಸಂಖ್ಯ ಜನರು ಅವನ ಲಿಂಗಾನುಭವದ ರೀತಿನಡೆಗಳನ್ನು ತಿಳಿಯಲು ಅವನಲ್ಲಿಗೆ ಬರಹತ್ತಿದರು. ಇದರಿಂದ ಅವರಲ್ಲಿ ಬಹುಜನರು ವೀರಶೈವ ಮತಾವಲಂಬಿಗಳಾಗಹತ್ತಿದರು. ಅವರಲ್ಲಿ ಬಹುಜನ ಜೈನರೂ ಕೂಡ ಇದ್ದರು. ಹೀಗಾಗಹತ್ತಿದ್ದನ್ನು ಮುದನೂರಿನ ಜೈನರು ಕಂಡು ಅವರು ದೇವರದಾಸಿಮಯ್ಯನನ್ನು ವಿರೋಧಿಸಲು ಪ್ರಾರಂಭಿಸಿದರು ಮತ್ತು ಅವರು ಅವನಿಗೆ ಅನೇಕ ತೊಂದರೆಗಳನ್ನು ಕೊಡಹತ್ತಿದರು. ಇದನ್ನು ದೇವರದಾಸಿಮಯ್ಯನು ನೋಡಿ ಅವರಿಗೆ ಶಿವಾನುಭವದಲ್ಲಿರುವ ಅಲೌಕಿಕ ಸಾಮರ್ಥ್ಯವನ್ನು ತೋರಿಸುವ ಉದ್ದಿಶ್ಯವಾಗಿ ಪಟ್ಟಣದಲ್ಲಿದ್ದ ಅವರ ಜೈನ ಬಸದಿಯ ಬಾಗಿಲನ್ನು ತನ್ನ ಕೈಮುಟ್ಟಿ ಮುಚ್ಚಿದನು. ಜೈನರು ಆ ಬಾಗಿಲನ್ನು ತೆರೆಯಲು ಬಹು ಶ್ರಮಪಟ್ಟರು. ಆದರೆ ಅವರು ಏನೂ ಮಾಡಿದರೂ ಅದು ತೆರೆಯಲಿಲ್ಲ. ಇದು ದೇವರದಾಸಿಮಯ್ಯನಿಗೆ ತಾವು ತೊಂದರೆಕೊಟ್ಟಿದ್ದರ ಪರಿಣಾಮವೆಂದು ತಿಳಿದು ಅವರು ಅದಕ್ಕೋಸ್ಕರ ತಮ್ಮನ್ನು ಕ್ಷಮಿಸಬೇಕೆಂದು ಅವನಿಗೆ ಬೇಡಿಕೊಂಡರು. ಆಗ ದೇವರದಾಸಿಮಯ್ಯನು ಅದರ ಬಾಗಿಲನ್ನು ಮುಟ್ಟಲು ಅದು ತಾನಾಗಿಯೇ ತೆರೆಯಿತು. ಆದರೆ ಒಳಗೆ ನೋಡುತ್ತಾರೆಯೇ, ಅಲ್ಲಿದ್ದ ಜೈನಮೂರ್ತಿಯು ಇರಲಿಲ್ಲ. ಅದರ ಸ್ಥಳದಲ್ಲಿ ಒಂದು ಲಿಂಗವು ಉದ್ಭವಿಸಿತ್ತು! ಜೈನರು ಅದನ್ನು ನೋಡಿ ವಿಸ್ಮಿತರಾಗಿ ಶಿವಾನುಭವವು ಅಗಾಧವಾದುದೆಂದು ತಿಳಿದವರಾಗಿ ಅವರೆಲ್ಲರು ದೇವರದಾಸಿಮಯ್ಯನಿಂದ ವೀರಶೈವ ದೀಕ್ಷೆಯನ್ನು ಹೊಂದಿದರು. ಇದರಿಂದ ಅವನ ಮಹತ್ವವು ಸುತ್ತಲೂ ನಾಡಿನಲ್ಲೆಲ್ಲ ಮತ್ತಿಷ್ಟು ಪಸರಿಸಿತು. ದೇವರದಾಸಿಮಯ್ಯನ ಮೂಲಕ ಆದ ಈ ಲಿಂಗಕ್ಕೆ 'ರಾಮೇಶ್ವರಲಿಂಗ'ವೆಂಬ ಹೆಸರಾಯಿತು.

ದೇವರದಾಸಿಮಯ್ಯನು ಶ್ರೀಶೈಲದಲ್ಲಿ ಶ್ರೀಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ದೀಕ್ಷೆಯನ್ನು ಹೊಂದಿದ ಬಳಿಕ ಅವನು ಮುದನೂರಿಗೆ ಬರುವ ವರೆಗೂ 'ಆಚಾರ್ಯ ಪದ್ಧತಿ' ಎಂದರೆ ವಿರಕ್ತನಂತೆ ಆಚರಿಸುತ್ತ ಬಂದಿದ್ದನು. ಈ ವರೆಗೆ ಅವನು ಮದುವೆಯಾಗಿರಲಿಲ್ಲ. ಆದರೆ ಅವನು ಮುದುನೂರಿಗೆ ಬಂದಬಳಿಕ ಅವನ ಶಿಷ್ಯರು ಅವನಿಗೆ ಲಗ್ನವಾಗಲು ಸೂಚಿಸಿದರು. ಆದರೆ ಅವನು— ನನ್ನ ಮನೋಧರ್ಮವನ್ನು ತಿಳಿದು ವರ್ತಿಸುವಂಥ ಸ್ತ್ರೀಯಳನ್ನು ನಾನು ವರಿಸುವೆನೇ

ಹೊರತು ಬೇರಾವ ಸ್ತ್ರೀಯನ್ನು ವರಿಸುವದಿಲ್ಲೆಂದು ಅವರಿಗೆ ತಿಳಿಸಿ ಇಂಥವಳನ್ನು ಶೋಧಿಸಲು ಹೊರಟನು.

ಲಗ್ನವಾಗುವದು ಶಿವಶರಣರ ಮಾರ್ಗಕ್ಕೆ ವಿರೋಧವಾದುದಲ್ಲ. ಅದು ಅವರ ಇಚ್ಛೆಯ ಮೇಲೆ ಅವಲಂಬಿಸಿದೆ. ಇಂದ್ರಿಯಗಳನ್ನು ಕ್ಲೇಶಪಡಿಸದೆ ಅವುಗಳನ್ನು ಲಿಂಗಮುಖಮಾಡಿ ಆಚರಿಸುವದು ಶಿವಾನುಭವದ ಮಹತ್ವದ ತತ್ವವಿದೆ. ಆದ್ದರಿಂದ ವಿರಕ್ತ ಧರ್ಮವನ್ನು ಪಾಲಿಸುತ್ತಿದ್ದರೂ ಕೂಡ ಅದನ್ನು ತ್ಯಜಿಸಿ ಲಗ್ನವನ್ನು ಮಾಡಿಕೊಂಡು ಗೃಹಸ್ಥ ಧರ್ಮದಲ್ಲಿರುವದು ಶಿವಾನುಭವದ ತತ್ವಕ್ಕೆ ಹೊರತಾದುದಲ್ಲ. ಆದ್ದರಿಂದ ನಿರ್ಲಜ್ಜಶಾಂತಯ್ಯ, ರೇವಣಸಿದ್ಧ ಮೊದಲಾದ ಅನೇಕ ಮಹಾನುಭಾವರು ಲಗ್ನವಾಗಿ ತಮ್ಮ ಶಿವಾನುಭವದಲ್ಲಿ ಇದ್ದದ್ದು ಕಂಡುಬರುತ್ತದೆ.

ದೇವರದಾಸಿಮಯ್ಯನು ತನಗೆ ಅನುರೂಪಳಾದ ಸ್ತ್ರೀಯನ್ನು ಕಂಡು ಹಿಡಿಯಲು ಒಂದು ಉಪಾಯವನ್ನು ಯೋಜಿಸಿದನು. ಅವನು ಮಳಲನ್ನು ತನ್ನ ಕೂಡ ತೆಗೆದುಕೊಂಡು— ಇದನ್ನು ಯಾವಳು ಕುದಿಸಿ ಅನ್ನ ಮಾಡಿ ನನಗೆ ಉಣಲಿಕ್ಕೆ ಹಾಕುವಳೋ ಅವಳೇ ನನಗೆ ಯೋಗ್ಯಳಾದವಳು, ಅವಳನ್ನು ನಾನು ಮದುವೆಯಾಗುವೆನೆಂದು ತಿಳಿಸುತ್ತ ಸಂಚಾರ ಮಾಡುತ್ತ ಹೊರಟನು. ಆದರೆ ಅಂಥ ಸ್ತ್ರೀಯಳಾರೂ ಅವನಿಗೆ ಎಲ್ಲಿಯೂ ದೊರಕಲಿಲ್ಲ. ಹೀಗೆ ಅವನು ಬಹುಕಾಲ ಕಳೆದನು.

ಹೀಗಿರುವಲ್ಲಿ ಗೊಬ್ಬೂರು ಎಂಬ ಗ್ರಾಮದಲ್ಲಿ ಮಲ್ಲಿನಾಥ, ಅವನ ಹೆಂಡತಿ ಮಹಾದೇವಿ ಮತ್ತು ಅವರ ಮಗಳು ದುಗ್ಗಳಾಂಬೆ ಎಂಬವರು ವಾಸಿಸುತ್ತಿದ್ದರು. ಅವರು ಕೇವಲ ಶಿವಭಕ್ತರೆಂಬುದು ದೇವರದಾಸಿಮಯ್ಯನಿಗೆ ತಿಳಿದುಬಂದಿತು. ವಿಜಾಪುರ ಜಿಲ್ಲೆಯ ಈಶಾನ್ಯ ಮೋರೆಯಿಂದ ೧೬ ಮೈಲುಗಳು ಮತ್ತು ಮುದನೂರಿನಿಂದ ಉತ್ತರಕ್ಕೆ ೪೫ ಮೈಲುಗಳ ಮೇಲೆ ಚಿಕ್ಕ ಗೊಬ್ಬೂರು, ಹಿರಿಯ ಗೊಬ್ಬೂರು ಎಂಬ ಗ್ರಾಮಗಳಿವೆ. ಇವುಗಳಲ್ಲಿ ಹಿರಿಯ ಗೊಬ್ಬೂರು ಮೊದಲಿನ ಕಾಲದಲ್ಲಿ ಬ್ರಾಹ್ಮಣರ ಒಂದು ಪ್ರಸಿದ್ಧ ಅಗ್ರಹಾರವಾಗಿತ್ತು. ದೇವರದಾಸಿಮಯ್ಯನು ಈ ಹಿರಿಯ ಗೊಬ್ಬೂರಿಗೆ ಬಂದು ಅಲ್ಲಿ ವಾಮನಮುನಿ ಎಂಬ ವೇದವಿದನ ಮಠಕ್ಕೆ ಬಂದು ಅವನಿಗೆ ತನ್ನ ಮನೋಗತವನ್ನು ತಿಳಿಸಿದನು. ಅದಕ್ಕೆ ಅವನು ನೀನು ಹೇಳುವ ದಂಪತಿಗಳು ಶ್ರೇಷ್ಠ ಶಿವಶರಣ ಶರಣೆಯು

ರಿದ್ದಾರೆ. ಅವರ ಮಗಳೂ ಹಾಗೆಯೇ ಇದ್ದಾಳೆ. ಆದರೆ ಅವರು ಇಲ್ಲಿಲ್ಲ. ಅವರು ಶಿವಪುರದಲ್ಲಿರುತ್ತಾರೆ. ಅವರನ್ನು ನೀನು ಕಾಣು ಎಂದು ತಿಳಿಸಲು ದೇವರದಾಸಿಮಯ್ಯನು ಅಲ್ಲಿಂದ ಹೊರಟು ದಕ್ಷಿಣಕ್ಕೆ ೩೦ ಮೈಲು ದೂರವಿರುವ ಆ ಗ್ರಾಮಕ್ಕೆ ಬಂದು ಅಲ್ಲಿ ಮಲ್ಲಿನಾಥನನ್ನು ಕಾಣುವವನಾದನು. ಅವನು ಆ ಗ್ರಾಮದಲ್ಲಿ ಕ್ಷೇತ್ರಗೇರಿ ಎಂಬ ಕೇರಿಯಲ್ಲಿ ತನ್ನ ಹೆಂಡತಿ ಮತ್ತು ಮಗಳನ್ನು ಕೂಡಿಕೊಂಡು ತನ್ನ ನೆಯ್ಗೆಯ ಕಾಯಕವನ್ನು ಮಾಡುತ್ತಾ ಇದ್ದನು. ನಾಡಿನಲ್ಲಿ ಅತ್ಯಂತ ಪ್ರಖ್ಯಾತಿಯನ್ನು ಹೊಂದಿದ ದೇವರದಾಸಿಮಯ್ಯನು ತಮ್ಮನ್ನು ಕಾಣಲಿಕ್ಕೆ ತಾನಾಗಿಯೇ ಮನೆಗೆ ಬಂದದ್ದಕ್ಕೆ ಅವರು ಅತ್ಯಾನಂದಬಟ್ಟು ಅವನನ್ನು ಅತಿಭಕ್ತಿಭಾವದಿಂದ ಕಾಣುವವರಾದರು. ಆಮೇಲೆ ದಾಸಿಮಯ್ಯನು ಅವರೆದುರಿಗೆ ತಾನು ತಂದಿದ್ದ ಮಳಲನ್ನು ಇಟ್ಟು— ನಿಮ್ಮ ಮಗಳು ಇದನ್ನು ಕುದಿಸಿ ಅನ್ನಮಾಡಿ ನನಗೆ ನೀಡಿದರೆ ನಾನು ಅವಳನ್ನು ವರಿಸುವೆನೆಂದು ಹೇಳಿದನು. ಇದಕ್ಕೆ ಶಿವಶರಣೆಯಾದ ದುಗ್ಗಳವ್ವೆಯು ಒಪ್ಪಿಕೊಂಡು, ಮೊದಲು ದೇವರದಾಸಿಮಯ್ಯನ ಪಾದಪೂಜೆಯನ್ನು ಮಾಡಿ ಅವನ ಪಾದೋದಕದಲ್ಲಿ ಆ ಮಳಲನ್ನು ಹಾಕಿ ಅತ್ಯಂತ ಭಕ್ತಿಭಾವದಿಂದ ಕುದಿಸಹತ್ತಲು ಅದು ಸ್ವಲ್ಪ ಹೊತ್ತಿನಲ್ಲಿ ನಿಜವಾದ ಅನ್ನವೇ ಆಯಿತು! ಇದು ದುಗ್ಗಳಾಂಬೆಯ ಅಚಲ ಭಕ್ತಿ, ಪಾದೋದಕದ ಪರಿಣಾಮ ಮತ್ತು ಅವಳ ಮಂತ್ರದ ಮಹಿಮೆಯಾಗಿತ್ತು! ಅಂಥ ಅನ್ನವನ್ನು ದೇವರದಾಸಿಮಯ್ಯನು ಲಿಂಗಾರ್ಪಿತ ಮಾಡಿ ದುಗ್ಗಳವ್ವೆಯೇ ತನಗೆ ಅನುರೂಪಳಾದ ಸತಿಯು ಎಂದು ಭಾವಿಸಿ ಅವಳನ್ನು ಲಗ್ನವಾಗಲು ಒಪ್ಪಿಕೊಂಡನು. ಆಗ ಅವಳ ತಂದೆತಾಯಿಗಳು ಅವಳನ್ನು ಅವನಿಗೆ ಕೊಟ್ಟು ಲಗ್ನಮಾಡಿದರು. ಆಮೇಲೆ ಉಭಯತರು ಮುದನೂರಿಗೆ ಬಂದು ತಮ್ಮ ಶಿವಾನುಭವದಲ್ಲಿರಹತ್ತಿದರು.

ಮನುಷ್ಯನು ತನ್ನ ನಿತ್ಯದ ಕಾಯಕ ಮಾಡುವಲ್ಲಿ ಅದರಲ್ಲಿ ಅವನು ತತ್ಪರನಾಗಿರತಕ್ಕದ್ದು. ಅದರಲ್ಲಿ ದಾಸೋಹಭಾವ ಅಥವಾ ಲಿಂಗಾರ್ಪಣ ಭಾವವಿರಬೇಕು. ಹೀಗೆ ಭಕ್ತನು ಕಾಯಕ ಮಾಡಿದಲ್ಲಿ ಅವನಲ್ಲಿ ಷಟ್‌ಸ್ಥಲಗಳು ತಾನಾಗಿಯೇ ಇಂಬುಗೊಳ್ಳುತ್ತವೆಂದು ಶಿವಾನುಭವದ ತತ್ವವಿದೆ.

ದೇವರದಾಸಿಮಯ್ಯನು ತನ್ನ ಒಂದು ವಚನದಲ್ಲಿ ಕಾಯಕ ಮಾಡುವ ತನ್ನ ಈ ರೀತಿಯನ್ನು ಹೇಳಿದ್ದಾನೆ. ಕಾಯಕದ ಮೂಲಕ ಮನುಷ್ಯನಲ್ಲಿಯ ಅಂತಃಶಕ್ತಿಗಳು ಪ್ರಜ್ವಲಿತವಾಗಿ ಅಂಗದ ಪ್ರಾಣಗಳು ಹರಿತವಾಗುತ್ತವೆ. ಆದ್ದರಿಂದ ಅವು ಕಾರ್ಯಗತವಾಗುವಲ್ಲಿ ಆರು ಸ್ಥಲಗಳಲ್ಲಿರುವ ಆರು ಲಿಂಗಗಳು ಭಕ್ತನಲ್ಲಿ ಉದ್ಭವಿಸಿ ಅವು ಅವನಲ್ಲಿ ಸಂಬಂಧಪಡುತ್ತವೆ. ಹೀಗೆ ಅವುಗಳನ್ನು ಸಂಬಂಧಿಸಿಕೊಂಡು ಭಕ್ತನು ಆರುಸ್ಥಲಗಳನ್ನ ದಾಟಿ ಏಳನೆಯದನ್ನು ಸೇರಿ ಶೂನ್ಯದಲ್ಲಿ ಹೋಗಬೇಕು. ಅಲ್ಲಿಂದ ಮುಂದೆ ಹೋಗಿ ಅವನು ಸಾಮರಸ್ಯವನ್ನು ಹೊಂದಬೇಕು. ಆದ್ದರಿಂದ ದೇವರದಾಸಿಮಯ್ಯನು ನೆಯ್ಗೆಯ ಕಾಯಕವನ್ನು ಮಾಡುವ ತನ್ನ ಈ ರೀತಿಯನ್ನು ವಿವರಿಸುವದು ಹೇಗೆಂದರೆ:—

'ಉಂಕಿಯ ಸಿಗುಚಿ, ಸರಿಗೆಯ ಸಮಗೊಳಿಸಿ, ಸಮಗಾಲನಿಕ್ಕಿ ಅಣಿಯೊಳು ಏಳ ಮೆಟ್ಟಿದೆ. ಓಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು. ಈ ಸೀರೆಯ ನೆಯ್ದವ ನಾನೋ ನೀನೋ ರಾಮನಾಥಾ.'

ನೇಯುವಲ್ಲಿ ನೇಕಾರನು ಪೂರ್ವಸಿದ್ಧತೆಯನ್ನು ಕ್ರಮಪೂರ್ವಕವಾಗಿ ಮಾಡಬೇಕಾಗುತ್ತದೆ. ಅದನ್ನ ಅವನು ಸರಿಯಾಗಿ ಮಾಡಿಕೊಂಡು ಮಗ್ಗದಲ್ಲಿ ಕುಳಿತುಕೊಂಡು ಅಣಿಯನ್ನು ತುಳಿಯಬೇಕಾಗುತ್ತದೆ. ಈ ಅಣಿಯ ಮೂಲಕ ಏಳನೆಯ ಸ್ಥಳವಾದ ಆರಂಭದ ಶೂನ್ಯ ಲಿಂಗವನ್ನುಅವನು ಪ್ರವೇಶಿಸುವನು. ಆಗ ನೆಯ್ಯುವ ಲಾಳಿ ಅದರ ಮುಳ್ಳಿನಲ್ಲಿ ಸಿಕ್ಕಿಸಲ್ಪಟ್ಟ ಕಂಡಿಕೆ ಇವುಗಳ ಕ್ರಿಯೆಗಳು ಸೀರೆಯಲ್ಲಿ ಪರಿಣಾಮ ಹೊಂದುತ್ತವೆ. ಹೀಗೆ ಸೀರೆಯಲ್ಲಿ ಅವು ಅಭಿನ್ನಭಾವವನ್ನು ಹೊಂದಿದರೂ ಅವಕ್ಕೆ ಮೂಲ ಕಾರಣನಾದವನು ನೆಯ್ಕಾರನಿದ್ದಾನೆ. ಅವನು ಲಿಂಗಾನುಭಾವದಿಂದ ಈ ಕ್ರಿಯೆಗಳನ್ನು ಮಾಡಲು ಅವನಲ್ಲಿ ಲಿಂಗಚೈತನ್ಯವು ಉಂಟಾಗಿ ಅದರ ಮೂಲಕ ಅವನು ಶೂನ್ಯಸ್ಥಿತಿಯನ್ನು ಹೊಂದಿ ಆಮೇಲೆ ಪರಮಾತ್ಮನಲ್ಲಿ ಲಯವಾಗುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ದೇವರದಾಸಿಮಯ್ಯನು ತನ್ನ ಕಾಯಕ ಮಾಡುವಲ್ಲಿ ಅವನ ಹೆಂಡತಿಯಾದ ದುಗ್ಗಳೆಯು ಅವನಿಗೆ ಬಹಳ ಸಹಾಯಕಳಾಗಿ ವರ್ತಿಸಿದ್ದಾಳೆ. ವೀರಶೈವ ಶರಣೆಯರಲ್ಲಿ ಅವಳೊಬ್ಬ ಮಾದರಿ ಗೃಹಿಣಿ

ಎಂದು ಹೇಳಬಹುದು. ದೇವರದಾಸಿಮಯ್ಯನಾದರೂ ಸ್ತ್ರೀಯರ ಸಲುವಾಗಿ ಅತ್ಯಂತ ಆದರಭಾವವನ್ನು ತಾಳಿದವನಾಗಿ ದುಗ್ಗಳೆಯೊಡನೆ ಸಹಕರಿಸುತ್ತ ಅವಳಿಗೆ ಅನುರೂಪವಾಗಿಯೇ ವರ್ತಿಸಿದ್ದಾನೆ.

ದೇವರದಾಸಿಮಯ್ಯನು ಸ್ತ್ರೀಪುರುಷರು ಸಮಾನರೆಂದು ಭಾವಿಸಿದ್ದಾನೆ. ಹೀಗೆ ತಿಳಿಯಲು ಅವನು ಒಂದು ಸ್ವಾರಸ್ಯಪೂರ್ಣವಾದ ಕಾರಣವನ್ನು ಕೊಟ್ಟಿದ್ದು ಅದನ್ನು ಅವನು ನಿರೂಪಿಸಿರುವದು ಹೇಗೆಂದರೆ:—

'ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ? ಒಡೆಯರ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ? ಕಡೆಯಲ್ಲಿಪ್ಪ ಅಂತ್ಯಜನು ಒಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ? '

ಸ್ತ್ರೀಪುರುಷರಿಗೆ ಪ್ರಾಣವಿದ್ದು ಅದು ಉಭಯತರಿಗೂ ಒಂದೇ ಸಮನಾಗಿದೆ. ಈ ಪ್ರಾಣಕ್ಕೆ ಮೊಲೆ ಮುಡಿ (ಕೂದಲು, ಹೆರಳು) ಇಂಥ ಸ್ತ್ರೀ ಚಿನ್ಹಗಳಿಲ್ಲ. ಅವು ಅವಳ ಬಾಹ್ಯ ಶರೀರಕ್ಕೆ ಮಾತ್ರ ಇವೆ. ಆದ್ದರಿಂದ ಸ್ತ್ರೀಪುರುಷರು ಸಮಾನರೆಂದು ಅವನ ಅಭಿಪ್ರಾಯವು.

ಅವನು ಸ್ತ್ರೀಪುರುಷರ ವಿಷಯವಾಗಿ ಮತ್ತೊಂದು ವಚನದಲ್ಲಿ ಹೇಳಿರುವದೇನೆಂದರೆ—

(೧) ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥಾ.

(೨) ಗಂಡನುಳ್ಳಮ್ಮನ ಗೌರಿ ಎಂದು ಕಂಡಡೆ ಭೂಮಂಡಲಕ್ಕೆ ಅರಸಾಗಿ ಹುಟ್ಟುವನಾತನು. ಗಂಡನುಳ್ಳಮ್ಮನ ಒಡೆವೆರೆದಾತ ನರಕದಲ್ಲಿ ದಿಂಡುಗೆಡೆದಿಪ್ಪನೈ ರಾಮನಾಥಾ.

(೩) ಶಿವಭಕ್ತರು ತಮ್ಮ ನಿಜಕೈಲಾಸಕ್ಕೆ ಹೋದರೆ ಅವರರಸಿಯು ಪಾರ್ವತಿಯು ಸರಿ ಎಂದು ಕಾಣಲಿಬೇಕು. ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ ಮಾತನಾಡುವ ನರಕಿಗಳನೇನೆಂಬೆ ರಾಮನಾಥಾ?

ಅನುಸರಣೆ = ಅಯೋಗ್ಯ ವರ್ತನೆ; ಬೆರೆ = ಸೊಕ್ಕಿನಿಂದ ನಡೆ-

ಈ ವಚನಗಳ ಮೇಲಿಂದ ದೇವರದಾಸಿಮಯ್ಯನು ಸ್ತ್ರೀಯರ ಸಲುವಾಗಿ ಎಷ್ಟು ಆದರ ಭಾವವುಳ್ಳವನಾಗಿದ್ದನೆಂಬುದು ಗೊತ್ತಾಗುತ್ತದೆ. ಬಹುಜನರು ವಿಧವೆಯರು ಅಮಂಗಲೆಯರೆಂದು ತಿಳಿದು ಅವರಿಗೆ ಮನ್ನಣೆಕೊಡುವದಿಲ್ಲ. ಮಂಗಲ ಕಾರ್ಯಗಳಲ್ಲಿ ಅವರು ಭಾಗವಹಿಸುವಂತಿಲ್ಲ. ಆದರೆ ದೇವರದಾಸಿಮಯ್ಯನು ಅವರು ಸಾಕ್ಷಾತ್ ಪಾರ್ವತಿಗೆ ಸಮಾನರೆಂದು ಇಲ್ಲಿ ಹೇಳಿದ್ದಾನೆ. ಆದ್ದರಿಂದ ಅವರಲ್ಲಿ ಇಂಥ ಅಮಂಗಲತ್ವವು ಹೇಗೆ ಉಳಿಯುವದು!

ದೇವರದಾಸಿಮಯ್ಯನು ಸ್ತ್ರೀಯರಿಗೋಸ್ಕರ ಇಷ್ಟು ಉಚ್ಚ ಭಾವವನ್ನು ತಾಳಿದವನಾದ್ದರಿಂದ ಅವನ ಹೆಂಡತಿಯಾದ ದುಗ್ಗಳೆಯು ಅವನ ಕಾಯಕದಲ್ಲಿ ಅವನಿಗೆ ಯಾವಾಗಲೂ ಸಹಾಯವಾಗುತ್ತಲೇ ಬಂದಳು. ಅವಳು ಅವನನ್ನು ಎಂದೂ ವಿರೋಧಿಸಲಿಲ್ಲ. ಆದರಿಂದ ಅವನಿಗೆ ಗೃಹಸೌಖ್ಯವು ಉಂಟಾದ್ದರಿಂದ ಷಟ್‌ಸ್ಥಲಾನುಸಾರವಾಗಿ ಅವನು ತನ್ನ ಕಾಯಕ ಮಾಡುತ್ತ ಬಂದನು. ಇದು ಅವನ ಕಾಯಕದ ಮಹತ್ವದ ವೈಶಿಷ್ಟ್ಯವಾಗಿದೆ. ಈ ವಿಷಯವಾಗಿ ಕೆಳಗೆ ಕಾಣಿಸಿದ ಅವನ ಚರಿತ್ರೆಯಲ್ಲಿಯ ಆಖ್ಯಾಯಿಕೆಗಳು ವಿಚಾರಾರ್ಹವಾಗಿರುತ್ತವೆ.

ಒಂದು ದಿವಸ ಕೈಲಾಸಪರ್ವತದಲ್ಲಿ ಇಬ್ಬರು ಗಣಾಧೀಶ್ವರರು ವೈರಾಗ್ಯವಧಿಕವೋ, ಸಂಸಾರವಧಿಕವೋ ಎಂಬುದರ ವಿಷಯವಾಗಿ ವಾಗ್ವಾದ ಮಾಡಹತ್ತಿದರು. ಅವರಲ್ಲಿ ಒಬ್ಬನು ಸಂಸಾರವಧಿಕವೆಂತಲೂ ಇನ್ನೊಬ್ಬನು ವಿರಕ್ತಿ ಅಧಿಕವೆಂತಲೂ ವಿಶೇಷವಾಗಿ ವಾದಿಸಿದರು. ಆದರೆ ಇವುಗಳಲ್ಲಿ ಯಾವದು ಅಧಿಕವೆಂಬುದು ಅವರಿಗೆ ಗೊತ್ತಾಗದೆ ಹೋಗಲು ಅವರು ಶಿವನಲ್ಲಿಗೆ ಬಂದು, ಈ ಎರಡರಲ್ಲಿ ಯಾವದು ಅಧಿಕವೆಂದು ಅವನನ್ನು ಕೇಳಿದರು. ಅದಕ್ಕೆ ಅವನು— ಭೂಲೋಕದಲ್ಲಿ ನನ್ನ ಭಕ್ತರಾದ ದಾಸದುಗ್ಗಳೆಯರಿದ್ದಾರೆ. ಅವರನ್ನು ನೀವು ಕಾಣಿರಿ, ಎಂದು ಹೇಳಿದನು. ಹಾಗೆ ಅವರು ಮಾಹೇಶ್ವರ ರೂಪು ಧಾರಣ ಮಾಡಿ ಅವನ ಮನೆಗೆ ಬಂದರು.

ಆಗ ಉಭಯ ದಂಪತಿಗಳು ತಮ್ಮ ಸಂಸಾರದ ನಿತ್ಯದ ಕಾರ್ಯಗಳಲ್ಲಿ ತೊಡಗಿದ್ದರು. ಹೀಗೆ ತೊಡಗಿದ್ದರೂ ಅವರ ಮನೆಯಲಿ

ಶಿವಾನುಭವದ ದಿವ್ಯತೇಜಸ್ಸು ಸ್ಫುರಿಸುತಿತ್ತು. ಆಗ ದುಗ್ಗಳೆಯು ಧಾನ್ಯವನ್ನು ಕುಟ್ಟುವದರಲ್ಲಿ ತೊಡಗಿದ್ದಳು. ಆ ಕಾಲದಲ್ಲಿ ದೇವರದಾಸಿಮಯ್ಯನು ಅವಳನ್ನು ಕೆಲವೊಂದು ಕಾರ್ಯಕ್ಕೋಸ್ಕರ ಒಳಗಿಂದ ಕರೆದನು. ಆಗ ಅವಳು ಎತ್ತಿದ ಒನಿಕೆಯು ಮೇಲೆ ಅರ್ಧದಾರಿಯಲ್ಲಿದ್ದರೂ ಅವಳು ಅದನ್ನು ಕೆಳಗಿಳಿಸದೆ ಅಲ್ಲಿಯೇ ಬಿಟ್ಟು ಅವನಿದ್ದೆಡೆಗೆ ಬಂದಳು!

ನೆಯ್ಗೆಯ ಕೆಲಸದಲ್ಲಿ ಸ್ತ್ರೀಯರು ಉಂಕೀ ಹೂಡಿ ಮಗ್ಗಕ್ಕೆ ಬೇಕಾಗುವ ಎಳೆಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಇದು ಸಾಮಾನ್ಯವಾಗಿ ಸ್ತ್ರೀಯರು ಮಾಡತಕ್ಕ ಕೆಲಸ. ಆದರೆ ದೇವರದಾಸಿಮಯ್ಯನು ಈ ಕಾರ್ಯವನ್ನು ತನ್ನ ಹೆಂಡತಿಗೋಸ್ಕರ ತಾನೇ ಕೈಕೊಂಡಿದ್ದನು. ಅದನ್ನು ಮಾಡುತ್ತಿರುವಾಗ ಅವನು ದುಗ್ಗಳೆಗೆ— ಎಳೆ ಹರಿಯಿತು. ದೀಪವನ್ನು ತೆಗೆದುಕೊಂಡು ಬಾ ಎಂದೆನ್ನಲು, ಅದು ಹಗಲು ಹೊತ್ತು, ಈಗೇಕೆ ದೀಪಬೇಕು ಎಂದು ಅವಳು ತಿರುಗಿ ನುಡಿಯದೆ ದೀಪವನ್ನು ಹಚ್ಚಿತಂದು ಹರಿದ ಎಳೆಯನ್ನು ಗಂಡನಿಗೆ ತೋರಿಸಿ ಕೊಟ್ಟು ಹೋದಳು! ಇದರಿಂದ ದುಗ್ಗಳೆ ದಾಸಿಮಯ್ಯರಲ್ಲಿ ಎಷ್ಟು ಪರಸ್ಪರ ಸಹಕಾರವಿತ್ತೆಂಬದು ಗೊತ್ತಾಗುತ್ತದೆ.

ಆಮೇಲೆ ಕೆಲವು ವೇಳೆಯಾದ ಬಳಿಕ ದೇವರದಾಸಿಮಯ್ಯನು ಕುಂಚಿಗೆಯ ತಾರೆಂದು ಅವಳಿಗೆ ಹೇಳಲು, ಅವಳು ತನ್ನ ತಲೆಯ ಮೇಲಿನ ಕುಂಚಿಗೆಯನ್ನೇ ಅವನ ಕಯ್ಯಲ್ಲಿ ಕೊಟ್ಟು ಹೋದಳು.

ದೇವರದಾಸಿಮಯ್ಯ ದುಗ್ಗಳೆಯರು ತಮ್ಮ ಕಾಯಕವನ್ನು ಮತ್ತು ಸಂಸಾರ ಕಾರ್ಯಗಳನ್ನು ಮಾಡುವಲ್ಲಿ ಹೀಗೆ ಪರಸ್ಪರ ಸಹಾಯದಿಂದ ಮತ್ತು ಪ್ರೇಮದಿಂದ ಮಾಡುತ್ತಿರುವದನ್ನು ಆ ಮಹೇಶ್ವರರು ನೋಡಿ ಸಂಸಾರವು ಹೀಗಿದ್ದರೆ ವಿರಕ್ತಿಗಿಂತ ಸಂಸಾರವೇ ಸುಖವೆಂದು ಅವರಿಗೆ ತೋರಿತು.

ಆಮೇಲೆ ದೇವರದಾಸಿಮಯ್ಯನು ಅವರನ್ನು ಒಳಗೆ ಕರೆದುಕೊಂಡು ಭೋಜನಕ್ಕೆ ಕುಳಿತನು. ಆದರೆ ಅವರು ಬಡವರು. ಊಟದಲ್ಲಿ ಪಕ್ವಾನ್ನಗಳಿರಲಿಲ್ಲ, ಬಿಸಿಬಿಸಿ ಪದಾರ್ಥಗಳಿರಲಿಲ್ಲ. ದುಗ್ಗಳೆಯು ತಣ್ಣಗಿನ ತಂಗುಳ ಅಂಬಲಿಯನ್ನು ತಂದು ಎಲ್ಲರಿಗೂ ನೀಡಿದಳು.

ದೇವರದಾಸಿಮಯ್ಯನು ಅದನ್ನು ಲಿಂಗಾರ್ಪಣೆ ಮಾಡಿ ಅದನ್ನು ಸುರಿದು ಕೊಳ್ಳಹತ್ತಿದನು. ಆಗ ಅವನು ತನ್ನ ಹೆಂಡತಿಗೆ— ಈ ಅಂಬಲಿಯು ಬಹಳ ಬಿಸಿಯಾಗಿದೆ. ಅದನ್ನು ಬೀಸಿ ತಣ್ಣಗೆ ಮಾಡು ಎಂದು ಹೇಳಿದನು. ದುಗ್ಗಳವ್ವೆಯು ಅದನ್ನು ಕೇಳಿ ತಿರುಗಿ ಉತ್ತರ ಕೊಡದೆ ಒಂದು ಮೊರ ವನ್ನು ತಂದು ತಣ್ಣಗಿನ ಆ ಅಂಬಲಿಗೆ ಗಾಳಿಯನ್ನು ಬೀಸಹತ್ತಿದಳು!

ಆಗ ಆ ಉಭಯ ಗಣಾಧೀಶ್ವರರು ಸಂಸಾರದಲ್ಲಿದ್ದರೆ ಹೀಗಿರ ಬೇಕು, ಹೀಗಿದ್ದರೆ ಸಂಸಾರವೇ ಅಧಿಕವು, ಎಂದು ತಿಳಿದವರಾಗಿ ದುಗ್ಗಳೆ ದಾಸಿಮಯ್ಯಗಳ ಅಪ್ಪಣೆಯನ್ನು ತೆಗೆದುಕೊಂಡು ಹೋದರು.

ಅವರು ದಾಸಿಮಯ್ಯನ ಮನೆಯಿಂದ ಹೊರಟು ಗೊಗ್ಗೇಶ್ವರ ನೆಂಬ ಇನ್ನೊಬ್ಬ ಶಿವಶರಣನ ಮನೆಗೆ ಹೋದರು. ಅವನೂ ಕೂಡ ಒಬ್ಬ ಶ್ರೇಷ್ಠ ಶಿವಾನುಭವಿಯು, ಲಿಂಗಾಂಗಸಾಮರಸ್ಯ ವೃತ್ತಿಯುಳ್ಳವನು, ಬಹು ಶಾಂತಸ್ವಭಾವದವನು. ಆದರೆ ಆ ಮಹೇಶ್ವರರು ಅವನ ಗೃಹ ವನ್ನು ಪ್ರವೇಶಿಸಿದ ಕೂಡಲೆ ಅವನ ಹೆಂಡತಿಯು ಅವರ ಮೇಲೆ ಬೈಗಳ ಸುರಿಮಳೆಯನ್ನು ಸುರಿಸಹತ್ತಿದಳು. ಅವಳ ಬಾಯಲ್ಲಿ ಭಕ್ತ ಜಂಗಮರ ನಿಂದೆ, ಬಂದ ಅತಿಥಿಗಳ ನಿಂದೆ, ಇವುಗಳೇ ತುಂಬಿದ್ದವು. ಆದರೆ ಗೊಗ್ಗೇಶ್ವರನು ಎಷ್ಟು ಮಾತ್ರವೂ ಕೋಪಿಸಲಿಲ್ಲ. ಅವನು ಆ ಮಹೇಶ್ವರರನ್ನು ಯಥಾರೀತಿ ತಾನೇ ಸತ್ಕರಿಸಿ ಕಳಿಸಿಕೊಟ್ಟನು. ಆಗ ಅವರು— ಈ ಗೊಗ್ಗೇಶ್ವರನು ಮಹಾ ಶಿವಶರಣನು. ಆದರೆ ಅವನ ಸಂಸಾರಕ್ಕೂ ದೇವರದಾಸಿಮಯ್ಯನ ಸಂಸಾರಕ್ಕೂ ಎಷ್ಟು ಅಂತರವು! ದೇವರದಾಸಿಮಯ್ಯನ ಸಂಸಾರವು ಕೈಲಾಸಕ್ಕಿಂತಲೂ ಮಿಗಿಲಾದದ್ದು. ಅವನನ್ನು ನಾವು ಕೈಲಾಸಕ್ಕೆ ಕರೆದುಕೊಂಡು ಹೋಗುವದು ಬೇಡ, ಅವನು ಇಲ್ಲಿಯೇ ಇರಲಿ. ಆದರೆ ಗೊಗ್ಗೇಶ್ವರನಂಥ ಶಿವಶರಣನು ಇಂಥ ಸಂಸಾರದಲ್ಲಿ ಇರಬಾರದು. ಅವನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಬೇಕೆಂದು ಅವರು ತಮ್ಮ ಕೂಡ ಅವನನ್ನು ಕರೆದುಕೊಂಡು ಹೋದರು!

ಇದರಿಂದ ಸರಿಯಾಗಿ ನಡೆಸಿದ ಕಾಯಕ ಮತ್ತು ಉತ್ತಮ ಗೃಹಿಣಿ ಇವುಗಳು ವಿರಕ್ತಿಗಿಂತಲೂ ಶ್ರೇಷ್ಠವಾದವುಗಳೆಂದು ಶಿವಶರಣರು ಭಾವಿ ಸುತ್ತಿದ್ದುದು ತಿಳಿಯುತ್ತದೆ.

ಕೆಲವು ದಿವಸಗಳಾದ ಮೇಲೆ ದಾಸಿಮಯ್ಯ ದುಗ್ಗಳೆಯರಿಗೆ ಒಬ್ಬ ಮಗನು ಹುಟ್ಟಿದನು. ಅವರು ಅವನಿಗೆ ರಾಮೇಶ್ವರನೆಂಬ ಹೆಸರನ್ನಿಟ್ಟರು.

ಮುಂದೆ ಉಭಯ ದಂಪತಿಗಳ ಕೀರ್ತಿಯು ನಾಡಿನಲ್ಲಿ ದಿನೇ ದಿನೇ ಹೆಚ್ಚುತ್ತಲೇ ನಡೆಯಿತು. ಇದು ಅವರು ಕೈಕೊಂಡ ಧರ್ಮೋದ್ಧಾರ ಕಾರ್ಯಗಳ ಪರಿಣಾಮವಾಗಿರುತ್ತದೆ. ಬಸವೇಶ್ವರನು ತನ್ನ ವಚನಗಳಲ್ಲಿ ಅವರಿಬ್ಬರನ್ನು ಅನೇಕ ಬಗೆಯಾಗಿ ಸ್ತುತಿಸಿದ್ದಾನೆ. ಅವರ ಅತುಲವಾದ ಭಕ್ತಿ, ಅವರ ನಿಜಾಚರಣೆ. ಅವರ ಶಿವಾನುಭವವನ್ನು ಅವನು ತುಂಬ ಹೊಗಳಿದ್ದಾನೆ. ಅವನ ಶಬ್ದಗಳಿಂದಲೇ ನಾವು ದಾಸಿಮಯ್ಯನ ಯೋಗ್ಯತೆಯನ್ನು ಇಲ್ಲಿ ವಿವರಿಸುವದು ವಿಹಿತವೆಂದು ನಮಗೆ ತೋರುತ್ತದೆ.

ದೇವರದಾಸಿಮಯ್ಯನು ೧೦೦೮ ರಿಂದ ೧೦೪೨ ರ ವರೆಗೆ ಆಳಿದ ಜಯಸಿಂಹರಾಜನ ಕಾಲದಲ್ಲಿ, ಅಂದರೆ ಬಸವೇಶ್ವರನಕಿಂತಲೂ ಮೊದಲು ೧೦೦-೧೫೦ ವರ್ಷಗಳ ಹಿಂದೆ ಪ್ರಸಿದ್ಧಿಗೆ ಬಂದಿದ್ದನೆಂಬುದನ್ನು ನಾವು ಇಲ್ಲಿ ಲಕ್ಷಿಸುವದು ಅವಶ್ಯವಿದೆ. ಆದ್ದರಿಂದ ಬಸವೇಶ್ವರನು ದೇವರ ದಾಸಿಮಯ್ಯನು ತನ್ನಕಿಂತಲೂ ಮೊದಲಿನವನಾಗಿ ಪ್ರಸಿದ್ಧಿಗೆ ಬಂದಿದ್ದರಿಂದ ಬಸವೇಶ್ವರನು ಉಚ್ಚಮನಸ್ಕನಾಗಿ ಅವನನ್ನು ತನ್ನ ವಚನಗಳಲ್ಲಿ ಬಹಳ ಹೊಗಳಿದ್ದಾನೆ. ಇದು ಅವನ ಉದಾರ ಸ್ವಭಾವಕ್ಕೆ ಅನುಗುಣವಾದದ್ದು.

ಬಸವೇಶ್ವರನು ಭಕ್ತಿ ಎಂದರೆ ಎಂತಹದೆಂದು ತನಗೆ ತಾನೇ ಕೇಳಿಕೊಂಡು ಅದು ದಾಸಯ್ಯ ಮಾಡಿದಂತಹದೆಂದು ತನ್ನ ವಚನದಲ್ಲಿ ಹೇಳಿದ್ದಾನೆ!

'ಭಕ್ತಿ ಎಂತಹದಯ್ಯ? ದಾಸಯ್ಯ ಮಾಡಿದಂತಹದಯ್ಯ. ಭಕ್ತಿ ಎಂತಹದಯ್ಯ? ಶಿರಿಯಾಳ ಮಾಡಿದಂತಹದಯ್ಯ. ಭಕ್ತಿ ಎಂತಹದಯ್ಯ? ಸಿಂಧುಬಲ್ಲಾಳ ಮಾಡಿದಂತಹದಯ್ಯ. ಭಕ್ತಿ ಎಂತಹದಯ್ಯಾ? ಕೂಡಲ ಸಂಗಮದೇವ ನೀ ಬಾಣನ ಬಾಗಿಲ ಕಾಯ್ದಂತಹದಯ್ಯ. (ನಂ॥ ೪೨೭)

ಈ ಪ್ರಕಾರ ಬಸವೇಶ್ವರನು ದೇವರದಾಸಿಮಯ್ಯನನ್ನು ಹೊಗಳುತ್ತ ಅವನನ್ನು ಸಿರಿಯಾಳ, ಸಿಂಧುಬಲ್ಲಾಳ, ಬಾಣಾಸುರ ಇಂಥ ಮಹಾನುಭಾವರ ಪಂಕ್ತಿಯಲ್ಲಿ ಸೇರಿಸಿ ಬಿಟ್ಟಿದ್ದಾನೆ.

ಬಸವೇಶ್ವರನು ಬ್ರಾಹ್ಮಣ ಕುಲದಲ್ಲಿ ಹುಟ್ಟಿದವನು. ಆದರೆ ಡೇವರ ದಾಸಿಮಯ್ಯನು ನೆಯ್ಗೆ ಕೆಲಸ ಮಾಡುವವನಾದರೂ ಕೂಡ ಅವನು ನಡೆಯಲ್ಲಿ ತನ್ನಕಿಂತ ಶ್ರೇಷ್ಠನಾದುದರಿಂದ ತಾನು ಜಾತಿಯಲ್ಲಿ ಬ್ರಾಹ್ಮಣನಾಗಿದ್ದರೂ ದಾಸಿಮಯ್ಯನು ತನ್ನ ಮನೆಯಲ್ಲಿ ಮಾಡಿದ ಶಿವದಾನ ಎಂದರೆ ಮಜ್ಜಿಗೆಯನ್ನು ಸಹ ನನಗೆ ಕೊಡುವದಿಲ್ಲೆಂದು ಒಂದು ವಚನದಲ್ಲಿ ಹೇಳಿದ್ದಾನೆ! ಆ ವಚನವು ಯಾವದೆಂದರೆ—

'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ! ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ. ದಾಸಯ್ಯ ಶಿವದಾನವನೆರೆಯ ನೋಡಯ್ಯ. ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ. ಉನ್ನತ ಮಹಿಮ ಕೂಡಲಸಂಗಮದೇವ ಶಿವಘೋ, ಶಿವಘೋ.

(ನಂ॥ ೫೬೭)

ಬಸವೇಶ್ವರನು ದೇವರ ದಾಸಿಮಯ್ಯನ ಹೆಂಡತಿಯಾದ ದುಗ್ಗಳೆಗೋಸ್ಕರ ಸಹ ಪೂಜ್ಯಭಾವವನ್ನು ತಾಳಿದ್ದಾನೆ. ಅವನು ಕೆಳಗಿನ ವಚನದಲ್ಲಿ ಅವಳ ಭಕ್ತಿಯನ್ನು ಹೊಗಳಿದ್ದಾನೆ.

'ನೆರೆನಂಬೋ, ನೆರೆನಂಬೋ ದರದುರವಿಲ್ಲದೆ ಸಾಮವೇದಿಗಳಂತೆ. ನೆರೆನಂಬೋ, ನೆರೆನಂಬೋ ದಾಸ ದುಗ್ಗಳೆಯಂತೆ. ನೆರೆನಂಬೋ, ನೆರೆನಂಬೋ ಸಿರಿಯಾಳ ಚಂಗಳೆಯರಂತೆ. ನೆರೆನಂಬೋ, ನೆರೆನಂಬೋ ಸಿಂಧುಬಲ್ಲಾಳನಂತೆ [illegible]ದರೆ ತನ್ನಪೀವ ಕೂಡಲಸಂಗಮದೇವ.

(ನಂ॥ ೪೩)

ಇದರಿಂದ ದುಗ್ಗಳೆಯು ಭಕ್ತಿಗೋಸ್ಕರ ಹಿಂದಿನ ಕಾಲದಲ್ಲಿ ಬಹು ಪ್ರಸಿದ್ಧಳಾಗಿದ್ದಳೆಂಬುದು ಗೊತ್ತಾಗುತ್ತದೆ.

ಕೆಳಗಿನ ವಚನದಲ್ಲಿ ಬಸವೇಶ್ವರನು ದಾಸಿಮಯ್ಯನ ಭಕ್ತಿಯ ಮುಂದೆ ತನ್ನದೇನೂ ಅಲ್ಲ, ಅವನಿಂದ ತಾನು ಕಲಿಯತಕ್ಕುದು ಬಹಳ ಇದೆ ಎಂದು ಹೇಳಿಕೊಂಡಿದ್ದಾನೆ! ಅದು ಯಾವದೆಂದರೆ—

'ಭಕ್ತಿ ಇಲ್ಲದ ಬಡವ ನಾನಯ್ಯ. ಕಕ್ಕಯ್ಯನ ಮನೆಯಲು ಬೇಡಿದೆ. ದಾಸಯ್ಯನ ಮನೆಯಲು ಬೇಡಿದೆ. ಚನ್ನಯ್ಯನ ಮನೆಯಲು ಬೇಡಿದೆ. ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ. (ನಂ.– ೫೯೩)

ಬಸವೇಶ್ವರನು ತನ್ನ ಇನ್ನೊಂದು ವಚನದಲ್ಲಿ ದಾಸಿಮಯ್ಯನು ತನುಮನಧನದಲ್ಲಿ ವಂಚನೆಯನ್ನು ಮಾಡಲು ಅರಿಯನೆಂದು ಹೇಳಿದ್ದಾನೆ. ಇದರಿಂದ ಬಸವೇಶ್ವರನಿಗೆ ಅವನ ಚರಿತ್ರೆಯಲ್ಲಿಯ ಅಂಶಗಳು ನಮ್ಮಕಿಂತಲೂ ಹೆಚ್ಚಾಗಿ ಗೊತ್ತಿರಬಹುದೆಂದು ತೋರುತ್ತದೆ. ಆ ವಚನವು ಆವುದೆಂದರೆ—

'ಸೋಲಬಲ್ಲರು ಅವರು ಗೆಲಲರಿಯರಯ್ಯಾ! ತನುಮನಧನದಲ್ಲಿ ವಂಚನೆಯನರಿಯರಯ್ಯ ದಾಸಯ್ಯ ಸಿರಿಯಾಳನವರು. ಕೂಡಲಸಂಗನ ಶರಣರು ಉಪಚಾರವನರಿಯರಯ್ಯ. (ನಂ॥ ೬೫೮)

ಬಸವೇಶ್ವರನು ದಾನಶೂರನೆಂದು ಅವನ ಕೀರ್ತಿಯು ಬಹಳ ಇದೆ. ಆದರೆ ಅವನು ತನ್ನ ಒಂದು ವಚನದಲ್ಲಿ ತನ್ನಕಿಂತಲೂ ದೇವರ ದಾಸಿಮಯ್ಯನೇ ಇದರಲ್ಲಿ ಹೆಚ್ಚಿನವನೆಂದು ಹೇಳಿಕೊಂಡಿದ್ದಾನೆ!

" ಬಾಣಮಯೂರನಂತೆ ಬಣ್ಣಿಸಬಲ್ಲೆನೇ ? ಸಿರಿಯಾಳನಂತೆ ಉಣಲಿಕ್ಕಬಲ್ಲೆನೇ ? ದಾಸಿಮಯ್ಯನಂತೆ ಉಡಕೊಡಬಲ್ಲೆನೇ ? ಉಂಡುಟ್ಟು ಕೊಟ್ಟರೆ, ಹುಯ್ಯಿಗೆ ಮುಯ್ಯಿ ಎನಿಸಿತ್ತು. ಎನಗೆ ಕೊಟ್ಟರೆ ನಿಮ್ಮಧರ್ಮ ಕೂಡಲಸಂಗಮದೇವ. (ನಂ.—೬೮೪)

ಈ ಪ್ರಕಾರ ಬಸವೇಶ್ವರನು ದಾಸಿಮಯ್ಯನ ಉಜ್ವಲಭಕ್ತಿ, ಅವನ ಕಾಪಟ್ಯರಹಿತ ವರ್ತನೆ, ಅವನ ಔದಾರ್ಯ, ಅವನ ದಾಸೋಹದ ನಡೆ, ಇವುಗಳನ್ನು ಅತ್ಯಂತವಾಗಿ ಹೊಗಳಿದ್ದಾನೆ.

ಬಸವೇಶ್ವರನು ಯಾವಾಗಲೂ ಸತ್ಯವನ್ನು ನುಡಿಯುವವನು. ಇಂಥವನು ದೇವರ ದಾಸಿಮಯ್ಯನ ಮತ್ತು ಅವನ ಹೆಂಡತಿಯ ವಿಷಯವಾಗಿ ಹೀಗೆ ಹೇಳಿದುದರ ಮೇಲಿಂದ ಈ ಉಭಯತರು ಹಿಂದಿನ ಕಾಲದಲ್ಲಿ ಎಂಥ ಉಚ್ಚ ಸ್ಥಾನವನ್ನು ಹೊಂದಿದ್ದರೆಂಬುದನ್ನು ನಾವು ಊಹಿಸಬಹುದು. ಬಸವೇಶ್ವರನು ಅವರನ್ನು ತನ್ನ ವಚನಗಳಲ್ಲಿ ಹದಿನಾಲ್ಕು ಸಲ ನಾನಾವಿಧವಾಗಿ ಹೊಗಳಿದ್ದಾನೆ. ದೇವರದಾಸಿಮಯ್ಯನ ವಿಷಯವಾಗಿ ಪುರಾತನ ಕಾಲದಲ್ಲಿ ಜನರು ಎಷ್ಟು ಪೂಜ್ಯಭಾವವನ್ನು ತಾಳಿದ್ದರೆಂಬುದನ್ನು ತಿಳಿಯಲು ಬಸವೇಶ್ವರನ ಈ ಉಕ್ತಿಗಳೇ ನಮಗೆ ಬಲವಾದ ಆಧಾರಗಳಾಗಿವೆ. ಆದ್ದರಿಂದ ಅವನ ಶಬ್ದಗಳಿಂದಲೇ ನಾವು ದೇವರ ದಾಸಿಮಯ್ಯನ ಯೋಗ್ಯತೆಯನ್ನು ಇಲ್ಲಿ ನಿರೂಪಿಸಿದ್ದೇವೆ.

ದೇವರ ದಾಸಿಮಯ್ಯನು ಜನರಿಗೆ ಬೋಧಿಸುತ್ತಿದ್ದ ತತ್ತ್ವಗಳಾವವೆಂಬುದನ್ನು ಅವನು ರಚಿಸಿದ ವಚನಗಳಲ್ಲಿ ನಾವು ಸ್ಪಷ್ಟವಾಗಿ ಕಂಡು ಹಿಡಿಯಬಹುದು. ಅವುಗಳಲ್ಲಿ ವೀರಶೈವ ಮತದ ಶುದ್ಧ ತತ್ತ್ವಗಳೇ ನಿರೂಪಿತವಾಗಿವೆ. ಅವುಗಳಲ್ಲಿ ಷಟ್ ಸ್ಥಲಗಳು, ಅಷ್ಟಾವರಣಗಳು, ಮೂವತ್ತಾರು ತತ್ತ್ವಗಳು, ನೂರೊಂದು ಸ್ಥಲಗಳು ಇವುಗಳ ವಿವರಣೆಗಳು ಇವೆ. ಅವು ಬಹು ಸೊಗಸಾದ ಕನ್ನಡದಲ್ಲಿ ಬಹು ಅಮೋಘವಾದ ರೀತಿಯಿಂದ ಹೇಳಲ್ಪಟ್ಟಿವೆ. ಅವನ ವಚನಗಳು ಕನ್ನಡ ವಾಙ್ಮಯದಲ್ಲಿ ಶಾಶ್ವತವಾಗಿ ಉಳಿಯುವಂಥವುಗಳಿರುತ್ತವೆ.

ಅವನು ತನ್ನ ೧೩೧ ನೇ ವಚನದಲ್ಲಿ ಆರು ಮೂವತ್ತಾರು ಸ್ಥಲಗಳನ್ನು ಉಲ್ಲೇಖಿಸಿದ್ದಾನೆ. ೧೩ ನೇ ವಚನದಲ್ಲಿ ನೂರೊಂದು ಸ್ಥಲಗಳ ರೀತಿಯನ್ನು ಹೇಳಿದ್ದಾನೆ. ೧೪ ನೇ ಮತ್ತು ೧೫ ನೇ ವಚನಗಳಲ್ಲಿ ಗುರುವಿನ ಕಾರ್ಯಗಳನ್ನೂ ೧೬ ನೇ, ೨೧ ನೇ ವಚನಗಳಲ್ಲಿ ಗುರು ಮತ್ತು ಲಿಂಗ ಇವುಗಳ ಸ್ವರೂಪನ್ನೂ ೫೧ ನೇ ವಚನದಲ್ಲಿ ಜಂಗಮನೊಡನೆ ಇರತಕ್ಕ ರೀತಿಯನ್ನೂ ೯೧ ನೇ, ೯೨ ನೇ ವಚನಗಳಲ್ಲಿ ಪ್ರಸಾದದ ಸ್ವರೂಪನ್ನೂ ೭೦ ನೇ, ೩೯ ನೇ ವಚನಗಳಲ್ಲಿ ವಿಭೂತಿ, ರುದ್ರಾಕ್ಷಿಗಳ ಉಪಯೋಗವನ್ನೂ ೪೦ ನೇ, ೪೧ ನೇ ವಚನಗಳಲ್ಲಿ ಅನುಭಾವವೇನೆಂಬುದನ್ನೂ ಬಹು ಮಾರ್ಮಿಕವಾಗಿ ಹೇಳಿದ್ದಾನೆ. ದೇವರ ದಾಸಿಮಯ್ಯನು ವೇದಾಗಮೋಪನಿಷತ್ತುಗಳನ್ನೂ ಪುರಾಣಗಳನ್ನೂ ಚನ್ನಾಗಿ ಬಲ್ಲವನಾಗಿದ್ದನೆಂಬುದು ಇವುಗಳಲ್ಲಿ ಹೊರಪಡುತ್ತಿದೆ. ಅವನು ಸಂಸ್ಕೃತವನ್ನು ಚನ್ನಾಗಿ ಬಲ್ಲವನಾಗಿದ್ದನೆಂಬುದು ಅವನ ೨೭ ನೇ ವಚನದಿಂದ ತಿಳಿಯುಬರುತ್ತಿದೆ. ಅವನಲ್ಲಿ ಜಾತಿ, ಕುಲ ಭೇದಭಾವಗಳೆಂಬುವು ಏನೂ ಇರಲಿಲ್ಲ. ಎಲ್ಲ ಶಿವಶರಣರಂತೆ ಅವನು ಬಹು ವಿಶಾಲ ಹೃದಯಿಯು. ಕೆಳಗೆ ಬಿದ್ದ ಕಾಡು ಜನರನ್ನು ಸನ್ಮಾರ್ಗಕ್ಕೆ ಹಚ್ಚಿದ್ದಾನೆ. ಸಂಸ್ಕಾರರಹಿತರಾದವರನ್ನು ಸುಸಂಸ್ಕೃತರನ್ನಾಗಿ ಮಾಡಿದ್ದಾನೆ. ಈ ರೀತಿ ಅವನು ಮುದನೂರಿನಲ್ಲಿ ವರ್ತಿಸುತ್ತ ಬಂದಿದ್ದರಿಂದ ವೀರಶೈವ ಧರ್ಮವು ಅವನಿದ್ದ ಈ ಪ್ರಾಂತದಲ್ಲೆಲ್ಲ ಅಂದರೆ ಈಗಿನ ಕಲಬುರ್ಗಿ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಬಹಳ ಪ್ರಸಾರ ಹೊಂದಿತೆಂದು ಊಹಿಸಲು ಯಾವ ಅಭ್ಯಂತರವೂ ಇರಲಾರದು.

ದೇವರ ದಾಸಿಮಯ್ಯನು ಹೀಗೆ ಧರ್ಮೋದ್ಧಾರ ಕಾರ್ಯಗಳಲ್ಲಿ ತೊಡಗಿದವನಾಗಿದ್ದರೂ ಅವನು ತನ್ನ ನಿತ್ಯದ ನೆಯ್ಗೆಯ ಕಾಯಕವನ್ನು ಬಿಟ್ಟಿರಲಿಲ್ಲ. ಇದು ಪುರಾತನ ಶಿವಶರಣರ ಪದ್ಧತಿಯು. ಅವನು ತನ್ನ ಕಾಯಕದಲ್ಲಿ ಬಹು ನಿಷ್ಣಾತನಾಗಿದ್ದನು. ಅಮೌಲ್ಯವಾದ ವಸ್ತ್ರಗಳನ್ನು ಅವನು ಸಿದ್ಧಪಡಿಸುವನು. ಅವನು ನೇಯುತ್ತಿದ್ದ ಸ್ಥಾನಗಳನ್ನು ಈಗಲೂ ಮುದನೂರು ಗ್ರಾಮದ ಜನರು ಬಹಳ ಹೆಮ್ಮೆಯಿಂದ ಅಲ್ಲಿ ತೋರಿಸುತ್ತಾರೆ. ಅವನು ತನ್ನ ಕಾಯಕವನ್ನು ಶಿವಶರಣರ ರೀತಿಯಂತೆ ಶಿವಾರ್ಪಿತ ಭಾವದಿಂದ ಮಾಡುತ್ತ ಅದರಿಂದ ಬಂದುದನ್ನು ಗುರು ಲಿಂಗ ಜಂಗಮದ ದಾಸೋಹ ಕಾರ್ಯಗಳನ್ನು ಜರಿಗಿಸುತ್ತ ಮುದನೂರು ಗಾಮದಲ್ಲಿ ಅನೇಕ ವರ್ಷಗಳನ್ನು ಕಳೆದನು.

ಹೀಗಿರಲು ಅವನು ಪರಮಾತ್ಮನ ಸೇವೆ ಎಂದು ಒಂದು ಅಗಾಧವಾದ ಪಾಗನ್ನು (ಶುಮಾಲು) ನೇಯಲಿಕ್ಕೆ ಪ್ರಾರಂಭಿಸಿದನು. ಅವನು ಅದರಲ್ಲಿ ಧವಲ ವರ್ಣವನ್ನಿಟ್ಟು, ಈ ವರ್ಣದಲ್ಲಿ ಅನೇಕ ಚಿತ್ರ ವಿಚಿತ್ರ ತರವಾದ ಬಣ್ಣಗಳನ್ನು ಹಾಕಿ ಅದನ್ನು ನೇಯಲಿಕ್ಕೆ ತೊಡಗಿದನು. ಅವನು ಅದನ್ನು ಅತ್ಯಂತ ಪರಿಶ್ರಮಪೂರ್ವಕವಾಗಿ ದಿನಾಲು ಸ್ವಲ್ಪ ಸ್ವಲ್ಪ ನೇಯುತ್ತ ಹೋಗಲು, ಅದು ೩೬೦ ಮೊಳ ಉದ್ದವಾದರೂ ಅದು ಗಾತ್ರದಲ್ಲಿ ಅತ್ಯಂತ ಸೂಕ್ಷ್ಮತರವಾದದ್ದಾಯಿತು. ಇದಕ್ಕೆ ಅನೇಕ ವರ್ಷಗಳು ಅವನಿಗೆ ಹಿಡಿದವು. ಅವನು ಶಿವಾರ್ಪಿತ ಬುದ್ಧಿಯುಳ್ಳವನಾಗಿ ಈ ಕಾರ್ಯವನ್ನು ಮಾಡುತ್ತ ಬಂದುದರಿಂದ ಈ ಪಾಗು ಅತ್ಯಂತ ಆಶ್ಚರ್ಯಕರವಾದ ಮತ್ತು ಸುಂದರವಾದ ವಸ್ತ್ರವಾಯಿತು. ದೇವರದಾಸಿಮಯ್ಯನು ಅದನ್ನು ಮಾರಬೇಕೆಂದು ಬೆಳವಲು ದೇಶದಲ್ಲಿ ಆಗ ಒಂದು ಮುಖ್ಯ ಪಟ್ಟಣವಾಗಿದ್ದ ಸಿಪ್ಪಾಪುರ ಎಂಬ ಗ್ರಾಮದ ಸಂತೆಗೆ ಹೋದನು. ಸಂತೆಯಲ್ಲಿ ಅದನ್ನು ಮಾರಲು ಕುಳಿತಿರಲು ಅಲ್ಲಿಯ ಜನರು ಅದರ ಸೌಂದರ್ಯವನ್ನು ನೋಡಿ ಬೆರಗಾದರು. ಅದನ್ನು ನೋಡಬೇಕೆಂದರೆ ಅವರ ಕಣ್ಣುಗಳು ಕುಕ್ಕಿದವು. ಅಲ್ಲಿಯ ಹರದಿಗರು ಅದನ್ನು ಮುಟ್ಟಿ ನೋಡಲು ಸಹ ಹಿಂಜರಿದರು. ರಾಜಕುಮಾರರು ಅದನ್ನು ನೋಡಿ ನೋಡಿ ಬೆಲೆಗಟ್ಟದೆ ಹೋದರು.

ಹೀಗಿರುವಲ್ಲಿ ನೆರೆದವರಲ್ಲಿ ದುರಾಚಾರಿಯೂ ಭವಿಯೂ ಆದವನೊಬ್ಬನು ಅಲ್ಲಿಗೆ ಬಂದು ಆ ವಸ್ತ್ರವನ್ನು ಮುಟ್ಟಲು, ಆಕ್ಷಣವೇ ಅದರೊ

ಳಗಿಂದ ಒಂದು ಚಕ್ರವು ಹೊರಬಿದ್ದು ಅವನ ಕಯ್ಯನ್ನು ಗಾಯಗೊಳಿಸಿತು. ಅದನ್ನು ನೋಡಿ ಜನರು, ಈ ವಸ್ತ್ರವನ್ನು ನೆಯ್ದವನು ಒಬ್ಬ ಶಿವಶರಣನು, ಶಿವಾರ್ಪಣ ಬುದ್ಧಿಯಿಂದ ಇದನ್ನು ನೆಯ್ದಿದ್ದಾನೆ, ಇದು ಪವಿತ್ರವಾದ ವಸ್ತ್ರವು, ಇಂಥದನ್ನು ನಾವು ಅಲ್ಪ ಮನಸ್ಸಿನವರು ಮುಟ್ಟಬಾರದೆಂದು ಭಾವಿಸಿ ಅಲ್ಲಿಯ ಜನರು ಭಯಗ್ರಸ್ತರಾದರು. ಆ ವಸ್ತ್ರವನ್ನು ಯಾರೂ ತೆಗೆದುಕೊಳ್ಳಲಿಲ್ಲ. ಆದ್ದರಿಂದ ದೇವರದಾಸಿಮಯ್ಯನು ಅದನ್ನು ಅಲ್ಲಿ ಮಾರುವದನ್ನು ಬಿಟ್ಟುಕೊಟ್ಟು ತನ್ನ ಗ್ರಾಮಕ್ಕೆ ಹಿಂದಿರುಗಿದನು.

ದೇವರದಾಸಿಮಯ್ಯನು ಹಿಂದಿರುಗಿ ಬರುತ್ತಿರಲಾಗಿ ಪರಮಾತ್ಮನು ಶಿವಾರ್ಪಣಬುದ್ಧಿಯಿಂದ ಮಾಡಿದ ಅವನ ಕಾಯಕದ ಮಹಿಮೆಯನ್ನು ಜನರಿಗೆಲ್ಲರಿಗೂ ತೋರಬೇಕೆಂದು ಅಪೇಕ್ಷೆಬಟ್ಟು ಒಬ್ಬ ವೃದ್ಧ ಜಂಗಮನ ವೇಷವನ್ನು ಧಾರಣಮಾಡಿ ದಾಸಿಮಯ್ಯನ ಇದಿರಿಗೆ ಬಂದು ಅವನಿಗೆ ಆಶೀರ್ವಾದವನ್ನು ಮಾಡುತ್ತ, ದಾಸಿಮಯ್ಯನೇ ನೀನು ನೆಯ್ದ ಈ ವಸ್ತ್ರವನ್ನು ನನಗೆ ಕೊಡ , ನಾನು ಚಳಿಯಿಂದ ನಡಗುತ್ತಿದ್ದೇನೆ, ನನಗೆ ಹೊದಿಯಲಿಕ್ಕೆ ಏನೂ ಇಲ್ಲ, ಎಂದು ಎನ್ನಲು ದಾಸಿಮಯ್ಯನು-ನಾನು ಶಿವಭಕ್ತರ ಮನೆಯ ದಾಸನು, ಎಂದು ನುಡಿಯುತ್ತ ಆ ದಿವ್ಯಾಂಬರವನ್ನು ಅವನ ಕಯ್ಯಲ್ಲಿಟ್ಟನು. ಆಗ ಆ ಜಂಗಮನು ಅದರ ಚಿತ್ರತರವಾದ ಬಣ್ಣಗಳನ್ನು ನೋಡಿ ಗಹಗಹಿಸಿ ನಕ್ಕು, ಅದನ್ನು ದಾಸಿಮಯ್ಯನ ಇದಿರಿಗೆ ಪರಪರನೆ ಹರಿದು ಹಾಕಿ ಬಿಟ್ಟನು! ಹೀಗೆ ಹರಿದು ಅದರ ಒಂದು ತುಣುಕನ್ನು ತನ್ನ ಶಿರಕ್ಕೆ ಸುತ್ತಿದನು. ಮತ್ತೊಂದನ್ನು ಹೊದೆಯಲು ತನ್ನ ವಸನವನ್ನಾಗಿ ಮಾಡಿಕೊಂಡನು. ಇನ್ನೊಂದನ್ನು ತನ್ನ ಪಾದದಲ್ಲಿದ್ದ ಹುಣ್ಣಿಗೆ ಕಟ್ಟಿದನು. ಉಳಿದದ್ದನ್ನು ಸಣ್ಣಸಣ್ಣ ಚೂರು ಮಾಡಿ ತನ್ನ ದಂಡಕೋಲಿಗೆ ಸುತ್ತಿದನು. ಮಿಕ್ಕಾದುದನ್ನು ತನ್ನ ಹಸ್ತಪಾವುಡ ಮಾಡಿಕೊಂಡನು. ದೇವರದಾಸಿಮಯ್ಯನು ಜಂಗಮನು ಅದನ್ನು ಹರಿದು ಹೀಗೆ ಮಾಡಿದ್ದನ್ನು ನೋಡಿ, ಎಷ್ಟುಮಾತ್ರವೂ ಕೋಪವನ್ನು ತಾಳಲಿಲ್ಲ. ಅವನು ಈ ಪದಾರ್ಥವು ನಿಮ್ಮದು, ನಿಮ್ಮಿಚ್ಛೆಗೆ ಬಂದಂತೆ ಅದನ್ನು ಮಾಡಬಹುದು, ಎಂದು ನುಡಿಯುತ್ತ ಅವನನ್ನು ವಂದಿಸಿ, ಅವನನ್ನು ತನ್ನಮನೆಗೆ ಕರೆದುಕೊಂಡು ಬಂದನು! ಅಲ್ಲಿ ಅವನು ತನ್ನ ಹೆಂಡತಿಗೆ ಆದ ಸಂಗತಿಗಳನ್ನು ಹೇಳಲಾಗಿ, ಆ ಸಾಧ್ವಿಯು ಎಷ್ಟು ಮಾತ್ರವೂ ಕೋಪ

ವನ್ನು ಕಾಳದೆ, ಆ ಜಂಗಮನಿಗೆ ಸಕಲ ಪದಾರ್ಥಗಳನ್ನು ನೀಡಿ ಅವನನ್ನು ತೃಪ್ತಿಬಡಿಸಿದಳು !!

ಶಿವನು ದಾಸದುಗ್ಗಳೆಯರು ನಡಿಸುತ್ತಿದ್ದ ಪ್ರಪಂಚದ ಈ ರೀತಿ ಮತ್ತು ಅವರ ನಡೆ ಇವುಗಳನ್ನು ನೋಡಿ ಅತ್ಯಂತ ಪ್ರೀತನಾಗಿ ಇಂಥವರಿಗೆ ಬಡತನವೆಂಬುದಿರಬಾರದು ಎಂದೆನ್ನುತ್ತ, ಅವನು ದುಗ್ಗಳೆಗೆ-ನೀನು ಮಹಾಪತಿವ್ರತೆಯು, ಪತಿಯ ಅಪ್ಪಣೆಯನ್ನು ಯಾವಾಗಲೂ ಪಾಲಿಸುತ್ತ ಬಂದಿರುವಿ, ಇಕೋ ನಾನು ಕೊಡುವ ಈ ಹಿಡಿ ಧಾನ್ಯವನ್ನು. ಇದನ್ನು ನೀನು ನಿನ್ನ ಮನೆಯೊಳಗಿನ ಧಾನ್ಯ ಸಂಗ್ರಹದಲ್ಲಿ ಶಿವಮಂತ್ರವನ್ನು ಉಚ್ಚರಿಸುತ್ತ ಕೂಡಿಸಿಬಿಡು. ಆಗ ನಿನ್ನ ಆ ಧಾನ್ಯವು ಅಕ್ಷಯವಾಗುವದು. ನಾನು ಕೊಟ್ಟದ್ದು ಇದು ತವನಿಧಿಯು. ಹೀಗೆ ಹೇಳಿ ದೇವರದಾಸಿಮಯ್ಯನಿಗೆ–ನಿನ್ನಂತೆ ಯಾರು ಕಾಯಕ ಮಾಡುತ್ತ ಅಷ್ಟಾವರಣ ನಿರತರಾಗಿರುವರೋ, ಅವರಲ್ಲಿ ಯಾರು ಸತ್ಯ ಸದಾಚಾರವುಳ್ಳವರಾಗಿ ಸಮಸ್ತ ಪ್ರಾಣಿಗಳಲ್ಲಿ ಸಮದೃಷ್ಟಿಯುಳ್ಳವರಾಗಿರುವರೋ, ಯಾರು ಇಷ್ಟಲಿಂಗ ಪೂಜೆಯಲ್ಲಿ ಆಸಕ್ತರೋ, ಯಾರು ಪಂಚಾಕ್ಷರೀ ಮಂತ್ರವನ್ನು ಅಹೋರಾತ್ರಿ ಸ್ಮರಿಸುವರೋ, ಅವರಲ್ಲಿ ಈ ತವನಿಧಿಯು ಸ್ಥಿರವಾಗಿ ಉಳಿಯುವದು. ಆದರೆ ಯಾವಾಗ್ಗೆ ಅವರಲ್ಲಿ ಅಹಂಕಾರವು ತೋರುವದೋ, ಆ ಕ್ಷಣವೇ ಅದು ಮಾಯವಾಗುತ್ತದೆ. ಅವರಲ್ಲಿ ಧಾನ್ಯದ ಕೊರತೆಯುಂಟಾಗಿ ಅವರು ಕಷ್ಟಕ್ಕೆ ಈಡಾಗುವರು, ಎಂದು ಹೇಳಿ ಶಂಕರನು ಅಲ್ಲಿಯೇ ಮಾಯವಾದನು.

ಶಿವಾರ್ಪಣ ಬುದ್ಧಿಯಿಂದ ಕಾಯಕ ಮಾಡುವವರಲ್ಲಿ ಬಡತನವೆಂದಿಗೂ ಇರಲಾರದು. ಕಾಯಕದ ತತ್ವಗಳಂತೆ ಆಚರಿಸುವವರಲ್ಲಿ ತವನಿಧಿಯು ಯಾವಾಗಲೂ ಇರುತ್ತದೆ. ಈ ಸಂಗತಿಯನ್ನು ಪರಮಾತ್ಮನು ಈ ಪವಾಡದ ಮೂಲಕ ಜಗತ್ತಿಗೆ ತೋರಿಕೊಟ್ಟಿದ್ದಾನೆ.

ದೇವರ ದಾಸಿಮಯ್ಯನ ಈ ಪವಾಡದಲ್ಲಿ ಶಿವಾನುಭವದ ಅನೇಕ ಮಹತ್ವದ ತತ್ವಗಳು ಅಡಕವಾಗಿರುತ್ತವೆ. ಆದ್ದರಿಂದ ಈ ಪವಾಡವು ಶಿವಶರಣರ ಚರಿತ್ರೆಗಳಲ್ಲಿ ಬಹು ಪ್ರಸಿದ್ಧವಾಗಿರುತ್ತದೆ. ಬಸವೇಶ್ವರನು ಇದನ್ನು ತನ್ನ ವಚನಗಳಲ್ಲಿ ಆಗಿಂದಾಗ್ಗೆ ಉಲ್ಲೇಖಿಸುತ್ತಾನೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಇಲ್ಲಿ ಕೊಡುತ್ತೇವೆ.

(೧) ದಾಸ ದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ. ಸಿರಿಯಾಳ ತನ್ನ ಮಗನನಿತ್ತು ಪ್ರಾಣ ಪ್ರಸಾದವ ಪಡೆದ. ಬಲ್ಲಾಳ ತನ್ನ ವಧುವನಿತ್ತು ಸಮತೆ ಪ್ರಸಾದವ ಪಡೆದ. ಇವರೆಲ್ಲರು ತಮತಮಗೆ ಮಾಡಿ ಹಡೆದರು ಸಮ್ಯಕ್ ಪದವಿಯ. ನಾನೇನು ಅರಿಯದ ಭಕ್ತಿಯ ಬಡವಂಗೆ ಕರುಣಿಸು ಕೂಡಲ ಸಂಗಮದೇವಾ.

(ನಂ॥ ೩೩೯)

(೨) ಎಲ್ಲಿ ಹೊಕ್ಕಲ್ಲಿ ನಿಮ್ಮ ವಿಕಾರವ ಮಾಣೆ. ಇದೊಂದು ಗರುವತನವೇ? ದಾಸನ ವಸ್ತ್ರವ ಬೇಡುವುದೊಂದು ಗರುವತನವೇ? ಸಿರಿಯಾಳನ ಮಗನ ಬೇಡುವುದೊಂದು ಗರುವತನವೇ? ಕೋಡಗನ ಹುಲ್ಲಲ್ಲಿ ಮುಸುಕಿಟ್ಟಂತೆ ಕೂಡಲ ಸಂಗಮದೇವ ನಿಮ್ಮ ಪರಿ ಬೇರೆ.

(ನಂ॥ ೬೨೭)

(೩) ದಾಸನ ವಸ್ತ್ರವ ಬೇಡದ ಮುನ್ನ ತವನಿಧಿಯನಿತ್ತಡೆ ನಿಮ್ಮ ದೇವರೆಂಬೆ. ಸಿರಿಯಾಳನ ಮಗನ ಬೇಡದ ಮುನ್ನ ಕಾಂಚಿಯ ಪುರವ ಕೈಲಾಸಕೊಯ್ದರೆ, ನಿಮ್ಮ ದೇವರೆಂಬೆ. ಬಲ್ಲಾಳನ ವಧುವ ಬೇಡದ ಮುನ್ನ ಸ್ವಯಲಿಂಗವ ಮಾಡಿದರೆ, ನಿಮ್ಮ ದೇವರೆಂಬೆ. ದೇಹಿ ನೀನು, ವ್ಯಾಪಾರಿಗಳು ನಮ್ಮವರು. ಬೇಡು ಕೂಡಲಸಂಗಮದೇವಾ ಎಮ್ಮವರ ಕೆಯ್ಯಲು. (ನಂ॥ ೩೬೨)

(೪) ದೇವನಿಂತವನೆಂದು ತೋರಿಕೊಡುವೆನು ಗಣಂಗಳಿಗೆ. ಬಲ್ಲಾಳನ ವಧುವ ಬೇಡಿದಾತ ನೀ ದೇವಾ! ದೇವನಿಂತವನೆಂದು ತೋರಿಯೆ ಕೊಡುವೆನು ಗಣಂಗಳಿಗೆ. ದಾಸನ ವಸ್ತ್ರವ ಬೇಡಿದಾತ ನೀ ದೇವಾ! ದೇವನಿಂತವನೆಂದು ತೋರಿಕೊಡುವೆನು ಗಣಂಗಳಿಗೆ. ಸಿರಿಯಾಳನ ಮಗನ ಬೇಡಿದಾತ ನೀ ದೇವಾ. ಕೂಡಲಸಂಗಮದೇವ ಜಂಗಮ ಮುಖ ಲಿಂಗವಾಗಿ ಕಾಡಿನೋಡುವ, ಬೇಡಿನೋಡುವ. (ನಂ॥ ೪೪೬)

ಈ ಪವಾಡದ ಉಲ್ಲೇಖಗಳು ೬೮೫, ೪೫೦, ೪೫೯, ೬೫೪ ಈ ವಚನಗಳಲ್ಲಿಯೂ ಕೂಡ ಇರುತ್ತವೆ. ವಿಸ್ತಾರ ಭಯಕ್ಕಾಗಿ ನಾವು ಅವುಗಳನ್ನು ಇಲ್ಲಿ ಉದಹರಿಸಿಲ್ಲ.

ದೇವರ ದಾಸಿಮಯ್ಯನು ತವನಿಧಿಯನ್ನು ಪಡೆದ ಬಳಿಕ ಅವನ ದಾಸೋಹದ ಕಾರ್ಯಗಳು ನಾಡಿನಲ್ಲಿ ಮತ್ತಷ್ಟು ಭರದಿಂದ ಸಾಗಿದವು.

ಅವನ ಪ್ರವಾಡಗಳೂ ಕೂಡ ಹೆಚ್ಚುತ್ತ ಹೋದವು. ಇದರಿಂದ ಅವನ ಶಿಷ್ಯ ಜನರ ಸಂಖ್ಯೆಯೂ ಬೆಳೆಯುತ್ತ ಹೋಯಿತು. ಹೀಗಿರಲು ಒಂದು ದಿವಸ ಭಕ್ತರಲ್ಲೊಬ್ಬರ ಮನೆಯಲ್ಲಿ ಮದುವೆಯ ಕಾರ್ಯವು ಉಂಟಾಗಲು ಅವನು ಮದುವೆಗೆ ಬರಬೇಕೆಂದು ದೇವರ ದಾಸಿಮಯ್ಯನಿಗೆ ಬಿನ್ನಹ ಮಾಡಲು ದಾಸಿಮಯ್ಯನು ಭಕ್ತ ತಿಂಥಣಿಯೊಡಗೂಡಿ ಹೋಗುವಾಗ, ಮಾರ್ಗದಲ್ಲಿ ಗೌತಮಿ ನದಿಯು ಕಟ್ಟಿ ಹರಿಯುತ್ತಿರಲು, ಅವನು ಅದಕ್ಕೆ ಅಪ್ಪಣೆ ಮಾಡಲು, ಅದು ಇಬ್ಭಾಗವಾಗಿ ಅವನಿಗೆ ದಾರಿಯನ್ನು ಕೊಟ್ಟಿತು. ಹೀಗೆ ಹಾದಿಯನ್ನು ಬಿಡಿಸಿ ಮದುವೆಗೆ ಹೋಗಿ ಶಿವಗಣ ದರುಶನದಿಂದ ಅಲ್ಲಿ ಮದುವೆಯ ಕಲ್ಯಾಣವನ್ನು ಮುಗಿಸಿ, ಅಲ್ಲಿ ಕೆಲ ಕಾಲ ಶಿವಾನುಭವ ಸದ್ಗೋಷ್ಠಿಯಲ್ಲಿದ್ದು, ತಿರುಗಿ ಮುದನೂರಿಗೆ ಬಂದನು.

ಈ ಕಾಲದಲ್ಲಿ ಮುದನೂರು ಚಾಲುಕ್ಯ ರಾಜನಾದ ಜಯಸಿಂಹ ರಾಜ - ಜಗದೇಕಮಲ್ಲನ ರಾಜ್ಯದಲ್ಲಿ ಸೇರ್ಪಡೆಯಾಗಿತ್ತು. ಈ ರಾಜನು ಚಾಲುಕ್ಯ ರಾಜರಲ್ಲಿ ಬಹು ಪ್ರಬಲನು, ಅತ್ಯಂತ ಬಲಶಾಲಿಯು. ಅವನು ಚೋಳ ಮೊದಲಾದ ವೈರಿಗಳ ರಾಜ್ಯಗಳನ್ನು ಗೆದ್ದವನಾಗಿದ್ದನು. ಅವನು ಆರಂಭದಲ್ಲಿ 'ಬಲಿಪುರ' ಎಂದರೆ ಈಗಿನ ಬಳ್ಳಿಗಾವಿಯನ್ನೂ ಆ ಮೇಲೆ 'ಏತಗಿರಿ' ಎಂದರೆ ಈಗಿನ ಯಾತಗಿರಿಯನ್ನೂ ಕಡೆಗೆ ಪೊಟ್ಟಲಕೆರೆಯನ್ನೂ ತನ್ನ ರಾಜಧಾನಿಯ ಸ್ಥಳಗಳನ್ನಾಗಿ ಮಾಡಿಕೊಂಡು ಆಳುತ್ತ ಬಂದನು. ಅವನು ಕ್ರಿ.ಶ. ೧೦೦೮ ರಿಂದ ೧೦೪೦ ರ ವರೆಗೆ ಅತ್ಯಂತ ವೈಭವದಿಂದ ರಾಜ್ಯವಾಳಿದನು. ಪೊಟ್ಟಲ ಕೆರೆಯು ಅವನ ಕಾಲದಲ್ಲಿ ಬಹು ವಿಸ್ತಾರವಾದ ಪಟ್ಟಣವಾಗಿ ಬೆಳೆದಿತ್ತು. ಇದರಲ್ಲಿ ೭೦೦ ಜೈನ ಬಸದಿಗಳೂ ೨೦ ಸಾವಿರ ಜೈನರೂ ಇದ್ದದ್ದಲ್ಲದೆ ಅಸಂಖ್ಯ ವೈದಿಕರೂ, ಶಾಕ್ತರೂ, ವೈಷ್ಣವರೂ, ಇನ್ನೂ ಅನೇಕ ಧರ್ಮೀಯರೂ ವಾಸವಾಗಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಈ ಪುರ ನಿವಾಸಿಗಳಲ್ಲಿ ಜೈನರೇ ಬಹು ಸಂಖ್ಯಾಕರೂ ಬಲಾಢ್ಯರೂ ಆಗಿದ್ದರು. ಅರಸನಾದ ಜಯಸಿಂಹನೂ ಕೂಡ ಅವರ ಜೈನ ಮತವನ್ನೇ ಅವಲಂಬಿಸಿದ್ದನು. ಅವನ ಹೆಂಡತಿಯ ಹೆಸರು ಸುಗ್ಗಲೆಯು. ಇವಳ ತವರು ಮನೆಯವರು ಶಿವಾಚಾರ್ಯರಾಗಿ ಶಿವಭಕ್ತಿಯುಳ್ಳವರು.

ಆದರೂ ಅವರು ಪ್ರಬಲ ಚಕ್ರವರ್ತಿಯಾದ ಜಯಸಿಂಹ ರಾಜನಿಗೆ ಸುಗ್ಗಳೆಯನ್ನು ಕೊಟ್ಟು ಲಗ್ನ ಮಾಡಿದ್ದರು. ಆದರೆ ಅವಳು ಶಿವಭಕ್ತರ ಮನೆಯಲ್ಲಿ ಹುಟ್ಟಿ ಬೆಳೆದವಳಾದ್ದರಿಂದ ಅವಳು ಜೈನನಾದ ತನ್ನ ಪತಿಯ ಮತದಲ್ಲಿ ವಿಶ್ವಾಸವುಳ್ಳವಳಾಗಿರದಿದ್ದರೂ ಹಿಂದಿನ ಕಾಲದ ಅನೇಕ ಶಿವಶರಣೆಯರು ವರ್ತಿಸಿದಂತೆ ಶಿವನಲ್ಲಿ ಗುಪ್ತಭಕ್ತಿಯುಳ್ಳವಳಾಗಿ ಆಚರಿಸುತ್ತ ಬಂದಳು.

ಹೀಗೆ ಕೆಲಕಾಲ ಕಳೆದ ಬಳಿಕ ಅವಳಲ್ಲಿ ಲಿಂಗ ದೀಕ್ಷೆಯನ್ನು ಹೊಂದಬೇಕೆಂಬ ಉತ್ಕಟೇಚ್ಛೆಯು ಉಂಟಾಯಿತು. ಆಗ ಒಂದು ದಿವಸ ಅವಳ ಕನಸಿನಲ್ಲಿ ರಾಮೇಶ್ವರನು ಬಂದು ಅವಳಿಗೆ - ನಿನ್ನ ಅಭೀಷ್ಟವನ್ನು ನೆರವೇರಿಸಲು ಮುದನೂರಿನಲ್ಲಿದ್ದ ದೇವರ ದಾಸಿಮಯ್ಯನೇ ಸಮರ್ಥನು, ಅವನು ಕೇವಲ ಶಿವಾನುಭವಿಯು, ಅವನಿಂದ ನೀನು ಲಿಂಗ ದೀಕ್ಷೆಯನ್ನು ಹೊಂದು ಎಂದು ಸ್ವಪ್ನವಾಯಿತು. ಆಗ ಅವಳು ಅವನನ್ನು ಬರಮಾಡಿಕೊಳ್ಳಲು ಒಬ್ಬ ಚಾರನನ್ನು ಮುದುನೂರಿಗೆ ಕಳಿಸಿದಳು.

ಹೀಗಾದ ರಾತ್ರಿಯಲ್ಲಿಯೇ ದೇವರ ದಾಸಿಮಯ್ಯನು ನಿದ್ರೆ ಹೋದಾಗ್ಗೆ ರಾಮನಾಥನು ಅವನ ಸ್ವಪ್ನದಲ್ಲಿ — ನೀನು ಪೊಟ್ಟಲಕೆರೆಗೆ ಹೋಗು, ಅಲ್ಲಿ ರಾಣಿಯಾದ ಸುಗ್ಗಳಾದೇವಿಯು ಲಿಂಗಧಾರಣೆಯನ್ನು ಹೊಂದಲು ಬಯಸುತ್ತಿದ್ದಾಳೆ, ನೀನು ಅವಳಿಗೆ ಲಿಂಗೋಪದೇಶವನ್ನು ಮಾಡು, ಎಂದು ಹೇಳಿದನು. ಆ ಮೇಲೆ ದೇವರ ದಾಸಿಮಯ್ಯನು ತನ್ನನ್ನು ಕರೆಯಲಿಕ್ಕೆ ಬಂದ ಚಾರನೊಂದಿಗೆ ಪೊಟ್ಟಲಕೆರೆಗೆ ಹೋಗಿ, ಅಲ್ಲಿ ಮೊದಲಿಗೆ ತಾನು ಶ್ರೀಶೈಲದಿಂದ ತಿರುಗಿ ಬರುವಾಗ್ಗೆ ಭಕ್ತರು ಕಟ್ಟಿಸಿಕೊಟ್ಟಿದ್ದ ಮಠದಲ್ಲಿ ಬಂದು ಇರಹತ್ತಿದನು.

ದೇವರ ದಾಸಿಮಯ್ಯನು ರಾಜಧಾನಿಗೆ ಬಂದ ಬಳಿಕ ಸುಗ್ಗಳೆಯು ಅವನನ್ನು ತನ್ನಲ್ಲಿ ಬರಮಾಡಿಕೊಂಡು ತನಗೆ ಲಿಂಗ ದೀಕ್ಷೆಯನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡಳು. ಆಗ ಅವನು ಅವಳಿಗೆ ಅಷ್ಟಾವರಣಗಳ ವಿವರಗಳನ್ನು ಸವಿಸ್ತಾರವಾಗಿ ಬೋಧಿಸಿ ವೀರಶೈವ ದೀಕ್ಷೆಯನ್ನು ಕೊಟ್ಟನು.

ದೇವರ ದಾಸಿಮಯ್ಯನು ಈ ಪ್ರಕಾರ ರಾಣಿಗೆ ಲಿಂಗದೀಕ್ಷೆಯನ್ನು ಮಾಡಿದ್ದು ಪರವಾದಿಗಳಿಗೆ ತಿಳಿಯಲು ಅವರು ಬಹಳ ಖತಿಗೊಂಡರು. ಅವರು ದಾಸಿಮಯ್ಯನೊಡನೆ ವಾದಿಸಲು ಮುಂದೆ ಬರಹತ್ತಲು ಅವನು ಅವರಿಗೆ—ಶಿವನೇ ದೈವವು, ಶಿವಮಂತ್ರವೇ ಮಂತ್ರವು, ಶಿವನು ಜಗನ್ಮಯನು, ಲಿಂಗಾಚಾರವೇ ಆಚಾರವು ಎಂಬುದನ್ನು ನಿರೂಪಿಸುತ್ತ ತ್ರಿಲಿಂಗಗಳಾದ ಇಷ್ಟ, ಪ್ರಾಣ, ಭಾವ ಲಿಂಗಗಳ ತತ್ವಗಳನ್ನು ಸಮರ್ಥಿಸುವನು. ಪಟ್ಟಣದಲ್ಲಿದ್ದ ಶಾಕ್ತ, ವೈಷ್ಣವ, ಜೈನ ಮೊದಲಾದ ಅನೇಕ ಮತಸ್ಥರ ಮತಗಳನ್ನು ಅವನು ಖಂಡಿಸುತ್ತ ಅವರನ್ನು ನಿರುತ್ತರಮಾಡುವನು.

ಒಂದು ದಿವಸ ಜೈನರು ಅವನಲ್ಲಿಗೆ ಬಂದು— ದಾಸಯ್ಯಗಳೇ, ನೀವು ರಾಮನಾಥನು ಸರ್ವವ್ಯಾಪಿಯು ಎಂದೆನ್ನುತ್ತೀರಿ. ಹಾಗಿದ್ದರೆ, ನೀವು ಅಶುದ್ಧವಾದ ಮಲಮೂತ್ರಗಳನ್ನು ಎಲ್ಲಿ ಬಿಡುವಿರಿ? ಅವುಗಳಿಗೆ ಸ್ಥಾನವಾವುದು? ಎಂದು ಹಾಸ್ಯಮಾಡಿ ನುಡಿಯಲು, ದಾಸಿಮಯ್ಯನು ಒಬ್ಬ ಜೈನನನ್ನು ಮುಂದೆ ಕರೆದು ಅವನಿಗೆ— ನಿನ್ನ ಜಿಹ್ವೆಯಲ್ಲಿ ಶಿವನುಂಟೇ ಎಂದು ಕೇಳಲು, ಅವನು — ಇಲ್ಲ ಎಂದೆನ್ನಲು, ಹಾಗಾದರೆ ಅಲ್ಲಿಯೇ ನಾನು ನನ್ನ ಮಲಮೂತ್ರಗಳನ್ನು ಬಿಡುವೆನೆಂದು ಹೇಳಿದನು.

ಮತ್ತೊಂದು ದಿನ ಜೈನರು ಒಂದು ಕೃತಕವನ್ನು ನೆನೆದು, ಒಂದು ಮರದ ಹೊಟ್ಟೆಯಲ್ಲಿ ಒಬ್ಬ ಬಾಲಕನನ್ನು ಇರಿಸಿ, ಅವನಿಗೆ ಹೇಳತಕ್ಕದ್ದನ್ನು ಹೇಳಿ, ದೇವರದಾಸಿಮಯ್ಯನಲ್ಲಿಗೆ ಬಂದು ಅವನಿಗೆ— ನೀನು ಶಿವನು ವಿಶ್ವವ್ಯಾಪಿ ಎಂದೆನ್ನುತ್ತೀ. ಇದು ಸುಳ್ಳು. ಜಿನನೇ ದೈವವು. ಜಿನನೇ ವಿಶ್ವವ್ಯಾಪಿಯು. ಇದೇ ಸತ್ಯವಾದುದು. ಇದನ್ನು ನಾವು ಸಿದ್ಧಪಡಿಸಬೇಕೆಂದು ನೀನು ಇಚ್ಛಿಸಿದಲ್ಲಿ, ಮರದಲ್ಲಿ ಜಿನನಿದ್ದಾನೆಂಬುದನ್ನು ತೋರಿಸಿಕೊಡುವೆವು ಎಂದು ಹೇಳಿದರು. ಆಮೇಲೆ ಅವರು ದೇವರ ದಾಸಿಮಯ್ಯನನ್ನು ಬಾಲಕನನ್ನು ಅಡಗಿಸಿಟ್ಟ ಮರದಲ್ಲಿಗೆ ಕರೆದುಕೊಂಡು ಬಂದು— ಜಿನೇಶ್ವರನೇ, ನೀನು ವಿಶ್ವವ್ಯಾಪಿಯಾದರೆ ನೀನು ಇಲ್ಲಿ ನುಡಿಯು ಎಂದು ಒತ್ತಿ ಹೇಳಲು, ಅದರಲ್ಲಿದ್ದ ಬಾಲಕನು ತನಗೆ ಕಲಿಸಿದಂತೆ 'ಓ' ಎಂದೆನ್ನದೆ ಅಲ್ಲಿ ಶಬ್ದವಾಗದೆ ಇರಲು

ಒಳಗೆ ಹೋಗಿ ನೋಡುತ್ತಾರೆಯೋ ಅಲ್ಲಿ ಅವನು ಗತಪ್ರಾಣನಾಗಿ ಬಿದ್ದಿದ್ದನು. ಆಗ ಅವನ ತಾಯಿಯು ಅಲ್ಲಿಗೆ ಬಂದು ಅವರಿಗೆ— ನಿಮ್ಮ ವಾದ ಹಾಳಾಗಿ ಹೋಗಲಿ. ನನ್ನ ಮಗನನ್ನ ಕೊಂದಿರಿ. ಅವನ ಪ್ರಾಣವನ್ನು ನನಗೆ ಕೊಡಿಸಿರಿ ಎಂದು ರೋದಿಸುತ್ತ ದೇವರ ದಾಸಿಮಯ್ಯನ ಪಾವಕ್ಕೆರಗಿದಳು. ಆಗ ಅವನು ಹಾಗೆಯೇ ಆಗಲೆಂದು ಎನ್ನಲು ಆ ಬಾಲಕನು ಚೇತರಿಸಿಕೊಂಡು ಎದ್ದು ನಿಂತನು.

ಜೈನರು ಇದನ್ನು ನೋಡಿ ಮತ್ತಿಷ್ಟು ಕೆರಳಿದವರಾಗಿ ದೇವರ ದಾಸಿಮಯ್ಯನನ್ನು ಕೊಂದುಹಾಕಬೇಕೆಂದು ಹೊಂಚುಹಾಕಹತ್ತಿದರು. ಅವರು ಮಂತ್ರ ತಂತ್ರಗಳನ್ನು ಮಾಡುವಲ್ಲಿ ಬಹಳ ನಿಪುಣರು, ಸಿದ್ಧಿಗಳನ್ನು ಮಾಡಬಲ್ಲರು. ಅವರು ಅವುಗಳ ಪ್ರಯೋಗವನ್ನು ದೇವರ ದಾಸಿಮಯ್ಯನ ಮೇಲೆ ಮಾಡಲು ಪ್ರಾರಂಭಿಸಿದರು. ಆದರೆ ಶಿವಶರಣನು ಮಂತ್ರ ಶರೀರಿಯು, ಶಿವನ ಮಹಾಮಂತ್ರವನ್ನು ತನ್ನಲ್ಲಿ ಅಳವಡಿಸಿಕೊಂಡವನು. ಇಂಥವನನ್ನು ಇಂಥ ಮಂತ್ರ ತಂತ್ರಗಳು ಏನೂ ಮಾಡಬಲ್ಲವು? ಆದ್ದರಿಂದ ಜೈನರು ದಾಸಿಮಯ್ಯನ ಪ್ರಾಣಕ್ಕೆ ಯಾವ ಅಪಾಯವನ್ನು ಮಾಡಲಿಕ್ಕೆ ಶಕ್ತರಾಗಲಿಲ್ಲ. ಇಷ್ಟೇ ಅಲ್ಲ, ಅವನಲ್ಲಿ ನೆಲೆಗೊಂಡಿದ್ದ ಲಿಂಗತತ್ವದ ಮೂಲಕ ಜೈನರ ತಂತ್ರಗಳು ಅವರ ಮೇಲೆಯೇ ಹಿಂದಿರುಗಿ ಬಂದ. ಅವರ ಶರೀರಗಳಲ್ಲಿ ಉರುಪು ಹುಟ್ಟಿಸಹತ್ತಿದವು. ಆಗ ಅವರು ತಮ್ಮ ಮಂತ್ರ ತಂತ್ರಗಳ ಪ್ರಯೋಗವನ್ನು ಅವನ ಮೇಲೆ ಮಾಡುವದನ್ನು ಬಿಟ್ಟು ಕೊಟ್ಟರು.

ಈ ಪ್ರಕಾರ ದೇವರ ದಾಸಿಮಯ್ಯನನ್ನು ಅವರು ಬಾಧಿಸಲಾರದೆ ಹೋಗಲು ಅವನನ್ನು ಘಾತಿಸಲಿಕ್ಕೆ ಉಪಾಯಗಳನ್ನು ಯೋಚಿಸಹತ್ತಿದರು. ಅವರು ಕಶ್ರ್ಲದ ಮೂಲಕ ಅತ್ಯಂತ ವಿಷಮಯವಾಗಿದ್ದ ಒಂದು ಜಲಾಶಯಕ್ಕೆ ಬಂದು ಅಲ್ಲಿಗೆ ದೇವರ ದಾಸಿಮಯ್ಯನನ್ನು ಬರಮಾಡಿಕೊಂಡು ಅವನಿಗೆ— ನೀನು ಇದರ ನೀರನ್ನು ಕುಡಿಯಬೇಕು. ಕುಡಿದು ಜೀವದಿಂದ ನೀನು ಉಳಿದರೆ ನಿನ್ನ ಮತವು ಸತ್ಯವಾದುದೆಂದು ಒಪ್ಪುತ್ತೇವೆ ಎಂದೆನ್ನಲು, ದೇವರದಾಸಿಮಯ್ಯನು ನಕ್ಕು— ಈ ಜಲವು ಶಿವನ ವಾಮದೇವ ಮುಖದಿಂದಾದುದು. ಅದರ ತತ್ವವು ನನ್ನಲ್ಲಿರುವದರಿಂದ ಅದು ನನ್ನನ್ನು ಏನೂ ಮಾಡಲಾರದು ಎಂದು ನುಡಿದು ಶಿವನನ್ನು ನೆನೆ

ಯುತ್ತ ಆ ನೀರನ್ನು ಮುಟ್ಟಲು ಅದು ಶುದ್ಧವಾಯಿತು ಮತ್ತು ಅದ ರಲ್ಲಿದ್ದ ವಿಷವೆಲ್ಲವೂ ಸುಟ್ಟು ಹೋಯಿತು. ಅಂಥ ನೀರನಿಂದ ಲಿಂಗಾ ರ್ಚನೆಯನ್ನು ಮಾಡಿ ಅದನ್ನು ಸೇವಿಸಲು ಅದು ಅವನಿಗೆ ಅವ ಬಾಧೆ ಯನ್ನೂ ಮಾಡಲಿಲ್ಲ. ಇಷ್ಟೇ ಅಲ್ಲ, ಸಮೀಪದಲ್ಲಿದ್ದ ಜನರೂ ಕೂಡ ಸೇವಿಸಲು ಅವರಿಗೂ ಏನೂ ಆಗಲಿಲ್ಲ. ಆಗ ದೇವರದಾಸಿಮಯ್ಯನು ಷಡ್ಲಿಂಗಗಳನ್ನು ಸಾಧಿಸಿದ ಮಹಾತ್ಮನಿಗೆ ಜಗತ್ತಿನಲ್ಲಿಯ ಇಂಥ ಯಾವ ವಸ್ತುವೂ ಬಾಧಿಸಲಾರದು ಎಂದು ಹೇಳಿದನು.

ಇಷ್ಟಾದರೂ ಜೈನರು ದೇವರ ದಾಸಿಮಯ್ಯನ ಸಾಮರ್ಥ್ಯವನ್ನು ತಿಳಿಯದೆ ಹೋದರು. ಅವರು ಅವನನ್ನು ಕೊಂದು ಹಾಕಬೇಕು, ಇಲ್ಲವೆ ಊರ ಬಿಡಿಸಿ ಅವನನ್ನು ಹೊರಗೆ ಹಾಕಬೇಕು, ಎಂದು ಬಗೆದರು.

ಆಗ ಅವರು ಈ ಕಾರ್ಯವನ್ನು ಅರಸನಾದ ಜಯಸಿಂ ಹನ ಕಡೆಯಿಂದಲೇ ಮಾಡಿಸಬೇಕೆಂದು ಯೋಚಿಸಿ, ಸರ್ವಜ್ಞ ಮುನಿ ಎಂಬವನು ಪಟ್ಟಣದಲ್ಲಿದ್ದ ಜೈನರಿಗೆಲ್ಲ ಗುರುವಾಗಿದ್ದು ಅವರು ಅವನನ್ನು ಮುಂದಿಟ್ಟುಕೊಂಡು ಅರಸನಲ್ಲಿಗೆ ಬಂದು ಅವನಿಗೆ — ದೇವರ ದಾಸಿಮಯ್ಯನೆಂಬೊಬ್ಬನು ನಿಮ್ಮ ರಾಜ್ಯದಲ್ಲಿ ಬಂದು ಬಹಳ ಅನಾ ಹುತಗಳನ್ನು ಮಾಡಹತ್ತಿದ್ದಾನೆ. ಅವನ ಮೂಲಕ ಅನೇಕ ಜಿನ ಮಂದಿರಗಳು ಲಿಂಗಾಲಯಗಳಾದವು. ಅವನು ಈಗ ನಿಮ್ಮ ರಾಣಿ ಯವರಿಗೆ ಲಿಂಗದೀಕ್ಷೆಯನ್ನು ಮಾಡಿದ್ದಾನೆ. ಇದರಿಂದ ರಾಣಿಯವರು ಅರಮನೆಯನ್ನು ಬಿಟ್ಟು ಬೇರೊಂದೆಡೆಯಲ್ಲಿ ವಾಸಮಾಡಹತ್ತಿದ್ದಾರೆ. ಸತಿಯು ಪತಿಯ ಆಜ್ಞೆಯಂತೆ ನಡೆಯಬೇಕಲ್ಲವೇ? ನಡೆಯದಿದ್ದರೆ ರೌರವ ನರಕವು. ಇದರಿಂದ ಸತಿಯ ಪಾಪವು ಪತಿಗೂ ಹತ್ತುತ್ತದೆ. ರಾಜ್ಯದಲ್ಲಿ ಇಂಥ ಅನಾಚಾರಗಳು ನಡೆಯಹತ್ತಿದರೆ, ಮಳೆಬೆಳೆಗಳು ಎಂತಾಗುವವು? ಪ್ರಜೆಗಳು ಹೇಗೆ ಸುಖಿಯಾಗಿ ಬಾಳಿಯಾರು? ಎಂದು ನುಡಿಯಲು, ಅರಸನು ಸುಗ್ಗಲೆ ಇದ್ದಲ್ಲಿಗೆ ಹೋಗಿ ಅವಳಿಗೆ— ಸತಿಗೆ ಪತಿಯೇ ದೈವವು ಹೀಗಿರಲು, ನೀನು ಈ ದಾಸಿಮಯ್ಯನನ್ನು ಹೇಗೆ ಗುರು ವನ್ನಾಗಿ ಮಾಡಿಕೊಂಡೆ? ನನ್ನ ಆಜ್ಞೆಯನ್ನು ಹೀಗೆ ಮುರಿದರೆ ನಿನಗೆ ಅಕ್ಷಯ ನರಕವು ಎಂದನು. ಅದನ್ನು ಕೇಳಿ ಸುಗ್ಗಲಾದೇವಿಯು ಕುಪಿತಳಾಗಿ— ಅರಸನೇ, ನನಗೆ ಮೃಡನೇ ದೈವವು. ವೇದಾಗಮ

ಪುರಾಣಗಳು ಇದನ್ನೇ ಸಾರುತ್ತವೆ. ನನಗೆ ಲಿಂಗವೇ ಪತಿಯು. ನೀನು ಲಿಂಗವನ್ನು ಧರಿಸಬೇಕು. ಅಂದರೆ ಮಾತ್ರ ನಿನ್ನಂಗನೆಯು ನಾನು. ನೀನು ಧರಿಸದಿದ್ದರೆ ನಿನಗೆ ನಾನು ಸತಿಯು ಹೇಗಾಗುವೆನು? ಇದು ನನ್ನ ನಿರ್ಧಾರವು ಎಂದು ನಿಷ್ಠುರವಾಗಿ ನುಡಿಯಲು ಅರಸನು— ನಾನು ಜಿನ ಮತವನ್ನು ಬಿಟ್ಟು ಬಡ ಮತವನ್ನು ಹೇಗೆ ಆಶ್ರಯಿಸುವೆನು? ಬಸದಿಯಲ್ಲಿರು ಜಿನಭಜನೆಯನ್ನು ಬಿಟ್ಟು ಪ್ರೃಡನನ್ನು ಪೂಜಿಸುವೆನೇ? ಜಗದೊಡೆಯನಾದ ಸರ್ವಜ್ಞಮುನಿಯನ್ನು ಬಿಟ್ಟು ಕೊಟ್ಟು ಒಂದು ಕ್ಷುದ್ರಮತದವನ ಅಡಿಗೆರಗುವೆನೇ? ಇದು ಆಗದು, ಎಂದು ನುಡಿಯಲು ಅದಕ್ಕೆ ಸುಗ್ಗಳಾದೇವಿಯು— ನಿನ್ನ ಮುನಿಯು ಜಿನ ಮತವೇ ಘನವೆಂದು ಶಾಸ್ತ್ರಮುಖದಲ್ಲಿ ಸಿದ್ಧಮಾಡಿ ತೋರಿಸಲಿ. ಆಗ ಮಾತ್ರ ನಾನು ಜಿನಮತವನ್ನು ಸ್ವೀಕರಿಸಿ ನಿನ್ನ ಕೂಡ ಇರುವೆನು. ಇದೇ ನನ್ನ ಭಾಷೆಯು, ಎಂದು ನುಡಿದಳು. ಅರಸನು ಇದಕ್ಕೆ ಒಪ್ಪಿ ತನ್ನ ಓಲಗಕ್ಕೆ ಬಂದನು.

ಜಯಸಿಂಹ ರಾಜನು ರಾಣಿಯಾದ ಸುಗ್ಗಳಾದೇವಿಯು ಬಯಸಿವಂತೆ ರಾಜಧಾನಿಯಲ್ಲಿ ಯಾರಾದರೂ ದೇವರ ದಾಸಿಮಯ್ಯನ ಕೂಡ ವಾದವಿವಾದ ಮಾಡಲು ಬಯಸಿದರೆ, ಅವರು ಓಲಗಕ್ಕೆ ಬರಬೇಕೆಂದು ಎಲ್ಲ ಕಡೆಗೆ ಸಾರಿಸಿದನು. ದೇವರ ದಾಸಿಮಯ್ಯನು ಈ ವರೆಗೆ ಪಟ್ಟಣದಲ್ಲಿ ನಡೆಸಿದ ಚಳವಳಿಯ ಮೂಲಕ ಬಹು ಜನರು ವೀರಶೈವ ಮತವನ್ನು ಅನುಸರಿಸಹತ್ತಿದ್ದರಿಂದ ಎಲ್ಲ ಮತಸ್ಥರೂ ಅವನಿಗೆ ವಿರೋಧಿಗಳಾಗಿದ್ದರು. ಆದ್ದರಿಂದ ಇವರೆಲ್ಲರೂ, ಅವನನ್ನು ಸೋಲಿಸಿ ತಮ್ಮ ಅನುಯಾಯಿಗಳು ಧರ್ಮಾಂತರ ಮಾಡುತ್ತಿರುವದನ್ನು ನಿಲ್ಲಿಸಬೇಕೆಂದು ಅಪೇಕ್ಷಿಸಿ ಬಹಿರಂಗವಾಗಿ ಅವನನ್ನು ವಾದದಲ್ಲಿ ಸೋಲಿಸಬೇಕೆಂದು ಅವರು ಬಹು ಸಂಖ್ಯೆಯಿಂದ ಓಲಗಕ್ಕೆ ಬರಹತ್ತಿದರು. ಆ ದಿವಸ ಅರಸನ ಸೇನಾಪತಿಗಳೂ ಸಾಮಂತರೂ ರಾಜ್ಯಾಧಿಕಾರಿಗಳೂ ಕುತೂಹಲವುಳ್ಳವರಾಗಿ ವಾದಗಳನ್ನು ಕೇಳಬೇಕೆಂದು ಸಭೆಯಲ್ಲಿ ಕಿಕ್ಕಿರಿದು ನೆರೆದರು. ಸುಗ್ಗಲಾದೇವಿಯೂ ಅವಳ ಪರಿವಾರದವರೂ ಕೂಡ ಸಭಾಸ್ಥಾನವನ್ನು ಅಲಂಕರಿಸಿದವರಾಗಿದ್ದರು.

ಆ ಮೇಲೆ ಅರಸನು ದೇವರದಾಸಿಮಯ್ಯನಿಗೆ ಹೇಳಿ ಕಳುಹಲು ಅವನು ಇಂದುಧರನನ್ನು ಮನದಲ್ಲಿ ನೆನೆಯುತ್ತ, ಪಂಚಾಕ್ಷರೀ ಮಂತ್ರ

ವನ್ನು ಜಪಿಸುತ್ತ, ಈ ಸಮಯದ ಮಹತ್ವವನ್ನು ಅರಿತವನಾಗಿ ಶಿವಗಣಂಗಳು ತನ್ನ ಸುತ್ತಲೂ ಶಿವತತ್ವಗರ್ಭಿತ ಪದ್ಯಗಳನ್ನು ಘೋಷಿಸುತ್ತಿರಲು ಸಭಾಸ್ಥಳಕ್ಕೆ ಬಂದನು. ಆಗ ಅವನನ್ನು ಅರಸನು ಆದರಿಸಿ ಉಚಿತಾಸನದಲ್ಲಿ ಕುಳ್ಳಿರಿಸಿದನು.

ಆಗ ಪರವಾದಿಗಳು—ರಾಜನೇ ಈ ದೇವರ ದಾಸಿಮಯ್ಯನು ಹೊಟ್ಟಲ ಕೆರೆಯನ್ನು ಹೊಲೆಗೆಡಿಸಿದ್ದಾನೆ. ಅವನಿಗೆ ಜಾತಿ, ರೀತಿ, ನೀತಿ, ಆಚರಣೆಗಳೆಂಬುವೇನೂ ಇಲ್ಲ. ಅವನು ನಿನ್ನ ಹೆಂಡತಿಯನ್ನು ಸಹ ಹೇಗೋ ಮರುಳು ಮಾಡಿ ಅವಳಿಗೆ ಲಿಂಗ ಧಾರಣೆ ಮಾಡಿದ್ದಾನೆ. ಈತನು ಭೂತಗಳ ಅಧಿಪತಿಯಾದ ಶಿವನನ್ನು ಭಜಿಸುವವನು. ಈ ಶಿವನು ಹುಲಿ ಕರಿಗಳ ಚರ್ಮವನ್ನು ಹೊದೆಯುವವನು. ಅವನು ಬೂದಿಯನ್ನು ಹೂಸಿಕೊಂಡಿದ್ದಾನೆ ಹಾವುಗಳನ್ನು ಸುತ್ತಿಕೊಂಡಿದ್ದಾನೆ. ಅವನು ಮನೆಮನೆಗೆ ಹೋಗಿ ತಿರಿದುಣ್ಣುತ್ತಾನೆ. ತನ್ನ ಅಂಗದ ಅರ್ಧವನ್ನು ಒಬ್ಬ ತರುಣಿಗೆ ಕೊಟ್ಟಿದ್ದಾನೆ. ಅವನಿಗೆ ಮಸಣವೇ ವಾಸವು. ಅವನು ವಿಷಮ ಮುಖನು, ವಿಷಮಾಕ್ಷನು. ಇಂಥ ದೇವನನ್ನು ಭಜಿಸುವ ಇವನು ಹೇಗೆ ಹೆಚ್ಚಿನವನಾಗುವನು ಎಂದು ಗರ್ಜಿಸಿದರು.

ಆಗ ದೇವರದಾಸಿಮಯ್ಯನು ಅವರಿಗೆ— ನಿಮಗೆ ಪರಶಿವನಾರು, ಅವನು ಲಿಂಗರೂಪಾಗಿ ಹೇಗೆ ಜಗತ್ತಿನಲ್ಲಿ ವ್ಯವಹರಿಸುತ್ತಾನೆ ಎಂಬುದನ್ನು ಅರಿಯರಿ. ಪರಶಿವನು ಲಿಂಗರೂಪಾಗಿ ವಿಶ್ವದಲ್ಲೆಲ್ಲ ವಾಸ ಮಾಡುತ್ತಾನೆ. ಅವನು ಅಖಂಡನು, ಅದ್ವಯನು, ವಿರಾಟರೂಪನು, ವಿಶ್ವಮಯನು, ವಿಶ್ವಗರ್ಭನು. ಆದರೂ ಅವನು ಅಂತರ್ಯಾಮಿಯು. ಅವನೇ ವಿಶ್ವವನ್ನು ಸೃಷ್ಟಿಸುವನು, ರಕ್ಷಿಸುವನು, ಸಂಹರಿಸುವನು. ಆದರೂ ಅವನು ಭಕ್ತಚಿತ್ತವಾಸನಾಗಿದ್ದಾನೆ. ವಿಶ್ವದಲ್ಲೆಲ್ಲ ರಾಮನಾಥನ ಹೊರತು ಬೇರೊಂದಿಲ್ಲ. ಪರಮಾತ್ಮನು ಏಕಮೇವ ನ ದ್ವಿತೀಯನಾಗಿದ್ದಾನೆ. ಹೀಗೆ ಶ್ರುತಿಗಳು ಸಾರುತ್ತವೆ. ಜಗತ್ತಿನಲ್ಲಿ ಲಿಂಗವನ್ನು ಬಿಟ್ಟು ಬೇರೊಂದಿಲ್ಲ. ನೀರಿನಲ್ಲಿ ಪದ್ಮಪತ್ರವು ಇದ್ದರೂ ಅದರಿಂದ ಅದು ಹೇಗೆ ಅಲಿಪ್ತವಾಗಿ ಉಳಿಯುತ್ತದೆಯೋ ಹಾಗೆಯೇ ಪರಮಾತ್ಮನು ಜಗತ್ತಿನಲ್ಲೆಲ್ಲ ವಾಸಮಾಡುತ್ತಾನೆ. ಇಂಥ ಶಿವನಲ್ಲಿ ಬೆರೆಯುವದೇ ಲಿಂಗಾಂಗಿಯ ಇರವು. ಇದುವೇ ಅವನ ಧರ್ಮವು.

ಇದನ್ನು ನಾವು ಪುರಾಣಾಗಮನಿಗಮಸರ್ವಪ್ರಮಾಣಗಳಿಂದ ರೂಪಿಸಲು ಸಂಸಿದ್ಧರಿಂದು ದೇವರದಾಸಿಮಯ್ಯನು ಓಲಗದಲ್ಲಿ ಉದ್ಘೋಷಿಸಿ ನುಡಿದನು.

ಆಗ ವೇದಾಂತಿಯು ವಾದಕ್ಕೋಸ್ಕರ ಮುಂದೆ ಬಂದು ನಿಂತು, ದೇವರದಾಸಿಮಯ್ಯನಿಗೆ– ನೀನನ್ನುವದು ತಪ್ಪು. ಸಕಳ ವೇದಗಳ ಶಿರಸ್ಸುಗಳ ಮೇಲಿರುವದು ನಮ್ಮ ವೇದಾಂತ ಮತವು. ನರಸುರಾದಿ ಪಸುನಿಕರ ಪ್ರಪಂಚವೆಲ್ಲವೂ ಪರಬ್ರಹ್ಮವು. ಆದರೆ ಮಾಯೆಯ ಮೂಲಕ ಮಾತ್ರ ಅದು ಭಿನ್ನವಾಗಿ ತೋರುತ್ತದೆ, ಎಂದೆನ್ನಲು ಅದಕ್ಕೆ ದಾಸಿಮಯ್ಯನು— ಹೀಗೆ ಅಸುವೇ ಪರಬ್ರಹ್ಮವಾದರೆ ಅದು ಷಡ್ಭ್ರಮೆಗಳಲ್ಲಿ ತೊಳಲಾಡಲೇಕೆ? ಪ್ರಾಣಿಗಳು ಪರಸ್ಪರ ವೈರಭಾವವನ್ನು ತಾಳಿ ತಮ್ಮತಮ್ಮನ್ನು ಗಾಸಿ ಮಾಡುವುದೇಕೆ? ಜೀವಿಗಳು ವಿಷಯ ವ್ಯಸನ ಮೋಹ ಭಯ ಹುಸಿ ಕಳವು ಮಾಡುತ್ತ ಬಹು ಯೋನಿಗಳಲ್ಲಿ ಜನಿಸಿ ಸಾಯುತ್ತವೆ. ಇಂಥವುಗಳು ಬ್ರಹ್ಮನು ಹೇಗೆ? ಆದ್ದರಿಂದ ವೇದಾಂತಿಗಳ ಮತವು ತಪ್ಪು. ಪರಮಾತ್ಮನು ಧರ್ಮಿಷ್ಠರಲ್ಲಿ ಇರುತ್ತಾನೆಯೇ ಹೊರ್ತು ಬೇರೆ ಕಡೆಗೆ ಇರುವದಿಲ್ಲ. ಮಾಯೆಯ ಬಗ್ಗೆ ನೀನು ಹೇಳುವ ವಿಚಾರಗಳು ಶಾಸ್ತ್ರದಲ್ಲಿಲ್ಲ, ಎಂದು ಹೇಳಿ ಅವನು ಅನೇಕ ವೇದೋಪನಿಷದ್ವಾಕ್ಯಗಳನ್ನು ನುಡಿಯುತ್ತ ವೇದಾಂತಿಯ ಮತವನ್ನು ಖಂಡಿಸಿದನು.

ಆ ಮೇಲೆ ವೈಷ್ಣವನು ಮುಂದೆ ಬಂದು—ವಿಷ್ಣುವೇ ದೈವವು, ಅವನು ಪುರುಷರೊಳಗುತ್ತಮನು, ರಕ್ಷಕನು, ಪರಹಿತನು, ಸರ್ವವ್ಯಾಪಿಯು ಎಂದು ವಾದಿಸಿದನು. ಅದಕ್ಕೆ ದೇವರ ದಾಸಿಮಯ್ಯನು, ಹಾಗಾದರೆ ವಿಷ್ಣುವಿಗೆ ಮರಣವೆಂಬುದೇಕೆ? ಅವನಿಗೆ ಹುಟ್ಟು ಸಾವುಗಳೇಕೆ? ಶಿವನಿಗೆ ಇವುಗಳಿಲ್ಲ. ವಿಷ್ಣುವು ರಕ್ಷಕನಾಗಿದ್ದರೆ ಅವನು ತನ್ನ ಮಗನನ್ನು ಏಕೆ ರಕ್ಷಿಸಲಾರದೆ ಹೋದನು? ಎಲ್ಲವೂ ವಿಷ್ಣುಮಯವಾಗಿದ್ದರೆ, ರಾವಣನು ಅವನ ಹೆಂಡತಿಯನ್ನು ಕೊಂಡೊಯ್ಯುವಾಗ ಅವನೆಲ್ಲಿದ್ದನು? ವೇದಾಗಮಗಳು 'ಏಕೋ ರುದ್ರನೆಂ'ತಲೂ, 'ವಿಶ್ವಾಧಿಕೋ ರುದ್ರನೆ'ಂತಲೂ ಸಾರುತ್ತವೆ ಎಂದು ಉತ್ತರ ಕೊಟ್ಟನು.

ಆ ಮೇಲೆ ಗಾಣಪತ್ಯನು ಮುಂದೆ ಬಂದು– ಗಣಪತಿಯೇ ದೈವವು. ಅವನು ಸಕಲ ವಿಘ್ನಗಳನ್ನು ಪರಿಹರಿಸುತ್ತಾನೆ. ಅವನು ಸಕಲ ವಿದ್ಯೆಗೆ

ಮಿತ್ರನು. ಸುರರ ಸಮೂಹಕ್ಕೆ ಅಧಿಪತಿಯು. ಆದ್ದರಿಂದ ಅವನು ಗಣಪತಿ ಎಂದೆನಿಸಿಕೊಳ್ಳುತ್ತಾನೆ. ಸತ್ಕೃತ್ಯಗಳನ್ನು ಪ್ರಾರಂಭಿಸುವಲ್ಲಿ ಅವನನ್ನು ಎಲ್ಲರೂ ಮೊದಲು ಪೂಜಿಸುತ್ತಾರೆ. ಆದ್ದರಿಂದ ಅವನೇ ದೇವನೆಂದು ವಾದಿಸಿದನು. ಅದಕ್ಕೆ ದೇವರ ದಾಸಿಮಯ್ಯನು - ಹಾಗಾದರೆ ಯಜ್ಞ ಪ್ರಾರಂಭದಲ್ಲಿ ದಕ್ಷನು ಗಣಪತಿಯನ್ನು ಪೂಜಿಸಿದ್ದರೂ, ಅವನ ಯಜ್ಞವು ಹಾಳಾಗಿ, ಅವನು ಕುರಿದಲೆಯಾದನೇಕೆ ? ವೀರಭದ್ರನು ಬಡಿವಾಗ ಅವನೆಲ್ಲಿದ್ದನು ? ಅವನು ವಿದ್ಯೆಗಳಿಗೆಲ್ಲ ಗುರುವಾಗಿದ್ದರೆ ಅಸುರರು ಶ್ರುತಿಗಳನ್ನು ಒಯ್ಯುವಾಗ ಅವನೆಲ್ಲಿದ್ದನು ? ಅವನನ್ನು ಪೂಜಿಸುವ ಭಕ್ತರಲ್ಲಿ ಕೆಲವರು ದಡ್ಡರು, ಕೆಲವರು ವಿದ್ವಾಂಸರೇಕೆ ? ಅವನು ದೇವನಾದರೆ, ಜನರು ಸಗಣಿಯಲ್ಲಿ ಅವನನ್ನು ಪೂಜಿಸಿ ಕಡೆಗೆ ಜಲದಲ್ಲಿ ಅವನನ್ನು ಮುಳುಗಿಸುವರೇಕೆ ? ಇಂಥವನು ದೇವನಾಗಲಾರನು ಎಂದು ಉತ್ತರ ಕೊಟ್ಟನು.

ಆ ಮೇಲೆ ಕಾಪಾಲಿಕನು ಮುಂದೆ ಬಂದು ಅವನು-- ನಮ್ಮ ಮತವು ಶ್ರೇಷ್ಠವಾದುದು. ಅದನ್ನು ಪಾಲಿಸಿದಲ್ಲಿ ಅಷ್ಟಸಿದ್ಧಿಗಳು ದೊರೆಯುವವು. ಎಂದು ಹೇಳಿ ಭೈರವನ ಚರಿತ್ರೆಯನ್ನು ಉದಹರಿಸುತ್ತ ತಾವು ಮಾಡುವ ಯಜ್ಞದ ತರಹ, ಪೂಜಾರ್ಚನಾದಿಗಳನ್ನು ವಿವರಿಸಿದನು. ಆದ್ದರಿಂದ ನಮ್ಮ ಕಾಪಾಲಿಕ ಮತವು ಶ್ರೇಷ್ಠವಾದುದು ಎಂದನು. ಅದಕ್ಕೆ ದೇವರದಾಸಿಮಯ್ಯನು- ನಿಮ್ಮ ಮತವು ಹೇಯವಾದುದು. ಅದರ ರೀತಿಯನ್ನು ಹೀಗೆ ಹೇಳಲು ನಿಮಗೆ ನಾಚಿಕೆಯಾಗುವದಿಲ್ಲವೋ? ನೀವು ಹಿಂಸಾಚಾರಿಗಳು, ಕ್ರೂರರು, ಸ ರಾಪಾನಿಗಳು, ನೀತಿಭ್ರಷ್ಟರು. ನೀವು ಮಾಡುವ ಹೋಮವು ಭ್ರಷ್ಟವಾದುದು. ಇಂಥ ನೀತಿವಿರಹಿತವಾದ ಆಚರಣೆಗಳಿಂದ ತುಂಬಿದ ನಿಮಗೆ ಸಿದ್ಧಿಗಳು ಹೇಗೆ ದೊರೆಕೊಳ್ಳುವವು ಎಂದು, ನುಡಿದನು.

ಆ ಮೇಲೆ ಶಾಕ್ತನು ಮುಂದುವರಿದು– ಶಿವನು ತ್ರಿಪುರಸಂಹಾರ ಕಾಲದಲ್ಲಿ ಅವನ ಲಲಾಟದಲ್ಲಿ ಬೆವರು ಬಿಂದುವು ಉಂಟಾಗಲು ಅದನ್ನು ಒರೆಸಲು ಆದೇ ಶಕ್ತಿಯಾದಳು. ಈ ಸಚರಾಚರ ಜಗತ್ತೆಲ್ಲ ಶಕ್ತಿಮಯವಾಗಿದೆ. ಮದಿರೆಯನ್ನು ಭಕ್ತಿಯಿಂದ ಪೂಜಿಸಿ ಕುಂಟೆದಲ್ಲಿ ಕಾಲಜ್ಞಾನವು ಉಂಟಾಗುತ್ತದೆ. ಶಕ್ತಿಮಂತ್ರದಿಂದ ಮದಿರೆಯು

ಉಚ್ಛಿಷ್ಟವು ಹೋಗುತ್ತದೆ. ಅದರಿಂದ ಇಷ್ಟಾರ್ಥಸಿದ್ಧಿಯಾಗುತ್ತದೆ. ಆದ್ದರಿಂದ ಶಕ್ತಿಯೇ ದೇವರು ಎಂದು ನುಡಿದನು. ಅದಕ್ಕೆ ದೇವರದಾಸಿಮಯ್ಯನು ಬೆವರಿಂದಾದ ಹೆಣ್ಣು ದೇವರು ಹೇಗೆ? ನೀವು ಮೂತ್ರದ ಕುಳಿಯನ್ನು ಪೂಜಿಸುವಿರಿ. ಇಂಥ ನೀತಿಭ್ರಷ್ಟರಿಗೆ ಇಷ್ಟಸಿದ್ಧಿಯು ಹೇಗೆ ದೊರಕೀತು? ಈ ರೀತಿ ನೀವು ನಡೆದಲ್ಲಿ ನಿಮಗೆ ನರಕವು ನಿಶ್ಚಯವು ಎಂದು ನುಡಿಯಲು ಅವನು ನಾಚಿ ಹಿಂದಿರುಗಿದನು.

ಆ ಮೇಲೆ ಸೌರನು ಅಂದದ್ದು:-- ಸೂರ್ಯನೇ ಘನತರವಾದ ದೈವವು. ಅವನು ಕರ್ಮಕ್ಕೆಲ್ಲ ಸಾಕ್ಷಿಯಾಗಿದ್ದಾನೆ. ಅವನಿಂದಲೇ ಕಾರ್ಯಗಳು ನಡಿಯುತ್ತವೆ ಎಂದೆನ್ನಲು ದೇವರ ದಾಸಿಮಯ್ಯನು— ಸೂರ್ಯನು ಹರಭಕ್ತನು. ಶಿವನ ಆಜ್ಞೆಯಲ್ಲಿರುವನು. ಮೇರು ಪರ್ವತವನ್ನು ಆಧಾರವಾಗಿ ಇಟ್ಟುಕೊಂಡು ಅಲ್ಲಿಯೇ ತಿರುಗುವನು. ಇಂಥ ಪರಾವಲಂಬಿಯು ದೇವರೆಂದೆನಲಾಗದು ಎಂದು ಹೇಳಿದನು.

ಬಳಿಕ ಕಾಲವಾದಿಯು ಮುಂದೆ ಬಂದು ಅಂದದ್ದು— ಕಾಲವೇ ಮಹತ್ತರವಾದದ್ದು. ಕಾಲವೆಂಬ ಸಮುದ್ರದಲ್ಲಿ ಅಜಾಂಡಗಳು ಉದಯಿಸಿ, ಅಲ್ಲಿಯೇ ಲಯವಾಗುತ್ತವೆ. ಫಲ, ಕುಸುಮ, ಲತಾದಿಗಳು ಕಾಲವನ್ನು ಮೀರದೆ ಕಾಲಕ್ಕನುಸರಿಸಿ ಫಲ ಕೊಡುತ್ತವೆ. ಆದ್ದರಿಂದ ಕಾಲದಿಂದ ಅಧಿಕವಾದ ದೈವವಿಲ್ಲ ಎಂದು ನುಡಿದನು. ಅದಕ್ಕೆ ದೇವರ ದಾಸಿಮಯ್ಯನು– ಪ್ರಾಣಿಗಳ ಜನನವು ಕೇವಲ ಕಾಲದಲ್ಲಾಗದೆ, ಬೆವರು, ಮಾಂಸ, ಮಂತ್ರಸಾಮರ್ಥ್ಯ ಇವುಗಳಿಂದಲೂ ಆಗುವದುಂಟು. ಅಂದಬಳಿಕ ಕಾಲದ ಮಹತ್ವವೆಲ್ಲಿ ಎಂದು ಉತ್ತರ ಕೊಟ್ಟನು.

ಆ ಮೇಲೆ ಕರ್ಮವಾದಿಯು ವಾದಿಸಿದ್ದು ಏನೆಂದರೆ— ಶುಭಾಶುಭಕರ್ಮಗಳಿಂದ ಉತ್ಪತ್ತಿ ಸ್ಥಿತಿ ಲಯಗಳಾಗುತ್ತವೆ. ಕರ್ಮವು ಇಷ್ಟು ಘನತರವಾದದ್ದು. ಜಪ ತಪ ತೀರ್ಥ ದಾಸೋಹ ಮಂಗಲಕಾರ್ಯಗಳನ್ನು ಮಾಡಿದಲ್ಲಿ ಇಹಪರದಲ್ಲಿ ಸುಖವಾಗುತ್ತದೆ. ಹಿಂಸಾಕರ್ಮದಿಂದ ಅಶುಭವಾಗುತ್ತದೆ. ಆದ್ದರಿಂದ ಕರ್ಮವೇ ಶ್ರೇಷ್ಠವಾದುದು. ಅದೇ ದೈವವು ಎಂದು ನುಡಿದನು. ಅದಕ್ಕೆ ದೇವರದಾಸಿಮಯ್ಯನು– ನೀವು ಹೇಳುವ ಕರ್ಮವು ಅಚೇತನವಾದದ್ದು. ಕರ್ಮದಲ್ಲಿ ತೊಡಗಿದ್ದ ದಕ್ಷನನ್ನು ಕರ್ಮವು ಏಕೆ ರಕ್ಷಿಸಲಿಲ್ಲ? ಆದರೆ ತಂದೆಯನ್ನು ಕೊಂದ

ಚಂಡೇಶನಿಗೆ ಶಿವನಿಂದ ನಿಜಪದವು ಏಕೆ ದೊರೆಯಬೇಕು? ಆದ್ದರಿಂದ ಶಿವನಿಗಲ್ಲದೆ ಕರ್ಮಕ್ಕೆ ಹಿರಿಯತನವಿಲ್ಲ ಎಂದು ಉತ್ತರ ಕೊಟ್ಟನು.

ಆ ಮೇಲೆ ವೇದವಾದಿಯು ಹೇಳಿದ್ದು— ಜಗತ್ತಿನಲ್ಲಿ ನಡೆಯುವ ಎಲ್ಲ ಕೃತ್ಯಗಳ ರೀತಿಯನ್ನು ವೇದದಿಂದ ಅರಿಯುವದು ಧರ್ಮವಾಗಿದೆ. ವೇದಗಳೆಲ್ಲ ಪುರಾಣ ಶಾಸ್ತ್ರಗಳಿಗೆ ಮಾತೃಸ್ಥಾನದಲ್ಲಿವೆ. ಆದ್ದರಿಂದ ವೇದಗಳು ಪ್ರತ್ಯಕ್ಷ ದೈವತವು ಎಂದು ನುಡಿದನು. ಅದಕ್ಕೆ ದೇವರ ದಾಸಿಮಯ್ಯನು— ವೇದಗಳೇ ದೇವರಾದರೆ ಅವು ಶುನಕನ ರೂಪನ್ನು ತಾಳಿ ಏಕೆ ದೈತ್ಯರಿಂದ ಪಾರಾಗಿ ಹೋಗಬೇಕಾಯಿತು? ಅವು ಒಮ್ಮೆ ಹಿಂಸೆಯನ್ನು ಹೇಳುತ್ತವೆ ಮತ್ತೊಮ್ಮೆ ಅಹಿಂಸೆಯನ್ನು ಹೇಳುತ್ತವೆ. ದೇವರಲ್ಲಿ ಹೀಗೆ ಒಮ್ಮೆ ಹುಸಿ, ಒಮ್ಮೆ ನಿಜವು ಇರಬಹುದೇ? ಆದ್ದರಿಂದ ವೇದಗಳು ದೇವರಲ್ಲ ಎಂದು ಹೇಳಿದನು.

ಆ ಮೇಲೆ ಗ್ರಹವಾದಿಯು ಮುಂದೆ ಬಂದು— ನವಗ್ರಹಗಳ ಮೂಲಕವೇ ಜಗತ್ತಿನ ಕಾರ್ಯಗಳು ನಡಿಯುತ್ತವೆ. ಸಿರಿ, ಭೋಗ, ಸುಖದುಃಖಗಳನ್ನು ಕೊಡುವಂಥವು ಅವೇ. ಜನನ ಸ್ಥಿತಿ ಲಯಗಳು ಗ್ರಹಗಳ ಮೂಲಕವೇ ಉಂಟಾಗುತ್ತವೆ. ಆದ್ದರಿಂದ ಗ್ರಹಗಳೇ ದೈವವೆಂದು ವಾದಿಸಿದನು. ಅದಕ್ಕೆ ದೇವರದಾಸಿಮಯ್ಯನು— ಒಂದೇ ಲಗ್ನದಲ್ಲಿ ಜನಿಸಿದವರಲ್ಲಿ ಒಬ್ಬನು ಪಾಪಿಷ್ಠನು, ಇನ್ನೊಬ್ಬನು ಸುಕೃತಿಯು ಏಕಾಗಬೇಕು? ಎಲ್ಲರೂ ಪೂರ್ವಕರ್ಮಫಲವನ್ನು ಅನುಭವಿಸಲೇಬೇಕು. ಅಂದಬಳಿಕ ಈ ಗ್ರಹಗಳು ದೈವವೆಂಬುದು ಹೇಗೆ? ಎಂದು ಉತ್ತರವಿತ್ತನು.

ತರುವಾಯ ಪಂಚಭೂತಗಳೇ ದೈವವೆಂದು ಹೇಳುವವನು ಮುಂದೆ ಬಂದು, ಜಗತ್ತೆಲ್ಲ ಪಂಚಭೂತಗಳಿಂದ ಆಗಿದೆ. ಅವುಗಳು ವಸ್ತುಗಳ ನಿರ್ಮಾಣಕ್ಕೆ ಕಾರಣವಾಗಿವೆ. ಆದ್ದರಿಂದ ಅವುಗಳೇ ದೈವವೆಂದು ನುಡಿದನು. ಇದಕ್ಕೆ ದೇವರದಾಸಿಮಯ್ಯನು— ಪಂಚಭೂತಗಳು ಶಿವನ ಐದುಮುಖಗಳಿಂದ ಉಂಟಾಗಿರುತ್ತವೆ. ಹೀಗೆ ಉಂಟಾದವುಗಳಿಗೆ ದೈವತ್ವವು ಹೇಗೆ ಪ್ರಾಪ್ತವಾಗಬಹುದು? ಶಿವನೇ ದೈವವೆಂದು ಉತ್ತರ ಕೊಟ್ಟನು.

ಆ ಮೇಲೆ ಚಾರ್ವಾಕನು ಮುಂದೆ ಬಂದು ನುಡಿದದ್ದೇನಂದರೆ– ಯಾವನು ಕೊಲ್ಲುತ್ತಾನೋ ಅವನೇ ರುದ್ರನು. ಯಾವನು ಕಾಯು

ತ್ತಾನೋ ಅವನೇ ವಿಷ್ಣುವು. ಯಾವನು ಸಂಗ್ರಹಿಸುತ್ತಾನೋ ಅವನೇ ಬ್ರಹ್ಮನು. ಬ್ರಹ್ಮ, ವಿಷ್ಣು, ರುದ್ರರೆಂಬವರು ತನ್ನಿಂದ ಬೇರಿಲ್ಲ. ತನಗೆ ತಿಳಿದಂತೆ ಇರುವದೇ ಪುರಾಣ. ತಾನು ನಡೆದುದೇ ಶಾಸ್ತ್ರ. ಬಲ್ಲತಿಯೇ ವೇದಗಳು. ಧನವೆಂಬುದೇ ಜ್ಞಾನ. ನಿರುತ ಸುಖವೇ ಸ್ವರ್ಗ. ದುಃಖವೇ ನರಕ. ದೇಹವೇ ಆತ್ಮ. ಮರಣವೇ ಮುಕ್ತಿ ಎಂದು ಹೇಳುತ್ತ ಆಶ್ರಿತರನ್ನು ಸಂರಕ್ಷಿಸಿದರೆ ತಾನೇ ಒಡೆಯು. ತಾನೇ ದೈವ. ತನ್ನಿಂದ ಬಿಟ್ಟು ಬೇರೆ ದೈವವೆಂಬುದಿಲ್ಲ. ಹೀಗೆ ಚಾರ್ವಾಕನು ಅಥವಾ ಪಾಖಂಡಿಯು ನುಡಿದನು. ಅದಕ್ಕೆ ದೇವರದಾಸಿಮಯ್ಯನು ಗಡಿಗೆಯನ್ನು ಮಾಡಲು ಹೇಗೆ ಕುಂಬಾರನು, ಆಭರಣಗಳನ್ನು ಮಾಡಲು ಹೇಗೆ ಅಕ್ಕಸಾಲಿಗನು ಅವಶ್ಯವಾಗಿರುವರೋ ಹಾಗೆ ಕ್ರಿಯೆಗೆ ಒಬ್ಬ ಕರ್ತನು ಬೇಕೇಬೇಕು. ಹಿಂದಿನ ಜನ್ಮದಲ್ಲಿ ತಪಸ್ಸು ಮಾಡಿದರೆ ಸಿರಿಯು. ಆದರೆ ಮತ್ತನಾಗಿ ವರ್ತಿಸಿದರೆ ನರಕವು ಪ್ರಾಪ್ತವಾಗುತ್ತವೆ. ಹೀಗೆ ಕ್ರಿಯೆಗೆ ಕರ್ತನು ಬೇಕೇ ಬೇಕು. ಮೂಲ ಕರ್ತನೇ ದೇವರು ಎಂದು ಉತ್ತರ ಕೊಟ್ಟನು.

ಕಡೆಗೆ ಜೈನನು ಮುಂದೆ ಬಂದು— ನಮ್ಮ ಧರ್ಮವು ಪವಿತ್ರವಾದುದು. ಅಹಿಂಸೆಯೇ ನಮ್ಮ ಪರಮ ಧರ್ಮವು. ನಾವು ಕ್ರಿಮಿಕೀಟಕಗಳನ್ನು ಹಿಂಸೆ ಮಾಡುವದಿಲ್ಲ. ನೀವು ರಾಮನಾಥನು ವಿಶ್ವಕರ್ತನೆಂತಲೂ ಎಲ್ಲೆಡೆಯಲ್ಲಿರುವನೆಂತಲೂ ವಾದಿಸುತ್ತಾ ಇದ್ದೀರಿ. ಶಿವನು ಹೀಗಿರುವದು ಅಸಂಭವವು. ಹಾಗಿದ್ದರೆ ಅವನು ಜೀವಿಗಳಿಗೆ ಅಂಗವಾಗಿರುವನೋ ಅಥವಾ ತಾನೇ ಅವುಗಳಿಗೆ ಆತ್ಮನಾಗಿರುವನೋ, ಎಂಬುದನ್ನು ನೀವು ವಿಶದ ಪಡಿಸಬೇಕು ಎಂದು ವಾದಿಸಿದನು.

ಅದಕ್ಕೆ ದೇವರದಾಸಿಮಯ್ಯನು— ರಾಷ್ಟ್ರವನ್ನಾಳುವವನು ರಾಜನಲ್ಲವೇ? ಆ ರಾಜನು ಎಲ್ಲ ಕಡೆಗೆ ಇರದಿದ್ದರೂ ಅವನ ವರ್ಚಸ್ಸು ರಾಷ್ಟ್ರದಲ್ಲೆಲ್ಲ ಇದ್ದು ಎಲ್ಲ ಕಾರ್ಯಗಳು ಅವನಿಂದಲೇ ಸಾಗುತ್ತವೆ. ಹಾಗೆಯೇ ಅವನ ರಾಜ್ಯದಲ್ಲಿ ಕಿರಾತರೂ ಅನೇಕ ಬಗೆಯ ಅನಾಮಿಕರೂ ವಾಸ ಮಾಡುತ್ತಾರೆ. ಆದರೆ ಅವರು ರಾಜರಾಗಬಲ್ಲರೇ? ಅವರಿಗೆ ರಾಜನಲ್ಲಿರಬೇಕಾಗುವ ಶಕ್ತಿಯೂ ಜ್ಞಾನವೂ ಇರುವದಿಲ್ಲಾದ್ದರಿಂದ ಅವರು ರಾಜರು ಹೇಗಾಗುವರು? ಹಾಗೆಯೇ ದೇವರು ಎಲ್ಲರೊಳಗೆ ಇದ್ದು, ಅವನ ಸಾಮರ್ಥ್ಯದಿಂದಲೇ ಈ ಜಗತ್ತು ನಡೆಯುತ್ತದೆ.

ಚಂದ್ರನು ಜಗತ್ತಿನಲ್ಲಿರುವ ಎಲ್ಲ ವಸ್ತುಗಳ ಮೇಲೆಯೂ ತನ್ನ ಪ್ರಕಾಶವನ್ನು ಕೆಡಹುತ್ತಾನೆ. ಅವನ ಈ ಪ್ರಕಾಶವು ಚಂದ್ರಕಾಂತದ ಮೇಲೆ ಬೀಳಲು ಅದರಲ್ಲಿ ನೀರೊಡೆಯುತ್ತಿದೆ. ಯಾಕಂದರೆ ಚಂದ್ರಕಾಂತಕ್ಕೂ ಚಂದ್ರನಿಗೂ ಅಂಥ ನಿಕಟಸಂಬಂಧವಿದೆ. ಆದರೆ ಆ ಪ್ರಕಾಶವು ಇತರ ಶಿಲೆಗಳ ಮೇಲೆ ಬಿದ್ದರೆ ಅವು ಕರಗುವದಿಲ್ಲ. ಹಾಗೆಯೇ ಶಿವನು ಸಕಲದಲ್ಲಿದ್ದರೂ ಶರಣನ ಹೃದಯವು ಮಾತ್ರ ಅವನಲ್ಲಿ ಕರಗುವದೇ ಹೊರ್ತು ಉಳಿದ ಕರ್ಮಿಗಳ ಹೃದಯಗಳು ಕರಗಲಾರವು. ಶರಣನಲ್ಲಿ ಲಿಂಗವಿದೆ. ಆದ್ದರಿಂದ ಅವನು ಶರಣನಲ್ಲಿ ಹೀಗೆ ಬೆರೆಯುತ್ತಾನೆ.

ಅವನು ಪುನಃ ಹೇಳಿದ್ದೇನೆಂದರೆ—

ಧರೆಯ ಮೇಲೆ ಸ್ವಾತಿ ನಕ್ಷತ್ರದಲ್ಲಿ ಮಳೆ ಸುರಿಯಲು ಅದರ ಹನಿಗಳು ಶಿಂಪಿನಲ್ಲಿ ಬಿದ್ದಲ್ಲಿ ಅವು ಗಟ್ಟಿಯಾಗಿ ಅದರಲ್ಲಿ ಮುತ್ತುಗಳಾಗುತ್ತವೆ. ಹಾಗೆಯೇ ಭಕ್ತನಲ್ಲಿ ಅರಿವು ಉಂಟಾದ್ದರ ಮೂಲಕ ಅವನಲ್ಲಿ ಪರಮಾತ್ಮನ ಕಳೆಯು ತೋರಲು ಆ ಅರಿವು ಅವನಲ್ಲಿ ಗಟ್ಟಿಗೊಂಡು ಲಿಂಗರೂಪವಾಗಿ ತೊಳಗುತ್ತದೆ. ಇದೇ ಲಿಂಗಾಂಗಿಯ ಪಥವು ಭ್ರಾಂತರುಗಳಿರಾ, ಈ ಶಿವಪಥದ ಸುಖವು ನಿಮಗೆ ಹೇಗೆ ದೊರೆಕೊಂಬುವದು ? ಅದು ನಿಮಗೆ ದೊರೆಯಲಾರದು ಎಂದನು.

ಆ ಮೇಲೆ ಜೈನರು ದೇವರದಾಸಿಮಯ್ಯನಿಗೆ— ಹೀಗೆ ಸಮರಸವಾಗುವಂತಹವು ಯಾವವು? ಅವು ಅಂಗವೋ, ಜೀವನೋ, ತದಾತ್ಮನೋ, ಎಂದು ಪ್ರಶ್ನೆ ಮಾಡಿದರು. ಅದಕ್ಕೆ ದೇವರದಾಸಿಮಯ್ಯನು— ಅಂಗವೆಂಬುದು ಪೂರ್ವಕರ್ಮಸಂಗ್ರಹವು. ಅದು ಪುಣ್ಯಪಾಪಗಳಿಗೆ ಕಾರಣಗಳಾದ ಸುಕೃತ ಮತ್ತು ದುಷ್ಕೃತಗಳಿಗೆ ಆಶ್ರಯವು. ಆದ್ದರಿಂದ ಅಂಗವು ಶಿವನಲ್ಲ. ಜೀವನು ಶಿವನೆಂದರೆ ಅವನು ಅತಿಮಲಿನನು. ಆದರೆ ಶಿವನು ನಿರ್ಮಳನು. ಜೀವನು ದುಷ್ಕರ್ಮಿ, ಶಿವನು ನಿಷ್ಕರ್ಮಿಯು. ಜೀವನು ಸಕಳನು, ಶಿವನು ನಿಷ್ಕಳನು. ಜೀವನು ಭವಪಾಶಬದ್ಧನು, ಶಿವನು ಭವವಿಲ್ಲದವನು. ಜೀವನು ಸಂಸಾರಿ, ಶಿವನು ಅಸಂಸಾರಿ. ಜೀವನು ಮೃತನಾಗುತ್ತಾನೆ. ಆದರೆ ಶಿವನು ಅಮೃತನು. ಆದ್ದರಿಂದ ಜೀವನು ಶಿವನಲ್ಲ. ಹಾಗೆಯೇ ಆತ್ಮವೂ ಪರಮಾತ್ಮನಲ್ಲ. ಆತ್ಮವು ಪಂಚಭೂತಾತ್ಮಕವು ಮತ್ತು ಪಂಚೇಂದ್ರಿಯಾತ್ಮಕವು. ಆದ್ದರಿಂದ ಆತ್ಮವು ಶಿವನಾಗಲಾರನು.

ಆದರೆ ಸೂತ್ರಧಾರನು ಕಪಟನಾಟಕವನ್ನು ಪಾತ್ರಗಳ ಮೂಲಕ ಹೇಗೆ ಆಡಿಸುತ್ತಾನೋ ಹಾಗೆ ಶಿವನು ಚರಾಚರದಲ್ಲಿದ್ದುಕೊಂಡು ಅನಂತ ಪರಿಯಲ್ಲಿ ತೆರಹುಗೊಡದೆ 'ಮಹತೋ ಮಹೀಯಾನ್, ಅಣೋರಣೀಯಾನ್' ಈ ರೀತಿಯಾಗಿ ವಾಸಿಸುತ್ತಾ ತಿಲದೊಳಗಿರುವ ತೈಲದಂತೆ, ಇಂಧನದಲ್ಲಿರುವ ಪಾವಕನಂತೆ, ಕನ್ನಡಿಯೊಳಗಿರುವ ನೆಳಲಂತೆ, ಹಾಲೊಳಗಿರುವ ತುಪ್ಪದಂತೆ, ಬೀಜದೊಳಗಿರುವ ವೃಕ್ಷದಂತೆ, ಉಲಿವ ಶಬ್ದಗಳಲ್ಲಿರುವ ಅರ್ಥದಂತೆ, ಮಣಿಗಳೊಳಗಿರುವ ದಾರದಂತೆ, ಪರ್ವತ ಪ್ರದೇಶಗಳಲ್ಲಿ ಉಂಟಾಗುವ ಪ್ರತಿಧ್ವನಿಯಂತೆ, ಎಲ್ಲೆಡೆಯೊಳು ಸರ್ವಗತನಾಗಿ ತಾನೇ ತಾನಾಗಿರುತ್ತಾನೆ, ಎಂದು ವಿವರಿಸಿ ಹೇಳಿದನು. ಇದೇ ಜೀವ, ಲಿಂಗ, ಆತ್ಮ, ಶಿವ ಇವರಲ್ಲಿರುವ ಪರಸ್ಪರ ಸಂಬಂಧವೆಂದು ಹೇಳಿದನು.

ಅದಕ್ಕೆ ಜೈನರು— ನೀವು ಶಿವನು ನಿತ್ಯನು, ಜೀವಿಗಳು ಅನಿತ್ಯವೆಂದು ಹೇಳಿದರೂ ಶಿವನು ಸರ್ವಗತನಾಗಿದ್ದಾನೆಂದು ಅನ್ನುತ್ತೀರಿ. ಆದರೆ ನಾವು ಜೀವಿಗಳಲ್ಲಿ ಒಬ್ಬನಾದರೂ ಕೂಡ ಶಿವನ ಗುಣವುಳ್ಳವನಿರುವದು ಕಾಣುವದಿಲ್ಲವಲ್ಲಾ, ಎಂದು ಆಕ್ಷೇಪಿಸಿದರು. ಅದಕ್ಕೆ ದೇವರದಾಸಿಮಯ್ಯನು— ಸುಗಂಧವುಳ್ಳ ತೈಲದಲ್ಲಿ ಸುಗಂಧವಿರುವದೇ ಹೊರತು, ಆ ಗುಣವು ಎಳ್ಳೊಳಗೆ ಇರುವದೇ? ಎಣ್ಣೆ ಹಾಕಿದಲ್ಲಿ ದೀಪ ಉರಿಯುತ್ತಿದೆಯೋ ಹೊರತು, ಎಳ್ಳು ಹಾಕಿದರೆ ಆ ದೀಪ ಉರಿಯುಬಲ್ಲುದೇ? ಅದು ಉರಿಯಲಾರದು. ಇಷ್ಟರಿಂದ ಎಳ್ಳಲ್ಲಿ ಎಣ್ಣೆ ಇಲ್ಲವೆಂದು ನಾವು ಹೇಳಬಹುದೇ? ಹಾಗೆಯೇ ಪರಮಾತ್ಮನು ಎಲ್ಲ ಕಡೆಗೂ ಇದ್ದರೂ ಕ್ರಿಯೆಯ ಮೂಲಕ ಹೇಗೆ ಎಳ್ಳಿನೊಳಗಿಂದ ಎಣ್ಣೆ ಹೊರಡುತ್ತದೋ, ಹಾಗೆ ಕ್ರಿಯಾಮಥನದಿಂದ ಜೀವನು ಪರಿಪಕ್ವನಾಗಲಾಗಿ ಅವನಲ್ಲಿ ಶಿವಾಂಶವು ತಲೆದೋರಹತ್ತುತ್ತದೆ. ಆದರೆ ಶಿವನು ನಿರ್ಮಲ ಮತಿಗೆ ತೋರುತ್ತಾನೆಯೇ ಹೊರತು, ಮಲಿನ ಮತಿಗೆ ತೋರಲಾರನು. ಈ ಪರಿಯಲ್ಲಿ ಆಭವನು ಜಗತ್ತಿನಲ್ಲಿ ಅಖಿಳವ್ಯಾಪಕನಾಗಿ ಇದ್ದಾನೆ. ಇದು ಪುರಾಣಾಗಮ ಸರ್ವಪ್ರಮಾಣಗಳಿಂದ ರೂಪಿಸಲು ಸಂಸಿದ್ಧವೆಂದು ಉತ್ತರಗೊಟ್ಟನು.

ಆಮೇಲೆ ದೇವರ ದಾಸಿಮಯ್ಯನು ಹೇಳಿದ್ದೇನೆಂದರೆ—ಜೈನರುಗಳಿರಾ, ನೀವು ಶಿವನಿಲ್ಲವೆಂದೆನ್ನುತ್ತೀರಿ. ಆದರೆ ಶಿವನಿಲ್ಲದ ಠಾವು

ಜಗತ್ತಿನಲ್ಲಿ ಎಲ್ಲಾದರೂ ಉಂಟೇ ? ಅವನು ಸಕಲವೂ ತಾನಾಗಿರುತ್ತ, ಸಕಲವನ್ನು ಹೊಂದದೆ ಇದ್ದ ನಿರ್ಗುಣಿಯಾಗಿದ್ದಾನೆ. ಸಕಲವನ್ನು ಹುಟ್ಟಿಸಿಯೂ ಸಕಲದಲ್ಲಿ ಹುಟ್ಟದೆ ಇದ್ದ ಅಭವನು. ಸಕಲವನ್ನು ಕೌತುಕದಿಂದ ನಡಿಸುತ್ತ ಇದ್ದರೂ, ಆ ಸಕಲದಲ್ಲಿ ನಡೆಯದ ಜಾಣನಾಗಿದ್ದಾನೆ. ಸಕಲವಳಿದರೂ ತಾನಳಿಯದಿರುವಂಥ ನಿತ್ಯನಾಗಿದ್ದಾನೆ. ಸಕಲವನ್ನು ತನ್ನಲ್ಲಿ ಇರಿಸಿಕೊಂಡರೂ ಆ ಸಕಲಕ್ಕೆ ಅಂಟಿಕೊಳ್ಳದೆ ಇರುವನು. ಸಕಲವನ್ನು ತನ್ನ ಆಜ್ಞೆಯಿಂದ ಜಗತ್ತಿನಲ್ಲಿ ನಡಿಸುವ ಸರ್ವಜ್ಞನು. ಸಕಲವನ್ನು ಹುರಿಗೊಳಿಸುತ್ತಿದ್ದರೂ ತನ್ನ ಇಚ್ಛಾಮಾತ್ರದಿಂದ ಅದನ್ನು ವಿಕೃತಪಡಿಸುವ ಮಹಾಮಹಿಮನು. ನೆನಹನ್ನು ಅತಿಗಳೆದರೂ ತನ್ನನ್ನು ನೆನೆವವರಿಗೆ ತನ್ನನ್ನೇ ಕೊಡುವಂಥವನು. ತನ್ನ ಅಳವನ್ನು ಅರಿತಂಥವರಿಂದ ಅವನು ಎಂದಿಗೂ ಅಗಲಲಾರದೆ, ಅವರಲ್ಲಿಯೇ ಇರುವನು. ನಿಜವನ್ನು ಹುಡುಕುವಂಥವರ ಮನದ ಕೊನೆಯಲ್ಲಿ ಹೊಳೆಯುವಂಥವನು. ಹಿಡಿಯ ಹೋದರೆ ತಪ್ಪಿಸಿಕೊಳ್ಳುವವನಾದರೂ ಅರಿವಿನಿಂದ ಅವನನ್ನು ಹಿಡಿಯಲು ಸಾಧ್ಯನು. ಹೀಗೆ ಅವನನ್ನು ಹಿಡಿದಲ್ಲಿ, ಬಟ್ಟಬಯಲು. ಅವನು ಸ್ತುತಿಗೆ ಮೀರಿದವನೂ, ನುಡಿಗಳಿಗೆ ಮಿಕ್ಕದವನೂ, ದೃಷ್ಟಿಗೆ ಕಾಣದವನೂ ಇದ್ದಾನೆ. ಆದರೆ ನಿಜದೃಷ್ಟಿಯಿಂದ ನೋಡುವಂಥವರಿಗೆ ಕಾಣಿಸಿಕೊಳ್ಳುತ್ತಾನೆ. ಹೀಗೆ ಪರಮಾತ್ಮನ ಸ್ವರೂಪವಿದೆ. ಜಗತ್ತನ್ನು ಸೃಷ್ಟಿಸುವವನೂ ಅವನೇ, ರಕ್ಷಿಸುವವನೂ ಅವನೇ, ಕೆಡಿಸುವವನೂ ಅವನೇ. ಲೇಸು ಹೊಲ್ಲಹ ಎಂಬೆರಡೂ ಅವನಿಗೆ ಇಲ್ಲ. ಆಸೆ ಇಲ್ಲದ ಭಕ್ತನ ಚಿತ್ತದಲ್ಲಿ ವಾಸವಾಗಿರುವಂಥವನು. ಪ್ರತಿ ಇಲ್ಲದ ಅಪ್ರತಿಮನು. ಇವನ ಮಹಿಮೆಯನ್ನು ಭವಿಗಳಾದವರು ತಿಳಿಯಲಾರರು. ಅವನು ತರ್ಕಕ್ಕೆ ದೂರನಾಗಿದ್ದರೂ ಸುಪ್ರಸನ್ನನು. ಅವನು ಅದಿಗಾದಿಗನಾದಿಯಾದವನು. ಇದುವೇ ವೇದಾಗಮ ಶಾಸ್ತ್ರ ಸಿದ್ಧವು, ಎಂದು ನುಡಿಯುತ್ತಾ, ಎಲೈ ಜೈನರಿರಾ ನಿಮ್ಮ ಜೈನ ಧರ್ಮವು ವೇದಬಾಹಿರವಾದದ್ದು, ವೇದ ವಿರುದ್ಧವಾದದ್ದು. ಎಂದು ಓಲಗದಲ್ಲಿದ್ದ ಸಭಿಕರ ಮುಂದೆ ವೇದಾಗಮ ಪುರಾಣೋಕ್ತಿಗಳನ್ನು ಈ ಬಗ್ಗೆ ಅನೇಕವಾಗಿ ಉದಹರಿಸುತ್ತ ಪರಮನ ಸ್ವರೂಪನ್ನು ಉದ್ಘೋಷಿಸಿದನು.

ಹೀಗೆ ದೇವರದಾಸಿಮಯ್ಯನು ತರ್ಕದಿಂದ ಮತ್ತು ವೇದಾಗಮಗಳ ಆಧಾರಗಳಿಂದ ರಾಮನಾಥನ ಸ್ವರೂಪನ್ನು ಸಿದ್ಧಮಾಡಲು ಅಲ್ಲಿ

ನೆರೆದಿದ್ದ ಪರವಾದಿಗಳು ಅವನಿಗೆ ಉತ್ತರವನ್ನು ಕೊಡಲಾರದೆ ಹೋದರು. ಆಗ ಅವರ ಮುಖಗಳು ಕಂದಿದವು, ಮೊಗಗಳು ಬಾಡಿದವು. ಹೀಗಾಗಲು ಅಲ್ಲಿದ್ದ ಜೈನ ಸಮೂಹವು ತಮ್ಮ ತಮ್ಮೊಳಗೆ ಒಂದು ಕೃತಕವನ್ನು ನೆನೆದು, ಪಾವಕಜ್ವಾಲಾಪ್ರಭಾವವುಳ್ಳ ಘಟಸರ್ಪನೊಂದನ್ನು ತರಿಸಿ ಅದನ್ನು ಒಂದು ಘಟದೊಳಗಿರಿಸಿ ದಾಸಿಮಯ್ಯನಿಗೆ— ನೀನು ಶಿವನು ಸರ್ವಗತನೆಂಬೆ. ಈ ಘಟದಲ್ಲಿ ಶಿವನನ್ನು ತೋರಿಸುವಿಯಾ? ಎಂದೆನಲಾಗ, ಅವನು ಅದಕ್ಕೆ ಒಪ್ಪಿ ನಾಗಭೂಷಣನ ಅಡಿಯನ್ನು ನೆನೆಯುತ್ತ ಮನದಲ್ಲಿ ಅಂಜದೆ ಆ ಕುಂಭದ ಮೇಲಿದ್ದ ಮುಚ್ಚಳವನ್ನು ತೆಗೆಯಲಾಗಿ ಅದರಲ್ಲಿದ್ದ ಘಟಸರ್ಪನು ಮಡಿಕೆಯ ಮೇಲೆ ಹೆಡೆಯನ್ನು ಎತ್ತಿಕೊಂಡು ಭೋರ್ಗರೆಯುತ್ತಿರಲು, ದೇವರ ದಾಸಿಮಯ್ಯನು— ಶಂಕರನೇ ದೈವವು, ಎಂದು ತನ್ನ ಕರವನ್ನು ಮುಂದೆ ನೀಡುತ್ತ ಆ ಸರ್ಪನನ್ನು ಹಿಡಿಯಲು ಅದು ಕೂಡಲೆ ಸ್ಫಟಿಕಲಿಂಗವಾಯಿತು! ಆ ಲಿಂಗದ ಕಿರಣಗಳು ಸಭಾಮಂದಿರವನ್ನು ಆವರಿಸಿದವು. ಅದನ್ನು ಎಲ್ಲರೂ ಕಂಡು ಬೆರಗಾದರು. ಎಲ್ಲರ ಮುಖದಿಂದಲೂ ಜಯ, ಜಯ ನಿನಾದವು ಪೆಗ್ಗಳಿಸಿತು. ಎಲ್ಲರೂ ದೇವರ ದಾಸಿಮಯ್ಯನನ್ನು ಸ್ತುತಿಸುತ್ತ ಅವನಿಗೆ ನಮಸ್ಕರಿಸುವವರಾದರು.

ಪರವಾದಿಗಳು ಮಾಡಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಡುತ್ತ ವಾದದಲ್ಲಿ ಅವರನ್ನು ಹೀಗೆ ಜಯಿಸಿದ ಮೂಲಕ ಇದರ ಸ್ಮರಣಾರ್ಥವಾಗಿ ದೇವರದಾಸಿಮಯ್ಯನು ಆ ಲಿಂಗಕ್ಕೆ 'ಉತ್ತರನಾಥ'ನೆಂಬ ಹೆಸರನ್ನಿಟ್ಟು ಅಲ್ಲಿಯೇ ಅದನ್ನು ಪ್ರತಿಷ್ಠಾಪಿಸಿದನು.

ಆಗ ಅರಸನು ದೇವರದಾಸಿಮಯ್ಯನಿಗೆ— 'ಲಿಂಗಭಕ್ತಿಯು ಘನತರವಾದುದು. ಅದರ ಮಹತ್ವವನ್ನು ನಾನಿಂದು ಅರಿತೆನು. ನನಗೆ ಲಿಂಗಧಾರಣೆಯನ್ನು ಮಾಡಿ ಸಂರಕ್ಷಿಸು' ಎಂದೆನ್ನಲು ಅವನಿಗೂ ಅವನ ಶರೀರಸಂಬಂಧಿಗಳಿಗೂ ವೀರಶೈವ ದೀಕ್ಷೆಯನ್ನು ಕೊಟ್ಟನು. ಅಲ್ಲಿದ್ದ ಸುಗ್ಗಲಾದೇವಿಯು ಇಂದು ತನ್ನ ಭಾಷೆಯು ಪೂರೈಸಿತೆಂದು ಹರುಷಿತಳಾಗಿ ದಾಸಿಮಯ್ಯನನ್ನು ಕೊಂಡಾಡಿ ಪೂಜಿಸಿದಳು. ಪಟ್ಟಣದಲ್ಲಿ ೭೦೦ ಬಸದಿಗಳಿದ್ದವು. ಅವೆಲ್ಲವೂ ಲಿಂಗಾಲಯಗಳಾಗಿ ಮಾಡ

ಲ್ಪಟ್ಟವು. ಪಟ್ಟಣದಲ್ಲಿದ್ದ ಇಪ್ಪತ್ತುಸಾವಿರ ಜೈನರು ವೀರಶೈವ ದೀಕ್ಷೆಯನ್ನು ಹೊಂದಿದರು.

ಹೀಗೆ ರಾಜನ ರಾಜಧಾನಿಯಲ್ಲಿ ಬಹು ಜನರು ವೀರಶೈವರಾಗಲು ದೇವರ ದಾಸಿಮಯ್ಯನ ಕೀರ್ತಿಯು ನಾಡಿನಲ್ಲಿ ಅತ್ಯಂತವಾಗಿ ಹಬ್ಬಿತು. ಆದರೆ ದಾಸಿಮಯ್ಯನು ಪೊಟ್ಟಲಕೆರೆಯಲ್ಲಿ ಬಹಳ ದಿವಸವಿರಲಿಲ್ಲ. ಅವನು ತನ್ನ ಅಧಿದೇವತೆಯಾದ ರಾಮನಾಥನ ಸನ್ನಿಧಿಯಲ್ಲಿರಲು ಅಪೇಕ್ಷಿಸಿ ಗಣಸಮೂಹದೊಡನೆ ಮುದುನೂರಿಗೆ ಬಂದನು. ಅಲ್ಲಿ ಅವನು ರಾಮನಾಥನ ಭಕ್ತಿಯಲ್ಲಿ ತನ್ನ ಹೆಂಡತಿಯೊಂದಿಗೆ ಕಾಲಕಳೆಯುತ್ತಿದನು. ಅವನು ತಾನು ಕೈಕೊಂಡ ನೆಯ್ಗೆಯ ಕಾಯಕದಲ್ಲಿ ತತ್ಪರನಾದನು. ಅದರಿಂದ ಬಂದದ್ದರಿಂದ ಗುರು ಲಿಂಗ ಜಂಗಮ ದಾಸೋಹ ಕಾರ್ಯಗಳನ್ನು ನಡಿಸುತ್ತ ಜನರಿಗೆ ಬೋಧಿಸುತ್ತ ರಾಮನಾಥನನ್ನು ಭಜಿಸುತ್ತ ಮುದುನೂರಲ್ಲಿ ಇರಹತ್ತಿದನು.

ಈ ಪ್ರಕಾರ ದಾಸಿಮಯ್ಯನು ಜಯಸಿಂಹನ ಬಳಿಯಲ್ಲಿ ರಾಜಭೋಗಗಳನ್ನು ಅನುಭವಿಸುತ್ತ ಅವನಲ್ಲಿರಲು ಬಯಸಲಿಲ್ಲ. ಶಿವಶರಣರ ಪದ್ಧತಿಯ ಪ್ರಕಾರ ಅವನು ತನ್ನ ಇಷ್ಟದೇವತೆಯ ಬಳಿಗೆ ಬಂದು ತನ್ನ ನೆಯ್ಗೆಯ ಕಾಯಕವನ್ನು ಮಾಡುತ್ತ ಜನರನ್ನು ಉದ್ಧಾರ ಮಾಡುವ ಕಾರ್ಯದಲ್ಲಿ ಕಡೆಯ ವರೆಗೆ ಉಳಿದನು. ಶಿವಶರಣರ ಮಾರ್ಗವು ಇದೇ ಆಗಿರುತ್ತದೆ.

ಹೀಗೆ ಕೆಲವು ದಿವಸಗಳಾದ ಬಳಿಕ ಪರಮಾತ್ಮನಲ್ಲಿ ಸಾಮರಸ್ಯವನ್ನು ಹೊಂದಬೇಕೆಂಬ ಅಪೇಕ್ಷೆಯು ದಾಸಿಮಯ್ಯನಲ್ಲಿ ಉಂಟಾಯಿತು. ಆಗ ಅವನು ರಾಮನಾಥನ ಬಳಿಗೆ ಹೋಗಿ ಅವನನ್ನು ನಮಿಸಿ--- ನಾನು ನಿನ್ನ ಅನುಜ್ಞೆಯನ್ನು ಹೊಂದಿ ಈ ಮಹೀತಳಕ್ಕೆ ಬಂದೆನು. ಈ ವರೆಗೆ ನನ್ನಿಂದ ಆಗಬೇಕಾದುದನ್ನು ನಾನು ನಿನ್ನ ದಯೆಯಿಂದ ಮಾಡಿದೆನು. ಇನ್ನು ಮೇಲೆ ನನ್ನನ್ನು ನಿನ್ನೊಳಗಿರಿಸು ಎಂದು ಪ್ರಾರ್ಥಿಸಿದನು. ಅದಕ್ಕೆ ರಾಮೇಶನು ಮೆಚ್ಚಿ ತನ್ನ ನಿಜರೂಪು ದೋರಿದನು. ಇದನ್ನು ದಾಸಿಮಯ್ಯನ ಹೆಂಡತಿಯು ತಿಳಿದು ಅಲ್ಲಿಯೇ ಬಂದು ರಾಮೇಶ್ವರನಿಗೆ — ಪತಿಯ ನಡೆಯೇ ನನ್ನ ನಡೆ. ಅವನೊಡನೆ ನನ್ನನ್ನು ನಿನ್ನಲ್ಲಿ ಇಂಬಿಟ್ಟುಕೊಳ್ಳು ಎಂದು ಬೇಡಿಕೊಂಡಳು. ಹೀಗೆ ಉಭಯ ಸತಿಪತಿಗಳು ಪರಮಾತ್ಮನನ್ನು ಸ್ಮರಿಸುತ್ತಿರಲು ಅವನಲ್ಲಿಯೇ ಲಯವಾದರು.

ಮೇಲಿನ ವಿವರಣೆಗಳಿಂದ ದೇವರದಾಸಿಮಯ್ಯನು ಉಚ್ಚತರಗತಿಯ ಶಿವಶರಣನೆಂಬುದು ವಾಚಕರಿಗೆ ಗೊತ್ತಾಗದೆ ಇರದು. ಅವನ ಚರಿತ್ರೆಯಲ್ಲಿಯ ಅನೇಕ ಸಂಗತಿಗಳು ಅತ್ಯಂತ ಬೋಧಪ್ರದವಾಗಿರುತ್ತವೆ.

ದೇವರದಾಸಿಮಯ್ಯನು ಒಬ್ಬ ಐತಿಹಾಸಿಕ ಪುರುಷನಾಗಿದ್ದನೆಂಬುದು ಅನೇಕ ಶಿಲಾಶಾಸನಗಳಿಂದ ವ್ಯಕ್ತವಾಗುತ್ತದೆ. ಅವುಗಳನ್ನು ನಾವು ಮುಂದೆ ಉಲ್ಲೇಖಿಸುವೆವು. ಅನೇಕ ವೀರಶೈವ ಮಹಾಕವಿಗಳು ಅವನನ್ನು ತಮ್ಮ ಗ್ರಂಥಗಳಲ್ಲಿ ಅತ್ಯಂತ ಪೂಜ್ಯಭಾವದಿಂದ ಸ್ಮರಿಸಿರುತ್ತಾರೆ. ಅವನು ಬಸವೇಶ್ವರನಕಿಂತಲೂ ನೂರು, ನೂರಾಐವತ್ತು ವರ್ಷಗಳ ಮೊದಲು ಉದ್ಭವಿಸಿ ಧರ್ಮೋದ್ಧಾರ ಕಾರ್ಯಗಳನ್ನು ಬಹು ವಿಧವಾಗಿ ಮಾಡಿದ್ದಾನೆ. ಅವನು ವಚನಕಾರನೂ ಇದ್ದಾನೆ. ಆದ್ದರಿಂದ ಅವನು ಮಾಡಿದ ಪ್ರಯತ್ನಗಳನ್ನು ಚನ್ನಾಗಿ ವಿಮರ್ಶಿಸುವದರಿಂದ ಪುರಾತನ ಕಾಲದಲ್ಲಿದ್ದ ವೀರಶೈವ ಸಮಾಜದ ಸ್ಥಿತಿಗತಿಯ ಮೇಲೆ ಮಹತ್ವದ ಪ್ರಕಾಶವು ಬೀಳುವಂತಿದೆ.

೧೧ನೇ ಮತ್ತು ೧೨ನೇ ಶತಮಾನಗಳಲ್ಲಿ ಕರ್ನಾಟಕದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳು ಬಹು ಒತ್ತರದಿಂದ ನಡೆದ ಹಾಗೆ ಕಂಡುಬರುತ್ತದೆ. ಈ ಕಾಲದಲ್ಲಿ ಇಲ್ಲಿ ಅನೇಕ ಮತಗಳು ಉದ್ಭವಿಸಿದ್ದವು. ಅವುಗಳಲ್ಲಿ ಶೈವ, ವೀರಶೈವ, ಕಾಳಾಮುಖ ಮತಗಳು ಪ್ರಾಬಲ್ಯವನ್ನು ಹೊಂದಿ ಅಲ್ಲಿಯವರೆಗೆ ಹೆಚ್ಚಾಗಿ ಪ್ರಚಲಿತವಿದ್ದ ಜೈನಮತವನ್ನು ಹಿಂದಕ್ಕೊತ್ತುವದರಲ್ಲಿ ತೊಡಗಿದ್ದವೆಂದು ತೋರುತ್ತದೆ. ಈ ಸಮಾಜಗಳಲ್ಲೆಲ್ಲ ಧರ್ಮಾಂತರಗಳು ದೊಡ್ಡ ಪ್ರಮಾಣದಿಂದ ಪರಸ್ಪರ ನಡೆಯುತ್ತ ಇದ್ದುದು ತಿಳಿದುಬರುತ್ತದೆ. ಇದು ಆಗಿನ ಸಮಾಜಗಳ ಶೈಥಿಲ್ಯವನ್ನು ತೋರಿಸುತ್ತದೆ. ಆದರೆ ೧೨ನೇ ಶತಮಾನದಲ್ಲಿ ವೀರಶೈವ ಧರ್ಮವು ವಿಶೇಷವಾಗಿ ಪ್ರಾಚುರ್ಯವನ್ನು ಹೊಂದಲು ಆಗ ಇಂಥ ಪರಿಸ್ಥಿತಿಯು ಹೊರಟುಹೋಯಿತು. ಈ ಚಳವಳಿಯ ಪ್ರಾರಂಭ ಕಾಲದಲ್ಲಿ ದೇವರದಾಸಿಮಯ್ಯನು ಕರ್ನಾಟಕದಲ್ಲಿ ಉದ್ಭವಿಸಿ ಅತ್ಯಂತ ಮಹತ್ತರವಾದ ಕಾರ್ಯಗಳನ್ನು ಮಾಡಿದ್ದು ಅವನ ಚರಿತ್ರೆಯಿಂದ ಕಂಡುಬರುತ್ತದೆ.

ದೇವರದಾಸಿಮಯ್ಯನು ಉದ್ಭವಿಸಿದ ಕಾಲದಲ್ಲಿ ಶೈವ, ವೈಷ್ಣವರಲ್ಲಿ ಅನೇಕತರದ ಭೇದವಿಭೇದಗಳುಂಟಾಗಿದ್ದವು. ಅಲ್ಲದೆ ಶಾಕ್ತರು, ಕಾಪಾಲಿಕರು, ಕಾಳಾಮುಖರು ಪ್ರಬಲಿಗೆ ಬಂದು, ಅವರ ಅನುಯಾಯಿಗಳು ಕೆಲವೊಂದು ಸಿದ್ಧಿಯನ್ನು ಸಾಧಿಸುವದಕ್ಕೋಸುಗ ಕ್ರೂರವಾದ ಮತ್ತು ನೀತಿಗೆ ಹೊರತಾದ ಆಚರಣೆಗಳನ್ನು ಸಹ ಆಚರಿಸುವವರಾಗಿದ್ದರು. ಸಮಾಜದ ಇಂಥ ಅವನತಿಯ ಕಾಲದಲ್ಲಿಯೇ ಮಹಾಪುರುಷರು ನಾಡಿನಲ್ಲಿ ಜನಿಸುತ್ತಾರೆ ಮತ್ತು ಕ್ರಾಂತಿಕಾರಕ ಕಾರ್ಯಗಳನ್ನು ಮಾಡುತ್ತಾರೆ.

ದೇವರದಾಸಿಮಯ್ಯನು ಜನಿಸಿದ್ದರ ಬಗ್ಗೆ ವೀರಶೈವ ಪುರಾಣಗಳಲ್ಲಿ ದಂತಕಥೆಯು ಇರುವದೇನೆಂದರೆ— ನಾರದಮಹರ್ಷಿಯು ಈ ಕಾಲದಲ್ಲಿ ಧಾರ್ಮಿಕ ಅವನತಿಯು ನಾಡಿನಲ್ಲಿ ಉಂಟಾದದ್ದನ್ನು ತಿಳಿದು ಅವನು ಇದನ್ನು ನಿವಾರಿಸಬೇಕೆಂದು ಶಿವನಿಗೆ ಬಿನ್ನವಿಸಲು ಶಿವನು ಈ ಸ್ಥಿತಿಯನ್ನು ದೂರಮಾಡುವದಕ್ಕೋಸ್ಕರ ತನ್ನ ಸಮೀಪದಲ್ಲಿದ್ದ ದೇವಾಂಗ ಗಣೇಶ್ವರನಿಗೆ ಆಜ್ಞಾಪಿಸಿದನು. ಆಗ ಈ ಗಣೇಶ್ವರನು ಮುದನೂರಲ್ಲಿ ಕಾಮಯ್ಯ ಮತ್ತು ಶಂಕರೀ ಇವರ ಉದರದಲ್ಲಿ ಜನಿಸಿದನು. ದೇವರದಾಸಿಮಯ್ಯನು ಹೀಗೆ ಜನಿಸಿದ ಬಳಿಕ ಅವನು ಅನೇಕ ಬಗೆಯ ಸಮಾಜೋದ್ಧಾರ ಕಾರ್ಯಗಳನ್ನು ಅನೇಕ ರೀತಿಯಿಂದ ಜರಿಗಿಸುತ್ತ ಬಂದನೆಂಬುದು ಅವನ ಚರಿತ್ರೆಯಿಂದ ಸ್ಪಷ್ಟವಾಗಿ ತೋರಿಬರುತ್ತದೆ.

ದೇವರದಾಸಿಮಯ್ಯನು ಉಚ್ಚತರಗತಿಯ ಬೋಧಕನಿದ್ದಾನೆ. ವೀರಶೈವ ಶಿವಶರಣರಲ್ಲಿ ರೇವಣಸಿದ್ಧೇಶ್ವರ, ಪಂಡಿತಾರಾಧ್ಯ, ವರದಾನಿ ಗುಡ್ಡವ್ವೆ, ಅಲ್ಲಮಪ್ರಭು ಹೀಗೆ ಅನೇಕ ಬೋಧಕರು ಆಗಿಹೋಗಿದ್ದು, ಇಂಥ ಮಹಾನುಭಾವರ ವರ್ಗದಲ್ಲಿ ಅವನು ಬರುತ್ತಾನೆ. ಅವನು ಶ್ರೀಶೈಲ ಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ದೀಕ್ಷೆಯನ್ನು ಹೊಂದಿದಬಳಿಕ ಅಂದಿನಿಂದ ಅಂತ್ಯಕಾಲದವರೆಗೂ ಬಹುಜನ ಸಮಾಜದಲ್ಲಿ ವೀರಶೈವ ಧರ್ಮತತ್ವಗಳನ್ನು ಪ್ರಸಾರಮಾಡುತ್ತ ಹೋದುದು ತಿಳಿದು ಬರುತ್ತದೆ.

ದೇವರ ದಾಸಿಮಯ್ಯನು ತನ್ನ ಬೋಧ ಮಾಡುವ ಕಾರ್ಯವನ್ನು ಕರ್ನಾಟಕದ ಕೆಲವೊಂದು ಭಾಗದಲ್ಲಿಯೇ ಹೆಚ್ಚಾಗಿ ಮಾಡಿದ್ದಾನೆಂದು

ತೋರುತ್ತದೆ. ಈ ಭಾಗವು ಪೂರ್ವಕ್ಕೆ ಶ್ರೀಶೈಲದಿಂದ ಹಿಡಿದು ಪಶ್ಚಿಮಕ್ಕೆ ವಿಜಾಪುರ ಜಿಲ್ಲೆಯ ಮಧ್ಯದವರೆಗೂ ಇತ್ತೆಂದು ಅವನ ಚರಿತ್ರೆಯಿಂದ ತಿಳಿದು ಬರುತ್ತದೆ. ಅವನು ಈ ಕ್ಷೇತ್ರದ ಹೊರಗೆ ಹೋದದ್ದು ಬಹುಶಃ ಕಂಡು ಬರುವದಿಲ್ಲ. ಆದರೆ ರೇವಣಸಿದ್ಧೇಶ್ವರ, ಅಲ್ಲಮಪ್ರಭು, ಮೊದಲಾದವರ ಸಂಚಾರವು ಉತ್ತರಕ್ಕೆ ಕಾಶೀ ಪಟ್ಟಣದಿಂದ ದಕ್ಷಿಣಕ್ಕೆ ತಮಿಳು ದೇಶದವರೆಗೂ ಇತ್ತೆಂದು ಅವರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಆದರೆ ದೇವರ ದಾಸಿಮಯ್ಯನ ಬೋಧೆಯ ಮೂಲಕ ವೀರಶೈವ ಧರ್ಮದ ಪರಿಣಾಮಗಳು ನಾಡಿನ ಕೆಲವೊಂದು ವಿಶಿಷ್ಟ ಭಾಗದಲ್ಲಿ ಸ್ಥಿರತರವಾಗಿ ಉಳಿಯಲಿಕ್ಕೆ ಕಾರಣವಾಯಿತು. ಇದರಿಂದ ದೇವರ ದಾಸಿಮಯ್ಯನಿದ್ದ ಪ್ರಾಂತದಲ್ಲಿ ಶಿವಶರಣರು ಅವನ ತರುವಾಯ ಸ್ವಲ್ಪ ಕಾಲದಲ್ಲಿಯೇ ಅಸಂಖ್ಯಾತವಾಗಿ ಜನಿಸಿದ್ದು ಕಂಡು ಬರುತ್ತದೆ. ಇವರ ಮೂಲಕ ಕಲಬುರ್ಗಿ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಒಂದು ದೊಡ್ಡ ಸಾಮಾಜಿಕ ಕ್ರಾಂತಿಯು ಉಂಟಾಯಿತು.

ಈಗಿನ ಚರಿತ್ರೆಯಲ್ಲಿ ದೇವರ ದಾಸಿಮಯ್ಯನು ಜನರಿಗೆ ಬೋಧ ಮಾಡಿದ್ದರ ಕೆಲವು ವಿಷಯಗಳು ಬಂದಿರುತ್ತವೆ. ಅವುಗಳನ್ನು ನಾವು ಪರಿಶೀಲಿಸಿದಲ್ಲಿ ದೇವರದಾಸಿಮಯ್ಯನು ಪವಾಡಗಳ ಮೂಲಕ ಜನರಲ್ಲಿ ಮತತತ್ವ ಪ್ರಚಾರ ಮಾಡಿದ್ದು ವಿಶೇಷವಾಗಿ ಕಂಡುಬರುವದಿಲ್ಲ. ಈ ಪವಾಡಗಳು ಅವನ ಚರಿತ್ರೆಯಲ್ಲಿ ಅಲ್ಲಲ್ಲಿ ಕಂಡು ಬಂದರೂ ಅವುಗಳಿಗೆ ಮುಖ್ಯ ಸ್ಥಾನವು ಇರುವದಿಲ್ಲ. ದೇವರದಾಸಿಮಯ್ಯನು ತನ್ನ ಬೋಧೆಯಲ್ಲಿ ಉಚ್ಚವಿಚಾರಗಳು, ಧರ್ಮತತ್ವಗಳು, ನಡೆನುಡಿಗಳು, ಇವುಗಳಿಗೆ ಮಹತ್ವವನ್ನು ಕೊಟ್ಟಿರುತ್ತಾನೆ. ಅವನು ಜನರಲ್ಲಿರುವ ಅಜ್ಞಾನದ ಲಾಭವನ್ನು ತೆಗೆದುಕೊಂಡು ಪವಾಡಗಳ ಮೂಲಕ ಅಂಧಶ್ರದ್ಧೆಯನ್ನು ಹುಟ್ಟಿಸಲು ಯಾವಾಗಲೂ ಪ್ರಯತ್ನ ಮಾಡಿಲ್ಲ. ಅವನು ಜನರಲ್ಲಿ ತಿಳುವಳಿಕೆಯನ್ನು ಹುಟ್ಟಿಸಿ ಅವರಿಗೆ ಸತ್ಯವಾದುದು ಅವುದು ಎಂಬುದನ್ನು ತಿಳಿಸಿ ಅವರಲ್ಲಿ ನಂಬಿಗೆಯನ್ನು ಹುಟ್ಟಿಸಿ ಅವರಿಗೆ ದೀಕ್ಷೆಯನ್ನು ಕೊಟ್ಟಿದ್ದಾನೆ. ಇದು ಅವನ ಕಾರ್ಯಗಳ ವೈಶಿಷ್ಟ್ಯವಾಗಿರುತ್ತದೆ.

ಇದರಿಂದ ದೇವರದಾಸಿಮಯ್ಯನು ಅತ್ಯಂತ ವಿದ್ವಾಂಸನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಅವನು ವೇದವೇದಾಂತಗಳು, ಉಪ

ನಿಷತ್ತು ಆಗಮಾದಿ ಗ್ರಂಥಗಳು ಇವುಗಳನ್ನು ಚನ್ನಾಗಿ ಪರಿಶೀಲಿಸಿದವನಾಗಿದ್ದನೆಂದು ತೋರುತ್ತದೆ. ಅವನ ವಚನಗಳಲ್ಲಿ ಬರುವ ಸಂಸ್ಕೃತ ಅವತರಣಗಳ ಮೇಲಿಂದ ಈ ಅನುಮಾನವು ದೃಢಪಡುತ್ತದೆ. ಒಂದು ವೇಳೆ ಅವನು ವಿದ್ವಾಂಸನಾಗದೆ ಹೋಗಿದ್ದರೆ ಅವನು ಪರಮತಗಳ ಖಂಡನೆಯನ್ನು ಮಾಡಲು ಸಾಮರ್ಥ್ಯವನ್ನು ಹೊಂದುತ್ತಿದ್ದಿಲ್ಲ. ಬೋಧಕನು ತನ್ನ ಕಾರ್ಯವನ್ನು ಮಾಡುವಲ್ಲಿ ಅವನಿಗೆ ಅನೇಕತರದ ಜನರ ಸಂಬಂಧವು ಉಂಟಾಗುವದರಿಂದ ಅವರೊಡನೆ ವಾದಮಾಡುವ ಪ್ರಸಂಗಗಳು ಆಗಿಂದಾಗ್ಗೆ ಬರುತ್ತವೆ. ಆಗ ಅವನಲ್ಲಿ ಪೂರ್ಣ ವಿದ್ವತ್ತು ಇರದ ಹೊರತು ಅವರ ಮತಗಳನ್ನು ಖಂಡಿಸುವದು ಅವನಿಂದ ಎಂದೂ ಸಮರ್ಪಕವಾಗಿ ಆಗಲಾರದು.

ದೇವರದಾಸಿಮಯ್ಯನು ಎಲ್ಲ ತರಗತಿಯ ಜನರಲ್ಲಿ ಬೆರೆದು ತನ್ನ ಉಪದೇಶ ಕಾರ್ಯಗಳನ್ನು ನಡಿಸಿದ್ದಾನೆ. ಅನೇಕರು ಭಾವಿಸಿರುವಂತೆ ಕೇವಲ ನೇಯ್ಗೆಯವರಲ್ಲಿ ಮಾತ್ರ ಅವನು ಉಪದೇಶ ಮಾಡಿರುವದಿಲ್ಲ. ಅವನು ಅತ್ಯಂತ ಕಾಡುಜನರನ್ನು ಹಿಡಿದು ಉಚ್ಚಸಮಾಜಗಳಾದ ಜೈನ ಬ್ರಾಹ್ಮಣರ ವರೆಗೆ ಎಲ್ಲರಲ್ಲಿಯೂ ತನ್ನ ಧರ್ಮತತ್ವಗಳ ಬೋಧೆಯನ್ನು ಮಾಡಿದ್ದಾನೆ. ಬಹುಜನರು ವೀರಶೈವ ಸಮಾಜದಲ್ಲಿ ಅನೇಕ ಪಂಗಡಗಳಿದ್ದು ಇಂಥ ಪ್ರತಿಯೊಂದು ಪಂಗಡದಲ್ಲಿ ಒಬ್ಬೊಬ್ಬ ಶರಣನು ಹುಟ್ಟಿ ಅವನು ತನ್ನ ಕಾಯಕ ಮಾಡುವ ಜನರಿಗಷ್ಟೇ ಉಪದೇಶಮಾಡಿ ದೀಕ್ಷೆಕೊಡುತ್ತ ಹೋದದ್ದರಿಂದ ವೀರಶೈವ ಸಮಾಜವು ಬೆಳೆಯಿತೆಂದು ಅಭಿಪ್ರಾಯಪಡುತ್ತಾರೆ. ಆದರೆ ಈ ತಿಳುವಳಿಕೆಯು ತಪ್ಪಾದದ್ದೆಂದು ನಮಗೆ ತೋರುತ್ತದೆ. ಯಾಕಂದರೆ ಶಿವಶರಣರ ಕಾರ್ಯಗಳನ್ನು ಮತ್ತು ಅವರ ಗ್ರಂಥಗಳನ್ನು ಅವಲೋಕಿಸಿದಲ್ಲಿ ಅವರಲ್ಲಿ ಯಾರೂ ಹೀಗೆ ತಮ್ಮ ವಿಶಿಷ್ಟಜಾತಿಯನ್ನು ಅನುಲಕ್ಷಿಸಿ ಬೋಧೆ ಮಾಡದೆ ಅವರು ಇಡೀ ಜನತೆಯಲ್ಲಿ ಸರ್ವಸಾಮಾನ್ಯವಾಗಿ ಬೋಧಿಸುತ್ತ ಹೋದದ್ದು ಕಂಡುಬರುತ್ತದೆ. ಹೀಗೆ ಶಿವಶರಣರು ಎಲ್ಲರಲ್ಲಿ ಧಾರ್ಮಿಕಭಾವನೆಯನ್ನು ಹುಟ್ಟಿಸಿ ಎಲ್ಲರಿಗೂ ದೀಕ್ಷೆಯನ್ನು ಮಾಡಿದ್ದಾರೆ. ದೇವರದಾಸಿಮಯ್ಯನಾದರೂ ಈ ರೀತಿಯಂತೆಯೇ ಆಚರಿಸಿದ್ದಾನೆ.

ದೇವರದಾಸಿಮಯ್ಯನು ಹೀಗೆ ಪ್ರಚಾರಕಾರ್ಯ ಮಾಡುತ್ತಿರುವಾಗ ಅವನು ಒಂದು ದಿವಸ ಒಂದು ಅರಣ್ಯವನ್ನು ಪ್ರವೇಶಿಸಲು ಅಲ್ಲಿ ಒಂದು ಕಾಡುಜನರ ಗುಂಪನ್ನು ಕಂಡನು. ಈ ಜನರು ಬೇಟೆಯಾಡುತ್ತ ಮೃಗಗಳ ಮಾಂಸವನ್ನು ತಿನ್ನುತ್ತ ಹಿಂಸಾಚರಣೆಯಲ್ಲಿರುವದನ್ನು ನೋಡಿ ಅವರನ್ನು ಉದ್ಧಾರ ಮಾಡಬೇಕೆಂಬ ಅಪೇಕ್ಷೆಯು ಅವನಲ್ಲಿ ಉಂಟಾಯಿತು. ಆಗ ಅವರಿಗೋಸ್ಕರ ಅವನು ಅಸಹ್ಯಭಾವವನ್ನು ಎಷ್ಟುಮಾತ್ರವೂ ತಾಳದೆ, ಅವರಿಗೆ ಸನ್ಮಾರ್ಗೋಪದೇಶವನ್ನು ಮಾಡಲೆಣಿಸಿ ಹಿಂಸಾಚರಣೆಯನ್ನು ನೀವು ಬಿಟ್ಟುಬಿಡಬೇಕೆಂದು ಅವರಿಗೆ ಅನೇಕ ರೀತಿಯಿಂದ ಉಪದೇಶಿಸಿದನು. ಅವರು ಅವನ ಉಪದೇಶವನ್ನು ಕೇಳಲಾಗಿ ಅವರ ಮನಸ್ಸು ತಿರುಗಿತು. ಮತ್ತು ಅವರು ದೇವರದಾಸಿಮಯ್ಯನಿಂದ ದೀಕ್ಷೆಯನ್ನು ಹೊಂದಲು ಸಿದ್ಧರಾದರು. ದೇವರದಾಸಿಮಯ್ಯನು ಅವರಿಗೆ ಬೇಟೆಯಾಡಬಾರದೆಂದು ತಿಳಿಸಿ ಅವರಿಗೆ 'ತಿಲಕಾಯಕ' ಅಂದರೆ ಎಣ್ಣೆಯನ್ನು ತೆಗೆಯುವ ಉದ್ಯೋಗವನ್ನು ನಿಯಮಿಸಿ ಅದರಿಂದಲೇ ಅವರು ಉಪಜೀವನವನ್ನು ಹೊಂದಬೇಕೆಂದು ಅವರಿಗೆ ಬೋಧಿಸಿದನು. ಹೀಗೆ ಬೋಧಿಸಿ ಈ ಕಾಯಕವನ್ನು ಅವರು ಶ್ರೀಮಲ್ಲಿಕಾರ್ಜುನನ ಸೇವೆಗೋಸ್ಕರ ಮಾಡಬೇಕೆಂದು ಅವರಿಗೆ ಅರುಹಿ ಅಲ್ಲಿಂದ ಅವನು ತೆರಳುವವನಾದನು. ದೇವರದಾಸಿಮಯ್ಯನ ಈ ಕಾರ್ಯದಲ್ಲಿ ಬೋಧಕನು ಹೇಗೆ ನಡೆಯಬೇಕೆಂಬುದರ ವಿವರವು ಬಹು ಬೋಧಪ್ರದವಾಗಿದೆ.

ಮುಂದೆ ದೇವರದಾಸಿಮಯ್ಯನು ಮತ್ತೊಂದು ಊರಿಗೆ ಹೋಗಿರಲು, ಅಲ್ಲಿದ್ದ ವಿಷ್ಣುಭಕ್ತರಾದ ಬ್ರಾಹ್ಮಣರು ಅವನ ಕಡೆಗೆ ಬಂದು ಶಿವನ ನಿಂದೆಯನ್ನು ಮಾಡುತ್ತ ಶಿವನನ್ನು ಪೂಜಿಸುವವರು ಕುಲಗೇಡಿಗಳೆಂದು ಹೀಯಾಳಿಸಲು ಪ್ರಾರಂಭಿಸಿದರು. ಅದಕ್ಕೆ ದಾಸಿಮಯ್ಯನು ಅವರಿಗೆ—ಶಿವನು ವಿಶ್ವಗತನಾಗಿದ್ದಾನೆ, ಅವನಿಗೆ ವಿಷ್ಣುವಿನಂತೆ ಹುಟ್ಟು ಸಾವುಗಳೆಂಬುವು ಇಲ್ಲ, ಅವನೇ ಶ್ರೇಷ್ಠನು, ಅವನು ನಿಜವಾದ ದೇವರು, ಎಂದು ಶಾಸ್ತ್ರಮುಖದಿಂದ ಸಿದ್ಧಪಡಿಸಿ, ಭಕ್ತರಿಗೆ ಲಿಂಗಧಾರಣವಿರುವದರಿಂದ ಅವರಿಗೆ ಕುಲಸೂತಕವೆಂಬುದಿಲ್ಲ, ಅದು ಅವರಲ್ಲಿ ಅಳಿದುಹೋಗುತ್ತದೆಂದು ತಿಳಿಸುವವನಾದನು.

ಈ ಪ್ರಕಾರ ಅವನು ಬೋಧೆಮಾಡುತ್ತ ಸಂಚರಿಸುತ್ತಿರಲು, ಒಂದು ಗ್ರಾಮದಲ್ಲಿ ಒಕ್ಕಲಿಗರ ಪಂಗಡವೊಂದು ಅವನ ದೃಷ್ಟಿಗೆ ಬಿದ್ದಿತು. ಅದರ ಮುಖ್ಯಸ್ಥನನ್ನು ಅವನು ಕಂಡು ಅವನಿಗೆ— ನಿನ್ನ ಕುಲದವರು ಧನಿಕರಿರುವದೇನೋ ನಿಜವು. ಆದರೆ ಅವರಿಗೆ ಆಚಾರಗಳೆಂಬುವು ಗೊತ್ತಿಲ್ಲ. ಅವರು ಒಕ್ಕಲುತನ ಮಾಡುತ್ತ ಯಾವಾಗಲೂ ಹೊಲಸಿನಲ್ಲಿ ಇರುತ್ತಾರೆ. ಅವರು ಕೀಳು ದೈವಗಳನ್ನು ಭಜಿಸುತ್ತಾರೆ. ಅವರು ಅವುಗಳಿಗೆ ಬಲಿಕೊಡುತ್ತಾರೆ. ಇದು ಹಿಂಸೆಯು, ಪಾಪಕರ್ಮವು, ಎಂದು ಬೋಧಿಸಿ ಅವರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟನು.

ಮುಂದೆ ದೇವರದಾಸಿಮಯ್ಯನು ಮಾರ್ಗಕ್ರಮಣ ಮಾಡುತ್ತಿರಲು ಅನೇಕ ಪಟ್ಟಣಗಳಲ್ಲಿ ಬಹುಜನ ಜೈನರು ಅವನನ್ನು ಕಾಣುವವರಾದರು. ಇಂಥಪ್ರಸಂಗಗಳಲ್ಲಿ ಉಭಯತರಲ್ಲಿ ಯಾವಾಗಲೂ ಪರಸ್ಪರ ವಾಗ್ವಾದಗಳಾಗುತ್ತಿದ್ದವು. ಹೀಗೆ ವಾದಗಳು ನಡೆಯಲು ಅವುಗಳಲ್ಲಿ ದೇವರದಾಸಿಮಯ್ಯನು ಅವರಿಗೆ – ದೇವರು ಇದ್ದಾನೆ. ಅವನೇ ವಿಶ್ವಕ್ಕೆ ಕರ್ತನು. ಅವನನ್ನು ನೀವು ನಂಬಬೇಕು. ಶಿವನು ಜಗತ್ತಿನಲ್ಲಿ ಎಲ್ಲೆಲ್ಲಿಯೂ ಪಸರಿಸಿದ್ದಾನೆಂಬುವದನ್ನು ತಿಳಿಯಪಡಿಸುವನು.

ಅನೇಕ ಕಡೆಗೆ ದೇವರದಾಸಿಮಯ್ಯನನ್ನು ನೇಗೆಯ ಕಾಯಕ ಮಾಡುವವರೂ ಕಾಣುತ್ತಬಂದರು. ಅವನು ಅವರಿಗೆ ಶುದ್ಧ ಶಿವಾಚಾರ ಮಾರ್ಗವನ್ನು ಬೋಧಿಸಿ ಅದರಂತೆ ನಡಿಯಿರೆಂದು ಹೇಳುವನು. ಅವರಿಗೆ ಅಂಗಲಿಂಗದ ರೀತಿ, ಷಟ್‌ಸ್ಥಲದ ನಡವಳಿಕೆ ಇವುಗಳನ್ನು ತಿಳಿಸಿ ಹೇಳುವನು. ದೇವರದಾಸಿಮಯ್ಯನು ತಾನು ಸ್ವತಃ ನೇಯಿಗೆಯ ಕಾಯಕವನ್ನು ಮಾಡುತ್ತಿದ್ದರೂ ಅವನು ಆ ಕಾಯಕದವರಿಗಷ್ಟೇ ಹೀಗೆ ಉಪದೇಶಮಾಡದೆ ಸರ್ವರಿಗೂ ಉಪದೇಶ ಮಾಡುತ್ತ ಹೋದನೆಂಬುದು ಅವನ ಚರಿತ್ರೆಯಲ್ಲಿ ಕಾಣಬರುತ್ತಿದೆ.

ಈ ಕಾಲದಲ್ಲಿ ಕರ್ನಾಟಕದಲ್ಲಿ ಯಂತ್ರ ತಂತ್ರ ಮಾಡುವವರೂ ಸಿದ್ಧರೂ ಯೋಗಾಭ್ಯಾಸಿಗಳೂ ಬಹು ಜನರು ಇದ್ದುದು ತಿಳಿದುಬರುತ್ತಿದೆ. ದಾಸಿಮಯ್ಯನು ಅಂಥವರನ್ನು ಕಂಡಾಗ ಅವರಿಗೆ ಇಂಥ ಮಾರ್ಗವು ಮೋಕ್ಷವನ್ನು ಕೊಡಲಾರದೆಂದು ವಾದಿಸಿದ್ದಾನೆ. ಅವರು ಇದಕ್ಕೆ ಕೆರಳಿ ತಮ್ಮ ವಾಮ ಮಾರ್ಗದ ಪ್ರಯೋಗಗಳನ್ನು ಅವನ

ಮೇಲೆ ಮಾಡಿರುವರು. ಆದರೆ ದೇವರದಾಸಿಮಯ್ಯನು ಮಂತ್ರ ಸ್ಮರಣೆಯಿಂದ ಲಿಂಗದ ಕಳೆಗಳನ್ನು ತನ್ನಲ್ಲಿ ಪ್ರಜ್ವಲಗೊಳಿಸಿದವನು. ಆದ್ದರಿಂದ ಅವರ ತಂತ್ರಗಳು ಅವನ ಮೇಲೆ ಯಾವ ಪರಿಣಾಮವನ್ನೂ ಮಾಡಿರುವದಿಲ್ಲ.

ಈ ಪ್ರಕಾರ ದೇವರದಾಸಿಮಯ್ಯನು ಎಲ್ಲ ವರ್ಗದ ಜನರಲ್ಲಿ ಸದಾಚಾರ, ಧರ್ಮ, ನೀತಿ, ಶುದ್ಧವರ್ತನೆ, ಅಹಿಂಸಾಚರಣೆ, ಲಿಂಗಾನುಭವ, ಷಟ್‌ಸ್ಥಲ ಇವುಗಳನ್ನು ಬೋಧಿಸುತ್ತ ಸಂಚರಿಸುತ್ತ ಬಂದನು. ಅವನು ತನ್ನ ಪ್ರಚಾರ ಕಾರ್ಯದಲ್ಲಿ ವೀರಶೈವೋಪದೇಶಕರಾಗಿರುವ ಜಂಗಮರು ಅವನನ್ನು ಕಾಣುತ್ತಾರೆ. ಆದರೆ ಅವರು ತಮ್ಮ ಉಪದೇಶ ಮಾಡುವ ಕಾರ್ಯವನ್ನು ದುರ್ಲಕ್ಷಿಸಿ ದುರಾಚಾರವುಳ್ಳವರಾಗಿದ್ದುದು ಅವನಿಗೆ ಕಂಡುಬಂದಲ್ಲಿ ಅವರನ್ನು ಸಹ ಟೀಕಿಸಲಿಕ್ಕೆ ಅವನು ಹಿಂದೆಗೆದಿರುವದಿಲ್ಲ. ಜಂಗಮರು ಗ್ರಾಸಕ್ಕಾಗಿ ಆಸೆಮಾಡಿ ಉದರವನ್ನು ಹೊರೆದರೆ ಅವರ ವೇಷವು ವೇಶಿಯಿಂದಲೂ ಕರಕಷ್ಟವೆಂತಲೂ ಕಂಡ ಕಂಡವರಿಗೆ ಕೈಯೊಡ್ಡಿ ಬೇಡುವ ಇಂಥ ಭಂಡರನ್ನು ಪರಮಾತ್ಮನು ಒಲ್ಲನೆಂತಲೂ ವೇಷವ ಹೊತ್ತು ದೋಷದಲ್ಲಿ ನಡೆದರೆ ಪರಮಾತ್ಮನು ಅವರನ್ನು ನರಕದಲಿಕ್ಕುವನೆಂತಲೂ ಅನೇಕ ಬಗೆಯಾಗಿ ಇಂಥವರನ್ನು ಕಟುತರವಾಗಿ ತನ್ನ ಉಕ್ತಿಗಳಲ್ಲಿ ನಿಂದಿಸಿರುವನು.

ಈ ಪ್ರಕಾರ ದೇವರದಾಸಿಮಯ್ಯನು ಷಟ್‌ಸ್ಥಲದ ಮಾರ್ಗವನ್ನು ಎಲ್ಲ ಜನರಲ್ಲಿ ಪ್ರಸಾರಮಾಡುತ್ತ ನಾಡಿನಲ್ಲಿ ಸಂಚರಿಸಿದ್ದಾನೆ. ಅವನು ಉಪದೇಶಿಸುತ್ತಿದ್ದ ತತ್ವಗಳು ಅವನು ರಚಿಸಿದ ವಚನಗಳಲ್ಲಿ ಬಹಳ ಅತ್ಯುತ್ತಮವಾಗಿ ನಿರೂಪಿಸಲ್ಪಟ್ಟಿವೆ. ಅವುಗಳನ್ನು ವಾಚಕರು ಅವಶ್ಯವಾಗಿ ಓದಬೇಕು. ಅವನು ಅತ್ಯಂತ ವಿಶಾಲವಾದ ಧಾರ್ಮಿಕ ತತ್ವಗಳನ್ನು ಅಚ್ಚಗನ್ನಡ ನುಡಿಯಲ್ಲಿ ಹೇಳಿದ್ದು ಕಂಡುಬರುತ್ತದೆ. ಅವನು ಅತ್ಯಂತ ಸಾಮಾನ್ಯ ಜನರಿಗೆ ತಿಳಿಯುವಂತೆ ವಾಡಿಕೆಯ ಉದಾಹರಣೆಗಳನ್ನು ಕೊಡುತ್ತ ಉಚ್ಚ ತತ್ವಗಳನ್ನು ಅವುಗಳಲ್ಲಿ ನಿರೂಪಿಸಿದ್ದಾನೆ. ಅವನ ಮಾತಿನ ದಾಟಿಯು ಬಹು ಮಿಗಿಲಾದದ್ದಿರುತ್ತದೆ. ಅವನು ತನ್ನ ಉಕ್ತಿಗಳಲ್ಲಿ, ಬಂಡಿ-ಅಪರ ಕೀಲು, ಉರಿ-ಹುಲ್ಲು, ಎಳ್ಳು-ಎಣ್ಣೆ, ಆಕಳ ಕೆಚ್ಚಲು-ಹಾಲು ಇಂಥ ವಾಡಿಕೆಯ ಉದಾಹರಣೆಗಳನ್ನು ಕೊಡುತ್ತ ಉದಾತ್ತ ತತ್ವಗಳನ್ನು ವಿವೇಚಿಸಿದ್ದಾನೆ.

ದೇವರದಾಸಿಮಯ್ಯನ ಈ ಧರ್ಮಪ್ರಸಾರ ಕಾರ್ಯಗಳ ಮೂಲಕ ಆಗಿನ ಎಲ್ಲ ವರ್ಗದ ಜನರು ವೀರಶೈವ ಮತವನ್ನು ಸ್ವೀಕರಿಸಿದಂತೆ ಅವನ ಚರಿತ್ರೆಯಿಂದ ತಿಳಿದುಬರುತ್ತದೆ. ಅವನು ಇದರಲ್ಲಿ ಯಾರ ಮೇಲೂ ಒತ್ತಾಯ ಅಥವಾ ಮೋಸವನ್ನು ಮಾಡಲು ಪ್ರಯತ್ನಿಸಿಲ್ಲ. ಅವನು ವೀರಶೈವ ಮತದಲ್ಲಿರುವ ಉದಾರ ತತ್ವಗಳು, ನೀತಿಯ ನಡೆಗಳು, ಲಿಂಗಾನುಭವದ ರೀತಿಗಳು, ಇವುಗಳನ್ನು ಪ್ರಸಾರಮಾಡುತ್ತ ಬಹುಜನ ಸಮಾಜದ ಮನಸ್ಸನ್ನು ಆಕರ್ಷಿಸಿರುತ್ತಾನೆ. ಇದರಿಂದ ಅವನು ಸಂಚಾರ ಮಾಡಿದಲ್ಲೆಲ್ಲ ಜನರು ಅವನ ಇಷ್ಟದೇವತೆಯಾದ ರಾಮೇಶ್ವರ ಅಥವಾ ರಾಮನಾಥ ಈ ಹೆಸರಿನಿಂದ ಅನೇಕ ದೇವಾಲಯಗಳನ್ನು ಸ್ಥಾಪಿಸಿದರು. ರಾಮೇಶ್ವರ ಮತ್ತು ರಾಮನಾಥ ಈ ಹೆಸರುಗಳು ಒಂದೇ ಇವೆ. ಶ್ರೀಶೈಲಕ್ಕೆ ಸಮೀಪದಲ್ಲಿ ನಂದೀಗ್ರಾಮವೆಂಬುದಿದ್ದು ಇದು ಇತ್ತ ಭಾಗದಿಂದ ವಿಜಾಪುರ ಜಿಲ್ಲೆಯ ಮಧ್ಯಪ್ರದೇಶದಲ್ಲಿದ್ದ ಚಿಮ್ಮಲಗಿಯ ಪ್ರದೇಶ ವರೆಗೂ ಈ ಹೆಸರಿನ ಅನೇಕ ದೇವಾಲಯಗಳು ಈಗಲೂ ಇವೆ. ಆದ್ದರಿಂದ ಈ ಭಾಗದಲ್ಲಿಯೇ ದೇವರ ದಾಸಿಮಯ್ಯನು ತನ್ನ ಧರ್ಮೋದ್ಧಾರ ಕಾರ್ಯಗಳನ್ನು ನಡಿಸಿರಬೇಕೆಂಬ ಅನುಮಾನವು ಉಂಟಾಗುತ್ತದೆ.

ಈ ಕಾಲದಲ್ಲಿ ಜಯಸಿಂಹರಾಜನು ಚಾಲುಕ್ಯ ಚಕ್ರವರ್ತಿಯಾಗಿ ರಾಜ್ಯವಾಳುತ್ತಿದ್ದನು. ಕ್ರಿ. ಶ. ೯೭೩ ರಲ್ಲಿ ನೂರ್ಮಡಿ ತೈಲಪನು ರಾಷ್ಟ್ರಕೂಟ ರಾಜರನ್ನು ಸದೆಬಡಿದು ಚಾಲುಕ್ಯಾಧಿಪತ್ಯವನ್ನು ಪುನರುಜ್ಜೀವನಗೊಳಿಸಿದನು. ಅವನ ತರುವಾಯ ೯೯೭ ರಿಂದ ೧೦೦೮ ರ ವರೆಗೆ ಸತ್ಯಾಶ್ರಯನೆಂಬ ರಾಜನು ರಾಜ್ಯವಾಳಿದನು. ಅವನ ತರುವಾಯ ಜಯಸಿಂಹನು ಪಟ್ಟವೇರಿದನು. ಅವನು ಆ ವರೆಗೆ ಚಿಕ್ಕದಾಗಿದ್ದ ತನ್ನ ರಾಜ್ಯವನ್ನು ಎಲ್ಲ ಕಡೆಗೂ ವಿಸ್ತಾರಪಡಿಸಿದನು. ಅವನು ಕೊಂಕಣ ಪ್ರಾಂತದ ಅಧಿಪತಿಗಳನ್ನೂ ಚೋಳರಾಜರನ್ನೂ ಜಯಿಸಿ ಮೊದಲು ಕಳೆದುಹೋಗಿದ್ದ ರಾಜ್ಯಗಳನ್ನು ಅಂಕಿತಮಾಡಿಕೊಂಡನು. ಅವನು ಮೊದಲು ಬಳ್ಳಿಗಾವಿ, ಆ ಮೇಲೆ ಯಾದಗಿರಿ, ಆ ಮೇಲೆ ೧೦೩೩ ರಲ್ಲಿ ಕೊಳ್ಳಿಪಾಕಿ, ಅದರ ತರುವಾಯ ಪೊಟ್ಟಲಕೆರೆ ಈ ಸ್ಥಳಗಳನ್ನು ತನ್ನ ರಾಜಧಾನಿಗಳನ್ನಾಗಿ ಮಾಡಿಕೊಂಡು ರಾಜ್ಯವಾಳಿದನು.

ಕರ್ನಾಟಕ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧಿಹೊಂದಿದ ಅಕ್ಕಾದೇವಿಯು ಇವನ ಅಕ್ಕನಾಗಿದ್ದು ಅವಳು ಈ ಕಾಲದಲ್ಲಿ ವಿಜಾಪುರ ಜಿಲ್ಹಾ ಹುನಗುಂದ ತಾಲೂಕಿನಲ್ಲಿರುವ ಅರಸಿಬಿಡಿ (ಇದರ ಹಿಂದಿನ ಹೆಸರು ವಿಕ್ರಮಪುರ) ಈ ಸ್ಥಳದಲ್ಲಿ ತನ್ನ ತಮ್ಮನ ಸಾಮಂತಳಾಗಿ ರಾಜ್ಯ ಭಾರ ಮಾಡುತ್ತಿದ್ದಳು. ಹೀಗೆ ಅತ್ಯಂತ ಪ್ರಾಬಲ್ಯವನ್ನು ಹೊಂದಿದ ಜಯಸಿಂಹರಾಜನಿಗೆ ಸುಗ್ಗಲಾದೇವಿ ಇವಳು ಪಟ್ಟದ ರಾಣಿಯಾಗಿದ್ದಳು. ಇವಳು ವೀರಶೈವ ಶಿವಶರಣೆಯರಲ್ಲಿ ಅತ್ಯಂತ ಪ್ರಸಿದ್ಧಳಾಗಿದ್ದಾಳೆ. ಇವಳು ದೇವರದಾಸಿಮಯ್ಯನಿಗೋಸ್ಕರ ಭಕ್ತಿಯನ್ನು ತಾಳಿ ಅವನ ವೀರಶೈವ ಧರ್ಮಪ್ರಸಾರ ಕಾರ್ಯಕ್ಕೆ ಅತ್ಯಂತ ಉತ್ತೇಜನವನ್ನು ಕೊಟ್ಟಿದ್ದಾಳೆ. ಅದರ ವಿವರವು ಈ ಚರಿತ್ರೆಯಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುತ್ತದೆ.

ಸುಗ್ಗಲಾದೇವಿಯು ಅತ್ಯಂತ ದೃಢಮನಸ್ಸಿನವಳೂ ದೇವರದಾಸಿಮಯ್ಯನಿಗೋಸ್ಕರ ಗಾಢವಾದ ಭಕ್ತಿಯುಳ್ಳವಳೂ ವಿರೋಧಿಗಳು ಎಷ್ಟು ವಿರೋಧಿಸಿದರೂ ಅದಕ್ಕೆ ಅಂಜದವಳೂ ಆಗಿ ವರ್ತಿಸಿದ್ದಾಳೆ. ಇದರಿಂದ ಆರಂಭದ ಸ್ಥಿತಿಯಲ್ಲಿದ್ದ ಆಗಿನ ವೀರಶೈವ ಮತಕ್ಕೆ ಅತ್ಯಂತ ಪ್ರೋತ್ಸಾಹವು ಉಂಟಾಯಿತು. ಇದರಲ್ಲಿ ಅವಳು ರಾಜನಾದ ತನ್ನ ಪತಿಯ ಕೋಪವನ್ನು ಸಹ ಲೆಕ್ಕಿಸಿರುವದಿಲ್ಲ ಈ ಪ್ರಕಾರ ಅವಳು ದೇವರದಾಸಿಮಯ್ಯನಿಗೆ ಸಹಾಯಕಳಾಗಿ ವೀರಶೈವಮತವನ್ನು ವಿಸ್ತರಿಸಲು ಕಾರಣಳಾಗಿದ್ದಾಳೆ ಅಂದಿನಿಂದ ಹೇಗೆ ಹೇಗೆ ವೀರಶೈವಮತ ಪ್ರಸಾರವು ನಾಡಿನಲ್ಲಿ ಹೆಚ್ಚುತ್ತ ಹೋಯಿತೋ ಹಾಗೆಯೇ ಅವಳ ಖ್ಯಾತಿಯೂ ಕೂಡ ಬೆಳೆಯುತ್ತಲೇ ಬಂದಿತು. ಆಕೆಯ ಮಹತ್ವವು ಎಷ್ಟು ಇತ್ತು ಎಂಬುದು ಮೈಸೂರು ಪ್ರಾಂತ, ಹಾಸನ ಜಿಲ್ಹಾ, ಬೇಲೂರ ತಾಲೂಕಿನಲ್ಲಿರುವ ಹಳೇಬೀಡಿನಲ್ಲಿಯ ಒಂದು ಶಿಲಾಶಾಸನದಿಂದ ಗೊತ್ತಾಗುತ್ತದೆ. (ಎಪಿಗ್ರಾಫಿಕಾ ಕರ್ನಾಟಿಕಾ-ಹಾಸನ ಜಿಲ್ಹಾ ಶಿಲಾಶಾಸನ ನಂ: ೧೧೩ ನೋಡಿರಿ.) ಇದರಲ್ಲಿ ಸುಗ್ಗಳೆಯ ಉಲ್ಲೇಖವಿದ್ದು ಅದರ ಸಂದರ್ಭವನ್ನು ವಾಚಕರು ಅರಿಯುವದು ಬಹಳ ಅವಶ್ಯವಿದೆ.

ಈ ಶಾಸನದ ವರ್ಷವು ೧೨೦ ಇದ್ದು, ಹೊಯಿಸಳ ದೇಶವನ್ನು ಆಗ ಆಳುತ್ತಿದ್ದ ವೀರಬಲ್ಲಾಳನು ಸಾಯಲು ಅವನ ದಂಡನಾಯಕ

ನಾದ ಲಕ್ಷ್ಮನೂ ಅವನ ಸಾವಿರ ಜನ ಸೇವಕರೂ ಕೂಡಿಕೊಂಡು ಚಿತೆಯಲ್ಲಿ ಹಾರಿಕೊಂಡು ಪ್ರಾಣಕೊಟ್ಟರು! ಇದು ಆಗಿನ ಕರ್ನಾಟಕಸ್ತರಲ್ಲಿದ್ದ ಅತುಲ ಸ್ವಾಮಿಭಕ್ತಿಯನ್ನು ತೋರಿಸುತ್ತದೆ. ಆ ಕಾಲದಲ್ಲಿ ಕುಮಾರ ಲಕ್ಷ್ಮನ ಹೆಂಡತಿಯಾದ ಸುಗ್ಗಲೆಯೂ ಕೂಡ ತನ್ನ ಪತಿಯೊಡನೆ ಚಿತೆಯನ್ನು ಪ್ರವೇಶಿಸಿದಳು. ಈ ಶಿಲಾಶಾಸನವನ್ನು ಬರೆದವನು ಈ ಸುಗ್ಗಲಾದೇವಿಯು ಜಯಸಿಂಹರಾಜನ ಹೆಂಡತಿಯಾದ ಸುಗ್ಗಲೆಗೆ ಸಮಾನಳೆಂದು ವರ್ಣಿಸಿದ್ದಾನೆ. ಈ ರೀತಿಯ ವರ್ಣನೆಯಿಂದ ಜಯಸಿಂಹನ ಸುಗ್ಗಲಾದೇವಿಯ ಖ್ಯಾತಿಯು ಎಷ್ಟಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ ಲಿಖಿಸಿರುವದು ಏನೆಂದರೆ—

"ಜಯಸಿಂಹ ಕ್ಷಿತಿಪಾಲಕಂಗೆ ಜಗಮೆಲ್ಲಂ ಬಣ್ಣಿಸಲ್ ಪೂಣ್ದು
ಭಾ। ಷೆಯನೆ ಸುಗಲದೇವಿ ಕೊಟ್ಟ ತೆರದಿಂ ಬಲ್ಲಾಳ ಭೂಪೋತ್ತಮ ॥
ಪ್ರಿಯಪುತ್ರಂಗೆ ಕುಮಾರ ಲಕ್ಷ್ಮರಥಿನೀನಾಥಂಗೆ ಕೊಟ್ಟಳ್ ಮನಃ।
ಪ್ರಿಯೆಯೂ ಸುಗ್ಗಲದೇವಿ ಭಾಷೆಯನಿಳಾಚಕ್ರಂ ಪೊಗಳ್ವನ್ನೆಗಂ ॥"

ಇದರಲ್ಲಿ ಸುಗ್ಗಲದೇವಿಯು ಜಯಸಿಂಹರಾಜನಿಗೆ ಭಾಷೆಯನ್ನು ಹೇಗೆ ಕೊಟ್ಟಳೋ ಹಾಗೆಯೇ ಈ ಸುಗ್ಗಲೆಯೂ ಭಾಷೆಯನ್ನು ಕೊಟ್ಟಳೆಂದು ಹೇಳಿದೆ. ಈ ಭಾಷೆಯು ಯಾವದೆಂಬುದು ಶಿಲಾಶಾಸನದಲ್ಲಿ ಸ್ಪಷ್ಟವಾಗಿರುವದಿಲ್ಲ. ಅದು ದೇವರದಾಸಿಮಯ್ಯನ ಕೂಡ ನಡೆದ ಘಟನೆಯೇ ಇರಬಹುದೆಂದು ತೋರುತ್ತದೆ. ಈ ಭಾಷೆಯು ಗಂಡನೊಡನೆ ಸಹಗಮನಮಾಡಬೇಕೆಂಬುದಕ್ಕೆ ಸಂಬಂಧಿಸಿರಲಾರದು. ಯಾಕಂದರೆ ಇಂಥ ಭಾಷೆಯನ್ನು ಮೊದಲಿಗೆಯೇ ಹೀಗೆ ಕೊಡುವದು ಸಂಭವನೀಯವಲ್ಲ. ಇದಲ್ಲದೆ ವೀರಶೈವ ಧರ್ಮದ ಪ್ರಕಾರ ಸ್ತ್ರೀಯಳು ಮೋಕ್ಷವನ್ನು ಹೊಂದಲು ಸ್ವತಂತ್ರಾಧಿಕಾರವುಳ್ಳವಳಿರುವದರಿಂದಲೂ ಪತಿಯ ಪುಣ್ಯಪಾಪಗಳಿಗೆ ಅವಳ ಸಂಬಂಧವಿರದ್ದರಿಂದಲೂ ಅವಳು ತನ್ನ ಗಂಡನ ಕೂಡ ಸಹಗಮನ ಮಾಡುವ ಕಾರಣವಿರುವದಿಲ್ಲ. ಆದ್ದರಿಂದ ಸುಗ್ಗಲೆಯ ಬಗ್ಗೆ ಶಿಲಾಶಾಸನದಲ್ಲಿ ವರ್ಣಿಸಲ್ಪಟ್ಟ ಭಾಷೆಯು ಅಗ್ನಿಯಲ್ಲಿ ಪ್ರವೇಶಿಸುವ ಬಗ್ಗೆ ಇರದೆ ಅದು ದೇವರದಾಸಿಮಯ್ಯನಿಗೆ ಸಂಬಂಧಿಸಿದ ಕೆಲವೊಂದು ಘಟನೆ ಇರಬೇಕೆಂದು ನಾವು ಅನುಮಾನ ಮಾಡುತ್ತೇವೆ. ಅದು ಏನೇ ಇರಲಿ, ಜಯಸಿಂಹರಾಜನ ಹೆಂಡತಿಯಾದ

ಸುಗ್ಗಲೆಯು ಗತಿಸಿದ ಬಳಿಕ ೧೦೦-೧೫೦ ವರ್ಷಗಳ ತರುವಾಯ ಸಹ ಮೈಸೂರು ಪ್ರಾಂತದ ಮಧ್ಯಭಾಗದಂಥ ದೂರ ಪ್ರದೇಶದಲ್ಲಿ ಅವಳ ಹೆಸರು ಹೀಗೆ ಉಳಿಯಬೇಕಾದರೆ ಅವಳು ಮೊದಲು ಅತ್ಯಂತ ಪ್ರಸಿದ್ಧ ಸ್ತ್ರೀಯಳಾಗಿರಬೇಕೆಂಬುದು ಸ್ಪಷ್ಟವು. ಇಂಥವಳ ಗುರುವು ದಾಸಿಮಯ್ಯನು. ಆದುದರಿಂದ ಅವನ ಧರ್ಮಪ್ರಸಾರ ಕಾರ್ಯವು ಮುಂದೆ ಅವಳ ಸಹಾಯದಿಂದ ನಾಡಿನಲ್ಲಿ ಬಹಳ ಭರದಿಂದ ಸಾಗಿರಬೇಕೆಂದು ನಾವು ಊಹಿಸಲು ಯಾವ ಪ್ರತ್ಯವಾಯವೂ ಇರಲಾರದು.

ದೇವರದಾಸಿಮಯ್ಯನು ಮೇಲೆ ವಿವರಿಸಿದಂತೆ ಘಟನೆಗಳಾದ ಬಳಿಕ ಸ್ವಗ್ರಾಮವಾದ ಮುದನೂರಿಗೆ ತಿರುಗಿ ಬಂದು ಅವನು ತನ್ನ ದಿನದ ಕಾರ್ಯಗಳಲ್ಲಿ ಅಂದರೆ ನೆಯ್ಗೆಯ ಕೆಲಸಗಳಲ್ಲಿ ತೊಡಗಿದವನಾದನು. ಅವನು ಒಂದು ವೇಳೆ ಇಚ್ಛಿಸಿದ್ದರೆ ಜಯಸಿಂಹರಾಜನ ರಾಜಧಾನಿಯಲ್ಲಿದ್ದುಕೊಂಡು ತನ್ನ ಅಶನ ವಸನಕ್ಕೆ ಕೊರತೆ ಇಲ್ಲದೆ ಅರಸನ, ಅವನ ರಾಣಿಯ, ಅವನ ಊಳಿಗದವರ, ಮಾಂಡಲಿಕರ ಮತ್ತು ಜನಸಮುದಾಯದ ಮನ್ನಣೆಯನ್ನು ಹೊಂದುತ್ತ ಅತ್ಯಂತ ವೈಭವದಿಂದ ಕಾಲಕಳೆಯಬಹುದಾಗಿತ್ತು. ಈ ರೀತಿಯಾಗಿ ಮೊದಲಿನ ಕಾಲದಲ್ಲಿ ಬಹುಜನ ಜೈನ, ಬೌದ್ಧ, ಬ್ರಾಹ್ಮಣ ಧರ್ಮಾಧಿಕಾರಿಗಳು ರಾಜರ ನೆರೆಯಲ್ಲಿದ್ದುಕೊಂಡು ಕಾಲಕಳೆದಿದ್ದಾರೆ. ಇಲ್ಲವೆ ಅವನು ಬಯಸಿದ್ದರೆ ಜಯಸಿಂಹರಾಜನ ಆಡಳಿತದಲ್ಲಿ ಕೆಲವೊಂದು ಉಚ್ಚ ಅಧಿಕಾರ ಸ್ಥಾನವನ್ನು ಹೊಂದಬಹುದಾಗಿತ್ತು. ಭಾರತ ಪುರಾಣದ ಕಾಲದಲ್ಲಿ ಬ್ರಾಹ್ಮಣರಾದ ದ್ರೋಣ, ಕೃಪ, ಅಶ್ವತ್ಥಮರು ಸೈನ್ಯಾಧಿಕಾರಿಗಳಾಗಿಯೂ ಚಾಣಕ್ಯನು ಮಂತ್ರಿಯಾಗಿಯೂ ಈಚೆಗೆ ಕರ್ನಾಟಕದಲ್ಲಿ ಜೈನ ಧರ್ಮೀಯರಾದ ಪಂಪ, ಪೊನ್ನ, ಜನ್ನರು ತಮ್ಮ ಜೈನ ರಾಜರಲ್ಲಿ ರಾಜಕೀಯ ಉದ್ಯೋಗಸ್ಥರಾಗಿಯೂ ಇದ್ದು ಪ್ರಸಿದ್ಧಿಗೆ ಬಂದದ್ದು ಕಂಡುಬರುತ್ತದೆ. ಆದರೆ ಈ ತೆರದ ವೃತ್ತಿಯು ಹಿಂದೂ ಸಂಸ್ಕೃತಿಗೆ ಹೊರತಾದದ್ದು. ಇದು ಉಪನಿಷತ್ಕಾಲದಲ್ಲಿ ಇರುವದಿಲ್ಲ. ಆ ಕಾಲದಲ್ಲಿ ರಾಜರೂ ಬ್ರಾಹ್ಮಣರೂ ಮೊದಲು ಗೃಹಸ್ಥಾಶ್ರಮಿಗಳಾಗಿ ಇದ್ದು ಮುಂದೆ ಅವರು ವನಾಂತರಗಳಿಗೆ ಹೋಗಿ ಆಧ್ಯಾತ್ಮ ವಿಚಾರದಲ್ಲಿ ತೊಡಗಿದ್ದುದು ಕಂಡುಬರುತ್ತದೆ. ಇಂಥವರ ರೀತಿಯನ್ನು ಈ ಕಾಲದ ಶಿವಶರಣರು

ಅನುಸರಿಸಿ ರಾಜಸನ್ನಿಧಿಯನ್ನು ಅಪೇಕ್ಷಿಸದೆ ತಮ್ಮ ತಮ್ಮ ನಿತ್ಯದ ಕಾಯಕಗಳಲ್ಲಿ ತೊಡಗಿ ಶಿವಾನುಭವದಲ್ಲಿದ್ದುದು ಅವರ ಚರಿತ್ರೆಗಳಲ್ಲಿ ಕಂಡುಬರುತ್ತದೆ. ಅದೇ ಪ್ರಕಾರ ದೇವರದಾಸಿಮಯ್ಯನು ಜಯಸಿಂಹ ಸುಗ್ಗಲೆಯರ ಸಾನ್ನಿಧ್ಯದಲ್ಲಿರದೆ ತನ್ನ ಗ್ರಾಮಕ್ಕೆ ತಿರುಗಿಬಂದು ತನ್ನ ನೇಕಾರಿಕೆಯ ಉದ್ಯೋಗದಲ್ಲಿ ತೊಡಗಿದನು!

ಶಿವಶರಣರಲ್ಲಿ ಕೆಲವರು ಮಾತ್ರ ಕೇಶಿರಾಜ, ತೆಲುಗು ಜೊಮ್ಮಯ್ಯ ರಂಥವರು ರಾಜರ ಸೇವಕರಾದದ್ದು ಕಂಡುಬರುತ್ತದೆ. ಆದರೆ ಈ ರಾಜರು ಕೊಂಡೆಯರ ಮಾತು ಕೇಳಿ ಈ ಶರಣರಿಗೆ ತೊಂದರೆಯನ್ನು ಮಾತ್ರ ಕೊಟ್ಟದ್ದು ತಿಳಿದುಬರುತ್ತದೆ. ಹಾಗೆಯೇ ಬಸವೇಶ್ವರನು ಮಂತ್ರಿಪದವನ್ನು ಹೊಂದಿದ್ದರಿಂದ ಅವನು ಅನೇಕ ತರದ ತೊಂದರೆಗಳಿಗೆ ಗುರಿಯಾದನು. ಅವನು ಕಡೆಗೆ ರಾಜಧಾನಿಯನ್ನು ಬಿಟ್ಟು ಹೋಗಬೇಕಾಯಿತು. ಅವನಿಂದ ಧರ್ಮೋದ್ಧಾರ ಕಾರ್ಯಗಳಾದದ್ದು ಅವನು ಮಂತ್ರಿಪದವನ್ನು ಸ್ವೀಕರಿಸಿದ್ದರ ಮೂಲಕವಲ್ಲ, ಆದರೆ ಅವನು ಶಿವಾನುಭವ ಮಂಟಪವನ್ನು ನಿರ್ಮಾಣ ಮಾಡಿದ್ದರಿಂದ ಅಲ್ಲಿ ಉಜ್ವಲ ವರ್ತನೆಯುಳ್ಳ ಬಹುಜನ ಶಿವಶರಣರು ಕೂಡಿಕೊಳ್ಳಲು ಅನುಕೂಲವಾಯಿತು. ಮತ್ತು ಅವರ ಬಲದಿಂದಲೇ ಅವನು ಧರ್ಮೋದ್ಧಾರ ಕಾರ್ಯಗಳನ್ನು ಮಾಡಲು ಶಕ್ತನಾದನು. ಅಧಿಕಾರವಿದ್ದಲ್ಲಿ ಸ್ವಾರ್ಥಿಗಳೂ, ಕೆಡುಕರೂ ದುಷ್ಟರೂ ನೆರೆದು ಕಾರ್ಯಗಳಲ್ಲಿ ತೊಂದರೆ ಕೊಡುವದುಂಟು. ಆದ್ದರಿಂದ ಎಲ್ಲ ಧರ್ಮೋದ್ಧಾರಕರು ಆರಂಭದಲ್ಲಿ ಅಧಿಕಾರಸ್ಥಾನದಲ್ಲಿರದೆ, ಸಾಮಾನ್ಯ ಜನರಲ್ಲಿದ್ದುಕೊಂಡೇ ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತ ಬಂದಿರುವದು ಕಂಡುಬರುತ್ತದೆ.

ದಾಸಿಮಯ್ಯನು ಮುದನೂರಿಗೆ ಬಂದಬಳಿಕ ಅವನು ಸಾಧ್ವಿಯಾದ ದುಗ್ಗಳೆಯನ್ನು ಲಗ್ನವಾಗಿ ತನ್ನ ಕಾಯಕದಲ್ಲಿ ಮಗ್ನನಾದನು. ಅವನು ಈ ಮೊದಲು ಶ್ರೀಶೈಲಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ದೀಕ್ಷೆಯನ್ನು ಹೊಂದಿ ವಿರಕ್ತಾಶ್ರಮವನ್ನು ಹೊಂದಿದ್ದನು. ಒಂದು ವೇಳೆ ಅವನು ಇಚ್ಛಿಸಿದ್ದರೆ ಈ ವಿರಕ್ತಾಶ್ರಮದಲ್ಲಿಯೇ ಕಡೆಯವರೆಗೆ ಇರಬಹುದಾಗಿತ್ತು. ಅವನು ಹಾಗೆ ವರ್ತಿಸಿದ್ದರೆ ಅಜ್ಞ ಬಹುಜನ ಸಮಾಜವು ಅವನಿಗೆ ಮೆಚ್ಚಿ ಅವನನ್ನು ಪೂಜಿಸಬಹುದಾಗಿತ್ತು. ಅವನನ್ನು ಅವರು

ಪಲ್ಲಕ್ಕಿಯೊಳಗೆ ಕುಳ್ಳಿರಿಸಿ ಮೆರೆಯಿಸಬಹುದಾಗಿತ್ತು. ಆದರೆ ದಾಸಿಮಯ್ಯನು ಈ ತೆರದ ಆಯುಷ್ಯಕ್ರಮವನ್ನು ಅನುಸರಿಸಲು ಇಚ್ಛಿಸಲಿಲ್ಲ. ಅವನು ತನ್ನ ಗುರುಗಳು ದಯಪಾಲಿಸಿದ್ದ ಪಿರಕ್ತಾಶ್ರಮವನ್ನು ತೊರೆದು ಲಗ್ನಮಾಡಿಕೊಂಡನು! ಹೀಗೆ ಮಾಡಿದ್ದರಿಂದ ಅವನ ಯೋಗ್ಯತೆಗೆ ಎಷ್ಟುಮಾತ್ರವೂ ಭಂಗ ಉಂಟಾಗಲಿಲ್ಲ. ಇಷ್ಟೇ ಅಲ್ಲ, ನಿಜವಾದ ಕೈಲಾಸ ಸುಖವು ಈ ದಾಂಪತ್ಯ ಸ್ಥಿತಿಯಲ್ಲಿಯೇ ಇರುತ್ತದೆಂಬುದು ಅವನ ಚರಿತ್ರೆಯಲ್ಲಿ ಈ ಬಗ್ಗೆ ಬಂದ ವಿವರಣೆಗಳಿಂದ ವಾಚಕರಿಗೆ ಕಂಡುಬರುವದು. ದಾಸಿಮಯ್ಯನು ಈ ಪ್ರಕಾರ ವರ್ತಿಸುತ್ತ ಶಿವಶರಣರಲ್ಲಿ ಉನ್ನತ ಸ್ಥಾನವನ್ನು ಪಡೆದಿರುತ್ತಾನೆ.

ದೇವರದಾಸಿಮಯ್ಯನು ತನ್ನ ವಚನಗಳಲ್ಲಿ ಸ್ತ್ರೀಯರಿಗೆ ಅತ್ಯಂತ ಆದರಭಾವವನ್ನು ತೋರಿಸಿದ್ದಾನೆ. ಅವನ ಹೆಂಡತಿಯಾದ ದುಗ್ಗಳೆಯು ಅವನ ಇಚ್ಛಾನುಸಾರವಾಗಿ ಯಾವಾಗಲೂ ವರ್ತಿಸುತ್ತ ಬಂದಿದ್ದಾಳೆ. ಹರಿಹರನೂ ಬಸವೇಶ್ವರನೂ ಅವಳ ಶ್ರೇಷ್ಠತರವಾದ ಭಕ್ತಿಯನ್ನು ತಮ್ಮ ಉಕ್ತಿಗಳಲ್ಲಿ ಹೊಗಳಿದ್ದಾರೆ. ಹೀಗೆ ಸ್ತ್ರೀಯರಿಗೆ ಮನ್ನಣೆಯನ್ನು ಕೊಡುವವರು ಉಚ್ಚ ಸುಧಾರಣೆಯನ್ನು ಹೊಂದಿದ ಸಮಾಜದವರೇ ಇರುತ್ತಾರೆ. ಆದರೆ ನಾಗರಿಕತೆ ಇಲ್ಲದ ಕನಿಷ್ಟ ಸಮಾಜಗಳು ಹೀಗೆ ವರ್ತಿಸದೆ ಸ್ತ್ರೀಯರೆಂದರೆ ಕೇವಲ ಭೋಗ್ಯವಸ್ತುಗಳೆಂದು ಭಾವಿಸಿ ವರ್ತಿಸುವದುಂಟು. ಆದರೆ ಶಿವಶರಣರಲ್ಲಿ ಇಂಥ ವಿಚಾರಗಳಿರದೆ, 'ಸ್ತ್ರೀ' ಎಂದರೆ ಪ್ರತ್ಯಕ್ಷ 'ಕಪಿಲಸಿದ್ಧಮಲ್ಲಿಕಾರ್ಜುನ' ಎಂದು ಅವರು ಅವಳನ್ನು ಹೊಗಳಿದ್ದಾರೆ. ಇದರಿಂದ ಈ ಕಾಲದಲ್ಲಿ ಅನೇಕ ಸ್ತ್ರೀ ವಚನಕಾರರೂ ಶಿವಶರಣೆಯರೂ ಆಗಿಹೋಗಿರುತ್ತಾರೆ. ಈ ಸ್ಥಿತಿಯು ಇದ್ದುದರಿಂದ ಈ ಕಾಲದಲ್ಲಿ ಉಚ್ಚತರದ ಧಾರ್ಮಿಕ ವಾತಾವರಣವು ಸಮಾಜದಲ್ಲಿ ಉಂಟಾದದ್ದು ಕಂಡುಬರುತ್ತದೆ.

ದೇವರದಾಸಿಮಯ್ಯನು ತನ್ನ ಧರ್ಮೋದ್ಧಾರ ಕಾರ್ಯಗಳನ್ನು ಮಾಡುವಲ್ಲಿ ಅವನು ಪುರಾತನ ಪರಂಪರೆಯನ್ನು ಹಿಡಿದುಕೊಂಡು ಮಾಡಿರುವದು ಕಂಡುಬರುತ್ತದೆ. ಅವನು ತನ್ನ ಪ್ರಚಾರ ಕಾರ್ಯಗಳನ್ನು ಶ್ರೀಶೈಲಮಲ್ಲಿಕಾರ್ಜುನನ ಹೆಸರಿನಿಂದಲೇ ಮಾಡಿದ್ದಾನೆ. ಅವನು ಕಾಡುಜನರಿಗೆ ಉಪದೇಶವನ್ನು ಮಾಡುವಲ್ಲಾಗಲಿ ಇಲ್ಲವೆ

ಗೋದೇಕೆರೆಯ. ಒಕ್ಕಲಿಗರಿಗೆ ದೀಕ್ಷೆಯನ್ನು ಕೊಡುವಲ್ಲಾಗಲಿ ಅವರು ಮಲ್ಲಿಕಾರ್ಜುನನ ಭಕ್ತರಾಗಿ ವರ್ತಿಸಿರೆಂದು ಬೋಧಿಸಿದ್ದಾನೆ. ಅವನು ಮುದನೂರಿಗೆ ಬಂದ ಬಳಿಕ ಸಹ ಅಲ್ಲಿ ಒಂದು ಮಲ್ಲಿಕಾರ್ಜುನನ ದೇವಸ್ಥಾನವನ್ನು ಸ್ಥಾಪಿಸಿದ್ದಾನೆ. ಇದು ಈ ಗ್ರಾಮದಲ್ಲಿ ಈಗಲೂ ಒಂದು ಮಹತ್ವದ ಸ್ಥಾನವಾಗಿರುತ್ತದೆ. ಒಟ್ಟಾರೆ, ದೇವರದಾಸಿಮಯ್ಯನು ಸಮಾಜದ ಪೂರ್ವಪರಂಪರೆಯನ್ನು ಬಿಟ್ಟುಕೊಟ್ಟು ತನ್ನ ಧರ್ಮೋದ್ಧಾರ ಕಾರ್ಯಗಳನ್ನು ಮಾಡಿರುವದಿಲ್ಲ. ಇದರಿಂದ ನಾಡಿನಲ್ಲಿ ವೀರಶೈವ ಧರ್ಮಪ್ರಸಾರ ಕಾರ್ಯಗಳು ಬಹು ಭರದಿಂದ ಸಾಗಿದವೆಂಬುದರಲ್ಲಿ ಯಾವ ಸಂದೇಹವೂ ಇರಲಾರದು.

ದಾಸಿಮಯ್ಯನು ತನ್ನ ಗ್ರಾಮಕ್ಕೆ ಬಂದಬಳಿಕ ತನ್ನ ಕಾಯಕದಲ್ಲಿ ತೊಡಗಿ ಗುರು ಲಿಂಗ ಜಂಗಮ ದಾಸೋಹದಲ್ಲಿ ಇರಹತ್ತಿದನು. ಅವನು ಕಾಯಕ ನಡಸಿದ ರೀತಿಯು ಅನುಕರಣೀಯವಾಗಿದೆ. ಕಾಯಕ ಮಾಡುವಲ್ಲಿ ಮಿಗಿಲಾದ ಜಾಣ್ಮೆ ಇರಬೇಕು. ಅದರಲ್ಲಿ ಸ್ವಂತವಾಗಿ ಶ್ರಮಪಡಬೇಕು. ತಾಳ್ಮೆಯಿಂದ ಅದನ್ನು ಯಾವಾಗಲೂ ಮಾಡುತ್ತಿರಬೇಕು. ಮತ್ತು ಅದರಲ್ಲಿ ಶಿವಾರ್ಪಣಭಾವವಿರಬೇಕು ಶಿವಾರ್ಪಣಭಾವವೆಂದರೆ ಬಂದುದೆಲ್ಲವು ತನ್ನದೆಂದು ಭಾವಿಸದೆ ಲಿಂಗಾರ್ಪಿತ ಮಾಡಿ ಲಿಂಗಮುಖವಾಗಿ ಲಿಂಗಭೋಗೋಪಭೋಗಿಯಾಗಿ ಅದನ್ನು ಸೇವಿಸುವದು. ಇದು ಶಿವಶರಣರ ನಡೆಯಾಗಿರುತ್ತದೆ. ಹೀಗೆ ದೇವರದಾಸಿಮಯ್ಯನು ವರ್ತಿಸುತ್ತ ಬಂದುದು ಅವನ ಚಾರಿತ್ರ್ಯದಿಂದ ಕಂಡುಬರುತ್ತದೆ. ಅವಕ್ಕೋಸ್ಕರ ಪರಮಾತ್ಮನು ಅವನಿಗೆ ಒಲಿದು ತವನಿಧಿಯನ್ನು ಅಂದರೆ ಎಂದಿಗೂ ಸವೆಯದ ಧನನಿಧಿಯನ್ನು ದಯಪಾಲಿಸಿದನು. ಹೀಗೆ ಯಾರು ಕಾಯಕ ಮಾಡುತ್ತಾರೋ ಅವರಿಗೆ ಬಡತನವು ಬರಬಹುದಾದರೂ ಹೇಗೆ? ಅವರಲ್ಲಿ ತವನಿಧಿಯು ಇದ್ದಂತೆಯೇ ಸರಿ. ದಾಸಿಮಯ್ಯನು ಈ ರೀತಿಯಾಗಿ ವಿಪುಲ ಧನವನ್ನು ಸಂಪಾದಿಸುತ್ತಲೂ ಹೀಗೆ ಸಂಪಾದಿಸಿದ್ದನ್ನು ಧರ್ಮಪ್ರಸಾರ ಕಾರ್ಯವೆಂಬ ದಾಸೋಹಕ್ಕೆ ಉಪಯೋಗಿಸುತ್ತಲೂ ಬಂದುದರಿಂದ ನಾಡಿನಲ್ಲಿ ವೀರಶೈವ ಧರ್ಮವು ಸ್ಥಿರತರವಾಗಿ ಅವನ ಕಾಲದಲ್ಲಿ ನೆಲೆಗೊಂಡಿರಬಹುದೆಂದು ತೋರುತ್ತದೆ.

ವಚನಕಾರರು ತಮ್ಮ ವಚನಗಳನ್ನು ರಚಿಸುವಲ್ಲಿ ಕೆಲವೊಂದು ಮುದ್ರಿಕೆಯನ್ನಿಟ್ಟುಕೊಂಡಿರುವದು ಕಂಡುಬರುತ್ತದೆ. ಈ ಮುದ್ರಿಕೆಗಳಿಂದ

ಆಯಾ ವಚನಕಾರರು ಯಾವುದರ ಮೇಲೆ ಭಕ್ತಿಯುಳ್ಳವರಾಗಿದ್ದರು, ಯಾರ ಮೂಲಕ ಅವರು ಆತ್ಮೋನ್ನತಿಯನ್ನು ಹೊಂದಿದರು, ಇವೇ ಮೊದಲಾದ ಮಹತ್ವದ ಸಂಗತಿಗಳನ್ನು ನಾವು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಅವುಗಳ ಸಹಾಯದಿಂದ ವಚನಕಾರರು ಎಲ್ಲಿಯವರೆಂಬುದನ್ನೂ ಸಹ ನಾವು ಕಂಡುಹಿಡಿಯಬಹುದು. ಈ ಸಂಗತಿಗಳು ಕೆಳಗಿನ ವಿವರಣೆಗಳಿಂದ ವಾಚಕರಿಗೆ ಗೋಚರವಾಗದೆ ಇರದು.

ಅನೇಕ ವಚನಕಾರರು 'ಕೂಡಲಸಂಗಮ' ಈ ಹೆಸರನ್ನು ತಮ್ಮ ಮುದ್ರಿಕೆಗಳಲ್ಲಿ ಇಟ್ಟುಕೊಂಡು ತಮ್ಮ ವಚನಗಳನ್ನು ರಚಿಸಿದ್ದಾರೆ. ಇದು ಬಸವೇಶ್ವರನಲ್ಲಿದ್ದ ಅವರ ಭಕ್ತಿಭಾವವನ್ನು ತೋರಿಸುತ್ತದೆ. ಉದಾ:— ಗಂಗಾಂಬಿಕೆಯ ಗಂಗಾಪ್ರಿಯ ಕೂಡಲಸಂಗಮದೇವ, ನೀಲಾಂಬಿಕೆಯ ಬಸವಪ್ರಿಯ ಕೂಡಲಸಂಗಮದೇವ, ನಾಗಲಾಂಬಿಕೆಯ ಬಸವಣ್ಣಪ್ರಿಯ ಚನ್ನಸಂಗಾ, ಬಸವಣ್ಣಪ್ರಿಯ ನಿಃಕಳಂಕ ಸೋಮೇಶ್ವರಾ, ಹಡಪದಪ್ಪಣ್ಣನ ಬಸವಪ್ರಿಯ ಕೂಡಲಚನ್ನಸಂಗಮದೇವಾ ಎಂಬಿವು ಇದಕ್ಕೆ ಉದಾಹರಣೆಗಳಾಗಿವೆ.

ಬೇರೆ ಕೆಲವರು 'ಶ್ರೀಶೈಲ ಮಲ್ಲಿಕಾರ್ಜುನನ' ವಿಷಯವಾಗಿ ಭಕ್ತಿಯನ್ನು ವಹಿಸಿ ಈ ದೇವಾಲಯಕ್ಕೆ ಸಂಬಂಧಿಸಿದ ಮುದ್ರಿಕೆಗಳನ್ನು ಇಟ್ಟುಕೊಂಡಿದ್ದಾರೆ. ಉದಾ: — ಸಿದ್ಧರಾಮೇಶ್ವರನು ಕಪಿಲಸಿದ್ಧಮಲ್ಲಿಕಾರ್ಜುನಾ, ಮೋಳಿಗೆಯ ಮಾರಯ್ಯನು ನಿಃಕಳಂಕಮಲ್ಲಿಕಾರ್ಜುನಾ, ಮಹಾದೇವಿಯಕ್ಕನು ಚನ್ನಮಲ್ಲಿಕಾರ್ಜುನಾ ಎಂಬ ಮುದ್ರಿಕೆಗಳನ್ನಿಟ್ಟುಕೊಂಡಿರುವದು ಇದಕ್ಕೆ ಉದಾಹರಣೆಗಳಾಗಿವೆ.

ಬೇರೆ ಕೆಲವರು ಹುಲಿಗೆರೆಯಲ್ಲಿರುವ 'ಸೋಮೇಶ್ವರನ' ಇಲ್ಲವೆ 'ಸೌರಾಷ್ಟ್ರ ಸೋಮೇಶ್ವರ'ನ ಹೆಸರಿನಿಂದ ತಮ್ಮ ವಚನಗಳನ್ನು ರಚಿಸಿದ್ದಾರೆ. ಉದಾ:— ಆದಯ್ಯನ ಸೌರಾಷ್ಟ್ರಸೋಮೇಶ್ವರಾ, ಅಮುಗಿದೇವನ ಸಿದ್ಧಸೋಮನಾಥಾ, ಬಿಬ್ಬಬಾಚಯ್ಯನ ಏಣಾಂಕಧರ ಸೋಮೇಶ್ವರಾ, ಹುಲಿಗೆರೆಯ ಸೋಮೇಶ್ವರ, ಎಂಬಿವು ಇದಕ್ಕೆ ಉದಾಹರಣೆಗಳಾಗಿವೆ.

ಕೆಲವರು ಪ್ರಭುದೇವರ ವಿಷಯವಾಗಿ ಭಕ್ತಿಯನ್ನು ತಾಳಿ 'ಗುಹೇಶ್ವರ' ಈ ಶಬ್ದವನ್ನು ತಮ್ಮ ಮುದ್ರಿಕೆಯಲ್ಲಿಟ್ಟುಕೊಂಡು ವಚನಗಳನ್ನು

ರಚಿಸಿದ್ದಾರೆ. ಉದಾ:— ಗಾಣದ ಕನ್ನಪ್ಪನ ಗುಹೇಶ್ವರಲ್ಲಯ್ಯ, ಗುಹೇಶ್ವರಪ್ರಿಯನಿರಾಳಲಿಂಗ, ಗುರುಗುಹೇಶ್ವರಾ ಇವು ಇವಕ್ಕೆ ಉದಾಹರಣೆಗಳಾಗಿವೆ.

ಹೀಗೆ ಯಾವ ಮುದ್ರಿಕೆಗಳನ್ನು ಇಟ್ಟುಕೊಂಡು ವಚನಕಾರರು ತಮ್ಮ ವಚನಗಳನ್ನು ರಚಿಸಿರುವರೋ ಅವುಗಳ ಮೇಲಿಂದ ಅವರ ಭಕ್ತಿಯು ಯಾರಲ್ಲಿ ಇತ್ತು, ಯಾರನ್ನು ಅವರು ಸ್ಮರಿಸುತ್ತಿದ್ದರು, ಅವರು ಎಲ್ಲಿಯವರು, ಎಂಬುದನ್ನು ನಾವು ಕಂಡುಹಿಡಿಯಬಹುದಾಗಿದೆ.

ಈ ದೃಷ್ಟಿಯಿಂದ ಈ ವರೆಗೆ ನಮಗೆ ದೊರೆದ ವಚನಕಾರರ ಮುದ್ರಿಕೆಗಳನ್ನು ಪರೀಕ್ಷಿಸಿದಲ್ಲಿ ಅವುಗಳಲ್ಲಿ 'ರಾಮೇಶ್ವರ' ಎಂಬ ಹೆಸರುಳ್ಳ ವಚನಗಳು ಬಹಳ ಹೊರಡುತ್ತವೆ. 'ರಾಮೇಶ್ವರ' ಮತ್ತು 'ರಾಮನಾಥ' ಇವು ಒಂದೇ ದೇವಾಲಯಕ್ಕೆ ಸಂಬಂಧಿಸಿದ ಹೆಸರುಗಳು. ಆದ್ದರಿಂದ ಈ ಮುದ್ರಿಕೆಗಳನ್ನು ಉಪಯೋಗಿಸಿದ ವಚನಕಾರರೆಲ್ಲರೂ ದಾಸಿಮಯ್ಯನ ಇಷ್ಟದೇವತೆಯಾದ ರಾಮನಾಥನಲ್ಲಿದ್ದ ಭಕ್ತಿಯ ಮೂಲಕವಾಗಿ ಇಲ್ಲವೆ ದಾಸಿಮಯ್ಯನ ಚರಿತ್ರೆ ಅಥವಾ ಅವನ ವಾಙ್ಮಯದ ಪ್ರಭಾವದಿಂದಾಗಲಿ ಪ್ರೇರಣೆ ಹೊಂದಿದವರೆಂಬ ಅನುಮಾನವು ಉಂಟಾಗುತ್ತದೆ. 'ರಾಮೇಶ್ವರ' ಅಥವಾ 'ರಾಮನಾಥ' ಅಥವಾ 'ದಾಸ' ಈ ಹೆಸರುಳ್ಳ ಮುದ್ರಿಕೆಗಳನ್ನು ನಾವು ಕೆಳಗೆ ಕೊಟ್ಟಿರುತ್ತೇವೆ.

ಏಲೇಶಕೇತಯ್ಯನ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ, ನಗೆಮಾರಿತಂದೆಯ ಆತುರವೈರಿ ರಾಮೇಶ್ವರ, ಏಕಾಂತದ ರಾಮಯ್ಯನ ಏಕಾಂತ ರಾಮೇಶ್ವರಲಿಂಗ, ಮೆರೆಮಿಂಡದೇವನ ಐಘಟದೂರ ರಾಮೇಶ್ವರ ಲಿಂಗ, ತಳವಾರ ಕಾಮಿದೇವನ ಕಾಮಹರಪ್ರಿಯ ರಾಮನಾಥ, ಭರಿತಾರ್ಪಣದ ಚನ್ನಬಸವಣ್ಣನ ಚನ್ನಕೂಡಲರಾಮೇಶ್ವರಲಿಂಗ, ಶಿವನಾಗಮಯ್ಯನ ನಾಗಯ್ಯ ಪ್ರಿಯಚನ್ನರಾಮೇಶ್ವರಾ, ಅನಾಮಿಕ ನಾಚಯ್ಯನ ನಾಚಯ್ಯಪ್ರಿಯ ಚನ್ನರಾಮೇಶ್ವರಾ, ಗುಪ್ತಮಂಚಣ್ಣನ ನಾರಾಯಣಪ್ರಿಯ ರಾಮನಾಥಾ, ವೈದ್ಯಸಂಗಣ್ಣನ ಮರುಳುಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ, ಮೈದುನರಾಮಯ್ಯನ ಮಹಾಲಿಂಗಚನ್ನರಾಮಾ, ಬಾಲಬೊಮ್ಮಣ್ಣನ ವೀರಶೂರ ರಾಮೇಶ್ವರಲಿಂಗ, ಚಂದಿಮರಸನ ಸಿಮ್ಮಲಿಗೆಯ ಚನ್ನರಾಮ, ಮಾದರಚನ್ನಯ್ಯನ ಕಯ್ಯುಳಿಗಳ ಅಡಿ

ಗೊಂಟ ಕೆಡೆಯಾಗಬೇಡ ಅರಿ ನಿಜಾತ್ಮಾ ರಾಮರಾಮನಾ, ದಾಸಂಪ್ರಿಯ ರಾಮನಾಥ ಪ್ರಭುವೇ, ನಂದ ಗೋಪೀಯ ಕಂದ ಪ್ರಿಯ ನಿಸ್ಸಂಗಲಿಂಗ ರಾಮನಾಥಾ, ಇವು ಇದಕ್ಕೆ ಉದಾಹರಣೆಗಳಾಗಿವೆ.

ಈ ಮುದ್ರಿಕೆಗಳನ್ನಿಟ್ಟುಕೊಂಡ ವಚನಕಾರರಲ್ಲಿ ಏಲೇಶಕೇತಯ್ಯನು ಯಾದಗಿರಿಗೆ ಸಮೀಪವರ್ತಿಯಾದ ಏಲೇರಿ ಗ್ರಾಮದವನು. ಏಕಾಂತದ ರಾಮಯ್ಯನು ಕಲಬುರ್ಗಿಗೆ ಸಮೀಪವಿರುವ ಆಳಂದೆ ಗ್ರಾಮದವನು. ವೈದ್ಯದುನ ರಾಮಯ್ಯನು ಶ್ರೀಶೈಲಕ್ಕೆ ಸಮೀಪವಿರುವ ಭೀಮಾವತೀ ಪ್ರದೇಶದವನು. ಚಂದಿಮರಸನು ಮುದನೂರಿಗೆ ಸಮೀಪವಿರುವ ಕೆಂಭಾವಿ ಗ್ರಾಮದವನು. ಇವರೆಲ್ಲರೂ 'ರಾಮೇಶ್ವರ' ಎಂಬುದನ್ನು ತಮ್ಮ ಮುದ್ರಿಕೆಯಲ್ಲಿ ಇಟ್ಟುಕೊಂಡಿದ್ದಾರೆ. ದಾಸಂಪ್ರಿಯ ರಾಮನಾಥ ಪ್ರಭುವೇ ಎಂಬ ಮುದ್ರಿಕೆಯನ್ನಿಟ್ಟುಕೊಂಡವನು ದೇವರದಾಸಿಮಯ್ಯನ ಹೆಸರನ್ನು ತನ್ನ ಮುದ್ರಿಕೆಯಲ್ಲಿ ಸ್ಪಷ್ಟವಾಗಿ ಸೇರಿಸಿಕೊಂಡಿದ್ದಾನೆ. ಈ ಸ್ಥಾನಗಳನ್ನು ನೋಡಿದಲ್ಲಿ ಇವರೆಲ್ಲರೂ ದೇವರದಾಸಿಮಯ್ಯನು ಸಂಚರಿಸಿದ್ದ ಸ್ಥಳಗಳಲ್ಲಿ ಪ್ರಸಿದ್ಧಿಗೆ ಬಂದವರು ಇದ್ದಾರೆ. ಇವರೆಲ್ಲರೂ ಅವನ ಕಾರ್ಯಗಳಿಂದ ಪ್ರೇರಣೆ ಹೊಂದಿದವರಿರಬೇಕು. ಉಳಿದವರಲ್ಲಿ ಕೆಲವರು ಉದಾಹರಣಾರ್ಥವಾಗಿ ತಳವಾರ ಕಾಮಿದೇವ, ಶಿವನಾಗಮಯ್ಯ, ಗುಪ್ತಮಂಚಣ್ಣ ಇವರು ಕಲ್ಯಾಣಪಟ್ಟಣಕ್ಕೆ ಸಂಬಂಧಿಸಿದವರಾದ್ದರಿಂದ, ಈ ಪಟ್ಟಣಕ್ಕೆ ಅನತಿ ದೂರದಲ್ಲಿರುವ ಮುದನೂರು ಗ್ರಾಮಕ್ಕೆ ಸಮೀಪವಿರುವ ಗ್ರಾಮಗಳಲ್ಲಿಯವರಿರಬೇಕು. ಇದರಿಂದ ಅವರು ರಾಮೇಶ್ವರ ದೇವಾಲಯದ ಮಹತ್ವವನ್ನು ಅರಿತವರಾಗಿ ಅವರು ತಮ್ಮ ಮುದ್ರಿಕೆಗಳಲ್ಲಿ ಅದನ್ನು ಸೇರಿಸಿಕೊಂಡಿರಬೇಕು. ಆದರೆ ಉಳಿದ ವಚನಕಾರರ ಗ್ರಾಮಗಳಾವವು ಎಂಬುದು ನಮಗೆ ಗೊತ್ತಾಗಿಲ್ಲ. ಇವರು ನಗಿಮಾರಿ ತಂದೆ, ಮೆರೆಮಿಂಡದೇವ, ಭರತಾರ್ಪಣದ ಚನ್ನಬಸವಣ್ಣ, ಅನಾಮಿಕ ನಾಚಯ್ಯ, ವೈದ್ಯಸಂಗಣ್ಣ, ಬಾಲಬೊಮ್ಮಣ್ಣ, ಮಾದರಚನ್ನಯ್ಯ ಇವರು ಇದ್ದಾರೆ., ನಾವು ಹೆಚ್ಚಿಗೆ ಸಂಶೋಧನೆ ಮಾಡಿದಲ್ಲಿ ಇವರೆಲ್ಲರೂ ಕಲಬುರ್ಗಿಗೆ ಸಮೀಪವಿರುವ ಆವವೋ ಗ್ರಾಮಗಳಲ್ಲಿಯವರೆಂದೂ ದೇವರದಾಸಿಮಯ್ಯನ ವಿಷಯವಾಗಿ ಭಕ್ತಿಯನ್ನು ವಹಿಸಿದವರಾಗಿದ್ದರೆಂದೂ ಬಹುಶಃ ಪ್ರಕಟವಾಗಬಹುದು. ಇವರಲ್ಲಿ ಮೆರೆಮಿಂಡದೇವ ಮತ್ತು ಮಾದರಚನ್ನಯ್ಯ ಇವರು ಕರ್ನಾಟಕವನ್ನು ಬಿಟ್ಟು ತಮಿಳುದೇಶಕ್ಕೆ

ಹೋಗಿ ಅಲ್ಲಿ ಪ್ರಸಿದ್ಧರಾದವರು. ಇವರಿಬ್ಬರೂ ಬಸವೇಶ್ವರನಕಿಂತಲೂ ಮೊದಲಿನವರು (ಶಿವಶರಣರ ಚರಿತ್ರೆಗಳು ಭಾಗ ೨ ನೋಡಿರಿ). ಇವರು ಮೊದಲು ಕಲ್ಯಾಣ ಮತ್ತು ಮುದನೂರು ಈ ಗ್ರಾಮಗಳಿದ್ದ ಪ್ರದೇಶದಲ್ಲಿ ಜನಿಸಿ ಇಲ್ಲಿ ಪ್ರಸಾರವಾದ ಶಿವಾನುಭವದ ತತ್ವಗಳನ್ನು ತಿಳಿದುಕೊಂಡು ಮುಂದೆ ಚೋಳದೇಶಕ್ಕೆ ಹೋಗಿ ಅಲ್ಲಿ ಪ್ರಸಿದ್ಧರಾದರೆಂದು ತೋರುತ್ತದೆ. ದೇವರದಾಸಿಮಯ್ಯನು ರಾಮೇಶ್ವರ ಅಥವಾ ರಾಮನಾಥ ಎಂಬುದನ್ನು ತನ್ನ ವಚನಗಳಿಗೆ ಮುದ್ರಿಕೆಯನ್ನಾಗಿ ಇಟ್ಟುಕೊಂಡು ವೀರಶೈವ ಮತತತ್ವಗಳನ್ನು ಬೋಧಿಸಿ ಪ್ರಸಿದ್ಧನಾದದ್ದರಿಂದ ಅವನಿದ್ದ ಪ್ರಾಂತದಲ್ಲಿ ಜನಿಸಿದ ಈ ವಚನಕಾರರು ಅವನ ಅನುಕರಣವನ್ನೇ ಮಾಡಿ ಅವನ ಮುದ್ರಿಕೆಯನ್ನೇ ಇಟ್ಟುಕೊಂಡು ಅಥವಾ ಅದರಲ್ಲಿ ಕೆಲವು ವಿಧವಾದ ಮಾರ್ಪಾಡುಗಳನ್ನು ಮಾಡಿಕೊಂಡು ಅದನ್ನು ಉಪಯೋಗಿಸುತ್ತ ಈ ಮುದನೂರು ಪ್ರದೇಶದಲ್ಲಿ ಧಾರ್ಮಿಕ ಕ್ರಾಂತಿಯನ್ನು ಮಾಡಿದರೆಂದು ನಾವು ಊಹಿಸುತ್ತೇವೆ.

ರಾಮ, ರಾಮನಾಥ, ರಾಮೇಶ್ವರ, ಈ ಶಬ್ದಗಳು ವಿಷ್ಣು ವಾಚಕವಾಗಿರುತ್ತವೆ. ವೀರಶೈವ ಎಂಬ ಶಬ್ದವನ್ನು ವಿಶೇಷವಾಗಿ ಉಪಯೋಗಿಸುವವರು ರಾಮಶಬ್ದಕ್ಕೆ ಹೀಗೆ ಮಹತ್ವವನ್ನು ಕೊಡುವ ಸಂಭವವಿಲ್ಲ. ಆದರೆ 'ವೀರಶೈವ' ಈ ಶಬ್ದವು ಬಸವೇಶ್ವರನ ಮತ್ತು ದೇವರದಾಸಿಮಯ್ಯನ ವಚನಗಳಲ್ಲಿ ಎಲ್ಲಿಯೂ ಉಪಯೋಗಿಸಲ್ಪಟ್ಟಿಲ್ಲ. ಅವರ ಕಾಲದಲ್ಲಿ ಜನರಲ್ಲಿ ಈ ಹೆಸರು ಸಾಮಾನ್ಯವಾಗಿ ಪ್ರಚಾರದಲ್ಲಿದ್ದಂತೆ ನಮಗೆ ಕಂಡುಬರುವದಿಲ್ಲ. ಆದ್ದರಿಂದ ದಾಸಿಮಯ್ಯನ ಕಾಲದಲ್ಲಿ ರಾಮ ಈ ಶಬ್ದಕ್ಕೆ ವಿರೋಧಭಾವವಿಲ್ಲದ್ದರಿಂದ ಈ ಶಬ್ದವನ್ನು ಅವನಿದ್ದ ಕಾಲದ ವಚನಕಾರರು ಹೇರಳವಾಗಿ ತಮ್ಮ ಮುದ್ರಿಕೆಗಳಲ್ಲಿ ಸೇರಿಸಿ ಉಪಯೋಗಿಸಿದ್ದಾರೆ. ಆದ್ದರಿಂದ ಇವರು ಬಹುಶಃ ಬಸವೇಶ್ವರನ ಕಾಲದಲ್ಲಿ ಇದ್ದವರು ಇಲ್ಲವೆ ಅವನಕಿಂತಲೂ ಸ್ವಲ್ಪಕಾಲ ಮೊದಲು ಇದ್ದವರು ಇರಬಹುದೆಂದು ನಮಗೆ ತೋರುತ್ತದೆ. ಆದರೆ ಬಸವೇಶ್ವರನ ತರುವಾಯ ವೀರಶೈವ ಶಬ್ದವು ಗ್ರಂಥಗಳಲ್ಲಿ ಬಹಳ ಪ್ರಚಾರದಲ್ಲಿ ಬರಹತ್ತಿತು. ಆಗ ರಾಮೇಶ್ವರ, ರಾಮನಾಥ, ರಾಮ ಈ ಶಬ್ದಗಳನ್ನು ಮುದ್ರಿಕೆಗಳಲ್ಲಿಟ್ಟುಕೊಂಡು ಉಪಯೋಗಿಸುವದು ತೀರ ನಿಂತುಹೋಗಿರಬೇಕು. ಒಟ್ಟಿಗೆ, ರಾಮ ಈ ಶಬ್ದವುಳ್ಳಂಥ ಮುದ್ರಿಕೆಗಳು

ಬೇರೆ ಮುದ್ರಿಕೆಗಳಿಗಿಂತಲೂ ಮೊದಲಿನವುಗಳು ಮತ್ತು ಅವುಗಳನ್ನು ಉಪಯೋಗಿಸಿದ ವಚನಕಾರರು ದೇವರದಾಸಿಮಯ್ಯನಿಗೋಸ್ಕರ ಅವರ ಭಾವವುಳ್ಳವರಿರಬೇಕು ಎಂದು ಹೇಳುವದೇ ನಮ್ಮ ಮುಖ್ಯ ಅಭಿಪ್ರಾಯವು.

ನಾವು ಮೇಲೆ ವಿವರಿಸಿದ ಸಂಗತಿಗಳಿಗೆ ಕೆಲವು ಶಿಲಾಶಾಸನಗಳ ಆಧಾರಗಳೂ ದೊರೆಯುತ್ತವೆ. ಅವುಗಳಲ್ಲಿ ನಾವು ಕೆಳಗೆ ಉಲ್ಲೇಖಿಸಿದ ಶಿಲಾಶಾಸನವು ಈ ವಿಷಯದಲ್ಲಿ ಮಹತ್ವದ್ದಿರುತ್ತದೆ. ಈ ಶಾಸನವು ಹಾಸನ ಜಿಲ್ಹೆ ಅರಸಿಕೆರೆ ತಾಲೂಕಿನಲ್ಲಿರುವ ಹಿರಿಯೂರು ಗ್ರಾಮದಲ್ಲಿದ್ದು ಇದರ ಮಿತಿಯು "ಶಕೆ ನೃ ವರ್ಷ ೧೧೭೭ ಆನಂದ ಸಂವತ್ಸರದ ಪುಷ್ಯ ಶುದ್ಧ ೧೧ ಸೋಮವಾರ" ಅಂದರೆ ಕ್ರಿ. ಶ. ೧೨೫೫-೫೬ನೇ ವರ್ಷದ್ದು ಇರುತ್ತದೆ. ಈ ಶಾಸನದಲ್ಲಿ ಹೇಳಿರುವದೇನಂದರೆ:—

ಸಿರಿಯಾಳ್ವ ಬಸವಯ್ಯನೊಳ್ಪಿಸೆವ......ಮಂ ಬಾಣನು । ದ್ಧರ
ಭೋಗಂ ಸಲೆ ಚೋಳನುದ್ಭಟನನತರ್ಕ್ಯಂ ಸಿಂಧ ಬಲ್ಲಾಳನೀ॥ ಧರೆ
ಕೊಂಡಾಡುವ ದಾಸಿಮಯ್ಯನೆಸೆದಿರ್ದ್ದ ಭಕ್ತ ಸಂದೋಹವಾ। ದರದಿಂ
ಶಂಕರ ಕಂಡ ನಂಬಿ ಸಿನಗೀಗುದ್ಬೋಧ ಸಂಪತ್ತಿಯಂ॥

ಇದರಲ್ಲಿ ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧರಾದ ಬಸವೇಶ್ವರ, ಬಾಣ, ಚೋಳ, ಉದ್ಭಟ, ಸಿಂಧು ಬಲ್ಲಾಳ, ದೇವರದಾಸ, ನಂಬಿಯಕ್ಕ ಇವರ ಉಲ್ಲೇಖಗಳಿವೆ. ಇವರಲ್ಲಿ ದೇವರದಾಸಿಮಯ್ಯನನ್ನು ಧರೆಯೆಲ್ಲವೂ ಕೊಂಡಾಡುತ್ತಿದೆ ಎಂದು ಹೇಳಿವೆ. ಹೀಗೆ ಬೇರೆ ಶರಣರು ಇದರಲ್ಲಿ ಹೇಳಲ್ಪಡದೆ ಇರುವದು ಲಕ್ಷಿಸತಕ್ಕ ಸಂಗತಿಯಾಗಿದೆ. ಈ ರೀತಿಯಾಗಿ ಬಸವೇಶ್ವರನು ವರ್ಣಿಸಲ್ಪಡುವದು ಯೋಗ್ಯವಾದದ್ದಿತ್ತು. ಆದರೆ ಅವನಿಗೆ ಬೇರೊಂದು ವಿಶೇಷಣವು ಕೊಡಲ್ಪಟ್ಟಿದೆ. ಈ ಶಾಸನವನ್ನು ಬರೆದವನು ಈ ಶ್ಲೋಕದಲ್ಲಿ 'ಬಸವಯ್ಯ' ಈ ಹೆಸರು ಇದ್ದಲ್ಲಿ 'ದಾಸಿಮಯ್ಯ'ನೆಂತಲೂ 'ದಾಸಿಮಯ್ಯ' ಇದ್ದಲ್ಲಿ 'ಬಸವಯ್ಯ' ಎಂತಲೂ ಇಡಬಹುದಾಗಿತ್ತು. ಹೀಗೆ ಮಾಡಿದ್ದರೆ 'ಸಿರಿಯಾಳ್ವ ದಾಸಿಮಯ್ಯ'ನೆಂತಲೂ 'ಧರೆ ಕೊಂಡಾಡುವ ಬಸವಯ್ಯ' ಎಂತಲೂ ಆಗುತ್ತಿತ್ತು. ಇದು ಪ್ರಾಸಕ್ಕೂ ಅಲ್ಲದೆ ಉಭಯ ಮಹನೀಯರ ಚರಿತ್ರೆಗಳಿಗೂ ಸರಿಯಾಗಿ ಅನ್ವಯಿಸುತ್ತಿತ್ತು. ಯಾಕೆಂದರೆ ತವನಿಧಿಯನ್ನು ಪಡೆದ ದಾಸಿಮ

ಯ್ಯನು ಸಿರಿಯಾಳ್ವ ಅಂದರೆ ಶ್ರೀಮಂತಿಕೆಯು ಒಡೆಯನೆಂತಲೂ ಅತ್ಯಂತ ಪ್ರಸಿದ್ಧನಾದ ಬಸವೇಶ್ವರನು ಧರೆ ಕೊಂಡಾಡುವಂಥವನಾಗಿದ್ದನೆಂತಲೂ ಅರ್ಥವು ಆಗುತ್ತಿತ್ತು. ಆದರೆ ಶಾಸನದ ಲೇಖಕನು ಹೀಗೆ ಮಾಡದೆ 'ಧರೆ ಕೊಂಡಾಡುವ' ಈ ಶಬ್ದಗಳನ್ನು ದೇವರದಾಸಿಮಯ್ಯನಿಗೆ ಹಚ್ಚಿರುವದರಿಂದ ಅವನು ಬಸವೇಶ್ವರನಕಿಂತಲೂ ಈ ಕಾಲದಲ್ಲಿ ಹೆಚ್ಚಿಗೆ ಪ್ರಸಿದ್ಧಿಯನ್ನು ಹೊಂದಿರಬಹುದೆಂಬ ಅನುಮಾನವು ಉಂಟಾಗುತ್ತದೆ.

ಬಿಜ್ಜಳನ ಶಿಲಾಶಾಸನಗಳು ಅನೇಕ ಸಿಕ್ಕಿದ್ದರೂ, ಅವುಗಳಲ್ಲಿ ಬಸವೇಶ್ವರನ ಉಲ್ಲೇಖವಿಲ್ಲ. ಇಂಥ ಕೆಲವು ಮಾತ್ರ ಇವೆ. ಬಸವೇಶ್ವರನು ಕಡೆಗೆ ರಾಜಧಾನಿಯನ್ನು ಬಿಟ್ಟು ಕೂಡಲಸಂಗಮಕ್ಕೆ ಹೋಗಬೇಕಾಯಿತು. ಇದರಿಂದ ಬಸವೇಶ್ವರನಿದ್ದ ಕಾಲದಲ್ಲಿ ಜನರು ಅದರಲ್ಲಿ ವಿಶೇಷವಾಗಿ ರಾಜಕೀಯ ಜನರು ಅವನನ್ನು ಮನ್ನಿಸದೆ ಇರುವದು ಸಂಭವವದೆ. ಅಲ್ಲದೆ ಧಾರ್ಮಿಕ ಮತ್ತು ಸಾಮಾಜಿಕ ಪುರುಷರು ಪ್ರಸಿದ್ಧಿಗೆ ಬರಲು ಕೆಲಕಾಲ ಹತ್ತುತ್ತದೆ. ಆರಂಭದಲ್ಲಿ ಅವರು ಹಿಂಸಿಸಲ್ಪಡುತ್ತಾರೆ. ಹೀಗೆಯೇ ಬಸವೇಶ್ವರನ ಸ್ಥಿತಿಯು ಆದದ್ದರಿಂದ ಅವನ ಉಲ್ಲೇಖಗಳು ಆರಂಭದ ಶಿಲಾಶಾಸನಗಳಲ್ಲಿ ಮಾಡಲ್ಪಟ್ಟಿರಲಿಕ್ಕಿಲ್ಲೆಂದು ತೋರುತ್ತದೆ.

ಶಿವಶರಣರು ತಮ್ಮ ವಚನಗಳಲ್ಲಿ ತಮ್ಮ ಸ್ವಾತದ ವಿಷಯವಾಗಿ ಯಾವಾಗಲೂ ಹೇಳಿಕೊಳ್ಳುವದಿಲ್ಲ. ಆದರೆ ಆಕಸ್ಮಾತ್ತಾಗಿ ಅವರ ಬಾಯಿಂದ ಅವು ಹೊರಡುವದುಂಟು. ಅಂಥ ಸಮಯದಲ್ಲಿ ಅವರು ಒಂದೆರಡು ಶಬ್ದಗಳನ್ನು ಮಾತ್ರ ತಮ್ಮ ವಚನಗಳಲ್ಲಿ ಹಾಕುವದುಂಟು. ಹೀಗೆ ಮಾಡಿದ ಉಲ್ಲೇಖಗಳಲ್ಲಿ ಸತ್ಯತೆಯು ಇರುತ್ತದೆಂದು ತಿಳಿಯಲು ಏನೂ ಅಡ್ಡಿ ಇರುವದಿಲ್ಲ. ದೇವರದಾಸಿಮಯ್ಯನು ತನ್ನನ್ನು ಕುರಿತು ಉಲ್ಲೇಖಿಸಿದ ಒಂದು ವಚನವು ಕೆಳಗಿನಂತೆ ಇದೆ.

"ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ. ಆಸೆ ಮಾಡನೋಡಾ. ಅನ್ಯದೈವಂಗಳಿಗೆ ದೇಶದ ಪಿಶಾಚಿಗಳಿಗೆ ಆಸೆ ಮಾಡ ನೋಡಾ. ಆಸೆ ಮಾಡಿದನಾದಡೆ ಅವ ದಾಸನ ಕುಲವಲ್ಲ. ಅವನನ್ಯ ಕುಲ ಕಾಣಾ ರಾಮನಾಥಾ"

ಈ ವಚನದಲ್ಲಿ 'ದಾಸನ ಕುಲ' ಎಂಬದು ಎರಡು ಸಲ ಬಂದಿರುತ್ತದೆ. 'ದಾಸನ ಕುಲ' ಎಂಬ ಶಬ್ದದಿಂದ ದೇವರದಾಸಿಮಯ್ಯನು ತನ್ನ ನೇಕಾರರ ಜಾತಿಯನ್ನು ಅನುಲಕ್ಷಿಸಿ ನುಡಿದಿಲ್ಲೆಂಬದು ಸ್ಪಷ್ಟವಿರುತ್ತದೆ. ಇಲ್ಲಿ 'ಕುಲ' ಎಂದರೆ ಜನ ಸಮೂಹ, ಅಥವಾ ಅನುಯಾಯಿಗಳು ಅಥವಾ ಶಿಷ್ಯರು ಎಂಬ ಅರ್ಥವನ್ನು ಇಟ್ಟುಕೊಂಡು ಅವನು ಈ ಶಬ್ದ ಪ್ರಯೋಗವನ್ನು ಮಾಡಿದ್ದಾನೆ. ಯಾವ ಶಿವಶರಣನು ಶಿವಾನುಭವದಲ್ಲಿದ್ದುಕೊಂಡು ತನ್ನ ಪೂರ್ತಿ ಆಚರಿಸುತ್ತ ಬಂದಿರುವನೋ ಅವನು ತನ್ನನ್ನು ಕುರಿತು ತಾನು ಅನೇಕ ಅನುಯಾಯಿಗಳುಳ್ಳವನು ಅಥವಾ ತನಗೆ ಅನೇಕ ಶಿಷ್ಯರಿದ್ದಾರೆ ಎಂದು ಸತ್ಯವಲ್ಲುದುದನ್ನು ಡಾಂಭಿಕತನದಿಂದ ಹೇಳುವ ಸಂಭವವಿಲ್ಲ. ದೇವರದಾಸಿಮಯ್ಯನು ನಡೆಸಿದ ಕ್ರಾಂತಿಕಾರಕ ಚಳವಳಿಯ ಮೂಲಕ ಬಹುಜನರು ಅವನ ಶಿಷ್ಯತ್ವವನ್ನು ಸ್ವೀಕರಿಸಿದ್ದರಿಂದಲೇ ಅವನು ಅವರನ್ನುದ್ದೇಶಿಸಿ ಹೀಗೆ ನುಡಿದಿರಬಹುದೆಂದು ತೋರುತ್ತದೆ. ಅಂಥವರದೊಂದು ವರ್ಗವೇ ಈ ಕಾಲಕ್ಕೆ ಆಗಿರಬಹುದು.

ಆದ್ದರಿಂದ ನಾವು ಮೇಲೆ ವಿವರಿಸಿದ ಸಂಗತಿಗಳು ಅಂದರೆ ದಾಸಿಮಯ್ಯನ ಮೂಲಕ ನಾಡಿನಲ್ಲಿ ಅನೇಕ ಶಿವಶರಣರು ಬಸವೇಶ್ವರನ ಕಾಲದ ವರೆಗೂ ಕಾಲಕಾಲಕ್ಕೆ ಆಗುತ್ತಬಂದರು, ಅವರಲ್ಲಿ ಬಹುಜನರು ದೇವರದಾಸಿಮಯ್ಯನ ಶಿಷ್ಯರಾಗಿದ್ದರು, ಆದ್ದರಿಂದ ಅವರು ಅವನ ಮುದ್ರಿಕೆಯನ್ನೇ ತಮ್ಮ ಮುದ್ರಿಕೆಗಳಲ್ಲಿ ಸೇರಿಸಿಕೊಂಡು ಅವನಂತೆ ವಚನಗಳನ್ನು ರಚಿಸುತ್ತಬಂದರು, ಇದರಿಂದ ದಾಸಿಮಯ್ಯನು ಜನರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದನು, ಅವನ ಪ್ರಸಿದ್ಧಿಯು ಈಗಿನ ಮೈಸೂರ ಪ್ರಾಂತದ ಮಧ್ಯದ ವರೆಗೂ ಪಸರಿಸಿತ್ತು, ಇಷ್ಟೇ ಅಲ್ಲ, ಅವನು ಒಂದು ಕಾಲದಲ್ಲಿ ಬಸವೇಶ್ವರನಕಿಂತಲೂ ಹೆಚ್ಚಿಗೆ ಮನ್ನಣೆಯನ್ನು ಜನರಲ್ಲಿ ಪಡೆದಿದ್ದನು, ಎಂಬಿವೆಲ್ಲವು ಮೇಲೆ ನಾವು ಕೊಟ್ಟ ಅನೇಕ ಆಧಾರಗಳ ಮೇಲಿಂದ ಸಿದ್ಧವಾಗುತ್ತವೆ.

ಬಸವೇಶ್ವರನ ತರುವಾಯ ಈ ವರೆಗೆ ಆಗಿ ಹೋದ ಗ್ರಂಥಕಾರರೆಲ್ಲರೂ ಶರಣರ ಚರಿತ್ರೆಗಳನ್ನು ವಿವರಿಸುವ ಸಂದರ್ಭದಲ್ಲಿ ದೇವರದಾಸಿಮಯ್ಯನನ್ನು ಉಲ್ಲೇಖಿಸದೆ ಅವರು ಬಿಟ್ಟಿರುವದಿಲ್ಲ. ಸ್ಥಳಸಂಕೋ

ಚದ ಮೂಲಕ ಆ ಉಲ್ಲೇಖಗಳನ್ನೆಲ್ಲ ನಾವು ಇಲ್ಲಿ ಕೊಟ್ಟಿರುವದಿಲ್ಲ. ಆದರೆ ಎಲ್ಲಕ್ಕೂ ಹಿಂದಿನ ಕವಿಯಾದ ಹರಿಹರನು ಅವನ ವಿಷಯವಾಗಿ ಹೇಗೆ ಉಲ್ಲೇಖ ಮಾಡಿದ್ದಾನೆಂಬುವದನ್ನು ವಾಚಕರು ಅರಿಯುವದು ಅವಶ್ಯವಿರುವದರಿಂದ ಅವನ ಉಲ್ಲೇಖಗಳನ್ನು ಮಾತ್ರ ನಾವು ಎತ್ತಿ ಕೆಳಗೆ ಕಾಣಿಸಿದ್ದೇವೆ.

ಹರಿಹರನು ಪಂಪಾಶತಕವೆಂಬ ಕಾವ್ಯವನ್ನು ಬರೆದದ್ದು ಅದರ ೬೬ನೇ ಶ್ಲೋಕದಲ್ಲಿ ಅವನು ಉಲ್ಲೇಖಿಸಿದ್ದು ಹೇಗೆಂದರೆ—

“ಬಿಡು ಮಾಣ್ಕಾಣೆಲೆ ಬೊಮ್ಮವಾದಿ ಸಟೆಯಂ ನೀಂ ನಂಬಿಗೋ ಎನ್ನನೆ। ಪೃಡನಂದಾಡನೆ ನಮ್ಮ ಗೂಡಯ್ಯನ ಮುಂದಾ ದಾಸಿಮಯ್ಯಂ ಉಡ॥ ಲ್ಸುಡನೆ ಸೀರೆಯ ನುಣ್ಣನೆ ಸಿರಿಯನಾಳ್ವಂ ಪೇಳ್ ಕೈಲಾಸಮಂ। ಕುಡನೆ ಸೀರೆಯನೆಮ್ಮ ನಂಬಿಗೆ ವಿರೂಪಾಕ್ಷಂ ಲಲಾಟೇಕ್ಷಣಂ॥

ಇದೇ ಕವಿಯು ತನ್ನ ಇನ್ನೊಂದು ಕಾವ್ಯವಾದ ಲಿಂಗಾರ್ಚನೆಯ ರಗಳೆ ಇದರಲ್ಲಿ ದಾಸಿಮಯ್ಯ ಮತ್ತು ಅವನ ಹೆಂಡತಿ ದುಗ್ಗಳನ್ನೆ ಈ ಉಭಯತರನ್ನೂ ಅವನು ಸ್ತುತಿಸಿದ್ದಾನೆ. ಅದು ಹೇಗೆಂದರೆ—

ಕೇಶಿರಾಜನ ದುಗ್ಗಳನ್ನೆ ದಾಸಿಮಯ್ಯನಂ।
ಭಾಷೆಗೀಶನ ತಂದ ವಿಸುವಾದಿಮಯ್ಯನಂ।

ಎಂದು ಇರುತ್ತದೆ. ಹರಿಹರ ಕವಿಯು ೧೨ನೇ ಶತಮಾನದ ಅಂತ್ಯ ಭಾಗದಲ್ಲಿದ್ದ ಮಹಾಕವಿಯಾಗಿದ್ದಾನೆ.

ಇನ್ನು ಮುಂದೆ ದೇವರದಾಸಿಮಯ್ಯನ ಕಾಲವನ್ನು ಕುರಿತು ವಿವೇಚಿಸುತ್ತೇವೆ. ಅವನು ಬಸವೇಶ್ವರನಕಿಂತಲೂ ಮೊದಲಿನವನಿರುತ್ತಾನೆಂಬದು ಸ್ಪಷ್ಟವಿರುತ್ತದೆ. ಚಾಲುಕ್ಯ ಜಯಸಿಂಹ ರಾಜನು ೧೦೧೮ರಿಂದ ೧೦೪೦ರ ವರೆಗೆ ಆಳಿದ್ದು, ಇವನ ಕಾಲದಲ್ಲಿಯೇ ದಾಸಿಮಯ್ಯನು ಪ್ರಸಿದ್ಧಿಗೆ ಬಂದನೆಂದು ಊಹಿಸಲು ಯಾವ ಪ್ರತ್ಯವಾಯವೂ ಇರುವದಿಲ್ಲ. ಈ ರಾಜನು ೧೦೩೫ರಿಂದ–೪೦ರ ವರೆಗೆ ಹೊಟ್ಟಲಕೆರೆಯಲ್ಲಿ ರಾಜ್ಯವಾಳಿದನೆಂಬುದು ಅನೇಕ ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ಹೊಟ್ಟಲಕೆರೆ ಎಂಬ ಹೆಸರಿನ ರಾಜಧಾನಿಯು ಇವನ ಹೊರ್ತು ಬೇರೆ ಯಾವ ರಾಜನದೂ ಇದ್ದದ್ದು ಕರ್ನಾಟಕ

ಇತಿಹಾಸದಲ್ಲಿ ಎಲ್ಲಿಯೂ ದೊರೆಯುವದಿಲ್ಲ. ಆದುದರಿಂದ ದೇವರದಾಸಿಮಯ್ಯನು ಈ ರಾಜನ ಆಸ್ಥಾನದಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದು ಇವನ ಕಾಲಕ್ಕೆ ಅಂದರೆ ಬಸವೇಶ್ವರನಕಿಂತಲೂ ೧೫೦ ವರ್ಷಗಳ ಮೊದಲು ಎಂದು ಸಿದ್ಧವಾಗುತ್ತದೆ.

ವೀರಶೈವ ಪುರಾಣಗಳಲ್ಲಿ ಸುಗ್ಗಲೆಯ ಗಂಡನಾದ ಜಯಸಿಂಹ ರಾಜನು ದೇಸಿಂಗ ಬಲ್ಲಾಳನೆಂದು ಕರೆಯಲ್ಪಟ್ಟಿದ್ದಾನೆ. ತಪ್ಪು ಗ್ರಹಿಕೆಯ ಮೂಲಕ ಮತ್ತು ಇತಿಹಾಸ ಸಂಶೋಧನದ ಅಭಾವದ ಮೂಲಕ ಈ ಗ್ರಂಥಕಾರರಲ್ಲಿ ಈ ತಪ್ಪು ಆಗಿರುತ್ತದೆ. ದೇಸಿಂಗ ಎಂಬ ಹೆಸರುಳ್ಳ ರಾಜನು ಕರ್ನಾಟಕದಲ್ಲಿ ಆಗಿಹೋಗಿರುವ ಯಾವ ವಂಶದಲ್ಲಿಯೂ ಆಗಿರುವದಿಲ್ಲ. ದೇಸಿಂಗ ಇದು ಜಯಸಿಂಹ ಇದರ ವಿಕೃತ ರೂಪವಾಗಿದೆ. ಶಿಲಾಶಾಸನಗಳಲ್ಲೆಲ್ಲ ಜಯಸಿಂಹ ಮತ್ತು ಅವನ ಹೆಂಡತಿ ಸುಗ್ಗಲೆ ಎಂಬ ಹೆಸರುಗಳು ಲಿಖಿಸಲ್ಪಟ್ಟಿವೆ. ದೇವರದಾಸಿಮಯ್ಯನ ಪುರಾಣ ಕರ್ತೃವಾದ ವಿರೂಪಾಕ್ಷ ಕವಿಯು ಕೆಲವು ಕಡೆಗೆ ದೇಸಿಂಗ ಬಲ್ಲಾಳನೆನ್ನದೆ ಜಯಸಿಂಹನೆಂತಲೇ ಅವನನ್ನು ಕರೆದಿದ್ದಾನೆ. ಈ ಕಾವ್ಯವು ಒಂದು ಸಂಸ್ಕೃತ ಗ್ರಂಥದ ಭಾಷಾಂತರವಾಗಿರುವದರಿಂದ ಮೂಲದಲ್ಲಿ ಜಯಸಿಂಹನೆಂತಲೇ ಈ ಹೆಸರು ಇರಬಹುದು. ಮೂಲ ಸಂಸ್ಕೃತ ಗ್ರಂಥವು ಇನ್ನೂ ಉಪಲಬ್ಧವಾಗಿರುವದಿಲ್ಲ.

ಬಸವೇಶ್ವರನು ತನ್ನ ವಚನಗಳಲ್ಲಿ ದಾಸಿಮಯ್ಯನನ್ನು ಅನೇಕ ಬಾರಿ ಹೊಗಳಿದ್ದಾನೆ ಇಂಥ ವಚನಗಳನ್ನು ನಾವು ಹಿಂದೆ ಉದಹರಿಸಿದ್ದೇವೆ. ಆದ್ದರಿಂದ ಅವನಕಿಂತಲೂ ಮೊದಲು ದಾಸಿಮಯ್ಯನಿದ್ದನೆಂಬುದು ಸ್ಪಷ್ಟವು. ಆದರೆ ದಾಸಿಮಯ್ಯನು ತನ್ನ ವಚನಗಳಲ್ಲಿ ಬಸವೇಶ್ವರನನ್ನು ಎಲ್ಲಿಯೂ ಉಲ್ಲೇಖಿಸಿರುವದಿಲ್ಲೆಂಬುದನ್ನು ನಾವು ಲಕ್ಷಿಸತಕ್ಕದ್ದು.

ತಮಿಳು ದೇಶದಲ್ಲಿ ಪುರಾತನರೆಂಬ ಹೆಸರಿನ ಶಿವಭಕ್ತರಾಗಿ ಹೋಗಿದ್ದಾರೆ. ಅವರ ವಿಷಯವಾಗಿ ಚೋಳ ರಾಜನು 'ಪಿರಿಯ ಪುರಾಣ'ವೆಂಬ ಗ್ರಂಥವನ್ನು ಬರೆಯಿಸಿದ ಬಳಿಕ ಅವರ ಹೆಸರುಗಳು ನಾಡಿನಲ್ಲಿ ಬಹು ಪ್ರಸಿದ್ಧವಾದವು. ಈ ಪುರಾತನರನ್ನು ಬಸವೇಶ್ವರನು ತನ್ನ ವಚನಗಳಲ್ಲಿ ಆಗಿಂದಾಗ್ಗೆ ಸ್ಮರಿಸುತ್ತಾನೆ. ಆದರೆ ದೇವರ ದಾಸಿಮಯ್ಯನು ಅವರನ್ನು ತನ್ನ ವಚನಗಳಲ್ಲಿ ಎಷ್ಟು ಮಾತ್ರವೂ

ಉಲ್ಲೇಖಿಸುವದಿಲ್ಲ. ಇದರಿಂದ ಅವನು ಈ ಕಾಲಕ್ಕಿಂತಲೂ ಮೊದಲು ಆಗಿಹೋಗಿರಬಹುದೆಂದು ತೋರುತ್ತದೆ. ದಾಸಿಮಯ್ಯನು ಬಸವೇಶ್ವರನಕಿಂತಲೂ ಹಿಂದಿನವನೆಂಬುದಕ್ಕೆ ಕೆಲವು ಶಿಲಾಶಾಸನಗಳ ಆಧಾರಗಳೂ ನಮಗೆ ಉಪಲಬ್ಧವಾಗಿರುತ್ತವೆ. ಅವು ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ಬಸವೇಶ್ವರನು ಕ್ರಿ. ಶ. ೧೧೩೨ರಲ್ಲಿ ಜನಿಸಿ ೧೧೬೮ರ ವರೆಗೆ ಇದ್ದನೆಂದು ಸದ್ಯಕ್ಕೆ ತಿಳಿಯಲ್ಪಟ್ಟಿದೆ. ಇದು ನಂಬಲರ್ಹವಾದುದೆಂದು ನಮಗೆ ತೋರುತ್ತದೆ. ಮುದನೂರಿಂದ ೩೦ ಮೈಲು ದೂರವಿರುವ ಗೊಬ್ಬೂರು ಗ್ರಾಮದಲ್ಲಿರುವ ಕೊರವರ ಬಾವಿಯ ಥರಕ್ಕೆ ಹಾಕಿದ ಕಲ್ಲುಗಳಲ್ಲಿ ಒಂದು ಶಿಲಾಶಾಸನವಿದ್ದು ಅದರ ಅಚ್ಚಿನ ಪ್ರತಿಯು ಲಂಡನ್ನ ಏಶಿಯಾಟಿಕ ಸೊಸಾಯಿಟಿಯಲ್ಲಿದೆ. ಅದನ್ನು ಡಾ॥ ಎಸ್. ಸಿ. ನಂದೀಮಠ, ಎಮ್. ಏ. ಪಿ. ಎಚ್. ಡಿ ಇವರು ಕಂಡುಹಿಡಿದು ಅದರಲ್ಲಿದ್ದ ವಿಷಯಗಳನ್ನು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದಾರೆ. ಅದು ಹೇಗೆಂದರೆ—

'ಪಿರಿಯ ಗೊಬ್ಬೂರಶೇಷ ಮಹಾಜನಂಗಳ ದಿವ್ಯ ಶ್ರೀಪಾದ ಪದ್ಮಾರಾಧಕರು ಶ್ರೀರಾಮೇಶ್ವರ ದೇವರ ಗಂಧವಾರಣಜ್ವಾಡ ಕುಲತಿಲಕ ಜಾಡರ ದಾಸಿಮಯ್ಯ ಪ್ರಿಯ ಪುತ್ರರುಮಪ್ಪ ಸಕಲ ಜಾಡಗೊತ್ತಳಿಗಳ ಕುಲದೇವ ದೇವನಪ್ಪ ಗೊಜ್ಜೇಶ್ವರ ದೇವರ ಪೂಜೆ......" ಎಂದು ಮೊದಲಾಗಿ ಇದರಲ್ಲಿ ಇದೆ.

ಇದರ ವರ್ಷವು ಶಿಲಾಶಾಸನದಲ್ಲಿ ಹೇಳಿರುವುದು ಹೇಗೆಂದರೆ— "ಜಗದೇಕಮಲ್ಲ ದೇವ ವರುಷದ ೧೧ನೆಯ ವಿಭವ ಸಂವತ್ಸರ ಶ್ರಾವಣ ಶುದ್ಧ ಏಳು ಮಂದವಾರ" ಎಂದು ಇರುತ್ತದೆ. ಇದು ಕ್ರಿ ಶ. ೧೧೪೮ ಜುಲೈ ತಾರೀಖು ೨೪ ಶನಿವಾರವಾಗುತ್ತದೆ. ಈ ವರ್ಷ ಬಸವೇಶ್ವರನ ವಯಸ್ಸು ೧೬ ಮಾತ್ರ ಇದ್ದಿತು. ಆದ್ದರಿಂದ ದೇವರದಾಸಿಮಯ್ಯನು ಈ ಕಾಲದಲ್ಲಿ ಇಷ್ಟು ಪ್ರಸಿದ್ಧಿಗೆ ಬರಬೇಕಾದರೆ ಇದಕ್ಕೂ ಬಹಳ ದಿವಸಗಳ ಮುಂಚೆಯೇ ಜೀವಿಸಿರಬೇಕು. ಇದರಿಂದ ಅವನು ಜಯಸಿಂಹನ ಕಾಲಕ್ಕೆ ೧೧ನೇ ಶತಮಾನದ ಮಧ್ಯಭಾಗದಲ್ಲಿ ಇರಬಹುದೆಂಬ ಊಹೆಯು ದೃಢಪಡುತ್ತದೆ.

ಇನ್ನೊಂದು ಶಾಸನವು ಕ್ರಿ. ಶ. ೧೧೬೭ ಜುಲೈ ೧೦ನೇ ತಾರೀಖು ಸೋಮವಾರ ಈ ಕಾಲದ್ದಿರುತ್ತದೆ. ಅದು ಈಗ ಚಿಕ್ಕ ಮುದೇನೂರ

ಲ್ಲಿಯ ಗೋಪಾಲಸ್ವಾಮಿ ದೇವಾಲಯದ ಮಧ್ಯರಂಗದ ೩ನೇ ಕಂಭದ ಮೇಲೆ ಇದೆ. ಅದರಲ್ಲಿ "ಶ್ರೀಮತು ಕಳಚುರಿಯ ಭುಜಬಲ ಚಕ್ರವರ್ತಿ ತ್ರಿಭುವನಮಲ್ಲ ವರುಷದ ೧೨ನೇ ಸರ್ವಜಿತು ಸಂವತ್ಸರದ ಆಷಾಢ ಬಹುಳ ೭ ಸೋಮವಾರ ಪುಷ್ಯ ನಕ್ಷತ್ರ ವ್ಯತಿಪಾತ" ಎಂದಿದ್ದು ಈ ಅರಸನ ಬಗ್ಗೆ ಹೇಳಿದ ಈ ಬಿರುದು ಬಿಜ್ಜಳರಾಯನದಿರುತ್ತದೆ. ಈ ಶಾಸನದಲ್ಲಿ ವಿವರಿಸಿರುವದೇನೆಂದರೆ, "ಪವಿತ್ರ ಗುಣಾನುರಾಗರಪ್ಪ ಶ್ರೀಮತ್ ಸರ್ವ ನಮಸ್ಯದಗ್ರಹಾರಂ ದಕ್ಷಿಣವಾರಣಾಸಿ ಮುದೆನೂರ ದಾಸಯ್ಯಗಳ.. ...ಪ್ರಮುಖ ಅನೇಕ ಮಹಾಜನಂಗಳು" ಎಂದಿದೆ. ಈ ಶಾಸನದ ತರುವಾಯ ಒಂದು ವರ್ಷದಲ್ಲಿಯೇ ಬಸವೇಶ್ವರನು ಕಲ್ಯಾಣಪಟ್ಟಣವನ್ನು ಬಿಟ್ಟುಕೊಟ್ಟು ಕೂಡಲಸಂಗಮಕ್ಕೆ ಬಂದು ಅಲ್ಲಿಯೇ ಐಕ್ಯನಾದನು. ಈ ಕಾಲದಲ್ಲಿದ್ದ ಈ ಶಿಲಾಶಾಸನದಲ್ಲಿ ಮುದನೂರು ಇದು 'ದಕ್ಷಿಣ ವಾರಣಾಸಿ' ಎಂದು ಹೇಳಲ್ಪಟ್ಟಿದೆ. ಇದು ದಾಸಿಮಯ್ಯನ ಧರ್ಮೋದ್ಧಾರ ಕಾರ್ಯಗಳ ಪರಿಣಾಮವಾಗಿರಬಹುದು. ಇಂಥ ಹೆಸರು ಇದಕ್ಕೆ ಪ್ರಾಪ್ತವಾಗಬೇಕಾದರೆ ದಾಸಿಮಯ್ಯನು ಇದಕ್ಕೂ ಮೊದಲು ಬಹಳ ವರ್ಷಗಳ ಹಿಂದೆಯೇ ಪ್ರಸಿದ್ಧಿಗೆ ಬಂದಿರಬೇಕು.

ಒಟ್ಟಿಗೆ ಈ ಎರಡು ಶಿಲಾಶಾಸನಗಳಿಂದ ದೇವರ ದಾಸಿಮಯ್ಯನು ಬಸವೇಶ್ವರನಕಿಂತಲೂ ಮೊದಲಿಗೆಯೇ ಪ್ರಸಿದ್ಧಿಗೆ ಬಂದಿರಬಹುದೆಂಬ ಅನುಮಾನವು ದೃಢಪಡುತ್ತದೆ.

ಕರ್ನಾಟಕದಲ್ಲಿ ವೀರಶೈವ ಧರ್ಮಪ್ರಸಾರವು ಕಾಲಕಾಲಕ್ಕೆ ಅನೇಕ ಮಹನೀಯರಿಂದ ಜರಗುತ್ತ ಬಂದಿರುತ್ತದೆ. ಒಂದೊಂದು ಕಾಲದಲ್ಲಿ ಕೆಲವೊಂದು ಪ್ರದೇಶದಲ್ಲಿ ಬಹುಜನ ಪ್ರವರ್ತಕರು ಉಗಮ ಹೊಂದಿ ಧರ್ಮಪ್ರಸಾರದ ಕಾರ್ಯಗಳನ್ನು ಮಾಡಿದ್ದಾರೆ. ಇಂಥ ಪ್ರದೇಶವನ್ನು ನಾವು ಕೇಂದ್ರವೆಂದು ಕರೆಯಬಹುದು. ಇಂಥ ಕೇಂದ್ರಗಳ ಸ್ಥಾನಗಳನ್ನು ಸಂಶೋಧಿಸಲು ಅವುಗಳ ಸಂಖ್ಯೆಯು ಹೋದ ಒಂದು ಸಾವಿರ ವರುಷಗಳಲ್ಲಿ ಕರ್ನಾಟಕದಲ್ಲಿ ಒಂಬತ್ತು ಆಗಿದ್ದು ಅವುಗಳನ್ನು ನಾವು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇವೆ. ಅವುಗಳಲ್ಲಿ ಮೊದಲನೆಯದು ಶ್ರೀಶೈಲ ಕೇಂದ್ರವಾಗಿತ್ತೆಂದು ನಮಗೆ ತೋರುತ್ತದೆ.

## ಶ್ರೀಶೈಲ ಕೇಂದ್ರ.

ಕೆಲವರು ವೀರಶೈವ ಧರ್ಮದ ಮೂಲ ಸ್ಥಾಪಕನು ಬಸವೇಶ್ವರನೇ ಇದ್ದಾನೆಂದು ಭಾವಿಸಿರುತ್ತಾರೆ. ಆದರೆ ದೇವರ ದಾಸಿಮಯ್ಯನ ಚರಿತ್ರೆಯಿಂದ ಇದು ನಿಜವಾದುದಲ್ಲವೆಂದು ತಿಳಿದುಬರುತ್ತದೆ. ದಾಸಿಮಯ್ಯನು ತನ್ನ ವೀರಶೈವ ದೀಕ್ಷೆಯನ್ನು ಶ್ರೀಶೈಲ ಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ಹೊಂದಿದನೆಂದು ಅವನ ಎಲ್ಲ ಚರಿತ್ರೆಗಳಲ್ಲಿ ಹೇಳಲ್ಪಟ್ಟಿರುವದರಿಂದ ಈ ಸ್ಥಾನವೇ ವೀರಶೈವ ಧರ್ಮದ ಮೊದಲನೆಯ ಕೇಂದ್ರವಾಗಿತ್ತೆಂಬ ಅನುಮಾನವು ಉಂಟಾಗುತ್ತದೆ. ಇಲ್ಲಿ ಪುರಾತನ ಕಾಲದಲ್ಲಿ ಒಂದು ದೊಡ್ಡ ಪಟ್ಟಣವಿತ್ತೆಂದು ಅಲ್ಲಿಯ ಶಿಲಾಶಾಸನಗಳಿಂದ ತಿಳಿಯುತ್ತಿದೆ. ಈ ಸ್ಥಾನವು ಅತ್ಯಂತ ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಹೊಂದಿರುತ್ತದೆ. ಬಸವೇಶ್ವರನ ಕಾಲದಲ್ಲಿ ಆಗಿಹೋದ ಸಿದ್ಧರಾಮೇಶ್ವರ, ಮಹದೇವಿಯಕ್ಕ, ಸಕಳೇಶ ಮಾದರಸ, ಅಲ್ಲಮಪ್ರಭು, ಶಿವಯೋಗಿ ಮಲ್ಲರಸ, ಗೋರಕ್ಷ, ಈ ಮೊದಲಾದವರ ಚರಿತ್ರೆಗಳನ್ನು ಪರಿಶೀಲಿಸಿದಲ್ಲಿ ಇವರೆಲ್ಲರೂ ಕೆಲವುಮಟ್ಟಿಗಾದರೂ ಶ್ರೀಶೈಲ ಮಲ್ಲಿಕಾರ್ಜುನನಿಗೆ ಸಂಬಂಧಪಟ್ಟವರೆಂಬ ಅಂಶವು ತೋರಪಡುತ್ತದೆ. ಆದ್ದರಿಂದ ಇಲ್ಲಿಯೇ ವೀರಶೈವ ಧರ್ಮಪ್ರವಾಹವು ಮೊದಲು ಉಗಮ ಹೊಂದಿ ಅಲ್ಲಿಂದ ಅದು ಎಲ್ಲ ಕಡೆಗೂ ಪಸರಿಸಿದ ಹಾಗೆ ತೋರುತ್ತದೆ.

ಈ ಪ್ರವಾಹವು ಪಶ್ಚಿಮಕ್ಕೆ ಕನ್ನಡನಾಡಿನ ಕಡೆಗೆ ಹರಿಯಲಾಗಿ ಅಲ್ಲಿ ಅನೇಕ ಶಿವಶರಣರು ಉದ್ಭವಿಸಿದರು. ಹಾಗೆಯೇ ಇನ್ನೊಂದು ಪ್ರವಾಹವು ಪೂರ್ವದಿಶೆಗೆ ಅಂದರೆ ಆಂಧ್ರ ದೇಶದ ಕಡೆಗೆ ಹೊರಳಲು ಅದು 'ವಿಜಯವಾಟಿಕಾ' ಎಂದರೆ ಬಿಜವಾಡ ಮತ್ತು ಅದರ ಸುತ್ತಲಿನ ಪ್ರದೇಶದಲ್ಲಿ ನೆಲೆಯೂರಿತು. ಈ ಕಡೆಗೆ ಮಲ್ಲಿಕಾರ್ಜುನ ಪಂಡಿತಾರಾಧ್ಯ, ಶ್ರೀಪತಿ ಪಂಡಿತಾರಾಧ್ಯ ಮೊದಲಾದ ಮಹಾನುಭಾವರು ಉದ್ಭವಿಸಿದರು.

ಈ ಯಾವತ್ತರೂ ಬಸವೇಶ್ವರನಕಿಂತಲೂ ಮೊದಲಿನವರು, ಪುರಾತನ ಕಾಲದವರು. ಆದ್ದರಿಂದ ಶ್ರೀಶೈಲವೇ ವೀರಶೈವ ಧರ್ಮಕ್ಕೆ ಪ್ರಥಮ ಕೇಂದ್ರವಾಗಿರಬೇಕು.

## ೭. ಕೊಲ್ಲಿಪಾಕಿ-ಪೊಟ್ಟಲಕೆರೆ ಕೇಂದ್ರ.

ಶ್ರೀಶೈಲದ ತರುವಾಯ ಕೊಲ್ಲಿಪಾಕಿ ಮತ್ತು ಪೊಟ್ಟಲಕೆರೆ ಈ ಪಟ್ಟಣಗಳಿದ್ದ ಪ್ರದೇಶವು ವೀರಶೈವ ಧರ್ಮಕ್ಕೆ ಎರಡನೆಯ ಕೇಂದ್ರಸ್ಥಾನವಾಗಿ ಪರಿಣಮಿಸಿರಬೇಕೆಂದು ತೋರುತ್ತದೆ. ಇಲ್ಲಿ ಬಹುಜನ ವೀರಶೈವ ಶಿವಶರಣರು ಆಗಿಹೋಗಿರುತ್ತಾರೆ. ಆದರೆ ಈ ಭಾಗವು ಇನ್ನೂ ಪೂರ್ಣವಾಗಿ ಸಂಶೋಧಿಸಲ್ಪಟ್ಟಿಲ್ಲ. ಒಂದುವೇಳೆ ಸಂಶೋಧಿಸಿದಲ್ಲಿ ವೀರಶೈವ ಧರ್ಮ, ವಚನವಾಙ್ಮಯ ಇವುಗಳ ಮೂಲ ಸ್ವರೂಪವನ್ನು ಇಲ್ಲಿ ಕಂಡುಹಿಡಿಯುವದು ಶಕ್ಯವೆಂದು ತೋರುತ್ತದೆ. ಪಾಲ್ಕುರಿಕೆಯು ಇದೇ ಭಾಗದಲ್ಲಿ ಇದ್ದು, ಇಲ್ಲಿ ಸೋಮನಾರಾಧ್ಯ, ಸೋಮಾರಾಧ್ಯ ಮೊದಲಾದ ಪೂರ್ವಕಾಲದ ಶಿವಶರಣರು ತಮ್ಮ ಉದ್ಗ್ರಂಥಗಳನ್ನೂ ಪುರಾಣಗಳನ್ನೂ ಬರೆದಿರುವರು. ಪೊಟ್ಟಲಕೆರೆಯಲ್ಲಿ ಮಹಾ ಕವಿಯಾದ ಬ್ರಹ್ಮಶಿವನು ಗಣಾಶಿಬಲ್ಲಿ ಇದ್ದನು. ಇವನು ಮೊದಲು ಜೈನನು. ಮುಂದೆ ವೀರಶೈವನಾದನು. ಆ ಮೇಲೆ ಅವನಿಗೆ ಅದು ಬೇಡಾಗಿ ಪುನಃ ಜೈನನಾದನು. ಪೊಟ್ಟಲಕೆರೆಯಲ್ಲಿ ದೇವರದಾಸಿಮಯ್ಯನು ಸ್ಥಾಪಿಸಿದ್ದ ಉತ್ತರನಾಥ ದೇವಾಲಯವು ಈಗಲೂ ಅಲ್ಲಿ ಉಂಟು. ಅದರ ಈಗಿನ ಹೆಸರು 'ನಾಗಲಿಂಗೇಶ್ವರ' ಎಂದಿದೆ. ಈ ಎಲ್ಲ ಸಂಗತಿಗಳಿಂದ ಶ್ರೀಶೈಲ ಕೇಂದ್ರದ ತರುವಾಯ ಕೊಲ್ಲಿಪಾಕಿ-ಪೊಟ್ಟಲಕೆರೆ ಕೇಂದ್ರವೇ ಪ್ರಸಿದ್ಧಿಗೆ ಬಂದಿರಬಹುದೆಂದು ಊಹಿಸಲು ಬಲವಾದ ಕಾರಣಗಳಿವೆ.

## ೮. ಮುದನೂರು ಕೇಂದ್ರ.

ದೇವರದಾಸಿಮಯ್ಯನು ಪೊಟ್ಟಲಕೆರೆಯಲ್ಲಿ ಪ್ರಸಿದ್ಧನಾಗಿ ಅಲ್ಲಿಂದ ಪಶ್ಚಿಮ ಉತ್ತರಕರ್ನಾಟಕಕ್ಕೆ ಬಂದು ಇಲ್ಲಿ ವೀರಶೈವ ಮತವನ್ನು ಬಹಳವಾಗಿ ಪ್ರಸಾರಗೊಳಿಸಿದನೆಂದು ಅವನ ಚರಿತ್ರೆಯಿಂದ ತಿಳಿದು ಬರುತ್ತದೆ. ಅವನು ಪ್ರಾರಂಭಿಸಿದ ಚಳವಳಿಯ ಮೂಲಕ ಈ ಭಾಗದಲ್ಲಿ ಕಾಲಕಾಲಕ್ಕೆ ಬಹುಜನ ಶಿವಶರಣರು ಆಗಿಹೋಗಿದ್ದಾರೆ. ಈ ಸ್ಥಳವು ವೀರಶೈವ ಧರ್ಮಕ್ಕೆ ಮೂರನೆಯ ಕೇಂದ್ರಸ್ಥಾನವಾಗಿ ಪರಿಣಮಿಸಿರುತ್ತದೆ.

## ೯. ಮಂಗಳವಾಡ ಕೇಂದ್ರ.

ತರುವಾಯ ರೇವಣಸಿದ್ಧೇಶ್ವರನು ಕೊಲ್ಲಿಪಾಕಿಯಲ್ಲಿ ಉಗಮಿಸಿ ಅಲ್ಲಿಂದ ಉತ್ತರ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ

ಮಂಗಳವಾಡದಲ್ಲಿ ಬಂದು ನಿಂತು ಅಲ್ಲಿ ಬಿಜ್ಜಳನಲ್ಲಿ ಅನೇಕ ಸೋಪಾಡಗಳನ್ನು ಮಾಡಿ ವೀರಶೈವ ಧರ್ಮವನ್ನು ಈ ಭಾಗದಲ್ಲಿ ಉನ್ನತಸ್ಥಿತಿಗೆ ತಂದಿದ್ದಾನೆ. ಹೀಗೆ ಮುದನೂರು ಮತ್ತು ಮಂಗಳವಾಡ ಈ ಪಟ್ಟಣಗಳಿದ್ದ ಪ್ರದೇಶದಲ್ಲಿ ಅಸಂಖ್ಯ ಶಿವಶರಣರು ಉದ್ಭವಿಸಿದ್ದಾರೆ. ಆದ್ದರಿಂದ ಮಂಗಳವಾಡವು ವೀರಶೈವ ಧರ್ಮಕ್ಕೆ ನಾಲ್ಕನೆಯ ಕೇಂದ್ರಸ್ಥಾನವಾಗಿದೆ. ಈ ಎಲ್ಲ ಕಾಲಗಳಲ್ಲಿ ಬಸವೇಶ್ವರನು ಇನ್ನೂ ಪ್ರಸಿದ್ಧಿಗೆ ಬಂದಿರಲಿಲ್ಲ.

## ಕಲ್ಯಾಣ ಕೇಂದ್ರ.

ಈ ಕೇಂದ್ರವು ಬಸವೇಶ್ವರನು ಬಿಜ್ಜಳರಾಜನಲ್ಲಿ ಪ್ರಸಿದ್ಧನಾದ ಬಳಿಕ ಉಂಟಾಗಿರುತ್ತದೆ. ಇಷ್ಟರಲ್ಲಿ ಅನೇಕ ಕಡೆಗೆ ಉದ್ಭವಿಸಿದ್ದ ಶಿವಶರಣರು ಅವನಲ್ಲಿ ನೆರೆದು ಅವನ ನೇತೃತ್ವದಲ್ಲಿ ವೀರಶೈವ ಧರ್ಮಪ್ರಸಾರ ಕಾರ್ಯವನ್ನು ಬಹುಭರದಿಂದ ಕೈಕೊಂಡರು ಈ ಕಾರ್ಯವು ಬಸವೇಶ್ವರನ ಕಾಲದಲ್ಲಿ ಕನಿಷ್ಠ ೧೦ ವರ್ಷಗಳ ವರೆಗೂ ನಡೆದ ಹಾಗೆ ತೋರುತ್ತದೆ. ಈ ಪ್ರಕಾರ ಕಲ್ಯಾಣ ಪಟ್ಟಣವು ವೀರಶೈವ ಧರ್ಮಕ್ಕೆ ಐದನೆಯ ಕೇಂದ್ರಸ್ಥಾನವಾಗಿದೆ.

## ಬನವಾಸಿ-ಬಳ್ಳಿಗಾವಿ ಕೇಂದ್ರ.

ಬಳ್ಳಿಗಾವಿಯು ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಇದ್ದು ಇಲ್ಲಿ ಬಹುಜನ ಶಿವಶರಣರೂ ಜ್ಞಾನಿಗಳೂ ಆಗಿಹೋಗಿದ್ದಾರೆ. ಮೊದಲು ಪಟ್ಟದಕಲ್ಲಿನಲ್ಲಿದ್ದ ಅಜಗಣ್ಣನು ಈ ಸ್ಥಾನಕ್ಕೆ ಬಂದು ನಿಂತಿರಲಾಗಿ ಅಲ್ಲಿ ಅವನಿಂದ ಅಲ್ಲಮಪ್ರಭುವು ಲಿಂಗಧಾರಣೆಯನ್ನು ಹೊಂದಿದನು. ಈ ಭಾಗದಲ್ಲಿ ಈ ಕಾಲಕ್ಕೆ ವೀರಶೈವತ್ವದ ಚಟುವಟಿಕೆಗಳು ಬಹು ಹೆಚ್ಚಾಗಿ ಆಗಿರುತ್ತವೆ. ಈ ಕೇಂದ್ರದ ವಿಸ್ತಾರವು ಉತ್ತರಕ್ಕೆ ಹಾನಗಲ್ಲು ತಾಲೂಕಿನಿಂದ ದಕ್ಷಿಣಕ್ಕೆ ಕಡೂರ ಜಿಲ್ಲೆಯ ವರೆಗೂ ಪಸರಿಸಿದೆ. ಇದು ವೀರಶೈವ ಧರ್ಮದ ಆರನೆಯ ಕೇಂದ್ರವು.

## ಹರದನ ಹಳ್ಳಿಯ ಕೇಂದ್ರ.

ಮೇಲೆ ಹೇಳಿದ ಕಾಲದ ತರುವಾಯ ಮುಸಲ್ಮಾನರು ಕರ್ನಾಟಕವನ್ನು ಅಭಿಯೋಗಿಸಿದರು. ಆಗ ಇಲ್ಲಿದ್ದ ಧಾರ್ಮಿಕ ಪುರುಷರು

ಈ ಭಾಗವನ್ನು ಬಿಟ್ಟು ಕಾವೇರೀ ನದಿಯ ದಕ್ಷಿಣಕ್ಕೆ ಇರುವ ಹರದನಹಳ್ಳಿ ಎಂಬ ಗ್ರಾಮದಲ್ಲಿ ತಮ್ಮ ಧಾರ್ಮಿಕ ಕೇಂದ್ರವನ್ನು ಸ್ಥಾಪಿಸಿದರು. ಆಗಿನ ಶೂನ್ಯಸಿಂಹಾಸನಾಧಿಪತಿಗಳು ಈ ಕಾರ್ಯಕ್ಕೆ ಪ್ರೋತ್ಸಾಹನವನ್ನು ಕೊಟ್ಟರು. ಅವರು ಇಲ್ಲಿಂದ ವೀರಶೈವ ಧರ್ಮವನ್ನು ಸುತ್ತಲೂ ವಿಸ್ತರಿಸುತ್ತ ಬಂದರು. ಇದು ವೀರಶೈವ ಧರ್ಮಕ್ಕೆ ೭ನೆಯ ಕೇಂದ್ರವು.

## ವಿಜಯನಗರ ಕೇಂದ್ರವು.

೧೫ನೆಯ ಶತಮಾನದಲ್ಲಿ ವಿಜಯನಗರದಲ್ಲಿ ೧ನೇ ದೇವರಾಯನು ರಾಜ್ಯವಾಳುತ್ತಿರುವಾಗ್ಗೆ ಬಹುಜನ ಶಿವಶರಣರು ಮತ್ತು ವಿರಕ್ತರು ಅವನಲ್ಲಿಗೆ ಬಂದು ಅವನಿಂದ ಉತ್ತೇಜನವನ್ನು ಹೊಂದಿ ಅನೇಕ ಕಾವ್ಯಗಳನ್ನೂ ವಚನಗ್ರಂಥಗಳನ್ನೂ ರಚಿಸಿದ್ದಾರೆ. ಇದು ವೀರಶೈವ ಧರ್ಮದ ೮ನೆಯ ಕೇಂದ್ರವು.

## ಕೆಳದಿ–ಬಿದನೂರು ಕೇಂದ್ರ.

ತಾಳೀಕೋಟೆಯ ಯುದ್ಧದ ತರುವಾಯ ವಿಜಯನಗರವು ಲಯವಾಗಲು ಉತ್ತರ ಕರ್ನಾಟಕವೆಲ್ಲ ಮುಸಲ್ಮಾನರ ಕೈವಶವಾಯಿತು. ಆದರೆ ದಕ್ಷಿಣ ಕರ್ನಾಟಕದಲ್ಲಿ ಅಸಂಖ್ಯ ಪಾಳ್ಯಗಾರರು ಉದಯಿಸಿದರು. ಅವರಲ್ಲಿ ಬಹುಜನರು ವೀರಶೈವ ಮತಾವಲಂಬಿಗಳಾಗಿ ವಿದ್ವಾಂಸರಿಗೆ ಉತ್ತೇಜನವನ್ನು ಕೊಡುತ್ತಬಂದರು. ಅವರಲ್ಲಿ ಕೆಳದಿಯ ವಂಶದ ರಾಜರು ಬಹು ಪ್ರಬಲರಾಗಿ ವೀರಶೈವ ವಿದ್ವಾಂಸರಿಗೆ ವಿಶೇಷ ಪ್ರೋತ್ಸಾಹವನ್ನು ಕೊಡುತ್ತ ಬಂದರು. ಈ ರಾಜರ ರಾಜಧಾನಿ ಸ್ಥಳಗಳಾದ ಕೆಳದಿ ಮತ್ತು ಬಿದನೂರು ಇವು ವೀರಶೈವ ಧರ್ಮಕ್ಕೆ ಕೇಂದ್ರಸ್ಥಾನಗಳಾದವು. ಇವುಗಳಿದ್ದ ಪ್ರದೇಶವು ವೀರಶೈವ ಧರ್ಮಕ್ಕೆ ಒಂಬತ್ತನೆಯ ಕೇಂದ್ರಸ್ಥಾನವು.

ಈ ಕೇಂದ್ರದ ತರುವಾಯ ನಾಡಿನಲ್ಲಿ ಎಲ್ಲ ಕಡೆಗೂ ರಾಜಕೀಯ ಅವ್ಯವಸ್ಥೆಗಳು ಉಂಟಾದವು. ಈ ದುಃಸ್ಥಿತಿಯು ಉತ್ತರಕರ್ನಾಟಕದಲ್ಲಿ ೧೬೮೬ ರಲ್ಲಿ ವಿಜಾಪುರವು ಹಾಳಾದಂದಿನಿಂದ ಬ್ರಿಟಿಶರು ಈ ನಾಡನ್ನು ಕೈವಶಮಾಡಿಕೊಳ್ಳುವ ವರೆಗೂ ಹಾಗೆಯೇ ಉಳಿಯಿತು. ಆದರೆ ದಕ್ಷಿಣ ಕರ್ನಾಟಕ ದೇಶದಲ್ಲಿ ಹೆಚ್ಚಿಗೆ ಶಾಂತಸ್ಥಿತಿಯು ಇದ್ದರೂ ಕೂಡ ಆಡ

ಳಿತೆಯು ಅವ್ಯವಸ್ಥೆಗಳು ಇಲ್ಲಿಯೂ ಹೆಚ್ಚುಕಡಿಮೆ ಪ್ರಮಾಣದಿಂದ ನಡೆಯುತ್ತಲೇ ಇದ್ದವು. ಇದರಿಂದ ನಾಡಿನಲ್ಲಿ ಯಾವ ಸಂಘಾರಣೆಯ ಕಾರ್ಯಗಳು ಈ ಅವಧಿಯಲ್ಲಿ ನಡಿದಿರುವದಿಲ್ಲಷ್ಟೇ ಅಲ್ಲ, ವೀರಶೈವ ಧರ್ಮದ ನಿಜಸ್ವರೂಪೂ ಅದರ ಇತಿಹಾಸವೂ ಕೂಡ ಮರೆತು ಹೋಗಿ ಬಿಟ್ಟವು!

ಈಪ್ರಕಾರ ವೀರಶೈವ ಧಾರ್ಮಿಕ ಇತಿಹಾಸದಲ್ಲಿ ಒಂಬತ್ತು ಕೇಂದ್ರಸ್ಥಾನಗಳನ್ನು ನಾವು ಕಂಡುಹಿಡಿಯಬಹುದು. ಇವುಗಳಲ್ಲಿಲ್ಲಿ ದೇವರ ದಾಸಿಮಯ್ಯನಿದ್ದ ಮುದನೂರು ಕೇಂದ್ರವು ಕರ್ನಾಟಕದಲ್ಲಿ ಎಲ್ಲಕ್ಕೂ ಮೊದಲನೆಯದಾಗಿರುತ್ತದೆ. ಇದಕ್ಕೂ ಪುರಾತನವಾಗಿರುವ ಉಳಿದ ಎರಡು ಕೇಂದ್ರಗಳು ಅಂದರೆ ಶ್ರೀಶೈಲ ಮತ್ತು ಪೊಟ್ಟೀಕೆರೆಗಳು ಈಚೆಗೆ ಲಯವಾಗಿ ಹೋಗಿವೆ. ಶ್ರೀಶೈಲದಲ್ಲಿನ್ನ ಮೊದಲಿನ ಪಟ್ಟಣ ದಲ್ಲಿ ಅರಣ್ಯವು ಬೆಳೆದು ಅದು ನೆಲಸಮನಾಗಿರುತ್ತದೆ. ಇದರ ತರು ವಾಯದ ಕೇಂದ್ರವಾದ ಕೊಲ್ಲಿಪಾಕಿ-ಪಾಲ್ಕುರಿಕೆ-ಪೊಟ್ಟಲಕೆರೆ ಇದು ಈಗ ಆಂಧ್ರನಾಡಾಗಿರುತ್ತದೆ. ಮೊದಲು ಇಲ್ಲಿದ್ದ ಕನ್ನಡ ಭಾಷೆಯು ಹೋಗಿಬಿಟ್ಟಿರುತ್ತದೆ. ಭಾಷೆಯಗೂಡ ಪುರಾತನ ವೀರಶೈವ ವಾಙ್ಮ ಯವೂ ಕೂಡ ಲಯವಾಗಿ ಹೋಗಿರುತ್ತದೆ. ಆದರೆ ಈ ವಾಙ್ಮಯದ ಮುಂದಿನ ಬೆಳವಣಿಗೆಗಳು ಮುದುನೂರು ಪ್ರದೇಶದಲ್ಲಿ ತಲೆದೋರಿ ದವು. ಆಗ ಈ ನಾಡಿನಲ್ಲಿ ಅನೇಕ ವೀರಶೈವ ಪ್ರವರ್ತಕರು ಬಸ ವೇಶ್ವರನ ಕಾಲದ ವರೆಗೂ ಕಾಲಕಾಲಕ್ಕೆ ಆಗುತ್ತ ಬಂದಿದ್ದಾರೆ.

ಆದ್ದರಿಂದ ಮುದನೂರು ಕೇಂದ್ರವು ವೀರಶೈವ ಧಾರ್ಮಿಕ ಇತಿ ಹಾಸದಲ್ಲಿ ಬಹು ಮಹತ್ವವಾದದ್ದು. ಇದು ಉತ್ತರ ಕರ್ನಾಟಕದ ಮಧ್ಯಪ್ರದೇಶದಲ್ಲಿರುತ್ತದೆ. ಅದು ನೆಲಸಿದ ಸ್ಥಳವು ವಾಸಿಸಲು ಬಹು ರಮಣೀಯವಾದದ್ದು. ಅದು ಬುಗ್ಗೆಗಳಿಂದಲೂ ಕೊಳಗಳಿಂದಲೂ ತುಂಬಿಕೊಂಡು ಬಹು ಶೋಭಾಯಮಾನವಾದ ಗ್ರಾಮವಾಗಿದೆ. ಅದು 'ದಕ್ಷಿಣವಾರಣಾಸಿ' ಎಂದು ಈ ಕಾಲದ ಶಿಲಾಶಾಸನಗಳಲ್ಲಿ ಪ್ರಸಿದ್ಧ ವಾಗಿದೆ. ಇಂಥ ಸ್ಥಳದಲ್ಲಿ ದೇವರದಾಸಿಮಯ್ಯನು ಅನೇಕ ವರ್ಷ ವಾಸಮಾಡಿ ವೀರಶೈವ ಧರ್ಮವನ್ನು ವಿಸ್ತಾರಗೊಳಿಸಿದನು.

ಆವನು ಈ ಕಾರ್ಯವನ್ನು ಕೈಕೊಂಡ ಬಳಿಕ ಕೆಲವು ವರ್ಷಗಳ ಮೇಲೆ ರೇವಣಸಿದ್ಧೇಶ್ವರನು ಕೊಲ್ಲಿಪಾಕಿಯಿಂದ ಕರ್ನಾಟಕಕ್ಕೆ ಬಂದು ಮುದುನೂರು ಭಾಗದ ಪಶ್ಚಿಮಕ್ಕೆಯೇ ಧಾರ್ಮಿಕ ಜಾಗ್ರತೆಯನ್ನುಂಟು ಮಾಡಿದನು.

ಇವರಿಬ್ಬರ ತರುವಾಯ ಬಸವೇಶ್ವರನು ಕಲ್ಯಾಣದಲ್ಲಿ ಪ್ರಸಿದ್ಧಿಗೆ ಬಂದು ನಾಡಿನಲ್ಲಿ ಒಂದು ಅದ್ಭುತವಾದ ಕ್ರಾಂತಿಯನ್ನು ಮಾಡಿದನು.

ಆದರೆ ಈಗ ನಮಗೆ ದೊರೆತ ವಚನಗಳಲ್ಲಿ ದೇವರದಾಸಿಮಯ್ಯನ ವಚನವು ಎಲ್ಲಕ್ಕೂ ಮೊದಲನೆಯದಾಗಿದೆ. ಆದರೆ ಇಷ್ಟರಿಂದಲೇ ಆವನು ವಚನ ವಾಙ್ಮಯದ ಆದ್ಯ ಕರ್ತನೆಂದು ಹೇಳಲಿಕ್ಕೆ ಬರಲಾರದು. ಆವನಕಿಂತಲೂ ಮೊದಲು ಈ ವಾಙ್ಮಯವಿತ್ತೆಂಬುದು ನಮ್ಮ ಹಿಂದಿನ ವಿವರಣೆಯಿಂದ ತಿಳಿದುಬರುತ್ತದೆ. ಅಲ್ಲದೆ ಕೆಳಗೆ ಕಾಣಿಸಿದ ಆವನ ವಚನಗಳಿಂದಲೂ ಅದು ಸ್ಪಷ್ಟವಾಗುತ್ತಿದೆ. ಅವು ಯಾವವೆಂದರೆ:—

(೧) ಕರಿಯನಿತ್ತಡೆ ಒಲ್ಲೆ. ಸಿರಿಯನಿತ್ತಡೆ ಒಲ್ಲೆ. ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ. ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ.

(೨) ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಬುದೇ? ಕಡೆಗೀಲು ಬಂಡಿಗಾಧಾರ. ಕಡು ದರ್ಪವೇರಿದ ಒಡಲೆಂಬ ಬಂಡಿಗೆ ವೃಡಶರಣರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥಾ.

ಈ ವಚನಗಳಿಂದ ದೇವರದಾಸಿಮಯ್ಯನ ಮೊದಲು ವಚನವಾಙ್ಮಯವಿತ್ತೆಂಬುದು ಸ್ಪಷ್ಟವಾಗುತ್ತದೆ. ಪೊಟ್ಟಲಕೆರೆ, ಕೊಲ್ಲಿಪಾಕಿ, ಶ್ರೀಶೈಲ, ಈ ಪಟ್ಟಣಗಳಿದ್ದ ಭಾಗಗಳನ್ನು ಸಂಶೋಧಿಸಿದಲ್ಲಿ ಈ ವಾಙ್ಮಯದ ಪೂರ್ವಸ್ವರೂಪವನ್ನು ನಾವು ಕಂಡುಹಿಡಿಯಬಹುದು. ಆದರೆ ಇವು ಈಗ ಆಂಧ್ರನಾಡಿನಲ್ಲಿ ಸೇರಿಕೊಂಡಿವೆ. ಆದ್ದರಿಂದ ಇಲ್ಲಿಯ ಪುರಾತನ ಕನ್ನಡ ವಾಙ್ಮಯವು ನಷ್ಟವಾಗಿರಬೇಕು. ಈ ಸ್ಥಿತಿಯಲ್ಲಿ ಮಂಗಳವಾಡ ಮತ್ತು ಮುದುನೂರು ಈ ಗ್ರಾಮಗಳಿದ್ದ ಪ್ರಾಂತಗಳಲ್ಲಿ ಈಗಲೂ ನಮಗೆ ದೊರೆಯುವ ವಾಙ್ಮಯದ ಮೇಲೆ ನಾವು ಅವಲಂಬಿಸುವ ಸ್ಥಿತಿಯು ಉಂಟಾಗಿರುತ್ತದೆ.

ಇನ್ನು ಮೇಲೆ ಕೆಲವು ಸಂಶಯಯುಕ್ತವಾದ ವಿಷಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವೇಚಿಸಲೆಣಿಸಿದ್ದೇವೆ.

ಕೆಲವರು ದೇವರದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಎಂಬವರು ಭಿನ್ನ ಭಿನ್ನ ಶರಣರೆಂದು ತಿಳಿದದ್ದು ಕಂಡುಬರುತ್ತಿದೆ. ಆದರೆ ಶಿವಶರಣರ ಚರಿತ್ರೆಗಳನ್ನು ಸಂಶೋಧಿಸಿದಲ್ಲಿ ಈ ಹೆಸರಿನ ಇಬ್ಬರು ಜನರು ಇದ್ದದ್ದು ಎಲ್ಲಿಯೂ ದೊರೆಯುವದಿಲ್ಲ. ಎಲ್ಲ ವಿವರಣೆಗಳಲ್ಲಿ ಯಾವಾಗಲೂ ಒಬ್ಬನೇ ದಾಸಿಮಯ್ಯನು ಉಲ್ಲೇಖಿಸಲ್ಪಟ್ಟಿದ್ದಾನೆ. ಕೆಲವು ವಾದವಚನಗಳಲ್ಲಿ ಗ್ರಂಥಕಾರರು ದೇವರ ದಾಸಿಮಯ್ಯನು ಬಸವಕಾಲೀನನೆಂದು ಭಾವಿಸಿ ಪ್ರಶ್ನೋತ್ತರ ರೂಪವಾಗಿ ವಿಷಯ ವಿವೇಚನೆಗಳನ್ನು ಮಾಡಿದ್ದುಂಟು. ಅವುಗಳಲ್ಲಿ ದಾಸಿಮಯ್ಯನ ಹೆಸರಿನ ಕೂಡ ಬಸವನ ಮತ್ತು ಅವನ ಕಾಲದ ಶಿವಶರಣರ ಹೆಸರುಗಳು ಜೋಡಿಸಲ್ಪಟ್ಟಿವೆ. ಆದರೆ ಐತಿಹಾಸಿಕ ದೃಷ್ಟಿಯಿಂದ ವಿಚಾರ ಮಾಡಿದಲ್ಲಿ ಇಂಥ ವಚನಗಳಿಗೆ ಮಹತ್ವವು ಬರಲಾರದು. ಆದ್ದರಿಂದ ದೇವರದಾಸಿಮಯ್ಯನು ಒಬ್ಬನೇ ಇದ್ದು ಅವನು ೧೧ನೇ ಶತಮಾನದ ಮಧ್ಯದಲ್ಲಿದ್ದನೆಂದು ನಂಬಬೇಕಾಗುತ್ತದೆ

ಬಸವೇಶ್ವರನು ತನ್ನ ವಚನಗಳಲ್ಲಿ 'ದಾಸಿಮಯ್ಯ' ನೆಂದು ಇವನನ್ನು ಯಾವಾಗಲೂ ಸಂಬೋಧಿಸಿದ್ದಾನೆ. ದಾಸಿಮಯ್ಯ, ಜೇಡರ ದಾಸಿಮಯ್ಯ, ದೇವರದಾಸಿಮಯ್ಯ, ಈ ಎಲ್ಲ ಹೆಸರುಗಳು ಒಬ್ಬನಿಗೆಯೇ ಸಂಬಂಧಿಸುತ್ತವೆ.

ಪಂಚಾಚಾರ್ಯರಲ್ಲಿ ಒಬ್ಬನಾದ ಏಕೋರಾಮಾರಾಧ್ಯನು ದೇವರ ದಾಸಿಮಯ್ಯನ ಮಗನೆಂದು ಕೆಲವರು ತಿಳಿದಿದ್ದು ಕಂಡುಬರುತ್ತದೆ. ದೇವರ ದಾಸಿಮಯ್ಯನಿಗೆ ಒಬ್ಬ ಮಗನಿದ್ದು ಅವನ ಹೆಸರು 'ರಾಮೇಶ್ವರ' ಅಥವಾ 'ರಾಮಲಿಂಗ' ಎಂದು ಇದ್ದುದು ಗ್ರಂಥಗಳಿಂದ ತಿಳಿದು ಬರುತ್ತದೆ. ಒಂದು ಗ್ರಂಥದಲ್ಲಿ ಅವನ ಹೆಸರು 'ಪಿತುರಾಮ ಎಂದಿದೆ.' ಆದರೆ ಇದು ಬರಹದ ತಪ್ಪೋ ಹೇಗೆಂಬುದು ನಮಗೆ ತಿಳಿಯದು. ಆದರೆ ಏಕೋರಾಮಾರಾಧ್ಯನು ದೇವರ ದಾಸಿಮಯ್ಯನ ಮಗನೆಂದು ನಮಗೆ ಎಲ್ಲಿಯೂ ದೊರೆತಿಲ್ಲ.

ಹರಿಹರ ಮಹಾಕವಿಯು ಶಂಕರ ದಾಸಿಮಯ್ಯನ ಚರಿತ್ರೆಯನ್ನು ರಗಳೆಯ ರೂಪದಲ್ಲಿ ಬರೆದಿದ್ದಾನೆ. ಅದರಲ್ಲಿ ದೇವರ ದಾಸಿಮಯ್ಯನ ಸಂದರ್ಭವು ಬರುತ್ತದೆ. ಅವನು ಹೇಳುವದೇನೆಂದರೆ, ಶಂಕರ ದಾಸಿ

ಮಯ್ಯನು ಮುದನೂರಿಗೆ ಹೋದಾಗ್ಗೆ ದೇವರ ದಾಸಿಮಯ್ಯನು ಅವನಲ್ಲಿ ಏನೂ ಇಲ್ಲದ್ದನ್ನು ಕಂಡು, ಅವನಿಗೆ ಆಹಾರ ದ್ರವ್ಯಗಳನ್ನು ಕಳಿಸಿಕೊಟ್ಟನು. ಅದಕ್ಕೆ ಶಂಕರ ದಾಸಿಮಯ್ಯನು ತಾನು ಬಡವನೆಂದು ತಿಳಿದು ಹೀಗೆ ದೇವರದಾಸಿಮಯ್ಯನು ತನ್ನ ಕೂಡ ಗರ್ವದಿಂದ ವರ್ತಿಸಿದನೆಂದು ತಿಳಿದು ಉದ್ರೇಕಗೊಳ್ಳಲು ದೇವರ ದಾಸಿಮಯ್ಯನಲ್ಲಿದ್ದ ತಪನಿಧಿಯು ಮಾಯವಾಯಿತು. ಇದಕ್ಕೋಸ್ಕರ ದೇವರ ದಾಸಿಮಯ್ಯನು ಶಂಕರ ದಾಸಿಮಯ್ಯನ ಕ್ಷಮೆಯನ್ನು ಬೇಡಲು ಅವನ ತಪನಿಧಿಯು ಅವನಿಗೆ ಪ್ರಾಪ್ತವಾಯಿತು. ಆದರೆ ಈ ಕಥೆಯು ದೇವರದಾಸಿಮಯ್ಯನ ಯಾವ ಚರಿತ್ರೆಯಲ್ಲಿಯೂ ಬಂದಿಲ್ಲಾದ್ದರಿಂದ ಅದನ್ನು ನಾವು ಈ ಚರಿತ್ರೆಯಲ್ಲಿ ಕೊಟ್ಟಿಲ್ಲ. ಐತಿಹಾಸಿಕ ದೃಷ್ಟಿಯಿಂದ ವಿವೇಚಿಸಿದಲ್ಲಿ ದೇವರ ದಾಸಿಮಯ್ಯನ ತರುವಾಯ ಸ್ವಲ್ಪ ವರುಷಗಳಲ್ಲಿಯೇ ಶಂಕರ ದಾಸಿಮಯ್ಯನು ಪ್ರಸಿದ್ಧಿಗೆ ಬಂದಂತೆ ನಮಗೆ ತೋರುತ್ತದೆ. ಈ ವಿಷಯವನ್ನು ನಾವು ಶಂಕರದಾಸಿಮಯ್ಯನ ಚರಿತ್ರೆಯಲ್ಲಿ ವಿವೇಚಿಸುವೆವು.

---

## ಆಧಾರ ಗ್ರಂಥಗಳು.

ಈ ಚರಿತ್ರೆಯನ್ನು ನಾವು ಕೆಳಗೆ ಕಾಣಿಸಿದ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದ್ದೇವೆ. ಅವು ಯಾವವೆಂದರೆ:—

(೧) ಶಿವಶರಣ ವಿಲಾಸದೊಳಗಿನ ೧೬ನೇ ಸಂಧಿ-ದೇವರ ದಾಸಿಮಯ್ಯನ ಕಥೆ (೨) ಬಸವೇಶ್ವರ ಪುರಾಣದ ಕಥಾಸಾಗರ (೩) ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ (೪) ಶಿವಕಥಾಸಾಗರ (೫) ಬಸವ ಪುರಾಣ (೬) ಬಸವೇಶ್ವರ ವಚನ ಕಥಾಸರಿತ್ಸಾಗರ (೬) ದೇವಾಂಗ ಪುರಾಣ-ರಾಘವಾಂಕ (೭) ದೇವರದಾಸಿಮಯ್ಯ ಪುರಾಣ-ವಿರೂಪಾಕ್ಷಕವಿ (೮) ಮನುಪುರಾಣ (೯) ದೇವರ ದಾಸಿಮಯ್ಯನ ಲಾವಣಿ (೧೦) ದೇವರ ದಾಸಿಮಯ್ಯನ ವಚನಗಳು (೧೧) ದೇವರ ದಾಸಿಮಯ್ಯನ ವಿಷಯವಾಗಿ ಶಿವಾನುಭವ ಪತ್ರಿಕೆಯಲ್ಲಿ ಬಂದ ಲೇಖಗಳು (೧೨) ಪಂಚಾಶತಕ (೧೩) ಹಂಪೆಯ ರಗಳೆ (೧೪) ಲಿಂಗಾರ್ಚನೆಯ ರಗಳೆ (೧೫) ದೇವರ ದಾಸಿಮಯ್ಯ, ಸುಗ್ಗಲೆ ಮತ್ತು ಜಯಸಿಂಹರಾಜ ಇವರ ಉಲ್ಲೇಖಗಳಿದ್ದ ಶಿಲಾಶಾಸನಗಳು.

---

# ಶ್ವಪಚಯ್ಯ-ಸಾಮವೇದಿಗಳು.

ಶ್ವಪಚಯ್ಯನೆಂಬ ಅಸ್ಪೃಶ್ಯನೂ, ಸಾಮವೇದಿಯೆಂಬ ವಿದ್ವಾಂಸನಾದ 'ಬ್ರಾಹ್ಮಣನೂ'. ಛತ್ರೀಸಪುರವೆಂಬ ಗ್ರಾಮದಲ್ಲಿ ಇರುತ್ತಿದ್ದರು. ಇವರಲ್ಲಿ ಸಾಮವೇದಿಯು ಯೋಗಾಭ್ಯಾಸನಿರತನಾಗಿ ಸಿದ್ಧಿಯನ್ನು ಸಂಪಾದಿಸಿ ಗಗನ ಮಾರ್ಗವಾಗಿ ಸಂಚಾರ ಮಾಡಲು ಸಾಮರ್ಥ್ಯವನ್ನು ಹೊಂದಿದವನಾಗಿದ್ದನು. ಈ ಉಭಯತರು ಶಿವಶರಣರಲ್ಲಿ ಗಣಿಸಲ್ಪಟ್ಟು ಪ್ರಸಿದ್ಧರಾಗಿದ್ದಾರೆ. ಬಸವೇಶ್ವರನೂ ಕೂಡ ಇವರ ಯೋಗ್ಯತೆಯನ್ನು ತನ್ನ ವಚನಗಳಲ್ಲಿ ಬಹಳ ಹೊಗಳಿದ್ದಾನೆ. ಅದು ಹೇಗೆಂದರೆ—

(೧) ನೆರೆನಂಬೋ ನೆರೆನಂಬೋ ದರದುರವಿಲ್ಲದೆ ಸಾಮವೇದಿಗಳಂತೆ. ನೆರೆನಂಬೋ ನೆರೆನಂಬೋ ದಾಸದುಗ್ಗಳೆಯಂತೆ. ನೆರೆನಂಬೋ ನೆರೆನಂಬೋ ಸಿರಿಯಾಳ ಚಂಗಳೆಯಂತೆ. ನೆರೆನಂಬೋ ನೆರೆನಂಬೋ ಸಿಂಧುಬಲ್ಲಾಳನಂತೆ. ನಂಬಿದೆಯಾದಡೆ ತನ್ನನೀವ ಕೂಡಲಸಂಗಮದೇವ.

ಇದರಲ್ಲಿ ಬಸವೇಶ್ವರನು ಸಾಮವೇದಿಯನ್ನು ಉಚ್ಚ ಸ್ಥಾನವನ್ನು ಹೊಂದಿದ ಶಿವಶರಣರ ಪಂಙ್ತಿಯಲ್ಲಿ ಇರಿಸಿದ್ದಾನೆ.

(೨) ಅಪ್ಪನು ಡೋಹರಕಕ್ಕನಾಗಿ, ಮುತ್ತಯ್ಯ ಚನ್ನಯ್ಯನಾದರೆ ಆನು ಬದುಕಿದೆನು. ಮತ್ತೆ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯು ಸದ್ಗುಣವ ನಾನರಿಯೆನಯ್ಯ. ಕಷ್ಟಜಾತಿ ಜನ್ಮದಲ್ಲಿ ಜನಿಸಿದೆ. ಎನಗಿದು ವಿಧಿಯೇ ಕೂಡಲಸಂಗಮದೇವಾ?

ಇದರಲ್ಲಿ ಬಸವೇಶ್ವರನು ಕೆಲವು ಅಸ್ಪೃಶ್ಯರನ್ನು ನೆನೆಯುತ್ತ ಅವರೇ ಶ್ರೇಷ್ಠ ಜಾತಿಯವರು. ನಾನು ಬ್ರಾಹ್ಮಣನಾದರೂ ಅವರಿಗಿಂತಲೂ ಕನಿಷ್ಠ ಜಾತಿಯವನು, ಎಂದು ಹೇಳಿಕೊಳ್ಳುತ್ತ ಇವರಲ್ಲಿ ಶ್ವಪಚಯ್ಯನಿಂದ ಭಕ್ತಿಯು ಸದ್ಗುಣವನ್ನು ಅರಿತೆನೆಂದು ಹೇಳುತ್ತಾನೆ.

(೩) ಎಮ್ಮವರಧಿಕರು ಎಲ್ಲರಿಂದಲು ಅಧಿಕರು. ಪಾಕವ ಮಾಡುವ ಭಾಂಡ ಸೊಣಗನ ಡೋವಿಗೆಯಯ್ಯ. ಕೆರಹಿನಲ್ಲಿ ಮುಚ್ಚುವದು ಆವಾಗಮವಯ್ಯ? ಕೂಡಲಸಂಗಮದೇವ ನಿಮ್ಮ ವಚನವಂತೆಂದುದು. ಭವಿ ನೋಡಿದ ಓಗರ ಲಿಂಗಾರ್ಪಿತವಾಗದೆಂದು.

ಬಸವೇಶ್ವರನು ಇದರಲ್ಲಿ ಶ್ವಪಚಯ್ಯನ ಪವಾಡವನ್ನು ವಿವರಿಸುತ್ತ ಬ್ರಾಹ್ಮಣನು ಎಷ್ಟು ಹೆಚ್ಚಿನ ಯೋಗಸಾಮರ್ಥ್ಯವನ್ನು ಹೊಂದಿದವನಾದರೂ ಕೂಡ ಅವನ ಕ್ರಿಯೆಗಳು ಲಿಂಗಾರ್ಪಿತವಾಗಲಾರವೆಂದು ಹೇಳುತ್ತಾನೆ.

(೪) ಶ್ವಪಚನಾದಡೇನು? ಲಿಂಗಭಕ್ತನೇ ಕುಲಜನು. ನಂಬಿ ನಂಬದಿದ್ದರೆ ಸಂದೇಹಿ ನೋಡಾ. ಕಟ್ಟಿದಡೇನು, ಮುಟ್ಟಿದಡೇನು, ಹೂಸಿದಡೇನು ಮನಮುಟ್ಟದನ್ನಕ್ಕ? ಭಾವ ಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು ಕೂಡಲಸಂಗಮದೇವನೊಲಿದವಂಗಲ್ಲದೆ.

ಇದರಲ್ಲಿ ಶ್ವಪಚನು ಭಾವಶುದ್ಧನಾದುದರಿಂದ ಅವನೇ ಶ್ರೇಷ್ಠ ಕುಲದವನೆಂದು ಅವನನ್ನು ಹೊಗಳುತ್ತಾನೆ.

ಬಸವೇಶ್ವರನ ಈ ವಚನಗಳಿಂದ ಶ್ವಪಚಯ್ಯ ಸಾಮವೇದಿಗಳು ಪುರಾತನ ಕಾಲದಿಂದಲೂ ಶ್ರೇಷ್ಠ ಶರಣರೆಂದು ತಿಳಿಯಲ್ಪಟ್ಟಿದ್ದು ಕಂಡು ಬರುತ್ತದೆ.

ಉತ್ತರ ದೇಶದಲ್ಲಿ ಛತ್ತೀಸಪುರವೆಂಬ ಗ್ರಾಮವಿರುತ್ತದೆ. ಅದು ಒಂದು ಅಗ್ರಹಾರವು. ಅಂದರೆ ವಿದ್ವಾಂಸರಾದ ಬ್ರಾಹ್ಮಣರು ವಾಸಿಸುವ ಸ್ಥಳವು. ಅಲ್ಲಿ ಸಾಮವೇದಿ ಎಂಬ ಹೆಸರಿನ ಒಬ್ಬ ಬ್ರಾಹ್ಮಣನು ವಾಸ ಮಾಡುತ್ತಿದ್ದನು. ಅವನು ಪಾಪರಹಿತನು, ಅತ್ಯಂತ ವಿದ್ವಾಂಸನು, ತರ್ಕ ತಂತ್ರ ವ್ಯಾಕರಣಗಳಲ್ಲಿ ಬಲ್ಲಿದನು ಮತ್ತು ವಾಗ್ಮಿಯು ಆಗಿದ್ದನು. ಅವನಿಗೆ ೩೫೦೦ ಜನ ಶಿಷ್ಯರು ಇದ್ದು ಅವರೂ ಈ ಗ್ರಾಮದಲ್ಲಿದ್ದರು. ಈ ಪಟ್ಟಣದ ಕೆಳಗೆ ೩೬ ಗ್ರಾಮಗಳು ಇದ್ದು. ಈ ಗ್ರಾಮಗಳನ್ನು ಅರಸನು ಸಾಮವೇದಿಗೆ ಅಗ್ರಹಾರವಾಗಿ ದಾನ ಕೊಟ್ಟಿದ್ದನು. ಅಲ್ಲಿ ಅವನು ಸರ್ವಜನರಿಂದ ವಂದ್ಯನಾಗಿ ಸುಖದಿಂದ ವಾಸ ಮಾಡುತ್ತಿದ್ದನು. ಹೀಗಿರಲು ಅವನ ಆಚರಣೆಯಿಂದ ಅವನಲ್ಲಿ ಒಂದು ಅದ್ಭುತವಾದ ಶಕ್ತಿಯು ಉಂಟಾಗಿತ್ತು. ಅದರ ಮೂಲಕ ಅವನು ಆಕಾಶದಲ್ಲಿ ಸಂಚಾರ ಮಾಡುವ ಸಾಮರ್ಥ್ಯವನ್ನು ಹೊಂದಿದವನಾಗಿದ್ದನು.

ಹೀಗಿರುವಲ್ಲಿ ಒಂದು ದಿವಸ ಸಾಮವೇದಿಯು ಅರಣವನ್ನು ಓದಬೇಕೆಂದು ಬಯಸಿ ತನ್ನ ಶಿಷ್ಯರನ್ನೊಡಗೂಡಿ ಒಂದು ಅರಣ್ಯಪ್ರದೇ

ಶಕ್ಕೆ ಹೋಗಿ ಅಲ್ಲಿ ಏಕಾಂತ ಸ್ಥಳವನ್ನು ಆಯ್ದು ಅಲ್ಲಿ ಒಂದು ಅಶ್ವತ್ಥ ವೃಕ್ಷದ ಕೆಳಗೆ ಕುಳಿತುಕೊಂಡು ವೇದಾಧ್ಯಯನ ಮಾಡುವ ರೀತಿಯನ್ನು ಅವರಿಗೆ ಹೇಳಲಾರಂಭಿಸಿದನು. ಅವನು ಇದು ರುಚವು, ಇದು ಅರ್ಧ ರುಚವು, ಇದು ಅರೆಪಾದವು, ಇದು ಪೂರ್ಣಪಾದವು, ಇದು ಉದಾತ್ತಾನುದಾತ್ತ ಸ್ವರವು, ಇದು ಋಕ್ಕುಗಳ ಛಂದಸ್ಸು, ಇವರು ಅವುಗಳಿಗೆ ಋಷಿಗಳು ಮತ್ತು ದೇವತೆಗಳು, ಈ ಮೊದಲಾದ ವಿಷಯಗಳನ್ನು ತನ್ನ ಶಿಷ್ಯರಿಗೆ ಅರುಹುತ್ತ ಮಧ್ಯಾಹ್ನದ ವರೆಗೂ ಅಲ್ಲಿ ಕಾಲಕಳೆದನು. ಆವೇಳೆ ಅವನು ತನ್ನ ಗ್ರಾಮಕ್ಕೆ ಬರಲು ಸಿದ್ಧನಾಗಿ, ತಾನು ಆಕಾಶ ಮಾರ್ಗದಿಂದ ಹೊರಟನು ಮತ್ತು ಅವನ ಶಿಷ್ಯರು ಪಾದಚಾರಿಗಳಾಗಿ ಪಟ್ಟಣಕ್ಕೆ ಹೊರಟರು.

ಹೀಗಿರಲು ಅವನ ಗ್ರಾಮದಲ್ಲಿ ಶ್ವಪಚನೆಂಬ ಹೆಸರಿನ ಒಬ್ಬ ಅಸ್ಪೃಶ್ಯನಿರುತ್ತಿದ್ದನು. ಅವನು ಕೇವಲ ಶಿವಭಕ್ತಿಯುಳ್ಳವನು, ಲಿಂಗಾರ್ಚಕನು. ಅವನು ಒಂದೇ ದಿವಸ ತಾನು ಲಿಂಗಾರ್ಚನೆ ಮಾಡಬೇಕೆಂದು ಬಯಸಿ ಸಾಮವೇದಿಯು ಹೋಗಿದ್ದ ಅರಣ್ಯವನ್ನು ಪ್ರವೇಶಿಸಿ, ಅಲ್ಲಿ ಹೂ ಪತ್ರೆ, ಪುಷ್ಪಗಳು ತುಂಬಿಕೊಂಡಂಥ ಒಂದು ಏಕಾಂತ ಸ್ಥಳವನ್ನು ಆಯ್ದು, ಸುತ್ತಲೂ ಇದ್ದ ಅಶೋಕೆ ಮಾವುಗಳ ತಳಿರುಗಳ ಹಾಸಿಕೆಯನ್ನು ಹಾಕಿ. ತನ್ನ ಮನಸ್ಸಿನಲ್ಲಿ ಭಕ್ತಿಯು ತುಂಬಿರಲು, ನದಿಯಿಂದ [illegible] ನೀರನ್ನು ತಂದು, ಹೂವುಗಳನ್ನು ಆರಿಸಿಕೊಂಡು ಬಂದು, ತನ್ನ ಸಜ್ಜೆಯಿಂದ ಲಿಂಗವನ್ನು ಹೊರಗೆ ತೆಗೆದು, ಲಿಂಗಾರ್ಚನೆಯನ್ನು ಮಾಡುತ್ತ, ಲಿಂಗಧ್ಯಾನದಲ್ಲಿ ಮಗ್ನನಾಗಿ ಕುಳಿತನು.

ಲಿಂಗ ಪೂಜೆಯು ಮುಗಿದ ಬಳಿಕ ಅವನು ತನ್ನ ಜಾತಿಗನು ಗುಣವಾದ ಆಹಾರ ಪದಾರ್ಥಗಳನ್ನು ಸಜ್ಜುಗೊಳಿಸಿ ತನ್ನ ಹತ್ತಿರ ಪಾತ್ರೆಗಳಿಲ್ಲದಿರಲು ಒಂದು ನಾಯಿಯು ತಲೆಬುರುಡೆಯಲ್ಲಿ ಅವುಗಳ ಪಾಕವನ್ನು ಮಾಡತೊಡಗಿದನು! ಆಗ ಮಧ್ಯಾಹ್ನವಾಯಿತು.

ಅಷ್ಟರಲ್ಲಿ ಸಾಮವೇದಿಯು ಆಕಾಶ ಮಾರ್ಗದಿಂದ ಗಮನ ಮಾಡುತ್ತ ಶ್ವಪಚನಿದ್ದ ಸ್ಥಳದ ಮೇಲಿಂದಲೇ ಹಾಯ್ದುಹೋಗುತ್ತಿದ್ದನು. ಶ್ವಪಚನು ಅವನನ್ನು ಕಂಡು:— ಈತನು ಭವಿಯು, ಲಿಂಗ

ವಿಪ್ಲವಪನು. ಆತನ ನೆಳಲು ನನ್ನ ಆ ೯ ರ ಪದಾರ್ಥಗಳ ಮೇಲೆ ಬೀಳ ಬಾರದೆಂದು ಅಲ್ಲಿಯೇ ಇದ್ದ ಒಂದು ಕೆರಹಿನಿಂದ ಆ ಡೋವಿಗೆಯನ್ನು ಮುಚ್ಚಿದನು. ಅದನ್ನು ಸಾಮವೇದಿಯು ಕಂಡು—ಈ ಶ್ವಪಚನು ಕುದಿ ಸುತ್ತಿರುವದು ಕಿಸುಕುಳ ಪದಾರ್ಥವು. ಅದನ್ನು ಅವನು ಡೋವಿಗೆ ಯುಲ್ಲಿಟ್ಟಿದ್ದಾನೆ. ಆದರೆ ನಾನು ಅದನ್ನು ನೋಡಬಾರದೆಂದು ಕೆರಹಿ ನಿಂದ ಮುಚ್ಚಿದನು. ಇದು ಯಾವ ಶಾಸ್ತ್ರವು! ಇವನೆಂಥ ಭಕ್ತನು!! ಈತನು ನನ್ನ ಅವಹೇಲನೆ ಮಾಡುತ್ತಾನೆ ಇವನನ್ನು ನೋಡಬೇಕು ಎಂದು ಗರ್ವದಿಂದ ಮತ್ತು ಕ್ರೋಧಾವೇಶದಿಂದ ನುಡಿಯಲು ಆ ಕ್ಷಣವೇ ಅವನ ಯೋಗಶಕ್ತಿಯು ಬಯಲಾಗಿ ಹೋಯಿತು. ಮತ್ತು ಅಂತ ರಿಕ್ಷದಲ್ಲಿ ಇರುತ್ತಿದ್ದವನು ಥಟ್ಟನೆ ನೆಲಕ್ಕಿಳಿದು ಪಾದಚಾರಿಯಾದನು.

ಹೀಗಾಗಲು ಏನು ಕಾರಣವೆಂದು ಅವನು ಭಯಭೀತನಾದನು. ಇದು ಶ್ವಪಚಯ್ಯನ ಮೂಲಕವೇ ಆಗಿರಬಹುದೆಂದು ಎಣಿಸಿ ಅವನ ಹತ್ತಿ ರಕ್ಕೆ ಬಂದು ಅವನನ್ನು ನುಡಿಸತೊಡಗಿದನು. ಆದರೆ ಶ್ವಪಚಯ್ಯನು ಒಂದು ನುಡಿಯನ್ನಾದರೂ ನುಡಿಯಲಿಲ್ಲ. ಏನು ಮಾತಾಡಿಸಿದರೂ ಅವನು ಮಾತಾಡಲಿಲ್ಲ. ಆಗ ಸಾಮವೇದಿಯು ಇವನು ಬಲು ಸೊಕ್ಕಿನವ ನೆಂದು ಸಿಟ್ಟಾಗಿ ತನ್ನ ಗೃಹಕ್ಕೆ ತೆರಳಿದನು.

ಆದರೆ ಮನೆಗೆ ಬಂದ ಬಳಿಕ ಆ ತನ್ನ ಮೊದಲಿನ ಸತ್ವವು ಹೊರಟು ಹೋದುದನ್ನು ತಿಳಿದು ಹಂಬಲಿಸಹತ್ತಿದನು. ಇದು ಶ್ವಪಚನ ಕೃತ ಕವಿರಬಹುದೆಂದು ಮರುದಿವಸ ಅವನನ್ನು ಕಾಣಲು ಹೋದನು. ಆದರೆ ಆ ದಿವಸವೂ ಕೂಡ ಅವನು ಅವನೊಡನೆ ಮಾತಾಡಲಿಲ್ಲ. ಆಗ ಅವನು ಮನನೊಂದು ಹಿಂದಿರುಗಿ ಬಂದು ಮನೆಯಲ್ಲಿ ಬುಮ್ಮಳಿಸುತ್ತ ಕುಳಿತನು.

ಆಗ ಪರಮಾತ್ಮನು ಸಾಮವೇದಿಯ ಮನಸ್ಸು ಕೆಲವಂಶದಿಂದ ಬದಲಾದುದನ್ನು ತಿಳಿದವನಾಗಿ ಆ ದಿವಸ ರಾತ್ರಿ ಅವನ ಕನಸ್ಸಿನಲ್ಲಿ ಬಂದು—ಸಾಮವೇದಿಯೇ, ನೀನು ಹೀಗೆ ಶ್ವಪಚಯ್ಯನನ್ನು ಕಾಣ ಲಿಕ್ಕೆ ಹೋಗಬೇಡ. ಅವನು ಪರಮ ಶಿವಭಕ್ತನು. ಆದುದರಿಂದ ನೀನು ಶಿವಲಾಂಛನ ಧಾರಿಯಾಗಿ ಅವನನ್ನು ಕಾಣು ಎಂದು ಹೇಳಲು ಸಾಮ ವೇದಿಯು ಬೆಳಿಗ್ಗೆ ವಿಭೂತಿ ರುದ್ರಾಕ್ಷ ಧಾರಣವನ್ನು ಮಾಡಿಕೊಂಡು

ಶಿವಮಂತ್ರವನ್ನು ಉಚ್ಚರಿಸುತ್ತ ಶ್ವಪಚಯ್ಯನು ಯಾವ ಅರಣ್ಯ ಭಾಗನಲ್ಲಿದ್ದನೋ ಅಲ್ಲಿಗೆ ಬಂದು ಅವನನ್ನು ಮಾತಾಡಿಸಹತ್ತಿದನು. ಶ್ವಪಚಯ್ಯನು ಅವನು ಧರಿಸಿದ ಶಿವಲಾಂಛನಗಳನ್ನು ನೋಡಿ ಸಮಾಧಾನ ಹೊಂದಿ ಅವನೊಂದಿಗೆ ಮಾತಾಡಲನುವಾದನು.

ಆಗ ಸಾಮವೇದಿಯು ಅವನಿಗೆ – ನಾನು ಬರುವಾಗ ಕೆರಹಿನಿಂದ ನೀವು ಕುದಿಸುವ ಪಾತ್ರೆಯನ್ನು ಏಕೆ ಮುಚ್ಚಿದಿರಿ, ಎಂದು ಕೇಳಲು ಅವನು—ಎಲೆ ವಿಪ್ರ, ಲಿಂಗಾರ್ಚನೆಯು ಕಾಲದಲ್ಲಿ ಭವಿಗಳೊಡತಣ, ಭವಿಗಳ ಸೋಂಕು, ಇರಕೂಡದೆಂದು ಹೇಳಿದನು.

ಅದಕ್ಕೆ ಸಾಮವೇದಿಯು ಸಮ್ಮತಿಸದೆ—ಇಗೋ ನೋಡು, ನೀನು ಕುದಿಸುವ ಅನ್ನದ ಸುತ್ತಲೂ ಗಿಡುಮರಗಳಿವೆ. ಅವು ಭಕ್ತರೇ ? ಇಲ್ಲಿ ಮೃಗ ಪಕ್ಷಿಗಳು ಸಂದಣಿಸುತ್ತ ಹಾರಾಡುತ್ತಲಿವೆ. ಅವು ಭಕ್ತರೇ ? ಅವುಗಳು ನಿನ್ನ ಓಗರವನ್ನು ನೋಡುವದಿಲ್ಲವೇ ? ಎಂದು ಕೇಳಿದನು.

ಅದಕ್ಕೆ ಶ್ವಪಚನು—ಈ ಗಿಡುಮರದ ಪೂ ಪತ್ರಿಗಳು ಶಂಭುವಿಗೆ ಸಲ್ಲುತ್ತವೆ. ಈ ಮರಕ್ಕೆ ಕಾಮ ಉಂಟೇ ? ಈ ಲತೆಗೆ ಕ್ರೋಧ ಉಂಟೇ? ಆದರೆ ನಿನ್ನಲ್ಲಿ ಕ್ರೋಧ, ಅಭಿಮಾನಗಳು ತುಂಬಿವೆ. ಆದುದರಿಂದ ನಿನ್ನ ಸೋಂಕು ಎಷ್ಟು ಮಾತ್ರವೂ ನನ್ನ ಓಗರಕ್ಕೆ ತಗಲಬಾರದು. ಇಲ್ಲಿ ಮೃಗಗಳಿರುವದು ನಿಜವು. ಆದರೆ ಅವು ಹುಲ್ಲನ್ನು ತಿಂದು ತಿಳಿನೀರನ್ನು ಕುಡಿಯುತ್ತಿವೆ. ಅವು ಆರಿಗೂ ಬಾಧೆ ಮಾಡುವದಿಲ್ಲ. ಆದರೆ ನಿನ್ನದು ಕುಭೋಜನವು. ನೀನು ಅಹಂಕಾರಿಯು. ಮಾಯಾಮೋಹದಲ್ಲಿ ಸಿಲುಕಿದವನು. ನಾನು ಗಗನದಲ್ಲಿ ಬರುತ್ತೇನೆಂಬ ಅಹಂಕಾರ ನಿನ್ನಲ್ಲಿದೆ. ಆದರೆ ಗಗನದಲ್ಲಿ ಹಕ್ಕಿ ಪಕ್ಷಿಗಳು ಹಾರುವದಿಲ್ಲವೇ ? ನೀನು ಪಂಚಮುಖನನ್ನು ಪೂಜಿಸದ ಪಾಪಿಯು. ಆದುದರಿಂದ ನೀನು ಗಿಡಗಳು, ಮರಗಳು, ಮೃಗಗಳು, ಇವುಗಳಿಗಿಂತಲೂ ಕನಿಷ್ಠನು. ನಿನ್ನಂಥವನನ್ನು ಭಕ್ತರು ಈಕ್ಷಿಸಲಾರರು, ಎಂದು ಶ್ವಪಚನು ಅವನನ್ನು ಜರಿದು ನುಡಿದನು.

ಆ ಮೇಲೆ ಶ್ವಪಚನು ಸಾಮವೇದಿಯು ನೆಳಲು ಬಿದ್ದ ತನ್ನ ಆಹಾರದ ಭಾಗವು ಕೊಳೆತು ದುರ್ಗಂಧವಾದುದನ್ನೂ ತನ್ನ ಕೆರಹು ಮುಚ್ಚಿದ ಭಾಗವು ಪುಷ್ಪರೂಪವಾಗಿ ಸುಗಂಧವನ್ನು ಬೀರುತ್ತಿದ್ದುದನ್ನೂ ಅವನಿಗೆ ತೋರಿಸಿದನು.

ಹೀಗಾದುದನ್ನು ಸಾಮವೇದಿಯು ಕಂಡು ಬೆರಗಾದನು. ಆಗ ಅವನು ತನ್ನ ಮರಹನ್ನು ತಿಳಿಯಲು ಅವನ ಮನಸ್ಸಿನಲ್ಲಿ ಭಕ್ತಿಯು ಹೊರಹೊಮ್ಮಿತು. ಅವನು ಶ್ವಪಚನಿಗೆ ನಮಸ್ಕಾರ ಮಾಡಿ— ನಾನು ಸರ್ವಾಪರಾಧಿಯು, ನನ್ನನ್ನು ಕ್ಷಮಿಸು, ನನಗೆ ಲಿಂಗೋಪದೇಶವನ್ನು ಮಾಡು, ಎಂದು ಬಿನ್ನವಿಸಿಕೊಂಡನು.

ಆಗ ಶ್ವಪಚನು ಅವನನ್ನು ಸಮೀಪದಲ್ಲಿ ಕುಳ್ಳಿರಿಸಿಕೊಂಡು, ಪದ್ಮಾಸನದಲ್ಲಿರಿಸಿ, ಹರನ ರೂಪನ್ನು ಅವನ ಚಿತ್ತದೊಳಗಿರಿಸಿ, ತನ್ನ ಹಸ್ತವನ್ನು ಅವನ ಮಸ್ತಕದಲ್ಲಿ ಇಟ್ಟು, ಕರ್ಣದಲ್ಲಿ ಪಂಚಾಕ್ಷರಿಯನರುಹಿ. ಶಿವಲಿಂಗ ನಿಜಮೂರ್ತಿಯ ರೀತಿಯನ್ನು ಅವನಿಗೆ ತಿಳಿಸಿ ಲಿಂಗೋಪದೇಶವನ್ನು ಮಾಡಿದನು ಆಗ ಅವನ ಕುಲಛಲಮದವಳಿಯಿತು. ಶಿವಭಕ್ತಿ ನೆಲಸಿತು. ಭವಿತನವು ಹೋಯಿತು. ಜ್ಯೋತಿಯಿಂದ ಜ್ಯೋತಿಯನ್ನು ಹೊತ್ತಿಸಿದ ತೆರನಾಯಿತು. ಅವರಿಬ್ಬರೂ ಗುರುಶಿಷ್ಯರಾಗಿ ಒಬ್ಬರೊಳಗೊಬ್ಬರಾದರು. ಹೀಗೆ ಶ್ವಪಚಯ್ಯನಿಂದ ಸಾಮವೇದಿಯು ಶಿವತತ್ವವನ್ನು ಹೊಂದಿ ತನ್ನ ಪುರಕ್ಕೆ ಆಗಮಿಸಿದನು.

ಅವನು ಅಲ್ಲಿಗೆ ಬಂದ ಬಳಿಕ ಅವನ ಶಿಷ್ಯರು ಅವನನ್ನು ಕಂಡು— ನಿಮಗೆ ಇದೇನಾಯಿತು. ಹೀಗೇಕಾದಿರಿ, ಎಂದು ಆಶ್ಚರ್ಯಬಟ್ಟು ಕೇಳಲು: ಅವನು ತನಗೆ ದೊರಕಿದ ಶಿವಜ್ಞಾನವನ್ನು ಎಲ್ಲರಿಗೂ ಶಿವಾಗಮೋಕ್ತಿಯಿಂದ ಅರುಹಿದನು. ಆಗ ಅವರೂ ಕೂಡ ಅವನಿಂದ ಲಿಂಗದೀಕ್ಷೆಯನ್ನು ಹೊಂದುವವರಾದರು. ಹೀಗಾದ ಬಳಿಕ ಛತ್ತೀಸಪುರವು ಎಲ್ಲಿ ನೋಡಿದಲ್ಲಿ ಶಿವಮಯವಾಯಿತು. ಮನೆ ಮನೆಗಳಲ್ಲಿ ಲಿಂಗಾರ್ಚನೆಯು ತೊಳಗಹತ್ತಿತು. ಹೀಗೆ ಆ ಪುರದಲ್ಲಿ ಶಿವಭಕ್ತಿ ಸಂಭ್ರಮವು ಮಹತ್ತರವಾಗಿ ಬೆಳೆಯಿತು.

ಹೀಗೆ ಕೆಲವು ಮಾಸಗಳು ಸಂದಿ ಹೋದವು. ಮುಂದೆ ಒಂದಾನೊಂದು ದಿನ ಸಾಮವೇದಿಯು ತಂದೆಯ ದಿನವು ಬರಲು ಅದನ್ನು ಮಾಡಲು ಪಟ್ಟಣದಲ್ಲಿ ಒಬ್ಬರಾದರೂ ವಿಶ್ವೇದೇವರು ಅವನಿಗೆ ದೊರೆಯಲಿಲ್ಲ. ಆಗ ಅವನು ಚಿಂತಿಸುತ್ತ ಅರಣ್ಯದಲ್ಲಿದ್ದ ತನ್ನ ಗುರುವಾದ ಶ್ವಪಚನಲ್ಲಿಗೆ ಬಂದು ಅವನಿಗೆ— ನಾಳೆ ನನ್ನ ತಂದೆಯ ದಿನವದೆ. ತಾವು ಆಗ ವಿಶ್ವೇದೇವರಾಗಿ ಬಂದು ಕರುಣಿಸಬೇಕು, ಎಂದು ಹೇಳಿಕೊಳ್ಳಲು, ಶ್ವಪಚನು— ಮರುಳೇ ಪಿತೃದಿನ ಮಾಡುವದು ನಮಗೆ

ಸಲ್ಲದು. ಅದು ಶರಣರ ಮಾರ್ಗವಲ್ಲ. ಆದರೆ ಒಂದು ವೇಳೆ ನಿನಗೆ ವಿಶ್ವೇಡೇವರು ಬೇಕಾದಲ್ಲಿ ನಾಳೆ ಶಿವನು ಸ್ವತಃ ನಿನ್ನಲ್ಲಿಗೆ ಬರುವನು, ಎಂದು ನುಡಿಯಲು ಅವನು ಬಂದಿದ್ದಾನೆಂಬುದಕ್ಕೆ ಕುರುಹು ಆವುದು ಎಂದು ಕೇಳಲು, ಆವನು ಶ್ವಪಚನ ವೇಷದಿಂದಲೇ ನಿನ್ನಲ್ಲಿಗೆ ಬರುವನು ಎಂದು ಹೇಳಿ ಅವನನ್ನು ಮನೆಗೆ ಕಳುಹಿದನು.

ಮರ-ದಿನ ಸಾಮವೇದಿಯು ಶಾಕಪಾಕಾದಿಗಳನ್ನು ಸಿದ್ಧಪಡಿಸಿ ಮನೆಗೆ ಗುಡಿ ತೋರಣಗಳನ್ನು ಕಟ್ಟಿ ಸಿದ್ಧನಾಗಿ ಪರಮಾತ್ಮನ ಬರವನ್ನು ಈಕ್ಷಿಸುತ್ತ ಕುಳಿತನು. ಅಷ್ಟರಲ್ಲಿ ಈಶ್ವರನು ಒಬ್ಬ ಶ್ವಪಚನ ವೇಷವನ್ನು ಧಾರಣ ಮಾಡಿ ಒಂದು ಸತ್ತ ಕರುವನ್ನು ಹೊತ್ತುಕೊಂಡು ಕಯ್ಯಲ್ಲಿ ಸಂಬಳಗೋಲು ಹಿಡಿದುಕೊಂಡು ಸಾಮವೇದಿಗಳ ಪಿತೃಕುಲ ಸಹಿತವಾಗಿ ಅವನ ಮನೆಗೆ ಬಂದನು. ಸಾಮವೇದಿಯು ಅವನ ಕೊರಳಲ್ಲಿ ಲಿಂಗವಿರುವದನ್ನು ಕಂಡು ಇವನೇ ಪರಮಾತ್ಮನೆಂದು ತಿಳಿದು ಹರುಷಿತನಾಗಿ ಭಕ್ತಿಯಿಂದ ಅವನ ಪಾದಪೂಜೆಯನ್ನು ಮಾಡಿದನು.

ಆಗ ಶಿವನು ಶ್ವಪಚಯ್ಯನ ಮೂಲಕ ಸಾಮವೇದಿಯಲ್ಲಿ ಉಂಟಾದ ಗುರುಭಕ್ತಿ ಶಿವಭಕ್ತಿ ಇವುಗಳನ್ನು ನೋಡಿ ಪ್ರೀತನಾಗಿ ಅವನಿಗೆ ತನ್ನ ನಿಜರೂಪು ತೋರಿದನು. ಅವನು ಹೊತ್ತ ಕರುವು ವಿಷ್ವಕ್ಸೇನತನುವಾಯಿತು. ಅವನಿಗಿದ್ದ ಒಂದು ಮುಖವು ಹೋಗಿ ಐದು ಮುಖಗಳಾದವು. ಹೊದೆದ ಬಟ್ಟೆಯು ಪುಲಿದೊವಲು ಗಜಚರ್ಮವಾಯಿತು. ಕಟ್ಟಿದ್ದ ಕಿವಿಗುಂಜಿ ನಾಗಕುಂತಲವಾಯಿತು. ಅವನ ಶರೀರದ ಕಪ್ಪು ಬಣ್ಣವು ಹೋಗಿ ಕೊರಳಲ್ಲಿದ್ದ ಕಪ್ಪಾಯಿತು. ಕೆಯ್ಯಲ್ಲಿದ್ದ ಸಂಬಳಗೋಲ ಖಟ್ವಾಂಗವಾಯಿತು. ಎರಡು ಕಣ್ಣುಗಳ ಬದಲು ಮೂರು ಕಣ್ಣುಗಳಾಗಿ ಥಳಥಳಿಸಿ ಬೆಳಗಹತ್ತಿದವು. ಆಗ ಪೂಮಳೆಗರೆದವು, ದುಂದುಭಿ ನಾದವು ಹೊರಹೊಮ್ಮಿತು.

ಆಗ ಪರಮಾತ್ಮನು ಸಾಮವೇದಿಗೆ—ನಿನ್ನ ಭಕ್ತಿಗೆ ನಾನು ಮೆಚ್ಚಿದೆನು. ನನ್ನ ಕೂಡ ನಡೆ ಎನಲು, ಅದಕ್ಕೆ ಸಾಮವೇದಿಯು ನನ್ನ ಗುರುವಿನೊಡನಲ್ಲದೆ ಬಾರೆನೆನಲು ಶ್ವಪಚನನ್ನು ಅಲ್ಲಿಗೆ ಬರಮಾಡಿಕೊಂಡು ಅವನನ್ನೂ ಛತ್ತೀಸಪುರವನ್ನೂ ಕೈಲಾಸಕ್ಕೆ ಕರೆದೊಯ್ದು ಶ್ವಪಚ ಮತ್ತು ಸಾಮವೇದಿಗಳಿಗೆ ಗಣಪದವಿಯನ್ನು ಕೊಟ್ಟನು ಮತ್ತು ಛತ್ತೀಸಪುರವನ್ನು ರುದ್ರಲೋಕದೊಳಗಿರಿಸಿದನು.

ಶ್ವಪಚಯ್ಯ ಸಾಮವೇದಿಗಳಿದ್ದ ನಿಶ್ಚಿತ ಕಾಲವು ಗೊತ್ತಾಗುವದಿಲ್ಲ. ಆದರೆ ಅವರನ್ನು ಬಸವೇಶ್ವರನು ತನ್ನ ವಚನಗಳಲ್ಲಿ ಉಲ್ಲೇಖಿಸಿರುವದರಿಂದ ಅವರು ಅವನಕಿಂತಲೂ ಮೊದಲಿನವರೆಂಬುದು ಸ್ಪಷ್ಟವದೆ. ಇವರಿಬ್ಬರನ್ನು ವೀರಶೈವ ಗ್ರಂಥಕಾರರು ತಮ್ಮ ಗ್ರಂಥಗಳಲ್ಲಿ ಬಹಳ ಹೊಗಳುತ್ತಾರೆ. ಗಣಸಹಸ್ರದಲ್ಲಿಯೂ ಅವರ ಹೆಸರುಗಳು ಬಂದಿವೆ.

ಈ ಉಭಯತರಿದ್ದ ಗ್ರಾಮವಾವುದೆಂಬುದು ನಮಗೆ ಗೊತ್ತಾಗುವದಿಲ್ಲ. ಛತ್ತೀಸಪುರವೆಂಬ ಗ್ರಾಮವು ಕರ್ನಾಟಕದಲ್ಲಾಗಲಿ ಇಲ್ಲವೆ ಅದಕ್ಕೆ ಸಮೀಪದಲ್ಲಿರುವ ಯಾವ ಭಾಗಗಳಲ್ಲಾಗಲಿ ನಮಗೆ ದೊರೆತಿಲ್ಲ. ಆದರೆ ಛತ್ತೀಸಗಡವೆಂಬ ಪ್ರಾಂತವಿಭಾಗವು ಮಧ್ಯ ಹಿಂದುಸ್ತಾನದಲ್ಲಿದೆ. ಆದರೆ ಅದು ಈ ಉಭಯ ಶಿವಶರಣರಿದ್ದ ಸ್ಥಳವೆಂದು ತೋರುವದಿಲ್ಲ.

ಶ್ವಪಚಯ್ಯನ ಕಥೆಯಲ್ಲಿ ಶಿವಶರಣರ ಅಹಿಂಸಾ ಮಾರ್ಗಕ್ಕೆ ಹೊರತಾದ ಕೆಲವು ಸಂಗತಿಗಳು ಬಂದಿರುತ್ತವೆ. ಸಿರಿಗೆರೆಯ ಶಿರಿಯಾಳ, ಚಂಗಳೆ, ಬೇಡರ ಕನ್ನಪ್ಪ, ಇವರ ಕಥೆಗಳಲ್ಲಿಯೂ ಬಂದಿವೆ. ಆದರೆ ಇವರೆಲ್ಲರನ್ನು ವೀರಶೈವ ಗ್ರಂಥಕಾರರು ಹೊಗಳುತ್ತ ಬಂದಿದ್ದಾರೆ. ಶ್ವಪಚಯ್ಯನ ಕಥೆಯಂತೆಯೇ ಇನ್ನೂ ಕೆಲವು ಕಥೆಗಳಿದ್ದು ಅವುಗಳನ್ನು ನಾವು ಮುಂದೆ ಇದೇ ಗ್ರಂಥದಲ್ಲಿ ಉಲ್ಲೇಖಿಸುವೆವು. ಇಂಥ ಕಥೆಗಳು ಬಸವೇಶ್ವರನಕಿಂತಲೂ ಮೊದಲಿಗಿದ್ದ ಧಾರ್ಮಿಕ ಸ್ಥಿತಿಯನ್ನು ತೋರಿಸುತ್ತವೆಂದು ನಮಗೆ ತೋರುತ್ತದೆ. ಆದರೆ ಈಗಿನ ಕಥೆಯಲ್ಲಿ ಕೆಲವು ವೀರಶೈವರ ಮಹತ್ವದ ತತ್ವಗಳು ಅಡಕವಾಗಿವೆ. ಕೇವಲ ಕರ್ಮಠ ಮಾರ್ಗಕ್ಕಿಂತ ಷಟ್‌ಸ್ಥಲ ಮಾರ್ಗವು ಹೆಚ್ಚಿನದೆಂತಲೂ ಲಿಂಗಧಾರಣದಿಂದ ಜಾತಿ ಭೇದವು ಅಳಿದು ಹೋಗುತ್ತದೆಂತಲೂ ಭಕ್ತರು ಚಾಂಡಾಲರಿರಲಿ ಇಲ್ಲವೆ ಬ್ರಾಹ್ಮಣರಿರಲಿ ಯಾರಿದ್ದರೂ ಅವರಿಗೆ ಗುರೂಪದೇಶವಾದ ಬಳಿಕ ಅವರಲ್ಲಿ ಭೇದಭಾವವನ್ನು ಎಣಿಸಕೂಡದೆಂತಲೂ ಶಿವಶರಣರ ಯಾವ ತತ್ವಗಳು ಇರುತ್ತವೆಯೋ ಅವುಗಳು ಈ ಈರ್ವರ ಚರಿತ್ರೆಗಳಲ್ಲಿ ಕಂಡುಬರುತ್ತವೆ. ಆದುದರಿಂದ ಇವರಿಬ್ಬರಿಗೆ ಶಿವಶರಣರಲ್ಲಿ ಶ್ರೇಷ್ಠ ಸ್ಥಾನವು ಉಂಟಾಗಿರುತ್ತದೆ.

# ತೆಲುಗು ಜೊಮ್ಮಯ್ಯ.

ತೆಲುಗು ಜೊಮ್ಮಯ್ಯನು ಶಿವಶರಣರಲ್ಲಿ ಪ್ರಸಿದ್ಧನಾಗಿದ್ದು ವೀರಶೈವ ಗ್ರಂಥಕಾರರೆಲ್ಲರೂ ಅವನನ್ನು ತಮ್ಮ ಗ್ರಂಥಗಳಲ್ಲಿ ಸ್ತುತಿಸಿದ್ದಾರೆ. ಮಹಾಕವಿಯಾದ ಹರಿಹರನೂ ಕೂಡ ಅವನ ಸಲುವಾಗಿ ಒಂದು ರಗಳೆಯನ್ನು ರಚಿಸಿದ್ದಾನೆ. ಅವನ ಹೆಸರು ಗಣಸಹಸ್ರದಲ್ಲಿಯೂ ಕೂಡ ಬಂದಿರುತ್ತದೆ.

ತೆಲುಗುಜೊಮ್ಮಯ್ಯನು ಕಲ್ಯಾಣ ಪಟ್ಟಣದಲ್ಲಿ ಆಳುತ್ತಿದ್ದ ಪೆರ್ಮಾಡಿರಾಯನ ಕಾಲದಲ್ಲಿ ಪ್ರಸಿದ್ಧನಾದನು. ಚಾಲುಕ್ಯ ರಾಜರಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ ಆರನೆಯ ವಿಕ್ರಮಾದಿತ್ಯನಿಗೆ ಪೆರ್ಮಾಡಿ ಎಂಬ ಹೆಸರಿದ್ದು ಅವನ ಕಾಲದಲ್ಲಿ ಕೇಶಿರಾಜ, ಬಾಹೂರು ಬೊಮ್ಮಯ್ಯ, ಇಕ್ಕಿಹಾಳಿ ಬೊಮ್ಮಯ್ಯ ಈ ಶಿವಶರಣರು ಪ್ರಸಿದ್ಧಿಗೆ ಬಂದರು. ತೆಲುಗುಜೊಮ್ಮಯ್ಯನು ಇದೇ ಕಾಲದಲ್ಲಿರಬಹುದು. ವಿಕ್ರಮಾದಿತ್ಯನು ಕ್ರಿ. ಶ. (೧೦೭೬)ರಿಂದ (೧೧೨೬)ರ ವರೆಗೆ ರಾಜ್ಯವಾಳಿದ್ದರಿಂದ ೧೧೦೦ರ ತರುವಾಯ ಪ್ರಸಿದ್ಧಿಗೆ ಬಂದ ಬಸವೇಶ್ವರನ ಮೊದಲು ಈತನ ಅಸ್ತಿತ್ವವಿರಬೇಕೆಂಬುದು ಸ್ಪಷ್ಟವಾಗುತ್ತದೆ. ಬಸವೇಶ್ವರನು ಈತನನ್ನು ತನ್ನ ವಚನಗಳಲ್ಲಿ ಸ್ಮರಿಸುವುದರಿಂದ ಅವನಿಗಿಂತಲೂ ಈತನು ಮೊದಲು ಎಂಬುದು ವ್ಯಕ್ತವಾಗುತ್ತದೆ. ಆ ವಚನಗಳು ಯಾವುವೆಂದರೆ:—

೧, ಕಾಳಿದಾಸಂಗೆ ಕಣ್ಣಾಸಿತ್ತೆ. ಮಲಯ್ಯನ ಶಿರಸುರ ಕೊಯ್ದು. ನಂಬಿ ಕರೆದಡೋ ಎಂಬ. ತೆಲುಗು ಜೊಮ್ಮಯ್ಯಂಗೆ ಒಲಿದೆ ದೇವಾ! ಚೆನ್ನನೇ ಕೊಳ್ಳಯ್ಯ” (ಸಂಖ್ಯೆ ೬೫೩)

(೨) ತೊತ್ತಿಂಗೆ ಒಲ್ಲಿದನೊಲಿದರೆ ಮರುಳು ಮಾಡದೆ ಮಾಣ್ಬನೇ? ಅಯ್ಯ ಬೇಡರ ದಾಸಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯ? ಮಾದರ ಚೆನ್ನಯ್ಯಂಗೆ ಡೋಹರ ಕಕ್ಕಯ್ಯಂಗೆ ತೆಲುಗು ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೇ ಅಯ್ಯ? ಎನ್ನ ಮನದ ಪಂಚೇಂದ್ರಿಯ ವಿಸ್ತ್ರುತ್ತಲಾದರೆ ತನ್ನತ್ತ ಮಾಡುವ ಕೂಡಲಸಂಗಮದೇವ. (ಸಂಖ್ಯೆ ೭೧೬)

ಇವುಗಳಲ್ಲಿ ಜೊಮ್ಮಯ್ಯನು ಭಕ್ತಿಯುಳ್ಳವನೆಂದು ಬಸವೇಶ್ವರನು ಅವನನ್ನು ಸ್ಮರಿಸಿದ್ದಾನೆ. ಹೀಗೆ ಕೇಶಿರಾಜ ಬಾಹೂರು ಬೊಮ್ಮಯ್ಯಗಳು

ಗ್ರಂಥಕಾರರೆಂದು ಪ್ರಸಿದ್ಧರಾಗಿರುವರೋ ಹಾಗೆಯೇ ಜೋವಯ್ಯನು ವಚನಗಳನ್ನು ರಚಿಸಿದವನೆಂದು ಪ್ರಸಿದ್ಧನಾಗಿದ್ದಾನೆ. ಆದರೆ ಅವುಗಳಲ್ಲಿ ನಾಲ್ಕು ಮಾತ್ರ ನಮಗೆ ದೊರಕಿದ್ದು ಅವುಗಳನ್ನು ನಾವು ಕೆಳಗೆ ಉದಹರಿಸಿದ್ದೇವೆ. ಅವು ಯಾವವೆಂದರೆ—

೧. ಗುರು ಕರುಣವ ಪಡೆವುದಕ್ಕೆ ಚಿಹ್ನವಾವುದೆಂದೊಡೆ ಅಂಗದ ಮೇಲೆ ಲಿಂಗ ಸಹಿತವಾಗಿರಬೇಕು. ಅಂಗದ ಮೇಲೆ ಲಿಂಗ ಸಹಿತವಿಲ್ಲದೆ ಬರಿಯ ಗುರುಕಾರುಣ್ಯವಾಯಿತ್ತೆಂದೊಡೆ ಅದೆಂತೋ? ಲಿಂಗ ಹೀನವಾಗಿ ಗುರುಕಾರುಣ್ಯ ಉಂಟೇ? ಇಲ್ಲ. ಆ ಮಾತ ಕೇಳಲಾಗದು. ಇದು ಕಾರಣ ಲಿಂಗ ಧಾರಣವುಳ್ಳುದೇ ಸದಾಚಾರ. ಇಲ್ಲದೊಡೆ ಅನಾಚಾರವೆಂದನಯ್ಯಾ ತೆಲುಗೇಶ್ವರಾ.

೨. ಕಾಮ ಸನ್ನಿಧನಾಗಿ ತಾ ಚೆಲುವನಾದೊಡೆ ಕಾಮಿನಿ ಜನವೆಲ್ಲ ಮೆಚ್ಚಬೇಕು. ದಾನ ಗುಣದಲ್ಲಿ ಕರೆದೀವನಾದೊಡೆ ಯಾಚಕ ಜನವೆಲ್ಲ ಮೆಚ್ಚಬೇಕು. ವೀರನಾದೊಡೆ ವೈರಿಗಳು ಮೆಚ್ಚಬೇಕು. ಖೂಳನಾದೊಡೆ ತನ್ನ ತಾ ಮೆಚ್ಚಿಕೊಂಬ. ಎನ್ನ ದೇವ ತೆಲುಗೇಶ್ವರನಲ್ಲಿ ತಾನು ಭಕ್ತನಾದೊಡೆ ದೇವರು ಮೆಚ್ಚುವ, ಜಗವೂ ತಾ ಮೆಚ್ಚುವುದು.

೩. ಅಖಂಡಿತವ ಕಂಡೆನೆಂದು. ಕಂಡರಖಂಡಿತನಾಗಿ ಬ್ರಹ್ಮಾಂಡನಾಗಿರಬೇಕು. ಓದಿದೆ ನೋಡಿದೆನೆಂದೆಂಬ, ನಿನ್ನೋದು ವಾದಕ್ಕೆ ಹೋಯಿತ್ತು. ಅರಿದೆನರಿದೆನೆಂದೆಂಬೆ. ಅರಿವುವನೆಲ್ಲವನರಿದೆ. ಅರಿವುದುದಕ್ಕೆಂತೋ? ನವನಾಳವನ್ನು ಕಟ್ಟಿ ವಿಕಳನಾಗಲು ಬೇಡ. ಬಳಸಿ ಒಟ್ಟಿಯು ಕಾಣದ ಮಾಯೆಯ ಬಾಗಿಲ ಹೊದ್ದಿಹೆ. ಮಕ್ಕಳ ತೊಟ್ಟಿಲ ಮೇಲೆ ಕಟ್ಟಿದ ಕೆಂಪಿನ ಹಣ್ಣಿರ್ದು ನಿಲುಕಲು ಬಾರದು. ನೆನಹು ನೆಲೆಗೊಳ್ಳದಾಗಿ ನಿಜಭಾವ ನಿಜರೂಪವೆಂತೋ? ಗಜಬಜೆ ಇಲ್ಲದ ಮನಕ್ಕೆ ಸಹಜದ ತೆಲುಗೇಶ್ವರ ತೋರಿಹ.

೪. ಬ್ರಹ್ಮಾಂಡಕೋಟಿಗಳುರುಳಿ ಬೀಳುವಲ್ಲಿ ಕಾಕೆಯ ಹಣ್ಣೊಂದು ಒಬ್ಬ ಮೆಲಿದನಾ ಶರಣನು. ಮುಗಿಲು ಮುಟ್ಟುವಸುದ್ದವ ನೋಡಿ ಗಗನವ ನುಂಗುವನ ಬಾಯಗಲವ ನೋಡಾ. ತಾಳಮರನ ಕೀಳುವಂಗೆ ಚೊಗಚೆಯು ಅಗಿವೆನೆಂಬನು. ಇಂತಪ್ಪ ಶರಣರು ತೆಲುಗೇಶ್ವರಾ ನಿಮ್ಮವರು.

ಮೇಲಿನ ವಚನಗಳ ಮೇಲಿಂದ ತೆಲುಗು ಜೊಮ್ಮಯ್ಯನು ಲಿಂಗಾನು ಭಾವಿಯಾಗಿದ್ದನೆಂತಲೂ ಶಿವಾನುಭವದ ತಿಳುವಳಿಕೆಯುಳ್ಳವನಾಗಿದ್ದನೆಂತಲೂ ಸ್ಪಷ್ಟವಾಗುತ್ತದೆ. ಅಲ್ಲದೆ ಅವನಿದ್ದ ಕಾಲದಲ್ಲಿ ಶಿವಶರಣರನೇಕರಾಗಿದ್ದು ಅವರಿಗೋಸ್ಕರ ಅವನು ಭಕ್ತಿಯನ್ನು ವಹಿಸಿದವನಾಗಿದ್ದನೆಂತಲೂ ಸ್ಪಷ್ಟವಾಗುತ್ತದೆ.

ತೆಲುಗು ಜೊಮ್ಮಯ್ಯನು ತನ್ನ ವಚನಗಳಿಗೋಸ್ಕರ ಇಟ್ಟುಕೊಂಡ ಮುದ್ರಿಕೆ ಮತ್ತು ಅವನ ಹೆಸರು ನೋಡಿದರೆ ಅವನು ಮೊದಲು ತೆಲುಗು ದೇಶದವನಾಗಿದ್ದು ಅಲ್ಲಿಂದ ಅವನು ಕರ್ನಾಟಕಕ್ಕೆ ಬಂದಿರಬಹುದೆಂಬ ಅನುಮಾನವು ಉಂಟಾಗುತ್ತದೆ. ಆದರೆ ಅವನ ಪೂರ್ವದ ಹುಟ್ಟುಗ್ರಾಮ ಯಾವುದೆಂಬುದು ಅವನನ್ನುಲ್ಲೇಖಿಸುವ ಯಾವ ಗ್ರಂಥದಲ್ಲಿಯೂ ಹೇಳಿರುವದಿಲ್ಲ. ಅವನ ಇಷ್ಟದೇವತೆಯು ಭೀಮೇಶ್ವರನೆಂದು ಹೇಳಿದೆ. ಇದು ಶ್ರೀಶೈಲದಲ್ಲಿರುತ್ತದೆಂದು ದೇವರದಾಸಿಮಯ್ಯನ ಚರಿತ್ರೆಯಿಂದ ಕಂಡು ಬರುವದರಿಂದ ಅವನು ಶ್ರೀಶೈಲ ಪ್ರಾಂತದವನಿರಬಹುದು. ಆದರೆ ಅವನು ಪೆರ್ಮಾಡಿರಾಯನ ಕಾಲದಲ್ಲಿ ಮಾತ್ರ ಕಲ್ಯಾಣ ಪಟ್ಟಣದಲ್ಲಿದ್ದನೆಂಬ ಉಲ್ಲೇಖಗಳು ದೊರೆಯುತ್ತವೆ.

ತೆಲುಗು ಜೊಮ್ಮಯ್ಯನ ವಚನಗಳಿಂದ ಅವನು ವೀರಶೈವನೆಂಬುದು ತೋರಿಬಂದರೂ ಬೇಟೆಯಾಡುವದೇ ಅವನ ನಿತ್ಯದ ಕಾಯಕವಾಗಿತ್ತು. ಅವನು ಲಿಂಗಧಾರಿಯಾಗುವ ಮೊದಲು ಈ ಕಾಯಕವನ್ನು ಮಾಡುತ್ತಿರಬಹುದು. ಆದರೆ ಅವನು ಈ ಕಾಯಕವನ್ನು ಮಾಡುತ್ತಿದ್ದರೂ ಅವನು ಅತ್ಯಂತ ಭಕ್ತಿಯುಳ್ಳವನಾಗಿ ಶಿವಜ್ಞಾನಿ ಎಂದು ಪ್ರಸಿದ್ಧನಾಗಿ ಕಲ್ಯಾಣ ಪಟ್ಟಣದಲ್ಲಿ ವಾಸಮಾಡುತ್ತಿದ್ದನು. ಅವನು ಬೇಟೆಯಾಡುತ್ತಿದ್ದುದರ ಬಗ್ಗೆ ಅವನ ಚರಿತ್ರೆಗಳಲ್ಲಿ ಉಲ್ಲೇಖವಾಗಿರುವ ಒಂದು ದಂತಕಥೆಯು ಇರುವದೇನೆಂದರೆ—

ಶಿವಾನಂದನೆಂಬ ಶಿವಯೋಗಿಯು ಶ್ರೀಶೈಲ ಪರ್ವತದಲ್ಲಿ ತಪಸ್ಸನ್ನಾಚರಿಸುತ್ತ ಇದ್ದನು. ಆಗ ಕೆಲವು ಗಂಧರ್ವರು ಅವನ ಸಮೀಪದಲ್ಲಿ ಒಂದು ಜಟಾಭಸ್ಮಧಾರಿಯಾಗಿ ಸಮಾಧಿಯಲ್ಲಿ ಕುಳಿತ ಅವನನ್ನು ಕಂಡು ಇವನು ಮುದಿಗರಡಿ ಎಂದು ಹಾಸ್ಯ ಮಾಡಿದರು. ಅವನ ಶಿಷ್ಯರಲ್ಲೊ

ಬ್ಬನಾದ ಪುನೀತಯ್ಯನೆಂಬುವನು ಅವರು ಅಂದದ್ದನ್ನು ಕೇಳಿ ಇಂಥ ಪುಣ್ಯ ಪುರುಷನನ್ನು ನೋಡಿ ನೀವು ಹಾಸ್ಯ ಮಾಡುತ್ತೀರಾ? ನೀವು ಜಿಂಕೆಗಳಾಗಿರಿ ಎಂದು ಶಾಪವನ್ನಿತ್ತನು. ಆಗ ಅವರು ತಮ್ಮಿಂದ ಅಪರಾಧವಾಯಿತು ಕ್ಷಮಿಸಿರಿ, ಎಂದು ಕೇಳಿದ್ದಕ್ಕೆ ಪುನೀತಯ್ಯನು ನೀವು ಕಲ್ಯಾಣ ಕಟಕದ ಸಮೀಪವಾಗಿ ಸಂಚರಿಸುತ್ತಾ ಇರಬೇಕು. ಆಗ ತೆಲುಗು ಜೊಮ್ಮಯ್ಯನೆಂಬ ಶಿವಶರಣನು ನಿಮ್ಮನ್ನು ಸಂಹರಿಸಲು ನೀವು ನಿಮ್ಮ ಪೂರ್ವಪದವಿಯನ್ನು ಹೊಂದುವಿರಿ ಎಂದು ಹೇಳಲು ಅವರು ಹಾಗೆಯೇ ಕಲ್ಯಾಣದಿಂದ ಹತ್ತು ಗಾವುದದ ಮೇಲಿರುವ ಅರಣ್ಯ ಪ್ರದೇಶದಲ್ಲಿ ಮೃಗಗಳಾಗಿ ಸಂಚರಿಸುತ್ತಾ ಇದ್ದರು.

ಇತ್ತ ತೆಲುಗು ಜೊಮ್ಮಯ್ಯನು ಅತ್ಯಂತ ಶಿವಭಕ್ತಿಯುಳ್ಳವನಾಗಿ ಕಲ್ಯಾಣ ಪಟ್ಟಣದಲ್ಲಿದ್ದ ಭೀಮೇಶ್ವರನನ್ನು ಭಜಿಸುತ್ತ ಇರುತ್ತಿರಲು ಒಂದು ದಿನ ಭೀಮೇಶ್ವರನು ಅವನ ಸ್ವಪ್ನದಲ್ಲಿ ಬಂದು ಕಾನನದಲ್ಲಿ ಕೆಲವು ಗಂಧರ್ವರು ಜಿಂಕೆಗಳಾಗಿ ನಿನ್ನ ಬರವನ್ನು ಅಪೇಕ್ಷಿಸುತ್ತಿದ್ದಾರೆ. ನೀನು ಅಲ್ಲಿಗೆ ಬೇಟೆಗಾಗಿ ಹೋಗಿ ಅವರನ್ನು ಸಂಹರಿಸು ಎಂದು ಹೇಳಲು ಅವನು ಹಾಗೆಯೇ ಹೋಗಿ ಆ ಮೃಗಗಳನ್ನು ಸಂಹರಿಸಲು ಅವು ಗಂಧರ್ವ ರೂಪವನ್ನು ತಾಳಿ ತಮ್ಮ ತಮ್ಮ ಪೂರ್ವದ ಸ್ಥಾನಕ್ಕೆ ಹೊರಟುಹೋದವು. ಇದನ್ನು ಜನರು ತಿಳಿದು ಜೊಮ್ಮಯ್ಯನು ಮಹಾತ್ಮನೆಂದು ಭಾವಿಸಿ ಅವನನ್ನು ಅವರು ಪೂಜಿಸುವವರಾದರು.

ಪಾಪಕರ್ಮ ಮಾಡಿದವರು ಹೀನ ಜನ್ಮಗಳನ್ನು ತಾಳಿ ಪೂರ್ವ ಕರ್ಮಗಳನ್ನು ಉಪಭೋಗಿಸಿದ ಬಳಿಕ ಅವರನ್ನು ಪುನೀತರನ್ನಾಗಿ ಮಾಡುವದಕ್ಕೋಸ್ಕರ ಇಂಥ ಹಿಂಸಾಚರಣೆಗಳು ಜಗತ್ತಿನಲ್ಲಿ ನಡೆಯುತ್ತವೆಂಬ ತತ್ವವನ್ನು ಈ ಘಟನೆಯು ಸಮರ್ಥಿಸುತ್ತದೆ.

ಜೊಮ್ಮಯ್ಯನು ಶಿವಭಕ್ತಿಯುಳ್ಳವನಾಗಿ ಕಲ್ಯಾಣಪಟ್ಟಣದಲ್ಲಿರುತ್ತಿರಲು ಅವನ ಶಿವಭಕ್ತಿಯ ಮಹಿಮೆಯನ್ನೂ ಕೀರ್ತಿಯನ್ನೂ ಕೊಂಡಗುಳಿಯಲ್ಲಿರುತ್ತಿದ್ದ ಕೇಶಿರಾಜನೆಂಬ ಶಿವಶರಣನು ಕೇಳಿ ಅವನನ್ನು ಕಾಣಬೇಕೆಂದು ಅನೇಕ ಶಿವಭಕ್ತರನ್ನೊಡಗೊಂಡು ಕಲ್ಯಾಣ ಪಟ್ಟಣಕ್ಕೆ ಬಂದನು. ಅಲ್ಲಿ ಜೊಮ್ಮಯ್ಯನು ಶಿವಪುರವೆಂಬಲ್ಲಿ ವಾಸ ಮಾಡುತ್ತಾನೆಂಬುದನ್ನು

ತಿಳಿದು ಅಲ್ಲಿದ್ದ ಅವನ ಮನೆಗೆ ಹೋಗಿ ಮನೆಯಲ್ಲಿ ಅವನನ್ನು ಕಾಣದೆ ಅವನ ಹೆಂಡತಿಯನ್ನು ಕೇಳಲಾಗಿ ಅವಳು ತನ್ನ ಗಂಡನು ಬೇಟೆಗೆ ಹೋಗಿದ್ದಾನೆಂದು ಹೇಳಿದಳು. ಕೇಶಿರಾಜನು ಅಲ್ಲಿ ಮನೆಯಲ್ಲಿ ನೋಡುತ್ತಾನೆಯೇ ಒಳಗೆ ಮಾಂಸ, ಹೊರಗೆ ಮಾಂಸ, ಎಲ್ಲಿ ನೋಡಿದರೂ ಮಾಂಸ ಇರುವುದನ್ನು ಕಂಡು ಹೇಸಿಕೊಂಡು ಜೊಮ್ಮಯ್ಯನ ಹೆಂಡತಿಗೆ— ಜೊಮ್ಮಯ್ಯನಿಗೆ ತಾವು ಶರಣಾರ್ಥಿ ಹೇಳಬೇಕು ಎಂದು ನುಡಿದು ಅಲ್ಲಿಯೇ ಶಿವಪುರದಲ್ಲಿದ್ದ ಭೀಮನಾಥಾಲಯಕ್ಕೆ ಬಂದು ಬಿಡಾರಬಿಟ್ಟನು. ಅಲ್ಲಿ ಅವನು ಧ್ಯಾನಿಸುತ್ತ ಶಿವಭಕ್ತರ ಪ್ರವೃತ್ತಿಯನ್ನು ದೂರಿಂದಲೇ ಕೇಳಬೇಕೇ ಹೊರತು ಅವರ ಸಮೀಪಕ್ಕೆ ಬರಬಾರದು ಎಂದು ಖಿನ್ನಮನಸ್ಕನಾಗಿ ನುಡಿಯುತ್ತ ಸೋಮನಾಥನೆಂಬ ತನ್ನ ಇಷ್ಟಲಿಂಗದ ಪೂಜಾಸಿದ್ಧತೆಯಲ್ಲಿ ತೊಡಗಿದನು.

ಇತ್ತ ಕಡೆಗೆ ಜೊಮ್ಮಯ್ಯನು ಬೇಟೆಯಾಡಿ ಮೃಗಗಳನ್ನು ಕೊಂದು ತಂದು ಮನೆಯಲ್ಲಿರಿಸುವಾಗ ಅವನ ಸತಿಯು ಅವನಿಗೆ— ಇಷ್ಟರಲ್ಲಿ ಒಬ್ಬ ಹಿರಿಯ ಶರಣರು ಅನೇಕ ಭಕ್ತರನ್ನೊಡಗೂಡಿ ನಿಮ್ಮನ್ನು ಕಾಣಲು ಇಲ್ಲಿಗೆ ಬಂದಿದ್ದರು. ಅವರು ಈ ಮಾಂಸವನ್ನು ಕಂಡು ಹೇಸಿ ಮೂಗು ಮುಚ್ಚಿಕೊಂಡು ಭೀಮನಾಥಾಲಯದ ಕಡೆಗೆ ಹೊರಟು ಹೋದರು, ಎಂದು ಹೇಳಿದಳು. ಆಗ ಜೊಮ್ಮಯ್ಯನು ಕೇಶಿರಾಜನನ್ನು ಹುಡುಕುತ್ತ ಅವನಿದ್ದೆಡೆಗೆ ಬಂದು ಅವನಿಗೆ ವಂದಿಸಿ— ತಾವು ಮನೆಗೆ ಚಿತ್ತೈಸಬೇಕು ಎಂದು ಬೇಡಿಕೊಂಡನು. ಅದಕ್ಕೆ ಕೇಶಿರಾಜನು— ನಿಮ್ಮನ್ನು ಕಂಡುದೇ ನಮಗೆ ದಿವ್ಯಾಮೃತವನುಂಡ ಹಾಗಾಯಿತು ಎಂದು ನುಡಿಯಲು ಜೊಮ್ಮಯ್ಯನು ಮನಸ್ಸು ನೊಂದವನಾಗಿ ಹಿಂದಿರುಗಿಹೋದನು.

ಇತ್ತ ಕೇಶಿರಾಜನು ತನ್ನ ನಿತ್ಯದ ಪೂಜಾದಿಕಾರ್ಯಗಳಲ್ಲಿ ತೊಡಗಿ ತನ್ನ ಸಜ್ಜೆಯಿಂದ ಲಿಂಗವನ್ನು ಹೊರಗೆ ತೆಗೆಯುತ್ತಿರಲು ಅದರೊಳಗಿಂದ— ಕೇಶಿರಾಜನೇ ನಮಗೆ ಇಲ್ಲಿ ಪೂಜೆ ಬೇಡ, ಜೊಮ್ಮಯ್ಯನ ಮನೆಯಲ್ಲಿ ಅದನ್ನು ಮಾಡು. ಭಕ್ತರಲ್ಲಿ ಛಲವೇಕೆ? ಎಂಬ ಶಬ್ದಗಳು ಹೊರಟವು. ಕೇಶಿರಾಜನು ಅವುಗಳನ್ನು ಕೇಳಿ ಭಯಭೀತನಾಗಿ ತನ್ನಿಂದ ಏನೋ ಪ್ರಮಾದವಾಯಿತು ಎಂದು ಭಾವಿಸಿ— ನನ್ನ ಮೇಲೆ ದೇವರ ಕೋಪವಾಗಿದೆ. ನಾನು ಉಳಿಯಬಹುದೇ ಎಂದು ಚಿಂತಿಸುತ್ತ ಜೊಮ್ಮಯ್ಯನ ಮನೆಗೆ ಬಂದನು.

ಕೇಶಿರಾಜನು ತನ್ನ ಮನೆಗೆ ಬಂದದ್ದನ್ನು ಜೊಮ್ಮಯ್ಯನು ಕಂಡು ಅತ್ಯಂತ ಹರುಷಿತನಾಗಿ ತನ್ನ ಪೂಜಾಗೃಹದಲ್ಲಿ ಅವನನ್ನು ಲಿಂಗಪೂಜೆಗೆಂದು ಕುಳ್ಳಿರಿಸಿದನು. ಅಲ್ಲಿ ಕೇಶಿರಾಜನು ತನ್ನ ಪೂಜಾದಿ ಕಾರ್ಯಗಳನ್ನು ತೀರಿಸಿದ ಬಳಿಕ ಜೊಮ್ಮಯ್ಯನ ಹೆಂಡತಿಯು ಅವನಿಗೆ ನೀಡಲಿಕ್ಕೆ ಬರಲು ಕೇಶಿರಾಜನು ನಡನಡುಗಹತ್ತಿದನು. ಜೊಮ್ಮಯ್ಯನು ಅದನ್ನು ನೋಡಿ ನಗುತ್ತ ತನ್ನ ಸತಿಗೆ— ಕೇಶಿರಾಜನಿಗೆ ಪಕ್ವಾನ್ನಗಳನ್ನು ತಂದು ನೀಡು, ಎಂದು ಹೇಳಲು ತಳಿಗೆಯಲ್ಲಿದ್ದ ಖಂಡಮಾಂಸಗಳೆಲ್ಲವೂ ಕಜ್ಜಾಯ, ಪಳವಳಿಗೆ, ಹೂರಿಗೆ ಮೊದಲಾದ ಪಕ್ವಾನ್ನಗಳಾಗಿದ್ದವು. ಕೇಶಿರಾಜನು ಅವುಗಳನ್ನು ಕಂಡು ಆಶ್ಚರ್ಯಬಟ್ಟು— ಶಿವಭಕ್ತರ ಘನವನ್ನು ಶಿವನೇ ಬಲ್ಲನು ಎಂದು ಜೊಮ್ಮಯ್ಯನನ್ನು ಹೊಗಳುತ್ತ ಅವು ಲಿಂಗಪ್ರಸಾದವೆಂದು ಭಾವಿಸಿ ಆ ಪದಾರ್ಥಗಳನ್ನು ಸ್ವೀಕರಿಸಿದನು.

ಆಮೇಲೆ ಜೊಮ್ಮಯ್ಯ ಕೇಶಿರಾಜಗಳು ಹಗಲಿರುಳು ಶಿವಾನುಭವದ ನಡೆಗಳನ್ನು ಚರ್ಚಿಸುತ್ತ ಕೆಲವು ದಿವಸ ಅಲ್ಲಿಯೇ ಕಾಲಕಳೆದರು. ಆಮೇಲೆ ಕೇಶಿರಾಜನು ತನ್ನ ಗ್ರಾಮವಾದ ಕೊಂಡಗುಳಿಗೆ ತಿರುಗಿಬಂದನು. ಈ ಗ್ರಾಮವು ಸಿಂದಗಿಯಿಂದ ವಿಜಾಪುರ ಜಿಲ್ಲೆಯ ಮೇರೆಯ ಮೇಲೆ ಪೂರ್ವಕ್ಕೆ ೩೦ ಮೈಲುಗಳ ಮೇಲೆ ಕಲಬುರ್ಗಿ ಜಿಲ್ಲೆಯಲ್ಲಿ ಇದೆ.

ಜೊಮ್ಮಯ್ಯನು ಇದೇ ಕಾಲಕ್ಕೆಯೇ ಶಿವಾನುಭವದ ಆಚರಣೆಗಳನ್ನು ತಿಳಿದು ವಚನಗಳನ್ನು ರಚಿಸಿರಬಹುದೆಂದು ತೋರುತ್ತದೆ. ಕೊಂಡಗುಳಿಯ ಕೇಶರಾಜನು ವೀರಶೈವ ಗ್ರಂಥಕಾರರಲ್ಲಿ ಅತ್ಯಂತ ಪ್ರಸಿದ್ಧನೂ ಶಿವಾನುಭವಿಯೂ ಆಗಿದ್ದನು. ಅವನ ಸಹವಾಸದ ಪರಿಣಾಮವಾಗಿ ಜೊಮ್ಮಯ್ಯನು ತನ್ನ ಶಿವಾನುಭವದ ಅನುಭವಗಳನ್ನು ವಚನಗಳ ರೂಪಿನಿಂದ ಈ ಕಾಲದಲ್ಲಿ ನುಡಿದಿರಬಹುದು.

ಈ ಕಾಲದಲ್ಲಿ ಜೊಮ್ಮಯ್ಯನು ಅನುಭವದಿಂದಲೂ ನಿಷ್ಠೆಯಿಂದಲೂ ನಾಡಿನಲ್ಲಿ ಅತ್ಯಂತ ಶ್ರೇಷ್ಠಸ್ಥಾನವನ್ನು ಹೊಂದಿದವನಾಗಿದ್ದನು. ಇದನ್ನು ಪೇರ್ಮಾಡಿ ರಾಜನು ತಿಳಿದು ಅವನನ್ನು ತನ್ನಲ್ಲಿ ಬರಮಾಡಿಕೊಂಡು ಅವನಿಗೆ ತಿಂಗಳಿಗೆ ಒಂದು ಸಾವಿರ ಹೊನ್ನುಗಳ ವೇತನವನ್ನು ಗೊತ್ತುಪಡಿಸಿ ಅವನನ್ನು ತನ್ನ ಮಂತ್ರಿಯಾಗಿ ನೇಮಿಸಿಕೊಂಡನು.

ತೆಲುಗು ಜೊಮ್ಮಯ್ಯನು ಮಂತ್ರಿಯಾದ ಬಳಿಕ ಅರಸನ ಆಜ್ಞೆಯನ್ನು ಶಿರಸಾ ವಹಿಸಿ ಕಾರ್ಯ ಮಾಡತೊಡಗಿದನು. ಅರಸನನ್ನು ಅವನು ಎಂದೂ ವಿರೋಧಿಸನು. ಕಾರ್ಯಗಳನ್ನು ಮರೆತು ಎಂದೂ ಕುಳ್ಳಿರನು. ಅರಸನ ವೇಳೆಯಲ್ಲಿರುವನು. ಆದರೆ ಶಿವಭಕ್ತಿಯುಳ್ಳವನಾದ್ದರಿಂದ ತಾನು ಗಳಿಸಿದ್ದನ್ನೆಲ್ಲ ಗುರು ಲಿಂಗ ಜಂಗಮಕ್ಕರ್ಪಿಸಿ ಬಿಡುವನು. ಅವನು ಗುರು ಲಿಂಗ ಜಂಗಮಕ್ಕೆ ಮಾತ್ರ ನಮಸ್ಕರಿಸುವನು. ಅವರನ್ನು ಬಿಟ್ಟು ಯಾರಾರಿಗೂ ನಮಸ್ಕರಿಸನು. ಅವನು ತನ್ನ ರಾಜನನ್ನು ಸಹ ನಮಸ್ಕರಿಸುತ್ತಿದ್ದಿಲ್ಲ. ಆದರೆ ರಾಜನು ಅವನು ಶಿವನ ತೇಜದ ಕಣಿ ಎಂದು ಭಾವಿಸಿ ಅವನನ್ನು ಮನ್ನಿಸುತ್ತಲೇ ಬಂದನು.

ಹೀಗಿರುವಲ್ಲಿ ಒಂದು ದಿನ ಮುಂಜಾವಿನಲ್ಲಿ ಜೊಮ್ಮಯ್ಯನು ಅರಮನೆಗೆ ಬಂದಿರಲಾಗಿ ವಿಷ್ಣುಭಕ್ತನಾದ ಪೆರ್ಮಾಡಿ ರಾಯನು ಮೇಲ್ಮಹಡಿಯಲ್ಲಿ ವಿಷ್ಣು ಪೂಜೆಯಲ್ಲಿ ಮಗ್ನನಾಗಿ ಕುಳಿತಿದ್ದನು. ಕೆಳಗೆ ಒಬ್ಬ ಪುರಾಣಿಕನು ವಿಷ್ಣು ಪುರಾಣವನ್ನು ಹೇಳುತ್ತಾ ಕುಳಿತಿದ್ದನು. ತೆಲುಗು ಜೊಮ್ಮಯ್ಯನು ಅರಮನೆಯನ್ನು ಪ್ರವೇಶಿಸುತ್ತಿರುವಾಗ ಪುರಾಣಿಕನು ಆಕಾಶದ ಹೆಸರು ವಿಷ್ಣುಪದ, ಗಂಗೆಯು ಅದರಲ್ಲಿದ್ದ ಕಾರಣ ವಿಷ್ಣುಪದಿ ಎಂದು ಗಂಗೆಗೆ ಹೆಸರಿದ್ದು ಹೀಗೆ ಹೇಳುವದನ್ನು ಬಿಟ್ಟು ಅದನ್ನು ಮಾರ್ಪಡಿಸಿ ಗಂಗೆಯು ವಿಷ್ಣುವಿನ ಪಾದದಲ್ಲಿ ಹುಟ್ಟಿದಳು, ಎಂದು ಅಬದ್ಧವಾಗಿ ಹೇಳುತ್ತ ಶಿವನನ್ನು ನಿಂದಿಸ ಹತ್ತಿದನು. ಅದನ್ನು ಜೊಮ್ಮಯ್ಯನು ಕೇಳಿ ಕೋಪಗೊಂಡು ತರಹರಿಸದೆ ಪುರಾಣಿಕನನ್ನು ಅಲ್ಲಿಯೇ ಇರಿದು ಬಿಟ್ಟನು.

ಮಹಡಿಯಲ್ಲಿ ಪೂಜೆಗೆ ಕುಳಿತ ಪೇರ್ಮಾಡಿಯು ಪುರಾಣಿಕನ ದನಿಯು ನಿಂತಿದ್ದನ್ನು ಕೇಳಿ ಹೀಗೇಕಾಯಿತೆಂದು ಕೇಳುತ್ತಿರುವಾಗ ಇದಿರಿಗೆ ಇದ್ದ ವಿಷ್ಣು ಪ್ರತಿಮೆಯ ಕಣ್ಣೊಳಗಿಂದ ನೀರು ಒಸರಹತ್ತಿತು. ಅವನ್ನು ನೋಡಿ ಅರಸನು ಭೀತಿಗೊಂಡನು. ಆಗ ಅವನು ಏನೋ ಪ್ರಮಾದವಾಗಿದೆಂದು ಭಾವಿಸಿ ಮಹಡಿಯ ಕೆಳಗಿಳಿದು ನೋಡಲಾಗಿ ಪುರಾಣಿಕನ ಕೈಯ್ಯಲ್ಲಿದ್ದ ಪುರಾಣ ಒಂದೆಸೆಯಾಗಿದೆ, ಅವನ ಮೃತದೇಹ ಬೇರೊಂದೆಸೆಯಾಗಿದೆ, ಇದನ್ನು ನೋಡಿ ಇದು ಜೊಮ್ಮಯ್ಯನ ಕಾರ್ಯವೆಂದು ಅವನಿಗೆ ಅಲ್ಲಿಯವರು ತಿಳಿಸಲು ಅರಸನು ಒಡ್ಡೋಲಗಕ್ಕೆ ಬರಬೇಕೆಂದು ಜೊಮ್ಮಯ್ಯನಿಗೆ ಹೇಳಿಕಳಿಸಿದನು.

ಪೆರ್ಮಾಡಿರಾಯನ ಹೆಂಡತಿಯ ಹೆಸರು ಲಕುಮಾದೇವಿಯು. ಅವಳು ಶಿವಲಿಂಗಾರ್ಚನೆಯಲ್ಲಿ ಆಸಕ್ತಿಯುಳ್ಳವಳು. ಯಾವಾಗಲೂ ಶಿವನನ್ನೇ ಭಜಿಸುವವಳು. ಅವಳು ಮಂತ್ರಿಯಾದ ಜೊಮ್ಮಣ್ಣನಲ್ಲಿದ್ದ ಶಿವಭಕ್ತಿಯನ್ನು ನೋಡಿ ಅವನಿಗೆ ಅತ್ಯಂತ ಒಲಿದವಳಾಗಿ ಅವಳು ಅವನನ್ನು ನೋಡಿ ಸಂತೋಷಪಡುತ್ತಿದ್ದಳು. ಅವಳು ಜೊಮ್ಮಯ್ಯನಿಂದ ಅರಮನೆಯಲ್ಲಿ ಒದಗಿದ ಪ್ರಮಾದವನ್ನು ಅರಿತವಳಾಗಿ ಅವನನ್ನು ಅರಸನು ಕರಿಸಿದ್ದಾನೆಂಬುದನ್ನು ತಿಳಿದು ಅವನನ್ನು ಈ ಆಪತ್ತಿನಿಂದ ಉಳಿಸಬೇಕೆಂದು ಬಯಸಿ, ಜೊಮ್ಮಯ್ಯನು ಅರಸನಿಗೆ ಎಂದೂ ನಮಸ್ಕರಿಸುವದಿಲ್ಲ. ಈ ಕಾಲದಲ್ಲಿ ಅವನು ಅವನಿಗೆ ನಮಸ್ಕರಿಸುವಂತೆ ಮಾಡಿದ್ದಾದರೆ ಅರಸನ ಕೋಪವು ಅಡಗಬಹುದು, ಎಂದು ಭಾವಿಸಿ ಶಿವಭಕ್ತೆಯಾದ ಅವಳು ಓಲಗಕ್ಕೆ ಬಂದು ಅರಸನ ಹಿಂಬದಿಯಲ್ಲಿ ನಿಂತು ತನ್ನ ಪ್ರಾಣಲಿಂಗವನ್ನು ಸಿಂಗರಿಸಿ ಅರಸನರಿಯದಂತೆ ಅವನ ಹಿಂಬದಿಗೆ ಬಂದು ಅದನ್ನೆತ್ತಿ ಹಿಡಿದುಕೊಂಡು ನಿಂತುಕೊಂಡಳು. ಇವಳ ಉದ್ದೇಶವು ಜೊಮ್ಮಯ್ಯನು ಅರಸನೆದುರಿಗೆ ಬಂದಾಗ ತನ್ನಿದಿರಿಗೆ ಆ ಲಿಂಗವನ್ನು ಕಂಡು ಅದಕ್ಕೆ ನಮಸ್ಕರಿಸುವನು. ಹೀಗೆ ನಮಸ್ಕರಿಸಲು ರಾಜನು ತನಗೆಯೇ ನಮಸ್ಕರಿಸಿದನೆಂದು ಭಾವಿಸಿ ಅವನಿಗೆ ಪ್ರೀತನಾಗುವನೆಂದು ಭಾವಿಸಿ ಅವಳು ಈ ಉಪಾಯವನ್ನು ಯೋಜಿಸಿದ್ದಳು.

ಸ್ವಲ್ಪ ಹೊತ್ತಿನಲ್ಲಿ ಜೊಮ್ಮಯ್ಯನು ಓಲಗವನ್ನು ಪ್ರವೇಶಿಸಿ ಅರಸನ ಸನ್ಮುಖದಲ್ಲಿ ನಡೆದುಬರುತ್ತಿರಲು ತನ್ನ ಇದಿರಿಗೆ ಲಕುಮಾದೇವಿಯ ಕೈಯಲ್ಲಿ ತೇಜಃಪುಂಜವಾದ ಲಿಂಗವು ಹೊಳೆಯುತ್ತಿರುವದನ್ನು ಕಂಡು ಅವನಲ್ಲಿ ನಿಜಭಕ್ತಿಯುಂಟಾಯಿತು. ಅದರ ಭರದಲ್ಲಿ ಅವನು ಸಿಂಹಾಸನದೆದುರಿನಲ್ಲಿ ಸಾಷ್ಟಾಂಗವೆರಗಿದನು. ಅರಸನು ಇದನ್ನು ನೋಡಿ ಆಶ್ಚರ್ಯಚಕಿತನಾದನು. ಅಷ್ಟರಲ್ಲಿ ಪ್ರಕಾಶಿಸುತ್ತಿದ್ದ ಆ ಲಿಂಗವು ತಾನು ಭವಿಯ ಹಿಂದೆ ಕನಿಷ್ಟ ಸ್ಥಾನದಲ್ಲೇಕೆ ಉಳಿಯಬೇಕು ಎಂದು ಭಾವಿಸಿತೋ ಏನೋ ಎನ್ನುವಂತೆ ಅದು ಮುಂದುವರಿದು ಗಗನವೇ ತನ್ನ ಆಸನವನ್ನಾಗಿಟ್ಟುಕೊಂಡು ಸಭಾಮಧ್ಯದಲ್ಲಿ ಬಂದು ನಿಂತಿತು. ಅರಸನು ಅದನ್ನು ನೋಡಿ ಮೊದಲು ಬಿಟ್ಟು ಪ್ರತಿಮೆಯ ಕಣ್ಣಿಂದ ನೀರೊಸರಿತು, ಈಗ ಜೊಮ್ಮಯ್ಯನ ಆತ್ಮಶಕ್ತಿಯಿಂದ ಲಿಂಗವು ತನ್ನೆದುರಿಗೆ ಹರಿದುಬಂದು ನಿಂತಿತು. ಅಂತರದಲ್ಲಿ

ಅದು ಪ್ರಕಾಶಿಸುತ್ತ ಇರುವದನ್ನು ರಾಜನು ನೋಡಿ ಕೋಪವಶಗಿತು. ಜೊವ್ಮ್ಮಯ್ಯನು ಮಹಿಮನೆಂದು ತಿಳಿದನು. ಆಮೇಲೆ ಅವನು ಜೊವ್ಮ್ಮಯ್ಯನಿಗೆ – ನೀನು ಪುರಾಣಿಕನನ್ನು ಏಕೆ ಕೊಂದೆ ಎಂದು ಕೇಳಲು ಅವನು— ಪುರಾಣಿಕನು ಗಂಗೆಯ ಉದ್ಭವದ ವಿಷಯವಾಗಿ ಸುಳ್ಳು ಹೇಳಿ ಶಿವನಿಂದೆಯನ್ನು ಮಾಡಿದನು. ನಾನು ದೇವರ ನಿಂದೆಯನ್ನು ಸಹಿಸಲಾರೆನು. ಆದಕ್ಕೋಸ್ಕರ ನಾನು ಹಾಗೆ ಮಾಡಿದೆನೆನ್ನಲು ಅರಸನು— ನೀನನ್ನುವದಕ್ಕೆ ದೃಷ್ಟಾಂತವನ್ನು ತೋರಿಸಿದೆಯಾದರೆ ಮಾತ್ರ ನಾನು ನಿನ್ನನ್ನು ಬಿಡುವೆನು, ಇಲ್ಲದಿದ್ದರೆ ಶಿಕ್ಷಿಸುವೆನು ಎಂದು ಹೇಳಲು— ಅವಕ್ಕೆ ಜೊವ್ಮ್ಮಯ್ಯನು ನೀನು ಈಗ ಪುರಾಣಿಕನ ಶವವನ್ನು ನೋಡು. ಅದು ಪೂರ್ಣವಾಗಿ ಇಷ್ಟರಲ್ಲಿ ಹುಳಿತು ಹೋಗಿದ್ದನ್ನು ನೀನು ಕಾಣುವಿ ಎಂದು ನುಡಿಯಲು ಅರಸನು ಶವದ ಮೇಲಿದ್ದ ಹೊದಿಕೆಯನ್ನು ತೆಗೆದು ನೋಡಲಾಗಿ ಶವದ ಒಳಗೆಲ್ಲ ಹುಳುಗಳ ರಾಶಿಯೇ ತುಂಬಿಕೊಂಡಿತ್ತು. ಅದು ಅತ್ಯಂತ ದುರ್ಗಂಧಮಯವಾಗಿತ್ತು. ಅರಸನು ಅದನ್ನು ನೋಡಿ ಹೇಸಿ ಹಿಂದಿರುಗಿದನು. ಆಗ ಅರಸನು ಜೊವ್ಮ್ಮಯ್ಯನಿಗೆ – ನೀನು ನಿಜವಾದ ಭಕ್ತನು, ಮಹಾಮಹಿಮನು ಎಂದು ನುಡಿಯುತ್ತ ಅವನ ಪಾದಕ್ಕೆರಗಿದನು. ಆಮೇಲೆ ಅವನನ್ನು ಸತ್ಕರಿಸಿ ಆನೆಯ ಮೇಲೇರಿಸಿ ಕಳುಹಿದನು. ಆಗ ಭಕ್ತ ಸಂದೋಹವು ಜೊವ್ಮ್ಮಯ್ಯನ ಸುತ್ತಲೂ ನೆರೆದು ಸ್ತುತಿಸುತ್ತಿರಲು ಅವನು ತನ್ನ ಗೃಹಕ್ಕೆ ಹೋದನು.

ಈ ಮೇರೆಗೆ ಜೊವ್ಮ್ಮಯ್ಯನು ಪೆರ್ಮಾಡಿರಾಯನ ಓಲಗದಲ್ಲಿ ಪ್ರಧಾನಿಯ ಕೆಲಸ ಮಾಡುತ್ತ ಶಿವಪುರದಲ್ಲಿರುತ್ತ ಅಲ್ಲಿಯೇ ಸಾಮರಸ್ಯವನ್ನು ಹೊಂದಿದನು.

ತೆಲುಗು ಜೊವ್ಮ್ಮಯ್ಯನು ಬಸವೇಶ್ವರನಕಿಂತಲೂ ಮೊದಲಿನವನಾದ್ದರಿಂದ ಅವನ ಚರಿತ್ರೆಯು ಮಹತ್ವದ್ದಾಗಿರುತ್ತದೆ. ಅವನು ೧೦೭೬ ರಿಂದ ೧೧೨೬ ರ ವರೆಗೆ ಕರ್ನಾಟಕದಲ್ಲಿ ಅತ್ಯಂತ ವೈಭವದಿಂದ ರಾಜ್ಯವಾಳಿದ ವಿಕ್ರಮಾದಿತ್ಯನ ಕಾಲದಲ್ಲಿದ್ದನು. ಈ ರಾಜನ ಕಾಲದಲ್ಲಿ ತೆಲಗು ಜೊವ್ಮ್ಮಯ್ಯನಂತೆ ಕೆಲವು ವಚನಕಾರರು ಆಗಿಹೋಗಿದ್ದಾರೆ. ಆದ್ದರಿಂದ ವಚನ ಶಾಸ್ತ್ರವು ಬಸವೇಶ್ವರನಕಿಂತಲೂ ಮೊದಲಿನದೆಂದು ತಿಳಿದುಬರುತ್ತದೆ.

ವಿಕ್ರಮಾದಿತ್ಯನ ಆಳಿಕೆಯಲ್ಲಿ ಸುತ್ತಲಿನ ಪ್ರಾಂತಗಳಲ್ಲಿದ್ದ ವಿದ್ವಾಂಸರು ಅವನ ಓಲಗಕ್ಕೆ ಆಗಿಂದಾಗ್ಗೆ ಬಂದು ತಮ್ಮ ಪಾಂಡಿತ್ಯವನ್ನು ಪ್ರಕಟ ಮಾಡುತ್ತ ಇರುವರು. ಅರಸನಾದರೂ ಅವರ ವಿದ್ವತ್ತಿಗೆ ಮೆಚ್ಚಿ ಅವರಿಗೆ ತನ್ನ ಆಡಳಿತೆಯಲ್ಲಿ ತಕ್ಕ ಸ್ಥಾನಗಳನ್ನು ಕೊಡುತ್ತಿದ್ದನೆಂದು ತೋರುತ್ತದೆ. ಆದ್ದರಿಂದಲೇ ಕೇಶಿರಾಜ ಮತ್ತು ತೆಲುಗು ಜೊಮ್ಮಯ್ಯಗಳು ಅವನಲ್ಲಿ ಮಂತ್ರಿಪದಾರೂಢರಾದರು. ತೆಲುಗು ಜೊಮ್ಮಯ್ಯನು ಆಂಧ್ರ ದೇಶದವನು ಆದರೂ ಆಂಧ್ರರು ಕರ್ನಾಟಕದ ವೀರಶೈವ ಸಂಸ್ಕೃತಿಗೆ ಮೆಚ್ಚಿದವರಾಗಿ ಅವರು ಆಗಿಂದಾಗೆ ಇಲ್ಲಿಗೆ ಬಂದು ಶಿವಾನುಭವದ ಶಾಸ್ತ್ರಗಳನ್ನು ತಿಳಿಯಲಿಕ್ಕೆ ಆತುರಪಡುತ್ತಿದ್ದಂತೆ ಕಂಡುಬರುತ್ತದೆ. ಇದರಿಂದ ಆಂಧ್ರ ವಾಙ್ಮಯದಲ್ಲಿ ಅನೇಕ ವೀರಶೈವ ಗ್ರಂಥಗಳಾದವು ಆಂಧ್ರರು ತಮ್ಮ ಭಾಷೆಯಲ್ಲಷ್ಟೇ ಅಲ್ಲ, ಕನ್ನಡದಲ್ಲಿಯೂ ಕೂಡ ಗ್ರಂಥಗಳನ್ನು ರಚಿಸಿದ್ದಾರೆ. ಹಾಗೆಯೇ ತೆಲುಗು ಜೊಮ್ಮಯ್ಯನು ಕನ್ನಡದಲ್ಲಿ ವಚನಗಳನ್ನು ರಚಿಸಿದ್ದಾನೆ.

ವಿಕ್ರಮಾದಿತ್ಯನ ಕಾಲದಲ್ಲಿ ಶಿವೋಪಾಸಕರಿಗೂ ವಿಷ್ಣುವಿನ ಉಪಾಸಕರಿಗೂ ಆಗಿಂದಾಗ್ಗೆ ಜಗಳಗಳೇಳುತ್ತಿದ್ದಂತೆ ತೋರುತ್ತದೆ. ಚಾಲುಕ್ಯರು ಬಹಳ ಕಾಲದ ವರೆಗೆ ವಿಷ್ಣುವಿನ ಉಪಾಸಕರಾಗಿದ್ದು ಅವರು ಶಿವೋಪಾಸಕರಾಗಿದ್ದ ಚೋಳ ರಾಜರ ಮೇಲೆ ಆಗಿಂದಾಗ್ಗೆ ದಂಡೆತ್ತಿ ಹೋಗುತ್ತಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ. ತೆಲುಗು ಜೊಮ್ಮಯ್ಯನ ಚರಿತ್ರೆಯಲ್ಲಿ ಈ ಬಗೆಯ ಒಂದು ಕಲಹದ ವಿವರವು ಉಲ್ಲೇಖವಾಗಿದೆ. ಆದರೆ ಮುಂದೆ ಶಿವಶರಣರು ದೇವರು ಒಬ್ಬನೇ ಇದ್ದಾನೆ ಎಂದು ಸಾರುತ್ತ ಬಂದದ್ದರಿಂದ ಇಂಥ ಕಲಹಗಳು ದೂರಾಗಿರಬೇಕು. ಅವರು ಬ್ರಹ್ಮ ವಿಷ್ಣು ರುದ್ರ ಇವರು ಒಬ್ಬನೇ ದೇವರಿಂದ ಉತ್ಪನ್ನರಾದವರಿದ್ದು ಅವರಿಗೆ ಸಂಬಂಧಿಸಿದ ಕಾರ್ಯಗಳಿಗೆ ಅವರು ಅಧಿದೇವತೆಗಳಾಗಿ ಜಗತ್ತನ್ನು ಪಾಲಿಸುತ್ತಾರೆಂದು ಶಿವಶರಣರು ತಮ್ಮ ಉಕ್ತಿಗಳಲ್ಲಿ ಹೇಳಿದ್ದಾರೆ. ಇದರಿಂದ ಈ ಕಾಲದಲ್ಲಿ ತ್ರಿಮೂರ್ತಿಗಳಲ್ಲಿಯ ಭೇದ-ಭಾವಗಳು ದೂರಾಗಿರಬೇಕು. ಆದರೆ ವಚನ ಶಾಸ್ತ್ರದ ತತ್ವಗಳ ಅಭ್ಯಾಸವು ನಿಂತು ಹೋದದ್ದರಿಂದ ಪುನಃ ತ್ರಿಮೂರ್ತಿಗಳ ಬಗ್ಗೆ ಕಲಹಗಳು ಉಂಟಾಗಿ ವಿಷ್ಣು ಹೆಚ್ಚೋ, ಶಿವನು ಹೆಚ್ಚೋ ಎಂಬ ಬಗ್ಗೆ ವಾದಗಳೇಳುತ್ತಿರಬಹುದು.

ತೆಲುಗು ಜೊಮ್ಮಯ್ಯನು ಮೊದಲು ಬೇಟೆಯಾಡಿ ಜೀವಿಸುವವನಾಗಿದ್ದನು. ಆದರೂ ಅವನು ಶಿವಾನುಭವ ಶಾಸ್ತ್ರದ ನೆಲೆ-ಕಲೆಗಳನ್ನು ತಿಳಿದುಕೊಂಡು ಉಚ್ಚ ಪದವಿಗೇರಿದನು. ಶಿವಶರಣರು ಉಪಜೀವನದ ಹೋರಿಗೆ ಮಹತ್ವ ಕೊಡದೆ ಗುಣ ಕರ್ಮಕ್ಕೆ ಮಹತ್ವ ಕೊಡುವವರಾದ್ದರಿಂದ ತೆಲುಗು ಜೊಮ್ಮಯ್ಯನು ಕೀಳುವೃತ್ತಿಯನ್ನು ಮಾಡುತ್ತಿದ್ದರೂ ಮುಂದೆ ಅವನು ಆ ವೃತ್ತಿಯನ್ನು ಬಿಟ್ಟು ಶಿವಾನುಭವವನ್ನು ಹೊಂದಿ ಶ್ರೇಷ್ಠ ಶಿವಶರಣನೆಂದೆನಿಸಿಕೊಂಡನು. ಇದು ಶಿವಾನುಭವದ ವೈಶಿಷ್ಟ್ಯವಾಗಿರುತ್ತದೆ.

ತೆಲುಗು ಜೊಮ್ಮಯ್ಯನ ಚರಿತ್ರೆಯಲ್ಲಿ ರಾಜನ ಹೆಂಡತಿಯಾದ ಲಕುಮಾದೇವಿಯು ಉಲ್ಲೇಖವಿರುತ್ತದೆ. ವಿಕ್ರಮಾದಿತ್ಯನ ಶಿಲಾಶಾಸನಗಳಲ್ಲಿ ಅವನಿಗೆ ಎಂಟು ಜನ ಹೆಂಡರಿದ್ದು ಅವರಲ್ಲಿ ಲಕ್ಷ್ಮೀದೇವಿಯು ಒಬ್ಬಳಾಗಿದ್ದುದು ತಿಳಿದುಬರುತ್ತದೆ. ಆ ಹೆಂಡಿರು — ಸಾವಳದೇವಿ, ತಾರಾದೇವಿ, ಲಕ್ಷ್ಮೀದೇವಿ, ಜಕ್ಕಲದೇವಿ, ಮಲ್ಲಿಯಮದೇವಿ, ಚಂಡಲದೇವಿ, ಮಾಳಲದೇವಿ ಮತ್ತು ಓಲಜೆಗಬ್ಬೆ ಈ ಪ್ರಕಾರ ಇರುತ್ತಾರೆ. ಇವರಲ್ಲಿ ಲಕ್ಷ್ಮೀದೇವಿಯು ೧೦೮೮ ರಲ್ಲಿ ಕಲ್ಯಾಣದಲ್ಲಿ, ೧೦೯೫ ರಲ್ಲಿ ಧರ್ಮಪುರ ಅಂದರೆ ಈಗಿನ ಡಂಬಳದಲ್ಲಿ, ೧೧೦೯ ರಲ್ಲಿ ನಿಟ್ಟೆಸಿಂಗಿ ಎಂಬಲ್ಲಿ ಬೇರೆ ಬೇರೆ ಕಾಲಗಳಲ್ಲಿ ಅಧಿಪತಿಯಾಗಿ ರಾಜ್ಯಭಾರ ಮಾಡುತ್ತಿದ್ದಳೆಂದು ಶಿಲಾಶಾಸನಗಳಲ್ಲಿ ಉಲ್ಲೇಖಗಳಿವೆ. ಇವಳು 'ಸಿರಿಯರಸಿ' ಎಂತಲೂ ಅವುಗಳಲ್ಲಿ ಕರೆಯಲ್ಪಟ್ಟಿದ್ದಾಳೆ. ಈ ಲಕ್ಷ್ಮೀದೇವಿಯೇ ಜೊಮ್ಮಯ್ಯನ ಚರಿತ್ರೆಯಲ್ಲಿ ಉಲ್ಲೇಖವಾದ ಲಕುಮಾದೇವಿಯಾಗಿರಬಹುದು. ಆದುದರಿಂದ ಲಕುಮಾದೇವಿಯು ಕೇವಲ ಕಾಲ್ಪನಿಕ ಸ್ತ್ರೀಯಳಾಗಿರದೆ, ಒಬ್ಬ ಐತಿಹಾಸಿಕ ಸ್ತ್ರೀಯಳಾಗಿ ತೆಲುಗು ಜೊಮ್ಮಯ್ಯನಿಗೋಸ್ಕರ ಆದರ ಭಾವವನ್ನು ತಾಳಿದವಳಾಗಿದ್ದಳೆಂದೂ ಅವಳು ಲಿಂಗಧಾರಿಯಾಗಿ ವೀರಶೈವ ಮತವನ್ನು ಪುರಸ್ಕರಿಸುತ್ತಿದ್ದಳೆಂದೂ ಈಗಿನ ಚರಿತ್ರೆಯಿಂದ ತಿಳಿದುಬರುತ್ತದೆ.

ಈ ಪ್ರಕಾರ ತೆಲುಗು ಜೊಮ್ಮಯ್ಯನ ಚರಿತ್ರೆಯಲ್ಲಿ ವೀರಶೈವ ಮತಕ್ಕೆ ಸಂಬಂಧಿಸಿದ ಅನೇಕ ಮಹತ್ವದ ಐತಿಹಾಸಿಕ ವಿಷಯಗಳು ಅಡಕವಾಗಿರುತ್ತವೆ. ವಿಕ್ರಮಾದಿತ್ಯನ ಹೆಂಡಿರಲ್ಲಿ ಸಾವಳದೇವಿಯು ಮಂಗಳವಾಡದ ಜೋಗಮರಸನ ಮಗಳಾಗಿದ್ದಳು. ತಾರಾದೇವಿಯು

೧೦೭೭—೭೮ ರಲ್ಲಿ ನರೆಯಂಗಲದಲ್ಲಿಯೂ ಜಕ್ಕಲದೇವಿಯು ಕದಂಬ ರಾಜನ ಮಗಳಾಗಿ ೧೦೯೩ ರಲ್ಲಿ ತಂಗುವಡಿಗೆ ಎಂಬಲ್ಲಿಯೂ ಮಲ್ಲಿಯಮದೇವಿಯು ೧೦೯೩ ರಲ್ಲಿ ಕಿರಿಯಕೆರೆಯೂರು ಎಂಬ ಅಗ್ರಹಾರಕ್ಕೆ ಸಂಬಂಧಿಸಿದ ಭೂಭಾಗವನ್ನೂ ಆಳುತ್ತಿದ್ದರು. ಚಂಡಲದೇವಿಯು ಕರ್ಹಾಡದ ಶಿಲಾಹಾರ ರಾಜನ ಮಗಳಾಗಿಯೂ, ಮಾಳಲದೇವಿಯು ರಾಯಣನೆಂಬ ಕರಣಿಕನ ಮಗಳಾಗಿಯೂ ಇದ್ದರು. ಓಲಜೆಗಬ್ಬೆಯೂ ಕೂಡ ೧೧೧೩ ನೇ ಇಸ್ವಿಯ ಒಂದು ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದ್ದಾಳೆ. ಹೀಗೆ ಈ ರಾಣಿಯರ ಉಲ್ಲೇಖಗಳಿವೆ.

---

## ಶಂಕರದಾಸಿಮಯ್ಯ.

ಶಂಕರದಾಸಿಮಯ್ಯನು ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧನಾಗಿ ವೀರಶೈವಮತದ ಪ್ರಸಾರಕಾರ್ಯ ಮಾಡಿದವರಲ್ಲಿ ಮುಖ್ಯನಾಗಿದ್ದಾನೆ. ಅವನು ಬಸವೇಶ್ವರನಕಿಂತಲೂ ಮೊದಲಿನವನು ಮತ್ತು ದೇವರದಾಸಿಮಯ್ಯನ ಸಮಕಾಲೀನನು. ಅವನು ವಚನಗಳನ್ನೂ ರಚಿಸಿದ್ದಾನೆ. ಆದರೆ ಅವು ನಮಗೆ ಉಪಲಬ್ಧವಾಗಿಲ್ಲ. ಹೆಚ್ಚಿಗೆ ಸಂಶೋಧಿಸಿದಲ್ಲಿ ಅವು ನಮಗೆ ದೊರೆಯಬಹುದು. ಅವನ ವಚನಗಳ ಮುದ್ರಿಕೆಯು 'ನಿಜಗುರು ಶಂಕರದೇವಾ' ಎಂದಿರುತ್ತದೆ. ಅವನ ಹೆಸರು ಗಣಸಹಸ್ರದಲ್ಲಿ ಬಂದಿರುತ್ತದೆ. ಶಿವಶರಣರ ಮಾಲಿಕೆಯಲ್ಲಿ ಅವನ ಹೆಸರು ಯಾವಾಗಲೂ ಬರುವದುಂಟು. ಪುರಾತನ ವೀರಶೈವ ಕವಿಯಾದ ಹರಿಹರನು ಅವನ ವಿಷಯವಾಗಿ ಒಂದು ಭಾವಪೂರ್ಣವಾದ ರಗಳೆಯನ್ನು ಬರೆದಿದ್ದಾನೆ.

ವಿಜಾಪುರ ಜಿಲ್ಲೆಯಲ್ಲಿ ಹುನಗುಂದ ತಾಲೂಕವಿದ್ದು ಇದರ ಆಗ್ನೇಯ ಮೂಲೆಯಲ್ಲಿ ಇಳಕಲ್ಲ ಗ್ರಾಮದಿಂದ ೫–೬ ಮೈಲುಗಳ ಮೇಲೆ ಕಂದಗಲ್ಲು ಎಂಬ ಹೆಸರಿನ ಒಂದು ಗ್ರಾಮವಿದೆ. ಇದರ ಪುರಾತನ ಹೆಸರು ಸ್ಕಂಧಶಿಲೆ ಅಥವಾ ಕಂದಶಿಲೆ ಎಂಬುದಾಗಿತ್ತು. ಈ ಗ್ರಾಮದಲ್ಲಿ ಗೋವಿಂದಭಟ್ಟನೆಂಬ ಬ್ರಾಹ್ಮಣನೂ ಅವನ ಹೆಂಡತಿ ಉಮ್ಮವ್ವೆ ಎಂಬವಳೂ ವಾಸ ಮಾಡುತ್ತಿದ್ದರು. ಕೆಲವು ಗ್ರಂಥಗಳಲ್ಲಿ ಉಮ್ಮವ್ವೆಗೆ ದುಮ್ಮವ್ವೆ ಎಂತಲೂ ಹೆಸರಿದೆ.

ಹೀಗಿರಲು ಇವರ ಮನಸ್ಸಿನಲ್ಲಿ ಕಾಶೀ ವಿಶ್ವೇಶ್ವರನ ದರ್ಶನವನ್ನು ಹೊಂದಬೇಕೆಂಬ ಅಪೇಕ್ಷೆಯು ಉಂಟಾಗಿ ಅದು ಬಹು ದೂರದ ಹಾದಿಯಾದುದರಿಂದ ಅವರು ತಮ್ಮಲ್ಲಿದ್ದ ಅಲ್ಪ ಸ್ವಲ್ಪ ದ್ರವ್ಯವನ್ನು ಅನಾಥರಿಗೆ ದಾನ ಮಾಡಿ ಒಂದು ದಿನ ಮುಂಜಾವಿನಲ್ಲಿ ಕಾಲ್ನಡಿಗೆಯಿಂದ ಕಾಶಿಗೆ ಹೊರಟರು. ಅವರು ಸಂಜೆಯಾಗುವಷ್ಟರಲ್ಲಿ ತಮ್ಮ ಗ್ರಾಮದಿಂದ ಉತ್ತರಕ್ಕೆ ೧೨ ಮೈಲು ದೂರವಿರುವ ನವಿಲಿ ಎಂಬ ಗ್ರಾಮಕ್ಕೆ ಬಂದರು.

ಈ ಗ್ರಾಮವು ಕೃಷ್ಣಾ ನದಿಯ ದಂಡೆಯ ಮೇಲೆ ಇದೆ. ಅಲ್ಲಿ ನದಿಯು ಬಹು ವಿಶಾಲವಾಗಿ ಹರಿಯುತ್ತ ನೋಡಲಿಕ್ಕೆ ಅತ್ಯಂತ ಆಲ್ಹಾದಕರವಾಗಿರುತ್ತದೆ. ಅದರ ದಂಡೆಯ ಮೇಲೆಯೇ ಜಡೆಯ ಶಂಕರನೆಂಬ ಹೆಸರಿನ ಒಂದು ಪುರಾತನ ದೇವಾಲಯವಿದ್ದು ಅವರು ಆ ಸ್ಥಳಕ್ಕೆ ಹೋದ ಕಾಲದಲ್ಲಿ ಅಲ್ಲಿ ಪೂಜಾರ್ಚನಾದಿಗಳು ಬಹು ಸಂಭ್ರಮದಿಂದ ನಡೆದಿದ್ದವು. ಅದನ್ನು ನೋಡಿ ಉಭಯ ದಂಪತಿಗಳು ಕೃಷ್ಣೆಯಲ್ಲಿ ಸ್ನಾನ ಮಾಡಿ ರಂಗಮಂಟಪದಲ್ಲಿ ಬಂದು ಕುಳಿರಲು ಅಲ್ಲಿ ನೆರೆದ ಶಿವಭಕ್ತರ ಸಂದಣಿಯೂ, ಗುಗ್ಗುಳ ಚಂದನದ ಪರಿಮಳದ ಸುವಾಸನೆಯೂ, ಥಳಥಳಿಸಿ ಬೆಳಗುವ ಆರತಿಗಳೂ, ಗೀತ ವಾದ್ಯಗಳೂ ಇವುಗಳನ್ನು ನೋಡಿ ಗೋವಿಂದಭಟ್ಟನ ಮನಸಿನಲ್ಲಿ ಭಕ್ತಿಯ ಭರವು ತುಂಬಿ ಬಂದಿತು. ಅಲ್ಲಿ ಕೆಲವು ವೇಳೆ ಕುಳ್ಳಿರುವಷ್ಟರಲ್ಲಿ ಅವನು ಮನದಲ್ಲಿ—ಇನ್ನೇಕೆ ವಾರಣಾಸಿಯು? ನಾನಿಲ್ಲೇ ಇರುವೆನು. ನಾನಿಲ್ಲೇ ಪರಮಾತ್ಮನನ್ನು ಭಜಿಸುತ್ತ ಅವನ ಸೇವೆಯಲ್ಲಿರುವೆನು, ಎಂಬ ವಿಚಾರವು ಬಂದು ಭಕ್ತಿ ಸುಖದಲ್ಲಿ ಕಣ್ಮುಚ್ಚಿ ಪರಮಾತ್ಮನನ್ನು ನೆನೆಯುತ್ತ—ನನಗೆ ಈ ದಿವ್ಯ ಕ್ಷೇತ್ರವೇ ವಾರಣಾಸಿಯು, ಇಲ್ಲಿ ಹರಿಯುವ ನದಿಯೇ ನನಗೆ ಗಂಗಾ ನದಿಯು, ಎಂದು ನುಡಿಯುತ್ತ ಶಿವನಲ್ಲಿ ಭಕ್ತಿಯನ್ನು ತಾಳಿ—ನಾನು ಇನ್ನು ಮೇಲೆ ದಿನಾಲು ನಮ್ಮೂರಿಂದ ಇಲ್ಲಿಗೆ ಬಂದು ಶಂಕರಲಿಂಗನನ್ನು ಭಜಿಸುವೆನೆಂದು ನಿಶ್ಚಯಿಸಿದನು. ಆಗ ಕಾಶಿಗೆ ಹೋಗುವದನ್ನು ಅವನು ಬಿಟ್ಟುಕೊಟ್ಟು ತನ್ನ ಹೆಂಡತಿಯೊಡನೆ ಮರಳಿ ತನ್ನ ಗ್ರಾಮವಾದ ಕಂದಗಲ್ಲಿಗೆ ಬಂದನು.

ಪೂಜಾರ್ಚನಾದಿಗಳನ್ನು ನೋಡುತ್ತ ಕುಳಿತಲ್ಲಿ ನೋಡುವವರಲ್ಲಿ ಭಕ್ತಿಭಾವವು ತುಂಬಿಬರುತ್ತದೆಂಬುದು ಸಟಿಯಲ್ಲ. ಅದರಿಂದ ಮನಸ್ಸು ಪರಿಶುದ್ಧವಾಗಿ ದುರ್ಗುಣಗಳ ಕಡೆಗೆ ಅದು ಹರಿದುಹೋಗುವದು ನಿಲ್ಲುತ್ತದೆ. ಉರಿಲಿಂಗಪೆದ್ದಿ ಎಂಬ ಶಿವಶರಣನು ಮೊದಲು ಕಳ್ಳತನದಿಂದ ಜೀವಿಸುವವನಾಗಿದ್ದು ಅವನು ಅಕಸ್ಮಾತ್ತಾಗಿ ಉರಿಲಿಂಗದೇವನ ಲಿಂಗ ಪೂಜಾದಿಕಾರ್ಯಗಳನ್ನು ನೋಡಲಾಗಿ ಅವನಲ್ಲಿ ಭಕ್ತಿಭಾವವು ಉಂಟಾಗಿ ತನ್ನ ಮೊದಲಿನ ದುರ್ವ್ಯಾಪಾರಗಳನ್ನು ಬಿಟ್ಟುಕೊಟ್ಟು ಅವನನ್ನು ತನ್ನ ಗುರುವನ್ನಾಗಿ ಮಾಡಿಕೊಂಡು ಮುಂದೆ ಘನವಿದ್ವಾಂಸನಾದನು. ಅನೇಕರು ದೂರದೇಶಗಳಲ್ಲಿರುವ ದಿವ್ಯಕ್ಷೇತ್ರಗಳ ವರ್ಣನೆಗಳನ್ನು ಕೇಳಿ ಅಲ್ಲಿಗೆ ಕಷ್ಟಪಟ್ಟು ಹೋಗುವದುಂಟು. ಆದರೆ ತಮ್ಮ ನಾಡಿನಲ್ಲಿಯೇ ಸೃಷ್ಟಿ ಸೌಂದರ್ಯದಿಂದ ಕೂಡಿದ ಬಹು ಸುಂದರವಾದ ಪ್ರದೇಶಗಳಲ್ಲಿ ಪವಿತ್ರತರವಾದ ಅನೇಕ ದೇವಾಲಯಗಳಿದ್ದು ಅವುಗಳನ್ನು ಸಂದರ್ಶಿಸಿ ಆನಂದ ಪಡಬಹುದಾಗಿದೆ.

ಗೋವಿಂದಭಟ್ಟನು ತನ್ನ ಗ್ರಾಮಕ್ಕೆ ತಿರುಗಿಬಂದ ಬಳಿಕ ದಿನಾಲು ನವಿಲೆಗೆ ೧೨ ಮೈಲು ನಡೆದುಹೋಗಿ ಅಲ್ಲಿ ತನ್ನ ಪೂಜಾದಿ ಕಾರ್ಯಗಳನ್ನು ತೀರಿಸಿಕೊಂಡು ತಿರುಗಿ ತನ್ನ ಗ್ರಾಮಕ್ಕೆ ಬರುವನು. ಅವನು ಹೋಗುವಲ್ಲಿ ಮಳೆ ಗಾಳಿ ಶೀತ ಉಷ್ಣ ಎನ್ನದೆ ದೇವರನ್ನು ಓಲೈಸಿ ಬರುವನು. ಪರಮಾತ್ಮನು ಅವನು ಶ್ರಮಪಡುವದನ್ನು ನೋಡಿ, ಒಂದು ದಿವಸ ಅವನ ಸ್ವಪ್ನದಲ್ಲಿ ಬಂದು ಅವನಿಗೆ—ನೀನು ಹೀಗೆ ದಾರಿ ನಡೆಯುತ್ತ ಬಳಲಬೇಡ, ನೀನು ನವಿಲೆಗೆ ಬಂದು ಅಲ್ಲಿಯೇ ಇರು, ನಿನಗೆ ಉಪದೇಶವನ್ನು ಮಾಡುವೆನೆಂದು ಹೇಳಲು, ಗೋವಿಂದಭಟ್ಟನು ಆನಂದಬಟ್ಟು ತನ್ನ ಹೆಂಡತಿಯೊಡನೆ ಅಲ್ಲಿಗೆ ಬಂದು ವಾಸಮಾಡ ಹತ್ತಿದನು. ಅಲ್ಲಿದ್ದು ಅವನು ದಿನಾಲು ಜಡೆಯಶಂಕರನ ದೇವಾಲಯಕ್ಕೆ ಬಂದು ದೇವರನ್ನು ಅರ್ಚಿಸುತ್ತ ಅಚ್ಚ ಶಿವಸುಖದಲ್ಲಿರಹತ್ತಿದನು.

ಹೀಗೆ ಶಂಕರದಾಸಿಮಯ್ಯನು ಅಲ್ಲಿ ಶಿವನ ಸೇವೆ ಮಾಡುತ್ತ ಇರುವಲ್ಲಿ ಒಂದು ದಿನ ಪರಮಾತ್ಮನು ಅವನ ಕನಸಿನಲ್ಲಿ ಬಂದು, ಗೋವಿಂದಭಟ್ಟನೇ—ನಾನು ನಿನಗೆ ಪ್ರೀತನಾದೆನು. ನಾಳೆ ನಿನಗೆ ಉಪದೇಶವನ್ನು ಮಾಡುವೆನೆಂದು ನುಡಿಯಲು, ಗೋವಿಂದಭಟ್ಟನು ಆನಂದ ಭರಿತನಾಗಿ ಮರುದಿನ ಉದಯದಲೆದ್ದು ನಿರ್ಮಲ ಸ್ನಾನ ಮಾಡಿ

ಧವಳ ವಸ್ತ್ರವನುಟ್ಟು ಕಡುನಿಷ್ಠೆಯಿಂದ ತನ್ನ ಹೆಂಡತಿಯೊಡನೆ ಜಡೆಯ ಶಂಕರನಿದಿರಿಗೆ ಬಂದುನಿಂತನು. ಆಗ ಶಂಕರನು ಜಂಗಮವೇಷದಿಂದ ಅವನಿಗೆ ವೈದೋರಿ ಅವನಿಗೆ ಇಷ್ಟಲಿಂಗೋಪದೇಶ ಮಾಡಿ ಲಿಂಗದ ನೆಲೆಕಲೆಗಳನ್ನು ತಿಳಿಸಿದನು. ಆಮೇಲೆ ಗೋವಿಂದಭಟ್ಟನು ತನ್ನ ಹೆಂಡತಿಗೂ ದೀಕ್ಷೆಯನ್ನಿತ್ತನು. ಹೀಗೆ ದೀಕ್ಷೆಯನ್ನು ಹೊಂದಿದ ಬಳಿಕ ಅವರು ತಮಗಿರುವ ನಾಮಗಳು ಬೇಡ, ಬೇರೆ ನಾಮಗಳನ್ನು ಕೊಡಬೇಕೆಂದು ಪರಮಾತ್ಮನಿಗೆ ಹೇಳಲಾಗಿ, ಅವನು ಗೋವಿಂದಭಟ್ಟನಿಗೆ 'ಶಂಕರದಾಸಿಮಯ್ಯ'ನೆಂತಲೂ ಅವನ ಹೆಂಡತಿಗೆ 'ಶಿವದಾಸಿ' ಎಂತಲೂ ಹೆಸರನ್ನಿತ್ತು, ಇನ್ನುಮೇಲೆ ನೀವು ಹೊಲಿಗೆಯ ಕಾಯಕವನ್ನು ಮಾಡಿಕೊಂಡಿರಬೇಕೆಂದು ಬೋಧಿಸಿ ಶಿವಲಿಂಗದಲ್ಲಿ ಅಂತರ್ಧಾನನಾದನು.

ಶಂಕರದಾಸಿಮಯ್ಯನು ಹೀಗೆ ದೀಕ್ಷೆಯನ್ನು ಹೊಂದಿದ ಬಳಿಕ ನವಿಲೆಯಲ್ಲಿಯೇ ಹೊಲಿಗೆಯ ಕಾಯಕವನ್ನು ಮಾಡುತ್ತ ಹಚ್ಚಡ ಕಾದಿಗಳನ್ನು ಹೊಲಿಯುತ್ತ ಗುರುಲಿಂಗ ಜಂಗಮ ದಾಸೋಹ ಕಾರ್ಯಗಳಲ್ಲಿ ನಿರತನಾದನು. ನವಿಲೆಯು ಇದ್ದ ಈ ಪ್ರದೇಶದಲ್ಲಿ ಈ ಕಾಲದಲ್ಲಿ ಅನೇಕ ಧಾರ್ಮಿಕ ಚಟುವಟಿಕೆಗಳು ನಡೆದಿದ್ದವೆಂದು ತೋರುತ್ತಿದೆ. ಐಹೊಳೆ ಪಟ್ಟದಕಲ್ಲುಗಳಿದ್ದ ಭೂಪ್ರದೇಶದಲ್ಲಿ ಅನೇಕ ಬಗೆಯ ಶೈವ ವೈಷ್ಣವ ಸಾಂಪ್ರದಾಯಿಕರೂ ಸಿದ್ಧರೂ ವಾಸವಾಗಿದ್ದರು. ಇದು ನವಿಲೆಯಿಂದ ೪೦—೫೦ ಮೈಲುಗಳ ಮೇಲಿದೆ. ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಸಂಗಮಕ್ಷೇತ್ರವು ಇಲ್ಲಿಂದ ೧೨ ಮೈಲು ಮಾತ್ರ ದೂರವಿರುತ್ತದೆ. ಇಲ್ಲಿಗೆ ಅನೇಕ ಶಿವಸಾಂಪ್ರದಾಯಿಕರು ಆಗಿಂದಾಗ್ಗೆ ಬರುವರು. ಅಲ್ಲದೆ ಶಿವಶರಣನಾದ ದೇವರದಾಸಿಮಯ್ಯನು ಚಾಲುಕ್ಯ ರಾಜನಾದ ಜಯಸಿಂಹನ ರಾಜಧಾನಿಯಾದ ಪೊಟ್ಟಲಕೆರೆಯಲ್ಲಿ ತನ್ನ ಪೊವಾಡಗಳನ್ನು ನಡಿಸಿ ಮರಳಿ ಮುದನೂರಿಗೆ ಬಂದು ಶಿವಾನುಭವ ಕಾರ್ಯನಿರತನಾಗಿ ತವನಿಧಿಯನ್ನು ಪಡೆದವನಾಗಿ ಪ್ರಸಿದ್ಧನಾಗಿದ್ದನು. ಈ ಮುದನೂರು ನವಿಲೆಯಿಂದ ೪೦ ಮೈಲುಗಳ ಮೇಲೆ ಇದೆ. ಶಂಕರದಾಸಿಮಯ್ಯನು ಈ ಎಲ್ಲ ಭಾಗಗಳ ಮಧ್ಯಸ್ಥಾನದಲ್ಲಿದ್ದುಕೊಂಡು ಲಿಂಗಾನುಸಂಧಾನದಲ್ಲಿರುವಾಗ ಬಹುಜನ ಶಿವಯೋಗಿಗಳು ಅವನನ್ನು ಕಾಣುತ್ತಿರಬಹುದು. ಮತ್ತು ಅವರೊಡನೆ ಅವನು ಶಿವಾನುಭವಗೋಷ್ಠಿಗಳನ್ನು ನಡಿಸುತ್ತಿರಬಹುದು. ಇದರಿಂದ ಅವನ ಖ್ಯಾತಿಯು ನಾಡಿನಲ್ಲಿ ಹೆಚ್ಚುತ್ತ ಹೋಗಲು

ಇತರ ಸಾಂಪ್ರದಾಯಿಗಳೂ ಕೂಡ ಅವನಲ್ಲಿಗೆ ಬಂದು ಅನೇಕ ಬಗೆಯ ವಾದಗಳನ್ನು ನಡಿಸುತ್ತಿದ್ದ ಹಾಗೆ ತೋರುತ್ತದೆ. ಹೀಗೆ ಶಂಕರದಾಸಿ ಮಯ್ಯನು ಅಲ್ಲಿ ಕೆಲವು ಕಾಲ ಕಳೆದನು.

ಹೀಗಿರಲು ಒಂದು ದಿವಸ ಅವನು ಶಿವಯೋಗ ನಿದ್ರೆಯಲ್ಲಿರು ವಾಗ ಶಂಕರನು ಅವನನ್ನು ಸ್ವಪ್ನದಲ್ಲಿ ಕಂಡು— ನಾಳೆ ನಿನಗೆ ಒಂದು ವರವನ್ನು ಕೊಡವೆನೆಂದು ಹೇಳಿದನು. ಅದಕ್ಕೆ ಶಂಕರದಾಸಿಮಯ್ಯನು ಆನಂದಪಟ್ಟು ವರಕೊಡುವದಾದರೆ ಕ್ಷುದ್ರದೇವತೆಗಳನ್ನು ಭಜಿಸುವ ಪರಸಮಯಿಗಳು ಬಹಳ ಹೆಚ್ಚಿದ್ದಾರೆ, ಅವರನ್ನು ಧೂಳಿಪಟಮಾಡುವ ಸಾಮರ್ಥ್ಯವನ್ನು ದಯಪಾಲಿಸಬೇಕೆಂದು ಬೇಡಿಕೊಂಡನು.

ಮರುದಿನ ಶಂಕರದಾಸಿಮಯ್ಯನು ದೇವಾಲಯದಲ್ಲಿ ಶಂಕರನನ್ನು ಜಪಿಸುತ್ತ ಸಮಾಧಿಸ್ಥನಾಗಿ ಕುಳಿತಿರಲು ಲಿಂಗಮಧ್ಯದಲ್ಲಿ ಶಿವನು ಪ್ರತ್ಯಕ್ಷ ನಾಗಿ ಹೊರಗೆ ಬಂದು ತನ್ನ ಹಣೆಯನ್ನು ಅವನ ಹಣೆಗೆ ಹಚ್ಚಿ ಉಜ್ಜಲು ಅಲ್ಲಿ ಅಗ್ನಿಯನ್ನು ಹೊರಚೆಲ್ಲುವ ಒಂದು ಹೊಸ ನೇತ್ರವು ಉದಯ ವಾಯಿತು. ಆಗ ಶಂಕರನು ಅವನಿಗೆ ಬೋಧಿಸಿದ್ದೇನಂದರೆ— ನೀನು ಈ ನೇತ್ರವನ್ನು ನಿಷ್ಕಾರಣವಾಗಿ ಯಾರ ಮೇಲೂ ಉಪಯೋಗಿಸಬೇಡ. ನಿನಗೆ ಎದುರು ವಾದಿಸುವವರು ವಿರೋಧಿಸಿದಲ್ಲಿ ಮಾತ್ರ ಇದರ ಮೇಲಿನ ಆಚ್ಛಾದನವನ್ನು ತೆಗೆದು ಅದರ ಉಪಯೋಗವನ್ನು ಮಾಡು ಎಂದು ಹೇಳಿದನು. ಶಂಕರದಾಸಿಮಯ್ಯನು ಹಾಗೆಯೇ ಆಗಲಿ ಎಂದು ಒಪ್ಪಿ— ನೀನು ನನ್ನ ಸೇವೆ ಸಹಾಯಕ್ಕೋಸ್ಕರ ಒಬ್ಬ ಗಣಾಧೀಶ್ವರನನ್ನು ದಯಪಾ ಲಿಸಬೇಕೆಂದು ಬೇಡಿಕೊಳ್ಳಲು ಜಡೆಯ ಶಂಕರನು ವಕ್ತ್ರಪಾದ ಗಣೇಶ್ವರ ನೆಂಬುವನನ್ನು ನಿಯಮಿಸಿ ಲಿಂಗದಲ್ಲಿ ಅಡಗಿದನು.

ಹಣೆಗಣ್ಣು ಎಂಬುದು ಜ್ಞಾನನೇತ್ರವೆಂದೆನಿಸಿಕೊಳ್ಳುತ್ತದೆ. ವಿಗಿ ಲಾದ ಬುದ್ಧಿ ಸಾಮರ್ಥ್ಯವುಳ್ಳವನಲ್ಲಿ ಮಾತ್ರ ಅದು ತೋರುತ್ತದೆಯೇ ಹೊರ್ತು ಇತರರಲ್ಲಿ ಅದು ತೋರಲಾರದು. ಈ ಪ್ರಕಾರ ಶಂಕರ ದಾಸಿಮಯ್ಯನು ಶಿವಜ್ಞಾನವನ್ನು ಹೊಂದಿ ಅಲೌಕಿಕ ಸಾಮರ್ಥ್ಯವನ್ನು ಪಡೆದವನಾದ್ದರಿಂದ ಇತರ ಹೀನ ದೇವತೆಗಳು ಅವನ ಸಲುವಾಗಿ ಭೀತಿಯನ್ನು ತಾಳಿ ಅವನನ್ನು ಓಲೈಸಹತ್ತಿದವು. ಮಸಣಮ್ಮನು ಅವನ ಮನೆಯಲ್ಲಿ ಕಸವನ್ನಡುಗುವಳು. ಕಾಳರಾತ್ರಿಯು ಅವನ

ಮರದ ಸುತ್ತಲೂ ಅವನನ್ನು ಕಾಯುವಳು. ಭೈರವನು ಸೌದೆಯನ್ನು ಹೊತ್ತುತರುವನು ಬ್ರಾಹ್ಮಿಯು ಅವನ ತಾಂಬೂಲ ಪೆಟ್ಟಿಗೆಯನ್ನೂ ಬ್ರಹ್ಮರಾಕ್ಷಸನು ವಿಭೂತಿ ಕರಡಿಗೆಯನ್ನೂ ಹೊತ್ತು ಸೇವೆ ಮಾಡು ವರು. ಈ ಪ್ರಕಾರ ಶಂಕರದಾಸಿಮಯ್ಯನು ನವಿಲೆಯಲ್ಲಿ ವಾಸಮಾಡುತ್ತ ಎಲ್ಲ ಕಡೆಗೂ ಪ್ರಸಿದ್ಧನಾದನು. ಅವನ ಶಿಷ್ಯನಾದ ವಕ್ರಪಾದ ಗಣೇಶ್ವರನು ಶಿವಜ್ಞಾನಿಯಾಗಿ ಸದಾಕಾಲ ಅವನನ್ನು ಓಲೈಸುವನು. ಪರವಾದಿಗಳ ಕೂಡ ವಾದವಿವಾದಗಳು ನಡೆದಾಗ, ಅವನು ಸಹ ಅವರೊಡನೆ ವಾದಿಸಿ ಅವರನ್ನು ಸೋಲಿಸುವಷ್ಟು ಬುದ್ಧಿ ಸಾಮರ್ಥ್ಯವನ್ನು ಹೊಂದಿದವನಾಗಿದ್ದನು. ತನ್ನ ಗುರುವು ಹಚ್ಚಡಗಳನ್ನೂ ಕೌದಿಗಳನ್ನೂ ಹೊಲಿಯುತ್ತ ಕಾಯಕವನ್ನು ಮಾಡುತ್ತಿರುವಾಗ ಅವನು ಭಕ್ತರಲ್ಲಿ ಹೋಗಿ ಅವರು ಕೊಟ್ಟುದನ್ನು ತಂದು ಗುರುಲಿಂಗಜಂಗಮ ದಾಸೋಹದಲ್ಲಿ ತತ್ಪರನಾಗಿರುವನು. ಹೀಗೆ ಗುರುಶಿಷ್ಯರೀರ್ವರು ನವಿಲೆಯಲ್ಲಿ ಕೆಲವು ಕಾಲ ಕಳೆದರು.

ಹೀಗಿರಲು ಒಂದು ದಿವಸ ವಕ್ರಪಾದನು ಎಂದಿನಂತೆ ಒಬ್ಬ ಭಕ್ತನ ಮನೆಗೆ ಕೋರಾನ್ನಕ್ಕೆ ಹೋಗಿರಲು ಆ ಭಕ್ತನು—ನನ್ನಲ್ಲಿ ಜೋಳ ಎಲ್ಲ ಎಂದು ಅನ್ನುವದರ ಬದಲು, ಶಂಕರ ಗಂಡ ಘನವಾಗಿದೆ ಎಂದರೆ ಜೋಳ ನನ್ನಲ್ಲಿಲ್ಲ ಎಂಬ ಭಾವದಿಂದ ನುಡಿಯಲು, ವಕ್ರಪಾದನು ಹಾಗೆಯೇ ಶಂಕರದಾಸಿಮಯ್ಯನ ಕಡೆಗೆ ಹೋಗಿ ಹಾಗೆ ಅವನು ಅಂದದ್ದನ್ನು ತಿಳಿಸಿದನು. ಅದಕ್ಕೆ ಶಂಕರದಾಸಿಮಯ್ಯನು— ಜೋಳಕ್ಕೆ ಶಂಕರ ಗಂಡನೆಂಬ ಹೆಸರಿದ್ದುದು ನನಗೆ ಈವರೆಗೂ ಗೊತ್ತಿರಲಿಲ್ಲ. ಆದರೆ ಶಂಕರನ ಹೆಸರಿದ್ದ ಈ ಧಾನ್ಯವನ್ನು ನಾನು ಇನ್ನುಮುಂದೆ ಮುಟ್ಟಲಾರೆನು ಎಂದು ನಿಶ್ಚಯಿಸಿ ಅಂದಿನಿಂದ ಅವನು ಅದನ್ನು ಬಿಟ್ಟುಕೊಟ್ಟು ಗುಲುಗುಂಜಿಗಳ ಸಾರವನ್ನು ತೆಗೆದು ಅದರಲ್ಲಿ ಲೋಳಸರದ ಪಳಕುಗಳನ್ನು ಹಾಕಿ ಸುಣ್ಣವನ್ನು ಕಲಿಸಿ ಲಿಂಗಕ್ಕೆ ಸಮರ್ಪಿಸಿ ಅದೇ ಪ್ರಸಾದವೆಂದು ಭುಂಜಿಸ ತೊಡಗಿದನು. ಅಂದರೆ ಅವನು ಬಾಹ್ಯ ಸುಖಭೋಗಗಳನ್ನು ತೊರೆದು ಕೇವಲ ಬಡವನಂತೆ ಇರಲಿಕ್ಕೆ ಹತ್ತಿದನು. ಶಿವಶರಣರಿಗೆ ಬಾಹ್ಯ ಸುಖೋಪಭೋಗಗಳು ರುಚಿಸಲಾರವು. ಅವರಿಗೆ ಪ್ರಸಾದ ಸೇವನೆಯೇ ಅಧಿಕವಾದದ್ದು. ಅದು ಯಾವುದಿದ್ದರೂ ಅದನ್ನು ಅವರು ಸೇವಿಸುವರು..

ಹೀಗೆ ಸೇವಿಸಿದ್ದೇ ಅವರ ಮನಸ್ಸಿಗೂ ಶರೀರಕ್ಕೂ ಹಿತಕರವಾಗ ಪರಿಣಮಿಸುತ್ತದೆ.

ಹೀಗೆ ಶಂಕರದಾಸಿಮಯ್ಯನು ತನ್ನ ಶಿವಾನುಭವದಲ್ಲಿ ನಿರತನಾಗಿ ಅದನ್ನು ತನ್ನ ನಡೆನುಡಿಗಳಲ್ಲಿಟ್ಟುಕೊಂಡು ಆಚರಿಸುತ್ತ ಕೆಲವುಕಾಲ ನವಿಲೆಯಲ್ಲಿರುವಾಗ ಅವನು ತನ್ನ ವಚನಗಳನ್ನು ರಚಿಸಿರಬಹುದೆಂದು ತೋರುತ್ತದೆ. ಆದರೆ ಶಿವಶರಣರು ಕೇವಲ ಆತ್ಮೋನ್ನತಿಯನ್ನು ಅಪೇಕ್ಷಿಸುತ್ತ ಏಕಾಂತದಲ್ಲಿರುವವರಲ್ಲ. ಪರರ ಉನ್ನತಿಯನ್ನು ಮಾಡುವದನ್ನು ಅವರು ಯಾವಾಗಲೂ ಬಗೆಯುತ್ತಾರೆ. ಆದುದರಿಂದ ಶಂಕರದಾಸಿಮಯ್ಯನು ಧರ್ಮೋದ್ಧಾರ ಕಾರ್ಯಗಳನ್ನು ಜಗತ್ತಿನಲ್ಲಿ ನಿರ್ವಹಿಸಬೇಕೆಂದು ಅಪೇಕ್ಷೆಯುಳ್ಳವನಾಗಿ ಅನೇಕ ದೇಶಗಳಲ್ಲಿ ಸಂಚರಿಸಲು ಉದ್ಯುಕ್ತನಾದನು. ಆದ್ದರಿಂದ ಅವನು ತನ್ನ ಹೆಂಡತಿಯಾದ ಶಿವದಾಸಿಯನ್ನೂ ತನ್ನ ಶಿಷ್ಯನಾದ ವಕ್ರಪಾದ ಗಣೇಶ್ವರನನ್ನೂ ಕೆಲವು ಭಕ್ತರನ್ನೂ ಕೂಡಿಕೊಂಡು ಈ ಕಾಲದಲ್ಲಿ ಅತ್ಯಂತ ಪ್ರಸಿದ್ಧಿಗೆ ಬಂದ ಶಿವಶರಣ ದೇವರದಾಸಿಮಯ್ಯನನ್ನು ಕಾಣಬೇಕೆಂದು ಅವನಿದ್ದ ಗ್ರಾಮವಾದ ಮುದುನೂರಿಗೆ ಬಂದನು.

ಅವನು ಮುದನೂರನ್ನು ಪ್ರವೇಶಿಸುವಾಗ ದೂರದೂರದ ದೇಶದ ಜನರು ದೇವದಾಸಿಮಯ್ಯನಲ್ಲಿಗೆ ಬಂದು ಗ್ರಾಮದಲ್ಲಿ ಕಿಕ್ಕಿರಿದಿದ್ದರು. ದಾಸಿಮಯ್ಯನು ತವನಿಧಿಯನ್ನು ಪಡೆದವನಾದದ್ದರಿಂದ ಅವರು ವೈಭವದೊಡನೆ ಅವನ ಗ್ರಾಮದಲ್ಲಿದ್ದುಕೊಂಡು ಶಿವಾನುಭವ ಸದ್ಗೋಷ್ಠಿಯಲ್ಲಿರುವದನ್ನು ಕಂಡನು. ಶಂಕರದಾಸಿಮಯ್ಯನು ಅದನ್ನು ಕಂಡು ಅತ್ಯಾನಂದಭರಿತನಾಗಿ ಅವರನ್ನು ನೋಡುತ್ತ ರಾಮನಾಥಾಲಯದಲ್ಲಿ ಬಂದಿಳಿದನು. ದೇವರದಾಸಿಮಯ್ಯನು ಅವನು ಬಂದದ್ದನ್ನು ತಿಳಿದು ಅವನನ್ನು ಕಂಡು ಸತ್ಕರಿಸಿ ಅವನೊಡನೆ ಕೆಲವು ಕಾಲ ಶಿವಕಥಾಗೋಷ್ಠಿಯಲ್ಲಿ ಕಳೆದನು. ಆಗ ಶಿವದಾಸಿಯು ವಕ್ರಪಾದನಿಗೆ— ನೀನು ಧಾನ್ಯದ ಭಿಕ್ಷೆಗೋಸ್ಕರ ಪಟ್ಟಣದಲ್ಲಿ ಹೋಗು, ನಮ್ಮ ಭಕ್ತರೆಲ್ಲರೂ ಆಯಾಸದಿಂದ ಬಳಲಿದ್ದಾರೆ ಎಂದು ಹೇಳಿದಳು. ಅದನ್ನು ದೇವರದಾಸಿಮಯ್ಯನು ಕೇಳಿ— ನೀವು ನಮ್ಮ ಊರಲ್ಲಿರುವ ವರೆಗೆ ಧಾನ್ಯವನ್ನು ಬೇಡಿತರುವ ಪ್ರಯಾಸವನ್ನು ಮಾಡಬೇಡಿರಿ. ನಾನು ಬಂಡಿಯಲ್ಲಿ ನಿಮಗೆ ಬೇಕಾ

ದಷ್ಟು ನೆಲ್ಲನ್ನು ಹೇರಿಸಿ ಕಳಿಸುವೆನು ಎಂದು ಬಿಂಕದಿಂದ ನುಡಿದನು. ಶಂಕರದಾಸಿಮಯ್ಯನು ಅದನ್ನು ಕೇಳಿ ಅವನಲ್ಲಿ ಅಹಂಕಾರವು ಅಂಕು ರಿಸಿದೆಂಬುದನ್ನು ಕೂಡಲೆ ತಿಳಿದವನಾಗಿ ನಸುಗೋಪದಿಂದ ಅಂದದ್ದೇ ನೆಂದರೆ— ಅಹುದು, ನಾವು ಬಡವರು. ನಮಗೆ ನೆಲ್ಲೆಲ್ಲಿಂದ ಬರಬೇಕು? ಶಿವನು ಭಿಕ್ಷಾಪಾತ್ರೆಯನ್ನು ಹಿಡಿದು ತಿರಿದಾಡುವವನು. ಅಂಥವನ ಭಕ್ತರಾದ ನಮಗೆ ಸಿರಿ ಎಂಬುದೆಲ್ಲಿ? ಎಲೆ ದಾಸ, ನೀನಿದ್ದುಳ್ಳವ. ನೀನು ಕೊಡುವದಾದರೆ ನಾವು ಬೇಡೆನ್ನಬಹುದೇ? ಎಂದು ವ್ಯಂಗ್ಯೋ ಕ್ತಿಯನ್ನಾಡಿದನು. ದೇವರದಾಸಿಮಯ್ಯನು ಅದನ್ನು ಕೇಳಿ ನಾಚಿಕೊಂಡು ಜಗ್ಗನೆ ಇಳಿದು ಮನೆಗೆ ಬರುವವನಾದನು.

ದುಗ್ಗಳೆಯು ತನ್ನ ಗಂಡನು ಮ್ಲಾನಮುಖನಾಗಿ ಮನೆಗೆ ಬಂದ ದ್ದನ್ನು ನೋಡಿ, ಹೀಗೇಕಾಯಿತೆಂದು ಕೇಳಲು ದೇವರದಾಸಿಮಯ್ಯನು ನಡೆದ ಸಂಗತಿಗಳನ್ನೆಲ್ಲ ಅವಳಿಗೆ ಹೇಳಿದನು. ಸಾಧ್ವಿಯಾದ ಅವಳು— ಚಂದ್ರನಿಗೆ ಶೈತ್ಯೋಪಚಾರ ಮಾಡುವವನಂತೆ ನೀವು ಮೃಡಭಕ್ತರಿಗೆ ಧಾನ್ಯ ವನ್ನು ಕೊಡಹೋಗುವದುಚಿತವೇ? ಶಿವಪೂಜಕರು ಎಂದಾದರೂ ಬೇಡಿ ಹೊಟ್ಟೆ ಹೊರೆದುಕೊಳ್ಳುವವರೇ? ಎಂದು ದುಗ್ಗಳೆಯು ಪತಿಗೆ ಹೇಳುವ ಸಮಯದಲ್ಲಿ ವಕ್ರಪಾದ ಮುನಿಯು ಅಲ್ಲಿಗೆ ಬಂದು ಧಾನ್ಯವನ್ನು ಬೇಡಿದನು. ಆಗ ಅವರು ಒಳಗೆ ಹೋಗಿ ನೋಡುತ್ತಾರೆಯೇ ತವನಿಧಿಯು ಬಯಲಾಗಿದ್ದದ್ದನ್ನು ಕಂಡರು. ಅವರು ಹಾಗಾದದ್ದನ್ನು ವಕ್ರಪಾದ ನಿಗೆ ಹೇಳಲು ಅವನು ಮರಮರನೆ ಮರುಗಿ— ಶಿವಶಿವಾ, ಭಕ್ತಾಗ್ರ ಗಣ್ಯರಾದ ನೀವು ಶಿವಶರಣರಿಗೆ ಹಾಗೆ ನುಡಿಯಬಹುದೇ? ಅಹಂ ಕಾರದಿಂದ ಹಿಂದೆ ಯಾರಯಾರ ಗತಿಯು ಏನೇನಾಯಿತೆಂಬುದು ನಿಮಗೆ ಗೊತ್ತಿಲ್ಲವೇ? ಎಂದು ನುಡಿದನು. ಆಗ ದೇವರದಾಸಿಮ ಯ್ಯನು ಮನಸ್ಸು ನೊಂದವನಾಗಿ— ನಾನು ಅರಿಯದೆ ವ್ಯಾಮರೆದು ಹಾಗೆ ಮಾತಾಡಿದೆನು. ನನ್ನಿಂದ ತಪ್ಪಾಯಿತು ಎಂದು ಅಂದು ಅವನೂ ಅವನ ಹೆಂಡತಿಯೂ ಶಂಕರದಾಸಿಮಯ್ಯನಿದ್ದಲ್ಲಿಗೆ ಹೋಗಿ ಅವನ ಮುಂದೆ ಅಡ್ಡಬಿದ್ದು— ಕರುಣಾನಿಧಿಯೇ, ನಿಮ್ಮ ಪಾದದ ಗುರುತನ್ನು ನಾವು ಅರಿಯದೆ ನುಡಿದೆವು. ನಮ್ಮನ್ನು ದಯಮಾಡಿ ಕ್ಷಮಿಸಬೇಕು ಎಂದು ಬೇಡಿಕೊಂಡರು. ಶಂಕರದಾಸಿಮಯ್ಯನು ಮನಕರಗಿ ಆ

ದಂಪತಿಗಳ ಶಿರಗಳನ್ನು ಹಿಡಿದೆತ್ತಿ ವಂದಿಸಿ ಅವರನ್ನು ಗದ್ದುಗೆಯ ಮೇಲೆ ಕುಳ್ಳಿರಿಸಿದನು. ದಾಸಿಮಯ್ಯನ ಮೇಲಿನ ಸಿಟ್ಟು ಕೂಡಲೆ ಅವನಲ್ಲಿ ಇಳಿಯಿತು. ಅವನು ಆ ಉಭಯ ದಂಪತಿಗಳನ್ನು ಸತ್ಕರಿಸಿ ಮನೆಗೆ ಕಳುಹಿದನು. ಅವರು ಮನೆಯೊಳಗೆ ಬಂದು ನೋಡುತ್ತಾರೆಯೇ ಮೊದಲು ಬಯಲಾಗಿದ್ದ ತವನಿಧಿಯು ಮೊದಲಿನಕಿಂತಲೂ ಎಷ್ಟೋ ಮಡಿಯಾಗಿ ಬೆಳೆದಿರುವದನ್ನು ಕಂಡು ಸಂತೋಷಿಸಿದರು.

ಆಮೇಲೆ ದೇವರದಾಸಿಮಯ್ಯ ಶಂಕರದಾಸಿಮಯ್ಯ ಉಭಯತರು ಮುದುನೂರಲ್ಲಿ ರಾಮನಾಥನ ಸನ್ನಿಧಿಯಲ್ಲಿ ಶಿವಾನುಭವ ಗೋಷ್ಠಿಯಲ್ಲಿರುತ್ತ ಅಲ್ಲಿ ನೆರೆದಿದ್ದ ಭಕ್ತಸಮೂಹದಲ್ಲಿದ್ದುಕೊಂಡು ಕೆಲವು ಕಾಲ ಕಳೆದರು.

ಈ ಕಾಲದಲ್ಲಿ ಜಯಸಿಂಹರಾಜನು ಕಲ್ಯಾಣ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನು. ಅವನು ಎಷ್ಟು ಭಕ್ತನಾಗಿ ನರಸಿಂಹನನ್ನು ಪೂಜಿಸುತ್ತ ಇದ್ದನು. ಆಗ ಕೊಂಡೆಯರು ಅವನಲ್ಲಿಗೆ ಬಂದು— ನವಿಲೆಯಲ್ಲಿ ಶಂಕರದಾಸಿಮಯ್ಯನೆಂಬೊಬ್ಬನು ನೊಸಲಗಣ್ಣನ್ನು ಪಡೆದು ಪರದೈವ ಪ್ರತಿಮೆಗಳನ್ನು ದಹಿಸುತ್ತಿದ್ದಾನೆ. ತಾನು 'ಸಮಸ್ತ ಅನ್ಯದೈವ ಕೋಳಾಹಳ' ನೆಂಬ ಬಿರುದನ್ನಿಟ್ಟುಕೊಂಡು ಸಾರಿಸುತ್ತಾನೆ. ಈಗವನು ಮುದುನೂರಿನಲ್ಲಿದ್ದಾನೆ. ಅವನನ್ನು ಕಲ್ಯಾಣಕ್ಕೆ ಬರಮಾಡಿಕೊಂಡು ಅವನ ಗರ್ವಭಂಗ ಮಾಡಬೇಕೆಂದು ಅರುಹಿದರು. ಅರಸನು ಅವರ ಮಾತಿಗೆ ಒಡಂಬಟ್ಟು ತ್ರಿಪುರಾಂತಕ ದೇವರ ಸ್ಥಾನಿಕರನ್ನು ಕರೆಯಿಸಿ— ನೀವೆಂದು ಹೋಗಿ ಮುದುನೂರೊಳಗಿರುವ ಶಂಕರದಾಸಿಮಯ್ಯನನ್ನು ಕರೆದುಕೊಂಡು ಇಲ್ಲಿಗೆ ಬನ್ನಿ, ಎಂದು ಹೇಳಲು ಆ ತಮ್ಮಡಿಗಳು ಮುದುನೂರಿಗೆ ಬಂದು ಶಂಕರದಾಸಿಮಯ್ಯನನ್ನು ಕಂಡು— ತಾವು ಕಲ್ಯಾಣದಲ್ಲಿ ತ್ರಿಪುರಾಂತಕ ದೇವರೇ ಮೊದಲಾದ ಮಹಾಸ್ಥಾನಗಳನ್ನು ನೋಡಲು ಚಿತ್ತವಿಸಬೇಕೆಂದು ತಿಳಿಸಲು ಅವನು ಅನೇಕ ಭಕ್ತಜನರನ್ನು ಕೂಡಿಕೊಂಡು ಕಲ್ಯಾಣ ಪಟ್ಟಣಕ್ಕೆ ಬಂದನು.

ಅವನು ಪಟ್ಟಣಕ್ಕೆ ಬಂದ ಬಳಿಕ ಜಯಸಿಂಹರಾಜನು ಅವನನ್ನು ಕಂಡು ಅವನನ್ನು ಬಹಳವಾಗಿ ಸತ್ಕರಿಸಿದನು. ಆದರೆ ಶಂಕರದಾಸಿಮಯ್ಯನು ಅವನ ರಾಜವೈಭವಕ್ಕೆ ಎಷ್ಟು ಮಾತ್ರವೂ ಮರುಳಾಗದೆ

ಎಂದಿನಂತೆ ತನ್ನ ಗುಲಗುಂಜಿ, ಲೋಳಸರವನ್ನು ಪ್ರಸಾದರೂಪವಾಗಿ ಸೇವಿಸುವದನ್ನೂ ಕೌದಿ ಹೊಲಿಯುವ ತನ್ನ ಕಾಯಕವನ್ನೂ ಬಿಟ್ಟಿರಲಿಲ್ಲ. ಶಿವಶರಣರು ವೈಭವಕ್ಕೆ ಎಷ್ಟು ಮಾತ್ರವೂ ಒಲಿಯದೆ ಸಾದಾ ವೃತ್ತಿಯವರಾಗಿರುವರು. ಇದು ಅವರ ಸಹಜ ವೃತ್ತಿಯಾಗಿರುತ್ತದೆ.

ಹೀಗೆ ಕೆಲವು ದಿವಸಗಳು ಸಂದಿ ಹೋದಬಳಿಕ ಅರಸನ ಸಭಾಸ್ಥಾನದಲ್ಲಿ ಅನೇಕ ಶಾಸ್ತ್ರ ಕೋವಿದರು ನೆರೆದು ಶಂಕರದಾಸಿಮಯ್ಯನನ್ನು ಅವನೆದುರಿಗೆ ಹೀಯಾಳಿಸುವದನ್ನು ರಾಜನು ಕೇಳಿ ಅವರಿಗೆ— ಶಂಕರದಾಸಿಮಯ್ಯನು ಮಹತ್ಮ್ರಿಕನಿದ್ದಾನೆ, ಅವನು ಹಣೆಗಣ್ಣನ್ನು ಪಡೆದಿದ್ದಾನೆ, ಅವನು ತಪಸಿಧಿಯನ್ನು ಬಯಲು ಮಾಡಿದ್ದಾನೆ, ಮಾರಿ ಮಸಣಿಗಳನ್ನು ತೊತ್ತು ಮಾಡಿ ಅವರಿಂದ ಸೇವೆ ಮಾಡಿಸಿಕೊಳ್ಳುತ್ತಾನೆ. ಇಂಥವನನ್ನು ನೀವು ಹೀಗೆ ಜರಿಯುವದು ಯೋಗ್ಯವಲ್ಲೆಂದು ತಿಳಿಸಿ ಹೇಳಿದನು. ಆದರೆ ಅವರು ಅರಸನಿಗೆ-- ಅವನು ಮಾಡುವುದೆಲ್ಲ ಕೃತಕವು, ಮೋಸಗಾರಿಕೆಯು. ಇವನು ಪಟ್ಟಣದಲ್ಲಿ 'ಷಡುದರ್ಶನಾಚಾರ್ಯ' ನೆಂದು ಕಹಳೆಯನ್ನು ಹಿಡಿಸಿ ಮೆರೆಯುತ್ತಾನೆ. ಅವನು ನಮ್ಮೊಡನೆ ವಾದಕ್ಕೆ ಬರಲಿ. ಒಂದು ಮಾತಿನಲ್ಲಿ ಅವನನ್ನು ಹಾರಿಸಿ ಬಿಡುವೆವೆಂದು ಹೇಳಿದರು.

ಅದಕ್ಕೆ ಜಯಸಿಂಹರಾಜನು ಒಪ್ಪಿ ಶಂಕರದಾಸಿಮಯ್ಯನ ಕಡೆಗೆ ತನ್ನ ದಂಡನಾಯಕನನ್ನು ಕಳಿಸಲು: ಅವನು ನಡೆದ ಸಂಗತಿಗಳನ್ನು ಅವನಿಗೆ ತಿಳಿಸಲಾಗಿ, ಅವನು— ಯತಿಗಳು ರಾಜದ್ವಾರವನ್ನು ಮೆಟ್ಟಬಾರದೆಂದು ಶಾಸ್ತ್ರವಿದೆ, ಇದಕ್ಕೆ ಹೇಗೆ ಮಾಡಬೇಕೆಂದು ಯೋಚಿಸುತ್ತಿರುವಷ್ಟರಲ್ಲಿ ವಕ್ತ್ರಪಾದ ಮುನಿಯು ಮುಂದೆ ಬಂದು ತನಗೆ ವಾದಿಸಲಿಕ್ಕೆ ಅಪ್ಪಣೆ ಕೊಡಬೇಕೆಂದು ಗುರುವಿಗೆ ಬಿನ್ನವಿಸಲು, ಶಂಕರದಾಸಿಮಯ್ಯನು ಅದಕ್ಕೆ ಒಪ್ಪಿ ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತ ನೀನು ಹೋಗಬೇಕು ಅಂದರೆ ನಿನಗೆ ಜಯವಾಗುವದು ಎಂದು ಹೇಳಿದನು. ಅವನು ಹಾಗೆಯೇ ಆಗಲೆಂದು ಒಪ್ಪಿ ಒಡ್ಡೋಲಗಕ್ಕೆ ಮಂತ್ರ ಜಪವನ್ನು ಮಾಡುತ್ತ ಬಂದನು.

ಅರಸನು ವಕ್ತ್ರಪಾದ ಗಣೇಶ್ವರನನ್ನು ಸತ್ಕರಿಸಿ ನಡೆದ ಸಂಗತಿಗಳನ್ನೆಲ್ಲ ಅವನಿಗೆ ಹೇಳಲಾಗಿ ವಕ್ತ್ರಪಾದನು— ಇಲ್ಲಿ ಅನೇಕ ಮತಸ್ಥರು

ನೆರೆದಿದ್ದಾರೆ  ಅವರಲ್ಲಿ ನನಗೆ ಇದಿರಾಗಿ ಮಾತನಾಡುವವರು ಯಾರು? ಎಂದು ಕೇಳಲು ಅದಕ್ಕೆ ಒಬ್ಬ ವೈಷ್ಣವನು ಮುಂದೆ ಬಂದನು. ತರುವಾಯ ಅವನ ಮತ್ತು ವಸ್ತ್ರಪಾದಮುನಿಯ ನಡುವೆ ಶ್ರುತ್ಯಾಧಾರದ ಮೇಲೆ ದೀರ್ಘ ವಾದಗಳು ನಡೆದು ಕಡೆಗೆ ವೈಷ್ಣವನು ಸೋತು ನಿರುತ್ತರನಾದನು. ಆಗ ಆ ವೈಷ್ಣವನು ಹೇಳಿದ್ದೇನಂದರೆ-- ನಿಮ್ಮ ಗುರುವು ತನ್ನ ಅಗ್ನಿ ನೇತ್ರದಿಂದ ದೇವತೆಗಳನ್ನು ಸುಡುತ್ತಾನೆಂದು ಹೇಳುತ್ತಾರೆ. ಅವನು ನಮ್ಮ ಒಡೆಯನಾದ ನರಸಿಂಹನನ್ನು ಅದರಿಂದ ಸುಟ್ಟರೆ ನಾವು ಸೋತೆವೆಂದು ಒಪ್ಪಿಕೊಳ್ಳುತ್ತೇವೆ ಎಂದು ನುಡಿಯಲು ಹಾಗೆಯೇ ಆಗಲೆಂದು ಹೇಳಿ ವಸ್ತ್ರಪಾದ ಗಣೇಶ್ವರನು ತನ್ನ ಬಿಡಾರಕ್ಕೆ ಬಂದನು.

ಶಂಕರದಾಸಿಮಯ್ಯನು ತನ್ನ ಹಣೆಗಣ್ಣಿನಿಂದ ನರಸಿಂಹದೇವರನ್ನು ಸುಡಲು ಸಿದ್ಧನಾಗಿರುವನೆಂಬ ವರ್ತಮಾನವು ಕೂಡಲೇ ಎಲ್ಲ ಕಡೆಗೂ ಹಬ್ಬಿತು. ಅಸಂಖ್ಯ ಜನರು ಮರುದಿನ ಈ ಕೌತುಕವನ್ನು ನೋಡಬೇಕೆಂದು ನರಸಿಂಹದೇವಾಲಯದಲ್ಲಿ ನೆರೆದರು. ಆಗ ಶಂಕರದಾಸಿಮಯ್ಯನು ಭಕ್ತ ಸಮೂಹದಿಂದ ಕೂಡಿಕೊಂಡು ಅಲ್ಲಿಗೆ ಬಂದನು. ಜಯಸಿಂಹ ರಾಜನೂ ಕೂಡ ಬರಲಾಗಿ ಶಂಕರದಾಸಿಮಯ್ಯನು ಗರ್ಭಗುಡಿಯಲ್ಲಿ ನರಸಿಂಹ ದೇವರೆದುರಿಗೆ ನಿಂತುಕೊಂಡು ತನ್ನ ಅಗ್ನಿ ನೇತ್ರದ ಮೇಲಿದ್ದ ಮೊಗವಾಡವನ್ನು ಸಾವಕಾಶವಾಗಿ ತೆರೆಯಲಾಗಿ ಅದರೊಳಗಿಂದ ಒಂದು ಮಹತ್ತರವಾದ ಜ್ವಾಲೆಯು ಹೊರಬಿದ್ದು ಘುಳುಘುಳಿಸಿ ಸುಳಿಸುಳಿದು ನರಸಿಂಹನ ಪ್ರತಿಮೆಯ ಮೇಲೆ ಬೀಳಲು ಅದು ಕೂಡಲೆ ಹುರಿಹುಂಚಾಗಿ ಭುಗಿಲೆಂದು ಉರಿದು ಧರೆಯ ಮೇಲೆ ಬಿದ್ದಿತು. ಆಗ ವೈಷ್ಣವರೂ ಇತರ ವಾದಿಗಳೂ ಶಂಕರದಾಸಿಮಯ್ಯನಿಗೆ ಶರಣು ಹೋಗಲಾಗಿ ದಾಸಿಮಯ್ಯನು ಎಲ್ಲರನ್ನು ಸಂತಯಿಸಿ ಅರಸನಿಂದ ಅಪ್ಪಣೆಯನ್ನು ತೆಗೆದುಕೊಂಡು ಶಿವಶರಣರೊಡನೆ ತನ್ನ ಬಿಡಾರಕ್ಕೆ ಬಂದನು.

ಶಂಕರದಾಸಿಮಯ್ಯನು ಕಲ್ಯಾಣದಲ್ಲಿ ಕೆಲವು ದಿನಗಳಿದ್ದು ಮುಂದೆ ತನ್ನ ಪಯಣವನ್ನು ಸಾಗಿಸಿ ಬಿರುದುಗಳನ್ನು ಹೊಗಳಿಸಿಕೊಳ್ಳುತ್ತ ಪ್ರಸಿದ್ಧವಾದ ಉಜ್ಜಯಿನೀ ಪಟ್ಟಣವನ್ನು ಸೇರಿ ಅಲ್ಲಿ ಒಂದು ಈಶ್ವರ ದೇವಾಲಯದಲ್ಲಿ ಬೀಡುಬಿಟ್ಟನು. ಈ ಪಟ್ಟಣವು ಮಾಳವಾ ದೇಶದಲ್ಲಿ

ಅತ್ಯಂತ ಪ್ರಸಿದ್ಧವಾದುದು. ಅದು ಮಹಾಕಾಳೀ ಸ್ಥಾನವು ಅಲ್ಲಿ ಶಾಕ್ತರು ಹೆಚ್ಚಾಗಿ ವಾಸಮಾಡುತ್ತಿದ್ದು ಅವರು ಶಂಕರದಾಸಿಮಯ್ಯನನ್ನು ಕಂಡು- ನೀನು ಹೊಗಳಿಸಿಕೊಳ್ಳುವ ಈ ಬಿರುದುಗಳು ನಿನಗೇಕೆ? ಜಂಗಮರಿಗೆ ವೇದ ಶಾಸ್ತ್ರಗಳೇನು ಗೊತ್ತು? ಮಹಾಕಾಳಿಯೇ ದೇವರು ಅವಳು ಶ್ರೇಷ್ಠಳು ಎಂದು ನುಡಿಯಲು ಶಂಕರದಾಸಿಮಯ್ಯನು — ನೀವು ಆ ಮಾತಂಗಿಯ ಪಾದಪೂಜೆಯನ್ನು ಮಾಡಿ ಆಕೆಗೆ ಸುರೆ ಮಾಂಸಗಳನ್ನ ಸೇರಿಸಿ ಒಂದೇ ತಳಿಗೆಯಲ್ಲಿ ಎಲ್ಲರೂ ತಿಂದು ಕುಡಿದು ಮೈಮರೆಯುತ್ತೀರಿ ನೀವು ಹಿಂಸಾಚಾರಿಗಳು, ಎಂದು ನುಡಿಯಲು ಅವರು — ಹಿಂಸೆ ಎಂದರೇನು? ಮಾಯೆಯ ಸ್ವರೂಪು ಅವುದು, ಇವೇ ಮೊದಲಾದ ವಿಷಯಗಳ ಬಗ್ಗೆ ವಾದಿಸಹತ್ತಲು ಅದರಲ್ಲಿ ಶಂಕರದಾಸಿಮಯ್ಯನು ಅವರನ್ನು ಕಡೆಗೆ ನಿರುತ್ತರರನ್ನಾಗಿ ಮಾಡಿದನು. ಕಡೆಗೆ ಅವನು ಅವರಿಗೆ— ನಿಮ್ಮ ಇಷ್ಟದೇವತೆಯ ಹೆಸರು ಹೇಳಿದಲ್ಲಿ ನಾನು ಆಕೆಯ ಕೈಯಿಂದ ಊಳಿಗವನ್ನು ಮಾಡಿಸಿಕೊಳ್ಳುವೆನೆಂದನು. ಅದಕ್ಕೆ ಅವರು ನಮ್ಮ ದೇವತೆಯು ಮಹಾಕಾಳಿಯು. ಅವಳು ಈ ಉಜ್ಜಯಿನಿ ಪಟ್ಟಣದ ಅಧಿದೇವತೆಯು. ಅವಳ ಕಡೆಯಿಂದ ನೀನು ಊಳಿಗ ಮಾಡಿಸಿಕೊಂಡರೆ ನಿನ್ನ ಮತವು ಶ್ರೇಷ್ಠವಾದುದೆಂದೆನ್ನುತ್ತೇವೆ, ಎಂದು ನುಡಿಯಲು ಶಂಕರದಾಸಿಮಯ್ಯನು ವಸ್ತ್ರಪಾದನಿಗೆ ಹೇಳಿ ಆಕೆಯನ್ನು ಕರೆಕಳುಹಿಸಲು ಅವಳು ಹರುಷದಿಂದ ಅಡ್ಡಬೀಳುತ್ತ ಹೊರಳುತ್ತ ಹೊಗಳುತ್ತ ಬಂದು ಶಂಕರದಾಸಿಮಯ್ಯನನ್ನು ವಂದಿಸಿ ಕೈಮುಗಿದು ಅವನ ಮಗ್ಗುಲಲ್ಲಿ ನಿಂತಳು. ಆಗ ಶಂಕರದಾಸಿಮಯ್ಯನು ಉಗುಳಲೆಂದು ಅತ್ತಿತ್ತ ನೋಡುತ್ತಿರಲು ಆಕೆಯು ತನ್ನ ಕೈಯೊಳಗಿದ್ದ ಕತ್ತಿಯನ್ನು ಚೆಲ್ಲಿ ತನ್ನ ಬಟ್ಟಲವನ್ನು ಮುಂದೆ ಹಿಡಿದಳು. ಶಂಕರದಾಸಿಮಯ್ಯನು ಅದರಲ್ಲಿ ಉಗುಳಲು ಅದು ಪ್ರಸಾದವೆಂದು ಮಹಾಕಾಳಿಯು ಭಾವಿಸಿ ಅದನ್ನು ಮೈಯ್ಗೆ ತೊಡೆದುಕೊಂಡಳು. ಶಾಕ್ತರು ಅದನ್ನು ನೋಡಿ— ನಿನ್ನ ಮತವು ಶ್ರೇಷ್ಠವಾದುದು, ನಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೇವೆ, ಕ್ಷಮಿಸಬೇಕು ಎಂದು ಬೇಡಿಕೊಳ್ಳಲು ಶಂಕರದಾಸಿಮಯ್ಯನು ಅವರನ್ನು ಸಂತಯಿಸಿ ಉಜ್ಜಯಿನಿ ಪಟ್ಟಣದಿಂದ ಮುಂದಕ್ಕೆ ತೆರಳುವವನಾದನು. ಆಗ ಮಹಾಕಾಳಿಯು ಕಾಳಂಜಿಯನ್ನು ಹಿಡಿದುಕೊಂಡು

ಅವನ ಬೆನ್ನು ಹತ್ತಲು, ನಿನ್ನ ಸ್ಥಾನದಲ್ಲಿಯೇ ಇರು ಹೀಗೆ ಬರಬೇಡೆಂದು ಹೇಳಿ ಅವನು ಅವಳನ್ನು ಅವಳ ಸ್ಥಾನಕ್ಕೆ ತಿರುಗಿ ಕಳಿಸಿ ಕೊಟ್ಟನು.

ಶಂಕರದಾಸಿಮಯ್ಯನು ಮುಂದೆ ದಕ್ಷಿಣ ದಿಕ್ಕಿಗೆ ಸಂಚಾರ ಮಾಡುತ್ತ 'ಕರಹಾಟ' ಅಂದರೆ ಈಗಿನ ಕರ್ಹಾಡ ಪ್ರಾಂತಕ್ಕೆ ಬಂದನು. ಅಲ್ಲಿ ಶಿಲಾಹಾರ ರಾಜರು ಬಹಳ ದಿವಸಗಳಿಂದಲೂ ರಾಜ್ಯವಾಳುತ್ತ ಬಂದಿದ್ದರು. ಈ ಪ್ರಾಂತದಲ್ಲಿ ಸಾತಾರೆಯ ದಕ್ಷಿಣಕ್ಕೆ ೧೬ ಮೈಲುಗಳ ಮೇಲೆ ತರಲಾ ಎಂಬ ನದಿಯು ಇದ್ದು ಅದರ ದಂಡೆಯ ಒಂದು ಮಗ್ಗಲಿನ ಭಾಗಕ್ಕೆ ಪೆಂಬರವೆಂಬ ಹೆಸರು ಇದೆ. ಇಲ್ಲಿ ಈಗಲೂ ಮಲ್ಹಾರಿಯ ಪ್ರಸಿದ್ಧ ದೇವಸ್ಥಾನವಿದೆ. ಇದರಲ್ಲಿ ಖಂಡೋಬಾ ಮತ್ತು ಮ್ಹಾಳಸಾ ಎಂಬ ಹೆಸರುಗಳಿಂದ ಮಹಾರಾಷ್ಟ್ರಿಗರಲ್ಲಿ ಬಹು ಪ್ರಸಿದ್ಧವಾದ ದೇವತೆಗಳಿವೆ. ಖಂಡೋಬಾ ಎಂಬ ಹೆಸರಿನ ದೇವತೆಗೆ ಕರ್ನಾಟಕದಲ್ಲಿ ಮೈಲಾರನೆಂಬ ಹೆಸರಿದ್ದು ಮೈಲಾರನ ಗುಡಿಗಳು ವಿಜಾಪುರ ಜಿಲ್ಲೆಯಲ್ಲಿ ಹಿಪ್ಪರಗಿಯಲ್ಲಿ ರಾಣೇಬಿನ್ನೂರು ತಾಲೂಕಿನಲ್ಲಿ ದೇವರಗುಡ್ಡದಲ್ಲಿ ಹೀಗೆ ಅನೇಕ ಕಡೆಗೆ ಇವೆ. ಈ ದೇವತೆಯ ಅನುಯಾಯಿಗಳು ನಾಡಿನಲ್ಲಿ ಅಸಂಖ್ಯಾತರಾಗಿದ್ದು ನಾಯಿಯಂತೆ ಬೊಗಳುವದೇ ಅವರ ಅರ್ಚನೆಯ ವೈಶಿಷ್ಟ್ಯವಾಗಿದೆ. ಬಸವೇಶ್ವರನು ತನ್ನ ವಚನಗಳಲ್ಲಿ ಈ ದೇವತೆಯನ್ನು ಅಗಿಂದಾಗ್ಗೆ ಟೀಕಿಸಿದ್ದು ಕಂಡುಬರುತ್ತದೆ. ಅಲ್ಲದೆ 'ಪಿಂಬೆರ ಮೈಲಾರನೂ' ಕೂಡ ಕಡಿಮೆ ತರಗತಿಯ ದೇವತೆ ಎಂದು ಅವನು ತನ್ನ ಒಂದು ವಚನದಲ್ಲಿ ಹೇಳಿದ್ದು ಕಂಡುಬರುತ್ತದೆ. ಹೀಗೆ ಶಿವಶರಣರು ಇಂಥ ಕಿರುಕುಳ ದೇವತೆಗಳನ್ನು ಪೂಜಿಸುವದು ಶಿವಾನುಭವಕ್ಕೆ ಹೊರತಾದುದೆಂದು ಭಾವಿಸಿದ್ದಾರೆ. ಶಂಕರದಾಸಿಮಯ್ಯನು ಹಾಗೆಯೇ ಭಾವಿಸಿ ನಾಡಿನಲ್ಲಿ ಮೈಲಾರನಿಗಿದ್ದ ಮಹತ್ವವನ್ನು ಕಡಿಮೆ ಮಾಡಬೇಕೆಂಬ ಉದ್ದೇಶವನ್ನು ತಾಳಿ ಉಜ್ಜಯಿನಿಯಿಂದ ಮಹಾರಾಷ್ಟ್ರದ ಪಶ್ಚಿಮ ಭಾಗದೊಳಗಿಂದ ಹಾಯ್ದು ಪಿಂಬೇರ ಗ್ರಾಮಕ್ಕೆ ಬಂದನು.

ಅವನು ಅಲ್ಲಿಯ ಮೈಲಾರನ ದೇವಸ್ಥಾನದಲ್ಲಿ ಬಂದು ಇಳಿದಾಗ್ಗೆ ಒಬ್ಬ ವೇಶಿಯು ಪೂಜೆಗೆಂದು ಅಲ್ಲಿಗೆ ಬಂದು ದ್ವಾರದಲ್ಲಿ

ಶಂಕರ ದಾಸಿಮಯ್ಯನನ್ನು ಕಂಡು, ಅವನಾರೆಂಬುವನ್ನು ಅರಿಯದೆ ಅವಳು ಪೂವಂಬುಲ ವೀಳ್ಯ, ಕರ್ಪೂರ, ಅರಳಮಲ್ಲಿಗೆ ಮೊದಲಾದ ಪೂಜಾ ಸಾಮಗ್ರಿಗಳನ್ನು ಅವನ ಕಯ್ಯಲ್ಲಿ ಕೊಟ್ಟು ಇವುಗಳಿಂದ ತನ್ನಪರವಾಗಿ ಮೈಲಾರನ ಪೂಜೆಮಾಡಿ ಬರಲು ತಿಳಿಸಿದಳು. ಆದರೆ ಅವನು ಹಾಗೆ ಮಾಡದೆ ತನ್ನ ಕಯ್ಯಲ್ಲಿ ಕೊಟ್ಟ ಗಂಧವನ್ನು ತಾನೇ ಪೂಸಿಕೊಂಡನು. ಮಲ್ಲಿಗೆಯ ಮಾಲೆಯನ್ನು ತಾನೇ ಧರಿಸಿಕೊಂಡನು. ಅವನ್ನು ಆ ಸ್ತ್ರೀಯಳು ನೋಡಿ ಕೋಪಿಸಿ ಮೈಲಾರನಿಗೋಸ್ಕರ ಕೊಟ್ಟಿದ್ದನ್ನು ನೀನು ಹೀಗೆ ತೆಗೆದುಕೊಳ್ಳಬಹುದೇ ? ಮೈಲಾರನು ಅತ್ಯುಗ್ರನು, ಅವನು ಇನ್ನುಮೇಲೆ ನಮಗೆ ಕೆಡಕುಮಾಡದೆ ಬಿಡನು, ಎಂಬ ಭೀತಿಯುಳ್ಳವಳಾಗಿರಲು ಅದನ್ನು ಶಂಕರ ದಾಸಿಮಯ್ಯನು ತಿಳಿದು ಅವಳನ್ನು ಸಂತವಿಸಬೇಕೆಂದು ಅವನು ಮೈಲಾರನ ಮೂರ್ತಿಯನ್ನು ದಿಟ್ಟಿಸಿ ನೋಡಿ—ಎಲೋ ಮೈಲಾರನೇ ಇಲ್ಲಿಗೆ ಬಾ, ಈ ತಂಬುಲವನ್ನು ಹಿಡಿ ಎಂದು ನುಡಿದು ಬಾಯ ತಂಬುಲವನ್ನು ಮುಂದೆ ಮಾಡಲು ಆ ಪ್ರತಿಮೆಯು ನಡುಗುತ್ತ ಬೀಳುತ್ತ ಮುಂದೆ ಬಂದು ಆ ತಂಬುಲವನ್ನು ಕೈಯೊಡ್ಡಿ ತೆಗೆದುಕೊಂಡು ಸವಿದು ಅದರ ರಸವನ್ನು ತನ್ನ ಮೈಯಿಗೆಲ್ಲ ತೊಡೆದುಕೊಂಡಿತು.

ಅಲ್ಲಿದ್ದ ಪುರಜನರು ಇದನ್ನು ನೋಡಿ ಇದು ಧರೆಗೆ ಹೊಸತಾಯಿತು, ಈ ಮೈಲಾರನು ಈ ಜಂಗಮನ ಎಂಜಲನ್ನು ತಿಂದನು, ಇವನ ಮಹಿಮೆಯು ಹೊರಟು ಹೋಯಿತು, ಇನ್ನೇಕೆ ಇವನನ್ನೂ ಮೂಳವಿಯನ್ನೂ ಪೂಜಿಸುವುದು ಎಂದು ನುಡಿಯಹತ್ತಿದರು.

ಬಳಿಕ ಶಂಕರ ದಾಸಿಮಯ್ಯನು ಮುಂದೆ ತನ್ನ ಪಯಣ ಮಾಡಬೇಕೆಂದು ಸಿದ್ಧನಾಗುತ್ತಿರಲು ವಕ್ತ್ರಪಾವನಿಗೆ ತನ್ನ ಕೊಡೆಯನ್ನು ಹಿಡಿದುಕೊಂಡು ನಡೆ ಎಂದು ಹೇಳುತ್ತಿರುವಾಗ ಮೈಲಾರನು ಈ ಮಾತನ್ನು ಕೇಳಿ ಶಂಕರ ದಾಸಿಮಯ್ಯನು ತನಗೆಯೇ ಆ ಕೊಡೆಯನ್ನು ಹಿಡಿಯಲಿಕ್ಕೆ ಹೇಳಿದನೆಂದು ತಿಳಿದು ಅತ್ಯಂತ ಆನಂದಬಟ್ಟು ಆ ಕೊಡೆಯನ್ನು ತಾನೇ ತೆಗೆದುಕೊಂಡು ದಾಸಿಮಯ್ಯನ ಮೇಲೆ ಹಿಡಿದು ಅವನೊಡನೆ ನಡೆಯಲು ಮುಂದಾದನು.

ಇದನ್ನು ಪುರಜನರು ನೋಡಿ ಮೈಲಾರನು—ನಮ್ಮನ್ನು ಬಿಟ್ಟುಹೋಗಹತ್ತಿದ್ದಾನೆ, ಎಂದು ಮರುಗಹತ್ತಲು ಶಂಕರ ದಾಸಿಮಯ್ಯನು ಮೈಲಾ

ರನಿಗೆ—ನೀನು ನನ್ನ ಕೂಡ ಬರಬೇಡ. ಆ ಕೊಡೆಯನ್ನು ವಕ್ತ್ರಪಾದನಿಗೆ ಕೊಡು ಎಂದು ಹೇಳಲು, ಅದಕ್ಕೆ ವೈಲಾರನು—ಶಂಕರ ದಾಸಿಮಯ್ಯನೇ, ಈ ಕೊಡೆಯು ನನ್ನ ಹತ್ತಿರವಿರಲಿ. ನಾನು ಅದನ್ನು ಕೊಡುವದಿಲ್ಲ. ನಿನ್ನ ಗುರುತಿಗಾಗಿ ನಾನು ಇದನ್ನು ಹಿಡಿದುಕೊಂಡಿರುವೆನು. ಇನ್ನು ಮುಂದೆ ಈ ಕೊಡೆಯ ಮೂಲಕವೇ ಜನರು ನನ್ನನ್ನು ಮನ್ನಿಸುವರು. ಇಲ್ಲದಿದ್ದರೆ ಅವರು ನನ್ನನ್ನು ಮನ್ನಿಸಲಾರರು ಎಂದು ಹೇಳಲು ಶಂಕರ ದಾಸಿಮಯ್ಯನು ಹಾಗೆಯೇ ಆಗಲೆಂದು ಅದಕ್ಕೆ ಒಪ್ಪಿ ಮುಂದೆ ಸಾಗುವವನಾದನು.

ಅಂದಿನಿಂದ ಕೊಡೆಯ ವೈಲಾರನೆಂದು ಈ ವೈಲಾರನು ಈ ಸ್ಥಳದಲ್ಲಿ ಪ್ರಸಿದ್ಧನಾಗಿದ್ದಾನೆ. ಈ ಹೆಸರೇ ಇದಕ್ಕೆ ಪ್ರಾಪ್ತವಾಗಿದೆ. ಈ ಪೆಂಬರ ಗ್ರಾಮದಲ್ಲಿ ಈಗಿರುವ ದೇವತೆಯ ಪ್ರಭಾವಳಿಯ ಮೇಲೆ ಈಗಲೂ ಒಂದು ಕೊಡೆಯ ಗುರುತು ಉಂಟು. ಅದು ಶಂಕರ ದಾಸಿಮಯ್ಯನಿಂದ ಅದಕ್ಕೆ ಬಂದುದೆಂದು ತಿಳಿಯಲ್ಪಟ್ಟಿದೆ. ಈ ಪ್ರಕಾರ ಶಂಕರ ದಾಸಿಮಯ್ಯನು ಪೆಂಬರದಲ್ಲಿ ಪವಾಡವನ್ನು ಮಾಡಿ ತನ್ನ ಗ್ರಾಮವಾದ ನವಿಲೆಯ ಕಡೆಗೆ ನಡೆದನು.

ಅವನು ಮಾರ್ಗಕ್ರಮಣ ಮಾಡುತ್ತಿರುವಲ್ಲಿ ನವನಾಥಸಿದ್ಧರ ಸಾಂಪ್ರದಾಯಿಕರಾದ ಸಿದ್ಧರು ವಾಸಿಸುತ್ತಿದ್ದ ಒಂದು ಗ್ರಾಮಕ್ಕೆ ಬಂದನು. ಇವರು ಸಿದ್ಧಿಗಳನ್ನು ಮಾಡುವದೇ ತಮ್ಮ ಮುಖ್ಯ ಧ್ಯೇಯವಾಗಿಟ್ಟುಕೊಂಡು ಮಾಂತ್ರಿಕರಾಗಿ ಭೈರವ, ಶಕ್ತಿ, ಇಂಥ ಕ್ರೂರ ದೇವತೆಗಳ ಉಪಾಸನೆಯನ್ನು ಮಾಡುತ್ತ, ಜಟಾಧಾರಿಗಳಾಗಿ ಸಿಂದಿ ಸರಾಯಿಗಳನ್ನು ಕುಡಿಯುತ್ತ, ಮಾಂಸಾಹಾರಿಗಳಾಗಿ ಕಾಮಪರವಶರಾಗಿ ನೀತಿಯನ್ನು ಬಿಟ್ಟು ಆಚರಿಸುವವರಾಗಿದ್ದರು. ಶಂಕರದಾಸಿಮಯ್ಯನು ಇವರನ್ನು ಕಂಡು ಇವರಿಗೆ-ನಿಮ್ಮ ಮಾರ್ಗವು ಅತ್ಯಂತ ಹೀನತರವೆಂದು ನುಡಿಯಲಾಗಿ ಅವರು ಸಿಟ್ಟಿಗೆದ್ದು—ಲೋಕದಲ್ಲಿ ಜೋಗಿಯೇ ಎಲ್ಲರಿಗೆ ಗುರುವು. ಭೈರವಾರ್ಚಕರು ಸಿದ್ಧಿಗಳನ್ನು ಸಾಧಿಸಿ ವಿಖ್ಯಾತರಾಗಿದ್ದಾರೆ. ಅವರು ಒಂದೇ ಸ್ಥಳದಲ್ಲಿರದೆ ಕ್ಷೇತ್ರಗಳನ್ನು ಸುತ್ತುತ್ತ ಕಡೆಗೆ ಅವುಗಳಲ್ಲೊಂದರಲ್ಲಿ ತಮ್ಮ ಶರೀರವನ್ನು ತ್ಯಜಿಸಿದರೆ ಅವರಿಗೆ ಮೋಕ್ಷವಾಗುವದೆಂದು ನಮ್ಮ ಕಾಪಾಲಿಕ ಮತವಿದೆ, ಎಂದು ವಾದಿಸಿದರು. ಅದಕ್ಕೆ ಶಂಕರದಾಸಿಮಯ್ಯನು ನಿಮಗೆ ವಸ್ತುವಿವೇಕವಿಲ್ಲ. ಇಂತಹ ಸಂಚಾರದಿಂದ ಮೋಕ್ಷವಾಗಲಾರದು. ನೀವು

ಸ್ಥಿರಚಿತ್ತರಾಗಿ ನೀತಿಮಾರ್ಗವನ್ನು ಅನುಸರಿಸುತ್ತ ತ್ರಿಲಿಂಗಗಳನ್ನು ನಿಮ್ಮಲ್ಲಿ
ಸಾಧಿಸಬೇಕು ಎಂದು ಹೇಳಲು ಅವರು—ನಮ್ಮ ಮಾರ್ಗದಿಂದ ಸಾಕ್ಷಾತ್
ಶಿವನಳವಡುವನು. ಬೇಕಾದರೆ ನಮ್ಮ ಪರಾಕ್ರಮವನ್ನು ನೋಡು ಎಂದು
ನುಡಿಯುತ್ತ ಅವನ ಮೇಲೆ ಮಂತ್ರ ಪ್ರಯೋಗ ಮಾಡಲು ಪ್ರಾರಂಭಿಸಿ
ದರು.

ಮೊದಲು ಅವರು ಒಂದು ಮಹಾಸರ್ಪವನ್ನು ಶಂಕರ ದಾಸಿಮಯ್ಯನ
ಮೇಲೆ ಬಿಡಲು ಅವನು ಅದರ ಮೇಲೆ ಉದಕವನ್ನು ಸಿಂಪಡಿಸಲಾಗಿ
ಅದು ಗರುಡನಂತೆ ಸರ್ಪವನ್ನು ಎತ್ತಿಕೊಂಡು ಹೋಯಿತು. ಒಂದು ಮದ್ದಾ
ನೆಯನ್ನು ಬಿಡಲು ಒಂದು ಹುಲ್ಲು ಕಡ್ಡಿಯನ್ನು ಶಂಕರ ದಾಸಿಮಯ್ಯನು
ಮಂತ್ರಿಸಿ ಅದರ ಮೇಲೆ ಚೆಲ್ಲಲು ಅದು ಅವನ್ನು ಸೀಳಿ ಬಿಟ್ಟಿತು. ತರು
ವಾಯ ಅವರು ಒಂದು ಭೂತವನ್ನು ಬಿಡಲು ಶಂಕರ ದಾಸಿಮಯ್ಯನ
ಆತ್ಮ ಶಕ್ತಿಯ ಮೂಲಕ ಅದು ಅವನನ್ನು ಸಮೀಪಿಸಲಾರದೆ ಹೋಗಿ
ಅವನ ಅಪ್ಪಣೆಯಂತೆ ತಿರುಗಿ ಭೈರವ ಭೂತವನ್ನೇ ತಿಂದು ಜೋಗಿಗಳನ್ನು
ತಿನ್ನಲು ಮುಂದುವರಿಯಲು ಅವರು ಭೀತರಾಗಿ ಶಂಕರ ದಾಸಿಮಯ್ಯನ
ಮೊರೆಹೊಕ್ಕರು. ಆಗ ಅವರು—"ನೀನೇ ಆದಿನಾಥನು. ಅಜ್ಞಾನದಿಂದ
ನಿನ್ನೊಡನೆ ನಾವು ವಾದಿಸಿದೆವು. ನಮ್ಮನ್ನು ಕ್ಷಮಿಸಬೇಕೆಂದು ಬೇಡಿ
ಕೊಂಡರು. ಹೀಗೆ ಶಂಕರ ದಾಸಿಮಯ್ಯನು ಶಿವಶರಣರ ಮಾರ್ಗವು
ಸಿದ್ಧರ ಮಾರ್ಗಕ್ಕಿಂತಲೂ ಉಚ್ಚತರವೆಂದು ಸಿದ್ಧಪಡಿಸಿ ಲೋಕದಲ್ಲಿ
ಸಿದ್ಧರನ್ನು ತ್ಯಜಿಸಬೇಕೆಂದು ಜನರಿಗೆ ಬೋಧಿಸುತ್ತ ತನ್ನ ಗ್ರಾಮವಾದ
ಸವಳಿಗೆ ಬಂದು ಮುಟ್ಟಿದನು. ಆಗ ಅಲ್ಲಿಯ ಭಕ್ತರು ಅವನನ್ನು ಸಂತೋ
ಷದಿಂದ ಇದಿರ್ಗೊಂಡು ಜಡೆಯ ಶಂಕರನ ಮಂದಿರಕ್ಕೆ ಬಂದರು.
ಶಂಕರ ದಾಸಿಮಯ್ಯನು ಪರಮಾತ್ಮನನ್ನು ವಂದಿಸಿ ತನ್ನ ಬಿಡಾರಕ್ಕೆ
ಬಂದು ಎಲ್ಲರನ್ನು ಕಳುಹಿಸಿಕೊಂಡನು.

ಆ ಮೇಲೆ ಮರುದಿವಸ ವಕ್ತ್ರಪಾದನು ಧಾನ್ಯಕ್ಕೋಸ್ಕರ ಪುರದಲ್ಲಿ
ಹೋಗಿರಲಾಗಿ ಪುರಜನರು ಅತ್ಯಂತ ಸಂತೋಷಭರಿತರಾಗಿ, ಹೆಚ್ಚಾಗಿ
ಧಾನ್ಯವನ್ನು ಅವನಿಗೆ ನೀಡಲು ಅದು ರಾಶಿಯಾಗಿ ಮನೆಯ ಮುಂದೆ
ಬಿದ್ದುದನ್ನು ಶಂಕರ ದಾಸಿಮಯ್ಯನು ನೋಡಿ ಅದರಿಂದ ಒಂದು ಮಹ
ತ್ತರವಾದ ಗಣ ಪರ್ವವನ್ನು ಮಾಡಲು ಬಯಸಿದನು. ಆಗ ವಕ್ತ್ರಪಾದನು ಆ

ಬತ್ತವನ್ನು ಕುಟ್ಟಬೇಕೆಂದು ಪುರಜನರ ಮನೆಗಳಿಗೆ ಕಳಿಸುತ್ತಿರಲು ಒಬ್ಬ ಒಕ್ಕಲಿತಿಯು ಶಂಕರ ದಾಸಿಮಯ್ಯನಲ್ಲಿಗೆ ಬಂದು—ಕುಟ್ಟುವದು ನನ್ನಿಂದ ಆಗದು. ಬೇಕಾದರೆ ನೀನು ಮಾರಿಕವ್ವೆಯಿಂದ ಮಿದಿಯಿಸಬೇಕು ಎಂದು ಹೇಳಲು—ಈಕೆಯು ನನಗೆ ಬುದ್ಧಿ ಗಲಿಸಿದಳು, ಎಂದು ನುಡಿದು ಅವನು ಆ ಧಾನ್ಯವನ್ನೆಲ್ಲ ಊರ ಹೊರಗಿದ್ದ ಮಾರಿ ಮಸಣಿಗಳ ಗುಡಿಗಳ ಮುಂದೆ ರಾಶಿ ಮಾಡೆಂದು ಹೇಳಲಾಗಿ ವಕ್ತ್ರಪಾದನು ಹಾಗೆಯೇ ಮಾಡಿದನು.

ಆಗ ಮಾರಿ ಮಸಣಿಗಳು ರಾತ್ರಿಯಲ್ಲಿ ಅಲ್ಲಿ ನೆರೆದು ಆ ಬತ್ತವನ್ನೆಲ್ಲ ಸರಿಯಾಗಿ ಕುಟ್ಟಿ ಸೂರ್ಯೋದಯವಾಗುವಷ್ಟರಲ್ಲಿ ಅಕ್ಕಿಯನ್ನು ಮಾಡಿದವು. ಆ ಮೇಲೆ ಶಂಕರ ದಾಸಿಮಯ್ಯನು ಶರಣ ಸಮೂಹಕ್ಕೆ ಗಣಪರ್ವವನ್ನು ಮಹತ್ತರವಾಗಿ ಮಾಡಿಸಿದನು.

ಶಂಕರ ದಾಸಿಮಯ್ಯನು ಮುಂದೆ ನವಿಲೆಯಲ್ಲಿ ಶಿವಾನುಭವ ಗೋಷ್ಠಿಯಲ್ಲಿ ಕಾಲಕಳೆಯುತ್ತಿರಲು ಅವನ ಹೆಂಡತಿ ಶಿವದಾಸಿಯು ಗರ್ಭಿಣಿಯಾಗಿ ಒಂದು ಮಗುವನ್ನು ಹೆತ್ತಳು. ಆ ಮಗುವಿಗೆ ಸದ್ಯೋಜಾತನೆಂಬಹೆ ಸರಿಟ್ಟರು.

ಹೀಗೆ ಕೆಲವು ಕಾಲ ಹೋಗಲು ಒಂದು ದಿವಸ ಶಂಕರ ದಾಸಿಮಯ್ಯನು ತನ್ನ ಹೆಂಡತಿಗೆ—ಬರುವ ಸೋಮವಾರ ನಮ್ಮ ಅವಸಾನ ಕಾಲವು. ಇನ್ನು ಮುಂದೆ ನರಲೋಕದಲ್ಲಿರುವುದು ಸಾಕು ಎಂದು ನುಡಿದು ಜಡೆಯ ಶಂಕರನಿದಿರಿನಲ್ಲಿ ತನ್ನ ಮಡದಿ ಮತ್ತು ವಕ್ತ್ರಪಾದ ಇವರನ್ನೊಡಗೊಂಡು ಬಂದು ಪರಮಾತ್ಮನನ್ನು ಭಜಿಸುತ್ತ ತಮ್ಮನ್ನು ಲಿಂಗದಲ್ಲಿ ಒಳಕೊಳ್ಳಬೇಕೆಂದು ಬೇಡಿಕೊಳ್ಳಲು ಉರಿಯೊಳಗೆ ಕರ್ಪೂರವು, ಜಲದಲ್ಲಿ ಜೇನು, ವಾರಿಯಲ್ಲಿ ಲವಣವು ಬೆರೆವಂತೆ ಅವರು ಲಿಂಗದಲ್ಲಿ ಬೆರೆದರು. ಈ ಪ್ರಕಾರ ಶಂಕರ ದಾಸಿಮಯ್ಯನು ಮೊದಲು ನವಿಲೆಯ ಹತ್ತಿರದ ಗ್ರಾಮದಲ್ಲಿದ್ದು ಶಿವಸಾಲೋಕ್ಯವನ್ನೂ ನವಿಲೆಯಲ್ಲಿರಲು ಶಿವಸಾಮೀಪ್ಯವನ್ನೂ ಹಣೆಗಣ್ಣನ್ನು ಪಡೆದು ಶಿವಸಾರೂಪ್ಯವನ್ನೂ ಶಿವನೊಳಗೆ ಬೆರೆದು ಶಿವಸಾಯುಜ್ಯವನ್ನೂ ಪಡೆದು ಹೆಸರಾದನು.

ಶಂಕರ ದಾಸಿಮಯ್ಯನ ಯೋಗ್ಯತೆಯು ಶಿವಶರಣರಲ್ಲಿ ಬಹಳ ಹೆಚ್ಚಿನದಿದ್ದು ಅವನು ಉನ್ನತವಾದ ಧರ್ಮೋದ್ಧಾರ ಕಾರ್ಯಗಳನ್ನು ಮಾಡಿದ್ದಾನೆ. ಕ್ಷುದ್ರ ದೇವತೆಗಳನ್ನು ನಂಬುವುದರಿಂದ ಸಮಾಜದಲ್ಲುಂಟಾಗುವ ಅಪೇಯಪಾನ, ಮಾಂಸಾಹಾರ, ಹಿಂಸಾಚಾರಗಳನ್ನು ದೂರಮಾ

ಡಲು ಅವನು ಪ್ರಯತ್ನಿಸಿದ್ದಾನೆ. ಮಾರಿ, ಮಸಣಿ, ಬೀರಯ್ಯ, ಮಾರಯ್ಯ, ಭೂತ ಪಿಶಾಚಿಗಳನ್ನು ನಂಬುವದರಿಂದ ಅಜ್ಞಜನರು ಅನಾಚಾರಗಳಿಗೆ ಪ್ರವೃತ್ತರಾಗುತ್ತಾರೆ. ಆದ್ದರಿಂದ ಇಂಥ ದೈವತೆಗಳನ್ನು ನಂಬಬಾರದೆಂದು ಅವನು ಜನರಿಗೆ ಬೋಧಿಸಿದ್ದಾನೆ. ಅವನ ಕಾಲದಲ್ಲಿ ನಾಡಿನಲ್ಲಿ ಸಿದ್ಧರೂ ಕಾಪಾಲಿಕರೂ ಶಾಕ್ತರೂ ವಾಸಮಾಡುತ್ತ ದುಷ್ಟ ಕ್ರಿಯೆಗಳನ್ನು ಹೆಚ್ಚಿ ಸಲು ಕಾರಣರಾಗಿದ್ದರು. ಆದ್ದರಿಂದ ಅವರ ಮತಗಳನ್ನು ಅವನು ಖಂಡಿ ಸುತ್ತ ಸಂಚರಿಸಿದ್ದಾನೆ. ಶಿವಶರಣರು ಯಾವಾಗಲೂ ದೇವರ ವಿಷಯ ವಾಗಿ ಉಚ್ಚತಮ ವಿಚಾರವುಳ್ಳವರು ಮತ್ತು ಶುದ್ಧವಾದ ನೀತಿ ಮಾರ್ಗ ವನ್ನು ಅನುಸರಿಸುವವರು ಇದ್ದಾರೆ. ಅವರು ಆಚರಿಸುವ ಶಿವಯೋಗವು ಪರಮಾತ್ಮನೆಡೆಗೆ ಒಯ್ಯುವಂತಹದು. ಇಂಥ ಮಾರ್ಗವನ್ನು ಜನರಲ್ಲಿ ಅವನು ಪ್ರಸಾರ ಮಾಡಲು ಪ್ರಯತ್ನಿಸಿದ್ದಾನೆ.

ಶಂಕರ ದಾಸಿಮಯ್ಯನು ತನ್ನ ತತ್ವಗಳನ್ನು ಚಾಲುಕ್ಯರ ರಾಜಧಾನಿ ಯಾದ ಕಲ್ಯಾಣ ಪಟ್ಟಣದಲ್ಲಿ ಮಾತ್ರವಲ್ಲದೆ ಮಹಾಕಾಳಿಯ ಸ್ಥಾನವಾದ ಉಜ್ಜಯಿನಿ ಮತ್ತು ಮಹಾರಾಷ್ಟ್ರದಲ್ಲಿ ಕೂಡ ಪ್ರಸಾರ ಮಾಡಿದ್ದಾನೆ. ಒಂದು ಸಮಯದಲ್ಲಿ ಅವನು ತನ್ನ ಸಂಚಾರದಲ್ಲಿ ಬಹುಜನ ಸಿದ್ಧರಿದ್ದ ಸ್ಥಾನವನ್ನು ಸಂದರ್ಶಿಸಿದನು. ಇವರು ಆಗ ಇರುತ್ತಿದ್ದ ಮುಖ್ಯ ಸ್ಥಾನವು ಕರಹಾಟಕ (ಕರ್ಹಾಡ) ಮತ್ತು ಕೊಲ್ಲಾಪುರ ಪ್ರಾಂತಗಳಿದ್ದು ಅವರು ಅಲ್ಲಿಂದಲೇ ಹೊರಟು ಹಿಂದುಸ್ತಾನವನ್ನೆಲ್ಲ ಸಂಚಾರ ಮಾಡುತ್ತಿದ್ದರು. ಶಂಕರ ದಾಸಿಮಯ್ಯನು ಅವರನ್ನು ಕಂಡು ಅವರ ಮತವನ್ನು ಖಂಡಿಸಿ ಶಿವಾನುಭವದ ಶುದ್ಧ ಮಾರ್ಗವನ್ನು ನೆಲೆಗೊಳಿಸಿದ್ದಾನೆ.

ಶಂಕರ ದಾಸಿಮಯ್ಯನ ಪ್ರಚಾರ ಕಾರ್ಯಗಳಲ್ಲಿ ಅವನ ಶಿಷ್ಯನಾದ ವಕ್ತ್ರಪಾದ ಗಣೇಶ್ವರನು ಆರಂಭದಿಂದ ಕಡೆಯವರೆಗೂ ಅವನ ಸೇವೆ ಮಾಡುತ್ತ ವಿದ್ವಾಂಸನೂ ಶಿವಾನುಭವಿಯೂ ಆಗಿ ತನ್ನ ಗುರುವಿನ ವಾದ ಕಾಲದಲ್ಲಿ ಆವನಿಗೆ ಸಹಾಯ ಮಾಡುತ್ತ ಬಂದಿದ್ದಾನೆ. ಇದು ಈ ಚರಿ ತ್ರೆಯ ವೈಶಿಷ್ಟ್ಯವಾಗಿದೆ. ವಕ್ತ್ರಪಾದನು ಒಬ್ಬ ಮಾದರೀ ಶಿಷ್ಯನಾಗಿದ್ದ ನೆಂದು ನಾವು ಹೇಳಬಹುದು.

ಶಂಕರ ದಾಸಿಮಯ್ಯನು ವಚನಕಾರನಿದ್ದಾನೆ. ಅವನ ಅಂಕಿತವು 'ನಿಜಗುರು ಶಂಕರದೇವಾ' ಎಂದಿದ್ದು ಶೂನ್ಯಸಂಪಾದನೆಯ ಕರ್ತನು

ತನ್ನ ಗ್ರಂಥದಲ್ಲಿ ಅವನವೆಂದು ಎರಡು ವಚನಗಳನ್ನು ಉದಹರಿಸಿದ್ದಾನೆ. ಆದರೆ ಈತನು ಸಂದರ್ಭಕ್ಕನುಸರಿಸಿ ತಾನೇ ವಚನಗಳನ್ನು ರಚಿಸಿ ತನ್ನ ಗ್ರಂಥದಲ್ಲಿ ಸೇರಿಸುವದರಿಂದ ಈ ವಚನಗಳು ದೃಢವಾಗಿ ಅವನವೇ ಎಂದು ಹೇಳಲು ಬರಲಾರದು. ಆದರೆ ಈ ಗ್ರಂಥಕಾರನು ಉಪಯೋಗಿಸುವ ಮುದ್ರಿಕೆಗಳು ಬಹುಶಃ ಆಯಾ ವಚನಕಾರರವೇ ಇರುವದು ಕಂಡುಬರುವದರಿಂದ ಮತ್ತು ನಿಜಗುರು ಶಂಕರದೇವಾ ಎಂಬ ಮುದ್ರಿಕೆಯು ಶಂಕರ ದಾಸಿಮಯ್ಯನದಿರುತ್ತದೆಂದು ಭೈರವೇಶ್ವರ ಕಾವ್ಯಕಥಾ ಗರ್ಭಸೂತ್ರ ರತ್ನಾಕರದ ಗ್ರಂಥಕಾರನು ಹೇಳಿರುವದರಿಂದ ಶಂಕರ ದಾಸಿಮಯ್ಯನ ಮುದ್ರಿಕೆಯು ಇದೇ ಇರಬಹುದೆಂದು ನಮಗೆ ತೋರುತ್ತದೆ. ಆದರೆ ಈ ಮುದ್ರಿಕೆಯುಳ್ಳ ವಚನಗಳು ನಮಗೆ ಈ ವರೆಗೂ ಸ್ವತಂತ್ರವಾಗಿ ದೊರೆತಿಲ್ಲ. ಆದರೆ ಸಂಶೋಧಕರು ಶೋಧಿಸಿದಲ್ಲಿ ಇವು ನಮಗೆ ದೊರೆಯಬಹುದೆಂದು ನಮ್ಮ ಭರವಸೆ ಇದೆ.

ವೀರ ಶಂಕರ ದಾಸಿಮಯ್ಯನೆಂಬ ಇನ್ನೊಬ್ಬ ವಚನಕಾರನಿದ್ದಾನೆ. ಆದರೆ ಅವನು ಬೇರೊಬ್ಬ ಶಿವಶರಣನೆಂದು ನಮಗೆ ತೋರುತ್ತದೆ. ಯಾಕಂದರೆ ಅವನ ಚರಿತ್ರೆಯು ಭೈರವೇಶ್ವರ ಕಾವ್ಯಕಥಾ ಗರ್ಭಸೂತ್ರ ರತ್ನಾಕರ, ಬಸವೇಶ್ವರ ಪುರಾಣದ ಕಥಾಸಾಗರ ಮತ್ತು ಸಂಸ್ಕೃತ ಬಸವೇಶವಿಜಯ ಇವುಗಳಲ್ಲಿ ಬಂದಿದ್ದು ಅದು ಶಂಕರ ದಾಸಿಮಯ್ಯನ ಚರಿತ್ರೆಯಿಂದ ಭಿನ್ನವಾಗಿದೆ. ಅದನ್ನು ನಾವು ಈ ಗ್ರಂಥದಲ್ಲಿ ಮುಂದೆ ಕೊಟ್ಟಿದ್ದೇವೆ. ಈ ವೀರ ಶಂಕರದಾಸನು ವಚನಕಾರನಿದ್ದು ಅವನ ಅಂಕಿತವು 'ಘನಗುರು ಶಿವಲಿಂಗ ರಾಮನಾಥ' ಎಂದಿದೆ. ಈ ಮುದ್ರಿಕೆಯಿಂದ ಅವನು ಮುದುನೂರಲ್ಲಿದ್ದ ರಾಮನಾಥನ ಭಕ್ತನಾಗಲಿ ಇಲ್ಲವೆ ದೇವರ ದಾಸಿಮಯ್ಯನ ಕೆಲವೊಬ್ಬ ಅನುಯಾಯಿಯಾಗಲಿ ಇರಬೇಕೆಂದು ನಮಗೆ ತೋರುತ್ತದೆ. ವಚನಕಾರರು ತಮ್ಮ ಗುರುಗಳ ಅಥವಾ ಇಷ್ಟ ದೇವತೆಯ ಹೆಸರುಗಳುಳ್ಳ ಮುದ್ರಿಕೆಗಳನ್ನು ಯಾವಾಗಲೂ ಉಪಯೋಗಿಸುವದುಂಟು. ಆದರೆ ವೀರ ಶಂಕರದೇವನು ಶಂಕರದಾಸಿಮಯ್ಯನ ಇಷ್ಟದೇವತೆ ಅಥವಾ ಅವನ ಗುರುವಿಗೆ ಸಂಬಂಧಿಸದೆ ಇದ್ದ ಬೇರೊಂದು ಮುದ್ರಿಕೆಯನ್ನು ಉಪಯೋಗಿಸುವದರಿಂದ ಅವನು ಶಂಕರ ದಾಸಿಮಯ್ಯನಿರದೆ ಬೇರೊಬ್ಬ ಶರಣನೆಂದು ನಮಗೆ ತೋರುತ್ತದೆ.

ಶಂಕರ ದಾಸಿಮಯ್ಯನು ಬಸವೇಶ್ವರನಕಿಂತಲೂ ಒಂದು ನೂರು ವರ್ಷ ಮೊದಲಿನವನಾಗಿದ್ದಾನೆ. ಅವನು ದೇವರ ದಾಸಿಮಯ್ಯನ ಸಮಕಾಲೀನನಾ ವರೂ ದೇವರ ದಾಸಿಮಯ್ಯನಕಿಂತಲೂ ಸ್ವಲ್ಪ ಹಿಂದುಗಡೆ ಪ್ರಸಿದ್ಧಿಗೆ ಬಂದ ವನೆಂದು ನಮಗೆ ತೋರುತ್ತದೆ. ಶಂಕರ ದಾಸಿಮಯ್ಯನು ಕಂವಗಲ್ಲಿನಿಂದ ನವಿಲೆಗೆ ಬರುವವರೊಳಗಾಗಿಯೇ ದೇವರ ದಾಸಿಮಯ್ಯನು ಪ್ರಸಿದ್ಧಿಗೆ ಬಂದು ತವನಿಧಿಯನ್ನು ಪಡೆದವನಾಗಿದ್ದನು. ಇದು ಶಂಕರ ದಾಸಿಮಯ್ಯನ ಚರಿತ್ರೆಗಳಿಂದ ತಿಳಿದು ಬರುತ್ತದೆ. ಶಂಕರ ದಾಸಿಮಯ್ಯನು ಹಿಂದಿನವನೆಂಬುದು ಕೆಳಗಿನ ಸಂಗತಿಯಿಂದಲೂ ದೃಢಪಡುತ್ತದೆ.

ಜಯಸಿಂಹನು ಪೊಟ್ಟಲ ಕೆರೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳುತ್ತಿದ್ದ ಅವನು ೧೦೪೦ ಮತ್ತು ೧೦೪೨ ರ ಮಧ್ಯದಲ್ಲಿ ತೀರಿಕೊಂಡನು. ದೇವರ ದಾಸಿಮಯ್ಯನು ಪೊಟ್ಟಲ ಕೆರೆಯಲ್ಲಿ ಜಯಸಿಂಹನನ್ನು ಕಂಡನೆಂಬ ಉಲ್ಲೇಖಗಳು ಅವನ ಎಲ್ಲ ಗ್ರಂಥಗಳಲ್ಲಿಯೂ ಇರುತ್ತವೆ. ಇವುಗಳಲ್ಲಿ ಕಲ್ಯಾಣದ ಉಲ್ಲೇಖವಾವುದೂ ಇರುವದಿಲ್ಲ. ಆದರೆ ಶಂಕರ ದಾಸಿಮಯ್ಯನು ಪೊಟ್ಟಲ ಕೆರೆಗೆ ಬಂದಿದ್ದನೆಂಬ ಉಲ್ಲೇಖಗಳು ಅವನ ಯಾವ ಚರಿತ್ರೆಯಲ್ಲಿಯೂ ಬರದೆ, ಅವನ ಪವಾಡವು ಆದದ್ದು ಕಲ್ಯಾಣದಲ್ಲಿ, ಎಂದು ಅವುಗಳಲ್ಲಿ ಹೇಳಲ್ಪಡುತ್ತಿದೆ. ಆದರೆ ಕಲ್ಯಾಣವು ಚಾಲುಕ್ಯರ ರಾಜಧಾನಿಯಾದದ್ದು ೧೦೫೩ ರಲ್ಲಿ. ಅದು ಅದೇ ವರ್ಷದಲ್ಲಿ ಸ್ಥಾಪಿಸಲ್ಪಟ್ಟಿತೆಂದು ಬಿಲ್ಹಣ ಕವಿಯು ತಾನು ಸಂಸ್ಕೃತದಲ್ಲಿ ಬರೆದ ವಿಕ್ರಮಾಂಕ ದೇವ ಚರಿತ್ರೆಯಲ್ಲಿ ಹೇಳಿದ್ದಾನೆ. ಹೀಗೆ ಉಲ್ಲೇಖವಿದ್ದ ಶ್ಲೋಕದ ಅರ್ಥವನ್ನು ಡಾ|| ಪ್ಲೀಟರು ಕಲ್ಯಾಣವನ್ನು ರಾಜನು ಶೃಂಗರಿಸಿದನೆಂದು ಮಾಡುತ್ತಿದ್ದರೂ ಸಂಸ್ಕೃತಜ್ಞರಾದ ಡಾ|| ಭಾಂಡಾರಕರರವರು ಅದರ ಅರ್ಥವು ಹಾಗಿರದೆ ರಾಜನು ಅದನ್ನು 'ರಚಿಸಿದನೆ'ಂದು ಆಗುತ್ತದೆಂದು ತಮ್ಮ 'ಹಿಸ್ಟರಿ ಆಫದಿ ಡೆಕ್ಕನ್ನ' ಈ ಗ್ರಂಥದಲ್ಲಿ ಬರೆದಿದ್ದಾರೆ. ಆದುದರಿಂದ ಶಂಕರ ದಾಸಿಮಯ್ಯನು ಪ್ರಸಿದ್ಧಿಗೆ ಬಂದುದು ೧೦೫೩ ರ ತರುವಾಯ ಅಂದರೆ ದೇವರ ದಾಸಿಮಯ್ಯನು ಪೊಟ್ಟಲ ಕೆರೆಗೆ ಬಂದು ಹೋದ ಬಳಿಕ ಕೆಲವು ವರ್ಷಗಳಾದ ಮೇಲೆ ಎಂದು ಗೊತ್ತಾಗುತ್ತದೆ.

ಜಯಸಿಂಹ ರಾಜನು ರಾಜ್ಯವಾಳಿದುದು ೧೦೪೨ ರ ವರೆಗೆ ಮಾತ್ರ. ಆ ಮೇಲೆ ೧ ನೇ ಸೋಮೇಶ್ವರ-ಆಹವಮಲ್ಲ-ತ್ರೈಲೋಕ್ಯ ಮಲ್ಲನು ೧೦೪೨

ರಿಂದ ೧೦೬೮ ರ ವರೆಗೆ ರಾಜ್ಯವಾಳಿದನು. ಇವನೇ ಕಲ್ಯಾಣ ಪಟ್ಟಣವನ್ನು ಕಟ್ಟಿಸಿ ಅಲ್ಲಿ ರಾಜ್ಯವಾಳ ಹತ್ತಿದನು. ಆದ್ದರಿಂದ ಶಂಕರ ದಾಸಿಮಯ್ಯನು ಪ್ರಸಿದ್ಧಿಗೆ ಬಂದವದ್ದು ಜಯಸಿಂಹ ರಾಜನಲ್ಲಿ ಅಲ್ಲ, ಆದರೆ ೧ ನೇ ಸೋಮೇಶ್ವರ ಅಥವಾ ಆಹವಮಲ್ಲ ಈತನ ಕಾಲದಲ್ಲಿ ಎಂದು ತಿಳಿಯಬೇಕಾಗುತ್ತದೆ.

ಒಂದು ವೇಳೆ ನಾವು ಶಂಕರ ದಾಸಿಮಯ್ಯನು ಜಯಸಿಂಹನ ಕಾಲದಲ್ಲಿ ಪ್ರಸಿದ್ಧಿಗೆ ಬಂದನೆಂದ. ಭಾವಿಸಿದರೆ ಜಯಸಿಂಹನು ಮೊದಲು ಜೈನನಿದ್ದು ಆ ಮೇಲೆ ಅವನು ದೇವರ ದಾಸಿಮಯ್ಯ-ಸುಗ್ಗಳಿಯರ ಮೂಲಕ ವೀರಶೈವನಾದನು, ಆ ಮೇಲೆ ವೀರಶೈವ ಧರ್ಮವನ್ನು ಬಿಟ್ಟುಕೊಟ್ಟು ವಿಷ್ಣು ಧರ್ಮವನ್ನು ಪಾಲಿಸಹತ್ತಿದನು, ಆ ಮೇಲೆ ಶಂಕರ ದಾಸಿಮಯ್ಯನ ಮೂಲಕ ಪುನಃ ಅವನು ವೀರಶೈವ ಧರ್ಮವನ್ನು ಪುರಸ್ಕರಿಸುವವನಾದನು ಹೀಗೆ ತಿಳಿಯಬೇಕಾಗುತ್ತದೆ. ಅಂದರೆ ಅವನು ಅನೇಕ ಬಾರಿ ಧರ್ಮಾಂತರ ಮಾಡಿದನೆಂದು ಅನುಮಾನ ಮಾಡಬೇಕಾಗುತ್ತದೆ. ಇದು ಸಂಭವನೀಯವಾಗಿ ತೋರುವದಿಲ್ಲ.

ಆದರೆ ಜಯಸಿಂಹನು ದೇವರ ದಾಸಿಮಯ್ಯನ ಮೂಲಕ ವೀರಶೈವ ಧರ್ಮವನ್ನು ಹೊಂದಿದ ಬಳಿಕ ಅವನು ಅದನ್ನೇ ಪರಿಪಾಲಿಸುತ್ತ ಬಂದುದೂ ಅವನ ತರುವಾಯ ಅರಸನಾದ ಸೋಮೇಶ್ವರನು ಚಾಲುಕ್ಯರ ಮೊದಲಿನ ವಿಷ್ಣು ಧರ್ಮವನ್ನು ಅನುಸರಿಸುತ್ತಿರಲು ಶಂಕರ ದಾಸಿಮಯ್ಯನ ಮೂಲಕ ಅವನು ಶಿವೋಪಾಸಕನಾದುದೂ ಹೆಚ್ಚಿಗೆ ಸಂಭವನೀಯವೂ ಸ್ವಾಭಾವಿಕವಾದುದೂ ಇರುತ್ತದೆ.

ಸೋಮೇಶ್ವರನು ೧೦೬೮ ರಲ್ಲಿ ತೀರಿಕೊಳ್ಳುವ ಮುಂಚೆ ಅವನಿಗೆ ಜ್ವರ ಬರಲು ತುಂಗಭದ್ರೆಯಲ್ಲಿ ಜಲ ಸಮಾಧಿಯನ್ನು ಹೊಂದಿದನೆಂದೂ ಆ ಸಮಯದಲ್ಲಿ ಅವನು ತಾನು ಶಿವಭಕ್ತನೆಂದು ಹೇಳುತ್ತ ಸಮಾಧಿಸ್ಥನಾದನೆಂದೂ ಶಾಸನಗಳಲ್ಲಿ ಉಲ್ಲೇಖಗಳಿವೆ. ಇದು ಲಕ್ಷಿಸತಕ್ಕ ಸಂಗತಿಯಾಗಿದೆ.

ಆದರೆ ಶಂಕರ ದಾಸಿಮಯ್ಯನ ಉಲ್ಲೇಖಗಳಲ್ಲೆಲ್ಲ ಅವನು ಜಯಸಿಂಹನ ಕಾಲದಲ್ಲಿದ್ದನೆಂತಲೇ ಹೇಳಲ್ಪಟ್ಟಿದೆ. ಆದರೆ ಅವುಗಳನ್ನು ಲಿಖಿಸಿದವರು ಪುರಾತನ ರಾಜಮನೆತನಗಳ ಇತಿಹಾಸವನ್ನು ಅರಿಯದವರಾದ

ವ್ವರಿಂದ ಅವರು ಹೀಗೆ ಬರೆದಿರಬಹುದು. ಇಷ್ಟೇ ಅಲ್ಲ, ಕೆಲವೆಡೆಗಳಲ್ಲಿ ಶಂಕರ ದಾಸಿಮಯ್ಯ ದೇವರ ದಾಸಿಮಯ್ಯ ಈ ಉಭಯತರ ಚರಿತ್ರಾಂಶ ಗಳನ್ನು ಬಸವೇಶ್ವರನಿಗೆ ಸಂಬಂಧಿಸಿ ಸಹ ಹೇಳುವದುಂಟು. ಆದರೆ ಇತಿಹಾಸ ಸಂಶೋಧನೆಯ ಈ ಕಾಲದಲ್ಲಿ ಯಾವುದು ಇತಿಹಾಸದಲ್ಲಿ ಹೆಚ್ಚಿಗೆ ಸಂಭವನೀಯವೋ ಅದನ್ನೇ ನಾವು ಜನರ ಮುಂದಿಡುವದು ಅವಶ್ಯವೆಂದು ತೋರುತ್ತದೆ.

ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ ಇವರ ಹೆಸರುಗಳನ್ನು ಯಾವಾಗಲೂ ಜೋಡಿಯಾಗಿಯೇ ತೆಗೆದುಕೊಂಡು ಹೇಳುವ ಸಾಂಪ್ರದಾಯ ಉಂಟು. ಹೇಗೆ ಬಸವ-ಚನ್ನಬಸವ, ಪ್ರಭುದೇವ-ಸಿದ್ಧರಾಮ ಇವರ ಹೆಸರುಗಳನ್ನು ಕೂಡಿಯೇ ಹೇಳುವದುಂಟೋ, ಹಾಗೆ ದೇವರದಾಸಿ ಮಯ್ಯ-ಶಂಕರ ದಾಸಿಮಯ್ಯ ಎಂದು ಹೇಳುವ ಪದ್ಧತಿ ಇರುತ್ತದೆ. ಇವರು ಒಂದೇ ಕಾಲದಲ್ಲಿದ್ದವರಿಂದ ಈ ಪದ್ಧತಿಯು ಉಂಟಾಗಿರಬಹುದು.

ಇವರಲ್ಲಿ ದೇವರ ದಾಸಿಮಯ್ಯನು ಕರ್ನಾಟಕದ ಮಧ್ಯಭಾಗವಾದ ಮುದನೂರಲ್ಲಿ ಇದ್ದು ಈಗಿನ ವಿಜಾಪುರ ಜಿಲ್ಲೆಯ ಪೂರ್ವಭಾಗ, ಮತ್ತು ಕಲಬುರ್ಗಿ, ಬೀದರ ಜಿಲ್ಲೆಗಳಲ್ಲಿ ಹೆಚ್ಚಾಗಿ ಧರ್ಮ ಜಾಗ್ರತಿಯ ಕಾರ್ಯ ಮಾಡಿದ್ದರಿಂದ ಅವನ ಉಲ್ಲೇಖಗಳಿದ್ದ ಶಿಲಾಶಾಸನಗಳು ನಮಗೆ ಇಲ್ಲಿಉಪ ಲಬ್ಧವಾಗಿರುತ್ತವೆ. ಇದರಿಂದ ಅವನು ರಚಿಸಿದ ವಚನಗಳೂ ಕೂಡ ಹೆಚ್ಚಾಗಿ ಜನರಲ್ಲಿ ಪ್ರಚಾರ ಹೊಂದಿರುತ್ತವೆ. ಆದರೆ ಶಂಕರ ದಾಸಿಮ ಯ್ಯನ ಚರಿತ್ರೆಯನ್ನು ನಾವು ನಿರೀಕ್ಷಿಸಿದಲ್ಲಿ ಅವನು ಹೆಚ್ಚಾಗಿ ಕರ್ನಾಟಕ ದಲ್ಲಿರದೆ ಕಲ್ಯಾಣದ ಉತ್ತರ ಭಾಗದಿಂದ ಉಜ್ಜಯಿನಿ ವರೆಗಿನ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿಯ ಸಾತಾರಾ ಜಿಲ್ಲೆ ಇಲ್ಲಿ ಹೆಚ್ಚಿಗೆ ಕಾರ್ಯಮಾಡಿ ದಂತೆ ಕಂಡುಬರುತ್ತದೆ. ಆದ್ದರಿಂದ ಅವನ ಉಲ್ಲೇಖಗಳಿದ್ದ ಕನ್ನಡ ಶಿಲಾ ಶಾಸನಗಳೂ ಅವನ ವಚನಗಳೂ ನಮಗೆ ದೊರೆಯದಿರಲಿಕ್ಕೆ ಇದು ಒಂದು ಕಾರಣವಾಗಿರಬಹುದು.

ಮಹಾರಾಷ್ಟ್ರ ದೇಶದಲ್ಲಿ ಶಂಕರ ದಾಸಿಮಯ್ಯನು ಹೆಚ್ಚಾಗಿ ಕಾರ್ಯ ಮಾಡಿದ್ದರಿಂದ ಅಲ್ಲಿ ಬಹುಜನರು ಅವನ ಅನುಯಾಯಿಗಳಾಗಿ ವೀರಶೈವ ಧರ್ಮವನ್ನು ಸ್ವೀಕರಿಸಿರಬಹುದು. ಅವನು ಕ್ಷುದ್ರ ದೇವತೆಗಳ ಮೇಲಿನ

ಜನರ ವಿಶ್ವಾಸವನ್ನು ದೂರಮಾಡಿ ಹಿಂಸಾಚಾರಗಳಿಂದ ಅವರನ್ನು ಪರಾವೃತ್ತಮಾಡಿ ಪರಮಾತ್ಮನ ಬಗ್ಗೆ ಶಿವಶರಣರ ಉಚ್ಚ ವಿಚಾರಗಳನ್ನು ನೆಲೆಗೊಳಿಸಿದ್ದರಿಂದ ಅವನ ಅನುಯಾಯಿಗಳಿಗೆ 'ನಾಗರಿಕರು' ಎಂದರೆ ಸುಧಾರಿಸಿದವರು ಎಂಬ ಹೆಸರು ಮಹಾರಾಷ್ಟ್ರದಲ್ಲಿ ಆಗ ಬಂದಿರಬಹುದು. ಆದರೆ ರೂಢಿಯಲ್ಲಿ ಈ ಶಬ್ದವು ಮುಂದೆ ರೂಪಾಂತರ ಹೊಂದಿ 'ನಾಗಲಿಕರು' ಎಂದು ಆಗಿರಬಹುದು. ಶಂಕರ ದಾಸಿಮಯ್ಯನು ಹೊಲಿಗೆಯ ಕಾಯಕವನ್ನು ಮಾಡುತ್ತ ಪ್ರಸಿದ್ಧಿಗೆ ಬಂದವನಾದ್ದರಿಂದ ಈ ಕಾಯಕ ಮಾಡುವವರೆಲ್ಲರು ತಾವು ಶಂಕರ ದಾಸಿಮಯ್ಯನ ಶಿಷ್ಯರೆಂದು ಭಾವಿಸಿಕೊಂಡ ಮೂಲಕ ಮೊದಲು ಸಾಮಾನ್ಯವಾಗಿ ಈ ನಾಡಿನಲ್ಲಿಯ ವೀರಶೈವರಿಗೆಲ್ಲ ಉಪಯೋಗಿಸಲ್ಪಡುತ್ತಿದ್ದ ನಾಗರಿಕ ಅಥವಾ ನಾಗಲಿಕ ಈ ಶಬ್ದವು ಈ ಕಾಯಕದವರಿಗೆ ಮಾತ್ರ ಮುಂದೆ ಉಪಯೋಗಿಸಲ್ಪಡುವ ರೂಢಿಯು ಉಂಟಾಗಿರಬಹುದು.

ಮಹಾರಾಷ್ಟ್ರದಲ್ಲಿ ಅನೇಕ ಕಡೆಗೆ ನಾಗಲಿಕರೆಂದು ಕರೆದುಕೊಳ್ಳುವ ಬಣಗಾರ ಸಮಾಜದವರು ಬಹಳ ಜನರು ಇದ್ದಾರೆ. ಇದು ಪೂರ್ವ ಕಾಲದಲ್ಲಿ ಶಂಕರ ದಾಸಿಮಯ್ಯನು ಮಹಾರಾಷ್ಟ್ರ ಪ್ರಾಂತದಲ್ಲಿ ವೀರಶೈವ ಧರ್ಮದ ಪ್ರಚಾರ ಮಾಡಿದ್ದರ ಪರಿಣಾಮವಾಗಿರಬಹುದು.

ದೇವರ ದಾಸಿಮಯ್ಯನು ಬಹಳ ಕಾಲ ಕರ್ನಾಟಕದಲ್ಲಿದ್ದುಕೊಂಡು ಕಾರ್ಯ ಮಾಡಿದ್ದರಿಂದ ಅವನ ಇಷ್ಟದೇವತೆಯಾದ ಮುದುನೂರಿನ ರಾಮನಾಥನ ಮಹತ್ವವು ಮತ್ತು ದೇವರ ದಾಸಿಮಯ್ಯನ ಕೀರ್ತಿಯು ಬಹಳ ವಿಸ್ತಾರವಾಗಿ ಹಬ್ಬಿದಂತೆ ತೋರುತ್ತದೆ. ಇದರಿಂದ ಅವನು ಒಂದು ಶಾಸನದಲ್ಲಿ ಧರೆ ಕೊಂಡಾಡುವ ದಾಸಿಮಯ್ಯನು ಎಂದು ಹೇಳಲ್ಪಟ್ಟಿದ್ದಾನೆ. ಮತ್ತು ರಾಮನಾಥನ ಮುದ್ರಿಕೆಯುಳ್ಳ ಅನೇಕ ವಚನಕಾರರು ಆಗಿಹೋಗಿದ್ದಾರೆ. ಆದರೆ ಶಂಕರ ದಾಸಿಮಯ್ಯನು ಬಹಳ ದಿವಸ ಕರ್ನಾಟಕದಲ್ಲಿ ವಾಸಮಾಡದೆ ಇದ್ದದರಿಂದ ಅವನನ್ನು ಉಲ್ಲೇಖಿಸುವ ಶಾಸನಗಳು ಮತ್ತು ಅವನ ಗುರುತಿನ ಸ್ಥಳಗಳು ಇಲ್ಲಿ ಬಹಳ ಕಡೆಗೆ ದೊರೆಯದೆ ಇರಲಿಕ್ಕೆ ಇದು ಒಂದು ಕಾರಣವಾಗಿರಬಹುದು.

ಈಗಿನ ಕಾಲದಲ್ಲಿ ನೆಯ್ಗೆಯ ಕಾಯಕದವರು ದೇವರ ದಾಸಿಮಯ್ಯನ, ಬಣ್ಣಗಾರರು ಶಂಕರ ದಾಸಿಮಯ್ಯನ, ಅಗಸರು ಮಡಿವಾಳ ಮಾಚಿದೇವನ,

ಕುಂಬಾರರು ಕುಂಬಾರ ಗುಂಡಯ್ಯನ ಸಾಂಪ್ರದಾಯದವರೆಂದು ಆಯಾ ಸಮಾಜದವರು ಹೇಳಿಕೊಳ್ಳುವ ರೂಢಿಯುಂಟಾಗಿದೆ. ಆದರೆ ಹಿಂದಿನ ಕಾಲದಲ್ಲಿ ಯಾವ ಶಿವಶರಣರಾದರೂ ಹೀಗೆ ಹೇಳಿಕೊಳ್ಳದೆ ಜಾತಿ, ಮತ, ಗೋತ್ರಗಳನ್ನೆಣಿಸದೆ ಎಲ್ಲರ ಉದ್ಧಾರಕ್ಕಾಗಿ ಪ್ರಯತ್ನಿಸಿದ್ದಾರೆ. ಶಿವಶರಣರ ಹೆಸರುಗಳನ್ನು ಆಯಾ ಪಂಗಡದವರು ಹೀಗೆ ಬೇರೆಬೇರೆಯಾಗಿ ಹೇಳಿಕೊಳ್ಳುವದು ಜಾತಿ ಪ್ರಧಾನವಾದ ಈಚಿನ ಕಾಲದಲ್ಲಿ ಬಂದಿರುತ್ತದೆ.

ಉಜ್ಜಯಿನಿಯು ಬಳ್ಳಾರಿ ಜಿಲ್ಲೆಯಲ್ಲಿರುವ ಉಜ್ಜಿನಿಯಾಗಿರದೆ ಮಾಳವಾ ದೇಶದಲ್ಲಿರುವ ಉಜ್ಜಯಿನಿಯೇ ಇರುತ್ತದೆಂದು ಶಂಕರ ದಾಸಿಮಯ್ಯನ ಚರಿತ್ರೆಯನ್ನು ಒಟ್ಟಾರೆ ನಿರೀಕ್ಷಿಸಿದಲ್ಲಿ ಕಂಡುಬರುತ್ತದೆ. ಈ ಕಾಲದಲ್ಲಿ ಚಾಲುಕ್ಯರಿಗೆ ಗುಜರಾಥ ಮತ್ತು ಮಾಳವಾ ದೇಶದ ಅರಸರುಗಳ ಕೂಡ ಯುದ್ಧ ಮಾಡುವ ಪ್ರಸಂಗಗಳು ಆಗಿಂದಾಗ್ಗೆ ಬರುತ್ತಿದ್ದವು. ಆದ್ದರಿಂದ ಉಜ್ಜಯಿನಿಯು ಹಿಂದಿನಕಾಲದ ಕರ್ನಾಟಕಸ್ಥರಿಗೆ ಅಪರಿಚಿತವಾದ ಪಟ್ಟಣವಾಗಿರಲಿಲ್ಲ. ಗುಜರಾಥ, ಮಾಳವಾ, ಕಾಶಿ, ಕಾಶ್ಮೀರ, ಮತ್ತು ಬಂಗಾಲ ಈ ದೇಶಗಳ ವಿದ್ವಜ್ಜನರು ಕರ್ನಾಟಕಕ್ಕೆ ಬರುತ್ತಿದ್ದವರಿಂದ ಈ ದೇಶಗಳ ಉಲ್ಲೇಖಗಳು ಶಿವಶರಣರ ಚರಿತ್ರೆಗಳಲ್ಲಿ ಆಗಿಂದಾಗ್ಗೆ ಬರುತ್ತವೆ. ಇದಲ್ಲದೆ ರೇವಣಸಿದ್ಧ, ಅಲ್ಲಮ ಪ್ರಭು, ವರದಾನಿ ಗುಡ್ಡಮ್ಮ ಮೊದಲಾದವರು ಧರ್ಮಪ್ರಸಾರ ಮಾಡುತ್ತ ಉತ್ತರ ಮತ್ತು ದಕ್ಷಿಣ ದೇಶಗಳಲ್ಲಿ ಸಂಚಾರ ಮಾಡಿದ್ದು ಅವರವರ ಚರಿತ್ರೆಗಳಿಂದ ಕಂಡುಬರುತ್ತದೆ.

ಶ್ರೀಯುತ ವೀರಭದ್ರಪ್ಪ ಬಸವಪ್ಪ ಹಾಲಭಾವಿಯವರು ನಿವೃತ್ತ ಮೊದಲನೇ ವರ್ಗ ಸಬ್‌ಜಡ್ಜ ಧಾರವಾಡ ಇವರು ನವಿಲೆ ಗ್ರಾಮವು ಅವುದೆಂಬುದನ್ನು ಬಹು ಪರಿಶ್ರಮ ಪೂರ್ವಕವಾಗಿ ಸಂಶೋಧಿಸಿ ಇದು ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನದೀತೀರದಲ್ಲಿರುವ ನವಿಲೆಯಾಗಿರದೆ ಕೃಷ್ಣಾನದೀ ತೀರದಲ್ಲಿ ಹುನಗುಂದ ತಾಲೂಕಿನ ಮೇರೆಯಲ್ಲಿ ರಾಯಚೂರ ಜಿಲ್ಲೆಯಲ್ಲಿರುವ ನವಿಲೆ ಎಂದು ಸಿದ್ಧಪಡಿಸಿದ್ದಾರೆ. ಇಲ್ಲಿ ಜಡೆಯ ಶಂಕರನ ದೇವಾಲಯವು ಈಗಲೂ ಇದೆ. ಅದರಲ್ಲಿದ್ದ ಲಿಂಗದ ಹಿಂದೆ ಜಡೆಯನ್ನು ಹಿಕ್ಕಿದ ಹಾಗೆ ಆಕೃತಿಯು ತೋರಿಸಲ್ಪಟ್ಟಿದೆ. ದೇವಾಲಯದ ಆವಾರದಲ್ಲಿ ಮೂರು ಶಿಲಾಶಾಸನಗಳಿದ್ದು ಇವುಗಳಲ್ಲಿ ಚಾಲುಕ್ಯ ರಾಜರಾದ ೫ನೇ ವಿಕ್ರಮಾದಿತ್ಯ—ತ್ರಿಭುವನಮಲ್ಲ,೧ ನೇ ಸೋಮೇಶ್ವರ—ಆಹವಮಲ್ಲ, ೩ನೇ ಸೋಮೇಶ್ವರ—

ಭೂಲೋಕಮಲ್ಲ ಇವರ ಉಲ್ಲೇಖಗಳಿವೆ. ಈ ಶಾಸನಗಳಿಂದ ಈ ಸ್ಥಾನವು ಈ ಕಾಲದಲ್ಲಿ ಪುಣ್ಯಕ್ಷೇತ್ರವಾಗಿ ಭಾವಿಸಲ್ಪಟ್ಟಿದ್ದು ಕಂಡುಬರುತ್ತದೆ. ಇಂಥ ಪುಣ್ಯಸ್ಥಳದಲ್ಲಿ ಶಂಕರ ದಾಸಿಮಯ್ಯನು ಇದ್ದುಕೊಂಡು ಶಿವಾನುಭವದ ರೀತಿ ನಡೆಗಳನ್ನು ನಾಡಿನಲ್ಲಿ ಪ್ರಸಾರಮಾಡಿ ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದಾನೆ.

---

## ವೀರ ಶಂಕರದೇವ.

ವೀರ ಶಂಕರದೇವನೆಂಬ ಶಿವಶರಣನು ವಚನಕಾರನಿದ್ದಾನೆ. ಅವನ ಮುದ್ರಿಕೆಯು "ಘನಗುರುಶಿವಲಿಂಗ ರಾಮನಾಥಾ" ಎಂದಿರುತ್ತದೆ. ಈ ಮುದ್ರಿಕೆಯ ಮೇಲಿಂದ ಆತನು ಮೂಡಸೂರಿನ ರಾಮನಾಥ ಲಿಂಗದ ಭಕ್ತನಾಗಿದ್ದನೆಂದು ವ್ಯಕ್ತವಾಗುತ್ತಿದ್ದು ಅವನು ಈ ದೇವಾಲಯವಿದ್ದ ಪ್ರದೇಶದವನಾಗಿರಬೇಕೆಂದು ತೋರುತ್ತದೆ. ಅವನ ಒಂದೇ ಒಂದು ವಚನವು ಉಪಲಬ್ಧವಾಗಿದ್ದು ಅದಾದರೂ ಬಹು ದೀರ್ಘವಾಗಿದೆ. ಇದರಲ್ಲಿ ಅವನು ವೀರಶೈವರಲ್ಲಿ ಜಾತಿ ಭೇದಗಳಿಲ್ಲ, ಅವರು ಒಬ್ಬನೇ ದೇವನನ್ನು ನಂಬಬೇಕು, ವಿಷ್ಣು ಮೊದಲಾದ ಅನೇಕ ದೈವಗಳನ್ನು ಭಜಿಸಕೂಡದು, ಎಂದು ಅತಿ ಸ್ಪಷ್ಟ ಶಬ್ದಗಳಿಂದ ಬೋಧಿಸಿದ್ದಾನೆ. ಅದನ್ನು ನಾವು ಈ ಚರಿತ್ರೆಯ ಅಂತ್ಯದಲ್ಲಿ ಕೊಟ್ಟಿದ್ದೇವೆ.

ವೀರ ಶಂಕರ ದೇವನು ಗಣಾಚಾರವನ್ನು ಪಾಲಿಸುವವನಾಗಿ, ಲಿಂಗವನ್ನೊಂದನ್ನೇ ನಂಬುವೆನು, ಲಿಂಗ ವಿರಹಿತರಾದ ಭವಿಗಳನ್ನು ಮುಟ್ಟೆನು, ಒಂದು ವೇಳೆ ಮುಟ್ಟಿದಲ್ಲಿ ತನ್ನಂಗವನ್ನು ಅಗ್ನಿಗೆ ಆಹುತಿಯನಿಕ್ಕುವೆನು ಎಂಬ ಕಟ್ಟಾಚಾರವನ್ನು ಮಾಡಿಕೊಂಡು ಅದರಂತೆ ಅವನು ಆಚರಿಸುತ್ತಲಿದ್ದನು. ಜಾಗ್ರತ್ ಸ್ವಪ್ನಗಳಲ್ಲಿ ಸಹ ಲಿಂಗ ಭಾವವುಳ್ಳವನಾಗಿ ಲಿಂಗವನ್ನೇ ನೆನೆಯುವವನಾಗಿ ಲಿಂಗಾಚಾರವುಳ್ಳವನಾಗಿದ್ದನು.

ಹೀಗಿರುವಲ್ಲಿ ಒಂದು ದಿನ ಅವನು ನಿದ್ದೆ ಹೋಗಿರಲು ಒಬ್ಬ ಅಲಿಂಗಿಯು ಅವನ ಕನಸಿನಲ್ಲಿ ಬಂದು ಅವನೊಡನೆ ಲಿಂಗದ ವಿಷಯವಾಗಿ ವಾದಿಸುತ್ತ ಅವನ ಸೆರಗನ್ನು ಹಿಡಿದು ಎಳೆದನು. ಎಳೆದ ಕೂಡಲೆ ಅವನು

ಎಚ್ಚತ್ತು—ಅಯ್ಯೋ, ನನ್ನ ಆಚರಣೆಯ ಕಟ್ಟಿಗೆ ಭಂಗ ಬಂದಿತೇ? ಈ ರೀತಿ ಸ್ವಪ್ನವಾಗಬೇಕಾದರೆ, ತನ್ನಿಂದ ಕೆಲವೊಂದು ಪ್ರಮಾದವಾಗಿರಬಹುದು ಎಂದು ಯೋಚಿಸಿ—ನಾನು ಕಟ್ಟು ಮಾಡಿಕೊಂಡಂತೆ ಪ್ರಾಯಶ್ಚಿತ್ತದ ಗೊತ್ತನ್ನು ಮುಟ್ಟಬೇಕೆಂದು ನಿಶ್ಚಯಿಸಿಕೊಂಡನು.

ಆಗ ಅವನು ಪುಣ್ಯ ಕ್ಷೇತ್ರವೆನಿಸಿಕೊಂಡ ಶ್ರೀ ಶೈಲಕ್ಕೆ ಬಂದು ಅಲ್ಲಿ ಹಾಟಕೇಶ್ವರ ಲಿಂಗವಿದ್ದಲ್ಲಿಗೆ ಆಗಮಿಸಿ, ಅಲ್ಲಿ ಬಹುಜನ ಶಿವಭಕ್ತರು ನೆರೆದಿರಲು, ಅವರೆದಿರಿಗೆ ಅವನು ಹೋಗಿ ಎಲ್ಲರಿಗೂ ವಂದಿಸಿ ಅವರಿಗೆ—ನನ್ನಿಂದ ಒಂದು ಮಹಾ ಪ್ರಮಾದವಾಗಿದೆ ಎಂದು ತನ್ನ ಸ್ವಪ್ನವಲ್ಲಾದ ಎಲ್ಲ ಸಂಗತಿಗಳನ್ನು ಅವರಿಗೆ ತಿಳಿಸಿ ಒಂದು ಕಾವಲಿಯನ್ನು ಕಾಯಿಸಿ ಅದರ ಮೇಲೆ ತನ್ನನ್ನು ದಹಿಸಿಕೊಳ್ಳಬೇಕೆಂದು ಅದರ ಮೇಲೆ ಕುಳಿತು ಬಿಟ್ಟನು.

ಪರಮಾತ್ಮನು ಅದನ್ನು ನೋಡಿ ಮೆಚ್ಚಿ ಅವನ ಕರವನ್ನು ಹಿಡಿದು ಅವನಿಗೆ—ವೀರ ಶಂಕರ ದೇವನೇ, ನಿನ್ನ ನಿಷ್ಠೆಗೆ ನಾನು ಮೆಚ್ಚಿದೆನು. ನಿನ್ನ ಇಷ್ಟಾರ್ಥವೇನೆಂದು ಕೇಳಲು, ಆ ಶಿವಶರಣನು—ನನ್ನ ಆಚಾರವು ಮೀರಿತ್ತು, ನನ್ನ ಪಂಥಕ್ಕನುಸಾರವಾಗಿ ನಾನು ನನ್ನ ಪ್ರಾಣವನ್ನು ಬಿಡುವೆನೆಂದು ಹೇಳಿದನು.

ಅದಕ್ಕೆ ಪರಮಾತ್ಮನು—ನಿನ್ನ ವೀರಭಕ್ತಿಯನ್ನು ಪರೀಕ್ಷಿಸಲು ನಾನು ಆ ರೀತಿ ಶಂಕೆಯ ಸ್ವಪ್ನವನ್ನು ನಿನಗೆ ಉಂಟು ಮಾಡಿದೆನೇ ಹೊರತು ಬೇರೊಂದಿಲ್ಲ. ನಿನಗೆ ನಾನು ಮೆಚ್ಚಿದೆನು ಎಂದು ಹೇಳಿ ಅವನನ್ನು ತನ್ನಲ್ಲಿ ಅಡಗಿಸಿಕೊಂಡನು.

ವೀರ ಶಂಕರ ದೇವನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಆದ್ದರಿಂದ ಇವನು ನೂತನ ಶರಣನಲ್ಲ. ಆದರೆ ಇವನಿಗೂ ಶಂಕರ ದಾಸಿಮಯ್ಯನಿಗೂ ಏನೂ ಸಂಬಂಧವಿಲ್ಲೆಂಬುದು ಈ ಚರಿತ್ರೆಯಿಂದ ವ್ಯಕ್ತವಾಗುತ್ತದೆ. ಇದನ್ನು ನಿರ್ದೇಶಿಸಲು ನಾವು ಅವನ ಚರಿತ್ರೆಯನ್ನು ಇಲ್ಲಿ ಕೊಟ್ಟಿದ್ದೇವೆ.

ಅವನ ವಚನವು ಕೆಳಗೆ ಉದಹರಿಸಲ್ಪಟ್ಟಿದೆ. ಅವನು ಇನ್ನೂ ಇದೇ ತೆರನಾಗಿ ಅನೇಕ ವಚನಗಳನ್ನು ರಚಿಸಿರಬಹುದು. ಆದರೆ ಅವು ನಮಗೆ ಉಪಲಬ್ಧವಾಗಿಲ್ಲ.

## ವಚನ.

ಶಿವಶಿವಾ ದ್ವಿಜರಾದ ನೀವು ಕೇಳಿರೋ. ನೀವು ಎಲ್ಲಾ ಜಾತಿಗೂ ಮಿಗಿಲೆಂದು 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂದು ಬಳ್ಳಿಟ್ಟು ನುಡಿವುತಿಪ್ಪಿರಿ. 'ಆದಿಪಿಂಡೋದ್ಭವೇ ಬೀಜಂ' ಎಂಬ ಶ್ರುತಿಯಿಂ ತಿಳಿದು ನೋಡಲು ಆದಿಯಲ್ಲಿ ನಿಮ್ಮ ಮಾತಾಪಿತರ ಕೀವು ರಕ್ತದ ಮಿಶ್ರಣದಿಂದ ನಿಮ್ಮ ಪಿಂಡ ಉದಯಿಸಿತ್ತು. ಆ ಕೀವು ರಕ್ತಕ್ಕೆ ಆವ ಕುಲ ಹೇಳಿರೇ? ಅದೂ ಅಲ್ಲದೆ ಪಿಂಡ ಒಂಬತ್ತು ತಿಂಗಳು ಒಡಲೊಳಗೆ ಕರುಳು ಮಲಮೂತ್ರ ಕೀವು ದುರ್ಗಂಧ ರಕ್ತ ಖಂಡ ಕಾಳಿಜ ಜಂತುಗಳೊಳಗೆ ಪಾಕುಳವೊಳಗಣ ಕ್ರಿಮಿಯಂತೆ ಹೊದ ಕುಳಿಯುಂ ಬಂದು ನೀನಾವ ಕುಲವ ಹೇಳಿರೇ? ಅದು ಅಲ್ಲದೆ ಮೂತ್ರದ ಗುಳಿಯ ಹೊರವಡುವಾಗ, ಹೊಲೆ ಮುಂತಾಗಿ ಮುದುಡಿ ಬಿದ್ದಲ್ಲಿ ಹೆತ್ತವಳು ಹೊಲತಿ ಹೋ. ಹುಟ್ಟಿದ ಮಗುವು ಹೊಲೆಯನೆಂದು ನಿಮ್ಮ ಕುಲಗೋತ್ರ ಮುಟ್ಟಲಮ್ಮದೆ ಹನ್ನೆರಡು ದಿನದಂದು ಪ್ರಾಯಶ್ಚಿತ್ತವನಿಕ್ಕಿಸಿ ಕೊಂಬಂದು ನೀವಾವ ಕುಲ ಹೇಳಿರೇ? ಮುಂಜಿಗಟ್ಟದ ಮುನ್ನ ಕೀಳು ಜಾತಿ, ಮುಂಜಿಗಟ್ಟಿದ ಬಳಿಕ ಮೇಲು ಜಾತಿಗಳು ಎಂಬ ಪಾತಕರು ನಿಮ್ಮ ನುಡಿಯ ಕೊರತೆಗೆ ನೀವು ಬಲು ನಾಚಬೇಡವೇ? ನೀವು ನಾಚದಿರ್ದಡೆ ನಾ ನಿಮ್ಮ ಕುಲದ ಬೇರನೆತ್ತಿ ತೋರಿಹೆನು. ನಾವು ಉತ್ತಮದ ಬ್ರಾಹ್ಮಣರೆಂಬ ನಿಮ್ಮ ದೇಹ ಬ್ರಾಹ್ಮಣೋ, ನಿಮ್ಮ ಪ್ರಾಣ ಬ್ರಾಹ್ಮಣೋ ಆವುದು? ದೇಹ ಕುಲಜನೆಂದರೆ ಚರ್ಮಕ್ಕೆ ಕುಲವಿಲ್ಲ. ಮಾಂಸಕ್ಕೆ ಕುಲವಿಲ್ಲ. ಎಲುವಿಂಗೆ ಕುಲವಿಲ್ಲ. ನರವಿಂಗೆ ಕುಲವಿಲ್ಲ, ರಕ್ತಕ್ಕೆ ಕುಲವಿಲ್ಲ. ಕೀವಿಂಗೆ ಕುಲವಿಲ್ಲ. ಕರುಳಿಂಗೆ ಕುಲವಿಲ್ಲ. ಮಲಮೂತ್ರಕಂತೂ ಕುಲವಿಲ್ಲ. ಕುಲವೆಲ್ಲಿಯದೋ ಒಡಲಿಂಗೆ? ಅದಂತಿರಲಿ. ನಿಮ್ಮ ಪ್ರಾಣಕ್ಕೆ ಕುಲ ಉಂಟೆಂಬರೆ, ಪ್ರಾಣ ದಶವಾಯುವಾದ ಕಾರಣ ಆ ವಾಯು ಹಾರುವನಲ್ಲ. ಅದುವಲ್ಲದೆ ನಿಮ್ಮ ಒಡಲನಲುಗಾಡಿ ಇರಿವ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳು ಉತ್ತಮ ಕುಲವೆಂಬ ಅವು ಮುನ್ನವೇ ಪಾಪಕಾರಿಗಳಾದ ಕಾರಣ ಅವಕ್ಕೆ ಕುಲವಿಲ್ಲ. ನಿಲ್ಲು ಮಾಣು. ನಿಮ್ಮೊಳಗಣ ಸಪ್ತವ್ಯಸನಂಗಳು ಉತ್ತಮ ಕುಲವೆಂಬ ಅವು ಮುನ್ನವೇ ದುರ್ವ್ಯಸನಂಗಳಾದ ಕಾರಣ ಅವಕೆಂದೂ ಕುಲವಿಲ್ಲ. ನಿಲ್ಲು ಮಾಣು. ನಿಮ್ಮ ಅಷ್ಟಮದಂಗಳು ಉತ್ತಮ ಕುಲವೆಂಬರವು ಸುರೆಯ ಸವಿದ ಕೋಡಗದ ಹಾಗೆ ಮುಂದುಗಾಣಲೀಯವಾದ ಕಾರಣ ಅವಕೆ ಕುಲವಿಲ್ಲ. ಇನ್ನು ಒಡಲ ತಾಪತ್ರಯಂ

ಗಳು ಉತ್ತಮ ಕುಲವೆಂಬಡೆ ಅವು ನಿಮ್ಮ ಉರಿಮುರಿದು ಸುಡುವ ಒಡಲ ಗಿಚ್ಚುಗಳು. ಅವಕೆ ಕುಲವಿಲ್ಲ. ನಿಲ್ಲು ಮಾಣು. ಉಳಿದ ಅಂತಃಕರಣಂಗಳಿಗೆ ಉತ್ತಮ ಕುಲವೆಂಬರೆ, ಅವನು ನೀವು ಕಾಣಿರಿ. ನಿಮ್ಮ ಮನವು ಕಾಣದು. ಇಂತು ನಿಮ್ಮ ಪಂಚಭೂತ ಸಪ್ತಧಾತು ಪಂಚೇಂದ್ರಿಯಂಗಳು ಉತ್ತಮ ಕುಲವೆಂಬ ಅವು ಎಲ್ಲ ಜೀವರಾಶಿಗೂ ನಿಮಗೂ ಸಮಾನ. ಅದೆಂತೆಂದೊಡೆ:—

ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ ।
ಆತ್ಮ ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ॥

ಎಂದುದಾಗಿ ನಿಮ್ಮ ದೇಹಕ್ಕೆ ಕುಲವಾವುದು ಹೇಳಿರೇ ? ಇದಲ್ಲದೆ ಆತ್ಮನು ದೇಹವ ಬಿಟ್ಟು ಒಂದು ಗಳಿಗೆ ತೊಲಗಿರಲು ಆ ದೇಹ ಹಡಿಕೆಯಾಗಿ ಹುಳಿತು ನಾಯಿ ನರಿ ತಿಂಬ ಕಾರಣ ನಿಮ್ಮ ದೇಹ ಅಪವಿತ್ರ ಕಾಣಿರೋ. ಇಂತಪ್ಪ ಅಪವಿತ್ರ ಕಾಯಕ್ಕೆ ಕುಲವಿಲ್ಲ. ಆ ಕಾಯಕ್ಕೆ ಕುಲ ಉಂಟೆಂದರೆ ಮೇಲು ಜಾತಿಯ ದೇಹವೊಳಗೆ ಹಾಲುಳ್ಳರೆ ಕೀಳು ಜಾತಿಯ ದೇಹವೊಳಗೆ ರಕ್ತವುಳ್ಳರೆ ಅದು ಕುಲವಹುದು. ಅಂಥ ಗುಣ ನಿಮಗಿಲ್ಲವಾಗಿ ಎಲ್ಲ ಜೀವರಾಶಿಯ ದೇಹವೂ ನಿಮ್ಮ ದೇಹವೂ ಸಮಾನವಾದ ಕಾರಣ ನಿಮಗೆ ಕುಲವಿಲ್ಲ. ನಿಲ್ಲು ಮಾಣು. ಒಡಲು ಕರಣಾದಿಗಳಿಗೆ ಕುಲವಿಲ್ಲವೆ ಹೋದಡೂ ಎಲ್ಲವನರಿವ ಚೈತನ್ಯಾತ್ಮಕನೆಂದೊಡೆ ಆತ್ಮನು ಆವ ಕುಲಜನೂ ಅಲ್ಲ. ಅದು ಆವ ಕುಲವೆಂದು ಹೆಸರುಗೊಂಬ ಆತ್ಮ ಹೆಣ್ಣಲ್ಲ ಗಂಡಲ್ಲ ನಪುಂಸಕನಲ್ಲ ಸ್ಥೂಲನಲ್ಲ ಸೂಕ್ಷ್ಮನಲ್ಲ ಷಡುವರ್ಣದೊಳಗೆ ಆವ ವರ್ಣನೂ ಅಲ್ಲ. ಅದು ಕಾರಣ ವರ್ಣವ ಹೊದ್ದದ ಆತ್ಮವನರಿಯರಾಗಿ ಆ ಆತ್ಮನು ಆವ ಕುಲದೊಳಗೂ ಅಲ್ಲ. ಶರೀರ ಬೇರೆ, ಆತ್ಮ ಬೇರೆ. ಅದೆಂತೆಂದೊಂಡೆ—

ಭೂಯೋಪಿ ಮೃದ್ಭಾಂಡಮನೇಕ ರೂಪಂ ಸುವರ್ಣಮೇಕಂ ಬಹು ಭೂಷಣಾನಾಂ ।
ಗೋಕ್ಷೀರಮೇಕಂ ಬಹುವರ್ಣಧೇನವಃ ಶರೀರ ಭಿನ್ನಂ ಪರಮಾತ್ಮಮೇಕಂ ॥

ಎಂದುದಾಗಿ ಶರೀರಂಗಳು ಅನಂತ, ಆತ್ಮನೊಬ್ಬನೆ. ಅದು ಕಾರಣ ಆ ಆತ್ಮನು ಆವ ಕುಲದಲೂ ಇಲ್ಲ. ಇನ್ನು ಆವ ಠಾವಿನಲ್ಲಿ ನಿಮ್ಮ ಕುಲವ

ಪ್ರತಿಷ್ಠೆಯ ಮಾಡಿ ತೋರುವಿರೋ ? ದೇಹ ಮೃತ್ತಿಕೆ, ಆತ್ಮ ನಿರಾಕಾರ ನೆನುತ್ತಿರಲು ಇನ್ನಾವ ಪರಿಯಲ್ಲಿ ನೀವು ಉತ್ತಮ ಕುಲಜರೆಂಬಿರೋ!

ಜೀವಃ ಶಿವಃ ಶಿವೋ ಜೀವಃ ಕೇವಲಂ ಶಿವಃ |
ಪಾಶಬದ್ಧಸ್ಥಿತೋ ಜೀವಃ ಪಾಶಮುಕ್ತಃ ಸದಾಶಿವಃ ||

ಎಂಬ ಶ್ರುತಿಯಂ ತಿಳಿದು ನೋಡಲು ನೀವೆಲ್ಲ ಪಾಶಬದ್ಧ ಜೀವಿಗಳಾಗುತ್ತ ಇರಲು ನಿಮಗೆಲ್ಲಿಯ ಉತ್ತಮ ಕುಲವು ? ಪಾಶಮುಕ್ತರಾದ ನಿಮ್ಮ ಶಿವ ಭಕ್ತರೇ ಕುಲಜರಲ್ಲದೆ ನಿಮಗೆ ಉತ್ತಮ ಕುಲ ಉಂಟಾದರೆ ನಿಮ್ಮ ದೇಹ ದೊಳಗೆ ಹೊರಗೆ ಇಂಥ ಠಾವೆಂದು ಬೆರಳ ಮಾಡಿ ತೋರಿ. ಅದು ಅಲ್ಲದೆ ಒಂದು ಪಕ್ಷಿಯ ತತ್ತಿಯೊಳಗೆ ಹಲವು ಮರಿ ಹುಟ್ಟಿದರೆ, ಒಂದರ ಮರಿಯೋ ಹಲವು ಪಕ್ಷಿಯ ಮರಿಯೋ ? ತಿಳಿದು ನೋಡಿದರೆ ಅವಕ್ಕೆ ಬೇರೆ ಬೇರೆ ಪಕ್ಷಿಗಳೆಂಬ ಕುಲವಿಲ್ಲ. ಆ ಹಾಗೆ ಒಬ್ಬ ಬ್ರಹ್ಮನ ಅಂಡವೆಂಬ ತತ್ತಿಯೊ ಳಗೆ ಸಕಳ ಜೀವರಾಶಿ ಎಲ್ಲವೂ ಉದಯಿಸಿದವು. ಅದೆಂತೆಂದೊಡೆ—

ಪೃಥಿವ್ಯಾಕಾಶಮಜಾಂಡಂ ತಸ್ಯಾಂಡೆ ಜಾಯತೆ ಕುಲಂ |
ಅಂತ್ಯಜಾತಿದ್ವಿಜಾತೀನಾಂ ಏಕಯೋನಿ ಸಹೋದರಾಃ |

ಎಂಬುದಾಗಿ ಇರುಹೆ ಮೊದಲು ಆನೆ ಕಡೆಯಾದ ಸಚರಾಚರವೆಲ್ಲವೂ ಒಬ್ಬ ಬ್ರಹ್ಮನ ಅಂಡದೊಳಗೆ ಹುಟ್ಟಿ ಏಕಯೋನಿ ಸಹೋದರಾಃ ಎಂದು ಪ್ರತಿಷ್ಠಿಸುತ್ತಿರಲು ನಿಮಗೆಲ್ಲಿಯ ಕುಲವೋ ? ಶಿವಭಕ್ತರೇ ಉತ್ತಮರು ಕುಲಜರೆಂದು ಮಿಕ್ಕಿದವರೆಲ್ಲ ಕೀಳು ಜಾತಿ ಎಂಬುದನು ಓದಿ ಬಲ್ಲದೊರಿ ಯಾದರು. ನಾನು ಹೇಳುವೆನು ಕೇಳು.

ಶ್ವಪಚೋಪಿ ಮುನಿಶ್ರೇಷ್ಠಃ ಶಿವಸಂಸ್ಕಾರ ಸಂಯುತಃ |
ಶಿವಸಂಸ್ಕಾರ ಹೀನಸ್ತು ವಿಪ್ರೋಪಿ ಶ್ವಪಚಾಧಮಃ ||

ಎಂಬ ಶ್ರುತಿಯ ನೋಡಿವಲ್ಲಿ ಅರಿದ ಶಿವಭಕ್ತರೇ ಸತ್ಕುಲಜರು. ಅಲ್ಲದ ಅಜ್ಞಾನದವರಾದುದೆಲ್ಲ ಒಂದುಕುಲ, ಸುಜ್ಞಾನದವರಾದುದೆಲ್ಲ ಒಂದು ಕುಲವೆಂದು ಶಾಸ್ತ್ರಂಗಳು ಹೇಳುತ್ತಿದ್ದಾವೆ. ಅದೆಂತೆಂದೊಡೆ—

ಆಹಾರ ನಿದ್ರಾ ಭಯ ಮೈಥುನಂ ಚ ಸಾಮಾನ್ಯ
ಮೇತತ್ ಪಶುಭಿರ್ನರಾಣಾಂ |
ಜ್ಞಾನಂ ನರಾಣಾಮಧಿಕೋ ವಿಶೇಷೋ ಜ್ಞಾನೇನ
ಹೀನಃ ಪಶುಭಿಃ ಸಮಾನಃ ||

ಎಂದುದಾಗಿ ಅಜ್ಞಾನ ತಂತುಗಳು ನೀವೆಲ್ಲ ಕರ್ಮಪಾಶಬದ್ಧರು. ನಿಮಗೆಲ್ಲಿಯದೋ ಸತ್ಕುಲ?

ಅದು ಅಲ್ಲದೆ ನಿಮ್ಮ ನುಡಿಯೊಡನೆ ನಿಮಗೆ ಹಗೆ ಮಾಡಿ ತೋರಿಹೆನು ಕೇಳಿರೋ. ನಿಮಗೆ ಕುಲವು ವಶಿಷ್ಠ ವಿಶ್ವಾಮಿತ್ರ ಭರದ್ವಾಜ ಕೌಂಡಿನ್ಯ ಕಶ್ಯಪನೆಂಬ ಋಷಿಗಳಿಂದ ಬಂದಿತ್ತೆಂಬಿರಿ. ಅವರ ಪೂರ್ವವೃತ್ತಿ ನುಡಿವರೆ ಹುರುಳಿಲ್ಲ. ಅವರೆಲ್ಲ ಕೀಳುಜಾತಿಗಳಾದ ಕಾರಣ ನೀವೆ ಋಷಿ ಮೂಲವನು ನದಿಮೂಲವನೆತ್ತಲಾಗದೆಂಬಿರಿ. ನಿಮ್ಮ ನುಡಿ ನಿಮಗೆ ಹಗೆಯಾಯಿತ್ತೆಂದೆ ಕೇಳಿರೋ. ಅದಂತಿರಲಿ.

ನಿಮ್ಮ ಕುಲಕೆ ಗುರುವೆನಿಸುವ ಋಷಿಗಳೆಲ್ಲರೂ ಲಿಂಗವನಲ್ಲದೆ ಪೂಜಿಸರು. ವಿಭೂತಿ ರುದ್ರಾಕ್ಷಿಯನಲ್ಲದೆ ಧರಿಸರು. ಪಂಚಾಕ್ಷರಿಯನಲ್ಲದೆ ಜಪಿಸರು. ಹಾಗೆ ನೀವು ಲಿಂಗವ ಪೂಜಿಸಿ, ವಿಭೂತಿ ರುದ್ರಾಕ್ಷಿಯ ಧರಿಸಿ ಪಂಚಾಕ್ಷರಿಯ ಜಪಿಸಿ ಈಶ್ವರ ಲಾಂಛನವ ಧರಿಸಿದಡೆ ನೀವು ಋಷಿಮೂಲದವರಹುದು. ಅದು ನಿಮಗಲ್ಲದೆ ವಿಷ್ಣುವಂ ಪೂಜಿಸಿ ಮುದ್ರೆಯಂ ಸುಡಿಸಿಕೊಂಡು ಸಾಲಿಗ್ರಾಮ, ಶಕ್ತಿ, ಲಕುಮಿ, ದುರ್ಗಿ ಎಂಬ ಕಿರುಕುಳ ದೈವಂಗಳ ಪೂಜಿಸಿ ನರಕಕ್ಕಿಳಿದು ಹೋಹರಾದ ಕಾರಣ ನೀವೇ ಹೀನ ಜಾತಿಗಳು.

ಬರಿದೆ ಬ್ರಹ್ಮವನಾಚರಿಸಿ ನಾವು ಬ್ರಹ್ಮರೆಂಬಿರಿ. ಬ್ರಹ್ಮವೆಂತಿಪ್ಪುದೆಂದರಿಯಿರಿ.

ಸತ್ಯಂ ಬ್ರಹ್ಮ ಶೌಚಂ ಬ್ರಹ್ಮ ಬ್ರಹ್ಮಚೇಂದ್ರಿಯನಿಗ್ರಹಃ ।
ಸರ್ವಜೀವದಯಾ ಬ್ರಹ್ಮ ಇತ್ಯೇತದ್ ಬ್ರಹ್ಮ ಲಕ್ಷಣಂ ॥
ಸತ್ಯಂ ನಾಸ್ತಿ ಶೌಚಂ ನಾಸ್ತಿ ನಾಸ್ತಿ ಚೇಂದ್ರಿಯನಿಗ್ರಹಃ ।
ಸರ್ವಜೀವದಯಾ ನಾಸ್ತಿ ಏತಚ್ಚಾಂಡಾಲ ಲಕ್ಷಣಂ ॥

ಬ್ರಹ್ಮಕ್ಕೂ ನಿಮಗೂ ಸಂಬಂಧವೇನೋ! ಬ್ರಹ್ಮವೇ ನಿಃಕರ್ಮ. ನೀವು ಕರ್ಮಿಗಳು. ಮತ್ತೆಂತೋ? ಬ್ರಹ್ಮಚರತೀತಿ ಬ್ರಾಹ್ಮಣಃ ಎಂದು ಗಳಹುತಿಪ್ಪಿರಿ. ಗಾಯತ್ರಿಯ ಜಪಿಸಿ ನಾವು ಕುಲಜರೆಂಬಿರಿ. ಆ ಗಾಯತ್ರಿ ಕರ್ಮವಲ್ಲದೆ ಮುಕ್ತಿಗೆ ಕಾರಣವಲ್ಲ. ವೇದವನೋದಿ ನಾವು ಬ್ರಹ್ಮರಾದೆವೆಂಬಿರಿ. ವೇದ ಹೇಳಿದ ಹಾಗೆ ನೀವು ನಡೆಯರಿ. ಅದೆಂತೆಂದೊಡೆ 'ದ್ಯಾವಾಭೂಮೀ ಜನಯನ್ ದೇವೋ ಏಕಃ' ಎಂದೋದಿ

ಮರೆದು ವಿಷ್ಣುವನೆ ಭಜಿಸುವಿರಿ. 'ವಿಶ್ವತೋಮುಖ ವಿಶ್ವತಶ್ಚಕ್ಷುರ್ವಿ ಶ್ವತೋ ಬಾಹು' ಎಂದೋರಿವುತ್ತಂ 'ಏಕೋರುದ್ರ ನದ್ವಿತೀಯಾಯ ತಸ್ಥೆ' ಎಂದು ಮರೆದು ಬೇರೊಬ್ಬ ದೈವವುಂಟೆಂದು ಗಳಹುತಿಪ್ಪಿರಿ. 'ಏಕ ಮೇವಾದ್ವಿತೀಯಂ ಬ್ರಹ್ಮ' ಎಂದೋದಿ ಕರ್ಮವಲಿ ಸಿಕ್ಕಿಹಿರಿ. ನೀವೇ ದುಃಕರ್ಮಿಗಳು. 'ಅಯಂ ಮೇ ಹಸ್ತೋಭಗವಾನ್ ಅಯಂ ಮೇ ಭಗವ ತ್ತರಃ' ಎಂದೋದಿ ಅನ್ಯ ಪೂಜೆಯಂ ಮಾಡುತಿಪ್ಪಿರಿ. 'ಶಿವೌ ಮೇ ಪಿತರೌ' ಎಂದೋದಿ ಸನ್ಯಾಸಿಗಳಿಗೆ ಮಕ್ಕಳೆಂಬಿರಿ.

ಸದ್ಯೋಜಾತಾತ್ಪ್ರಜೇದ್ ಭೂಮಿರ್ವಾಮದೇವಾತ್ತದಾ ಜಲಂ ।
ಅಘೋರಾದಗ್ನಿ ರಿತ್ಯಾಹುಸ್ತತ್ ಪುರುಷಾದ್ವಾಯುರುಚ್ಯತೆ ।
ಈಶಾನಾದ್ಗಗನಾಕಾರಂ ಪಂಚಬ್ರಹ್ಮಮಯಂ ಜಗತ್ ॥

ಎಂದೋದಿ ಸರ್ವಂ ವಿಷ್ಣುಮಯಂ ಎನುತಿಪ್ಪಿರಿ 'ಜಲಮಿತಿ ಭಸ್ಮ ಸ್ಥಲ ಮಿತಿ ಭಸ್ಮ ಅಗ್ನಿರಿತಿ ಭಸ್ಮವಾಯುರಿತಿ ಭಸ್ಮ' ಎಂದೋದಿ ಮರೆದು ವಿಭೂತಿಯನಿಡಲೊಲ್ಲದೆ ಮಟ್ಟಿಯನಿಡುವಿರಿ. 'ರುದ್ರಾಕ್ಷ ಧಾರಣಾಂ ರುದ್ರ' ಎಂಬುದನೋದಿ ರುದ್ರಾಕ್ಷಿಯ ಧರಿಸಲೊಲ್ಲದೆ ಪದ್ಮಾಕ್ಷಿತೊಳ ಸಿಯ ಮಣಿಯಂ ಕಟ್ಟಿಕೊಂಬಿರಿ. 'ಪಂಚಾಕ್ಷರ ಸಮೋ ಮಂತ್ರೋ ನಾಸ್ತಿ ತತ್ವಂ ಮಹಾ ಮುನೆ' ಎಂಬುದನೋದಿ ಪಂಚಾಕ್ಷರಿಯ ಜಪಿಸ ಲೊಲ್ಲದೆ ಗೋಪಾಳ ಮಂತ್ರವ ನೆನೆವಿರಿ ಎಂತೋ? ನೀವು ಓದುವ ವೇದ ನಿಮಗೆ ವಿರುದ್ಧವಾಗಿರಲು ನೀವು ಕುಲಜರೆಂದು ವಂದಿಸಿದವ ರಿಗೆ ಸೂಕರ ಜನ್ಮದಲ್ಲಿ ಬಪ್ಪುದು ತಪ್ಪದು ನೋಡಿರೋ.

ವಿಪ್ರಾಣಾಂ ದರ್ಶನೇನೈವ ಪಾಪಂ ಭುಂಜಂತಿ ಮಾನವಾಃ ।
ವಿಪ್ರಾಣಾಂ ವಂದನಂ ಚೈವ ಕೋಟಿ ಜನ್ಮಸು ಸೂಕರಾಃ ॥

ಮತ್ತಂ 'ಅಣೋರಣೀಯಾನ್ ಮಹತೋ ಮಹೀಯಾನ್' ಎಂಬುದ ನೀವೇ ಓದಿ ಪ್ರಾಣಿಯಂ ಕೊಂದು ಯಾಗವನಿಕ್ಕಿ ದೇವರ್ಕಳುಗಳಿಗೆ ಹೋಮದ ಹೊಗೆಯಂ ತೋರಿ ಕೊಬ್ಬಿ ಬೆಳೆದ ಖಂಡವನೆ ತಿಂದು ಸೋಮಪಾನವೆಂಬ ಸುರೆಯನೆ ಕುಡಿದು ವೈಮರೆದು ನೊಸಲಗಣ್ಣನ ತೋರುವಂತಹ ಶಿವಭಕ್ತರನು ನಿಂದಿಸಿ ನುಡಿಯುತಿಪ್ಪಿರಿ. ನಿಮ್ಮೊಡನೆ ನುಡಿವರೇ? ಇದು ಶ್ರುತ ದೃಷ್ಟ ಅನುಮಾನದಿಂದ ವಿಚಾರಿಸಿ ನೋಡಲು ನೀವೇ ಶಿವಭಕ್ತಿಯನರಿಯದ ನರರೂಪಿನ ನರಿಗಳು. ನಿಮ್ಮಿಂದ ಹೊರ

ಗಾವ ಹೊಲೆಯನೇ ಉತ್ತಮ ಕುಲಜನೆಂದು ಮುಡಿಗೆಯ ಹಾಕಿದೆನು, ಎತ್ತಿರೋ. ಉತ್ತಮ ಶಿವಭಕ್ತರೇ ಅಧಿಕರು ಎಂದು ಶಿವಭಕ್ತರೇ ಕುಲಜರು ಎಂದು ಎಮ್ಮ ಶಿವಭಕ್ತರೇ ಸರ್ವಜೀವ ದಯಾಪಾರಿಗಳು ಎಂದು ಶಿವಭಕ್ತರೇ ಸದ್ಯೋನ್ಮುಕ್ತರಯ್ಯ ಘನಗುರು ಶಿವಲಿಂಗ ರಾಮನಾಥಾ.

---

## ಢಕ್ಕೆಯ ಮಾರಯ್ಯ.

ಢಕ್ಕೆಯಮಾರಯ್ಯನೆಂಬ ಶಿವಶರಣನು ಡೊಳ್ಳು ಬಾರಿಸುವವನಾಗಿ ಉಡಿಯಲ್ಲಿ ತಲೆಯಲ್ಲಿ ಜೀವಿನ ಸೊಪ್ಪನ್ನು ಕಟ್ಟಿಕೊಂಡು ಮಾರಿಯ ಮೂರ್ತಿಯೊಂದನ್ನು ಮುಂದಿಟ್ಟುಕೊಂಡು ಅದನ್ನು ಕುಣಿಸುತ್ತ ಭಕ್ತರಂಗಣಗಳಲ್ಲಿ ತಿರುಗುವನು. ಆಗ ಅವನು ಅಷ್ಟಾವರಣಗಳ ರೀತಿಯನ್ನೂ ಶಿವಶರಣರ ನಡೆಗಳನ್ನೂ ಜನರಿಗೆ ತಿಳಿಸಿ ಹೇಳುವನು. ಇದೇ ಅವನ ಕಾಯಕವಾಗಿತ್ತು. ಆಗ ಜನರು ತನಗೆ ಕೊಟ್ಟುದನ್ನು ತಾನಷ್ಟೇ ಉಪಭೋಗಿಸದೆ ಅದನ್ನು ದಾಸೋಹ ಕಾರ್ಯಗಳಿಗೆ ವೆಚ್ಚಮಾಡುವನು. ಈತನು ಈಗಿನ ಕಾಲದ ದುರುಗುಮುರಗಿಯವರು ಮಾಡುವಂಥ ಕಾಯಕವನ್ನು ಮಾಡುತ್ತಿರಬಹುದೆಂದು ತೋರುತ್ತದೆ. ಆದರೆ ಅವನು ಬಿಕ್ಷುಕರಂತೆ ವರ್ತಿಸುವವನಲ್ಲ. ಆತನು ಶಿವಶರಣನಾಗಿ ಶಿವಜ್ಞಾನಿಯಾಗಿ ಒಂದು ಕಾಯಕವನ್ನು ಮಾಡುತ್ತ ಶಿವಾನುಭವವನ್ನು ಜನರಿಗೆ ಬೋಧಿಸುವನು. ಹೀಗೆ ಅವನು ಗ್ರಾಮದಲ್ಲಿ ಹೆಸರುವಾಸಿಯಾಗಿದ್ದನು.

ಢಕ್ಕೆಯ ಮಾರಯ್ಯನು ವಚನಕಾರನಿದ್ದಾನೆ. ಅವನ ಮುದ್ರಿಕೆಯು 'ಕಾಲಾಂತಕ ಭೀಮೇಶ್ವರಲಿಂಗ' ಎಂದಿದೆ. ಅವನ ೨೫ ವಚನಗಳು ನಮಗೆ ದೊರೆತಿದ್ದು ಅವುಗಳಲ್ಲಿ ಕೆಲವುಗಳನ್ನು ಮಾತ್ರ ಈ ಚರಿತ್ರೆಯ ಅಂತ್ಯದಲ್ಲಿ ಕೊಟ್ಟಿದ್ದೇವೆ. ಈ ವಚನಗಳು ಶ್ರೇಷ್ಠತರಗತಿಯವಾಗಿವೆ. ಅವುಗಳ ಮೇಲಿಂದ ಢಕ್ಕೆಯ ಮಾರಯ್ಯನು ಲಿಂಗಾಂಗಸಾಮರಸ್ಯದ ರೀತಿಯನ್ನು ಚನ್ನಾಗಿ ತಿಳಿದವನಾಗಿದ್ದನೆಂಬುದು ಸ್ಪಷ್ಟವಾಗುತ್ತಿದೆ. ಅವುಗಳಲ್ಲಿ ಕೆಲವು ಡೊಳ್ಳು ಬಾರಿಸುವ ಕಾಯಕವನ್ನು ಹೇಗೆ ಆಧ್ಯಾತ್ಮಿಕ ರೀತಿಯಿಂದ ನಿರ್ವಹಿಸಬೇಕೆಂಬುದನ್ನು ವಿವರಿಸುತ್ತವೆ. ಅವು ಲಕ್ಷಿಸತಕ್ಕವುಗಳಾಗಿವೆ.

ಡಕ್ಕೆಯ ಮಾರಯ್ಯನ ಚರಿತ್ರೆಯಿಂದ ಕರ್ನಾಟಕದಲ್ಲಿ ಹಿಂದಿನ ಕಾಲದಲ್ಲಿ ಅತ್ಯಂತ ನೀಚವೆಂದು ನಾವು ಈಗ ತಿಳಿದಿರುವ ಸಮಾಜಗಳಲ್ಲಿ ಸಹ ಶಿವಶರಣರ ಧಾರ್ಮಿಕ ಉಚ್ಚ ನಡೆಗಳು ಹೇಗೆ ಪಸರಿಸಿದ್ದವೆಂಬುದನ್ನು ನಾವು ಚನ್ನಾಗಿ ತಿಳಿಯಬಹುದು.

ಹೀಗಿರಲು ಒಂದು ದಿನ ಮಾರಯ್ಯನು ತನ್ನ ಢಕ್ಕೆಯನ್ನು ಬಾರಿಸುತ್ತ ಶಿವಶರಣರಲ್ಲಿ ಅತ್ಯಂತ ಖ್ಯಾತಿಯನ್ನು ಹೊಂದಿದ ಶಂಕರ ದಾಸಿಮಯ್ಯನ ಮನೆಗೆ ಹೋಗಿ ಅಲ್ಲಿ ತನ್ನ ಮಾರಿಯನ್ನು ಕುಣಿಸುತ್ತ ನಿಂತನು. ಆದರೆ ಶಂಕರದಾಸಿಮಯ್ಯನು ಕಿರುಕುಳ ದೈವತೆಗಳನ್ನು ನಿರಾಕರಿಸಿದವನು. ಅವನು ಅವುಗಳನ್ನು ತನ್ನ ಹಣೆಗಣ್ಣಿನಿಂದ ಸುಟ್ಟು ಹಾಕಿದವನು. ಇಂಥವನು ಮಾರಿಕವ್ವೆಗೆ ಭಕ್ತಿಯನ್ನು ತಾಳುವದೆಂತು? ಅದನ್ನು ಭಜಿಸುವವರಿಗೆ ಅವನು ದಾನ ಕೊಡುವದೆಂತು? ಅವನು ತನ್ನ ಅಂಗಣದಲ್ಲಿ ಢಕ್ಕೆಯ ಮಾರಯ್ಯನು ಡೊಳ್ಳು ಬಾರಿಸುತ್ತ ನಿಂತಿದ್ದನ್ನು ಕಂಡು ಅತ್ಯಂತ ಕೋಪಾವಿಷ್ಟನಾಗಿ ತನ್ನ ನೊಸಲುಗಣ್ಣನ್ನು ತೆರೆದು ಅದರಿಂದ ಹೊರಟ ಜ್ವಾಲೆಯನ್ನು ಆ ಮಾರಿಕವ್ವೆಯ ಮೇಲೆ ಬಿಟ್ಟನು. ಆದರೆ ಆಗ ಒಂದು ಆಶ್ಚರ್ಯವಾಯಿತು. ಆ ಜ್ವಾಲೆಯು ಆ ಮಾರಿಕವ್ವೆಯ ಮೇಲೆ ಬಿದ್ದರೂ ಅದು ಸುಟ್ಟುಹೋಗಲಿಲ್ಲ. ಇಷ್ಟೇ ಅಲ್ಲ ಆ ದೈವತವು ಶಂಕರದಾಸಿಮಯ್ಯನ ಉರಿಗಣ್ಣನ್ನೇ ನುಂಗಿಬಿಟ್ಟಿತು! ಹೀಗೆ ಶಂಕರದಾಸಿಮಯ್ಯನು ತನ್ನ ಉರಿಗಣ್ಣನ್ನು ಕಳೆದುಕೊಂಡವನಾಗಿ ಸತ್ವರಹಿತನಾಗಿ ಕಳೆಗುಂದಿದ ಮುಖವುಳ್ಳವನಾಗಿ ಮನೆಯಲ್ಲಿ ಕುಳಿತುಬಿಟ್ಟನು.

ಆಗ ಪಟ್ಟಣದಲ್ಲಿದ್ದ ಶಿವಾಸ ಭವಿಗಳು ಇದನ್ನು ಕೇಳಿ ಆಶ್ಚರ್ಯಭರಿತರಾಗಿ ಶಂಕರ ದಾಸಿಮಯ್ಯನ ಮನೆಗೆ ಬಂದು ಈ ತೆರನಾದ ಶಿವಭಕ್ತಿಯು ಎಲ್ಲಾದರೂ ಉಂಟೇ, ಎಂದು ಅಂಗಣದಲ್ಲಿ ಚರ್ಚಿಸುತ್ತಿರಲು ಢಕ್ಕೆಯ ಮಾರಯ್ಯನು—ನಾನು ಕುಣಿಸುತ್ತಿರುವ ಈ ಮಾರಿಕವ್ವೆಯು ನಿಮಗೆ ಗೊತ್ತಿಲ್ಲ. ಅದು ಹೆರವರನ್ನು ಪೀಡಿಸಿ ಹೊಟ್ಟೆ ಹೊರೆದುಕೊಳ್ಳುವ ದೈವತವಲ್ಲ. ಅದು ನನ್ನ ಜ್ಞಾನಶಕ್ತಿಯು. ಈ ಶಕ್ತಿಯನ್ನು ನಾನು ಈ ರೂಪಿನಲ್ಲಿ ಆರೋಹಿಸಿದ್ದರಿಂದ ಆ ಶಕ್ತಿಯು ಈ ರೂಪವನ್ನು ಕುಣಿಸುತ್ತಿದೆ ಎಂದು ತಿಳಿಸಿದನು. ಆದಕ್ಕೆ ನೆರೆದ ಕೆಲವು ಭಕ್ತರು—ಇದು ಜ್ಞಾನ

ಶಕ್ತಿಯಾವರೀನ? ಇದನ್ನು ನೀನು ಇದಿರಿಟ್ಟು ಪೂಜಿಸುತ್ತೀಯಲ್ಲವೇ? ಆದರಿಂದ ಅದು ಪರದೈವತವು. ಅದನ್ನು ಹೀಗೆ ಮುನ್ನಿಸಕೂಡದೆಂದು ಅವನೊಡನೆ ಚರ್ಚಿಸಿದರು. ಅದನ್ನು ಮಾರಯ್ಯನು ಕೇಳಿ ಕುಣಿಯುತ್ತಿರುವ ಆ ಮಾರಿಕವ್ವೆಯನ್ನು ತಾನು ಧಾರಣ ಮಾಡಿದ ಇಷ್ಟಲಿಂಗದಲ್ಲಿ ಅಡಗಿಸಿಬಿಟ್ಟನು. ಆ ಮೇಲೆ ಅವನು ಆ ಇಷ್ಟಲಿಂಗವನ್ನು ತನ್ನ ಕೈಯ್ಯಲ್ಲಿ ಇಟ್ಟುಕೊಳ್ಳಲು ಅದು ಆಕ್ಷಣವೇ ಮಾರಿಕವ್ವೆಯಂತೆ ಕುಣಿಯುಹತ್ತಿತು! ನೆರೆದ ಜನರು ಇದನ್ನು ನೋಡಿ ಆಶ್ಚರ್ಯಭರಿತರಾಗಿ — ಭಕ್ಕೈಯ ಮಾರಯ್ಯನು ಇಷ್ಟಲಿಂಗವನ್ನು ನಿಜವಾಗಿ ಕಂಡವನಾಗಿದ್ದಾನೆ. ಅವನು ಅದನ್ನು ಸಾಧಿಸಿಕೊಂಡಿದ್ದಾನೆ ಅವನೇ ನಿಜವಾದ ಶಿವಯೋಗಿಯು, ಎಂದು ಸ್ತುತಿಸಹತ್ತಿದರು. ಇದನ್ನು ಶಂಕರ ದಾಸಿಮಯ್ಯನು ನೋಡಿ ತನ್ನ ತಪ್ಪನ್ನು ಒಪ್ಪಿಕೊಂಡು ಭಕ್ಕೈಯ ಮಾರಯ್ಯನಿಗೆ — ನಿನ್ನ ಮಹತ್ವವನ್ನು ನಾನೀಗ ಅರಿತೆನು. ನಾನು ನನ್ನ ನೊಸಲುಗಣ್ಣನ್ನು ನಿನ್ನ ಇಷ್ಟದೇವತೆಯ ಮೇಲೆ ಪ್ರಯೋಗಿಸಿದೆನು. ನನ್ನಿಂದ ಅಪರಾಧವಾಯಿತು. ನನ್ನನ್ನು ಕ್ಷಮಿಸಬೇಕೆಂದು ಬೇಡಿಕೊಂಡನು. ಆಗ ಅಂಗಯ್ಯಲ್ಲಿ ಕುಣಿಯುತ್ತಿದ್ದ ಆ ಇಷ್ಟಲಿಂಗದೊಳಗಿಂದ ಮಾರಿಕವ್ವೆಯು ಪುನಃ ಹೊರಹೊರಟು ಸ್ವಸ್ವರೂಪವನ್ನು ತಾಳಿತು ಮತ್ತು ತಾನು ಮೊದಲು ನುಂಗಿದ್ದ ಶಂಕರ ದಾಸಿಮಯ್ಯನ ನೊಸಲುಗಣ್ಣನ್ನು ಅವನ ಮುಂದೆ ಉಗುಳಿಬಿಟ್ಟಿತು! ಇಷ್ಟೇ ಅಲ್ಲ, ಅದರ ಬಾಯಿಂದ ಜ್ವಾಲಾ ಪೂರ್ಣವಾದ ಇನ್ನೂ ಎಷ್ಟೋ ಕಣ್ಣುಗಳು ಹೊರಬೀಳ ಹತ್ತಿದವು!! ಆಗ ನೆರೆದ ಭಕ್ತರು ಇಂಥ ಕಣ್ಣುಗಳಿಂದ ಲೋಕಗಳು ದಹಿಸಿ ಹೋದಾವು, ಹಾಗೆ ಮಾಡಕೂಡದೆಂದು ಅವನಿಗೆ ಹೇಳಿಕೊಳ್ಳಲು ಅವು ಹೆಚ್ಚಿಗೆ ಹೊರಗೆಬರುವದು ನಿಂತಿತು.

ಶಂಕರ ದಾಸಿಮಯ್ಯನು ಈ ಮಹಿಮೆಯನ್ನು ನೋಡಿ, ಭಕ್ಕೈಯ ಮಾರಯ್ಯನಿಗೆ ನುಡಿದದ್ದು — ಪರದೈವತವೆಂಬುದು ಈಗ ನನಗೆ ತಿಳಿಯು ಬಂದಿತು. ಇಷ್ಟಲಿಂಗದ ಅರಿವು ನನಗುಂಟಾಯಿತು. ನೀನು ಮಹಾತ್ಮಕನು ಎಂದು ಸ್ತುತಿಸಿದನು. ಆ ಮೇಲೆ ಅವನು ಭಕ್ಕೈಯ ಮಾರಯ್ಯನಿಗೆ ತಾನು ಕೊಡತಕ್ಕ ಕಾಯಕವನ್ನು ಕೊಡಲಾಗಿ ಅವನು ಅದನ್ನು ತೆಗೆದುಕೊಂಡು ಮುಂದೆ ತೆರಳಿದನು.

ಥಕ್ಕೆಯ ಮಾರಯ್ಯನ ಈ ಚರಿತ್ರೆಯಲ್ಲಿ ಶಿವಾನುಭವದ ಮಹತ್ವದ ತತ್ವಗಳು ಅಡಕವಾಗಿರುತ್ತವೆ. ಶಿವಶರಣರು ಇಷ್ಟಲಿಂಗದ ರೀತಿಯನ್ನು ತಿಳಿದವರಾಗಿ ಅದರ ಮೂಲಕ ಲಿಂಗಾಂಗ ಸಾಮರಸ್ಯವನ್ನು ಹೇಗೆ ಹೊಂದಬೇಕೆಂಬುದನ್ನು ತಮ್ಮ ನಡೆಯಲ್ಲಿ ತೋರಿಸಿದ್ದಾರೆ. ಇದನ್ನು ನಾವು ಥಕ್ಕೆಯ ಮಾರಯ್ಯನ ಚರಿತ್ರೆಯಲ್ಲಿ ಕಾಣಬಹುದು.

ಸಾಮಾನ್ಯ ಜನರು ಭಜಿಸುವ ಮಾರಿಕವ್ವೆಯು ಜನರನ್ನು ಪೀಡಿಸಿ, ನೋಯಿಸಿ, ರೋಗಗಳಿಂದ ಅವರನ್ನು ಬಳಲಿಸಿ, ಅವರು ಕೊಟ್ಟ ಬಲಿಯ ಮೇಲೆ ಉಪಜೀವಿಸುವ ದೈವತವಾಗಿದೆ. ಹೀಗೆಯೇ ಅದರ ವರ್ಣನೆಗಳಿವೆ. ಆದರೆ ಥಕ್ಕೆಯ ಮಾರಯ್ಯನು ಪೂಜಿಸುತ್ತಿದ್ದ ಮಾರಿಕವ್ವೆಯು ಇಂಥ ದೈವತವಾಗಿರಲಿಲ್ಲ. ಅದು ಅವನ ಜ್ಞಾನಶಕ್ತಿಯಾಗಿತ್ತು. ಆದುದರಿಂದ ಶಂಕರ ದಾಸಿಮಯ್ಯನ ಉರಿಗಣ್ಣಿನ ಜ್ವಾಲೆಯು ಅದನ್ನು ಉರಿಯಿಸದೆ ಹೋಯಿತು. ಮಾರಯ್ಯನು ಇಷ್ಟಲಿಂಗಧಾರಿಯಾಗಿದ್ದನೆಂಬುದು ಅವನ ಈ ಚರಿತ್ರೆಯಲ್ಲಿ ಹೇಳಿದೆ. ಆದರೆ ಇಷ್ಟಲಿಂಗಧಾರಿಯಾದವನು ಇತರ ದೈವತಗಳನ್ನು ಪೂಜಿಸಕೂಡದೆಂಬ ಶಿವಶರಣರ ಉಕ್ತಿಗಳಿದ್ದು ಅವುಗಳಿಗೆ ಮಾರಯ್ಯನ ಈ ನಡೆಯು ವಿಸಂಗತವಲ್ಲವೇ ಎಂಬ ಸಂದೇಹವು ವಾಚಕರಲ್ಲಿ ಉಂಟಾಗಬಹುದು. ಆದರೆ ಮಾರಯ್ಯನು ನಡಿಸಿದ ಪೊವಾಡದಿಂದ ಇಂಥ ಸಂದೇಹವು ಉಂಟಾಗಲು ಕಾರಣವಿಲ್ಲ. ಯಾಕಂದರೆ ಇಷ್ಟಲಿಂಗದ ಉದ್ದೇಶವು ಪ್ರಾಣಲಿಂಗವನ್ನು ಸಾಧಿಸುವದೇ ಇರುತ್ತದೆ. ಪ್ರಾಣಲಿಂಗ ಅಥವಾ ಜ್ಞಾನಲಿಂಗವನ್ನು ಸಾಧಿಸಿದಲ್ಲಿ ಬಾಹ್ಯವಸ್ತುಗಳು ಅವು ಯಾವವಿದ್ದರೂ ಶಿವಾನುಭವಿಗೆ ಲಿಂಗಮಯವಾಗಿ ತೋರುತ್ತವೆ. ಆಗ ಅವನು ಅವುಗಳನ್ನೂ ಅವುಗಳ ವ್ಯಾಪಾರಗಳನ್ನೂ ಲಿಂಗರೂಪವಾಗಿ ಕಾಣುತ್ತಾನೆ. ಮತ್ತು ಹಾಗೆಯೇ ಅವುಗಳನ್ನು ಅನುಭವಿಸುತ್ತಾನೆ. ಉದಾ:—ಒಬ್ಬ ವಚನಕಾರನು ಭೂಮಿ, ಜೀವ, ಬೆಳೆ, ನೀರು, ಗಾಳಿ, ಎತ್ತು, ಬೀಜ ಇವುಗಳಲ್ಲಿ ಪರಮಾತ್ಮನು ತಿಂಥಿಣಿಯಾಗಿ ಅಂದರೆ ದಟ್ಟವಾಗಿ ವಾಸಿಸುತ್ತಾನೆಂದು ಹೇಳಿದ್ದಾನೆ. ಇದರಿಂದ ಬಹಿರಂಗದಲ್ಲಿದ್ದ ಇಂಥ ವಸ್ತುಗಳು ಮತ್ತು ಕ್ರಿಯೆಗಳು ಅವು ಯಾವವೇ ಇರಲಿ ಅವುಗಳ ಮೂಲಕ ಪ್ರಾಣಲಿಂಗವನ್ನು ಉಜ್ವಲಗೊಳಿಸಲು ಶಿವಾನುಭವಿಗೆ ಅವು ಸಾಧನಗಳಾಗಿ ಪರಿಣಮಿಸುತ್ತವೆ-ಮಾರಯ್ಯನ ನಡೆಯು ಈ ರೀತಿಯದಾಗಿರುತ್ತದೆ. ಅವನು ಪೂಜಿಸು

ತ್ರಿಷ್ಟ ಮಾರಿಕವ್ವೆಯು ಅವನಿಗೆ ಸಾಮಾನ್ಯರು ಪೂಜಿಸುವ ಮಾರಿಕವ್ವೆಯಾಗಿರಲಿಲ್ಲ. ಅದರ ಮೂಲಕ ಅವನು ತನ್ನ ಲಿಂಗಶಕ್ತಿಯನ್ನು ತನ್ನಲ್ಲಿ ಬೆಳೆಸಿಕೊಳ್ಳುವ ಸಾಧನವಾಗಿತ್ತು. ಆದ್ದರಿಂದ ಮಾರಿಕವ್ವೆಯನ್ನು ತನ್ನ ಇಷ್ಟಲಿಂಗದಲ್ಲಿ ಅಡಗಿಸಿಕೊಳ್ಳಲು ಅವನು ಸಾಮರ್ಥ್ಯವನ್ನು ಹೊಂದಿದವನಾಗಿದ್ದನು. ಹಾಗೆ ತನ್ನ ಇಷ್ಟಲಿಂಗದಲ್ಲಿ ಅದನ್ನು ಅಡಗಿಸಿಕೊಳ್ಳಲಾಗಿ ಅದು ಮಾರಿಕವ್ವೆಯಂತೆ ಹಸ್ತದಲ್ಲಿ ಕುಣಿಯ ಹತ್ತಿತು.

ಢಕ್ಕೆಯ ಮಾರಯ್ಯನಿಗೆ ಈ ಮಾರಿಕವ್ವೆಯು ಸಾಮಾನ್ಯ ಜನರು ತಿಳಿಯುವಂತೆ ಹಿಂಸಾಚರಣೆಯುಳ್ಳ ದೈವತವಾಗಿರಲಿಲ್ಲ. ಅದು ಅವನ ಜ್ಞಾನಶಕ್ತಿಯನ್ನು ಹೆಚ್ಚಿಸುವ ಸಾಧನವಾಗಿದ್ದಿತು. ಮಾರಯ್ಯನ ಚರಿತ್ರಕಾರರಾದರೂ ಅವನ ಮಾರಿಕವ್ವೆಯನ್ನು ತಮ್ಮ ಗ್ರಂಥಗಳಲ್ಲಿ ಹೀಗೆಯೇ ವರ್ಣಿಸಿದ್ದಾರೆ.

ಇದಲ್ಲದೆ ಢಕ್ಕೆಯ ಮಾರಯ್ಯನಿಗೆ ಮಾರಿಕವ್ವೆಯು ಒಂದು ಕಾಯಕದ ವಸ್ತುವಾಗಿತ್ತು. ಅದರ ಮುಂದೆ ಅವನು ಢಕ್ಕೆಯನ್ನು ಬಾರಿಸುತ್ತ ಹೋಗಲಾಗಿ ಜನರು ಅವನ ಸುತ್ತಲೂ ನೆರೆಯುವರು. ಆಗ ಅವನು ಅವರಿಗೆ ಶಿವಶರಣರ ಚರಿತ್ರೆಗಳನ್ನು ಹೇಳಿ ಶಿವಾನುಭವವನ್ನು ಬೋಧಿಸುವನು. ಆಗ ಜನರು ತನಗೆ ಕೊಟ್ಟಿದ್ದನ್ನು ದಾಸೋಹ ಕಾರ್ಯಗಳಿಗೆ ಅವನು ಉಪಯೋಗಿಸುವನು.

ಶಿವಶರಣರಿಗೆ ಕಾಯಕದ ಇಂಥ ವಸ್ತುಗಳೆಲ್ಲವೂ ಪವಿತ್ರವಾದವುಗಳು. ಇದರಲ್ಲಿ ಅವರು ಉಪಯೋಗಿಸುವ ಸಾಧನಗಳು, ಉದಾ:— ಒಕ್ಕಲುತನದ ಸಾಮಾನುಗಳು, ನೇಗಿಯ ಸಾಮಾನುಗಳು, ಕುಂಬಾರನ ತಿಗರಿ, ಶಿಂಪಿಗನ ಕತ್ತರಿ ಇವೆಲ್ಲವೂ ಪವಿತ್ರವಾದವುಗಳು. ಲಿಂಗಪೂಜೆಗೆ ಬೇಕಾಗುವ ಪತ್ರೆಪುಷ್ಪಗಳು ಹೇಗೆ ಪವಿತ್ರವಾದವುಗಳೋ ಹಾಗೆಯೇ ಇವೂ ಕೂಡ ಅವರಿಗೆ ಪವಿತ್ರವಾದವುಗಳು. ಈ ಭಾವದಿಂದ ಢಕ್ಕೆಯ ಮಾರಯ್ಯನು ಮಾರಿಕವ್ವೆಯನ್ನು ಜನರ ಮುಂದೆ ಕುಣಿಸಿ ತನ್ನ ಕಾಯಕವನ್ನು ಮಾಡುವನು. ಇದರಲ್ಲಿ ದೋಷವು ಏಕೆ ಉಂಟಾಗಬೇಕು? ಅವನಿಗೆ ಈ ಕಾಯಕವು ಇಷ್ಟಲಿಂಗ ಪೂಜೆಯಂತೆ ಪರಿಣಮಿಸಿತು.

ಸರಿಯಾಗಿ ನಡಿಸಿದ ಕಾಯಕದಿಂದ ಅಂತರ್ಲಿಂಗವು ಅಥವಾ ಪ್ರಾಣಲಿಂಗವು ಪ್ರಸ್ಫುರಿಸಹತ್ತುತ್ತದೆ. ಕಾಯಕ ಮಾಡುವಲ್ಲಿ ಕಾಯ

ಕದ ಸಾಧನಗಳು, ಕಾಯಕವನ್ನು ನಡಿಸುವವನು ಮತ್ತು ಕಾಯಕದ ಅವನ ಉದ್ದೇಶಗಳು ಇವುಗಳಲ್ಲಿ ಸರಿಯಾಗಿ ಮೇಳವಿರಬೇಕು. ಹೀಗೆ ಮೇಳವಿಸಿ ನಡೆಯುವದೇ ಶಿವಶರಣರ ನಡೆಯಾಗಿರುತ್ತದೆ. ಆ ರೀತಿ ಮಾರಯ್ಯನು ನಡೆದದ್ದರಿಂದ ಅವನು ಇಷ್ಟಲಿಂಗಸಾಧಕನಾದನು.

ಕೆಳಗಿನ ತರಗತಿಯ ಜನರು ಕಿರುಕುಳ ದೇವತೆಗಳನ್ನು ಭಜಿಸುತ್ತ ಹಿಂಸಾಚಾರಿಗಳಾಗಿರುತ್ತಾರೆ. ಆದ್ದರಿಂದ ಶಂಕರದಾಸಿಮಯ್ಯನು ಇಂಥ ಕೀಳ ದೇವತೆಗಳನ್ನು ಸುಟ್ಟುಬಿಡುತ್ತಿದ್ದನು. ಹೀಗೆ ಮಾಡುವದರಿಂದ ಅನ್ಯದೇವತೆಗಳ ಭಜನೆಯು ಜನರಲ್ಲಿ ದೂರಾಗುವದೆಂದು ಅವನು ಭಾವಿಸಿರಬೇಕು. ಆದರೆ ಢಕ್ಕೆಯ ಮಾರಯ್ಯನು ಇಂಥ ಮಾರ್ಗವನ್ನು ಸ್ವೀಕರಿಸಿರುವದಿಲ್ಲ. ಅವನು ಇಂಥ ದೇವತೆಗಳ ಭಜನೆಯನ್ನು ಮಾಡುತ್ತಲೇ ಇಷ್ಟಲಿಂಗ–ಪ್ರಾಣಲಿಂಗಗಳ ಅರಿವನ್ನು ತನ್ನಲ್ಲಿಷ್ಟೇ ಅಲ್ಲ, ಜನರಲ್ಲಿಯೂ ಕೂಡ ಉಂಟುಮಾಡಲು ಪ್ರಯತ್ನಿಸಿದ್ದಾನೆ. ಇದು ಅವನ ಈ ಚರಿತ್ರೆಯ ವೈಶಿಷ್ಟ್ಯವಾಗಿದೆ

ಶಂಕರದಾಸಿಮಯ್ಯನ ಅಂಗಣದಲ್ಲಿ ಜನರು ಜರಗಿಸಿದ ವಾದದಲ್ಲಿ ಮಾರಿಕವ್ವೆಯು ಢಕ್ಕೆಯ ಮಾರಯ್ಯನ ಜ್ಞಾನಶಕ್ತಿ ಎಂದು ಹೇಳಲ್ಪಟ್ಟಿದೆ. ಆದರೆ ನೆರೆದವರಲ್ಲಿ ಕೆಲವರು ಅವನು ಆವನ್ನು ಇದಿರಿಟ್ಟು ಪೂಜಿಸುವದರಿಂದ ಅದು ಎಂದೂ ಅವನ ಇಷ್ಟಲಿಂಗವಾಗಲಾರದು, ಅದು ಸ್ಥಾವರ ದೇವತೆ ಎಂದು ಆಕ್ಷೇಪಿಸಿದರು. ಆದರೆ ಮಾರಯ್ಯನು ಅದು ಹಾಗಿರುವದಿಲ್ಲವೆಂಬುದನ್ನು ತೋರಿಸಲು ಆ ಮೂರ್ತಿಯನ್ನು ತನ್ನ ಇಷ್ಟಲಿಂಗದಲ್ಲಿ ಅಡಗಿಸಿಬಿಟ್ಟನು. ಆಗ ಆ ಲಿಂಗವು ಅವನ ಕೈಯ್ಯ ಮೇಲೆ ಕುಣಿಯಹತ್ತಿತು. ಮತ್ತು ಅವನು ಇಚ್ಛಿಸಿದ ಕೂಡಲೆ ಆ ಮಾರಿಕವ್ವೆಯು ಆ ಇಷ್ಟಲಿಂಗದೊಳಗಿಂದ ಪುನಃ ಹೊರಬಿದ್ದು ತನ್ನ ಪೂರ್ವ ಸ್ವರೂಪವನ್ನು ಹೊಂದಿತು. ಶಿವಾನುಭವದ ಆಚರಣೆಯ ಮೂಲಕ ಇಂಥ ಪರಿಣಾಮಗಳಾಗುವದು ಅಸಂಭವನೀಯವಲ್ಲವೆಂದು ತೋರುತ್ತದೆ.

ಮನುಷ್ಯನಲ್ಲಿ ಅಲೌಕಿಕವಾದ ಲಿಂಗಚೈತನ್ಯವು ಹುದುಗಿರುತ್ತದೆ. ಆದರೆ ಅವನ ಬಾಹ್ಯ ಕ್ರಿಯೆಗಳ ಸದುಪಯೋಗದಿಂದ ಆ ಶಕ್ತಿಯನ್ನು ತನ್ನಲ್ಲಿ ಪ್ರಕಟ ಮಾಡಿಕೊಳ್ಳಬಹುದು. ಇದು ಶಿವಶರಣರ ಚರಿತ್ರೆಯಲ್ಲಿ ಆಗಿಂದಾಗ್ಗೆ ಕಂಡುಬರುತ್ತದೆ.

ಮನುಷ್ಯನ ಲಿಂಗ ಶಕ್ತಿಯು ಅವನಲ್ಲಿ ಅಹಂಕಾರವು ಉಂಟಾದರೆ ಮುಸುಳಿ ಹೋಗುತ್ತದೆ. ಆದ್ದರಿಂದ ಅವನು ಯಾವಾಗಲೂ ಶರಣಾಭಾವವುಳ್ಳವನಾಗಿರಬೇಕು. ಶಂಕರದಾಸಿಮಯ್ಯನು ಈ ಕಾಲದಲ್ಲಿ ತಾನು ಹಣೆಗಣ್ಣನ್ನು ಪಡೆದವನೆಂದು ಅಹಂಕಾರವುಳ್ಳವನಾದ್ದರಿಂದ ಅವನು ತನ್ನ ಕಣ್ಣಿನ ಜ್ವಾಲೆಯಿಂದ ಮಾರಿಕವ್ವೆಯನ್ನು ಸುಡಲು ಶಕ್ತನಾಗಲಿಲ್ಲ. ಇಷ್ಟೇ ಅಲ್ಲ, ಅದು ಅವನ ಹಣೆಗಣ್ಣನ್ನೇ ನುಂಗಿಬಿಟ್ಟಿತು. ಒಮ್ಮೆ ದೇವರದಾಸಿಮಯ್ಯನಿಗೂ ಇದೇ ಸ್ಥಿತಿಯು ಉಂಟಾಯಿತು. ಅವನು ತಾನು ತವನಿಧಿಯನ್ನು ಪಡೆದವನೆಂದು ಅವನಲ್ಲಿ ಅಹಂಕಾರವು ಉಂಟಾದ್ದರಿಂದ ಅವನ ತವನಿಧಿಯೇ ಅಡಗಿಹೋಯಿತು. ಇಂಥ ಸಂಗತಿಗಳು ಅಗ್ಗವಣಿಯ ಹೊನ್ನಯ್ಯ, ಬಸವೇಶ್ವರ ಮೊದಲಾದವರ ಚರಿತ್ರೆಗಳಲ್ಲಿ ಆಗಂದಾಗ್ಗೆ ಕಾಣುತ್ತೇವೆ.

ಒಂದು ಕಾಲದಲ್ಲಿ ಇಷ್ಟಲಿಂಗ-ಪ್ರಾಣಲಿಂಗ, ಜಂಗಮಲಿಂಗ-ಸ್ಥಾವರಲಿಂಗ, ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗ ಇವುಗಳ ಸ್ವರೂಪದ ವಿಷಯವಾಗಿ ಶಿವಶರಣರಲ್ಲಿ ಬಹಳ ವಾದಗಳು ನಡೆದಂತೆ ತೋರುತ್ತದೆ. ಇದು ಅವರ ಚರಿತ್ರೆಗಳಿಂದ ತಿಳಿದುಬರುತ್ತದೆ. ಉದಾಹರಣಾರ್ಥವಾಗಿ ಸಿದ್ಧರಾಮ-ಪ್ರಭುದೇವರ ವಾದ, ನುಲಿಯಚಂದಯ್ಯ-ಮಡಿವಾಳಯ್ಯನ ವಾದ, ಗಟ್ಟಿವಾಳಯ್ಯನ ಲಿಂಗದ ವಿವೇಚನೆ, ಬಸವೇಶ್ವರ ಮತ್ತು ಕೇತಯ್ಯ ಇವರ ಸಂದರ್ಭ ಇವುಗಳಿಂದ ಇದು ಕಂಡುಬರುತ್ತದೆ ಆವರೆ ಶಿವಶರಣರು ಶಿವಾನುಭವ ಮಂಟಪದಲ್ಲಿ ಸೇರಿ ಇಂಥ ವಾದಗ್ರಸ್ತ ವಿಷಯಗಳನ್ನು ಚರ್ಚಿಸಿ ಕೆಲವೊಂದು ಸಿದ್ಧಾಂತಕ್ಕೆ ಬರುತ್ತಿದ್ದರೆಂಬುದು ತಿಳಿದುಬರುತ್ತದೆ.

## ವಚನಗಳು.

(೧) ಅರಿವುಳ್ಳವಂಗೆ ಅರಿವನರಿದಿಹೆನೆಂಬುದೇ ಮಾಯೆ. ಮೂ
ಮರೆದು ಬೇರೊಂದುವ ಕಂಡೆನೆಂಬುದೇ ಮಾಯೆ. ನುಡಿಯ ನು
ವವರಲ್ಲಿ ಎಡಮಾತನಾಡಿ ವಾದಿಸುವದೇ ಮಾಯೆ. ಘಟಮಟವೆಂ
ಮಾರಿಯ ಹೊತ್ತು ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದ್ದೇನೆ. ಥಕ್ಕೆಯ

ದಾವರಕ್ಕೆ ಸಿಕ್ಕಿ ನೊಂದೆನು. ಇದರಚ್ಚುಗವ ಬಿಡಿಸು ಕಾಲಾಂತಕ ಭೀಮೇಶ್ವರ ಲಿಂಗ.

ಭಾವಃ— ಢಕ್ಕೆಯ ಮಾರಯ್ಯನು ಗುರೂಪದೇಶವನ್ನು ಹೊಂದಿ ಇಷ್ಟಲಿಂಗ ಧಾರಕನಾಗುವ ಮೊದಲು ನುಡಿದ ವಚನವು ಇದಾಗಿರಬಹುದು. ಅವನು ಇದರಲ್ಲಿ ಅಹಂಕಾರ ಭರಿತನಾಗಿ ವರ್ತಿಸುವುದೇ ಮಾಯೆ ಎಂದು ಹೇಳಿ, ನಾನು ಮಾರಿಯನ್ನು ಹೊತ್ತುಕೊಂಡು ಢಕ್ಕೆಯ ದನಿ ಮಾಡುತ್ತ ನೊಂದು ತಿರುಗುತ್ತಿದ್ದೇನೆ. ತನ್ನ ಈ ಸ್ಥಿತಿಯನ್ನು ದೂರ ಮಾಡೆಂದು ಇಲ್ಲಿ ಪರಮಾತ್ಮನಲ್ಲಿ ಹೇಳಿಕೊಳ್ಳುತ್ತಿದ್ದಾನೆ.

(೨) ಆವ ಕಾಯಕದಿಂದಾದಡೂ ಆಗಲಿ, ಭಾವ ಶುದ್ಧವಾಗಿ ಮಾಡುವುದೇ ಜಂಗಮ ಪೂಜೆ. ನಿಯಮ ಕ್ರಿ ತಪ್ಪದೆ ಮಾಡುವುದೇ ದೇವ ಪೂಜೆ. ಆವ ಪ್ರಸಂಗ ಬಂದಡೂ ಖಂಡಿಸುವುದೇ ಪಂಡಿತನಿರವು. ತ್ರಿವಿಧ ಬಂದು ಮುಂದೆ ನಿಂದಿರಲು ಅದರಂದವ ನೋಡದಿಪ್ಪುದೇ ನಿಸ್ಸಂಗ ಸುಸಂಗಿಯ ಇರವು. ಇಂತೀ ವಿಚಾರವನರಿದಲ್ಲಿ ಢಕ್ಕೆಯ ದನಿ ಹೊರಗಾಯಿತ್ತು. ಕಾಲಾಂತಕ ಭೀಮೇಶ್ವರ ಲಿಂಗವು ಒಳಗಾಯಿತ್ತು.

ಭಾವಃ— ಬಾಹ್ಯ ಕ್ರಿಯೆಗಳು ಹೋಗಿ ಪರಮಾತ್ಮನನ್ನು ಕಾಣಬೇಕಾದರೆ ಭಾವ ಶುದ್ಧವಾಗಿ ಕಾಯಕವನ್ನು ಮಾಡಬೇಕು ನಿಯಮಿಸಿಕೊಂಡ ಕ್ರಿಯೆಗಳನ್ನು ತಪ್ಪದೇ ಮಾಡಬೇಕು. ಎಂಥ ಪ್ರಸಂಗಗಳು ಬಂದರೂ ನಿಜವನ್ನು ಸ್ಪಷ್ಟವಾಗಿ ಹೇಳಬೇಕು. ಆಣವಮಲ ಮಾಯಾಮಲ ಕಾರ್ಮಿಕಮಲಗಳು ತನ್ನನ್ನು ಆವರಿಸಿದರೂ ಅವುಗಳಿಗೆ ಒಳಗಾಗಬಾರದು. ಹೀಗೆ ವರ್ತಿಸಿದಲ್ಲಿ ಢಕ್ಕೆಯ ಉಲುಹು ಅಡಗಿ ಪರಮಾತ್ಮನು ತನ್ನನ್ನು ಕೂಡುತ್ತಾನೆಂದು ಹೇಳುತ್ತಾನೆ.

(೩) ಕಾಯವೆಂಬ ಢಕ್ಕೆಯ ಮೇಲೆ ಜೀವವೆಂಬ ಹಿಡಿ ಚಂಡು ಬೀಳೆ ತ್ರಿವಿಧವ ತಾ, ತಾ ಎಂಬಾಶೆ ಹಿಂ, ಡಿ, ಡಿಂ, ಡಿ, ಎನ್ನುತ್ತಿದೆ. ಇಂತೀ ಉಲುಹಿನ ಭೇದದಲ್ಲಿ ಹೊಲಬುದಪ್ಪದೆ ಗೆಲಬೇಕು ಕಾಲವೆಂಬ ಮಾರಿಯ ಕಾಲಾಂತಕ ಭೀಮೇಶ್ವರ ಲಿಂಗವನರಿಯಬಲ್ಲಡೆ.

ಭಾವಃ— ಢಕ್ಕೆಯ ಮಾರಯ್ಯನು ತಾನು ತನ್ನ ಕಾಯಕವನ್ನು ಹೇಗೆ ಮಾಡುತ್ತಾ ಇದ್ದೇನೆಂಬುದನ್ನು ಇಲ್ಲಿ ಹೇಳಿದ್ದಾನೆ. ತನ್ನ ಕಾಯವೆಂ

ಬುದು ಒಂದು ಢಕ್ಕೆಯು, ಅದರಲ್ಲಿ ಜೀವವು ಓಡಾಡುತ್ತಿದೆ, ಆ ಜೀವವು ತನಗೆ ಇದು ಬೇಕು, ಅದು ಬೇಕು ಎಂದು ಆಶೆ ಮಾಡುತ್ತಾ ಇದೆ, ಅದರಿಂದ ಅದು ಅನೇಕ ಯಾತನೆಗಳನ್ನು ಅನುಭವಿಸುತ್ತಲಿದೆ. ಆದರೆ ಆ ಯಾತನೆಗಳನ್ನು ನಿಲ್ಲಿಸಲು ಹೊಲಬುದಪ್ಪದೆ ಮಾಯೆಯನ್ನು ಗೆಲ್ಲಬೇಕು, ಎಂದು ಅವನು ತಾನು ಢಕ್ಕೆಯನ್ನು ಹೊಡೆಯುತ್ತಿದ್ದಾಗ ಯಾವ, ಭಾವವುಳ್ಳವನಾಗಿದ್ದೇನೆಂಬುದನ್ನು ಇಲ್ಲಿ ವಿವರಿಸಿ ನುಡಿದಿದ್ದಾನೆ. ಇದೇ ಅವನ ಕಾಯಕದ ರೀತಿಯಾಗಿದೆ.

(೪) ಕ್ರಿಯಾಶಕ್ತಿ ಬ್ರಹ್ಮಂಗೆ ಹಿಂಗಿ, ಇಚ್ಛಾಶಕ್ತಿ ವಿಷ್ಣುವಿಂಗೆ ಹಿಂಗಿ, ಜ್ಞಾನಶಕ್ತಿ ರುದ್ರಂಗೆ ಹಿಂಗಿ, ಉತ್ಪತ್ತಿ ಸ್ಥಿತಿ ಲಯವೆಂಬುದಕ್ಕೆ ಮಾಯಾದೇವಿ ಒಂದೇ ಗೋತ್ರಾಗಿ, ಬಲ್ಲ ಬಲ್ಲವರೆಲ್ಲರ ತನ್ನಲ್ಲಿಯೇ ಅಡಗಿಸುತ ಅರಿದವರೆಲ್ಲರಿಗೆ ದೇವಿಯಾಗಿ ಮರೆದವರಿಗೆ ಮಾರಿಯಾಗಿ ಮೊರದೊಳಗೆ ಕೊಂಡು ಬಂದಿದೇನೆ. ಮೊರಕ್ಕೆ ಮೂರು ಕೊಟ್ಟು, ತಾಯಿ ಗೈದು, ಬಾಯ ಬೇಡುವಾತನ ಬಾಯಿ ಒಂದೇಯಾಯಿತ್ತು. ಢಕ್ಕೆಯ ಧನಿಗೇಳಿ ಬೆಚ್ಚುವುದಕ್ಕೆ ಮುನ್ನವೇ ಕಾಲಾಂತಕ ಭೀಮೇಶ್ವರ ಲಿಂಗವನರಿಯಿರಣ್ಣಾ.

ಭಾವಃ— ಈ ವಚನವು ಅಲ್ಲಲ್ಲಿ ಅಶುದ್ಧವಾಗಿದೆ. ಇದರಲ್ಲಿ ಅರಿದವಂಗೆ ಮಾಯೆಯು ದೇವಿಯಾಗಿ ರಕ್ಷಿಸುತ್ತಾಳೆ. ಮತ್ತು ಮರೆದವರಿಗೆ ಮಾರಿಯಾಗಿ ಕಾಡುತ್ತಾಳೆ ಎಂದು ಹೇಳಿ ಇಂಥ ಮಾರಿಯನ್ನು ನಾನು ಮೊರದಲ್ಲಿ ಇಟ್ಟುಕೊಂಡು ಬಂದಿದ್ದೇನೆ. ನಾನು ಢಕ್ಕೆಯನ್ನು ಹೊಡೆದು ಧ್ವನಿಗೈಯ್ಯುವೆನು. ಈ ಧ್ವನಿಯನ್ನು ನೀವು ಕೇಳಿ ಅಂಜಬಹುದು. ಆದರೆ ಹಾಗೆ ಅಂಜಬಾರದು. ನೀವು ಅಂಜುವುದಕ್ಕೆ ಮುನ್ನವೇ ನೀವು ಪರಮಾತ್ಮನನ್ನು ಕಾಣಬೇಕು ಎಂದು ಎಚ್ಚರು ಹೇಳುತ್ತಾನೆ. ಇಲ್ಲಿ ಢಕ್ಕೆಯ ಮಾರಯ್ಯನು ತಾನು ಕಾಯಕ ಮಾಡುವಲ್ಲಿ ಯಾವ ಬಗೆಯ ಉಪದೇಶವನ್ನು ಮಾಡುತ್ತಾ ಇದ್ದೇನೆಂಬುದನ್ನು ಹೇಳಿ ತನ್ನ ಢಕ್ಕೆಯ ಧ್ವನಿಗೆ ನೀವು ಅಂಜಬಾರದು, ಪರಮಾತ್ಮನನ್ನು ಅರಿಯಬೇಕೆಂದು ಬುದ್ಧಿ ಹೇಳಿದ್ದಾನೆಂಬ ಭಾವವಿದೆ.

(೫) ಕೈ ಕೈದುವ ಹಿಡಿದು ಹೋರುವಾಗ ಕೈದೋ, ಕೈಯ್ಯೋ ಮನವೋ? ಅಂಗ ಲಿಂಗ ಸಂಬಂಧದಲ್ಲಿ ಸಂಬಂಧಿಸುವಾಗ ಅಂಗವೋ

ಲಿಂಗವೋ ಆತ್ಮನೋ? ಈ ಮೂರಂಗವನರಿದಲ್ಲಿ ಕಾಲಾಂತಕ ಭೀಮೇಶ್ವರ ಲಿಂಗವನರಿದುದು.

ಭಾವಃ— ಇದರಲ್ಲಿ ವಚನಕಾರನು ಕಾಯಕವನ್ನು ಮಾಡುವಲ್ಲಿ ಅದರಲ್ಲಿ ಹೇಗೆ ಏಕಾಗ್ರಚಿತ್ತದಿಂದಿರಬೇಕೆಂಬುದನ್ನು ಬಹು ಸ್ವಾರಸ್ಯಪೂರ್ಣವಾಗಿ ನುಡಿದಿದ್ದಾನೆ.

(೬) ತನಗಿದಿರಿಟ್ಟು ಕಾಂಬುದೆಲ್ಲವು ತನಗನ್ಯ ದೈವ. ತಾ ಕುರುಹ ಳಿದು, ತನಗನ್ಯವೆಂಬುದೊಂದಿಲ್ಲವಾಗಿ ಅದು ತನಗೆ ಭಿನ್ನವಿಲ್ಲದ ದೈವ. ಅಹಂಕಾರಾತ್ಮ ಘಟದ ಮಾರಿಯು ಹೊತ್ತು ಉಲುಹೆಂಬ ಘಕ್ಕೆಯು ಪಿಡಿದು ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದೇನೆ. ಘಕ್ಕೆಯು ದನಿಯು ಬಿಡಿಸಾ ಕಾಲಾಂತಕ ಭೀಮೇಶ್ವರ ಲಿಂಗ.

ಭಾವಃ— ಇಲ್ಲಿ ವಚನಕಾರನು ಅನ್ಯದೈವವಾವುದೆಂಬುದನ್ನು ಹೇಳಿದ್ದಾನೆ. ತನಗಿದಿರಿಟ್ಟು ಪೂಜಿಸುವುದೆಲ್ಲವೂ ಅನ್ಯ ದೈವವು. ಆದರೆ ನಾನು ಈ ಮಾರಿಯು ಬಾಹ್ಯ ಕುರುಹು ಎಂಬುದನ್ನು ಅಳಿದು ತನಗನ್ಯವಾದುದೆಂದು ತಿಳಿದಿಲ್ಲ. ಆದುದರಿಂದ ಅದು ತನಗೆ ಭಿನ್ನವಲ್ಲದ ದೈವವು. ಅಂದರೆ ಅದು ಜ್ಞಾನ ಸ್ವರೂಪವೆಂದು ತಿಳಿದಿದ್ದಾನೆ. ಆದರೂ ಈ ಸ್ಥಿತಿಯು ನನಗೆ ಇನ್ನೂ ಅಳವಟ್ಟಿಲ್ಲೆಂದು ಅವನು ಇಲ್ಲಿ ದುಃಖಿಸುತ್ತ ಇದ್ದಾನೆ. ಅದನ್ನು ಅಳವಡಿಸುವಂತೆ ಮಾಡೆಂದು ವಚನಕಾರನು ಇಲ್ಲಿ ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ. ವಚನಕಾರನ ಚರಿತ್ರೆಯಲ್ಲಿ ಬಂದ ವಿಷಯವನ್ನೇ ಈ ವಚನವು ಉಲ್ಲೇಖಿಸಿರುತ್ತದೆ. ಮಾರಿಯನ್ನು ಯಾವ ಭಾವದಿಂದ ಪೂಜಿಸುತ್ತೇನೆಂಬುದನ್ನು ಅವನು ಇಲ್ಲಿ ಸ್ಪಷ್ಟಪಡಿಸಿದ್ದಾನೆ. ಆದರೆ ಆ ಭಾವವು ತನಗೆ ಇನ್ನೂ ಅಳವಟ್ಟಿಲ್ಲೆಂದು ಹೇಳಿದ್ದು ಅದು ಆತನ ಅಹಂಕಾರ ರಹಿತವಾದ ಮನೋವೃತ್ತಿ ಎಂದು ತೋರುತ್ತದೆ.

(೭) ತ್ರಿವಿಧ ದೇವ, ಕುಲ, ಜಾತಿ ಆವನಾದಡೂ ಆಗಲಿ, ಪಂಡಿತ ವಿದಗ್ಧ, ಜಾಣ, ಗಂಭೀರ ಸಂಪದನಾದಡೂ ಆಗಲಿ, ಯಾಚಕತನದಲ್ಲಿ ಘಾತುಕತನದಿಂದ ಬೇಡುವುದು ಜೀವನ. ಆ ಜೀವನವ ಮರೆದೊರಗಿರುವುದು ಮಾರಿ. ಆ ಮರವೆಯು ಹರಿದುದೇ ಕಾಲಾಂತಕ ಭೀಮೇಶ್ವರ ಲಿಂಗವು.

ಭಾವ:— ವಚನಕಾರನು ಭಿಕ್ಷೆಯನ್ನು ತಿರಸ್ಕರಿಸುತ್ತ ಭಿಕ್ಷೆಬೇಡು ವರ ಜೀವನವನ್ನು ಮರೆತು ಒರಗಿರುವುದೇ ಮಾರಿ ಎಂದು ಹೇಳಿದ್ದಾನೆ. ಭಿಕ್ಷೆ ಎಂಬ ಮರಸೆಯನ್ನು ಹರಿವಲ್ಲಿ ಮೋಕ್ಷವೆಂದು ಹೇಳುತ್ತಾನೆ. ಈ ವಚನದಲ್ಲಿ ತಾನು ಪೂಜಿಸುವ ಮಾರಿ ಅವುದೆಂಬುದನ್ನು ವಚನಕಾರನು ಹೇಳಿದ್ದಾನೆ.

(೮) ಬ್ರಹ್ಮಂಗೆ ಸರಸ್ವತಿಯಾಗಿ ಬೆನ್ನಿಲಿ ಬಂದಳಾ ಮಾಯೆ. ವಿಷ್ಣು ವಿಂಗೆ ಲಕ್ಷ್ಮಿಯಾಗಿ ಭವಕ್ಕೆ ತಿರುಗಿಸಿದಳಾ ಮಾಯೆ. ರುದ್ರಂಗೆ ಉಮಾ ದೇವಿಯಾಗಿ ಶಿರತೊಡೆಯಲ್ಲಿ ಕಾಡಿದಳು ಮಾಯೆ. ಎಳ್ಳಿಗೆ ಎಣ್ಣೆ ಮುಳ್ಳಿಗೆ ಮೊನೆಯಾಗಿ ಹೂವಿಗೆ ಗಂಧವಾಗಿ ಅವರವರಂಗದಲ್ಲಿ ಹಿಂಗದೆ ಪ್ರತಿ ರೂಪಾಗಿ ಸಂದಿಲ್ಲದೆ ಕಾಡುತ್ತಿದ್ದಾಳೆ ಮಾಯೆ. ಢಕ್ಕೆಯ ಉಲುಹು ಅಡಗುವದಕ್ಕೆ ಮುನ್ನವೇ ನಿಶ್ಚಯಿಸಿಕೊಳ್ಳಿ ಕಾಲಾಂತಕ ಭೀಮೇಶ್ವರ ಲಿಂಗ ವನರಿಯಬಲ್ಲಡೆ.

ಭಾವ:— ನಾನು ಸಾಯುವವರೆಗೂ ಕಾಯಕ ಮಾಡುವೆನು. ಕಾಯಕ ಮಾಡುತ್ತ ಸತ್ತುಹೋಗುವ ಮೊದಲೇ ಪರಮಾತ್ಮನನ್ನು ಅರಿತುಕೋ ಎಂದು ವಚನಕಾರನು ತನಗೆ ಹೇಳಿಕೊಳ್ಳುತ್ತಿದ್ದಾನೆ.

(೯) ಮಹಾ ಕಾಳಂಧರ ಹಿಂಗಿ ಮಹಾದೇವನ ಮರೆದವರಿಗೆ ಮಾಯಾಂಗನೆ ಮಾರಿಯಾದಳು. ಸತ್ಕ್ರಿಯ ಸಜ್ಜನ ಯುಕ್ತಿಯಿಂದ ಸದಾ ಶಿವನನರಿಯಲಾಗಿ ಉಮಾದೇವಿಯಾದಳು. ಇಂತೀ ಗುಣವ ಮರೆದಡೆ ಮಾಯೆಯಾಗಿ ಅರಿದಡೆ ಸಮವಾಗಿ ತನಗನ್ಯ ಭಿನ್ನವಿಲ್ಲದೆ ಢಕ್ಕೆಯ ಉಲುಹು ಅಡಗುವುದಕ್ಕೆ ಮೊದಲೇ ಕಾಲಾಂತಕ ಭೀಮೇಶ್ವರ ಲಿಂಗವ ನರಿಯಬೇಕು.

ಭಾವ:— ಇದರಲ್ಲಿ ವಚನಕಾರನು ಮಹಾದೇವನನ್ನು ಮರೆವಲ್ಲಿ ಮಾರಿಯು, ಮರೆಯದಿದ್ದರೆ ಉಮಾದೇವಿಯು ಎಂದು ಹೇಳಿದ್ದಾನೆ. ಅವನು ಮಾರಿಯು ತನಗನ್ಯ ಭಿನ್ನವಿಲ್ಲವೆಂದು ತಿಳಿಯುತ್ತೇನೆ, ಹೀಗೆ ತಿಳಿದುಕೊಂಡು ಢಕ್ಕೆಯ ಉಲುಹು ಅಡಗುವವಕ್ಕೆ ಮುನ್ನವೇ ನಾನು ಸಾಮರಸ್ಯವನ್ನು ಹೊಂದುತ್ತೇನೆಂದು ಹೇಳುತ್ತಾನೆ.

(೧೦) ಮಾಯಾಗುಣ ರೂಪಾದಲ್ಲಿ ಮಲಕ್ಕೊಡಲಾಯಿತ್ತು. ಮಲ ಸ್ವರೂಪಾಗಿ ನಿಂದಲ್ಲಿ ಬಲವಂತರೆಲ್ಲರು ಮಲದ ಬೆಂಬಳಿಯಲ್ಲಿ ಮರುಳಾದರು.

ಮರುಳಾಟದಲ್ಲಿ ಮಾರಿ ಒಲವರವಾಗಿ ಮನಶುದ್ಧವಿಲ್ಲದವರ ಮನೆ ಮನೆಯಲ್ಲಿ ವಿಕಾರವ ಮಾಡುತ್ತಿದ್ದಾಳೆ. ಮಾರಿಯು ಮುರಿದು ದ್ವಾರಾವತಿಯ ಕೆಡಿಸಿ ಕೈಯ್ಯ ಢಕ್ಕೆಯ ಗತಿ ಹಿಂಗಿ ಮಾಯೆಯ ಬಾಗಿಲ ಭ್ರಾಂತಿಯ ಬಿಟ್ಟಲ್ಲಿ ಕಾಲಾಂತಕ ಭೀಮೇಶ್ವರ ಲಿಂಗವನರಿವುದು.

(೧೧) ಸ್ಥೂಲಮಯ ಸೂಕ್ಷ್ಮಮಯ ಕಾರಣಮಯಂಗಳಲ್ಲಿ ಇಷ್ಟ ಪ್ರಾಣ ಭಾವಂಗಳಲ್ಲಿ ಉಚಿತವನರಿದು ಮಾಡುವುದೇ ಯೋಗ. ಆ ಯೋಗವ ಪ್ರಯೋಗಿಸಿ ನಿಂದಲ್ಲಿ ಕಾಲಾಂತಕ ಭೀಮೇಶ್ವರ ಲಿಂಗದಲ್ಲಿ ಉಭಯವಳಿದ ಭಾವ.

ಇಲ್ಲಿ ಉದಹರಿಸಿದ ವಚನಗಳ ಮೇಲಿಂದ ಢಕ್ಕೆಯ ಮಾರಯ್ಯನು ಕೇವಲ ಶಿವಾನುಭವಿಯಾಗಿ ಢಕ್ಕೆಯನ್ನು ಬಾರಿಸುತ್ತ ಮಾರಿಯನು ಕುಣಿಸುವ ಕಾಯಕವನ್ನು ಮಾಡುತ್ತಿದ್ದನೆಂಬುದು ಸ್ಪಷ್ಟವಾಗುತ್ತದೆ. ಅವನು ತ್ರಿಲಿಂಗಗಳ ಆಚರಣೆಯನ್ನು ಬಲ್ಲವನಾಗಿದ್ದನೆಂತಲೂ ಅವನು ಕಾಯಕಕ್ಕೋಸ್ಕರ ಇಟ್ಟುಕೊಂಡ ಮಾರಿಯನ್ನು ಸಾಮಾನ್ಯ ಜನರು ಭಾವಿಸುತ್ತಿರುವಂತೆ ಭಾವಿಸುತ್ತಿದ್ದಿಲ್ಲವೆಂತಲೂ ಲಿಂಗಾನುಭವಕ್ಕೋಸ್ಕರ ಅಂತರಂಗದ ಕುರುಹನ್ನಾಗಿ ಇಟ್ಟುಕೊಂಡಿದ್ದನೆಂತಲೂ ತೋರಿಬರುತ್ತದೆ.

ಢಕ್ಕೆಯ ಮಾರಯ್ಯನು ಶಂಕರದಾಸಿಮಯ್ಯನ ಸಮಕಾಲೀನನಾದುದರಿಂದ ಅವನು ೧೧ ನೇ ಶತಮಾನದ ಮಧ್ಯದಲ್ಲಿರಬೇಕು. ಆದುದರಿಂದ ಅವನು ಬಸವೇಶ್ವರನಕಿಂತಲೂ ಒಂದು ನೂರು ವರ್ಷ ಮೊದಲಿನವನಾಗುತ್ತಾನೆ. ಅವನಿದ್ದ ಗ್ರಾಮವು ಶಂಕರದಾಸಿಮಯ್ಯನಿದ್ದ ಕಂದಗಲ್ಲು ಇರಬಹುದೆಂದು ನಾವು ಊಹಿಸಬಹುದಾಗಿದೆ. ಈ ಕಂದಗಲ್ಲು ವಿಜಾಪುರ ಜಿಲ್ಲಾ ಹುನಗುಂದ ತಾಲೂಕಿನಲ್ಲಿರುವ ಇಲಕಲ್ಲ ಗ್ರಾಮದಿಂದ ಪೂರ್ವ ದಿಕ್ಕಿಗೆ ೧೦ ಮೈಲುಗಳ ಮೇಲೆ ಇರುತ್ತದೆ.

# ಗಾಣದ ಕನ್ನಪ್ಪ

ಗಾಣದ ಕನ್ನಪ್ಪನೆಂಬ ಶಿವಶರಣನು ಕಲ್ಯಾಣ ಪಟ್ಟಣದಲ್ಲಿ ವಾಸ ಮಾಡಿಕೊಂಡಿದ್ದನು. ಅವನ ಹೆಂಡತಿಯ ಹೆಸರು ರೇಚವ್ವೆ. ಉಭಯತರು ಶಿವಭಕ್ತಿ ಸಂಪನ್ನರು. ಅವರು ಕಲ್ಯಾಣ ಪಟ್ಟಣದಲ್ಲಿ ಬಸವೇಶ್ವರನ ಸನ್ನಿಧಿಯಲ್ಲಿ ನಡೆಯುತ್ತಿದ್ದ ಶಿವಾನುಭವ ಸದ್ಗೋಷ್ಠಿಗಳನ್ನು ಕೇಳಿ ಲಿಂಗಭಕ್ತಿಯುಳ್ಳವರಾಗಿ ಷಟ್‌ಸ್ಥಲಾಚರಣೆಯಲ್ಲಿ ನಿರತರಾಗಿದ್ದರು. ಆದರೆ ಉಭಯತರು ಗುಪ್ತಭಕ್ತಿಯುಳ್ಳವರು. ಆದ್ದರಿಂದ ಅವರ ಭಕ್ತಿಯು ಎಷ್ಟು ಗಾಢವಾಗಿದ್ದಿತೆಂಬುದನ್ನು ಯಾರೂ ಅರಿತಿರಲಿಲ್ಲ. ಗಾಣದ ಕನ್ನಪ್ಪನು ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಯಾವಾಗಲೂ ಕೇಳುವವನಾದ್ದರಿಂದ ಅವನು ತನ್ನ ಅನುಭಾವಗಳನ್ನು ಕುರಿತು ವಚನಗಳನ್ನು ರಚಿಸುವವನಾದನು. ಈ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿ ಅತ್ಯಂತ ಮನ್ನಣೆಯನ್ನು ಹೊಂದಿ ಎಲ್ಲರಿಗೂ ಮಾರ್ಗದರ್ಶಿಯಾದವನು ಅಲ್ಲಮ ಪ್ರಭುವು. ಆದ್ದರಿಂದ ಗಾಣದ ಕನ್ನಪ್ಪನು ಅಲ್ಲಮ ಪ್ರಭುವಿನ ಹೆಸರಿನಿಂದಲೇ ತನ್ನ ವಚನಗಳನ್ನು ರಚಿಸಿದ್ದಾನೆ. ಅವನ ವಚನಗಳ ಮುದ್ರಿಕೆಯು 'ಗುಹೇಶ್ವರನ ಶರಣ ಅಲ್ಲಮ' ಎಂಬುದಾಗಿದೆ. ಹೀಗೆ ಕನ್ನಪ್ಪನು ಅನೇಕ ವರ್ಷ ಪರ್ಯಂತರ ಕಲ್ಯಾಣಪಟ್ಟಣದಲ್ಲಿ ವಾಸವಾಗಿದ್ದನು.

ಕನ್ನಪ್ಪನು ನಿತ್ಯಮಾಡುವ ಕಾಯಕವು ಮೀನು ಹಿಡಿಯುವದೇ ಆಗಿತ್ತು. ಅವನು ದಿನಾಲು ಮುಂಜಾವಿನಲ್ಲೆದ್ದು ಲಿಂಗಪೂಜಾದಿ ಕ್ರಿಯೆಗಳನ್ನು ತೀರಿಸಿಕೊಂಡು ಗಾಣವಲೆ ಬೀಸುವಲೆ ಮೊದಲಾದ ಬಲೆಗಳನ್ನು ತೆಗೆದುಕೊಂಡು ತ್ರಿಪುರಾಂತಕೇಶ್ವರನ ಕೆರೆಯಲ್ಲಿ ಮೀನುಗಳನ್ನು ಹಿಡಿಯುತ್ತ ಕುಳ್ಳಿರುವನು. ಹೀಗೆ ಮೀನುಗಳನ್ನು ಹಿಡಿದು ಅವುಗಳನ್ನು ಪೇಟೆಯಲ್ಲಿ ವಿಕ್ರಯಿಸಿ ಬಂದ ಲಾಭವನ್ನು ಜಂಗಮರಿಗೆ ನೀಡಿ ವೀರಶೈವ ಧರ್ಮದ ಪ್ರಕಾರ ಮಾರ್ಗ ಕ್ರಿಯಾಚರಣೆಯನ್ನು ಪಾಲಿಸುತ್ತ ಬಂದನು. ಹೀಗಿರಲು ಒಂದು ದಿವಸ ಅವನ ಮನಸ್ಸಿನಲ್ಲಿ ತನ್ನ ಮನೆಯಲ್ಲಿ ಗಣಪರ್ವವನ್ನು ಮಾಡಬೇಕೆಂಬ ಅಭಿಲಾಷೆಯುಂಟಾಯಿತು. ಆ ದಿನ ಅವನು ತನ್ನ ಲಿಂಗಪೂಜೆಯಲ್ಲಿ ರತನಾಗಿ ಕುಳಿತಿರಲು ಆ ಸಮಯದಲ್ಲಿ—ನಿನಗೇನು ಬೇಕು ಬೇಡು ಎಂಬ ಶಬ್ದಗಳು ಅವನ ಕಿವಿಗೆ ತಾಕಿದಂತಾದವು. ಆಗ ಅವನು

ನನಗೊಂದು ಸ್ವರ್ಣಮತ್ಸ್ಯವನ್ನು ಕೊಡುವುದು ಎಂದು ಉಚ್ಚರಿಸಿದನು. ಹಾಗೆಯೇ ಆಗಲೆಂಬ ಶಬ್ದಗಳನ್ನು ಅವನು ಪುನಃ ಕೇಳಿ ತ್ರಿಪುರಾಂತಕೇಶ್ವರನ ಕೆರೆಗೆ ಬಂದು ಬಲೆ ಹಾಕಿರಲು ಅವನ ಗಾಳಕ್ಕೆ ಒಂದು ನಿಜವಾದ ಹೇಮದ ಮತ್ಸ್ಯವೇ ತಗುಲಿಬಂದಿತು! ಅವನು ಅದನ್ನು ಸಂತೋಷದಿಂದ ತೆಗೆದುಕೊಂಡು ಪೇಟೆಗೆ ಬಂದು ಮಾರಲು ಅವನಿಗೆ ಅದರಿಂದ ಭಾರೀ ಹಣವು ದೊರೆಯಿತು. ಆಗ ಅವನು ಶಿವಾನುಭವ ಮಂಟಪಕ್ಕೆ ಹೋಗಿ ಅಲ್ಲಿದ್ದ ಚರಮೂರ್ತಿಗಳಿಗೆ ತನ್ನ ಮನೆಗೆ ಆ ದಿನ ಪ್ರಸಾದಕ್ಕೆ ಬರಬೇಕೆಂದು ಬಿನ್ನಹಮಾಡಿ ಮನೆಗೆ ಬಂದನು.

ಭೋಜನ ಸಮಯವಾಯಿತು. ಆಗ ಬಹು ಜನ ಜಂಗಮರು ಅವನ ಮನೆಗೆ ಬರಹತ್ತಿದರು. ಅಲ್ಲಿ ಅವರು ಬಂದು ನೋಡುತ್ತಾರೆಯೇ ಅವನ ಅಂಗಣದಲ್ಲಿ ಸತ್ತ ಮೀನುಗಳೇ ಬಿದ್ದಿದ್ದವು. ಎಲ್ಲೆಲ್ಲಿಯೂ ದುರ್ಗಂಧವೇ ಮುಸುಕಿ ಹೋಗಿತ್ತು. ಅದನ್ನು ಅವರು ನೋಡಿ ಹೇಸಿ ಹೊರಗಿನಿಂದಲೇ ಹೊರಟುಹೋಗಿ ಬಸವೇಶ್ವರನ ಮನೆಗೆ ಬಂದರು. ಕನ್ನಪ್ಪನು ಮನೆಯೊಳಗಿಂದ ಹೊರಗೆ ಬರುವಷ್ಟರಲ್ಲಿ ಜಂಗಮರೆಲ್ಲರೂ ಹೋಗಿಬಿಟ್ಟುದನ್ನು ನೋಡಿ ಅವರನ್ನು ಕರೆತರಲು ಬಸವನ ಮಂದಿರಕ್ಕೆ ಬರಲು ಅವರು ಅವನಿಗೆ—ನೀನೆಲ್ಲಿಯ ಭಕ್ತ? ನಿನ್ನ ವಿಭೂತಿ ರುದ್ರಾಕ್ಷಿ ಲಿಂಗವನ್ನು ನೋಡಿ ನಂಬಿ ಬಂದೆವು. ಇನ್ನು ಮೇಲೆ ನಿನ್ನ ಮನೆಗೆ ನಾವು ಬಾರೆವು ಎಂದು ಹೇಳಿ ಅವರು ಅವನ ಲಿಂಗವನ್ನು ಕಿತ್ತು ಅವನನ್ನು ಹೊರಗೆ ಹಾಕಿದರು.

ಮುಂದೆ ಆ ಜಂಗಮರು ಬಸವೇಶ್ವರನ ಅರಮನೆಯಲ್ಲಿ ಭೋಜನಕ್ಕೆ ಕುಳಿತುಕೊಂಡು ಲಿಂಗಾರ್ಚನೆ ಮಾಡುತ್ತಿರುವಾಗ್ಗೆ ಅವರು ತಮ್ಮ ಲಿಂಗ ಸಜ್ಜೆಗಳನ್ನು ನೋಡುತ್ತಾರೆಯೇ, ಅವುಗಳಲ್ಲಿ ಲಿಂಗವಿರಲಿಲ್ಲ! ಆಗ ಅವರು ಅಂಜಿ ಜರ್ಜರಿತರಾದರು. ಬಸವೇಶ್ವರನು ಅವರಿಂದ ನಡೆದ ಸಂಗತಿಗಳನ್ನೆಲ್ಲ ತಿಳಿದುಕೊಂಡು— ಶಿವನು ಸರ್ವತೋಮುಖನಾಗಿದ್ದಾನೆ. ಈ ಜಂಗಮರು ತಪ್ಪು ಮಾಡಿದ್ದಾರೆಂದು ತಿಳಿದು ಅವನು ತಾನಾಗಿಯೇ ಗಾಣದ ಕನ್ನಪ್ಪನ ಮನೆಗೆ ಬಂದು ಅವನಿಗೆ ಜಂಗಮರು ನಿನ್ನ ಲಿಂಗವನ್ನು ಕಸೆದು ಅಪರಾಧ ಮಾಡಿದ್ದಾರೆ. ಅವರನ್ನು ಕ್ಷಮಿಸಿ. ಅವರ ಲಿಂಗವನ್ನು ಅವರಿಗೆ ಕೊಡಬೇಕೆಂದು ಅವನಿಗೆ ನಮಸ್ಕರಿಸಿದನು. ಆಗ ಕನ್ನಪ್ಪನು ಜಂಗ

ಮತು ನನ್ನ ಲಿಂಗವನ್ನು ಕಸೆದಿದ್ದರ ಪರಿಣಾಮವಾಗಿ ಅವರಿಗೆ ಹೀಗಾಗಿ ರಬೇಕೆಂದು ಊಹಿಸಿ—ನಾನು ಈಗ ತ್ರಿಪುರಾಂತಕೇಶ್ವರನ ಕೆರೆಗೆ ಹೋಗು ವೆನು. ಅಲ್ಲಿಗೆ ಲಿಂಗಗಳನ್ನು ಕಳೆದುಕೊಂಡ ಜಂಗಮರೆಲ್ಲರಿಗೂ ಬರ ಹೇಳೆಂದು ಬಸವೇಶ್ವರನಿಗೆ ಹೇಳಿ- ತಾನು ಕೆರೆಯ ತಡಿಯಲ್ಲಿ ಬಂದು ಶಿವ ನನ್ನು ಧ್ಯಾನಿಸಹತ್ತಿದನು. ಅಷ್ಟರಲ್ಲಿ ಲಿಂಗವನ್ನು ಕಳೆದುಕೊಂಡ ೩೬ ಜನ ಜಂಗಮರು ಅಲ್ಲಿಗೆ ಬರಲು ಕನ್ನಪ್ಪನ ಧ್ಯಾನದ ಮೂಲಕ ಅವರ ೩೬ ಲಿಂಗಗಳು ಕೆರೆಯ ನೀರಿನ ಮೇಲಿನಿಂದ ಹರಿದು ಬರಹತ್ತಿದವು! ಅವುಗ ಳನ್ನು ಅವರು ತಿರುಗಿ ತೆಗೆದುಕೊಂಡು—ಕನ್ನಪ್ಪನೇ ನಾವು ನಿನಗೆ ಅಪ ರಾಧ ಮಾಡಿದೆವು. ನೀನೇ ನಿಜವಾದ ಶರಣನು. ನೀನೇ ನಮ್ಮ ಗುರುವು ಎಂದು ಸ್ತುತಿಸುತ್ತ ಮರಳಿ ಹೋದರು.

ನಮ್ಮ ಹತ್ತಿರ ಗಾಣದ ಕನ್ನಪ್ಪನ ೧೦ ವಚನಗಳು ಮಾತ್ರ ಇವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ಇಲ್ಲಿ ಉದಹರಿಸುತ್ತೇವೆ.

(೧) ತನ್ನ ತಾ ಬೀಳುವುದು ಕಂಡು ತಳ್ಳಿ ಹಗೆಯಾಗಲೇಕೆ? ಒಡೆ ದುದ ಕಂಡು ಒಡೆಯರಿ ಎನಲೇಕೆ? ಇರಿ ಬಿಡು ಮುಡಿಯನರಿಯನರಿಯದೆ ಒಡೆಯರೆಂದು ಕೊಡುವ ಕಾಲ ಪಳಿಹಕ್ಕೆ ಇವರಕೊಡೆಯರಲ್ಲದೆ ಅಸಮಾಕ್ಷ ರಲ್ಲ. ಇಂತೀ ಗಸಣಿಗಿನ್ನೇವೆ ಕನ್ನಯ್ಯ ಪ್ರಿಯ ಗುಹೇಶ್ವರ ಶರಣ ಅಲ್ಲಮ.

ಇದು ಅಶುದ್ಧವಾಗಿದೆ. ಅರ್ಥವು ಅಸ್ಪಷ್ಟವಾಗಿದೆ. ಆದರೆ ಇದರ ಮುದ್ರಿಕೆಯಲ್ಲಿ ಕನ್ನಯ್ಯ ಪ್ರಿಯ ಎಂದಿರುವದರಿಂದ ಈ ವಚನವು ಗಾಣದ ಕನ್ನಪ್ಪನದೆಂದು ಸಿದ್ಧವಾಗುತ್ತದೆ.

(೨) ಗಾಣವ ಹಾಕಲಾಗಿ ಆಧಾರ ಸಿಕ್ಕಿದರು? ಅರೈಕೆಗೊಳ್ಳಯ್ಯ. ಐದಕ್ಕೊಂದು ಹೋಗಿ ನಾಲ್ಕರಲ್ಲಿ ನಾಚಿಕೆಗೆಟ್ಟ. ಜಗದಾಸೆಯ ಬಯಕೆ ಯಿಂದ ದಶಾವತಾರವಾದ. ಇಷ್ಟರ ಇಂದ್ರಿಯಕ್ಕಾಗಿ ಪಾಶವ ಹೊತ್ತ ತಲೆ ಯಲ್ಲಿ. ಇಂತೀ ವೇಷಧಾರಿ ಹಾಕಿದ ಗಾಣದಲ್ಲಿ ಯಷ್ಟಕ್ಕೆ ಸಿಕ್ಕಿ ಘಾಸಿ ಯಾದರು. ಇನ್ನೀಸುವವರಾರಯ್ಯ ಗುಹೇಶ್ವರನ ಶರಣ ಅಲ್ಲಮನಲ್ಲದೆ?

ಇದರಲ್ಲಿ ವಚನಕಾರನು ತನ್ನ ಗಾಣ ಹಾಕುವ ಕಾಯಕವನ್ನು ಕುರಿತು ಹೇಳಿದ್ದಾನೆ. ಗಾಣವೆಂದರೆ ಗಾಣಿಗರು ಉಪಯೋಗಿಸುವ ಗಾಣವರದೆ ಮೀನು ಬಲೆಗಾರರು ಹಾಕುವ ಬಲೆ ಎಂಬ ಅರ್ಥವು ಈ ಶಬ್ದಕ್ಕೆ ಇದೆ.

(೩) ನಾ ಬಂದುದಕ್ಕೆ ಮಾಡಿದೆ. ನೀ ಕಳುಹಿದವರ ಕೊಂದೆ, ಬಂಧೆ. ನೀವಿರಿಸಿದಂತಿದ್ದು ಎನಗಿನ್ನು ಬಂಧ ಮೋಕ್ಷವೇಕೆ ? ಕನ್ನಯ್ಯ ಪ್ರಿಯ ಗುಹೇಶ್ವರನ ಶರಣ ಅಲ್ಲಮನಲ್ಲಿ ಲೇಪವಾದವಂಗೆ ?

ಉಳಿದ ವಚನಗಳಲ್ಲಿ ಗೂಢಾರ್ಥಗಳಿದ್ದು ಅವು ಬಹು ಅಸ್ಪಷ್ಟವಾಗಿವೆ. ಆದ್ದರಿಂದ ಅವುಗಳನ್ನು ನಾವು ಇಲ್ಲಿ ಉದಹರಿಸುವದಿಲ್ಲ.

ಶಿವಶರಣರೆಲ್ಲರೂ ಅಹಿಂಸಾಚಾರಿಗಳು. ಆದರೆ ಶಿವಶರಣರಲ್ಲಿ ಮೂವರು ಇದಕ್ಕೆ ಅಪವಾದಗಳಾಗಿದ್ದಾರೆ. ಶ್ವಪಚಯ್ಯ, ತೆಲುಗು ಜೊಮ್ಮಯ್ಯ ಮತ್ತು ಗಾಣದ ಕನ್ನಪ್ಪ ಇವರು ಇದ್ದಾರೆ. ಇವರೆಲ್ಲರೂ ಶಿವಶರಣರಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದವರು. ಶ್ವಪಚಯ್ಯನು ಬಸವೇಶ್ವರನಕಿಂತಲೂ ಬಹಳ ಹಿಂದಿನವನು. ತೆಲುಗು ಜೊಮ್ಮಯ್ಯನು ಅವನಕಿಂತ ೬೦-೭೦ ವರ್ಷ ಮೊದಲು ಇದ್ದವನು. ಆದರೆ ಗಾಣದ ಕನ್ನಪ್ಪನು ಅವನ ಸಮಕಾಲೀನನು. ಇದೊಂದು ವಿಚಾರಾರ್ಹವಾದ ಸಂಗತಿಯಾಗಿದೆ. ಒಂದು ಧರ್ಮವು ಪ್ರಸಾರ ಹೊಂದುವ ಕಾಲದಲ್ಲಿ ಅನೇಕ ರೀತಿ ನಡೆಗಳುಳ್ಳ ಸಮಾಜಗಳ ಜನರು ಅದರಲ್ಲಿ ಬಂದು ಸೇರ್ಪಡೆಯಾಗುವದುಂಟು. ಅವರು ತಮ್ಮ ಪೂರ್ವದ ಪದ್ಧತಿಗಳನ್ನು ಕೂಡಲೇ ಬಿಡುವದಿಲ್ಲ. ಆದರೆ ಅವರು ಶುದ್ಧ ಮನಸ್ಸುಳ್ಳವರು. ಇಂಥವರನ್ನು ಧರ್ಮಸ್ಥಾಪನೆಯ ಆರಂಭದ ಕಾಲದಲ್ಲಿ ಉಪೇಕ್ಷಿಸದೆ ಅವರಿಗೂ ಬೋಧೆಮಾಡಿದ್ದು ಕಂಡುಬರುತ್ತದೆ. ಅವರನ್ನು ಸಮಾಜದಲ್ಲಿ ತೆಗೆದುಕೊಂಡು ಅವರಲ್ಲಿ ತಮ್ಮ ರೀತಿ ನಡೆಗಳನ್ನು ತಿಳುಹಿಸುತ್ತ ಹೋಗಿ ಅವರನ್ನು ಸರಿಯಾದ ಹಾದಿಗೆ ಹಚ್ಚಿರಬಹುದೆಂದು ತೋರುತ್ತದೆ. ಆದ್ದರಿಂದ ವೀರಶೈವರಿಗೆ ಹೊರತಾದ ಆಚಾರಗಳನ್ನು ಪಾಲಿಸುವಂಥ ಶಿವಶರಣರ ಉದಾಹರಣೆಗಳು ಅಲ್ಲಲ್ಲಿ ದೊರಕುತ್ತವೆ. ಆದರೆ ಅವು ಪೂರ್ವಾಶ್ರಮದಲ್ಲಿ ಆದವುಗಳಿರಬಹುದು. ಆದುದರಿಂದ ಶರಣರು ಇಂಥ ನಡೆಗಳನ್ನೂ ಕೆಲವು ಕಾಲ ಉಪೇಕ್ಷಿಸಿಯೂ ಬಿಟ್ಟಿರಬಹುದು. ತಮಿಳುದೇಶದ ೬೩ ಪುರಾತನರ ಚರಿತ್ರೆಗಳಲ್ಲಿಯೂ ಕೂಡ ಇಂಥ ಸಂಗತಿಗಳು ಕಂಡು ಬರುತ್ತವೆ. ಬೇಡರ ಕನ್ನಪ್ಪನು ಮಾಂಸಾಹಾರಿಯು. ಅತಿ ಭಕ್ತನು ಮೀನು ಬಲೆಗಾರನು. ಆದರೂ ಇವರು ವೀರಶೈವರಿಗೆ ಅತ್ಯಂತ ಪೂಜ್ಯರಾಗಿದ್ದಾರೆ.

# ದೀಪದಕಲಿ.

ಕಾಂಚೀಪುರದಲ್ಲಿ ದೀಪದಕಲಿ ಎಂಬ ಶಿವಶರಣನು ವಾಸಮಾಡುತ್ತಿದ್ದನು. ಅವನು ವೀರಶೈವರಲ್ಲಿ ಶಿವಶರಣನೆಂದು ಯಾವಾಗಲೂ ಬಹಳ ಪ್ರಸಿದ್ಧಿಯನ್ನು ಹೊಂದಿದ್ದಾನೆ. ವ್ಯಾಪಾರಮಾಡಿಕೊಂಡಿರುವದೇ ಅವನ ಕಾಯಕವಾಗಿತ್ತು. ಅವನು ಗುರುಲಿಂಗಜಂಗಮದಲ್ಲಿ ಅತ್ಯಂತ ಭಕ್ತಿಯುಳ್ಳವನು. ಅವನು ಅನ್ಯದೈವವನ್ನು ಎಂದೂ ಭಜಿಸನು. ಹೀಗಿರುವಲ್ಲಿ ಅವನು ವ್ಯಾಪಾರಕ್ಕೋಸ್ಕರ ಪರಸ್ಥಳಕ್ಕೆ ಹೊರಟನು. ಅವನು ಮಾರ್ಗಕ್ರಮಣ ಮಾಡುತ್ತಿರುವಾಗ ಅವನಿಗೆ ಒಂದು ಘೋರಾರಣ್ಯವು ಹತ್ತಿತು. ಅದರೊಳಗಿಂದ ಅವನು ಬಹು ಪ್ರಯಾಸದಿಂದ ಪ್ರಯಾಣಮಾಡುತ್ತ ದಾರಿಯಲ್ಲಿ ಒಂದು ಜೀರ್ಣವಾದ ಶಿವಾಲಯವು ಅವನಿಗೆ ಹತ್ತಿತು. ಅವನು ಅದರಲ್ಲಿರುವ ಲಿಂಗವನ್ನು ಕಂಡು ಭಕ್ತಿಯ ಉದ್ರೇಕದಿಂದ ಶಿವನು ಇಲ್ಲಿ ಏಕಾಕಿಯಾಗಿ ಇರಬಹುದೇ? ಇಲ್ಲಿ ಹುಲಿ ಕರಡಿ ಕಾಡ ಮೃಗಗಳು ಇವೆ, ರಕ್ಕಸ ಮೊದಲಾದ ಶತ್ರುಗಳ ಭಯವಿದೆ, ಎಂದು ಮುಗ್ಧ ಭಕ್ತಿಯಿಂದ ಶಿವನಿಗೋಸ್ಕರ ಚಿಂತೆಮಾಡಹತ್ತಿದನು. ಆಗ ಅವನು ತನ್ನಲ್ಲಿದ್ದ ಚಿನ್ನ ರನ್ನ ಕಂಚು ತಾಮ್ರ ಮೊದಲಾದುವನ್ನು ವಿಕ್ರಯಮಾಡಿ ಆ ದ್ರವ್ಯದಿಂದ ಒಂದು ದೇವಾಲಯವನ್ನು ನಿರ್ಮಿಸಹತ್ತಿದನು. ದೇವಾಲಯದ ಸುತ್ತಲೂ ಒಂದು ಎತ್ತರವಾದ ಆಳವೇರಿಯನ್ನು ಕಟ್ಟಿಸಿದನು. ಅಲ್ಲಿ ಬಹು ಜನ ಸೇವಕರನ್ನು ತಂದಿರಿಸಿ ಅವರಿಂದ ಪಹರೆಯನ್ನು ತಿರುಗಿಸಹತ್ತಿದನು. ಅವರು ಬೆಳಗಿನವರೆಗೂ ಪಹರೆಯನ್ನು ತಿರುಗುವರು. ಹೀಗೆ ಕೆಲವು ದಿವಸಗಳಾದ ಬಳಿಕ ಅವನಲ್ಲಿದ್ದ ದ್ರವ್ಯವೆಲ್ಲವೂ ತೀರಿಹೋಯಿತು. ಪಹರೆಯವರಿಗೆ ಸಂಬಳವನ್ನು ಕೊಡುವದು ಅವನಿಂದ ಆಗಲಿಲ್ಲ. ಆಗ ಅವರೆಲ್ಲರೂ ಬಿಟ್ಟು ಹೋಗಲಾಗಿ ತಾನೊಬ್ಬನೇ ಪಹರೆ ತಿರುಗಹತ್ತಿದನು. ರಾತ್ರಿಯಲ್ಲಿ ದೀವಟಿಗೆಯನ್ನು ಹತ್ತಿಸಿ ಆಳವೇರಿಯ ಸುತ್ತಲೂ ತಿರುಗುವನು. ಬರ ಬರುತ್ತ ದೀವಟಿಗೆಗೆ ಬೇಕಾಗುವ ಎಣ್ಣೆಯೂ ತೀರಿ ಹೋಯಿತು। ಆಗ ತೈಲವಿಲ್ಲದೆ ಹೋಗಲು ದೀಪದ ಕಲಿಯು ಹಿಂಜರಿಯದೆ ತನ್ನ ಮಸ್ತಕದ ಕೂದಲಿನ ಜಡೆಗಳನ್ನು ಹೆಣೆದು ಅವುಗಳಿಗೆ ಬೆಂಕಿ ಹಚ್ಚಲು ಉದ್ಯುಕ್ತನಾದನು. ಆಗ ಶಿವನು ಅವನ ಭಕ್ತಿಗೆ ಮೆಚ್ಚಿ ಆ ಗುಡಿಯ ಸಹವಾಗಿ ದೀಪದ ಕಲಿಯನ್ನು ಕೈಲಾಸಕ್ಕೆ ಕೊಂಡೊಯ್ದನು.

# ರಕ್ಕಸ ಬ್ರಹ್ಮಯ್ಯ

ಅಡಿಕಿಹಾಳೆಂಬ(೧) ಪುರದಲ್ಲಿ ರಕ್ಕಸ ಬ್ರಹ್ಮಯ್ಯನೆಂಬ ಅಧಿಪತಿಯು ರಾಜ್ಯವಾಳುತ್ತಿದ್ದನು. ಅವನು ತನ್ನ ಗ್ರಾಮದ ಸುತ್ತಲಿದ್ದ ೧೬ ಗ್ರಾಮಗಳಿಗೆ ಅಧಿಪತಿಯಾಗಿ ತನ್ನ ರೈತರ ಮೆಚ್ಚುಗೆಯನ್ನು ಸಂಪಾದಿಸಿಕೊಂಡು ಅನ್ಯಾಯವನ್ನು ಮಾಡದೆ ಇರುತ್ತಿದ್ದನು. ಅವನು ಸಂಪೂರ್ಣ ವೀರಶೈವಾಚಾರವುಳ್ಳವನಾಗಿ ಅಷ್ಟಾವರಣ ನಿರತನಾಗಿದ್ದನು. ಪಾದೋದಕ ಪ್ರಸಾದಸೇವನೆಯೇ ಅವನ ವೈಶಿಷ್ಟ್ಯವಾಗಿತ್ತು. ಅವನು ರಾಜ್ಯವಾಳುವಲ್ಲಿ ಸಮೀಪದ ಅಧಿಪತಿಗಳೊಡನೆ ಹಗೆತನವನ್ನು ಮಾಡಿ ಅವರ ಮೇಲೇರಿ ಹೋಗಲಿಲ್ಲ. ಹಾಗೆಯೆ ಹೆರವರು ತನ್ನ ಮೇಲೇರಿ ಬಂದರೆ ಅವರನ್ನು ಶೌರ್ಯದಿಂದ ಎದುರಿಸಿ ಓಡಿಸಿಬಿಡುವನು. ಹೀಗೆ ತನ್ನವರನ್ನು ಕಾಪಾಡುತ್ತ ಗುರು ಲಿಂಗ ಜಂಗಮ ದಾಸೋಹ ಕಾರ್ಯಗಳಲ್ಲಿ ನಿರತನಾಗಿ ರಾಜ್ಯವಾಳುತ್ತ ಬಂದನು.

ಅವನು ಏಕಲಿಂಗ ನಿಷ್ಠಾಪರನು. ಪರದೈವತವನ್ನು ಎಂದೂ ಭಜಿಸನು. ಸ್ಥಾವರಲಿಂಗಗಳನ್ನು ಎಂದೂ ನಂಬನು. ತೀರ್ಥಕ್ಷೇತ್ರಗಳಿಗೆ ಹೋಗನು. ಅವನು ಗುರು ಲಿಂಗ ಜಂಗಮಗಳನ್ನು ವಿಭೂತಿ ಮಂತ್ರ ರುದ್ರಾಕ್ಷಿಗಳಿಂದ ತನ್ನಲ್ಲಿ ಒಳಗುಮಾಡಿಕೊಂಡು ಪಾದೋದಕ ಪ್ರಸಾದವನ್ನು ಯಾವಾಗಲೂ ಸೇವಿಸುವನು. ಅವನು ಒಬ್ಬ ಚರಮೂರ್ತಿಯನ್ನು ನೇಮಿಸಿಕೊಂಡು ಅವನೊಡನೆ ಪಾದೋದಕ ಪ್ರಸಾದದ ಆಚರಣೆಗಳನ್ನು ನಡಿಸುತ್ತ ಬಂದನು.

ಹೀಗಿರುತ್ತಿರಲು ಅವನ ನಿಷ್ಠೆಯು ಅತ್ಯಂತವಾಗಿ ಬಲಿಯುತ್ತಲೇ ಹೋಯಿತು. ಅವನು ತನ್ನ ಸಮಯಾಚಾರದ ದೇವರನ್ನು ನೇಮಿಸಿಕೊಳ್ಳುವಾಗ ಅವನು ತನ್ನ ಬಿನ್ನಹವನ್ನು ಬಿಟ್ಟು ಯಾವ ಕಡೆಗೂ ಹೋಗಬಾರದು., ಅವನು ತನ್ನಲ್ಲಿಯೇ ಇರಬೇಕು, ಹೀಗೆ ಅವನನ್ನು ನೇಮಿಸಿ ಕಡೆಗೆ ಅವನನ್ನು ತನ್ನಲ್ಲಿಯೇ ಅಡಗಿಸಿಕೊಂಡು ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕೆಂಬ ಅಪೇಕ್ಷೆಯು ಉಂಟಾಯಿತು. ಹಾಗೆ ಒಂದು ವ್ರತವನ್ನು ಮಾಡಿಕೊಂಡು ಒಬ್ಬ ಚರಮೂರ್ತಿಗೆ ತನ್ನ ಈ ರೀತಿಯನ್ನು ತಿಳಿಸಿ ಅವನ ಒಪ್ಪಿಗೆಯನ್ನು ಹೊಂದಿ ಅವನನ್ನು ತನ್ನಲ್ಲಿ ಇಟ್ಟುಕೊಂಡು ಪಾದೋದಕ ಪ್ರಸಾದ ಸೇವನೆಯಲ್ಲಿ ಇರಹತ್ತಿದನು.

---

(೧) ಕೆಲವು ಗ್ರಂಥಗಳಲ್ಲಿ ಕೊಟ್ಟೂರ ಹೊಳೆ ಎಂದಿದೆ.

ಹೀಗಿರಲು ತಾನು ನೇಮಿಸಿಕೊಂಡ ಸಮಯಾಚಾರದ ದೇವರು ರಕ್ಕಸಬ್ರಹ್ಮಯ್ಯನಿಗೆ- ನನಗೆ ಕಾಶೀ, ರಾಮೇಶ್ವರ, ಗೋಕರ್ಣ, ಮೊದಲಾದ ಕ್ಷೇತ್ರಗಳನ್ನು ನೋಡುವ ಆಶೆ ಉಂಟಾಗಿದೆ. ಹೋಗಲು ನನಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳಲು, ಬ್ರಹ್ಮಯ್ಯನು- ಅಲ್ಲಿಗೇಕೆ ಹೋಗಬೇಕು? ಆ ಕ್ಷೇತ್ರಗಳು ಇಲ್ಲಿ ನಾವಿದ್ದಲ್ಲಿಯೇ ಇವೆ, ಬೇಕಾದರೆ ತೋರಿಸುವೆನು, ಎಂದು ಹೇಳಿ ಅದಕ್ಕೆ ಅವನು ಅನೇಕ ಆಗಮ ಪ್ರಮಾಣಗಳನ್ನು ಉದಹರಿಸಿದನು. ಆದರೆ ಆ ಜಂಗಮನು- ನನಗೇನೂ ಆ ತೀರ್ಥಗಳು ಇಲ್ಲಿ ಕಣ್ಣಿಗೆ ಬೀಳುವದಿಲ್ಲ, ಎಂದು ನುಡಿದನು. ಅದಕ್ಕೆ ರಕ್ಕಸಬ್ರಹ್ಮಯ್ಯನು ಅವನನ್ನು ತನ್ನ ಮೇಲುಪ್ಪರಿಗೆಯ ಮೇಲೆ ಕರೆದುಕೊಂಡು ಹೋಗಿ- ಇಗೋ ನೋಡು. ಇಲ್ಲಿ ಕೆಲಬಲವಲ್ಲಿ ಕೇದಾರ ನೀಲಕಂಠ ಕ್ಷೇತ್ರಗಳಿವೆ. ಕಾಣುವದಿಲ್ಲವೇ? ಇತ್ತ ನಮ್ಮ ಮನೆಯ ಸುತ್ತಲೂ ನೋಡು. ವಿಸ್ತಾರವಾದ ಶ್ರೀಶೈಲಪರ್ವತವು ಕಾಣಿಸುವದಿಲ್ಲವೇ? ಇಲ್ಲಿ ನನ್ನ ಮನೆಯ ಅಂಗಣದಲ್ಲಿ ವಾರಣಾಸಿ ಕ್ಷೇತ್ರವು ಇವೆ. ಅದೂ ಕೂಡ ನಿನಗೆ ಕಾಣಿಸುವದಿಲ್ಲವೇ, ಎಂದು ಕೇಳಿದನು. ಅದಕ್ಕೆ ಆ ಚರಮೂರ್ತಿಯು- ಹೌದು, ಹೌದು, ಅವು ನನಗೆ ಕಾಣಿಸುತ್ತವೆ, ಎಂದೆನ್ನಲು ಇನ್ನು ಮತ್ತೇನು ನೋಡಬೇಕೆನ್ನುತ್ತೀ ಎಂದು ಕೇಳಿದನು. ಅದಕ್ಕೆ ಆ ಚರಮೂರ್ತಿಯು- ನಾನು ಕೈಲಾಸವನ್ನು ನೋಡಬೇಕೆನ್ನುತ್ತೇನೆ ಎಂದು ಅನ್ನಲು ಆ ಬ್ರಹ್ಮಯ್ಯನು- ನನ್ನ ಶರೀರದಲ್ಲಿಯೇ ಆ ಕೈಲಾಸವಿದೆ ಎಂದು ಹೇಳಿ ಅದರ ವಿಸ್ತೀರ್ಣವನ್ನು ಅಲ್ಲಿಯೇ ತೋರಿಸಿ ಕೊಟ್ಟನು. ಆಗ ಚರಮೂರ್ತಿಗೆ ಸಮಾಧಾನವಾಗಿ- ನೀನು ಹೇಳಿದ್ದು ನಿಜವು. ನಾನು ಇನ್ನು ಮೇಲೆ ನಾನೆಲ್ಲಿಯೂ ನಿನ್ನನ್ನು ಬಿಟ್ಟು ಯಾವ ಕ್ಷೇತ್ರಕ್ಕೂ ಹೋಗುವದಿಲ್ಲ ಎಂದು ಹೇಳಿದನು.

ಮುಂದೆ ಆ ಚರಮೂರ್ತಿಯು ಬ್ರಹ್ಮಯ್ಯನ ಅರಮನೆಯಲ್ಲಿಯೇ ಇರಹತ್ತಿದನು. ಆದರೆ ಅವನ ಮನಸ್ಸಿನಲ್ಲಿ ಕ್ಷೇತ್ರ ದರ್ಶನ ಮಾಡಬೇಕೆಂಬ ಆಕಾಂಕ್ಷೆಯು ಪುನಃ ಉಂಟಾಯಿತು. ಅದನ್ನು ಬಿಡುವದು ಅವನಿಂದಾಗಲಿಲ್ಲ. ಆಗ ಅವನು ಬ್ರಹ್ಮಯ್ಯನನ್ನು ಕೇಳಿದರೆ, ಅವನು ನನ್ನನ್ನು ಬಿಡುವದಿಲ್ಲ, ಎಂದು ತಿಳಿದುಕೊಂಡು ಅರ್ಧ ರಾತ್ರಿಯಲ್ಲಿ ಎದ್ದು ಬ್ರಹ್ಮಯ್ಯನ ಮನೆ ಬಿಟ್ಟು ಹೊರಗೆ ಓಡಿಹೋಗಹತ್ತಿದನು. ಆದರೆ ಬ್ರಹ್ಮಯ್ಯನು ಅಕಸ್ಮಾತ್ತಾಗಿ ಅವನು ಓಡಿಹೋಗುವದನ್ನು ಕಂಡು ಅವನ ತಲೆಯನ್ನು ತತ್‌ಕ್ಷಣವೇ ಹೊಡೆದು ತನ್ನ ಲಿಂಗಾರ್ಚನೆಯ ಕೋಣೆಯಲ್ಲಿಟ್ಟುಬಿಟ್ಟನು.

ಮುಂದೆ ಮರುದಿನ ಲಿಂಗಾರ್ಚನೆಯ ವೇಳೆಯಾಗಲು ಬ್ರಹ್ಮಯ್ಯನು ಆ ಚರಮೂರ್ತಿಯ ಶಿರವನ್ನು ಅವನ ಅಟ್ಟಿಯ ಮೇಲಿಡಲು ಅದಕ್ಕೆ ಪ್ರಾಣವು ಬಂದಿತು. ಆಗ ಅವನು ತನ್ನ ಅರ್ಪಿತ ಮೊದಲಾದ ಕ್ರಿಯೆಗಳನ್ನು ಮಾಡಿಕೊಂಡನು. ಅವು ಮುಗಿದ ಬಳಿಕ ಆ ಶಿರವೂ ಧಡವೂ ಮೊದಲಿನಂತೆಯೇ ಬೇರೆ ಬೇರೆ ಆದವು. ಮುಂದೆ ಬ್ರಹ್ಮಯ್ಯನು ಇನ್ನೊಬ್ಬ ಚರಮೂರ್ತಿಯನ್ನು ನೇಮಿಸಿಕೊಂಡು ಅವನೊಡನೆ ತನ್ನ ಕ್ರಿಯೆಗಳನ್ನು ಮಾಡಿಕೊಳ್ಳಹತ್ತಿದನು. ಆದರೆ ಅವನೂ ಕೂಡ ಮೊದಲಿನ ಚರಮೂರ್ತಿಯಂತೆ ನಾನು ಇನ್ನು ಮೇಲೆ ನಿನ್ನಲ್ಲಿರಲಾರೆನು, ತೀರ್ಥಯಾತ್ರೆಗೆ ಹೋಗುವೆನೆಂದು ಹೇಳಿ ಹೊರಗೆ ಹೊರಟನು. ಅವನು ಹೋಗುವಾಗ ಬ್ರಹ್ಮಯ್ಯನು ಅವನ ತಲೆಯನ್ನೂ ಹೊಡೆದು ತನ್ನ ಲಿಂಗಾರ್ಚನೆಯ ಕೋಣೆಯಲ್ಲಿಟ್ಟನು. ಈ ಪ್ರಕಾರ ಬ್ರಹ್ಮಯ್ಯನು ಒಬ್ಬರ ಹಿಂದೊಬ್ಬರು ೩೬ ಜನ ಚರಮೂರ್ತಿಗಳ ಶಿರಚ್ಛೇದನವನ್ನು ಮಾಡಿ ಅವರ ಶಿರಗಳನ್ನು ತನ್ನ ಲಿಂಗಾರ್ಚನೆಯ ಕೋಣೆಯಲ್ಲಿಟ್ಟು ಮೂರು ವೇಳೆ ಅವರಲ್ಲಿ ಪ್ರಾಣವನ್ನು ತುಂಬಿ ಅವರನ್ನು ಪೂಜಿಸುತ್ತ ಇರಹತ್ತಿದನು.

ರಕ್ಕಸಬ್ರಹ್ಮಯ್ಯನ ಈ ರೀತಿಯು ಜನರಿಗೆ ತಿಳಿದು ಅವರಲ್ಲಿ ಶರಣರಾದ ಕೆಲವರು ಅವನನ್ನು ಕೊಂಡಾಡಹತ್ತಿದರು. ಆದರೆ ಲೋಕದ ಜನರು ಅವನನ್ನು ನಿಂದಿಸಹತ್ತಿದರು. ಜಂಗಮರು ಅವನ ಗ್ರಾಮಕ್ಕೆ ಬರಲು ಭಯಪಡಹತ್ತಿದರು. ಅವರು ಈ ಬ್ರಹ್ಮಯ್ಯನು ಭಕ್ತನಲ್ಲ, ಬ್ರಹ್ಮರಾಕ್ಷಸನು ಎಂದು ಹೇಳಿ ಅವನ ಮನೆಯ ಸಮೀಪಕ್ಕೆ ಹೋಗಲು ಹಿಂಜರಿದರು. ಅವನಿಗೆ ಯಾವ ಚರಮೂರ್ತಿಯೂ ಸಿಗದಂತೆ ಆಯಿತು. ಅವನ ಪೂಜಾದಿ ಕಾರ್ಯಗಳು ನಿಂತುಹೋದವು.

ಬ್ರಹ್ಮಯ್ಯನ ಉತ್ಕಟವಾದ ಈ ವ್ರತಾಚಾರವನ್ನು ಶಿವನು ತಿಳಿದವನಾಗಿ ಚರಮೂರ್ತಿಗಳು ಅವನ ಸನಿಯಕ್ಕೆ ಬಾರದ್ದನ್ನು ಅರಿತು ತಾನೇ ಜಂಗಮರೂಪ ಧಾರಣಮಾಡಿ ಅಡಿಕಿಹಾಳಕ್ಕೆ ಬಂದನು. ಅವನು ಮೊದಲು ಬ್ರಹ್ಮಯ್ಯನಿಂದ ಭಕ್ತ್ಯುಪಚಾರಗಳನ್ನು ಕೈಕೊಂಡು ಅವನು ಮಾಡುತ್ತ ಬಂದ ದುರ್ಘಟದ ಭಕ್ತಿಯನ್ನು ಕಂಡು, ಇದೇನೆಂದು ಕೇಳಲು–ಜಂಗಮರು ತಾವು ಮೊದಲು ವಚನಕೊಟ್ಟು ನನ್ನ ಸಮಯಾಚಾರಕ್ಕೆ ಹಿಂದುಗಡೆ ಒಲ್ಲೆವೆಂದು ಅನ್ನುತ್ತಾರೆ. ಅವರಿಗೆ ನಾನು ಇಂಥ ಖಡ್ಗ ಪೂಜೆಯನ್ನು ಮಾಡುತ್ತೇ

ನೆನಲು, ಶಿವನು ಪ್ರೀತನಾಗಿ ನಿನ್ನಂಥ ಭಕ್ತರು ಎಲ್ಲಿ ದೊರೆಯಬೇಕು ? ನಿನ್ನಲ್ಲಿಯೇ ನಾನು ಇರುವೆನು ಎಂದು ಹೇಳಿದನು. ಅದಕ್ಕೆ ಬ್ರಹ್ಮಯ್ಯನು ನೀವಿಲ್ಲಿರಲಾರಿರಿ. ಕೆಲವೊಂದು 'ಕಟ್ಟುಬಿನ್ನಹ' ಮಾಡಿಕೊಂಡು ಹೋಗುತ್ತ ಬರುತ್ತ ಇರಬೇಕು, ಎಂದು ತಿಳಿಸಿದನು. ಆದರೆ ಶಿವನು ನಾನು ನಿನ್ನನ್ನು ಬಿಟ್ಟು ಎಂದೂ ಹೋಗುವದಿಲ್ಲ, ಎಂದು ವಚನ ಕೊಡಲು ಬ್ರಹ್ಮಯ್ಯನು ಹಾಗೆಯೇ ಆಗಲೆಂದು ಹೇಳಿ ಅವನನ್ನು ತನ್ನ ಮನೆಯಲ್ಲಿಟ್ಟುಕೊಂಡನು.

ಹೀಗೆ ಕೆಲವು ದಿವಸಗಳಾದ ಬಳಿಕ ಶಿವನು ಬ್ರಹ್ಮಯ್ಯನಿಗೆ- ನನಗೆ ಏಳು ಲೋಕ, ಏಳು ಸಮುದ್ರ ನೋಡುವ ಅಭಿಲಾಷೆಯಾಗಿದೆ, ಎಂದು ಹೇಳಲು ಬ್ರಹ್ಮಯ್ಯನು- ನೋಡಿ ಸ್ವಾಮಿ, ಎಂದು ೧೪ ಭುವನ ವಿಸ್ತಾರವನ್ನು ಅವನಿಗೆ ತೋರಿಸಿದನು. ಅದನ್ನು ಶಿವನು ನೋಡಿ ಆಗಾಧಬಟ್ಟು ನಿನ್ನ ಸ್ಥಾನವು ಕೈಲಾಸದಂತಿದೆ, ನಾನು ನಿನ್ನನ್ನು ಬಿಟ್ಟು ಎಂದೂ ಹೋಗುವದಿಲ್ಲ ಎಂದು ಹೇಳಿದನು.

ಆದರೆ ಕೆಲವು ದಿವಸಗಳಾದ ಮೇಲೆ ಶಿವನಿಗೂ ಕೂಡ ಬ್ರಹ್ಮಯ್ಯನಲ್ಲಿರುವದು ಬೇಸರವಾಗಹತ್ತಿತು. ಆದ್ದರಿಂದ ಅವನು ಒಂದು ರಾತ್ರಿಯಲ್ಲಿ ಪಹರೆಯವನನ್ನು ತಪ್ಪಿಸಿ ಓಡಿಹೋದನು. ಪಹರೆಯವನು ಎಷ್ಟು ಹುಡಿಕಿದರೂ ಸಿಕ್ಕಲಿಲ್ಲ. ಆಗ ಅವನು ಬ್ರಹ್ಮಯ್ಯನಿಗೆ ಜಂಗಮನು ಓಡಿಹೋದನು, ಸಿಕ್ಕಲಿಲ್ಲ ಎಂದು ಹೇಳಲು, ಬ್ರಹ್ಮಯ್ಯನು ಜಪಮಾಡುವಲ್ಲಿ ಆಗ ತೊಡಗಿದ್ದು ಎದ್ದು ಹೋಗಲಾರದೆ ತನ್ನ ಶಿರಸ್ಸನ್ನೇ ಕತ್ತರಿಸಿ, ಅದಕ್ಕೆ- ನೀನು ಆ ಚರಮೂರ್ತಿಯು ಎಲ್ಲಿರುವನೋ ಅವನನ್ನು ಹುಡಿಕಿಕೊಂಡು ಬಾ, ಎಂದು ಆಜ್ಞಾಪಿಸಿದನು. ಆಗ ಆ ಸಿರವು ಬರಸಿಡಿಲಿನಂತೆ ಜಂಗಮರೂಪಿನಲ್ಲಿದ್ದ ಶಿವನನ್ನು ಬೆನ್ನುಹತ್ತಿ, ಕೈಲಾಸಕ್ಕೆಯೇ ಹೋಗಿ, ಅಲ್ಲಿ ಹರಿಯಜ, ಇಂದ್ರ ಪ್ರಮುಖರಿರಲು, ಶಿವನ ಪಾದಕ್ಕೆ ಎರಗಿ- ಬ್ರಹ್ಮಯ್ಯನು ನಿಮ್ಮನ್ನು ಕರೆಯುತ್ತಿದ್ದಾನೆ, ಅಲ್ಲಿಗೆ ಬರಬೇಕೆಂದು ಹೇಳಲು, ಶಿವನು ಬ್ರಹ್ಮಯ್ಯನ ಆಜ್ಞೆಯನ್ನು ಮೀರಲಾರದೆ ಅವನಲ್ಲಿಗೆ ಬಂದು ಪ್ರತ್ಯಕ್ಷನಾಗಿ- ಬ್ರಹ್ಮಯ್ಯನೇ, ನಾನು ನಿನಗೆ ಪ್ರೀತನಾದೆನು. ನಿನಗೇನು ಬೇಕು ಬೇಡೆಂದು ನುಡಿಯಲು, ಬ್ರಹ್ಮಯ್ಯನು ಅವನನ್ನು ನಮಸ್ಕರಿಸಿ, ನಾನು ಹೊಡೆದು ಹಾಕಿದ ೩೭ ಜನ ಚರಮೂರ್ತಿಗಳನ್ನು ಕೈಲಾಸಕ್ಕೆ ಕರೆದುಕೊಂಡು ಹೋಗು. ನಾನು ಮಾತ್ರ ನನ್ನ ಸಮಯಾಚಾರವನ್ನು ಮಾಡುತ್ತ ಇಲ್ಲಿಯೇ ಇರುವೆನೆಂದು ಹೇಳಿದನು. ಶಿವನು ಹಾಗೆಯೇ ಆಗಲೆಂದು ಹೇಳಿ ಆ ಚರಮೂರ್ತಿಗಳಿಗೆ ಪ್ರಾಣವನ್ನು ಕೊಟ್ಟು ಅವರನ್ನು ಕೈಲಾಸಕ್ಕೆ ಕರೆದೊಯ್ದನು. ಆದರೆ ರಕ್ಕಸಬ್ರಹ್ಮಯ್ಯನು

ತನ್ನ ಸಮಯಾಚಾರದ ಭಕ್ತಿಯನ್ನು ಬಿಡದೆ ಪಾಲಿಸುತ್ತ! ಕಡೆಗೆ ತನ್ನ ಇಷ್ಟಲಿಂಗದಲ್ಲಿ ತನ್ನ ಸಮಯಾಚಾರದ ದೇವರುಗಳು ಸಹವಾಗಿ ಲಿಂಗೈಕ್ಯನಾದನು.

ರಕ್ಕಸಬ್ರಹ್ಮಯ್ಯನು ವಚನಕಾರನಿದ್ದಾನೆ. ಅವನ ೧೬ ವಚನಗಳು ನಮ್ಮ ಹತ್ತಿರವಿದ್ದು ಅವುಗಳ ಮುದ್ರಿಕೆಯು 'ರಕ್ಕಸನೊಡೆಯ ಕೊಟ್ಟುದು ಬೇಡ' ಎಂದಿದೆ. ಅವು ಬಹು ಗೂಢಾರ್ಥವುಳ್ಳವು. ಅತ್ಯಂತ ಅಶುದ್ಧವಿದ್ದು ಅರ್ಥಮಾಡಲು ಆಗುವದಿಲ್ಲಾದ್ದರಿಂದ ಅವುಗಳನ್ನು ನಾವು ಇಲ್ಲಿ ಉದಹರಿಸಿಲ್ಲ. ಅವುಗಳಲ್ಲೊಂದರಲ್ಲಿ ಬಸವೇಶ್ವರನ ಉಲ್ಲೇಖವಿದೆ. ಆದ್ದರಿಂದ ಈ ವಚನಕಾರನು ಬಸವೇಶ್ವರನಕಿಂತಲೂ ಈಚಿನವನಾಗಿದ್ದಾನೆಂದು ತೋರುತ್ತದೆ. ಅವನ ಗ್ರಾಮವಾದ 'ಅಡಿಕಿಹಾಳು' ಅಥವಾ 'ಕೊಟ್ಟದ ಹೊಳೆ' ಎಲ್ಲಿದೆಂಬದು ನಮಗೆ ಗೊತ್ತಾಗುವದಿಲ್ಲ. ಇದು ಸಂಶೋಧಿಸತಕ್ಕ ವಿಷಯವಾಗಿದೆ.

ರಕ್ಕಸಬ್ರಹ್ಮಯ್ಯನ ಚರಿತ್ರೆಯಿಂದ ಅವನು ಎಂಥ ಕ್ರೂರ ಮನುಷ್ಯನಿರಬಹುದೆಂದು ವಾಚಕರು ಅವನನ್ನು ಧಿಕ್ಕರಿಸಬಹುದು. ನಾವು ಈ ಚರಿತ್ರೆಯನ್ನು ಪ್ರಸಿದ್ಧಿಸಬಾರದಿತ್ತೆಂತಲೂ ಅವರು ಅಭಿಪ್ರಾಯಪಡಬಹುದು. ಆದರೆ ಅನೇಕ ಶಿವಶರಣರು ವೀರಶೈವ ಮತದ ನಡೆನುಡಿಗಳನ್ನು ಆಚರಿಸಿ ತೋರಿಸಿದ್ದಾರೆ. ಅವುಗಳಲ್ಲಿಯ ಗೂಢಾರ್ಥಗಳನ್ನು ತಿಳಿಯುವದು ಅವಶ್ಯವು. ಆದ್ದರಿಂದ ಅವುಗಳನ್ನು ನಾವು ದುರ್ಲಕ್ಷಿಸಬಾರದು. ವೀರಶೈವರು ಸ್ಥಾವರ ಲಿಂಗಗಳನ್ನು ಅಥವಾ ಇತರ ದೇವತೆಗಳನ್ನು ಎಂದೂ ಪೂಜಿಸಬಾರದೆಂಬುದು ನಿಜಧರ್ಮವು. ಇದನ್ನು ಈ ಚರಿತ್ರೆಯು ಅತ್ಯಂತವಾಗಿ ಸ್ಪಷ್ಟಪಡಿಸುವದರಿಂದ ನಾವು ಈ ಚರಿತ್ರೆಯನ್ನು ಇದ್ದಕ್ಕಿದ್ದ ಹಾಗೆ ಕೊಟ್ಟಿದ್ದೇವೆ. ಶಿವಶರಣರ ನಡೆಗಳ ವಿಷಯವಾಗಿ ಮೊದಲಿನ ಕಾಲವಲ್ಲಿ ಆಗಿಂದಾಗ್ಗೆ ಮತಭೇದಗಳಾಗುತ್ತಿದ್ದವೆಂದು ಅವರ ಚರಿತ್ರೆಗಳಿಂದ ನಾವು ಊಹಿಸಬಹುದಾಗಿದೆ. ಪುರಾತನ ಕಾಲದ ವಾಙ್ಮಯವು ನಮಗೆ ಪೂರ್ಣ ದೊರೆತಿಲ್ಲಾದ್ದರಿಂದ ಈ ಮತಭೇದದ ಸಂಗತಿಗಳ ವಿವರಣೆಗಳು ನಮಗೆ ಉಪಲಬ್ಧವಿಲ್ಲ. ಆದರೆ ರಕ್ಕಸಬ್ರಹ್ಮಯ್ಯನ ಚರಿತ್ರೆಯನ್ನು ನಾವು ನಿರೀಕ್ಷಿಸಿದಲ್ಲಿ ವೀರಶೈವರು ಸ್ಥಾವರ ಲಿಂಗಗಳ ಮತ್ತು ಇತರ ದೇವತೆಗಳ ಪೂಜೆಯನ್ನು ಎಷ್ಟು ಮಾತ್ರವೂ ಮಾಡಕೂಡದೆಂಬುದು ಸ್ಪಷ್ಟವಾಗುತ್ತದೆ.

---

# ಶಿವಶರಣರು ಮಾಡಿದ ಕ್ರಾಂತಿ

ನಾವು ಅನೇಕ ಶಿವಶರಣರ ಚರಿತ್ರೆಗಳನ್ನು ಪ್ರಸಿದ್ಧಿಸುತ್ತ ಇದ್ದು ಅವುಗಳ ಮೇಲಿಂದ ಅವರು ಎಂಥ ಮಹತ್ತರವಾದ ಕ್ರಾಂತಿಯನ್ನು ದೇಶದಲ್ಲಿ ಮಾಡಿದರೆಂಬುದು ವಾಚಕರ ನಿದರ್ಶನಕ್ಕೆ ಬರದೆ ಇರಲಾರದು. ಈ ಚರಿತ್ರೆಗಳನ್ನು ಬರೆಯುವಲ್ಲಿ ನಾವು ಕೇವಲ ಪವಾಡಗಳಿಗೆ ಉನ್ನತ ಸ್ಥಾನವನ್ನು ಕೊಟ್ಟಿರುವದಿಲ್ಲ. ಪವಾಡಗಳ ಮಹತ್ವವು ಕೆಲವು ಮಟ್ಟಿಗೆ ಇದ್ದರೂ ಶಿವಶರಣರು ತಮ್ಮ ಜೀವಿತದಲ್ಲಿ ಯಾವ ಕಾರ್ಯಗಳನ್ನು ಮಾಡಿದರು ಮತ್ತು ಅವರು ತಮ್ಮ ನಡೆಯಲ್ಲಿ ಶಿವಾನುಭವವನ್ನು ಹೇಗೆ ಅಳವಡಿಸಿಕೊಂಡಿದ್ದರು, ಎಂಬುದನ್ನು ವಾಚಕರ ಲಕ್ಷಕ್ಕೆ ತರಲು ನಾವು ಬಹಳ ಪ್ರಯತ್ನಿಸಿದ್ದೇವೆ. ಇವರು ಶಿವಾನುಭವದಂತೆ ನಡೆದುದಲ್ಲದೆ ಅವರ ತಿಳವಳಿಕೆಯನ್ನು ವಚನಗಳ ಮೂಲಕ ಸರ್ವಜನರಿಗೂ ಮಾಡಿಕೊಟ್ಟಿದ್ದಾರೆ. ಅವಶ್ಯವಿದ್ದಲ್ಲಿ ಅವರು ರಚಿಸಿದ ವಚನಗಳನ್ನು ನಾವು ಈ ಗ್ರಂಥದಲ್ಲಿ ಉದಹರಿಸುತ್ತಲೂ ಬಂದಿದ್ದೇವೆ. ಶಿವಶರಣರ ನಡೆ ಮತ್ತು ಅವರ ವಿಚಾರ ಇವುಗಳ ಮೂಲಕ ವೀರಶೈವ ಧರ್ಮವು ದೇಶದಲ್ಲಿ ಪ್ರಸಾರವಾಗುತ್ತ ಹೋಗಿರುತ್ತದೆ.

೧೧ನೇ ೧೨ನೇ ಶತಮಾನಗಳಲ್ಲಿ ಹಿಂದುಸ್ತಾನದಲ್ಲಿ ಕರ್ನಾಟಕಕ್ಕೆ ಉನ್ನತ ಸ್ಥಾನವು ಪ್ರಾಪ್ತವಾಗಿತ್ತು. ಇದು ಅಲ್ಲಿ ಆಳಿದ ಸಾರ್ವಭೌಮ ರಾಜರ ಮೂಲಕವೇ ಇರುತ್ತದೆ. ಅವರು ಕಲೆ ಮತ್ತು ವಾಙ್ಮಯ ಇವುಗಳಿಗೆ ಉತ್ತೇಜನ ಕೊಡುತ್ತಿದ್ದದರಿಂದ ಅನೇಕ ದೇಶಗಳ ವಿದ್ವಾಂಸರೂ ಕಲಾವಿದರೂ ತತ್ವವೇತ್ತಿಗಳೂ ಅವರ ರಾಜಧಾನಿಯ ಸ್ಥಳವಾದ ಕಲ್ಯಾಣಕ್ಕೆ ಬಂದು ರಾಜರಿಂದ ಮನ್ನಣೆಯನ್ನು ಹೊಂದಿ ಹೋಗುತ್ತಿದ್ದರು. ಇದೇ ಕಾಲದಲ್ಲಿಯೇ ಶಿವಶರಣರ ಪ್ರಚಾರ ಕಾರ್ಯಗಳು ಕರ್ನಾಟಕದಲ್ಲಿ ಬಲವಾಗಿ ಸಾಗಿದ್ದವು. ಬಸವೇಶ್ವರನ ಕಾಲದಲ್ಲಿ ಈ ಕಾರ್ಯಗಳು ಶಿವಾನುಭವ ಮಂಟಪದ ಮೂಲಕ ಒಳ್ಳೇ ರಭಸದಿಂದ ಮುಂದುವರಿದಿದ್ದವು. ಇದರಿಂದ ಹಿಂದುಸ್ತಾನದಲ್ಲಿಯ ಎಲ್ಲ ದೇಶಗಳಲ್ಲಿಯೂ ಶಿವಶರಣರು ಉದಯವಾದದ್ದು ನಾವು ಈ ವರೆಗೆ ವಿವರಿಸಿದ ಚರಿತ್ರೆಗಳಿಂದ ವಾಚಕರಿಗೆ ತಿಳಿದುಬರುವದು.

ಶಿವಲೆಂಕ ಮಂಚಣ್ಣನು ವೀರಶೈವರಲ್ಲಿ ವಿದ್ವತ್ತೆಯಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದಾನೆ. ಅವನು ಪಂಡಿತತ್ರಯರಲ್ಲಿ ಒಬ್ಬನಾಗಿದ್ದಾನೆ. ಈತನು ಕಾಶೀಪಟ್ಟಣದಲ್ಲಿ ತನ್ನ ವಿದ್ವತ್ತೆಗೋಸ್ಕರ ಖ್ಯಾತಿಯನ್ನು ಪಡೆದು ವಿಶ್ವೇಶ್ವರ

ದೇವಾಲಯದಲ್ಲಿ ತನ್ನ ಪೊವಾಡವನ್ನು ಮೆರೆಯಿಸಿದನು. ಅವನು ಮುಂದೆ ಕಲ್ಯಾಣಕ್ಕೆ ಆಗಮಿಸಿದನು.

ಓಡಿಸಾ ಪ್ರಾಂತದಲ್ಲಿ ಸುಜ್ಞಾನಿದೇವ ಮತ್ತು ನನ್ನಯ್ಯ ಇವರು ಪ್ರಖ್ಯಾತಿಯನ್ನು ಹೊಂದಿದವರಾಗಿ ಕಡೆಗೆ ಕಲ್ಯಾಣಕ್ಕೆ ಬಂದು ಅಲ್ಲಿಯ ಶಿವಾನುಭವ ಮಂಟಪವನ್ನು ಹೊಂದಿದವರಾದರು.

ಗುಜರಾಥ ದೇಶದಿಂದ ಆದಿಶೆಟ್ಟಿ ಅಥವಾ ಆದಯ್ಯನು ಕರ್ನಾಟಕಕ್ಕೆ ಬಂದು ವೀರಶೈವ ಧರ್ಮವನ್ನು ಹೊಂದಿ ಪುಲಿಗೆರೆ ಅಂದರೆ ಈಗಿನ ಲಕ್ಷ್ಮೇಶ್ವರದಲ್ಲಿ ಸೌರಾಷ್ಟ್ರ ಸೋಮನಾಥನು ನೆಲಿಸುವಂತೆ ಮಾಡಿದನು. ಅವನು ವಚನಕಾರನಾದನು. ಬಹುಜನ ವಚನಕಾರರು ಸೋಮೇಶ್ವರನ ಭಕ್ತರಾಗಿದ್ದಾರೆ.

ಕೇರಳದೇಶ ಎಂದರೆ ಮಲಬಾರ ಪ್ರಾಂತವಲ್ಲಿ ಕುಡಗಲೂರಿನ ಗೊಗ್ಗವ್ವೆ, ಚಾರಮರಾಯ, ಭದ್ರಗಾಯಕ ಇವರು ಪ್ರಸಿದ್ಧಿಗೆ ಬಂದಿದ್ದಾರೆ.

ಕಾಶ್ಮೀರದಲ್ಲಿ ಬೊಂತಾದೇವಿ, ನಿಜಲಿಂಗ ಚಿಕ್ಕಯ್ಯ, ಮೋಳಿಗೆ ಮಾರಯ್ಯ, ಮಹಾದೇವಿಯಮ್ಮ ಇವರೆಲ್ಲರೂ ಉಚ್ಚ ಶಿವಾನುಭವಿಗಳು. ಇವರೆಲ್ಲರೂ ವಚನಕಾರರು. ಅವರು ಕಡೆಗೆ ಕಲ್ಯಾಣದಲ್ಲಿ ಬಸವೇಶ್ವರನ ಸನ್ನಿಧಿಯನ್ನು ಸಾರಿದರು.

ಮಹಾರಾಷ್ಟ್ರ ದೇಶದಲ್ಲಿ ಉರಿಲಿಂಗದೇವ, ಅವನ ಶಿಷ್ಯ ಉರಿಲಿಂಗ ಪೆದ್ದಿ, ಪರಳಿಯ ವೈಜವ್ವೆ, ಕೋಲಂಬೆ, ಗುಂಬಾರ ಗುಂಡಯ್ಯ ಇವರು ಶಿವಶರಣರಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದ್ದಾರೆ. ಇವರಲ್ಲಿ ಮೊದಲಿನ ನಾಲ್ವರು ಗೋದಾವರೀತೀರ ಪ್ರದೇಶದವರು.

ಈ ಶಿವಶರಣರಲ್ಲಿ ಬಹುತರ ಎಲ್ಲರೂ ಕ್ರಾಂತಿಕಾರರು, ಅಂದರೆ ತಾವಿದ್ದ ನಾಡಿನಲ್ಲಿ ಅವರು ಸ್ವಸ್ಥವಾಗಿ ಕುಳ್ಳಿರದೆ ಶಿವಾನುಭವದ ಶ್ರೇಷ್ಠ ವಿಚಾರಗಳನ್ನು ತಮ್ಮ ತಮ್ಮ ನಾಡುಗಳಲ್ಲಿ ಪ್ರಸಾರಮಾಡಿದವರು ಇದ್ದಾರೆ. ಇವರು ಮಾಡಿದ ಕಾರ್ಯಗಳ ಮೂಲಕವೇ ವೀರಶೈವ ಧರ್ಮವು ಎಲ್ಲ ಕಡೆಗೂ ಪಸರಿಸಿರುತ್ತದೆ. ಆದರೆ ಎಲ್ಲಕ್ಕೂ ಹೆಚ್ಚು ಪರಿಣಾಮವಾದದ್ದು ಆಂಧ್ರದೇಶದಲ್ಲಿ. ಅದರ ತರುವಾಯ ದ್ರಾವಿಡದೇಶದಲ್ಲಿ. ಚೋಳ ರಾಜರು ದ್ರಾವಿಡ ದೇಶವನ್ನು ಕಾಂಚೀಪಟ್ಟಣದಲ್ಲಿ ಆಳುತ್ತಿದ್ದರು. ಈ ಕಾಲದಲ್ಲಿ ಬಹುಜನ ಶಿವಶರಣರು ಎಲ್ಲಕಡೆಗೂ ಪ್ರವಾಸವನ್ನು ಮಾಡಿ

ದ್ದಾರೆ. ಅವರೆಲ್ಲರೂ ತಮ್ಮ ಪ್ರವಾಸದಲ್ಲಿ ಬಹುಶಃ ಕಾಂಚೀಪಟ್ಟಣಕ್ಕೆ ಹೋಗಿ ಅಲ್ಲಿ ಚೋಳರಾಜರ ಆಸ್ಥಾನದಲ್ಲಿ ತಮ್ಮ ಪೊವಾಡಗಳನ್ನು ಮೆರ ಯಿಸಿದ್ದಾರೆ. ಚನ್ನಯ್ಯ, ಮೆರೆಮಿಂಡದೇವ, ಈ ವಚನಕಾರರು ಅಲ್ಲಿಗೆ ಹೋಗಿ ತಮ್ಮ ಮಹತ್ವವನ್ನು ಪ್ರದರ್ಶಿಸಿದ್ದಾರೆ. ಎಡೆಮಠದ ನಾಗಿದೇವ ಮತ್ತು ಮುಸಣಮ್ಮ ಇವರು ಮೊದಲು ಕಾಂಚೀಪಟ್ಟಣದಲ್ಲಿದ್ದು ಮುಂದೆ ಕರ್ನಾಟಕಕ್ಕೆ ಬರುವವರಾದರು. ಈ ಪ್ರಕಾರ ಶಿವಶರಣರು ದ್ರಾವಿಡ ದೇಶದಲ್ಲಿ ವೀರಶೈವ ಮತದ ಪ್ರಭಾವವನ್ನು ಬೀರಿದ್ದಾರೆ.

ಶಿವಶರಣರ ವಿಚಾರಗಳು ಆಂಧ್ರದೇಶದಲ್ಲಿ ಎಲ್ಲಕ್ಕೂ ಹೆಚ್ಚು ಪ್ರಸಾರ ವಾಗಿದ್ದರಿಂದ ಅಲ್ಲಿ ಬಹುಜನ ಶಿವಶರಣರೂ ವಿದ್ವಾಂಸರೂ ಉಂಟಾಗಿ ರುವದು ಕಂಡುಬರುತ್ತದೆ. ಇವರಲ್ಲಿ ಮೊದಲಿಗನು ಶ್ರೀಪತಿ ಪಂಡಿತನು. ಇವನು ವಿಜಯವಾಡ ಎಂದರೆ ಈಗಿನ ಬೆಜವಾಡದಲ್ಲಿ ಜನಿಸಿ, ಶಿವಶರಣರ ತತ್ವಗಳನ್ನು ಬಹುಕಡೆಗೆ ಪ್ರಸಾರ ಮಾಡಿದ್ದರಿಂದ ಅನೇಕ ಸಾಮಂತರೂ ರಾಜರೂ ಅವನ ಅನುಯಾಯಿಗಳಾಗಿದ್ದರು. ಅವನಿಗೆ ಬಹುಜನರು ಶಿಷ್ಯ ರಾಗಿದ್ದರು. ಆಂಧ್ರರು ಈ ಕಾಲಕ್ಕೆ ಆಗಿಂದಾಗ್ಗೆ ಕರ್ನಾಟಕಕ್ಕೆ ಬಂದು ಇಲ್ಲಿ ಅನೇಕ ಪೊವಾಡಗಳನ್ನು ಮಾಡಿದ್ದಾರೆ. ಉರಿಲಿಂಗಪೆದ್ದಿ, ತೆಲು ಗೇಶ ಮುಸಣಯ್ಯ, ತೆಲುಗು ಜೊಮ್ಮಯ್ಯ ಇವರು ಇಂಥವರಲ್ಲಿ ಮುಖ್ಯ ರಾಗಿದ್ದಾರೆ. ಅಲ್ಲದೆ ಶಿವಪ್ರಿಯನಾಚಿ, ವೇಮನಾರಾಧ್ಯ ಇವರು ವಚನ ಕಾರರ ತತ್ವಗಳನ್ನು ಪರಿಪಾಲಿಸುವವರಾದರು. ಮುಂದೆ ಬಸವೇಶ್ವರನ ಕಾಲದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯನು ದ್ರಾಕ್ಷಾರಾಮ ಕ್ಷೇತ್ರದಲ್ಲಿ ಜನಿಸಿ ಆಂಧ್ರ ಮತ್ತು ದ್ರಾವಿಡ ದೇಶಗಳಲ್ಲಿ ವೀರಶೈವ ತತ್ವಗಳನ್ನು ಪ್ರಸಾರ ಮಾಡಿದ್ದಾನೆ.

ದ್ರಾಕ್ಷಾರಾಮ ಕ್ಷೇತ್ರವು ಕಾಕಿನಾಡ ಜಿಲ್ಲೆಯಲ್ಲಿ ಗೋದಾವರೀ ನದಿಯ ಮುಖದಲ್ಲಿ ಇದೆ. ಇದು ಸೃಷ್ಟಿ ಸೌಂದರ್ಯದಿಂದ ಕೂಡಿದ ರಮಣೀಯ ಪ್ರದೇ ಶವು. ಈ ಕ್ಷೇತ್ರಸ್ಥಾನದಲ್ಲಿ ಭೀಮೇಶ್ವರ ದೇವಾಲಯವಿರುತ್ತದೆ. ಈ ಪ್ರದೇಶದಲ್ಲಿಯೇ ಅಮರಗುಂಡವೆಂಬ ಪ್ರಸಿದ್ಧ ಕ್ಷೇತ್ರವಿದೆ. ಭೀಮೇಶ್ವರ ಲಿಂಗದ ಅರ್ಚಕನಿಗೆ ಮಲ್ಲಿಕಾರ್ಜುನನೆಂಬ ಮಗನು ಆಗಲು ಅವನು ಮುಂದೆ ಮಲ್ಲಿಕಾರ್ಜುನ ಪಂಡಿತಾರಾಧ್ಯನೆಂದು ಹೆಸರಾದನು. ಅವನು ಮಾಡಿದ ಕಾರ್ಯಗಳು ಘನತರವಾದವುಗಳು. ಶ್ರೀಶೈಲ ಪ್ರಾಂತದಲ್ಲಿ ಈ ಕಾಲವಲ್ಲಿ ಆಗಿಂದಾಗ್ಗೆ ಶಿವಾನುಭವಿಗಳು ನೆರೆದು ಶಿವಾನುಭವದ ತತ್ವಗಳನ್ನು ಚರ್ಚೆ

ಮಾಡುತ್ತ ಇದ್ದುದರಿಂದ ಶಿವಶರಣರಿಗೆ ಅದು ಮುಖ್ಯ ಸ್ಥಳವಾಯಿತು. ಹೇಗೆ ಕಲ್ಯಾಣದಲ್ಲಿ ಶಿವಾನುಭವ ಮಂಟಪವೋ, ಹಾಗೆಯೇ ಆಂಧ್ರ ದೇಶದಲ್ಲಿ ಶ್ರೀಶೈಲ ಮಲ್ಲಿಕಾರ್ಜುನನಿದ್ದ ಸ್ಥಾನವಾಯಿತು. ಕರ್ನಾಟಕದ ಶಿವಶರಣರಿಗೂ ಕೂಡ ಅದು ಪವಿತ್ರಸ್ಥಾನವಾಗಿದೆ. ಹೀಗೆ ಅಲ್ಲಿ ನೆರೆಯುತ್ತಿದ್ದ ಮಹಾನುಭಾವರು ಉತ್ತರಕ್ಕೆ ಹೈದ್ರಾಬಾದ ಪ್ರದೇಶ, ಪೂರ್ವ ಮತ್ತು ದಕ್ಷಿಣ ದಿಗ್ಭಾಗಗಳಲ್ಲಿ ಶಿವಶರಣರ ತತ್ವಗಳ ಪ್ರಸಾರಮಾಡಹತ್ತಿದರು. ಈ ಕಾಲಕ್ಕೆ ಈ ಪ್ರಾಂತದಲ್ಲಿ ಸಕಳೇಶ ಮಾದರಸ, ವೈದ್ಯನ ರಾಮಯ್ಯ, ವೇಮನಾರಾಧ್ಯ, ಸೋಮನಾರಾಧ್ಯ, ತಂಗಟೂರ ಮಾರಯ್ಯ, ಸೂರಂಬೆ ಮೊದಲಾದ ಶಿವಶರಣರು ಶಿವಾನುಭವದ ತತ್ವಗಳನ್ನು ಪಾಲಿಸುತ್ತ ಪ್ರಸಿದ್ಧರಾಗಿದ್ದಾರೆ.

ಈ ಪ್ರಕಾರ ಶಿವಶರಣರ ತತ್ವಗಳು ಪ್ರಸಾರ ಹೊಂದಲಿಕ್ಕೆ ಅವರು ಕನ್ನಡದಲ್ಲಿ ರಚಿಸಿದ ವಚನಶಾಸ್ತ್ರವೇ ಮುಖ್ಯ ಕಾರಣವಾಯಿತು. ಇವುಗಳ ಮೂಲಕವೇ ವೀರಶೈವ ಮತಬೋಧೆಗಳು ಎಲ್ಲ ಕಡೆಗೆ ನಡೆದವು. ವಚನಗಳು ಎಷ್ಟು ಪರಿಣಾಮಕಾರಿಗಳೆಂಬುದು ಮಲ್ಲಿಕಾರ್ಜುನ ಪಂಡಿತಾರಾಧ್ಯನಿಗೆ ಸಂಬಂಧಪಟ್ಟ ಕೆಳಗಿನ ಚಿಕ್ಕ ಕಥೆಯಿಂದ ವಾಚಕರಿಗೆ ತಿಳಿಯಬರುವದು.

## ವಚನಶ್ರವಣದಿಂದ ಪಂಡಿತಾರಾಧ್ಯನು ಕನ್ನಡದ ಜ್ಞಾನ ಹೊಂದಿದ್ದು

ಮಲ್ಲಿಕಾರ್ಜುನ ಪಂಡಿತಾರಾಧ್ಯನು ವೀರಶೈವ ಮತಪ್ರವರ್ತಕರಲ್ಲಿ ಉಚ್ಚ ಸ್ಥಾನವನ್ನು ಹೊಂದಿದ್ದಾನೆ. ಆತನ ಮೂಲಕವೇ ಶಿವಶರಣರ ವಿಚಾರಗಳು ಆಂಧ್ರ ದೇಶದಲ್ಲಿ ೧೨ ನೇ ಶತಮಾನದಲ್ಲಿ ಪ್ರಸಾರ ಹೊಂದಿದವು. ಅವನು ಪ್ರಸಿದ್ಧಿಗೆ ಬಂದ ಕಾಲದಲ್ಲಿಯೇ ಬಸವೇಶ್ವರನು ಶಿವಶರಣರೊಂದಿಗೆ ಕಲ್ಯಾಣದಲ್ಲಿ ಶಿವಾನುಭವ ಮಂಟಪದಲ್ಲಿ ಶಿವಾನುಭವದ ಉಚ್ಚ ತತ್ವಗಳನು ಪ್ರಸಾರ ಪಡಿಸುತ್ತಾ ಇದ್ದನು. ಇದರಿಂದ ಅವನ ಮತ್ತು ಶಿವಶರಣರ ಕೀರ್ತಿಯು ಸುತ್ತಲಿನ ದೇಶಗಳಲ್ಲಿ ಹೆಚ್ಚುತ್ತಲೇ ಬಂದಿತು. ಹಾಗೆಯೇ ಆಂಧ್ರ ದೇಶದಲ್ಲಿಯೂ ಕೂಡ ಶರಣರ ಪ್ರಭಾವವು ಬೆಳೆಯುತ್ತಲೇ ಇತ್ತು.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಉಚ್ಚ ತರಗತಿಯ ಕವಿಯಾಗಿದ್ದಾನೆ. ಅವನು ಒಂದು ದಿನ ಶುದ್ಧ ತೆಲುಗಿನಲ್ಲಿ ಪರಶಿವನ ಸ್ತೋತ್ರ ಪದಗಳನ್ನು ರಚಿಸಿದನು. ಆಗ ಜನರೆಲ್ಲರೂ ಅವುಗಳನ್ನು ಕೇಳಿ, ಶಿವ ಶಿವಾ ! ಪಂಡಿತಾರಾಧ್ಯನು ಕನ್ನಡ ನುಡಿಯಲ್ಲಿ ಇಂಥ ಶಿವನ ಸ್ತೋತ್ರವನ್ನು

ಪೂಶಿಸ್ಸಿದರೆ ಅವನ್ನು ಕರ್ನಾಟಕ ದೇಶದ ಜನರೆಲ್ಲ ಕೇಳಿ ಧನ್ಯರಾಗುತ್ತಿದ್ದರು. ಆದರೆ ಪಂಡಿತಾರಾಧ್ಯನಿಗೆ ಈ ಭಾಷೆಯಲ್ಲಿ ಪಾಂಡಿತ್ಯವಿದೆಯೋ ಇಲ್ಲವೋ ಎಂದು ನುಡಿಯುಹತ್ತಿದರು.

ಹೀಗಿರಲು ಬಸವೇಶ್ವರನು ನಿರೂಪಿಸಿದ ಕನ್ನಡ ವಚನಗಳನ್ನು ಪಂಡಿತಾರಾಧ್ಯನ ಪಟ್ಟಣದಿಂದ ಕಲ್ಯಾಣಕ್ಕೆ ಹೋಗಿ ಬಂದವರು ಪಠನ ಮಾಡುತ್ತಿರುವದನ್ನು ಅವನು ಕೇಳಿ ಅವರನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವರ ಮೂಲಕ ಅವುಗಳನ್ನು ನಿತ್ಯ ಕೇಳುವದರಲ್ಲಿ ತೊಡಗಿದನು. ಅವುಗಳನ್ನು ಅವನು ದಿನಾಲು ಭಕ್ತಿಪೂರ್ವಕವಾಗಿ ಕೇಳುತ್ತ ಇರಲು ಅವುಗಳಲ್ಲಿದ್ದ ಶಿವಾನುಭವದ ಉಚ್ಚ ವಿಚಾರಗಳು ಅವನ ಹೃದಯದಲ್ಲಿ ಬಿಂಬಿಸಿದವು. ಆಗ ಕನ್ನಡದ ಜ್ಞಾನವು ಅವನಿಗೆ ಪರಶಿವ ಮುಖಸಿದ್ಧ ಸೂಚಿತವೋ ಎನ್ನುವಂತೆ ಸುಲಲಿತವಾಗಿ ಅವನಲ್ಲಿ ಉಂಟಾಗಹತ್ತಿತು. ಹೀಗಾಗಲು ಶಕ್ಯವೆಂಬುವಕ್ಕೆ ಅನೇಕ ಉದಾಹರಣೆಗಳು ಈಗಲೂ ನಮಗೆ ದೊರೆಯುತ್ತವೆ. ಈಚೆಗೆ ವಚನಗಳನ್ನು ಆಗಿಂದಾಗ್ಗೆ ಕೇಳಿ ಕೇಳಿ, ಪಾಠಮಾಡಿದ್ದರ ಪರಿಣಾಮವಾಗಿ, ಕನ್ನಡದ ಅಭ್ಯಾಸವಿಲ್ಲದ ಅನೇಕ ಸ್ತ್ರೀ-ಪುರುಷರು ಅತ್ಯುತ್ತಮ ರೀತಿಯಿಂದ ಶುದ್ಧ ಕನ್ನಡದಲ್ಲಿ ವ್ಯಾಖ್ಯಾನಗಳನ್ನು ಕೊಡುತ್ತಿರುವ ಉದಾಹರಣೆಗಳು ಅನೇಕ ಇರುತ್ತವೆ.

ಮುಂದೆ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಕನ್ನಡ ನುಡಿಯಲ್ಲಿಯೇ ಶಿವಾಧಿಕ್ಯವೆಂಬ ಕಾವ್ಯವನ್ನು ರಚಿಸಿ ಅವನ್ನು ಓಲೆಯಲ್ಲಿ ಬರೆದು ಆ ಓಲೆಯನ್ನು ಒಂದು ವಿಭೂತಿಯ ಕರಡಿಗೆಯಲ್ಲಿ ಮಡಗಿ ಆ ಕರಡಿಗೆಯನ್ನು ಒಬ್ಬ ಶಿವಶರಣನ ಕೈಯಲ್ಲಿ ಕೊಟ್ಟು- ಅಯ್ಯಾ ಭಕ್ತನೇ, ಬಸವೇಶ್ವರನನ್ನು ನೀನು ಕಂಡು, ನನ್ನ ಶರಣಾರ್ಥಿಯನ್ನು ಅವನಿಗೆ ಹೇಳಿ, ಅವನಿಗೆ ಈ ಓಲೆಯನ್ನು ಕೊಡೆಂದು ಹೇಳಿ ಕಳುಹಿದನು.

ಆ ಭಕ್ತನು ಅದನ್ನು ತೆಗೆದುಕೊಂಡು ಬಸವೇಶ್ವರನಲ್ಲಿಗೆ ಹೋಗಿ ನಮಸ್ಕರಿಸಿ ಭಕ್ತಿಯಿಂದ ಅವನಿಗೆ ಕೊಡಲು, ಬಸವೇಶ್ವರನು ಅದನ್ನು ತೆಗೆದುಕೊಂಡು ಅದರೊಳಗಿದ್ದ ಶಿವಾಧಿಕ್ಯ ಕಾವ್ಯವನ್ನು ಓದಿನೋಡಿ, ಅತ್ಯಂತ ಭಕ್ತಿಯುಳ್ಳವನಾಗಿ " ಶರಣು, ಶರಣು " ಎಂದು ಅದನ್ನು ನಮಸ್ಕರಿಸಿದನು. ಪಂಡಿತಾರಾಧ್ಯನು ಮಹಾ ಮಹಿಮನೆಂಬುದು ಆ ಕಾವ್ಯದಿಂದ ಅವನಿಗೆ ತಿಳಿದುಬಂದಿತು. ಆಗ ಅವನಿಗೋಸ್ಕರ ಬಸವೇಶ್ವರನು ಅತ್ಯಂತ ಭಕ್ತಿಯನ್ನು ತಾಳಿದವನಾಗಿ ಪಂಡಿತಾರಾಧ್ಯನ ಸ್ತೋತ್ರ ಪದಗಳನ್ನು ಕನ್ನಡ

ಭಾಷೆಯಲ್ಲಿ ರಚಿಸಿ ಅದೇ ವಿಭೂತಿಯ ಕರಡಿಗೆಯಲ್ಲಿ ಅವುಗಳನ್ನು ಇಟ್ಟು ಅದರಲ್ಲಿ ಭಸ್ಮವನ್ನು ತುಂಬಿ, ಆ ಪೆಟ್ಟಿಗೆಯನ್ನು ಮುದ್ರಿಸಿ ಅವನ್ನು ಬಂದಿದ್ದ ಆ ಶರಣನ ಕಯ್ಯಲ್ಲಿಯೇ ಕೊಟ್ಟು ಪಂಡಿತಾರಾಧ್ಯನಲ್ಲಿಗೆ ತಿರುಗಿ ಕಳುಹಿದನು.

ಆಗ ಪಂಡಿತಾರಾಧ್ಯನು ಆ ಭಕ್ತನು ತಂದ ವಿಭೂತಿಯ ಕರಡಿಗೆಯನ್ನು ಬಿಚ್ಚಿ ಒಳಗಿದ್ದ ಭಸ್ಮವನ್ನು ಹಣೆಯಲ್ಲಿ ಧರಿಸಿ ಪ್ರತಿಕ್ಷಣ 'ಬಸವಾ' 'ಬಸವಾ' ಎಂಬ ನಾಮವನ್ನು ಉಚ್ಚರಿಸುತ್ತ, ಆ ಪೆಟ್ಟಿಗೆಯಲ್ಲಿದ್ದ ಕಾವ್ಯವನ್ನು ಪಠನ ಮಾಡಿದನು. ಅವನು ಹೀಗೆ ಪಠನಮಾಡಿದ ಕೂಡಲೆ ಕನ್ನಡ ಭಾಷೆಯು ಅವನಲ್ಲಿ ಸರಸಾಗಿ ತನ್ನಷ್ಟಕ್ಕೆ ತಾನೇ ನಲಿಯಹತ್ತಿತು.

ಆಗ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಪರಶಿವನ ಪಾವನ ಸ್ವರೂಪನಾದ ಶ್ರೀ ಬಸವೇಶ್ವರನ ಸ್ತುತಿಯನ್ನು ಅಚ್ಚಗನ್ನಡವಲ್ಲಿ ಮತ್ತು ಸಂಸ್ಕೃತದಲ್ಲಿ ಬರೆದು ಆ ಬಸವಸ್ತೋತ್ರವನ್ನೇ ಭೂವಿನುತ ವಾಕ್ಯವನ್ನಾಗಿ ಮಾಡಿ ಮೆರೆದು ತಾನೂ ಕೂಡ ಬಸವನಾಮಾಮೃತ ಸಂತುಷ್ಟ ಚಿತ್ತನಾಗಿ ದೇಶದಲ್ಲಿ ಮೆರೆದನು. ಅಂದಿನಿಂದ ಬಸವನ ವಿಷಯವಾಗಿ ಅತುಲವಾದ ಭಕ್ತಿಭಾವವು ಆಂಧ್ರದೇಶದ ವೀರಶೈವರಲ್ಲಿ ಮಾತ್ರವಲ್ಲದೆ ಅಲ್ಲಿಯ ಶೈವ ಮತ್ತು ಆರಾಧ್ಯ ಸಾಂಪ್ರದಾಯಿಕರಲ್ಲಿಯೂ ಕೂಡ ಈಗಲೂ ಚ್ಯುತಿ ಇಲ್ಲದೆ ವಾಸಮಾಡುತ್ತಾ ಇದೆ. ಇದು ಶಿವಶರಣರು ರಚಿಸಿದ ವಚನಶಾಸ್ತ್ರದ ಪ್ರಭಾವವೇ ಹೊರತು ಬೇರೊಂದಲ್ಲ.

---

## ಧವಳೇಶ್ವರ

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಅಮರಗುಂಡ ಎಂಬ ಕ್ಷೇತ್ರದಲ್ಲಿ ಕೆಲವು ದಿವಸ ವಾಸವಾಗಿದ್ದನು. ಅವನು ಅಲ್ಲಿ ಇದ್ದಾಗ್ಗೆ ಕಲ್ಯಾಣಕ್ಕೆ ಹೋಗಿ ಬಸವನನ್ನು ಕಾಣಬೇಕೆಂಬ ಕುತೂಹಲವು ಅವನಲ್ಲಿ ಉಂಟಾಯಿತು. ಆಗ ಆವನು ತನ್ನ ಪರಿವಾರದೊಂದಿಗೆ ಅತ್ತ ಹೊರಡಲು ಉದ್ಯುಕ್ತನಾದನು. ಅವನು ಮೊದಲು ನಡುಗುಡುಮೂಲ ಎಂಬ ಗ್ರಾಮಕ್ಕೆ ಬಂದನು. ಅಲ್ಲಿ ವೀರ ಚಾಕಿದೇವನೆಂಬ ಶಿಷ್ಯನಿದ್ದು ಅವನು ಆ ನಾಡಿದಲ್ಲಿ ವೀರ ಭಕ್ತಿಗೋಸ್ಕರ ಬಹಳ ಹೆಸರುವಾಸಿಯಾಗಿದ್ದನು. ಅಲ್ಲಿ ಪಂಡಿತಾರಾಧ್ಯನು ಕೆಲವು ದಿವಸ ತಳುವಿ ಅವನ ಭಕ್ತಿಯನ್ನು ಸ್ವೀಕರಿಸುವವನಾದನು. ಆಗ ಬಹುಜನರು ಆ ಗ್ರಾಮಕ್ಕೆ ಬಂದು ಶಿವಶರಣರ ಉಚ್ಚ ವಿಚಾರಗಳ ಬೋಧೆಯನ್ನು ಪಂಡಿತಾರಾಧ್ಯನಿಂದ ಕೇಳುವಂಥವರಾದರು.

ಈ ಪ್ರಕಾರ ಪಂಡಿತಾರಾಧ್ಯನು ಅಲ್ಲಿ ಕೆಲವು ದಿವಸವಿದ್ದು ಮುಂದೆ ಸಂಚಾರ ಮಾಡುತ್ತ ಈ ಭಾಗದಲ್ಲಿ ಅತ್ಯಂತ ಪ್ರಸಿದ್ಧ ಪಟ್ಟಣವಾದ ಪಾನುಗಲ್ಲಿಗೆ ಬಂದನು. ಇದು ಈಗ ಹೈದ್ರಾಬಾದ ಇಲಾಖೆಯಲ್ಲಿ ಮಹಬೂಬನಗರ ಜಿಲ್ಲೆಯಲ್ಲಿರುತ್ತದೆ. ಈ ಪಾನುಗಲ್ಲಿನಲ್ಲಿ ಉದಯಭೂಪಾಲನೆಂಬ ರಾಜನು ಆಳುತ್ತಿದ್ದನು. ಅವನು ತನ್ನ ರಾಜ್ಯದಲ್ಲಿ ಶಿವಭಕ್ತಿ ಎಂಬುದನ್ನು ತರಹರಿಸದೆ ಶಿವಭಕ್ತರನ್ನು ಪೀಡಿಸುವವನಾಗಿದ್ದನು. ಅವನಲ್ಲಿ ಗೋವಿಂದ ಪೆಗ್ಗಡೆ ಎಂಬವನು ಕೆಲವೊಂದು ಅಧಿಕಾರ ಸ್ಥಾನವನ್ನು ಹೊಂದಿ ಅವನನ್ನು ಓಲೈಸುತ್ತ ಇದ್ದನು. ಅವನು ಬಾಹ್ಯದಲ್ಲಿ ವಿಷ್ಣುಭಕ್ತನಂತೆ ತೋರಿದರೂ ನಡೆಯಲ್ಲಿ ಶಿವಭಕ್ತನಾಗಿ ಶಿವಾಚಾರದಲ್ಲಿಯೇ ನಿರತನಾಗಿದ್ದನು.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಪಾನುಗಲ್ಲಿಗೆ ಬಂದ ಬಳಿಕ ಗೋವಿಂದ ಪೆಗ್ಗಡೆಯು ಅವನನ್ನು ಇದಿರುಗೊಂಡು ಸಂಭ್ರಮದಿಂದ ಅವನನ್ನು ತನ್ನ ಗೃಹಕ್ಕೆ ಕರೆತಂದು ಉನ್ನತಾಸನವನಿಕ್ಕಿ ಸರ್ವ ಸತ್ಕಾರವನ್ನು ಮಾಡಿಸುವವನಾದನು. ಆಗ ಬಹುಜನ ಜಂಗಮರು ಪಂಡಿತಾರಾಧ್ಯನಿದ್ದಲ್ಲಿಗೆ ಬಂದು ಅವನನ್ನು ಕಾಣಲು ಅವನ ಅರ್ಚನೆ ಪೂಜಾದಿ ಕಾರ್ಯಗಳು ಮನೆಯಲ್ಲಿ ಬಹು ಸಂಭ್ರಮದಿಂದ ನಡೆದವು. ಗೋವಿಂದ ಪೆಗ್ಗಡೆಯು ಹೀಗೆ ಪಂಡಿತಾರಾಧ್ಯನನ್ನು ಕೆಲವು ದಿವಸ ಓಲೈಸುತ್ತಾ ಇದ್ದನು.

ಮಲ್ಲಿಕಾರ್ಜುನ ಪಂಡಿತಾರಾಧ್ಯನ ವಿರೋಧಿಗಳು ಆ ಗ್ರಾಮದಲ್ಲಿ ಅನೇಕರಿದ್ದು ಪೆಗ್ಗಡೆಯು ಅವನನ್ನು ಹೀಗೆ ಓಲೈಸುವದನ್ನು ಅವರು ಸೈರಿಸಲಾರದೆ ಅರಸನಲ್ಲಿಗೆ ಹೋಗಿ ಧವಳೇಶನು ತಮ್ಮ ಊಳಿಗದವನು. ಅವನು ತಮ್ಮ ಊಳಿಗವನ್ನು ಬಿಟ್ಟುಕೊಟ್ಟು ಶಿವಭಕ್ತನಾದ ಪಂಡಿತಾರಾಧ್ಯನ ಊಳಿಗದಲ್ಲಿದ್ದಾನೆ. ತಮ್ಮ ಸೇವೆಯಲ್ಲಿರಲು ನಾವು ಎಷ್ಟು ಹೇಳಿದರೂ ಅವನು ನಮ್ಮ ಮಾತನ್ನು ಕೇಳುವದಿಲ್ಲ. ಮಹಾಸ್ವಾಮಿಗಳು ಅವನನ್ನು ಕರಿಸಿ ತಿಳಿಹೇಳಬೇಕೆಂದು ಕೊಂಡೇ ಹೇಳಿದರು.

ಆಗ ಅರಸನು ಧವಳೇಶ್ವರನನ್ನು ಕರಿಸಿ ಅವನಿಗೆ- ನೀನು ನನ್ನ ಸಂಬಳವನ್ನು ಉಣ್ಣುತ್ತೀ. ಹೀಗೆ ನನ್ನಿಂದ ಪೋಷಿತನಾಗಿ ನಿನ್ನ ಗುರುವನ್ನು ಹೀಗೆ ಓಲೈಸುವದು ಸರಿಯೇ? ಎಂದು ಕೇಳಿದನು.

ಇದಕ್ಕೆ ಧವಳೇಶ್ವರನು- ನಾನು ನನ್ನ ಕಾಯಕಕ್ಕೋಸ್ಕರ ನಿಮ್ಮನ್ನು ಓಲೈಸುತ್ತೇನೆ. ಆದರೆ ಭಕ್ತಿಗೆಂದು ಗುರುವನ್ನು ಓಲೈಸುತ್ತೇನೆ. ಇದರಲ್ಲಿ ದೋಷವಾವುದು? ಎಂದು ಉತ್ತರಕೊಟ್ಟನು.

ಅದಕ್ಕೆ ಅರಸನೆಂದದ್ದು- ನಿನ್ನ ಶರೀರವು ನನ್ನಿಂದ ಪೋಷಿತವಾಗಿವೆ. ನನ್ನ ಪಡುಗ (ಪಾದರಕ್ಷೆ) ವನ್ನು ಹಿಡಿ ಎಂದರೆ ನೀನು ಹಿಡಿಯಲೇ ಬೇಕು. ನಿನ್ನ ಸಿರವನ್ನು ಅರಿದುಕೊಡು ಎಂದರೆ ಕೊಡಲೇಬೇಕು ಎಂದು ನುಡಿದನು.

ಅದಕ್ಕೆ ಧವಳೇಶ್ವರನು- ಅಹುದು ನಾನು ನಿನ್ನ ಸಂಬಳವನ್ನು ಉಂಡು ಈ ದೇಹವನ್ನು ಪೋಷಿಸುತ್ತಾ ಬಂದಿದ್ದೇನೆ. ಇಂಥ ಈ ದೇಹವನ್ನು ನೀನು ತೆಗೆದುಕೋ. ಆದರೆ ನನ್ನ ಭಕ್ತಿಯು ಮಾತ್ರ ನಿನ್ನ ಅಂಕಿತವಲ್ಲ. ಅದರ ಸ್ವಾಮಿತ್ವವು ನನ್ನ ಕಡೆಗೆ ಇವೆ, ಎಂದು ನುಡಿಯುತ್ತ ಇಂಥ ದೇಹವನ್ನು ಇಡಬಾರದೆಂದು ತನ್ನ ಖಡ್ಗದಿಂದ ತನ್ನ ಸಿರವನ್ನು ಕತ್ತರಿಸಿ ಅರಸನಿಗೊಪ್ಪಿಸಿದನು. ಆಗ ಅವನ ಎಡದ ಕಯ್ಯಲ್ಲಿ ಸಿರ, ಬಲದ ಕಯ್ಯಲ್ಲಿ ಖಡ್ಗ ಹೀಗೆ ಹಿಡಿದುಕೊಂಡು ನಾಂಟ್ಯವನಾಡಹತ್ತಿದನು. ಅವನ್ನು ನೋಡಿ ಭೂಮಿಯು ಕಂಪಿತವಾಯಿತು. ಇಷ್ಟಕ್ಕೆ ಇದು ಮುಗಿಯಲಿಲ್ಲ. ಧವಳೇಶನ ದೇಹವು ಹೋಯಿತೆಂಬುದು ಸರಿ. ಆದರೆ ಅವನಲ್ಲಿದ್ದ ಗಣಾಚಾರವು ಅವನ ಕಯ್ಯಲ್ಲಿದ್ದ ಖಡ್ಗದಿಂದಲೇ ಆ ಭೂಪಾಲನ ಕೊರಳನ್ನು ಕತ್ತರಿಸಿ ನೆಲಕ್ಕುದುಳುವಂತೆ ಮಾಡಿತು. ಆಗ ಅರಸನ ಬಲವು ಆ ದೇಹವನ್ನು ಛಿನ್ನ ಭಿನ್ನಮಾಡಲು ಮುಂದುವರಿಯಿತು. ಆದರೆ ಆ ಬಲವೆಲ್ಲ ಧವಳೇಶನ ಅಗಾಧವಾದ ಖಡ್ಗದ ಮೂಲಕ ಸಂಹಾರವಾಯಿತು. ಇಷ್ಟೇ ಅಲ್ಲ, ಅರಸನ ಸಂತಾನವೆಲ್ಲವೂ ಕೂಡ ನಿಃಸಂತಾನವಾಯಿತು. ಹೀಗೆ ಪಟ್ಟಣದಲ್ಲಿ ಕೋಲಾಹಲವು ನಡೆದಿರಲು, ಆಕಾಶದಿಂದ ಪುಷ್ಪಕ ವಿಮಾನವು ಬಂದು ಅದರಲ್ಲಿದ್ದ ಗಣಾಧೀಶ್ವರರು ಧವಳೇಶ್ವರನನ್ನು ಅದರ ಮೇಲೆ ಹತ್ತಿಸಿ ಕೈಲಾಸಕ್ಕೊಯ್ದರು.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಹೀಗೆ ಪಾನುಗಲ್ಲಿನಲ್ಲಿ ತನ್ನ ಶಿಷ್ಯನ ಮೂಲಕ ನಡೆದ ಅದ್ಭುತವನ್ನು ಕಂಡು ಮುಂದೆ ಕಲ್ಯಾಣಕ್ಕೆ ಬಸವನನ್ನು ಕಾಣಲು ಪಯಣ ಮಾಡುವವನಾದನು.

ಧವಳೇಶ್ವರನು ಬಸವೇಶ್ವರನ ಸಮಕಾಲೀನನು. ಈ ಕಾಲವಲ್ಲಿಯೇ ವೀರಶೈವ ಧರ್ಮವು ಪ್ರಸಾರವಾದದ್ದು. ಆಗ ದೇಶವಲ್ಲೆಲ್ಲ ಒಂದು ಅದ್ಭುತ ಕ್ರಾಂತಿಯುಂಟಾಯಿತು. ಇದು ಶಿವಶರಣರ ಚರಿತ್ರೆಗಳಿಂದ ಕಂಡುಬರುತ್ತದೆ. ಈ ಸಮಯದಲ್ಲಿ ವಿರೋಧಿಗಳು ಶಿವಶರಣರನ್ನು ಬಹಳ ಪೀಡಿಸಿರುವರು, ಅವರನ್ನು ಹಿಂಸಿಸಿರುವರು, ಅವರನ್ನು ಸಂಪೂರ್ಣ ನಾಶ ಮಾಡಲೂ ಯತ್ನಿಸಿರುವರು. ಆದರೆ ಶಿವಶರಣರು ಈ ಹಿಂಸೆಗಳನ್ನು ಎದುರಿಸಿ ಜಯಶೀಲರಾಗಿದ್ದಾರೆ. ಇದರ ನಿಜೇತಿಹಾಸವು ಇನ್ನೂ ಸಂಶೋಧಿಸಲ್ಪಟ್ಟಿಲ್ಲ. ಆದರೂ

ಇಂಥ ಕ್ರಾಂತಿಯುಂಟಾದದ್ದರ ಸೂಚನಾತ್ಮಕ ಸಂಗತಿಗಳು ಶಿವಶರಣರ ಚರಿತ್ರೆಗಳಲ್ಲಿ ಅಲ್ಲಲ್ಲಿ ದೃಗ್ಗೋಚರವಾಗುತ್ತವೆ. ಮಾರುಡಿಗೆಯ ನಾಚಯ್ಯ, ಕೋವೂರು ಬ್ರಹ್ಮಯ್ಯ, ವರದಾನಿ ಗುಡ್ಡವ್ವೆ, ಆದಯ್ಯ, ಪೈಜವ್ವೆ, ಚನ್ನ ಮಲ್ಲಯ್ಯ ಇವರ ಚರಿತ್ರೆಗಳು ಇವಕ್ಕೆ ಉದಾಹರಣೆಗಳಾಗಿವೆ. ಧವಳೇಶ್ವರನ ಚರಿತ್ರೆಯೂ ಇಂಥ ವೀರ ಶಿವಶರಣರ ಚರಿತ್ರೆಗಳಲ್ಲಿ ಒಂದಾಗಿರುತ್ತದೆ.

---

## ರೇವಯ್ಯದೇವ

ಕರ್ನಾಟಕದಲ್ಲಿಯ ಶಿವಶರಣರು ಕಲ್ಯಾಣಪಟ್ಟಣದಲ್ಲಿ ಶಿವಾನುಭವ ಮಂಟಪವನ್ನು ಏರ್ಪಡಿಸಿಕೊಂಡು ಅಲ್ಲಿಂದ ಶಿವಾನುಭವದ ತತ್ವಗಳನ್ನು ಇಡೀ ಉತ್ತರ ಕರ್ನಾಟಕ, ಕೇರಳ ಮತ್ತು ಮೈಸೂರು ಪ್ರಾಂತಗಳನ್ನು ಒಳಕೊಂಡು ಚೋಳ ರಾಜ್ಯದವರೆಗೂ ಪ್ರಸಾರ ಪಡಿಸಿದ್ದಾರೆ. ಹಾಗೆಯೇ ಆಂಧ್ರ ವೀರಶೈವರು ಆರಂಭದಲ್ಲಿ ಶ್ರೀಶೈಲವಲ್ಲಿ ತಮ್ಮ ಮುಖ್ಯ ಸ್ಥಾನವನ್ನು ಮಾಡಿಕೊಂಡು ಅದರ ಸುತ್ತಲಿನ ಪ್ರದೇಶಗಳಲ್ಲಿ ಮೊದಲು ವೀರಶೈವ ಮತವನ್ನು ಹಬ್ಬಿಸಿದರು. ಆ ಮೇಲೆ ಅವರು ಶ್ರೀಪತಿಪಂಡಿತಾರಾಧ್ಯ, ಅವನ ತರುವಾಯ ಮಲ್ಲಿಕಾರ್ಜುನ ಪಂಡಿತಾರಾಧ್ಯ, ಇವರ ನೇತೃತ್ವದಲ್ಲಿ ವಿಜಯವಾಟಿಕಾ ಅಂದರೆ ಈಗಿನ ಬೆಜವಾಡ, ದ್ರಾಕ್ಷಾರಾಮಕ್ಷೇತ್ರ ಮತು ಅಮರಗುಂಡ ಈ ನಗರಗಳಲ್ಲಿ ತಮ್ಮ ಕೇಂದ್ರಸ್ಥಾನಗಳನ್ನು ಸ್ಥಾಪಿಸಿ ಕೊಂಡು ಆಂಧ್ರದೇಶದಲ್ಲಿ ವೀರಶೈವ ಮತವನ್ನು ಅಲ್ಲಲ್ಲಿ ಪ್ರಸ್ಥಾಪಿಸುತ್ತ ನಡೆದರು. ಅವರ ಕಾರ್ಯಕ್ಷೇತ್ರವು ಭಾರತದ ಪೂರ್ವದಿಕ್ಕಿನಿಂದ ಸಾಗಿ ಚೋಳರಾಜ್ಯದ ವರೆಗೂ ವಿಸ್ತಾರಹೊಂದಿತು. ಆದರೆ ಇವುಗಳಲ್ಲಿ ಕರ್ನಾಟಕ ದಲ್ಲಿ ನಡೆದ ಕಾರ್ಯಗಳೇ ಹೆಚ್ಚು ಪ್ರಭಾವವುಳ್ಳವಾಗಿರುತ್ತವೆ

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಬಸವೇಶ್ವರನ ಸಮಕಾಲೀನನು. ಅವನ ಪ್ರಚಾರ ಕಾರ್ಯಗಳ ಮೂಲಕ ಅವನಿಗೆ ಅಸಂಖ್ಯಶಿಷ್ಯರುಗಳಾದರು. ಅವರಲ್ಲಿ ಧವಳೇಶ್ವರಯ್ಯ, ದೇವಯ್ಯ, ರೇವಯ್ಯ, ರೇಮಯ್ಯ, ರೇಚಯ್ಯ ವೆಲ್ಲಗೊಂಡದ ಮಹಾದೇವಯ್ಯ, ದೊನ್ನಮಯ್ಯ, ಇವರು ಮುಖ್ಯರಾಗಿದ್ದರು. ಅವರು ವಿದ್ವಾಂಸರಾಗಿ ಪಂಡಿತಾರಾಧ್ಯನ ಸಂಚಾರದಲ್ಲಿ ಅವನಿಗೆ ಯಾವಾಗಲೂ ಸಹಾಯಕರಾಗಿರುತ್ತಿದ್ದರು.

ಹೀಗಿರುವಲ್ಲಿ ವೆಲ್ನಾಡ ಚೋಳನು ಈಗ ಗುಂಟೂರು ಜಿಲ್ಲೆಯಲ್ಲಿರುವ ಧನದಮರದಲ್ಲಿ ( ಇಂದಿನ ಚಂದವ್ರೋಲು ) ಇಲ್ಲಿ ರಾಜವಾಳುತ್ತಿದ್ದನು. ಅವನು ಬೌದ್ಧಾಚಾರ್ಯನೆಂಬವನನ್ನು ತನ್ನ ಗುರುವನ್ನಾಗಿ ಮಾಡಿಕೊಂಡಿದ್ದನು. ಈ ಬೌದ್ಧಾಚಾರ್ಯನು ಜಗತ್ತಿನಲ್ಲಿ ಜಿನನೇ ದೈವವು, ಅವನ ಹೊರ್ತು ಬೇರೊಂದು ದೈವವಿಲ್ಲ. ಇದನ್ನು ಖಂಡಿಸುವವರು ಯಾರಾದರೂ ಇದ್ದರೆ, ಅವರು ನನ್ನ ಕೂಡ ವಾದಿಸಬೇಕು, ಎಂದು ಬಹಿರಂಗವಾಗಿ ಆಹ್ವಾನವನ್ನಿತ್ತನು. ಆಗ ಅರಸನು ಜೈನ, ಬೌದ್ಧ, ಚಾರ್ವಾಕ ವೇದಾಂತ ಮೊದಲಾದ ಅನೇಕ ಮತಸ್ಥರನ್ನು ಅವನ ಕೂಡ ವಾದಿಸಲು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು. ಹಾಗೆಯೇ ವೀರಶೈವರಲ್ಲಿ ಬಹು ಪ್ರಸಿದ್ಧನಾಗಿದ್ದ ಮಲ್ಲಿಕಾರ್ಜುನ ಪಂಡಿತಾರಾಧ್ಯನನ್ನೂ ವಾದಕ್ಕೋಸ್ಕರ ಕರೆಯಿಸಿಕೊಂಡನು. ಈ ವಾದದಲ್ಲಿ ಬೌದ್ಧಾಚಾರ್ಯನನ್ನು ಮೊದಲ್ಗೊಂಡು ಉಳಿದ ಎಲ್ಲ ಮತಸ್ಥರೊಡನೆ ವಾದಗಳು ನಡೆದು ಕಡೆಗೆ ಪಂಡಿತಾರಾಧ್ಯನು ವಾದದಲ್ಲಿ ಶಿವನೇ ದೈವವು, ಅವನೊಬ್ಬನೇ ಇದ್ದಾನೆ, ಅವನನ್ನು ಬಿಟ್ಟು ಬೇರೆ ಯಾವ ದೈವವೂ ಇಲ್ಲ, ಎಂದು ವೇದಾಗಮ ಶಾಸ್ತ್ರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಎಲ್ಲರನ್ನು ಸೋಲಿಸಿದನು. ಆಗ ಅರಸನು ಅವನನ್ನು ಅತ್ಯಂತನಾಗಿ ಮನ್ನಿಸಿ ತಿರುಗಿ ಕಳಿಸಿದನು.

ವೆಲ್ನಾಡ ಚೋಳನಲ್ಲಿಯ ಜೈನರು ತಮ್ಮ ಗುರುವಾದ ಬೌದ್ಧಾಚಾರ್ಯನಿಗೆ ಹೀಗೆ ಸೋಲುಂಟಾದದ್ದಕ್ಕೆ ಅತ್ಯಂತ ಕುಪಿತರಾಗಿ ಪಟ್ಟಣದಲ್ಲಿ ಮಲ್ಲಿಕಾರ್ಜುನ ದೇವಾಲಯವೆಂದಿದ್ದು ಅವರು ಅದರ ದೀಪಮಾಲೆಯ ಕಂಭವನ್ನು ಕಿತ್ತು ಅದರ ಅರ್ಚಕನನ್ನು ಕೊಂದುಹಾಕಿ ಅವನ ಹೊಟ್ಟೆಯನ್ನು ಸೀಳಿ ಸಮುದ್ರ ಮಧ್ಯದಲ್ಲಿದ್ದ ತಮ್ಮ ಜಿನನ ಗುಡಿಯ ಮುಂದ ಆ ದೀಪಸ್ತಂಭವನ್ನು ನೆಟ್ಟರು.

ಈ ಮಲ್ಲೇಶ್ವರ ದೇವಾಲಯವು ಈಗಲೂ ಧನದಪುರಕ್ಕೆ ಸಮೀಪವಾಗಿರುವ ಶಾಕುಳಕ್ಷೇತ್ರದಲ್ಲಿದೆ. ಈ ಪಟ್ಟಣಕ್ಕೆ ಸಮೀಪವಿರುವ ಸಮುದ್ರದಲ್ಲಿ ಒಂದು ದ್ವೀಪವಿದ್ದು ಅಲ್ಲಿ ಮೊದಲು ಚೈತ್ಯಾಲಯವಿದ್ದಂತೆ ತೋರುತ್ತದೆ. ಈ ದೀಪಕ್ಕೆ ದೀವೀಖಂಡವೆಂಬ ಹೆಸರು ಈಗ ಇದೆ. ಇಲ್ಲಿದ್ದ ಚೈತ್ಯಾಲಯದ ಇದಿರಿಗೆ ಈ ಮಲ್ಲೇಶ್ವರ ದೇವಾಲಯದ ದೀಪಸ್ತಂಭವನ್ನು ಬೌದ್ಧಾಚಾರ್ಯನು ನಡಿಸಿರ ಬಹುದೆಂದು ತೋರುತ್ತದೆ.

ಇದು ಮಲ್ಲಿಕಾರ್ಜುನ ಪಂಡಿತಾರಾಧ್ಯನಿಗೆ ತಿಳಿಯಿತು. ಆಗ ಅವನ ಶಿಷ್ಯನಾದ ರೇವಯ್ಯ ದೇವನು– ಇದಕ್ಕೆ ನಾನು ಪ್ರತೀಕಾರ ಮಾಡುವೆನೆಂದು ಗುರುವಿನ ಅಪ್ಪಣೆಯನ್ನು ಪಡೆದುಕೊಂಡು ಶಿವಾರ್ಚಕನನ್ನು ಕೊಂದು ಹಾಕಿದ ಪರವಾದಿ ಬೌದ್ಧಾಚಾರ್ಯನನ್ನು ಕೊಂದು ಹಾಕುವೆನೆಂದು ಪ್ರತಿಜ್ಞೆಯನ್ನು ಮಾಡಿ ಶಿವಶರಣರೊಂದಿಗೆ ದೀಪಸ್ತಂಭವನ್ನು ನಡಿಸಿದ್ದ ಜಿನಾಲಯವಿದ್ದಲ್ಲಿಗೆ ಬಂದನು.

ಆಗ ಬೌದ್ಧಾಚಾರ್ಯನು ಜನನ ಪ್ರತಿಮೆಯ ಪೂಜೆಯನ್ನು ಮಾಡಲು ಅಪೇ ಸಮುದ್ರಕ್ಕೆ ಹೋಗಿದ್ದನು. ಆಗ ರೇವಯ್ಯನು ತನಗೆ ದಾರಿಯನ್ನು ಕೊಡಬೇಕೆಂದು ಸಮುದ್ರಕ್ಕೆ ಅಪ್ಪಣೆ ಮಾಡಲು ಅದು ಅವನಿಗೆ ದಾರಿಯನ್ನು ಕೊಟ್ಟಿತು. ಆ ದಾರಿಯಿಂದ ರೇವಯ್ಯನು ಜಿನಾಲಯವಿದ್ದಲ್ಲಿಗೆ ಹೋಗಿ ಅಲ್ಲಿದ್ದ ಬೌದ್ಧಾಚಾರ್ಯನನ್ನು ಕೊಂದುಹಾಕಿ, ಅವನ ಹೊಟ್ಟೆಯನ್ನು ಸೀಳಿ, ನಾಲಿಗೆಯನ್ನು ಕೊಯ್ದು, ದೀಪಸ್ತಂಭವನ್ನು ಕಿತ್ತು ಧಡಕ್ಕೆ ತಂದನು. ಬರುವ ಮುಂದೆ– ನಾನೇ ಬೌದ್ಧಾಚಾರ್ಯನನ್ನು ಕೊಂದಿದ್ದೇನೆಂದು ಒಂದು ಓಲೆಯನ್ನು ಬರೆದು ಹೆಣಕ್ಕೆ ಸಿಕ್ಕಿಸಿದನು. ಆ ಮೇಲೆ ಅವನು ಆ ಕಂಭವನ್ನು ತಂದು ಮೊದಲಿನಂತೆ ಶಿವಾಲಯದ ಇದಿರಿಗೆ ನಡಿಸಿದನು.

ಬೌದ್ಧಾಚಾರ್ಯನ ಶಿಷ್ಯರು ಬೌದ್ಧಾಚಾರ್ಯನಿಗೆ ಹೀಗಾದುದನ್ನು ವೆಲ್ನಾಡ ಚೋಳಗೆ ಹೇಳಲು ಚೋಳನು– ನನ್ನ ಗುರುವನ್ನು ಕೊಂದವರು ಯಾರೆಂದು ಕೇಳಲು ಅಲ್ಲಿದ್ದ ರೇವಯ್ಯದೇವರು– ನಾನೇ ಕೊಂದೆನೆಂದು ಹೇಳಿದನು. ಆಗ ಅರಸನು ಶಾಸ್ತ್ರಜ್ಞರನ್ನು ಕರಿಸಿ ಇವನಿಗೆ ಆವ ಶಿಕ್ಷೆಯನ್ನು ಕೊಡಬೇಕೆಂದು ಕೇಳಲು ಅವರು ಚಾತುರ್ವರ್ಣದವರು ತಪ್ಪು ಮಾಡಿದರೆ ಅವರಿಗೋಸ್ಕರ ಆಜ್ಞೆಗಳುಂಟು. ಆದರೆ ಭಕ್ತರಿಗೆ ಯಾವ ಆಜ್ಞೆಗಳಿಲ್ಲವೆಂದು ಹೇಳಿದರು. ಆದರೆ ಅರಸನು ಅವರ ಹೇಳಿಕೆಯನ್ನು ಉಲ್ಲಂಘಿಸಿ ರೇವಯ್ಯದೇವನ ಕಣ್ಣುಗಳನ್ನು ಕೀಳಬೇಕೆಂದು ತನ್ನ ಚಾರರಿಗೆ ಆಜ್ಞೆಯನ್ನು ಮಾಡಿದನು. ಅವರು ಹಾಗೆಯೇ ಅವನ ಕಣ್ಣುಗಳನ್ನು ಕಿತ್ತಿದರು. ಆದರೆ ಸಮೀಪದಲ್ಲಿದ್ದ ರೇವಯ್ಯನ ಆರಾಧ್ಯ ಶಿಷ್ಯರು ಕಣ್ಣುಗಳಿಗೆ ಭಸ್ಮವನ್ನು ತಳೆದು ವಿಭೂತಿಯನ್ನು ತೋರಿಸಲು ಕಳೆದ ಕಣ್ಣುಗಳು ತಿರುಗಿ ಬಂದವು. ಹೀಗಾದುದನ್ನು ಚೋಳನು ನೋಡಿ ಪುನಃ ಕಣ್ಣುಗಳನ್ನು ತೆಗೆಯಿಸಲು ಅವು ಪುನಃ ಮೂಡಿದವು. ಹೀಗೆ ಅವುಗಳನ್ನು ತೆಗೆದು ಹಾಕಿದ ಹಾಗೆ ಅವು ಮತ್ತೆ ಮತ್ತೆ ಬರುತ್ತಿರಲು ರೇವಯ್ಯನು– ಇನ್ನು

ಮುಂದೆ ಪುನಃ ನನ್ನ ಕಣ್ಣುಗಳು ಬಂದರೆ, ಶಿವನೇ ನಿನಗೆ ಶಿವಗಣಂಗಳಾಣೆ ಎಂದು ಅನ್ನಲು ಅವನಿಗೆ ಕಣ್ಣು ಬರುವದು ನಿಂತಿತು.

ಆ ಮೇಲೆ ರೇವಯ್ಯದೇವನು ಈ ಚೋಳ ಪಾಪಾತ್ಮನನ್ನು ನೋಡ ಬಾರದೆಂದು ಆ ಸ್ಥಳವನ್ನು ಬಿಟ್ಟುಕೊಟ್ಟು ದ್ರಾಕ್ಷಾರಾಮ ಕ್ಷೇತ್ರಕ್ಕೆ ಬಂದು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಸಹವಾಸದಲ್ಲಿ ಇರಹತ್ತಿದನು.

ಹೀಗೆ ಕೆಲವು ದಿವಸಗಳಾದ ಮೇಲೆ ವೆಲ್ನಾಡಚೋಳನ ಸ್ವಪ್ನದಲ್ಲಿ ಶಿವನು ಅವನನ್ನು ತ್ರಿಶೂಲದಿಂದ ಇರಿದಂತಾಯಿತು. ಅವನಿಗೆ ಇರಿದಲ್ಲಿ ಮೂರು ಹುಣ್ಣುಗಳು ಹುಟ್ಟಿ ಅವು ವೆಗ್ಗಳವಾದವು. ಅವನಿಗೆ ಅವುಗಳ ಮೂಲಕ ಅತ್ಯಂತ ವೇದನೆಯಾಗಹತ್ತಿತು. ಆಗ ಅವನ ಮಂತ್ರಿಗಳು ಅವನಿಗೆ- ನೀವು ಮಲ್ಲಿಕಾರ್ಜುನ ಪಂಡಿತಾರಾಧ್ಯನನ್ನು ಕ್ಲೇಶಪಡಿಸಿದಿರಿ, ಇದರಿಂದ ನಿಮಗೆ ಹೀಗಾಗಿರಬೇಕು, ಅವನನ್ನು ಕರೆತಂದರೆ ನಿಮಗೆ ಗುಣ ವಾಗುವದೆಂದು ಬೋಧಿಸಲು, ಅವನು ಪರಿಚಾರಕರನ್ನು ಅವನಲ್ಲಿಗೆ ಕಳು ಹಿದನು. ಅವರು ಅವನಿದ್ದಲ್ಲಿಗೆ ಬಂದು ಅವನಿಗೆ ಕೈಮುಗಿದು- ಪಂಡಿ ತಾರಾಧ್ಯರೇ, ನಮ್ಮರಸು ನಿಮಗೆ ಅರ್ಧ ರಾಜ್ಯವನ್ನು ಕೊಡುವದಲ್ಲದೆ ನಿಮ್ಮಿಂದ ದೀಕ್ಷೆಯನ್ನು ಹೊಂದಲು ಅಪೇಕ್ಷಿಸುತ್ತಿದ್ದಾನೆ. ಅವನಲ್ಲಿಗೆ ಬರಬೇಕು ಎಂದು ನಿವೇದಿಸಿದರು. ಅದಕ್ಕೆ ಪಂಡಿತಾರಾಧ್ಯನು ಅವರ ಮಾತು ಕೇಳಿ ಕಿವಿಗಳನ್ನು ಮುಚ್ಚಿಕೊಂಡು- ಅವನ ಮುಖವನ್ನು ನಾನು ನೋಡಲಾರೆನು ಎಂದು ತಿರುಗಿ ಹೇಳಿಕಳುಹಿದನು. ಪರಿಚಾರಕರು ತಿರುಗಿ ಬಂದು ಅರಸನಿಗೆ ಹಾಗೆಯೇ ಹೇಳಿದರು. ಮುಂದೆ ಅರಸನು ವೇದನೆಯ ಲ್ಲಿಯೇ ಪರಿತಪಿಸುತ್ತ ಮರಣಹೊಂದಿದನು.

ಮೂಲ ಗ್ರಂಥಗಳಲ್ಲಿ ವೆಲ್ನಾಡ ಚೋಳನು ಜೈನನೆಂತಲೂ, ಬೌದ್ಧಾ ಚಾರ್ಯನು ಜೈನನೆಂತಲೂ, ಅವನು ದೀಪಮಾಲೆಯ ಸ್ತಂಬವನ್ನು ನಡಿ ಸಿದ್ದು ಚೈತ್ಯಾಲಯದ ಮುಂದೆ ಎಂತಲೂ, ಹೇಳಲ್ಪಟ್ಟಿರುತ್ತದೆ. ನಾವು ಹಾಗೆಯೇ ಇಲ್ಲಿ ವಿವರಿಸಿದ್ದೇವೆ. ಆದರೆ ಬೌದ್ಧಾಚಾರ್ಯ ಈ ಹೆಸರಿನ ಮೇಲಿಂದ ಆತನು ಬೌದ್ಧನಿರಬಹುದೆಂದು ತೋರುತ್ತದೆ. ಈ ಕಾಲದಲ್ಲಿ ಕರ್ನಾಟಕ ಮತ್ತು ಆಂಧ್ರ ದೇಶಗಳಲ್ಲಿ ಕೆಲವು ಸ್ಥಳಗಳಲ್ಲಿ ಬೌದ್ಧಾಲಯ ಗಳಿದ್ದುದು ಇತಿಹಾಸದಿಂದ ತಿಳಿದುಬರುತ್ತದೆ. ಈ ಚಂದವ್ರೋಲು ಗ್ರಾಮದ ಸಮೀಪವಾಗಿಯೇ ನಡುಗೂಡು, ಅಮರಾವತಿ ಮುಂತಾದ ಬೌದ್ಧರ ಪುರಾ ತನ ಸ್ಥಾನಗಳಿರುತ್ತವೆ.

# ವೆಲ್ಲಗೊಂಡದ ಮಹಾದೇವಯ್ಯ.

ಆಂಧ್ರದೇಶದಲ್ಲಿ ವೆಲ್ಲಗೊಂಡವೆಂಬ ಗ್ರಾಮವಿದೆ. ಅದು ಈಗ ನೆಲ್ಲೂರು ಜಿಲ್ಲೆಯಲ್ಲಿದ್ದು ಅದಕ್ಕೆ 'ವೆಲಿಗಂಡ್ಲಾ' ಎಂಬ ಹೆಸರಿದೆ. ಹಿಂದಿನ ಕಾಲದಲ್ಲಿ ಈ ಭಾಗವಲ್ಲಿ ಅನೇಕ ಶಿವಶರಣರು ಆಗಿ ಹೋಗಿದ್ದಾರೆ. ತಂಗಟೂರು ಮಾರಯ್ಯನ ಚರಿತ್ರೆಯನ್ನು ನಾವು ಶಿವಶರಣರ ಚರಿತ್ರೆಗಳು ಭಾಗ ೨ ಇದರಲ್ಲಿ ಬರೆದಿದ್ದು ಅವನಾದರೂ ಇದೇ ಜಿಲ್ಲೆಯವನು. ಈ ಜಿಲ್ಲೆಯಲ್ಲಿರುವ ವೆಲ್ಲಗೊಂಡವೆಂಬ ಪುರದಲ್ಲಿ ಮಹಾದೇವಯ್ಯನೆಂಬ ಶಿವಶರಣನು ವಾಸವಾಗಿದ್ದನು.

ಮಹಾದೇವಯ್ಯನು ಮಲ್ಲಿಕಾರ್ಜುನ ಪಂಡಿತಾರಾಧ್ಯನು ಪಾನುಗಲ್ಲಿನಲ್ಲಿ ಇದ್ದಾನೆಂಬ ವಾರ್ತೆಯನ್ನು ಕೇಳಿ ಅವನಲ್ಲಿಗೆ ಬಂದು ಅವನಿಂದ ದೀಕ್ಷೆಯನ್ನು ಕೊಂಡು ಅವನ ಸೇವೆಯಲ್ಲಿರಹತ್ತಿದನು.

ಈ ಕಾಲದಲ್ಲಿ ಪಂಡಿತಾರಾಧ್ಯನಲ್ಲಿ ೬೦ ಜನ ಶಿಷ್ಯರು ಅವನ ಸೇವೆಯನ್ನು ಮಾಡುತ್ತಾ ಇದ್ದರು. ಅವರು ಅವನಿಗೆ ಬೇಕಾಗುವ ಪೂಜೋಪಕರಣಗಳನ್ನು ಒದಗಿಸುತ್ತ ಅವನ ಬೋಧೆಯನ್ನು ಕೇಳುತ್ತ ಅವನಲ್ಲಿಯೇ ವಾಸ ಮಾಡುತ್ತಿದ್ದರು. ಈ ಶಿಷ್ಯರಲ್ಲಿ ವೆಲ್ಲಗೊಂಡದ ಮಹಾದೇವಯ್ಯನು ಬಹಳ ವಿದ್ವಾಂಸನೂ ಶಿವಾನುಭವಿಯೂ ಎಂದು ಹೆಸರಾಗಿದ್ದನು.

ಹೀಗಿರಲು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಸೇವೆಗಳು ವ್ಯವಸ್ಥಿತವಾಗಿ ನಡೆಯುದ್ದರಿಂದ ಪಂಡಿತಾರಾಧ್ಯನು ಒಬ್ಬೊಬ್ಬರು ಇಂಥ ಒಂದೊಂದು ಸೇವೆಯನ್ನು ಮಾಡಬೇಕೆಂದು ಎಲ್ಲರಿಗೂ ಒಪ್ಪಿಸಿಕೊಟ್ಟನು. ಅವರಲ್ಲಿ ವೆಲ್ಲಗೊಂಡದ ಮಹಾದೇವಯ್ಯನು ಸೂರ್ಯೋದಯಕ್ಕೆ ಮುನ್ನವೇ ಎದ್ದು ಪತ್ರಿಪುಷ್ಪಗಳನ್ನು ಎತ್ತಿಕೊಂಡು ಪಂಡಿತಾರಾಧ್ಯನಿಗೆ ಒಪ್ಪಿಸುವ ಕೆಲಸವು ಅವನಿಗೆ ಬಂದಿತು. ಆ ಪ್ರಕಾರ ಮಹಾದೇವಯ್ಯನು ದಿನಾಲು ಈ ಕಾರ್ಯಮಾಡುತ್ತ ಬಂದನು.

ಹೀಗಿರಲು ಒಂದುದಿನ ಅವನಿಗೆ ಏಳಲು ಸ್ವಲ್ಪ ತಡವಾಯಿತು. ಆಗ ಸೂರ್ಯನ ಮುಂಬೆಳಗು ಆಕಾಶದಲ್ಲಿ ಹೆಚ್ಚುತ್ತ ಇದ್ದಿತು. ಅದನ್ನು ಮಹಾದೇವಯ್ಯನು ನೋಡಿ ಅವಸರದಿಂದ ಪುಷ್ಪಗಳಿದ್ದಲ್ಲಿಗೆ

ಹೋಗಿ ಅವುಗಳನ್ನು ಎತ್ತಿ ಮರಳುವಾಗ ತಾನು ಆಯ್ದುಕೊಂಡ ಪುಷ್ಪಕ್ಕೆ ತನ್ನ ಪಾದವು ಅಕಸ್ಮಾತ್ತಾಗಿ ಸೋಂಕಿತು. ಅದು ಮಹಾದೇವಯ್ಯನಿಗೆ ತಿಳಿಯಲು ಆ ಪುಷ್ಪವು ಅವನಿಗೆ ಒಂದು ಉಗ್ರ ಚೇಳು ಹೊಡೆದಂತೆ ಆಯಿತು. ಕಾಲು ಕೆಂಡವನ್ನು ಮುಟ್ಟಿದಂತೆ ಆಗಿ ಅದು ಅವನಿಗೆ ತೀವ್ರ ವೇದನೆಯನ್ನುಂಟುಮಾಡಿತು. ಆಗ ಅವನು ಕಂದಿ ಕುಂದಿ ಮೂರ್ಛೆಹೋಗಿ ಕೆಲಹೊತ್ತಿನ ಮೇಲೆ ಮೂರ್ಛೆ ತಿಳಿದೆದ್ದು,—ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವೇನೆಂಬುದನ್ನು ವಿಚಾರ ಮಾಡಿಕೊಂಡು ಪುಷ್ಪಮುಟ್ಟಿದ ಪಾದವನ್ನು ಕಡಿದುಹಾಕುವದೇ ತನಗೆ ಯೋಗ್ಯ ಶಿಕ್ಷೆ ಎಂದು ತಿಳಿದು ಆ ಪಾದವನ್ನೇ ಅವನು ಕತ್ತರಿಸಿ ಹಾಕಿಬಿಟ್ಟನು!

ಮಹಾದೇವಯ್ಯನು ಹೀಗೆ ಮಾಡಿಕೊಂಡಿದ್ದು ಪಂಡಿತಾರಾಧ್ಯನಿಗೆ ತಿಳಿಯಿತು. ಅವನು ಗಾಬರಿಯಾಗಿ ಕೂಡಲೆ ಶಿಷ್ಯನಿದ್ದಲ್ಲಿಗೆ ಹೋಗಿ ನೋಡಲು ಅಲ್ಲಿ ರಕ್ತದ ಒಂದು ಹನಿಯಾದರೂ ಹೊರಗೆ ಬಿದ್ದಿದ್ದಿಲ್ಲ! ಅದನ್ನು ನೋಡಿ ಪಂಡಿತಾರಾಧ್ಯನು ಚೋದ್ಯಬಡುತ್ತ ಈ ಮಹಾದೇವಯ್ಯನು ನಿಜವಾದ ಶರಣನೆಂದು ತಿಳಿದು ಅಲ್ಲಿ ಕಡಿದುಬಿದ್ದ ಪಾದವನ್ನು ತಂದು ಕಡಿದ ಸ್ಥಳಕ್ಕೆ ಹತ್ತಿಸಿ ಮಜ್ಜನೋದಕವನ್ನು ತಳಿದು ಪಂಚಾಕ್ಷರೀ ಮಂತ್ರಸ್ಮರಣೆಯನ್ನು ಮಾಡಿದನು. ಆಗ ಆ ಪಾದವು ಸಂದಿಲ್ಲದಂತೆ ಕೂಡಲೆ ಸ್ಥಿರವಾಗಿ ಮೊದಲಿನ ಸ್ಥಳಕ್ಕೆ ಹತ್ತಿ ಬಿಟ್ಟಿತು. ಹೀಗಾದ ಕೂಡಲೆ ಮಹಾದೇವಯ್ಯನು ತನ್ನ ಗುರುವಿಗೆ ಎರಗಲು ಭಕ್ತರೆಲ್ಲರೂ ಅವನು ಮಹಾತ್ಮನೆಂದು ಅವನನ್ನು ಅತ್ಯಂತವಾಗಿ ಸ್ತುತಿಸುವವರಾದರು.

---

## ಗುರುಭಕ್ತ.

ಆಂಧ್ರದೇಶದಲ್ಲಿ ಅಮರಗುಂಡವೆಂಬ ಪ್ರಸಿದ್ಧ ಕ್ಷೇತ್ರವಿದೆ. ಅಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಕೆಲವು ಕಾಲ ವಾಸವಾಗಿದ್ದನು. ಅವನು ಇದ್ದಲ್ಲಿ ಯಾವಾಗಲೂ ಬಹುಜನರು ನೆರೆದು ಅವನಿಂದ ಧರ್ಮೋಪದೇಶವನ್ನು ಹೊಂದಿ ಹೋಗುತ್ತಿದ್ದರು. ಹೀಗೆ ಅಮರಗುಂಡದಲ್ಲಿ ಅವನು ಇರುವಾಗ್ಗೆ ಗುರುಭಕ್ತನೆಂಬವನು ಅಲ್ಲಿಗೆ ಬಂದು ದೀಕ್ಷೆಯನ್ನು ಹೊಂದಿ ಅವನ ಸೇವೆಯನ್ನು ಮಾಡುತ್ತಾ ಇದ್ದನು. ಅವನು

ತನ್ನ ಸೇವೆಯಲ್ಲಿ ಗುರುವಿಗೋಸ್ಕರ ಅತ್ಯಂತ ಭಕ್ತಿಯನ್ನು ತಾಳಿದವನಾಗಿ ಅವನ ಆಜ್ಞೆಯನ್ನು ಎಷ್ಟು ಮಾತ್ರವೂ ಮೀರುತ್ತಿರಲಿಲ್ಲ. ಗುರುವಿಲ್ಲದೆ ಮುಕ್ತಿ ಎಂಬುದಿಲ್ಲ, ಗುರುವೇ ಚತುರ್ವಿಧಫಲದ ಭೋಗವನ್ನು ಕೊಡುವಂಥವನು, ಎಂಬ ಆಗಮವಾಕ್ಯವಿದ್ದು ಅವನು ಅದನ್ನು ಮೀರದೆ ಪಾಲಿಸುವವನಾಗಿದ್ದನು. ಅದನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನು ಅರಿತು ಅವನಿಗೆ ಮಿಗಿಲಾದ ಮನ್ನಣೆಯನ್ನು ಕೊಡುತ್ತ ಬಂದನು.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಎಲ್ಲರಿಗಿಂತಲೂ ಹೆಚ್ಚು ಈ ಗುರುಭಕ್ತನನ್ನು ಪ್ರೀತಿಸುತ್ತಾನೆಂದು ಅವನ ಶಿಷ್ಯರಿಗೆ ತಿಳಿಯಿತು. ಆದಕ್ಕೆ ಅವರು ಅವನಿಗೋಸ್ಕರ ಅತ್ಯಂತ ಮಾತ್ಸರ್ಯಬುದ್ಧಿಯನ್ನು ತಾಳಿದವರಾದರು. ಈ ಗುರುಭಕ್ತನು ಎಲ್ಲಿಯೋ ಒಬ್ಬ ಅಧಮನು, ಅವನ ಜಾತಿ ಗೋತ್ರ ಸೂತ್ರಗಳಾವವೂ ತಿಳಿದಿಲ್ಲ, ಇಂಥವನು ಪಂಡಿತಾರಾಧ್ಯನು ಆದರಿಸುತ್ತಾನಲ್ಲಾ, ಎಂದು ಅವನಿಗೋಸ್ಕರ ಅಸಹ್ಯಪಡಹತ್ತಿದರು.

ಇದನ್ನು ಪಂಡಿತಾರಾಧ್ಯನು ತಿಳಿದು, ಗುರುಭಕ್ತನ ಮಹಿಮೆ ಎಷ್ಟಿದೆಂಬುದು ಇವರಿಗೆ ಗೊತ್ತಿಲ್ಲ, ಇದನ್ನು ಇವರಿಗೆ ತೋರಿಸಬೇಕೆಂದು ಇಚ್ಛಿಸಿ ಎಲ್ಲರೂ ಸಮೀಪದಲ್ಲಿ ಕುಳಿತಿರುವಾಗ ಗುರುಭಕ್ತನನ್ನು ಮುಂದೆ ಕರೆದು—ಎಲೋ, ನೀನು ನನ್ನ ಈ ಪಟ್ಟೆಮಂಚವನ್ನೇರಿ ಕುಳಿತುಕೋ ಎಂದು ಹೇಳಿದನು. ಆಗ ಗುರುಭಕ್ತನು ಗುರುವಿಗೆರಗಿ ಪಟ್ಟೆಮಂಚವನ್ನೇರಿ ಕುಳಿತುಕೊಂಡನು. ಆಮೇಲೆ ಸ್ವಲ್ಪ ಹೊತ್ತಿನ ಮೇಲೆ ಪಂಡಿತಾರಾಧ್ಯನು— ಕೆಳಗಿಳಿದು ಬಾ ಎಂದು ಅನ್ನಲು ಅವನು ಹಾಗೆಯೇ ಕೆಳಗಿಳಿದು ಬಂದನು.

ಅವನು ಹೀಗೆ ಮಾಡಿದ್ದನ್ನು ಅಲ್ಲಿದ್ದ ಶಿಷ್ಯರು ನೋಡಿ ಅವರು — ಗುರುವಿನಿದಿರಿನಲ್ಲಿ ಶಿಷ್ಯನು ಎಂದೂ ಮಂಚವನೇರಬಾರದು, ಏರಿ ಕುಳಿತಲ್ಲಿ ಅವನಿಗೆ ನರಕಪ್ರಾಪ್ತಿ ಇದೆ, ಎಂಬ ಆಗಮವಾಕ್ಯವಿದೆ. ಆದರೆ ಇವನು ಮಂಚವನ್ನೇರಿದನು, ಇವನು ಮಹಾ ನೀಚನು. ಇವನಲ್ಲಿ ಗುರುಭಕ್ತಿ ಎಂಬುದು ಎಳ್ಳಷ್ಟೂ ಇಲ್ಲ. ಈತನು ಗುರುದ್ರೋಹಿಯು, ಎಂದು ಆರ್ಭಟಿಸುತ್ತ ಅವನ ಮೇಲೇರಿ ಬರಹತ್ತಿದರು.

ಇದನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯನು ನೋಡಿ ಅವರಿಗೆ—
ಈತನು ಗುರುಭಕ್ತಿ ಹೀನನೆಂದೆನ್ನುತ್ತೀರಿ. ನೀವು ಗುರುಭಕ್ತಿಯುಳ್ಳವರು.
ಆದರೆ ನಾನು ಇನ್ನೊಮ್ಮೆ ಪರೀಕ್ಷೆಮಾಡುವೆನು ಎಂದು ನುಡಿದು ಅಲ್ಲಿ
ಒಂದು ಶೂಲವನ್ನು ತರಿಸಿ ಅಲ್ಲಿ ನಡಿಸಿ ಶಿಷ್ಯರಿಗೆ ಗುರುವನೆದುರು
ಉನ್ನತಾಸನ ಗದುಗೆಯೊಲ್ಲೆವೆಂದೆನ್ನುವಿರಲ್ಲಾ; ಇದರೆ ಈಗ ನಿಮ್ಮಲ್ಲಿ
ಯಾರು ಈ ಶೂಲದ ಮೇಲೇರುವಿರಿ, ಎಂದು ಕೇಳಲು ಅವರು ಗಾಬರಿ
ಯಾಗಿ ಒಬ್ಬೊಬ್ಬರ ಮುಖವನ್ನು ನೋಡುತ್ತ—ನಾನು ಒಲ್ಲೆ, ನೀನು
ಒಲ್ಲೆ ಎಂದು ನುಡಿಯುಹತ್ತಿದರು. ಆಗ ಅವರು—ಮುನ್ನ ಗುರುಗ
ದ್ದುಗೆಯನ್ನೇರಿದವನೇ ಏರಲಿ, ಎಂದು ಅಂದರು. ಅವರು ಹೀಗಂದುದಕ್ಕೆ
ಮಲ್ಲಿಕಾರ್ಜುನ ಪಂಡಿತಾರಾಧ್ಯನು ಗುರುಭಕ್ತನನ್ನು ಮುಂದೆ ಕರೆದು—
ಇದರ ಮೇಲೇರು ಎಂದು ಹೇಳಲು ಅವನು ತತ್‌ಕ್ಷಣವೇ ಹಾಗೆಯೇ
ಏರಲಾಗಿ ಶೂಲದ ಮೊನೆಯು ಅವನ ತಲೆಯಲ್ಲಿ ಮೂಡಿ ಹೊರಬಿ
ದ್ದಿತು. ಅದನ್ನು ಎಲ್ಲ ಶಿಷ್ಯರೂ ನೋಡಿ ಚಕಿತರಾಗಿ ಅವನನ್ನು ಕೀರ್ತಿ
ಸಹತ್ತಿದರು. ಆ ಮೇಲೆ ಪಂಡಿತಾರಾಧ್ಯನು ಗುರುಭಕ್ತನಿಗೆ— ಇನ್ನು
ಮೇಲೆ ಕೆಳಗಿಳಿದು ಬಾ, ಎಂದು ಅನ್ನಲು, ಅವನು ಹಾಗೆಯೇ ಕೆಳ
ಗಿಳಿದು ಗುರುವಿಗೆ ವಂದಿಸಿ ನಿಲ್ಲಲು ಅವನ ಶರೀರದಲ್ಲಿ ರಕ್ತವು ಅಣು
ಮಾತ್ರವೂ ಹೊರಬಿದ್ದಿದ್ದಿಲ್ಲ. ಅಲ್ಲಿ ನೆರೆದಿದ್ದ ಶರಣರು ಇದನ್ನು ನೋಡಿ-
ಭಾಪು, ಭಾಪು, ಎಂದು ಅವನನ್ನು ಸ್ತುತಿಸುವವರಾದರು. ಶಿವನು
ಆಗ ಮೆಚ್ಚಿ ಪ್ರತ್ಯಕ್ಷನಾಗಿ ಗುರುಭಕ್ತನಿಗೆ— ನೀನು ಕೈಲಾಸಕ್ಕೆ ಬಾ
ಎಂದೆನ್ನಲು ಅವನು— ನಾನು ನನ್ನ ಗುರುಸ್ವಾಮಿಯನ್ನು ಬಿಟ್ಟು
ಬರಲಾರೆನು. ಗುರುವಿದ್ದುದೇ ಕೈಲಾಸವೆಂದು ಉತ್ತರ ಕೊಟ್ಟನು.

ಈ ಪ್ರಕಾರ ಗುರುಭಕ್ತನು ತನ್ನ ಗುರುವಿನ ಶುಶ್ರೂಷೆಯನ್ನು ಏಕ
ನಿಷ್ಠೆಯಿಂದ ಮಾಡುತ್ತ ಬರಲು, ಮತ್ತೊಂದು ದಿನ ಬೇರೊಂದು ಘಟನೆ
ಯುಂಟಾಯಿತು. ಗುರುವಿನ ಶರೀರಮಾತ್ರವಲ್ಲದೆ ಗುರುವಿಗೆ ಸಂಬಂ
ಧಿಸಿದ ಜೀನಸುಗಳು, ಅಂದರೆ ಆತನ ಹೊದಿಕೆಗಳು, ವಸ್ತ್ರ, ಅರಿವೆ
ಮೊದಲಾದವುಗಳು ಸಹ ಪವಿತ್ರವಾದವುಗಳೆಂಬ ಭಾವನೆಯು ಅವ
ನಲ್ಲಿ ದಿನೇ ದಿನೇ ಬಲಿಯುಹತ್ತಿತು. ಅವುಗಳನ್ನು ಸಹ ಅವನು ಆದ
ರಿಸಿ ಅವುಗಳಿಗೆ ಮನ್ನಣೆ ಕೊಡುವವನಾದನು. ಹಿಂದೂ ಸಂಸ್ಕೃತಿಗೆ

ಇದು ಹೊರತಾದುದಲ್ಲ. ಇದಕ್ಕೋಸ್ಕರವೇ ಅವರು ತಮ್ಮ ಸ್ವಾಮಿಗಳ ಪಾದುಕೆಗಳನ್ನೂ ಹಿಡಿಯುವ ಚಿತ್ರ ಮೊದಲಾದವುಗಳನ್ನೂ ಬೇರೆ ತೆಗೆದಿಟ್ಟು ಅವುಗಳನ್ನು ಪೂಜಿಸುವದು ಕಂಡುಬರುತ್ತದೆ.

ಹೀಗಿರಲು ಒಂದು ದಿವಸ ಗುರುಭಕ್ತನು ಗುರುವಿನ ಗೃಹದಿಂದ ಹೊರಗೆ ಹೋಗುತ್ತಿರುವಾಗ ಗುರುವಿನ ಪಾದರಕ್ಷೆಗಳ ಮೇಲೆ ಅವನ ಪಾದವು ಅಕಸ್ಮಾತ್ತಾಗಿ ಬಿದ್ದಿತು. ಇದು ಅವನಿಗೆ ತಿಳಿದಕೂಡಲೆ ತಾನು ಬಹು ದೊಡ್ಡ ಪಾಪವನ್ನು ಮಾಡಿದೆನೆಂದು ಅವನಿಗೆ ಎನಿಸಿತು. ಈ ಪ್ರಮಾದವು ತನ್ನ ಕಾಲಿನ ಮೂಲಕ ಆದುದೆಂದು ಅವನಿಗೆ ತಿಳಿದು ಇಂಥ ಕಾಲು ಇರಬಾರದೆಂದು ಅವನು ಅದನ್ನು ಖಂಡಿಸಿ ದೂರ ಬಿಸಾಟಿಬಿಟ್ಟನು. ಆದರೆ ಆ ಪಾದದಿಂದ ಒಂದು ಹನಿ ರಕ್ತವಾದರೂ ಹೊರಬೀಳಲಿಲ್ಲ. ಈ ಸಂಗತಿಯು ಪಂಡಿತಾರಾಧ್ಯನಿಗೆ ತಿಳಿಯಿತು. ಅವನು ಕೂಡಲೆ ತನ್ನ ಶಿಷ್ಯನಿದ್ದಲ್ಲಿಗೆ ಬಂದು ಬಿಸಾಟಿ ಬಿದ್ದ ಪಾದವನ್ನು ತಂದು ಅದನ್ನು ಅವನ ಕಾಲಿಗೆ ಹಚ್ಚಲಾಗಿ ಅದು ಅದರೊಡನೆ ಏಕರೂಪವಾಯಿತು. ಇದನ್ನು ಇತರ ಭಕ್ತರು ನೋಡಿ ಈ ಗುರುಭಕ್ತನು ಮಹಾಮಹಿಮನು ಎಂದು ಅವನಿಗೋಸ್ಕರ ಅತ್ಯಂತ ಆದರಭಾವವನ್ನು ತಾಳುವವರಾದರು.

ಈಪ್ರಕಾರ ಗುರುಭಕ್ತನು ತನ್ನ ಗುರುವಿನ ಶುಶ್ರೂಷೆಯನ್ನು ಮಾಡುತ್ತ ಗುರುಭಕ್ತಿಭಾವನೆಯಿಂದ ಕೂಡಿಕೊಂಡವನಾಗಿ ಕಡೆಗೆ ತನ್ನ ಇಷ್ಟಲಿಂಗವಾದ ಗೌರೀಶ್ವರನನ್ನು ಅರ್ಚಿಸುತ್ತ ತನ್ನ ಗುರುವಿನಲ್ಲಿಯೇ ಲಯವಾದನು.

# ಮಲ್ಲಿಕಾರ್ಜುನ ಪಂಡಿತಾರಾಧ್ಯ.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಪಂಚಪೀಠಾಧಿಪತಿಯೂ ಶ್ರೀಶೈಲಸಿಂಹಾಸನ ಸ್ಥಾಪಕನೂ ಆಗಿರುವನೆಂದು ಬಹುಜನರ ತಿಳವಳಿಕೆ ಇದೆ. ವೀರಶೈವ ಗ್ರಂಥಗಳಲ್ಲಿ ದೊರೆಯುವ ಅವನ ಚರಿತ್ರೆಯು ಕೆಳಗಿನಂತೆ ಇದೆ.

ಈಗ ಮದ್ರಾಸ ಇಲಾಖೆಯಲ್ಲಿರುವ ಕಾಕಿನಾಡ ಜಿಲ್ಲೆಯಲ್ಲಿ ದ್ರಾಕ್ಷಾರಾಮವೆಂಬ ಪ್ರಸಿದ್ಧ ಕ್ಷೇತ್ರವಿರುತ್ತದೆ. ಅದು ಗೋದಾವರೀ ನದೀ ಮುಖದ್ವಾರ ಪ್ರದೇಶದಲ್ಲಿರುತ್ತದೆ. ಅದು ಬಹು ರಮಣೀಯ ಪ್ರದೇಶವು. ಇಲ್ಲಿ ಗೋದಾವರೀ ನದಿಯು ಏಳು ಶಾಖೆಗಳಾಗಿ ಹರಿಯುತ್ತ ಸಮುದ್ರದಲ್ಲಿ ಕೂಡಿರುವದರಿಂದ ಅದಕ್ಕೆ ಇಲ್ಲಿ 'ಸಪ್ತಗೋದಾವರೀ' ಎಂಬ ಹೆಸರಿದೆ. ಈ ಪ್ರದೇಶವೆಲ್ಲ ವೃಕ್ಷಗಳಿಂದಾಚ್ಛಾದಿತವಾಗಿ ಬಹು ಸುಂದರವಾಗಿ ಕಂಗೊಳಿಸುತ್ತದೆ. ದ್ರಾಕ್ಷಾರಾಮ ದೇವಸ್ಥಾನವು ಬಹು ಪುರಾತನ ಕಾಲದ್ದಿದೆ. ಇಲ್ಲಿ ಭೀಮೇಶ್ವರಲಿಂಗವು ನೆಲಸಿದೆ. ಇದು ಹಿಂದುಸ್ಥಾನದ ಎಲ್ಲ ಲಿಂಗಗಳಲ್ಲಿ ಅತ್ಯಂತ ಅದ್ಭುತವಾದದ್ದು. ಅದು ೬೦ ಅಡಿ ಎತ್ತರವಾಗಿದ್ದು ಅದನ್ನು ಪ್ರೇಕ್ಷಕರು ನೋಡಿದ ಕೂಡಲೆ ಅವರನ್ನು ಬೆರಗುಗೊಳಿಸುವಂತಹದಿರುತ್ತದೆ.

ಅದು ಬಸವೇಶ್ವರನ ಕಾಲ, ಅಂದರೆ ೧೨ ನೇ ಶತಮಾನವು. ಆಗ ಈ ದೇವಾಲಯದ ಪೌರೋಹಿತ್ಯವನ್ನು ಭೀಮನ ಪಂಡಿತನೆಂಬುವನು ಮಾಡುತ್ತಿದ್ದನು.[೧] ಅವನ ಹೆಂಡತಿಯ ಹೆಸರು ಗೌರಾಂಬಿಕೆ. ಇವರಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವರು ಪುತ್ರಾಪೇಕ್ಷಿಗಳಾಗಿ ಶ್ರೀಶೈಲ ಮಲ್ಲಿಕಾರ್ಜುನನ ಸೇವೆಯಲ್ಲಿರುತ್ತಿದ್ದರು. ಈ ಮಲ್ಲಿಕಾರ್ಜುನನೇ ಭೀಮನ ಪಂಡಿತನಿಗೆ ಕುಲದೈವತವಾಗಿತ್ತು. ಹೀಗಿರಲು ಕೆಲವು ದಿವಸಗಳಾದಮೇಲೆ ಈಶ ಸಂಕಲ್ಪದ ಮೇರೆಗೆ ಅವರಿಗೆ ಒಬ್ಬ ಮಗನು ಜನಿಸಿದನು. ಅವನು ಶ್ರೀ ಶೈಲ ಮಲ್ಲಿಕಾರ್ಜುನನನ್ನು ಸೇವಿಸಿದ್ದರ ಫಲವಾಗಿ ಜನಿಸಿದವನೆಂದು ತಿಳಿದು, ತಾಯಿ ತಂದೆಗಳು ಅವನಿಗೆ ಮಲ್ಲಿಕಾರ್ಜುನನೆಂಬ ಹೆಸರಿಟ್ಟರು.

---

(೧) ಕೆಲವು ಗ್ರಂಥಗಳಲ್ಲಿ ದ್ರಾಕ್ಷಾರಾಮದ ಬದಲು ವರಾಳಪುರ ಅಥವಾ ಮರಲಾಪುರ ಎಂಬ ಹೆಸರಿದೆ.

ಭೀಮನ ಪಂಡಿತನು ತನ್ನ ಹೆಸರಿಗೆ ಅನ್ವರ್ಥಕವಾಗಿ ವೇದಶಾಸ್ತ್ರ ಪುರಾಣಗಳನ್ನು ಬಲ್ಲವನಾಗಿ ಅತ್ಯಂತ ಪಾಂಡಿತ್ಯವನ್ನು ಹೊಂದಿದ್ದನು. ಅವನ ಮಗನಾದ ಮಲ್ಲಿಕಾರ್ಜುನನಾದರೂ ಕುಶಲಮತಿಯಾಗಿದ್ದರಿಂದ ಅವನಿಗೆ ಬ್ರಾಹ್ಮಣರಿಗೆ ಉಚಿತವಾದ ವೇದಾಧ್ಯಯನ ಮೊದಲಾದವುಗಳನ್ನು ತಂದೆಯು ಚನ್ನಾಗಿ ಮಾಡಿಸಿದನು. ಮಲ್ಲಿಕಾರ್ಜುನನು ಸ್ವಲ್ಪ ದಿವಸಗಳಲ್ಲಿಯೇ ಅವುಗಳಲ್ಲಿ ಪಾರಂಗತನಾದನು.

ಆದರೆ ಈ ಕಾಲದಲ್ಲಿ ಹೊಸ ಧಾರ್ಮಿಕ ವಾತಾವರಣವು ಈ ನಾಡಿನಲ್ಲಿ ಉಂಟಾಗಿತ್ತು. ಕೃಷ್ಣೆಯ ದಂಡೆಯ ಮೇಲೆ ಇರುವ ವಿಜಯವಾಟಿಕಾ ಎಂದರೆ ಈಗಿನ ಬೆಜವಾಡದಲ್ಲಿ ಶ್ರೀಪತಿ ಪಂಡಿತಾರಾಧ್ಯನು ಈ ಮೊದಲು ಜನಿಸಿ ಈ ನಾಡಿನಲ್ಲೆಲ್ಲ ವೀರಶೈವ ತತ್ವ ಪ್ರಸಾರಕಾರ್ಯಗಳನ್ನು ನಡೆಸಿದ್ದನು. ಇದರಿಂದ ಇಲ್ಲಿ ವಿದ್ವಾಂಸರಾದ ಬಹು ಜನರು ಉಂಟಾಗಿದ್ದರು. ದ್ರಾಕ್ಷಾರಾಮ ಕ್ಷೇತ್ರದ ಸಮೀಪದಲ್ಲಿ ಕೋಟಿಪಲ್ಲಿ ಎಂಬ ಪುಣ್ಯಸ್ಥಳವು ಇದ್ದು ಅಲ್ಲಿಯ ಮಠಾಧಿಕಾರಿಯು ಕೋಟಿಪಲ್ಯಾರಾಧ್ಯ ಎಂಬವನಾಗಿದ್ದನು. ಆತನ ಗುರುವು ಅಮಾಂತರಾರ್ಯನು. ಈ ಗ್ರಾಮವು ಗೌತಮ ಗೋದಾವರಿ ಎಂಬ ಹೆಸರುಳ್ಳ ಗೋದಾವರೀ ಶಾಖೆಯ ಮೇಲಿದ್ದು ಅದು ರಾಜಮಹೇಂದ್ರಿ ಮತ್ತು ಸಮೀಪದ ಬಂದರ ಸ್ಥಾನವಾದ ಕೊರಿಂಗಾ ಈ ಎರಡು ಪಟ್ಟಣಗಳ ಮಧ್ಯದಲ್ಲಿದೆ ಆಂಧ್ರವೀರಶೈವರ ಪ್ರಕಾರ ವೀರಶೈವರಲ್ಲಿ ಆರಾಧ್ಯತ್ರಯರೆಂಬವರಿದ್ದಾರೆ. ಅವರು ಉದ್ಭಟ, ಪೇಮನಾರಾಧ್ಯ ಮತ್ತು ಕೋಟಿಪಲ್ಯಾರಾಧ್ಯ × ಎಂಬವರು. ಇದರಿಂದ ಕೋಟಿಪಲ್ಯಾರಾಧ್ಯನ ಮಹತ್ವವೆಷ್ಟಿದ್ದೆಂಬುದು ತಿಳಿದು ಬರುತ್ತದೆ. ಈತನೇ ಮಲ್ಲಿಕಾರ್ಜುನನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟನು.

ಮಲ್ಲಿಕಾರ್ಜುನನು ವೀರಶೈವ ದೀಕ್ಷೆಯನ್ನು ಹೊಂದಿದ ಬಳಿಕ ಅವನು ಅದರ ನಿಜಾಂಶವನ್ನು ತಿಳಿದುಕೊಂಡವನಾಗಿ ಅದರಂತೆ ಆಚರಿಸುತ್ತ ನಾಡಿನಲ್ಲಿ ಅತ್ಯಂತ ಖ್ಯಾತಿಯನ್ನು ಪಡೆದನು. ಅವನು ಎಲ್ಲ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದರಿಂದ ಅವನನ್ನು ಮಲ್ಲಿಕಾ

---

× ಒಮ್ಮೊಮ್ಮೆ ವಿಶ್ವಾರಾಧ್ಯ ಎಂತಲೂ ಉಂಟು.

ರ್ಜುನ ಪಂಡಿತಾರಾಧ್ಯನೆಂದು ಜನರು ಕರೆಯುತ್ತಿದ್ದರು. ಪಂಡಿತಾರಾಧ್ಯನೆಂಬ ಸಂಕ್ಷಿಪ್ತ ಹೆಸರಿನಿಂದಲೂ ಸಹ ಅವನನ್ನು ಕರೆಯುವದುಂಟು.

ಪಂಡಿತಾರಾಧ್ಯನು ವೀರಶೈವ ದೀಕ್ಷೆಯನ್ನು ಹೊಂದಿದ ಬಳಿಕ ಅವನು ಗೃಹಸ್ಥಾಶ್ರಮವನ್ನು ಹೊಂದಿ ಶರ್ಯಾತಿರಾಯನ ಮಗಳನ್ನು ಮದುವೆಯಾದನು.

ದ್ರಾಕ್ಷಾರಾಮ ಕ್ಷೇತ್ರವು ಅತ್ಯಂತ ಮಹತ್ವದ ಕ್ಷೇತ್ರವಾದುದರಿಂದ ಬಹುಜನ ಪಂಡಿತರು ಅಲ್ಲಿ ನೆರೆಯುತ್ತಾ ಇದ್ದರು. ಅವರು ಮಲ್ಲಿಕಾರ್ಜುನ ಪಂಡಿತಾರಾಧ್ಯನಿಂದ ವೀರಶೈವ ಮತತತ್ವಗಳನ್ನು ತಿಳಿದುಕೊಳ್ಳುವವರಾದರು. ಅವರಲ್ಲಿ ಅನೇಕರು ಅವನ ಶಿಷ್ಯತ್ವವನ್ನು ವಹಿಸಿ, ಅವನಲ್ಲಿ ಇರಲಿಕ್ಕೆ ಪ್ರಾರಂಭಿಸಿದರು. ಅವರು ಪಂಡಿತಾರಾಧ್ಯನಿಗೆ ಸಹಾಯಕರಾಗಿ ಜನರಲ್ಲಿ ಮತತತ್ವಬೋಧೆ ಮಾಡುವವರಾದರು. ಅವರಲ್ಲಿ ದೇವಯ್ಯ, ರೇವಯ್ಯ, ಧವಳೇಶ ಮಲ್ಲಯ್ಯ, ರೇಚಯ್ಯ, ವೆಲ್ಲಗೊಂಡ ಮಹಾದೇವಯ್ಯ, ರೇಮಯ್ಯ, ದೊನಮಯ್ಯ, ಗುರುಭಕ್ತ, ಇವರು ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿವರು.

ಇದೇ ಕಾಲದಲ್ಲಿ ಕರ್ನಾಟಕದಲ್ಲಿ ಬಸವೇಶ್ವರ ಮೊದಲಾದ ಶಿವಶರಣರು ಉದ್ಭವಿಸಿ ಇಲ್ಲಿ ಒಂದು ಮಹತ್ತರ ಕ್ರಾಂತಿಯನ್ನು ಮಾಡುವದರಲ್ಲಿ ತೊಡಗಿದವರಾಗಿದ್ದರು. ಅವರು ಕಲ್ಯಾಣಪಟ್ಟಣದಲ್ಲಿ ಸೇರಿ ಶಿವಾನುಭವ ಮಂಟಪದ ಮೂಲಕ ಎಲ್ಲ ಕಡೆಗಿದ್ದ ಶಿವಶರಣರನ್ನು ಆಕರ್ಷಿಸಿ ಹೇಗೆ ಕರ್ನಾಟಕದಲ್ಲಿ ಕಾರ್ಯ ಮಾಡಿದರೋ, ಹಾಗೆಯೇ ಕರ್ನಾಟಕದ ಪೂರ್ವ ಭಾಗದಲ್ಲಿದ್ದ ಆಂಧ್ರದೇಶದಲ್ಲಿ ಪಂಡಿತಾರಾಧ್ಯನು ಉತ್ಪನ್ನನಾಗಿ ಈ ಪ್ರಾಂತದಲ್ಲಿ ಒಂದು ಮಹತ್ವದ ಧಾರ್ಮಿಕ ಆಂದೋಲನವನ್ನು ಪ್ರಾರಂಭಿಸಿದನು. ಆಗ ಬಹು ಜನ ವಿದ್ವಾಂಸರು ಅವನಲ್ಲಿಗೆ ಬಂದು ಅವನಿಂದ ಪ್ರೇರಿತರಾಗಿ ನಾಡಿನಲ್ಲಿ ಸಂಚರಿಸುತ್ತ ವೀರಶೈವ ಧರ್ಮದ ಪ್ರಕಾಶವನ್ನು ಬೀರುವವರಾದರು. ಇವರ ಧಾರ್ಮಿಕ ಚಳವಳಿಯ ಕೇಂದ್ರವು ಮುಖ್ಯವಾಗಿ ದ್ರಾಕ್ಷಾರಾಮ ಕ್ಷೇತ್ರವಾಗಿತ್ತು. ಇಲ್ಲವೆ ಇದೇ ಸಪ್ತ ಗೋದಾವರೀ ಪ್ರದೇಶದಲ್ಲಿರುವ ಅನುರಗುಂಡ ಎಂಬ

ಸ್ಥಾನವಾದರೂ ಅವರಿಗೆ ಕೇಂದ್ರ ಸ್ಥಳವಾಗಿತ್ತು. ಮಲ್ಲಿಕಾರ್ಜುನ ಪಂಡಿತಾರಾಧ್ಯನು ಈ ಎರಡೂ ಗ್ರಾಮಗಳಲ್ಲಿ ವಾಸಮಾಡಿಕೊಂಡಿದ್ದನೆಂಬುದು ಅವನ ಚರಿತ್ರೆಯಿಂದ ತಿಳಿದುಬರುತ್ತದೆ.

ಪಂಡಿತಾರಾಧ್ಯನು ತನ್ನ ಧಾರ್ಮಿಕ ಚಳವಳಿಯ ಆರಂಭಕಾಲದಲ್ಲಿಯೇ ಕಲ್ಯಾಣದಲ್ಲಿ ಶಿವಶರಣರು ನಡಿಸಿದ ಧಾರ್ಮಿಕ ಪ್ರಯತ್ನಗಳನ್ನು ತಿಳಿದುಕೊಂಡಿದ್ದನೆಂದು ತೋರುತ್ತದೆ. ಹಿಂದಿನ ಕಾಲದಲ್ಲಿ ಅನೇಕ ಕಾರಣಗಳ ಮೂಲಕ ಆಂಧ್ರ ಮತ್ತು ಕರ್ನಾಟಕಗಳಲ್ಲಿ ಪರಸ್ಪರ ನಿಕಟ ಸಂಬಂಧವಿದ್ದುದರಿಂದ ಒಂದು ಪ್ರಾಂತದ ಆಂದೋಲನಗಳು ಮತ್ತೊಂದು ಪ್ರಾಂತದವರಿಗೆ ಕೂಡಲೆ ತಿಳಿದುಬರುತ್ತಿದ್ದವು. ಆದ್ದರಿಂದ ಬಸವೇಶ್ವರನ ಪ್ರಯತ್ನಗಳು ಪಂಡಿತಾರಾಧ್ಯನಿಗೆ ಮತ್ತು ಪಂಡಿತಾರಾಧ್ಯನ ಪ್ರಯತ್ನಗಳು ಬಸವೇಶ್ವರನಿಗೆ ಅವಗತವಾಗುತ್ತಿದ್ದವೆಂದು ತೋರುತ್ತದೆ. ಒಂದು ದಿವಸ ಪಂಡಿತಾರಾಧ್ಯನು ಬಸವೇಶ್ವರನ ವಚನಗಳನ್ನು ತಾನಿದ್ದ ಕ್ಷೇತ್ರದಲ್ಲಿ ಕೆಲವರು ಪಠಿಸುತ್ತಿದ್ದುದನ್ನು ತಿಳಿದು ಅವುಗಳನ್ನು ತಾನೂ ಪರಿಶೀಲಿಸುವವನಾದನು. ಇದರಿಂದ ಅವನಿಗೆ ಕನ್ನಡದ ಜ್ಞಾನವಾಗಿರಬೇಕು. ಇದರಿಂದ ಬಸವೇಶ್ವರನ ವಿಷಯವಾಗಿ ಅವನಲ್ಲಿ ಭಕ್ತಿಯು ಬೆಳೆಯಲು ಶಿವಾಧಿಕ್ಯವೆಂಬ ಕಾವ್ಯವನ್ನು ಬರೆದು ಅದನ್ನು ಬಸವೇಶ್ವರನ ಕಡೆಗೆ ಕಳಿಸಿದನು. ಬಸವೇಶ್ವರನು ಅದನ್ನು ನೋಡಿ ಪ್ರೀತನಾಗಿ ಪಂಡಿತಾರಾಧ್ಯನ ಸ್ತೋತ್ರ ಪದಗಳನ್ನು ಕನ್ನಡದಲ್ಲಿ ರಚಿಸಿ ಒಂದು ವಿಭೂತಿಯ ಪೆಟ್ಟಿಗೆಯಲ್ಲಿ ಇಟ್ಟು ಭಸ್ಮವನ್ನು ಅದರಲ್ಲಿ ತುಂಬಿ ತಿರುಗಿ ಕಳುಹಿಸಲು ಪಂಡಿತಾರಾಧ್ಯನು ಅವುಗಳನ್ನು ಪಠನ ಮಾಡಿದ ಕೂಡಲೆ ಅವನಿಗೆ ಕನ್ನಡ ಭಾಷೆಯು ಸರಸಾಗಿ ತಾನಾಗಿಯೇ ಬರಹತ್ತಿತು. ಆ ಮೇಲೆ ಅವನು ತಾನೂ ಬಸವ ಸ್ತೋತ್ರವೆಂದು ಕನ್ನಡದಲ್ಲಿ ಪದ್ಯಗಳನ್ನು ರಚಿಸಿ ಬಸವೇಶ್ವರನಿಗೆ ಕಳಿಸಿದನು.

ಈ ಐತಿಹ್ಯದಿಂದ ಸಮಕಾಲೀನರಾದ ಬಸವೇಶ್ವರ ಮತ್ತು ಪಂಡಿತಾರಾಧ್ಯ ಇವರಲ್ಲಿ ಪ್ರತ್ಯಕ್ಷ ಸಂಬಂಧವಿರದಿದ್ದರೂ ಪರೋಕ್ಷವಾದರೂ ಪರಸ್ಪರರನ್ನು ಅವರು ತಿಳಿದುಕೊಂಡು ತಮ್ಮ ತಮ್ಮ ಪ್ರದೇಶಗಳಲ್ಲಿ ಧಾರ್ಮಿಕ ಚಳವಳಿಯನ್ನು ನಡಿಸುತ್ತಿದ್ದರೆಂದು ಅನುಮಾನಮಾಡಲು ಯಾವ ಪ್ರತ್ಯವಾಯವಿಲ್ಲ.

ಪಂಡಿತಾರಾಧ್ಯನು ಪಂಡಿತನಾಗಿದ್ದು ಕೆಲವು ಗ್ರಂಥಗಳನ್ನು ಬರೆ ದಿದ್ದು ಅವನ ಚರಿತ್ರೆಯಿಂದ ತಿಳಿದುಬರುತ್ತದೆ. ಅವನು ಸಂಸ್ಕೃತ, ತೆಲಗು, ಕನ್ನಡ, ಬಲ್ಲವನಾಗಿದ್ದು ಈ ಮೂರೂ ಭಾಷೆಗಳಲ್ಲಿ ಗ್ರಂಥ ಗಳನ್ನು ರಚಿಸಿದ್ದಾನೆ. ಅವನು ತೆಲುಗಿನಲ್ಲಿ ಶಿವಸ್ತೋತ್ರವನ್ನೂ ಕನ್ನಡ ದಲ್ಲಿ ಶಿವಾಧಿಕ್ಯವನ್ನೂ ಕನ್ನಡ ಮತ್ತು ಸಂಸ್ಕೃತಗಳಲ್ಲಿ ಬಸವಸ್ತೋತ್ರ ವನ್ನೂ ಬರೆದಿರುವದಲ್ಲದೆ ಭೀಮೇಶ್ವರ ಗದ್ಯ ಮತ್ತು ಶಿವತತ್ವಸಾರ ಎಂಬ ಉದ್ಗ್ರಂಥಗಳನ್ನು ಬರೆದಿದ್ದಾನೆ. ಅವನು ಇನ್ನೂ ಅನೇಕ ಗ್ರಂಥಗಳನ್ನು ಬರೆದಿರಬಹುದು. ಆದರೆ ಅವಾವೆಂಬುದು ನಮಗೆ ತಿಳಿ ದುಬಂದಿಲ್ಲ.

ಬಸವಾದಿ ಪ್ರಮಥರ ತತ್ವವಿಚಾರಗಳು ಮತ್ತು ಸಂಸ್ಕೃತಿಯು ವೀರಶೈವರಾದ ಆಂಧ್ರರ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಮಾಡಿದ ವೆಂಬುದು ಈ ವರೆಗೆ ಪ್ರಕಟವಾದ ಸಂಗತಿಗಳಿಂದ ನಿಶ್ಚಿತವಾಗಿ ಹೇಳಲು ಬರಲಾರದು. ಆಂಧ್ರ ವೀರಶೈವ ವಾಙ್ಮಯವು ಪ್ರಕಟವಾದ ಮೇಲೆ ಇದರ ಸ್ವರೂಪ ಚನ್ನಾಗಿ ತಿಳಿದುಬರಬಹುದು. ಆದರೂ ಆಂಧ್ರ ವೀರಶೈವರು ಕರ್ನಾಟಕ ಶಿವಶರಣರಿಂದ ಪ್ರೇರಿತರಾಗಿದ್ದರೆಂಬುದು ಕೆಳಗಿನ ಸಂಗ ತಿಯಿಂದ ಸ್ಪಷ್ಟವಾಗುತ್ತದೆ.

ಆಂಧ್ರವೀರಶೈವರು ರೇವಣಸಿದ್ಧ, ಮರುಳಸಿದ್ಧ ಮತ್ತು ಏಕೋರಾಮ ಸಿದ್ಧ ಎಂಬವರು ಸಿದ್ಧತ್ರಯರು ಎಂದೂ ಶ್ರೀಪತಿ ಪಂಡಿತ, ಮಂಚಣ್ಣ ಪಂಡಿತ, ಮಲ್ಲಿಕಾರ್ಜುನ ಪಂಡಿತ ಎಂಬವರು ಪಂಡಿತತ್ರಯರೆಂದೂ, ಉದ್ಭಟ, ವೇಮನಾರಾಧ್ಯ, ಕೋಟಿಪಲ್ಯಾರಾಧ್ಯ (ವಿಶ್ವಾರಾಧ್ಯ ರೆಂತಲೂ ಹೇಳುವದುಂಟು) ಎಂಬವರು ಆರಾಧ್ಯತ್ರಯರೆಂತಲೂ ಮಾಯಿದೇವ, ಭಾಸ್ಕರ ಮತ್ತು ನೀಲಕಂಠ ಇವರು ಆಚಾರ್ಯತ್ರಯರೆಂತಲೂ, ಬಸವರಸ, ಬಾಚರಸ, ಸಕಲೇಶ ಮಾದರಸ ಇವರು ರಾಜತ್ರಯರೆಂತಲೂ ರೇವಣಸಿದ್ಧ, ಮರುಳುಸಿದ್ಧ, ಏಕೋರಾಮಸಿದ್ಧ ಇವರು ಗುರುಪರಂಪ ರೆಯುವರೆಂತಲೂ ಹೇಳುವದುಂಟು. ಇವರೆಲ್ಲರನ್ನು ಆಂಧ್ರ ವೀರಶೈವರು ಅತ್ಯಂತ ಭಕ್ತಿಭಾವದಿಂದ ಎಂದಿನಿಂದಲೂ ಕಾಣುತ್ತ ಬಂದಿದ್ದಾರೆ. ಇವರಲ್ಲಿ ಬಹು ಜನರು ಕರ್ನಾಟಕದ ಶಿವಶರಣರೂ ಗ್ರಂಥಕಾರರೂ ಇದ್ದಾರೆ. ಇದರಿಂದ ಕರ್ನಾಟಕದ ಶರಣರ ಪ್ರಭಾವವು ಆಂಧ್ರ ವೀರ ಶೈವರ ಮೇಲೆ ಇದ್ದುದು ಸ್ಪಷ್ಟವಾಗಿ ತೋರಿಬರುತ್ತದೆ.

೧೯೨೯ ರಲ್ಲಿ ಪಂಡಿತ ಚಿದಿರೆಮಠದ ವೀರಭದ್ರ ಶರ್ಮರು (ಹಿಂದುಗಡೆ ಕಾಶೀವಿಶ್ವೇಶ್ವರ ಜಗದ್ಗುರು ಸಿಂಹಾಸನ ಪೀಠಸ್ಥರು) “ಆಂಧ್ರವೀರಶೈವರು” ಎಂಬ ವಿಸ್ತಾರವಾದ ಲೇಖವನ್ನು ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಅದರಮೇಲಿಂದ ಆಂಧ್ರ ದೇಶದ ಹೈದ್ರಾಬಾದ ಸಂಸ್ಥಾನದಲ್ಲಿ ಸಂಗರೆಡ್ಡಿ, ಮಹಬೂಬನಗರ, ನಿಜಾಮಾಬಾದ, ನಲ್ಲಗೊಂಡ, ಅತ್ರಾಫಬಲ್ದಾ, ಒರಂಗಲ್ಲ, ಮೆದಕ್, ಕರೀಂನಗರ ಈ ಜಿಲ್ಲೆಗಳಲ್ಲಿಯೂ ಮದ್ರಾಸ ಇಲಾಖೆಯಲ್ಲಿ ಕೃಷ್ಣಾ,-ಗುಂಟೂರು, ಗೋದಾವರೀ, ವಿಶಾಖಪಟ್ಟಣಂ, ಗಂಜಾಂ, ನೆಲ್ಲೂರು, ಕಡಪಾ, ಕರ್ನೂಲ, ಅನಂತಪುರಂ, ಜಿಲ್ಲೆಗಳಲ್ಲಿಯೂ ವಿಶೇಷವಾಗಿ ವಾಸಿಸುತ್ತಿದ್ದುದು ತಿಳಿದುಬರುತ್ತದೆಂದು ಬರೆದಿದ್ದಾರೆ. ನಾವು ಈ ವರೆಗೆ ಪ್ರಸಿದ್ಧ ಮಾಡಿದ ಆಂಧ್ರ ಶಿವಶರಣರು ಈ ಪ್ರದೇಶದವರೇ ಇದ್ದಾರೆ. ಅವರಲ್ಲಿ ಶ್ರೀಪತಿ ಪಂಡಿತ, ವೇಮನಾರಾಧ್ಯ, ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮನಾಥ ಇವರು ದೊಡ್ಡ ವಿದ್ವಾಂಸರಾಗಿ ಶಿವಶರಣರ ತತ್ವಗಳನ್ನು ಈ ಭಾಗಗಳಲ್ಲಿದ್ದ ಅನೇಕ ಜಾತಿಯವರು, ಉದಾಹರಣಾರ್ಥವಾಗಿ ಬಣಜಿಗರು, ಶೀಲವಂತರು (ಇವರು ನೆಯ್ಗೆಯವರು), ಗಾಣಿಗರು, ದೇವಾಂಗರು, ಕರ್ಣಭಕ್ತರು, ವೀರಮುಷ್ಟಿಯವರು, ಕೊಲಿಯ ಜಂಗಮರು, ಜಂಗಮರು ಹೀಗೆ ಅನೇಕ ಪಂಗಡಗಳು ವೀರಶೈವಧರ್ಮದ ಮೇರೆಗೆ ಈಗಲೂ ಪಾಲಿಸುತ್ತಲಿದ್ದಾರೆ. ಒಟ್ಟಿಗೆ ಬಸವೇಶ್ವರನ ಸಮಕಾಲೀನನಾಗಿ ಆಂಧ್ರದೇಶದಲ್ಲಿ ಪ್ರಖ್ಯಾತಿಗೆ ಬಂದ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಕರ್ನಾಟಕದ ಶಿವಶರಣರಿಂದ ಪ್ರೇರಿತನಾಗಿ ಆಂಧ್ರ ದೇಶದಲ್ಲಿ ವೀರಶೈವ ಧರ್ಮದ ಪ್ರಚಾರ ಮಾಡಿರಬೇಕೆಂದು ಹೇಳುವದೇ ನಮ್ಮ ಮುಖ್ಯ ಅಭಿಪ್ರಾಯವಾಗಿದೆ.

ಆದರೆ ಪಂಡಿತಾರಾಧ್ಯ ಮೊದಲಾದ ಮಹನೀಯರು ಆರಂಭದಲ್ಲಿ ವೇದೋಪನಿಷದ್ಗ್ರಂಥಗಳನ್ನೋದಿ ವಿದ್ವಾಂಸರಾಗಿ ಬ್ರಾಹ್ಮಣ ಧರ್ಮಕ್ಕೆ ಒಲಿದವರಾಗಿದ್ದರೆಂಬುದು ಅವರ ಚರಿತ್ರೆಗಳಿಂದ ಕಂಡು ಬರುತ್ತದೆ. ಮಲ್ಲಿಕಾರ್ಜುನ ಪಂಡಿತಾರಾಧ್ಯನು ಆರಂಭದಲ್ಲಿ ಬಸವೇಶ್ವರನಲ್ಲಿ “ಭಕ್ತಿವೀದಿ ನಲಸು ಬ್ರಾಹ್ಮ್ಯಂಬುತೋ ಬೊತ್ತು ಬಾಯುಲೇಸುನೇನು ಬಸವಲಿಂಗ” ಎಂದರೆ ಭಕ್ತಿಯಲ್ಲಿರುವ ಲಾಲಸೆಯನ್ನು ಬ್ರಾಹ್ಮ್ಯದ

ಲ್ಲಿರುವ ಭಾಗವನ್ನು ನಾನು ಬಿಡಲಾರೆನೆಂದು ಹೇಳಿಕೊಂಡಿದ್ದಾನೆ. ಇವನು ಶ್ರೌತ ಸ್ಮಾರ್ತ ಕರ್ಮಾನುಷ್ಠಾನ ನಿಷ್ಠೆಯುಳ್ಳವನಾದರೂ ಬಸವೇಶ್ವರನಲ್ಲಿ ಅಖಂಡ ಭಕ್ತಿಯುತನಾಗಿದ್ದುದು ನಿಸ್ಸಂಶಯವು. ಆಂಧ್ರ ವೀರಶೈವರು ಲಗ್ನಪತ್ರಿಕೆ ಬರೆಯುವಾಗ "ಶ್ರೀ ಮತ್ಕಲ್ಯಾಣ ಬಸವೇಶ್ವರಾಂಶ ಸಂಭೂತರಾದ" ಎಂಬ ಶಬ್ದಗಳನ್ನು ಈಗಲೂ ಉಪಯೋಗಿಸುವದುಂಟು. ಹೀಗೆ ಆಂಧ್ರ ಸಂಸ್ಕೃತಿಯ ಮೇಲೆ ಶಿವ ಶರಣರು ಬಹಳ ಪರಿಣಾಮ ಮಾಡಿದ್ದಾರೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಸಾಮಾನ್ಯವಾಗಿ ದ್ರಾಕ್ಷಾ ರಾಮಕ್ಷೇತ್ರದಲ್ಲಿ ಇರುತ್ತಿದ್ದರೂ ಈ ಸಪ್ತ ಗೋದಾವರೀ ಪ್ರವೇಶಕ್ಕೆ ಸಮೀಪವಾಗಿರುವ ಅಮರಗುಂಡವೆಂಬ ಬೇರೊಂದು ಪುಣ್ಯಸ್ಥಳವನ್ನು ಆಯ್ದು ಅಲ್ಲಿಯೂ ಕೂಡ ವಾಸಿಸುತ್ತಿದ್ದನು. ಈ ಸ್ಥಳದಲ್ಲಿ ಮಲ್ಲಿಕಾ ರ್ಜುನನೆಂಬ ಪ್ರಸಿದ್ಧ ದೇವಾಲಯವಿರುತ್ತದೆ. ಕೆಲವು ಶಿವಶರಣರು 'ಅಮರಗುಂಡ ಮಲ್ಲಿಕಾರ್ಜುನ' ಎಂಬ ಅಂಕಿತದಿಂದ ವಚನಗಳನ್ನು ರಚಿ ಸಿದ್ದಾರೆ. ಈ ಸ್ಥಳದಲ್ಲಿ ಪಂಡಿತಾರಾಧ್ಯನ ಶಿಷ್ಯತ್ವವನ್ನು ವಹಿಸಿ ಬಹು ಜನರು ಇಲ್ಲಿಯೂ ವಾಸಮಾಡುವವರಾಗಿದ್ದರು.

ಈ ಪ್ರಕಾರ ಮಲ್ಲಿಕಾರ್ಜುನ ಪಂಡಿತಾರಾಧ್ಯನು ನಾಡಿನ ಜನ ರಲ್ಲಿ ಪೂಜ್ಯಸ್ಥಾನವನ್ನು ಹೊಂದ ಹತ್ತಲು ಅವನು ದೇಶದಲ್ಲಿಯ ವಿದ್ವಾಂಸರನ್ನು ಕಾಣಬೇಕೆಂದು ಬಯಸಿ ಮಧುರೆಯ ವರೆಗೆ ಪ್ರವಾಸ ಮಾಡಿ ಅನೇಕ ಶಿವಶರಣರನ್ನು ಕಾಣುವವನಾದನು. ಇವರಲ್ಲಿ ಪಾಲ್ಕು ರಿಕೆಯಲ್ಲಿದ್ದ ಬಿಲ್ಲೇಮೀ ವೇಮನಾರಾಧ್ಯ, ಅನಂತಪುರ ಜಿಲ್ಲೆಯಲ್ಲಿರುವ ಕದಿರಿಯ ಲೇಮಯ್ಯ. ಇವರು ಮುಖ್ಯರಾಗಿದ್ದರು. ಅಲ್ಲದೆ ಬಹುಜನರು ತನ್ನಿಂದ ದೀಕ್ಷೆಯನ್ನು ಹೊಂದಬೇಕೆಂದು ಬಯಸಿಬರಲು ಅವರಿಗೆ ಅವನು ದೀಕ್ಷೆಯನ್ನು ಕೊಡುತ್ತ ಸಂಚರಿಸಿದನು. ಪಂಡಿತಾರಾಧ್ಯನು ದೀಕ್ಷೆಯನ್ನು ಕೊಟ್ಟವರಲ್ಲಿ ಪೂರಂಬೆಯು ಬಹು ಪ್ರಸಿದ್ಧಳಾಗಿದ್ದಾಳೆ. ಇವಳು ಪೊರಾಂ ಡಲವೆಂಬ ಪಟ್ಟಣದಲ್ಲಿ ವಾಸಮಾಡುತ್ತಿದ್ದಳು. ಅವಳು ಪಂಡಿತಾರಾಧ್ಯನ ಶಿಷ್ಯಳಾಗಿ ಭಕ್ತಜಂಗಮರು ಯಾವ ಜಾತಿಯವರಿದ್ದರೂ ಅವರನ್ನು ಆದರಿಸಿ, ಅವರೊಡನೆ ಪ್ರಸಾದಸೇವನೆಯನ್ನು ಮಾಡುವಳು. ಅವಳು ಬ್ರಾಹ್ಮಣಳು. ಆದ್ದರಿಂದ ಆಕೆಯು ಹಾಗೆ ಆಚರಿಸುತ್ತಿದ್ದುದನ್ನು ಪಟ್ಟಣ

ವಲ್ಲಿಯು ಬ್ರಾಹ್ಮಣರು ನೋಡಿ ಅರಸನ ಕಡೆಗೆ ಹೋಗಿ ದೂರು ಹೇಳಿದರು. ಅದಕ್ಕೆ ಅರಸನು ಅಂತ್ಯಜರಾರಾದರೂ ಆಕೆಯ ಮನೆಯನ್ನು ಪ್ರವೇಶ ಮಾಡಿದಲ್ಲಿ ತನಗೆ ಕೂಡಲೆ ತಿಳಿಸಬೇಕೆಂದು ಹೇಳಲು ಬ್ರಾಹ್ಮಣರು ಅವಳು ಹಾಗೆ ಮಾಡುತ್ತಿರುವವನ್ನು ಕಾಯುತ್ತಲೇ ಇದ್ದರು. ಹೀಗಿರಲು ಒಂದು ದಿವಸ ಒಬ್ಬ ಅಂತ್ಯಜನು ಅಂಗದ ಮೇಲೆ ಲಿಂಗ ರುದ್ರಾಕ್ಷಿಗಳನ್ನು ಧರಿಸಿಕೊಂಡು ಅವಳ ಮನೆಯನ್ನು ಪ್ರವೇಶಿಸಲು ಕೂಡಲೆ ಬ್ರಾಹ್ಮಣರು ಇದನ್ನು ಅರಸನಿಗೆ ತಿಳಿಸಿದರು. ಅರಸನು ತತ್ಕ್ಷಣವೇ ಬಂದು ಮನೆಯನ್ನು ನಿರೀಕ್ಷಿಸಲಾಗಿ ಅಲ್ಲಿ ಯಾರು ಇಲ್ಲದ್ದನ್ನು ಕಂಡು ಮನೆಗೆ ಬಂದವನು ಅಂತ್ಯಜನಲ್ಲ, ಅಂತ್ಯಜನ ವೇಷವನ್ನು ಧಾರಣಮಾಡಿದ ಪರಮಾತ್ಮನಿರಬೇಕೆಂದು ಅವನೂ ಜನರೂ ತಿಳಿದು ಸೂಳಂಬೆಯನ್ನು ಸ್ತುತಿಸುತ್ತ ತಿರುಗಿಹೋಗುವವರಾದರು.

ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿಷ್ಯನು ದೇವಣ್ಣನೆಂಬಾತನು ಇದ್ದು ಅವನು ಪ್ರತಿನಿತ್ಯ ಲಿಂಗಕ್ಕೆ ತನ್ನ ಎರಡು ಕಣ್ಣುಗಳನ್ನು ಸಮರ್ಪಿಸಿ ಶ್ರೀಮಲ್ಲಿಕಾರ್ಜುನ ಸ್ವಾಮಿಯಿಂದ ಪುನಃ ಕಣ್ಣುಗಳನ್ನು ಪಡೆದುಕೊಂಡು ಅತ್ಯಧಿಕವಾದ ಮಹಿಮೆಯನ್ನು ಹೊಂದಿದ್ದನು. ಮಲ್ಲಿಕಾರ್ಜುನ ಪಂಡಿತಾರಾಧ್ಯನು ಅಲ್ಲಿಯೇ ಅವನನ್ನೂ ಅಲ್ಲಿದ್ದ ತನ್ನ ಇತರ ಭಕ್ತರನ್ನೂ ಕಂಡು ಅವರಿಗೆ ಪ್ರಸಾದಿಸ್ಥಲದ ಅನುಸಂಧಾನವನ್ನು ಬೋಧಿಸಿ ಅವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡನು.

ಅಲ್ಲಿಂದ ಅವನು ಪಾಲ್ಕುರಿಕೆಯಲ್ಲಿ ವೇಮನಾರ್ಯನನ್ನು ಕಂಡು ತಿರುಗಿ ದ್ರಾಕ್ಷಾರಾಮ ಕ್ಷೇತ್ರಕ್ಕೆ ಬಂದನು. ಈ ಪ್ರವಾಸದಲ್ಲಿ ಪಂಡಿತಾರಾಧ್ಯನ ಕೀರ್ತಿಯು ಆಂಧ್ರ ದೇಶದಲ್ಲೆಲ್ಲ ಅತ್ಯಂತವಾಗಿ ಪಸರಿಸಿತು. ಮತ್ತು ಅವನ ಶಿಷ್ಯ ಸಮುದಾಯವೂ ಬಹು ಹೆಚ್ಚಾಗಿ ಬೆಳೆಯಿತು. ಈ ಶಿಷ್ಯರಲ್ಲಿ ಅನೇಕರು ಶಿವಯೋಗವನ್ನು ಸಾಧಿಸಿದವರಾಗಿ ಮಹಾತ್ಮೆಗಳನ್ನು ಮಾಡುವಷ್ಟು ಧಾರ್ಮಿಕ ಉಚ್ಚ ಪ್ರಭಾವವನ್ನು ಪಡೆದವರಾಗಿದ್ದರು. ಮಲ್ಲಿಕಾರ್ಜುನ ಪಂಡಿತಾರಾಧ್ಯನಿಗೆ ಆಗಿಂದಾಗ್ಗೆ ಶಿಷ್ಯರಿಗೆ ಬೋಧಿಸುವದಕ್ಕೆ ಅಥವಾ ಪರವಾದಿಗಳ ಕೂಡ ವಾಗ್ವಾದ ಮಾಡುವುದಕ್ಕೆ ಹೋಗುವ ಪ್ರಸಂಗಗಳು ಬರುತ್ತಿದ್ದು ಆಗ ಅವನೊಡನೆ ಈ ಶಿಷ್ಯ ಸಂದೋಹವು ಹೋಗಿ ಅವನ ಕಾರ್ಯಗಳಲ್ಲಿ ಸಹಾಯ ಮಾಡುತ್ತ ಬರುವದು.

ಹೀಗಿರುವಲ್ಲಿ ಕೃಷ್ಣಾ ಜಿಲ್ಲೆಯಲ್ಲಿ ಚಂದವ್ರೋಲು ಎಂಬ ಗ್ರಾಮವಿದೆ. ಇದಕ್ಕೆ ಚಂದ್ರವ್ರೋಲು (೧) ಎಂತಲೂ ಹೆಸರು ಇದೆ. ಇದರ ಹಿಂದಿನ ಕಾಲದ ಹೆಸರು ಧನದಪುರವೆಂದು ಇದ್ದಂತೆ ತೋರುತ್ತದೆ. ಇಲ್ಲಿ ವೆಲನಾಡ ಚೋಳನೆಂಬ ರಾಜನು ಆಳುತ್ತಿದ್ದನು. ಅವನು ಬೌದ್ಧ ಧರ್ಮವನ್ನು ಪಾಲಿಸುತ್ತಿದ್ದು ಬೌದ್ಧಾಚಾರ್ಯನೆಂಬುದು ಅವನ ಗುರುವಿನ ಹೆಸರಾಗಿತ್ತು. ಈ ಬೌದ್ಧಾಚಾರ್ಯನು ಬೌದ್ಧ ಧರ್ಮವೇ ಸತ್ಯವಾದುದೆಂದು ಸಾರುತ್ತಾ ಇದ್ದನು. ಪಂಡಿತಾರಾಧ್ಯನು ಆಗ ಇದೇ ಗ್ರಾಮದಲ್ಲಿ ಇರುತ್ತಿದ್ದನು. ದೊರೆಯು ಅವನ ಸದಾಚಾರ ಸಂಪತ್ತಿಯನ್ನೂ ಶಿವಭಕ್ತಿಯನ್ನೂ ವಾಕ್ಸಿದ್ಧಿಯನ್ನೂ ನೋಡಿ ಅವನನ್ನು ಪ್ರೀತಿಸುವವನಾದನು. ಇದು ಬೌದ್ಧಾಚಾರ್ಯನಿಗೆ ತಿಳಿದು ದೊರೆಗೆ-ನಿನಗೆ ಯಾರು ಗುರುಗಳೋ ಅವರೇ ಲೋಕಕ್ಕೆಲ್ಲ ಗುರುಗಳು. ಇತರರು ನಿನಗೆ ಗುರುವಾಗಲಾರರು. ಈ ಶೈವನಿಗೆ ಪಂಡಿತನೆಂಬ ಹೆಸರೂ ಗುರುತ್ವವೂ ಸಲ್ಲಲಾರವು. ಎಲೆ ಭೂಪತಿಯೇ, ನನಗೂ ಪಂಡಿತಾರಾಧ್ಯನಿಗೂ ವಾದ ನಡೆಯಲಿ. ನಾನು ಇವನನ್ನು ಸೋಲಿಸಿ ಬಿಡುವೆನೆಂದು ಹೇಳಿದನು.

ಆಗ ಅರಸನು ಎಲ್ಲ ಮತಸ್ಥರನ್ನು ಅಂದರೆ ವೇದವಾದಿಗಳು, ಪಾಂಚರಾತ್ರರು, ಜಿನ ಮತದವರು, ಮಾಯಾವಾದಿಗಳು, ಆಗಮಿಕರು ಹೀಗೆ ಎಲ್ಲರನ್ನು ಬರಮಾಡಿಕೊಂಡು ಸಭೆಗೆ ಮಲ್ಲಿಕಾರ್ಜುನ ಪಂಡಿತಾರಾಧ್ಯನನ್ನೂ ಕರೆಕಳಿಸಿದನು. ಅರಸನ ಅಪ್ಪಣೆಯಂತೆ ಅವನೂ ಸಭೆಗೆ ಬರುವವನಾದನು. ಆಗ ಅಲ್ಲಿ ನೆರೆದ ಅನೇಕ ಮತಸ್ಥರೊಡನೆ ವಾದವಿವಾದಗಳು ನಡೆದು ಕಡೆಗೆ ಪಂಡಿತಾರಾಧ್ಯನು ಶಿವನೇ ದೈವವು, ಅವನ ಹೊರ್ತು ಜಗತ್ತಿನಲ್ಲಿ ಬೇರೊಬ್ಬರಿಲ್ಲ, ಅವನು ಸರ್ವವ್ಯಾಪಿಯು, ಎಂಬುದನ್ನು ಸಿದ್ಧ ಮಾಡಿ ತೋರಿಸಿದನು. ಆಗ ಅರಸನು ಅವನನ್ನು ಅತ್ಯಂತವಾಗಿ ಸನ್ಮಾನಿಸಿ ಕಳಿಸಿಕೊಟ್ಟನು. ಈ ಪ್ರಕಾರ ಪಂಡಿತಾರಾಧ್ಯನು ಬೌದ್ಧಾಚಾರ್ಯನನ್ನು ಸೋಲಿಸಿ ದ್ರಾಕ್ಷಾರಾಮ ಕ್ಷೇತ್ರಕ್ಕೆ ತಿರುಗಿ ಬಂದನು.

ವೆಲ್ನಾಡ ಚೋಳನಲ್ಲಿ ಬೌದ್ಧರು ತಮ್ಮ ಗುರುವಿಗೆ ರಾಜನ ಆಸ್ಥಾನದಲ್ಲಿ ಸೋಲುಂಟಾಗಲು ಅವರು ಪಟ್ಟಣದಲ್ಲಿ ಮಲ್ಲಿಕಾರ್ಜುನ ದೇವಾಲಯವಿದ್ದು ಅದರ ಮುಂದಿನ ದೀಪ ಮಾಲೆಯ ಕಂಭವನ್ನು ಸಿಟ್ಟಿನಿಂದ

---

(೧) ಸನಪವ್ರೋಲು ಎಂತಲೂ ಹೇಳುವದುಂಟು.

ಕಿತ್ತು, ಪೂಜಾರಿಯನ್ನು ಕೊಂದು, ಹೊಟ್ಟೆಯನ್ನು ಸೀಳಿ, ಸಮುದ್ರ ಮಧ್ಯದಲ್ಲಿದ್ದ ಬೌದ್ಧಾಲಯದ ಮುಂದೆ ನಡಿಸಿದರು. ಈ ಆಲಯವು ಕೃಷ್ಣಾನದಿಯು ಸಮುದ್ರಕ್ಕೆ ಕೂಡುವ ಸ್ಥಳದಲ್ಲಿ ದೀವೀಖಂಡವೆಂಬ ದ್ವೀಪವು ಈಗಲೂ ಇದ್ದು ಅಲ್ಲಿ ಇದ್ದಿರಬಹುದಾಗಿ ತೋರುತ್ತದೆ. ಮಲ್ಲಿಕಾರ್ಜುನ ದೇವಾಲಯವು ಚಂಡವೋಲು ಗ್ರಾಮಕ್ಕೆ ಸಮೀಪವಿರುವ ಕಾಕುಳ ಕ್ಷೇತ್ರದಲ್ಲಿ ಈಗಲೂ ಉಂಟು.

ಬೌದ್ಧರು ಈ ರೀತಿ ಮಾಡಿದ್ದು ಪಂಡಿತಾರಾಧ್ಯನಿಗೆ ತಿಳಿಯಲು ಅವನ ಶಿಷ್ಯನಾದ ರೇವಯ್ಯ ದೇವನು ಕೆಲವು ಭಕ್ತರನೊಡಗೊಂಡು ಬೌದ್ಧಾಲಯವಿದ್ದ ಸ್ಥಳಕ್ಕೆ ಹೋಗಿ ಅಲ್ಲಿಗೆ ಬಂದಿದ್ದ ಬೌದ್ಧಾಚಾರ್ಯನನ್ನು ಕೊಂದು ಶಿವಾಲಯದ ಪೂಜಾರಿಯನ್ನು ಅವನು ಕೊಂದುಹಾಕಿದಂತೆ ಅವನ ಹೊಟ್ಟೆಯನ್ನು ಸೀಳಿ ದೀಪಸ್ತಂಭವನ್ನು ಕಿತ್ತು ಶಿವಾಲಯದ ಮುಂದೆ ನಡಿಸಿದನು. ಇದು ವೆಲ್ನಾಡ ಚೋಳನಿಗೆ ತಿಳಿಯಲು ಅವನು ತನ್ನ ಗುರುವನ್ನು ಕೊಂದವರಾರೆಂದು ಕೇಳಲು ರೇವಯ್ಯನು ತಾನೇ ಕೊಂದೆನೆಂದು ಹೇಳಿದನು. ಆಗ ಅರಸನು ಅವನ ಕಣ್ಣುಗಳನ್ನು ಕಿತ್ತಿಸಲು ಅಲ್ಲಿದ್ದ ಭಕ್ತರು ಅವುಗಳಿಗೆ ಭಸ್ಮವನ್ನು ತಳಿದು ವಿಭೂತಿಯನ್ನು ತೋರಿಸಲು ಅವು ತಿರುಗಿ ಬಂದವು ಹೀಗಾದುದನ್ನು ಚೋಳನು ನೋಡಿ ಪುನಃ ಕಣ್ಣುಗಳನ್ನು ತೆಗೆಯಿಸಲು ಅವು ಪುನಃ ಮೂಡಿ ಮತ್ತೆ ಮತ್ತೆ ಬರುತ್ತಿರಲು ರೇವಯ್ಯನು ಇನ್ನು ಪುನಃ ಕಣ್ಣುಗಳು ಬಂದರೆ, ಶಿವನೇ ನಿನ್ನ ಗಣಂಗಳಾಣೆ ಎಂದೆನ್ನಲು ಕಣ್ಣುಗಳು ಬರುವದು ನಿಂತವು. ಆ ಮೇಲೆ ಅವನು ದ್ರಾಕ್ಷಾರಾಮಕ್ಷೇತ್ರಕ್ಕೆ ಬಂದನು.

ಆದರೆ ವೆಲ್ನಾಡ ಚೋಳನು ಇದರ ತರುವಾಯ ಬಹಳ ದಿವಸ ಬಾಳಲಿಲ್ಲ. ಅವನ ಶರೀರಕ್ಕೆ ಹುಣ್ಣುಗಳುಂಟಾಗಿ ಅವುಗಳ ವೇದನೆಯಲ್ಲಿ ಪರಿತಪಿಸುತ್ತ ಅವನು ಮರಣಹೊಂದಿದನು.

ಈ ಸಂಗತಿಯು ಒದಗಿದ ಬಳಿಕ ಪಂಡಿತಾರಾಧ್ಯನು ಅಮರಗುಂಡ ಕ್ಷೇತ್ರಸ್ಥಾನದಲ್ಲಿ ತನ್ನ ಶಿಷ್ಯರೊಡನೆ ಬಂದು ನಿಂತನು. ಆಗ ಅವನ ಶಿಷ್ಯರಲ್ಲಿ ಗುರುಭಕ್ತನೆಂಬವನು ಅಗಾಧವಾದ ಗುರುಭಕ್ತಿಯನ್ನು ತೋರಿಸಿ ಅವನ ಅಪ್ಪಣೆಯಂತೆ ಶೂಲವನ್ನೇರಿದನು. ಆದರೆ ಅವನ ಪ್ರಾಣವು ಹೋಗಲಿಲ್ಲ. ಮುಂದೊಂದು ದಿನ ತನ್ನ ಸ್ವಾಮಿಯ ಪಾದುಕೆಗಳಿಗೆ ತನ್ನ ಪಾದವು

ತಾಕಲು ತನ್ನ ಕಾಲನ್ನು ಸಹ ಕಡಿದುಕೊಂಡನು. ಆದರೆ ಅವನಿಗೆ ಯಾವ ಅಪಾಯವೂ ಆಗಲಿಲ್ಲ. (ಹಿಂದೆ ಗುರುಭಕ್ತನಚರಿತ್ರೆಯನ್ನು ನೋಡಿರಿ.)

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಈ ಪ್ರಕಾರ ಆಂಧ್ರದೇಶದಲ್ಲಿ ಧರ್ಮಪ್ರಚಾರ ಮಾಡುತ್ತಿರುವಾಗ ಬಸವೇಶ್ವರನು ಕಲ್ಯಾಣ ಪಟ್ಟಣದಲ್ಲಿ ನಡಿಸಿದ ಮಹತ್ತರ ಕಾರ್ಯಗಳನ್ನು ತಿಳಿದವನಾಗಿ ಅವನನ್ನು ಪ್ರತ್ಯಕ್ಷ ಕಾಣಬೇಕೆಂಬ ಲವಲವಿಕೆಯು ಅವನಲ್ಲಿ ಉಂಟಾಯಿತು. ಅವನು ಅಮರ ಗುಂಡ ಕ್ಷೇತ್ರದಿಂದ ತನ್ನ ಶಿಷ್ಯಸಮುದಾಯದೊಡನೆ ಹೊರಟು ಮೊದಲು ದ್ರಾಕ್ಷಾರಾಮಕ್ಕೆ ಬಂದನು. ಅಲ್ಲಿಂದ ಅವನು ಮುಂದೆ ನಡುಗೂಡು ಎಂಬ ಗ್ರಾಮಕ್ಕೆ ಬಂದನು. ಅದು ನಡಿಗುಡೆಂ ಎಂದು ಕೃಷ್ಣಾ ಜಿಲ್ಹೆಯಲ್ಲಿ ಒಂದು ಗ್ರಾಮವಿದೆ. ಅಲ್ಲಿ ವೀರಚಾಕಿದೇವ ಎಂಬ ತನ್ನ ಶಿಷ್ಯನಲ್ಲಿ ಕೆಲವು ದಿವಸ ಕಳೆದನು. ಈ ಚಾಕಿದೇವನ ವೃತ್ತಾಂತವು ನಮಗೆ ತಿಳಿದು ಬಂದಿಲ್ಲ. ಆದರೆ ಅವನ ಹೆಸರು ಗಣಸಹಸ್ರದಲ್ಲಿ ಇರುತ್ತದೆ. ಆದ್ದರಿಂದ ಅವನು ಈ ಕಾಲದಲ್ಲಿ ಒಬ್ಬ ಪ್ರಸಿದ್ಧ ಶಿವಶರಣನಾಗಿರಬಹುದೆಂದು ತೋರುತ್ತದೆ.

ಮುಂದೆ ಅವನು ನಡುಗೂಡಿನಿಂದ ಹೊರಟು ಈಗ ಮಹಬೂಬ ನಗರ ಜಿಲ್ಲೆಯಲ್ಲಿರುವ ಪಾನುಗಲ್ಲಿಗೆ ಬಂದನು. ಈ ಪಾನುಗಲ್ಲು ಶ್ರೀಶೈಲ ಪ್ರಾಂತಕ್ಕೆ ಸಮೀಪವಾಗಿಯೇ ಇರುತ್ತದೆ. ಇದು ಆ ಕಾಲದಲ್ಲಿ ಪ್ರಸಿದ್ಧ ಸ್ಥಳವೆನಿಸಿಕೊಂಡಿತ್ತು. ಇಲ್ಲಿ ಉದಯ ಭೂಪಾಲನೆಂಬ ರಾಜನು ರಾಜ್ಯ ವಾಳುತ್ತಿದ್ದನು. ಆದರೆ ಅವನು ಶಿವಭಕ್ತರಿಗೆ ವಿರೋಧಿಯಾಗಿ ಆಚರಿಸು ತ್ತಿದ್ದನು. ಅವನಲ್ಲಿ ಗೋವಿಂದ ಪೆಗ್ಗಡೆ ಎಂಬವನು ಉಚ್ಚ ಅಧಿಕಾರ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದು ಅವನು ಬಾಹ್ಯದಲ್ಲಿ ವಿಷ್ಣುಭಕ್ತನಂತೆ ನಟಿಸಿದರೂ ಕೇವಲ ಶಿವಭಕ್ತನಾಗಿ ಪಂಡಿತಾರಾಧ್ಯನ ಶಿಷ್ಯತ್ವವನ್ನು ವಹಿ ಸಿದವನಾಗಿದ್ದನು. ಆದ್ದರಿಂದ ಪಂಡಿತಾರಾಧ್ಯನು ತನ್ನ ಗ್ರಾಮಕ್ಕೆ ಬರಲು ಅವನನ್ನು ಅವನು ಬಹು ಸಂಭ್ರಮದಿಂದ ಇದಿರ್ಗೊಂಡು ಸತ್ಕರಿಸಿದನು. ಆಗ ಬಹು ಜನ ಭಕ್ತರೂ ಜಂಗಮರೂ ಈ ಗ್ರಾಮಕ್ಕೆ ಬರಲು, ಪಂಡಿತಾ ರಾಧ್ಯನ ಪೂಜಾರ್ಚನಾದಿಗಳು ಬಹು ಸಂಭ್ರಮದಿಂದ ಗ್ರಾಮದಲ್ಲಿ ನಡೆದವು.

ಹೀಗೆ ಪಾನುಗಲ್ಲಿನಲ್ಲಿ ಸಂಭ್ರಮದಿಂದ ಕಾರ್ಯಗಳು ನಡೆದಿರುತ್ತಿರಲು ನೆಲ್ಲೂರು ಜಿಲ್ಲೆಯಲ್ಲಿ ವೆಲ್ಲಗೊಂಡ ಅಥವಾ ವೆಲಿಗಂಡ್ಲಾ ಎಂಬ ಗ್ರಾಮ ವಿದ್ದು ಅಲ್ಲಿ ಮಹಾದೇವನೆಂಬ ಶರಣನು ವಾಸಮಾಡಿಕೊಂಡು ಇರುತ್ತಿದ್ದನು.

ಅವನು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಸೇವೆಯನ್ನು ಮಾಡಬೇಕೆಂದು ಅಪೇಕ್ಷಿಸಿ ಅವನಿಗೆ ಪೂಜೋಪಕರಣಗಳನ್ನು ಒದಗಿಸಿಕೊಡುವ ಸೇವೆಯನ್ನು ಕೈಕೊಂಡನು. ಆಗ ಅವನು ಪುಷ್ಪಗಳನ್ನು ತರುವಲ್ಲಿ ಒಂದು ಪುಷ್ಪಕ್ಕೆ ತನ್ನ ಕಾಲು ಹತ್ತಲು ತನ್ನ ಕಾಲನ್ನೇ ಕಡಿದುಕೊಂಡನು. ಆಗ ಪಂಡಿತಾರಾಧ್ಯನು ಅವನನ್ನು ಕಂಡು ಪಂಚಾಕ್ಷರೀ ಮಂತ್ರ ಸ್ಮರಣೆಯಿಂದ ಆ ಕಾಲನ್ನು ಮೊದಲಿನಂತೆ ಹತ್ತುವಂತೆ ಮಾಡಿದನು. (ಹಿಂದೆ ವೆಲ್ಲಗೊಂಡ ಮಹಾದೇವಯ್ಯನ ಚರಿತ್ರೆಯನ್ನು ನೋಡಿರಿ)

ಪಾನುಗಲ್ಲು ಎಂಬ ಗ್ರಾಮದಲ್ಲಿ ಧವಳೇಶ್ವರನೆಂಬವನು ಅರಸನಿಗೆ ತಾಂಬೂಲಕೊಡು ಎಂಬ ಸೇವೆಯನ್ನು ಮಾಡುತ್ತಿದ್ದನು. ಅವನೂ ಪಂಡಿತಾರಾಧ್ಯನಿಗೆ ಸನ್ಮಾನಮಾಡುವಲ್ಲಿ ತೊಡಗಿದವನಾದನು. ಅದರಿಂದ ಅವನಿಗೆ ಒಂದು ದಿವಸ ಅರಸನಿಗೆ ತಾಂಬೂಲವನ್ನು ಕೊಡುವದು ವಿಸ್ಮರಣೆಯಾಯಿತು. ಅರಸನಾದರೂ ತನ್ನ ಊಳಿಗದವರು ಒಬ್ಬ ಶೈವನಿಗೆ ತನ್ನನ್ನು ಅಲಕ್ಷಿಸಿ ವೈಭವದಿಂದ ಸತ್ಕರಿಸುವದನ್ನು ನೋಡಿ ಮನದಲ್ಲಿ ತಳಮಳಿಸುತ್ತಿದ್ದನು.

ಹೀಗಿರಲು ಪಂಡಿತಾರಾಧ್ಯನ ವಿರೋಧಿಗಳು ಆ ಗ್ರಾಮದಲ್ಲಿ ಅನೇಕರಿದ್ದು ಅವನಿಗಾಗುತ್ತಿದ್ದ ಈ ಸಂಭ್ರಮವನ್ನು ನೋಡಲಾರದೆ ಅರಸನ ಕಡೆಗೆ ಹೋಗಿ ಅನೇಕ ರೀತಿಯಿಂದ ಪಂಡಿತಾರಾಧ್ಯನನ್ನು ದೂರಹತ್ತಿದರು. ಆಗ ಅರಸನು ಧವಳೇಶ್ವರನನ್ನು ಕರಸಿ ನೀನು ನನ್ನ ಸಂಬಳವನ್ನುಂಡು ಹೀಗೆ ಬೇರೊಬ್ಬರನ್ನು ಸೇವಿಸತಕ್ಕದ್ದಲ್ಲ. ನೀನು ನನ್ನಿಂದ ಪೋಷಿತನಾಗಿರುವಿ. ಆದ್ದರಿಂದ ನೀನು ನನ್ನ ಪಾದರಕ್ಷೆಯನ್ನ ಹಿಡಿ ಎಂದರೆ ಹಿಡಿಯಬೇಕು, ಶಿರಸ್ಸನ್ನು ಕೊಡು ಎಂದರೆ ನೀನು ಕೊಡಬೇಕು ಎಂದು ನುಡಿದನು. ಅದಕ್ಕೆ ಧವಳೇಶ್ವರನು ನಿನ್ನಿಂದ ಈ ದೇಹವು ಪೋಷಿತವಾದದ್ದರಿಂದ ಇದನ್ನು ನೀನು ತೆಗೆದುಕೋ ಎಂದೆಂದು ತನ್ನ ಖಡ್ಗದಿಂದ ತನ್ನ ಸಿರಸ್ಸನ್ನು ಕತ್ತರಿಸಿ ಅರಸನಿಗೊಪ್ಪಿಸಿದನು. ಆದರೆ ಅಷ್ಟಕ್ಕೆ ಅದು ಮುಗಿಯಲಿಲ್ಲ. ಅವನಲ್ಲಿದ್ದ ಗಣಾಚಾರವು ರೂಪುಗೊಂಡು ಅವನ ಕೈಯಲ್ಲಿದ್ದ ಖಡ್ಗದಿಂದಲೇ ಅರಸನನ್ನೂ ಅವನ ಸೈನ್ಯವನ್ನೂ ಸಂಹರಿಸಿತು. ಆಗ ಗಣಾಧೀಶ್ವರರು ಆಕಾಶದಿಂದ ಬಂದು ಪುಷ್ಪಕವಿಮಾನದಲ್ಲಿ ಬಂದು ಧವಳೇಶ್ವರನನ್ನು ಅದರಮೇಲೆ ಹತ್ತಿಸಿ ಅವ

## ಕಥಾಂತರಗಳು

ಮಲ್ಲಿಕಾರ್ಜುನ ಪಂಡಿತಾರಾಧ್ಯನ ಉಲ್ಲೇಖಗಳಿದ್ದ ಗ್ರಂಥಗಳು ಅನೇಕವಿದ್ದು ಅವುಗಳಲ್ಲಿ ಕೆಲವು ಕಥಾಂತರಗಳಿರುವದು ಕಂಡುಬರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ನಾವು ಇಲ್ಲಿ ಉಲ್ಲೇಖಿಸುತ್ತೇವೆ.

## ಜನ್ಮಸ್ಥಳದ ಹೆಸರು

ಮಲ್ಲಿಕಾರ್ಜುನನ ಜನ್ಮಸ್ಥಳವು 'ವರಾಳಪುರ' ಅಥವಾ 'ವರಳಾಪುರ ಎಂದು ಕೆಲವು ಗ್ರಂಥಗಳಲ್ಲಿ ಹೇಳಿದೆ. ಆದರೆ ಪಾಲ್ಕುರಿಕೆ ಸೋಮರಾಧ್ಯನು ತನ್ನ ಪಂಡಿತಾರಾಧ್ಯ ಚರಿತ್ರೆಯಲ್ಲಿ ಆತನ ಗ್ರಾಮವು ದಕ್ಷಾರಾಮವೆಂದು ಹೇಳಿದ್ದಾನೆ. ಸೋಮಾರಾಧ್ಯನು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಕಾಲಕ್ಕೆ ಬಹಳ ಸಮೀಪವಾಗಿ ಪ್ರಸಿದ್ಧಿಗೆ ಬಂದಿದ್ದಾನೆ ಮತ್ತು ಅವನು ಪಂಡಿತಾರಾಧ್ಯನ ಚರಿತ್ರೆಯನ್ನು ಬರೆದಿದ್ದಾನೆ ಆದ್ದರಿಂದ ಅವನ ವೃತ್ತಾಂತಕ್ಕೆ ನಾವು ಮಹತ್ವಕೊಡುವದು ಯುಕ್ತವಾಗಿದೆ.

## ಬೌದ್ಧಾಚಾರ್ಯ

ವೆಲನಾಡ ಚೋಳನ ಗುರುವಿನ ಹೆಸರು ಬೌದ್ಧಾಚಾರ್ಯನೆಂದು ಎಲ್ಲ ಗ್ರಂಥಗಳಲ್ಲಿ ಹೇಳಿದೆ. ಆದರೆ ಕೆಲವು ಗ್ರಂಥಗಳಲ್ಲಿ ಅವನು ಜೈನನೆಂದು ಹೇಳಿದೆ. ಆದರೆ ಸೋಮಾರಾಧ್ಯನು ಆತನು ಬೌದ್ಧಮತಸ್ಥನೆಂದು ಹೇಳಿರುವದರಿಂದಲೂ ಅವನ ಹೆಸರಿನ ಮೇಲಿಂದಲೂ ಅವನು ಬೌದ್ಧ ಧರ್ಮೀಯನಿರಬೇಕೆಂದು ತೋರುತ್ತದೆ. ಆಗ ಈ ಭಾಗದಲ್ಲಿ ಅನೇಕ ಬೌದ್ಧಾಲಯಗಳಿದ್ದು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಕಾಲದಲ್ಲಿ ಇಲ್ಲಿ ಬೌದ್ಧರು ಹೆಚ್ಚಾಗಿ ಪ್ರಬಲರಾಗಿರಬಹುದೆಂದು ತೋರುತ್ತದೆ. ಆದರೆ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಅವರನ್ನು ವಾದದಲ್ಲಿ ಸೋಲಿಸಿ ವೀರಶೈವ ಮತವನ್ನು ಈ ಭಾಗದಲ್ಲಿ ಎತ್ತರಿಸಿರಬೇಕೆಂದು ಅವನ ಚರಿತ್ರೆಯಿಂದ ತಿಳಿದುಬರುತ್ತದೆ.

## ಊರ್ಧ್ವ ನೇತ್ರ ಪಂಡಿತಾರಾಧ್ಯ

ಮಲ್ಲಿಕಾರ್ಜುನ ಪಂಡಿತಾರಾಧ್ಯನ ಶಿಷ್ಯನಾದ ರೇವಯ್ಯ ದೇವನು ಬೌದ್ಧಾಚಾರ್ಯನನ್ನು ಕೊಂದನೆಂದು ಬಹುತರ ಎಲ್ಲ ಗ್ರಂಥಗಳಲ್ಲಿ

ಹೇಳಿದೆ. ಹೀಗೆ ಅವನನ್ನು ಕೊಂದದ್ದಕ್ಕೋಸ್ಕರ ವೆಲ್ನಾಡ ಚೋಳನು ಅವನನ್ನು ಬಿಟ್ಟು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಕಣ್ಣುಗಳನ್ನು ಕೀಳಿಸಿದನೆಂತಲೂ, ಕೀಳಿಸಿದರೂ ಅವು ಮತ್ತೆ ಮತ್ತೆ ಬರಹತ್ತಿದ ವೆಂತಲೂ, ಆಗ ಪಂಡಿತಾರಾಧ್ಯನು ಅವು ಪುನಃ ಬಂದುದಾದರೆ ಶಿವಗಣಂಗಳ ಆಣೆ ಎಂದು ಆಣೆ ಇಡಲು ಅವು ಬರುವದು ನಿಂತು ಹೋದವೆಂತಲೂ, ಆದರೂ ಅವು ಅವನ ಮುಖದ ಮೇಲ್ಭಾಗದಲ್ಲಿ ತೋರಿದ್ದರಿಂದ ಪಂಡಿತಾರಾಧ್ಯನಿಗೆ ಉರ್ಧ್ವನೇತ್ರ ಪಂಡಿತಾರಾಧ್ಯನೆಂಬ ಹೆಸರು ಉಂಟಾಯಿತೆಂತಲೂ, ಕೆಲವೆಡೆಗಳಲ್ಲಿ ಉಲ್ಲೇಖಗಳಿವೆ. ಆದರೆ ಬೌದ್ಧಾಚಾರ್ಯನನ್ನು ಕೊಂದ ರೇವಯ್ಯನನ್ನು ಬಿಟ್ಟು ಅರಸನು ಹೀಗೆ ಬೇರೊಬ್ಬನನ್ನು ಶಿಕ್ಷಿಸುವದು ಸಂಭವನೀಯವೆಂದು ತೋರು ವದಿಲ್ಲ. ಆದ್ದರಿಂದ ಈ ಕಥೆಯನ್ನು ನಾವು ಇಲ್ಲಿ ಅನುಸರಿಸದೆ ರೇವ ಯ್ಯನಿಗೆ ಚೋಳನು ಹಿಂಸೆಮಾಡಿದನೆಂಬ ಕಥೆಯನ್ನು ಸ್ವೀಕರಿಸಿದ್ದೇವೆ. ಹೀಗೆ ಕೆಲವು ಗ್ರಂಥಗಳಲ್ಲಿಯೂ ಉಲ್ಲೇಖಗಳಿವೆ.

ನಾವು ಈ ಚರಿತ್ರೆಯಲ್ಲಿ ಚಂದವ್ರೋಲು ಅಥವಾ ಧನದಪುರ ಇವು ಕೃಷ್ಣಾ ಜಿಲ್ಲೆಯಲ್ಲಿವೆ ಎಂದು ಹೇಳಿದ್ದೇವೆ. ಆದರೆ ಅವು ಈಗ ಗುಂಟೂರು ಜಿಲ್ಲೆಯಲ್ಲಿರುತ್ತವೆಂದು ತಿಳಿಯುತ್ತದೆ.

## ಸಮಾಧಿಸ್ಥಳ.

ಮಲ್ಲಿಕಾರ್ಜುನನ ಅಂತ್ಯವು ವೆಲ್ಲಟೂರು, ಅಮರಗುಂಡ, ದ್ರಾಕ್ಷಾ ರಾಮ, ಅಥವಾ ಕೋಟಿಪಲ್ಲಿ ಈ ಸ್ಥಳಗಳಲ್ಲಿ ಅವುದೋ ಒಂದು ಸ್ಥಳ ವಲ್ಲಿ ಆಗಿರಬೇಕೆಂದು ನಮಗೆ ತೋರುತ್ತದೆ. ಅವುಗಳಲ್ಲಿ ನಿಶ್ಚಿತವಾಗಿ ಆವ ಸ್ಥಳದಲ್ಲಿ ಎಂಬುದು ಅಲ್ಲಿಗೆ ಹೋಗಿ ಸಂಶೋಧನ ಮಾಡದ ಹೊರತು ತಿಳಿಯಲಾರದು. ನಮಗೆ ದೊರೆದ ಪಂಡಿತಾರಾಧ್ಯ ಚರಿತ್ರೆ ಯಲ್ಲಿ ಅವನ ಗುರುವಾದ ಕೋಟಿಪಲ್ಲನು ವೆಲ್ಲಟೂರಲ್ಲಿ ಇದ್ದಾಗ ಅಲ್ಲಿಯೇ ಅವನು ಸಮಾಧಿಸ್ಥನಾದನೆಂಬ ಭಾವವು ಉಂಟಾಗುತ್ತದೆ. ಆದರೆ ಅವನು ಶ್ರೀಶೈಲದಲ್ಲಿ ಸಮಾಧಿಸ್ಥನಾದನೆಂದು ಯಾವ ಗ್ರಂಥ ದಲ್ಲಿಯೂ ಹೇಳಿಲ್ಲೆಂಬುದನ್ನು ಲಕ್ಷಿಸತಕ್ಕದ್ದಾಗಿದೆ.

## ರಚಿಸಿದ ಗ್ರಂಥಗಳು.

ನಾವು ಮೇಲೆ ಈ ಚರಿತ್ರೆಯಲ್ಲಿ ಶಿವಸ್ತೋತ್ರ, ಶಿವಾಧಿಕ್ಯ, ಬಸವ ಸ್ತೋತ್ರ, ಭೀಮೇಶ್ವರ ಗದ್ಯ ಮತ್ತು ಶಿವತತ್ವಸಾರ ಈ ಗ್ರಂಥಗಳನ್ನು

ಮಲ್ಲಿಕಾರ್ಜುನ ಪಂಡಿತಾರಾಧ್ಯನು ರಚಿಸಿದನೆಂದು ಬರೆದಿದ್ದೇವೆ.
ಅವನು ಈ ಗ್ರಂಥಗಳನ್ನಷ್ಟೇ ಅಲ್ಲ, ಶ್ರೀಮುಖ ದರ್ಶನ ಗದ್ಯವೆಂಬ
ಗ್ರಂಥವನ್ನು ಸಂಸ್ಕೃತದಲ್ಲಿ, ಹಾಗೆಯೇ ಅವನು ರುದ್ರಮಹಿಮಾ, ಲಿಂಗೋ
ದ್ಭವ ಗದ್ಯ, ಸ್ತುತಿಶ್ಲೋಕ ಪಂಚಕ, ಅಮರೇಶ್ವರಾಷ್ಟಕ, ಪರ್ವತ
ವರ್ಣನೆ, ಸಂಸಾರ ಮಾಯಾಸ್ತವ, ಶಂಕರಗೀತ, ಆನಂದಗೀತ ಎಂಬ
ಗ್ರಂಥಗಳನ್ನು ಕೂಡ ಬರೆದದ್ದು ತಿಳಿದುಬರುತ್ತದೆ

'ನಡುಗುಡೆಂ' ಈ ಗ್ರಾಮವು ಈಗ ಮುನಗಾಲ ಜಮೀನು
ದಾರರ ಗ್ರಾಮಗಳಲ್ಲಿ ಒಂದಾಗಿದೆಂದು ತಿಳಿದುಬರುತ್ತದೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಬಸವೇಶ್ವರನನ್ನು ಕಾಣಲು
ಅಮರಾವತಿ, ನಡುಗುಡು, ಅಲ್ಲಿಂದ ಪಾನುಗಲ್ಲು ಮಾರ್ಗವಾಗಿ ಕಲ್ಯಾ
ಣಕ್ಕೆ ಹೊರಟು ಮಾರ್ಗದಲ್ಲಿ ಅವನಿಗೆ ಮನಿಪುರವೆಂಬ ಗ್ರಾಮವು
ಹತ್ತಿತು. ಅಲ್ಲಿ ಅವನು ಇರುವಾಗ ಬಸವೇಶ್ವರನು ಕೂಡಲಸಂಗಮ
ನಲ್ಲಿ ಐಕ್ಯಹೊಂದಿದನೆಂಬುದು ಅವನಿಗೆ ತಿಳಿಯಿತು. ಆಮೇಲೆ ಪಂಡಿ
ತಾರಾಧ್ಯನು ಶ್ರೀಶೈಲಕ್ಕೆ ಹೋಗಿ ಅಲ್ಲಿಂದ ವೆಲ್ಲಟೂರಿಗೆ ಬಂದನು.
ಬಸವೇಶ್ವರನು ಐಕ್ಯವನ್ನು ಹೊಂದಿದಬಳಿಕ ಅಲ್ಲಮಪ್ರಭು, ಮಹಾ
ದೇವಿಯಕ್ಕ, ರುದ್ರಮುನಿ, ಮುಕ್ತಿಮುನಿ ಮೊದಲಾದವರು ಶ್ರೀಶೈಲ
ದಲ್ಲಿಯೇ ಬಂದು ವಾಸ ಮಾಡಲಿಕ್ಕೆ ಹತ್ತಿದರೆಂದು ತಿಳಿದುಬರುತ್ತದೆ.
ಮಲ್ಲಿಕಾರ್ಜುನ ಪಂಡಿತಾರಾಧ್ಯನು ಹಿಂದಿರುಗಿದ ಕಾಲದಲ್ಲಿ ಒಂದು
ವೇಳೆ ಈ ಶಿವಶರಣ ಶರಣೆಯರು ಅಲ್ಲಿಯೇ ಇದ್ದಿದ್ದಾದರೆ ಅವನು
ಅವರೊಡನೆಯೇ ಶ್ರೀಶೈಲದಲ್ಲಿ ನಿಃಸಂಶಯವಾಗಿ ಉಳಿದುಬಿಡುತ್ತಿದ್ದನು.
ಆದ್ದರಿಂದ ಬಸವೇಶ್ವರನು ಲಿಂಗೈಕ್ಯನಾದ ಬಳಿಕ ಕೆಲವು ಕಾಲಗತಿಸಿರ
ಬೇಕು. ಆಮೇಲೆ ಶಿವಶರಣರು ಶ್ರೀಶೈಲ ಮತ್ತು ಉಳಿವೆಗೆ ಹೋಗಿರ
ಬೇಕೆಂದು ತೋರುತ್ತದೆ ಈ ಮಧ್ಯಕಾಲದಲ್ಲಿ ಚನ್ನಬಸವೇಶ್ವರ, ಮಡಿ
ವಾಳ ಮಾಚಿದೇವ ಇವರು ಶರಣರಿಗೆ ಮುಖ್ಯಸ್ಥರಾಗಿ ಕಲ್ಯಾಣದ
ಲ್ಲಿಯೇ ಕೆಲಕಾಲ ಉಳಿದಿರಬೇಕು. ಆದರೆ ಈ ಕಾಲದಲ್ಲಿ ಮಲ್ಲಿ
ಕಾರ್ಜುನ ಪಂಡಿತಾರಾಧ್ಯನು ಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ ತನ್ನ
ಗ್ರಾಮದ ಕಡೆಗೆಯೇ ತಿರುಗಿಬಂದಿರಬಹುದೆಂದು ತೋರುತ್ತದೆ ಇವನು

ತಿರುಗಿಬಂದಬಳಿಕ ಅಲ್ಲಮಪ್ರಭು, ಮಹಾದೇವಿಯಕ್ಕ, ಮುಕ್ತಿಮುನಿ ಮೊದಲಾದವರು ಶ್ರೀಶೈಲಕ್ಕೆ ಬಂದು ಅಲ್ಲಿ ಆಶ್ರಯಹೊಂದಿರಬೇಕೆಂದು ತೋರುತ್ತದೆ.

## ಆಂಧ್ರರಲ್ಲಿ ಶಿವಶರಣರಿಗೋಸ್ಕರ ಇದ್ದ ಆದರ

ಈ ಪ್ರಕಾರ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಮದ್ರಾಸ ಇಲಾಖೆಯ ಉತ್ತರ ಭಾಗ ಅಂದರೆ ಆಂಧ್ರದೇಶದಲ್ಲಿ ವೀರಶೈವ ಮತವನ್ನು ಪ್ರಸ್ಥಾಪಿಸಿದ್ದಾನೆ. ಈ ಮತದ ನಿಶ್ಚಿತ ಸ್ವರೂಪು ಅಲ್ಲಿ ಹೇಗಿತ್ತೆಂಬುದು ಆಂಧ್ರ ವೀರಶೈವ ಧಾರ್ಮಿಕ ಗ್ರಂಥಗಳು ಪ್ರಕಟವಾದ ಬಳಿಕ ಗೊತ್ತಾಗುವದು. ಆದರೆ ಈ ಕಾಲದಲ್ಲಿ ಇಲ್ಲಿ ಪ್ರಸಿದ್ಧಿಗೆ ಬಂದ ಧಾರ್ಮಿಕ ಪುರುಷರ ಚರಿತ್ರಗಳ ಮೇಲಿಂದ ಅವರೆಲ್ಲರೂ ಬಸವಾದಿ ಪ್ರಮಥರ ಮಾರ್ಗಕ್ಕೆಯೇ ಮಹತ್ವ ಕೊಟ್ಟಿದ್ದು ನಿಃಸ್ಸಂದೇಹವು. ಆದ್ದರಿಂದ ಅವರು ಶಿವಶರಣರ ತತ್ವಗಳನ್ನು ಅನುಸರಿಸಲು ಅಪೇಕ್ಷೆ ಪಟ್ಟು ಅವರಿದ್ದ ಸ್ಥಾನವಾದ ಕಲ್ಯಾಣಕ್ಕೆ ಹೋಗಲಪೇಕ್ಷಿಸುತ್ತಿದ್ದರು. ಅದೇ ಪ್ರಕಾರ ಮಲ್ಲಿಕಾರ್ಜುನಪಂಡಿತಾರಾಧ್ಯನೂ ಬಸವೇಶ್ವರನನ್ನು ಕಾಣಲಿಕ್ಕೆ ಕಲ್ಯಾಣಕ್ಕೆ ಹೊರಟಿದ್ದನು. ಆದರೆ ಅಷ್ಟರಲ್ಲಿಯೇ ಅಲ್ಲಿ ಧಾರ್ಮಿಕ ಕ್ರಾಂತಿಯುಂಟಾದ್ದರಿಂದ ಮತ್ತು ಶಿವಶರಣರೆಲ್ಲ ಆ ಸ್ಥಾನವನ್ನು ಬಿಟ್ಟು ಬೇರೆ ಕಡೆಗೆ ಹೋಗಿಬಿಟ್ಟದ್ದರಿಂದ ಪಂಡಿತಾರಾಧ್ಯನು ಹಿಂದಿರುಗಬೇಕಾಯಿತು.

## ಪಂಡಿತಾರಾಧ್ಯನಿಗೆ ರಾಜರಿಂದ ಉಂಟಾದ ವಿರೋಧಗಳು.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ವೀರಶೈವ ಧರ್ಮ ಪ್ರಸಾರ ಮಾಡುವ ಕಾಲದಲ್ಲಿ ಆತನಿಗೆ ಅನೇಕ ವಿರೋಧಿಗಳು ಉಂಟಾದದ್ದು ಕಂಡು ಬರುತ್ತದೆ. ಈ ಭಾಗದಲ್ಲಿದ್ದ ಬೌದ್ಧರೂ ಪರಮತಸ್ಥರೂ ಆತನನ್ನೂ ಅವನ ಅನುಯಾಯಿಗಳನ್ನೂ ಕೊಂದುಹಾಕಲು ಪ್ರಯತ್ನಿಸಿದರು. ಚಂದವ್ರೋಲು ಮತ್ತು ಪಾನುಗಲ್ಲಿನ ರಾಜರು ಇಂಥವರಿಗೆ ಸಹಾಯಕರಾದರು. ಆದರೆ ಇಷ್ಟರಲ್ಲಿ ಮಲ್ಲಿಕಾರ್ಜುನಪಂಡಿತಾರಾಧ್ಯನು ಪ್ರಚಾರ ಮಾಡಿದ ತತ್ವಗಳು ಜನರಲ್ಲಿ ನಿಬಿಡವಾಗಿ ಹಬ್ಬಿದ್ದವು. ಆದ್ದರಿಂದ ಜನರು ಮಲ್ಲಿಕಾರ್ಜುನ ಪಂಡಿತಾರಾಧ್ಯನಿಗೆ ಸಹಾಯಕರಾಗಿ ನಿಂತರು. ಆಗ ಉಭಯ ಪಕ್ಷಗಳಲ್ಲಿ ಕಾಳಗಗಳಾದವು. ರಕ್ತ

ನಾಶವಾಯಿತು. ಇದರ ಪರಿಣಾಮವಾಗಿ ಅಲ್ಲಿದ್ದ ಆ ಎರಡೂ ರಾಜ್ಯಗಳು ಮಣ್ಣು ಮುಕ್ಕಿದವು. ಈ ಪ್ರಕಾರ ಆಂಧ್ರ ನಾಡಿನಲ್ಲಿ ಶಿವಶರಣರು ಕಡೆಗೆ ಜಯಶೀಲರಾಗಿ ವೀರಶೈವ ಧರ್ಮವನ್ನು ಪ್ರಸ್ಥಾಪಿಸಿದ್ದಾರೆ.

## ವೀರಶೈವರಿಗೆ ವಿಪತ್ಕಾಲ

ಒಟ್ಟಿಗೆ ಈ ಕಾಲದಲ್ಲಿ ವೀರಶೈವ ಸಮಾಜಕ್ಕೆ ಕರ್ನಾಟಕ ಮತ್ತು ಆಂಧ್ರ ದೇಶಗಳಲ್ಲಿ ಒಂದು ವಿಪತ್ಕಾಲವು ಪ್ರಾಪ್ತವಾಗಿತ್ತೆಂಬುದು ನಿಃಸಂಶಯವು. ಪರವಾದಿಗಳು ವೀರಶೈವ ಧರ್ಮವನ್ನು ಸಂಪೂರ್ಣ ನಾಶ ಮಾಡುವ ಪ್ರಯತ್ನದಲ್ಲಿ ತೊಡಗಿದ್ದರು. ಇದರಲ್ಲಿ ಅವರಿಗೆ ಆಗಿನ ರಾಜರೂ ಬೆಂಬಲ ಕೊಟ್ಟರು. ಆದರೆ ಅಷ್ಟರಲ್ಲಿ ಶಿವಶರಣರ ವಿಶಾಲ ತತ್ವಗಳು ಜನಸಮುದಾಯದಲ್ಲಿ ಪ್ರಚಾರವಾಗಿದ್ದವು. ಇದರಿಂದ ಬಹುಜನಸಮಾಜವು ಶಿವಶರಣರನ್ನು ಪುರಸ್ಕರಿಸಿತು. ಈ ಸ್ಥಿತಿಯುಂಟಾದ್ದರಿಂದಲೇ ವೀರಶೈವ ಧರ್ಮವು ಕರ್ನಾಟಕ ಆಂಧ್ರ ದೇಶಗಳಲ್ಲಿ ಚಿರಸ್ಥಾಯಿಯಾಗಿ ಉಳಿಯಿತು. ಇಲ್ಲದಿದ್ದರೆ ಬಸವೇಶ್ವರನ ಕಾಲದಲ್ಲಿಯೇ ಅದು ನಾಶವಾಗಿ ಹೋಗುವ ಪರಿಸ್ಥಿತಿಯು ಅದಕ್ಕೆ ಉಂಟಾಗಿತ್ತು.

## ಪಂಡಿತಾರಾಧ್ಯನು ಸಿಂಹಾಸನಾಧಿಪತಿಯೋ ಹೇಗೆ?

ವೀರಶೈವ ಸಮಾಜದಲ್ಲಿ ಶ್ರೀಶೈಲ, ಉಜ್ಜಿನಿ, ಬಾಳೇಹಳ್ಳಿ, ಕಾಶೀ ಮತ್ತು ಕೇದಾರ ಈ ಸ್ಥಳಗಳಲ್ಲಿ ಪಂಚಾಚಾರ್ಯರು ಉದ್ಭವಿಸಿ ಅಲ್ಲಿ ಸಿಂಹಾಸನಗಳನ್ನು ಸ್ಥಾಪಿಸಿ ವೀರಶೈವ ಮತಸ್ಥಾಪಕರಾದರೆಂಬ ತಿಳುವಳಿಕೆಯು ಈಗಲೂ ಇರುತ್ತದೆ. ಇವುಗಳಲ್ಲಿ ಅನುಕ್ರಮವಾಗಿ ಪಂಡಿತಾರಾಧ್ಯ, ಮರುಳಾರಾಧ್ಯ, ರೇವಣಾರಾಧ್ಯ, ವಿಶ್ವಾರಾಧ್ಯ ಮತ್ತು ಏಕೋರಾಮಾರಾಧ್ಯ ಇವರು ಉದಯವಾಗಿ ತಮ್ಮ ತಮ್ಮ ಸಂಸ್ಥಾನಗಳನ್ನು ಸ್ಥಾಪಿಸಿ ಯುಗ ಯುಗಾಂತರಗಳಲ್ಲಿ ವೀರಶೈವ ಸಮಾಜಕ್ಕೆಲ್ಲ ಜಗದ್ಗುರುಗಳಾದರೆಂತಲೂ ಅವರ ಮೂಲಕ ನಾಡಿನಲ್ಲೆಲ್ಲ ಅನಂತ ಮಠಗಳು ಉತ್ಪನ್ನವಾದವೆಂತಲೂ ನಂಬುಗೆಯು ಇರುತ್ತದೆ. ಈ ತಿಳುವಳಿಕೆಯ ಪ್ರಕಾರ ಪಂಡಿತಾರಾಧ್ಯನು ಶ್ರೀಶೈಲದಲ್ಲಿ ಜಗದ್ಗುರು ಮಠವನ್ನು ಸ್ಥಾಪಿಸಿ ಸಮಾಜದಲ್ಲಿ ವೀರಶೈವ ಮತವನ್ನು ನೆಲೆಗೊಳಿಸಿದನೆಂದು ನಾವು ನಂಬಬೇಕಾಗುತ್ತದೆ. ಆದರೆ ಪಂಡಿತಾರಾಧ್ಯನ ಚರಿತ್ರೆಯನ್ನು ನಾವು ನೋಡಿದಲ್ಲಿ ಈ ವಿಧಾನಗಳನ್ನು ಸಮರ್ಥಿಸುವ

ವಿಷಯಗಳು ಅದರಲ್ಲಿ ಕಂಡು ಬರುವದಿಲ್ಲ. ಅವನು ತನ್ನ ಜೀವಿತದಲ್ಲಿ ತಾನು ಕೇವಲ ಬಸವೇಶ್ವರನ ಒಬ್ಬ ಅನುಯಾಯಿ ಎಂತಲೇ ಭಾವಿಸಿ ವರ್ತಿಸಿದ್ದು ಕಂಡುಬರುತ್ತದೆ. ಅವನು ತನ್ನ ಯೋಗ್ಯತೆಯು ಬಸವೇಶ್ವರನಕಿಂತಲೂ ಹೆಚ್ಚಿನದೆಂದು ಭಾವಿಸಿ ಎಂದೂ ವರ್ತಿಸಿಲ್ಲ. ಅವನು ಅವನಿಗೋಸ್ಕರ ಅತ್ಯಂತ ಭಕ್ತಿಭಾವವನ್ನು ತಾಳಿ ಅವನನ್ನು ಕಾಣಬೇಕೆಂದು ಕಲ್ಯಾಣಕ್ಕೆ ಹೊರಡುತ್ತಾನೆ. ಅವನು ಪದೇ ಪದೇ ಬಸವೇಶ್ವರನನ್ನು ಸ್ತೋತ್ರಮಾಡುತ್ತಾನೆ. ಅಲ್ಲದೆ ಅವನ ವಿಷಯವಾಗಿ ಸ್ತೋತ್ರಪದಗಳನ್ನೂ ರಚಿಸಿದ್ದಾನೆ. ಇವನು ಇಡೀ ವೀರಶೈವ ಸಮಾಜಕ್ಕೆಲ್ಲ ತಾನು ಒಬ್ಬ ಜಗದ್ಗುರು ಎಂದು ಭಾವಿಸಿ ವರ್ತಿಸಿಲ್ಲ. ತಾನು ಬಸವೇಶ್ವರನ ಒಬ್ಬ ಕಿಂಕರನೆಂದು ಭಾವಿಸಿಕೊಂಡು ವರ್ತಿಸಿದ್ದಾನೆ. ಆದ್ದರಿಂದ ಈಗ ಜನರು ತಿಳಿದಂತೆ ಮಲ್ಲಿಕಾರ್ಜುನ ಪಂಡಿತಾರಾಧ್ಯನು ಜಗದ್ಗುರುತ್ವದ ಸ್ಥಾನವನ್ನು ಹೊಂದಿ ವೀರಶೈವ ಮತವನ್ನು ಪ್ರಸ್ಥಾಪಿಸಿದನೆಂದು ತಿಳಿಯಲು ಬರಲಾರದು.

ಮಲ್ಲಿಕಾರ್ಜುನ ಪಂಡಿತಾರಾಧ್ಯನ ಚರಿತ್ರೆಯನ್ನು ನಾವು ನಿರೀಕ್ಷಿಸಿದಲ್ಲಿ ಅವನು ಶ್ರೀಶೈಲದಲ್ಲಿ ಹುಟ್ಟಿದ್ದು ಕಂಡುಬರುವದಿಲ್ಲ. ಅವನು ಅಲ್ಲಿಗೆ ಕೆಲವು ಬಾರಿ ಹೋಗಿದ್ದರೂ ಆ ಸ್ಥಾನವನ್ನು ಅವನು ತನ್ನ ಸ್ಥಾಯಿಕ ಪೀಠವನ್ನಾಗಿ ಮಾಡಿಕೊಂಡಿಲ್ಲ. ಅವನು ಅಲ್ಲಿ ಬಹಳ ದಿವಸ ಸಹ ವಾಸ ಮಾಡಿದಂತೆ ತೋರುವದಿಲ್ಲ. ಅದರ ಬದಲು ಅವನು ದ್ರಾಕ್ಷಾರಾಮ ಅಥವಾ ಅಮರಗುಂಡ ಈ ಸ್ಥಳಗಳಲ್ಲಿ ವಾಸಿಸಿದ್ದು ಕಂಡುಬರುತ್ತದೆ. ಅವನು ಈ ಗ್ರಾಮಗಳಲ್ಲಿಯೇ ಇದ್ದುಕೊಂಡು ಧರ್ಮಬೋಧೆಯನ್ನು ಮಾಡುತ್ತ ಬಂದಿದ್ದಾನೆ. ಈ ಅಂಶಗಳು ಅವನ ಚರಿತ್ರೆಯಲ್ಲಿ ಹೊರಪಡುತ್ತವೆ. ಆದ್ದರಿಂದ ಅವನು ಶ್ರೀಶೈಲ ಸಿಂಹಾಸನವನ್ನು ಸ್ಥಾಪಿಸಿದನೆಂಬ ಸಂಗತಿಯು ದೃಢಪಡುವದಿಲ್ಲ.

ಅವನಕಿಂತಲೂ ಮೊದಲು ಆಂಧ್ರದೇಶದಲ್ಲಿ ಶ್ರೀಪತಿ ಪಂಡಿತಾರಾಧ್ಯ ಮೊದಲಾದವರು ಉದ್ಭವಿಸಿ ವೀರಶೈವ ಮತವನ್ನು ಪ್ರಚಾರಗೊಳಿಸಿದ್ದರು. ಇದು ಇವರ ಚರಿತ್ರೆಗಳಿಂದ ತಿಳಿದುಬರುತ್ತದೆ. ಆದ್ದರಿಂದ ಪಂಡಿತಾರಾಧ್ಯನಕಿಂತಲೂ ಮೊದಲು ವೀರಶೈವ ಸಮಾಜವು ಈ ಭಾಗದಲ್ಲಿ ಸ್ಥಾಪಿತವಾಗಿದ್ದರಿಂದ ಅವನು ಮೂಲ ಸಿಂಹಾಸನಕರ್ತನೆಂದು ತಿಳಿಯಲು ಬರಲಾರದು. ಅವನು ಜನಿಸಿದ ಬಳಿಕ ಬೇರೆ

ವೀರಶೈವರಂತೆ ಕೋಟಿಪಲ್ಯಾರಾಧ್ಯ ಎಂಬ ಗುರುವಿನ ಕಡೆಯಿಂದ ವೀರಶೈವ ದೀಕ್ಷೆಯನ್ನು ಹೊಂದಿದ್ದಾನೆ. ಆದರೆ ಜಗದ್ಗುರುತ್ವವನ್ನು ಹೊಂದಿ ಮಠಸ್ಥಾಪಕನಾದವನಲ್ಲಿ ಈ ರೀತಿಯು ಉಂಟಾಗುವದು ಸಂಭವನೀಯವಲ್ಲ.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಅವಿವಾಹಿತನಾಗಿರಲಿಲ್ಲ. ಅವನಿಗೆ ಹೆಂಡಿರು ಮಕ್ಕಳಿದ್ದರು. ಅವನು ಶಿವಸಾಧಿಷ್ಠನಾದ ಬಳಿಕ ಅವನ ಹಿರಿಯ ಮಗನಾದ ಕೇದಾರ ದೇಶಿಕನಿಗೆ ಭಕ್ತರೆಲ್ಲರೂ ಕೂಡಿ ಗುರುಪಟ್ಟವನ್ನು ಕಟ್ಟಿದರು. ಈ ಕೇದಾರ ದೇಶಿಕನಾದರೂ ವಿವಾಹಿತನಾಗಿದ್ದನು. ಆದ್ದರಿಂದ ಅವನ ಸಂತತಿಯವರು ಮಲ್ಲಿಕಾರ್ಜುನ ಪಂಡಿತಾರಾಧ್ಯನ ಮೂಲಕ ಉಂಟಾದ ಪೀಠಕ್ಕೆ ಅಧಿಕಾರಿಗಳಾಗುತ್ತ ಬಂದರು. ಆದರೂ ಅವರಲ್ಲಿ ಯಾರಿಗೂ ಶ್ರೀಶೈಲ ಸಿಂಹಾಸನ ಸ್ಥಾಪಕರೂ ಜಗದ್ಗುರುಗಳೂ ಎಂಬ ಹೆಸರು ಉಂಟಾದದ್ದು ಕಂಡು ಬರುವದಿಲ್ಲ. ಈ ಬಗೆಯ ವಿಚಾರಗಳು ಹಿಂದುಗಡೆ ಸಮಾಜದಲ್ಲಿ ಉಂಟಾದಂತೆ ನಮಗೆ ತೋರುತ್ತದೆ

ಅನೇಕರು ಶ್ರೀಶೈಲದಲ್ಲಿ ಸಿಂಹಾಸನ ಮಠವನ್ನು ಸ್ಥಾಪಿಸಿದ ಪಂಡಿತಾರಾಧ್ಯನು ಈ ಚರಿತ್ರೆಯಲ್ಲಿ ಹೇಳಿದ ಪಂಡಿತಾರಾಧ್ಯನಲ್ಲ, ಆತನು ಬೇರೊಬ್ಬ ಪುರಾತನ ಕಾಲದ ಪಂಡಿತಾರಾಧ್ಯನೆಂದು ಪ್ರತಿಪಾದಿಸುವದುಂಟು. ಆದರೆ ಈ ಪುರಾತನ ಪಂಡಿತಾರಾಧ್ಯನ ವಿವರಗಳು ವೀರಶೈವ ವಾಙ್ಮಯದಲ್ಲಿ ನಮಗೆಲ್ಲಿಯೂ ದೊರೆತಿರುವದಿಲ್ಲ. ಅವು ಬೇರೆ ಯಾರಿಗಾದರೂ ತಿಳಿದಿದ್ದರೆ ಅವರು ಅವುಗಳನ್ನು ಅವಶ್ಯವಾಗಿ ಪ್ರಕಟಿಸಬೇಕು. ಇದರಿಂದ ವೀರಶೈವ ಧರ್ಮದ ಉಗಮದ ಮೇಲೆ ಮಹತ್ವದ ಪ್ರಕಾಶವು ಬೀಳದೆ ಇರಲಾರದು.

ಆದರೆ ವೀರಶೈವ ವಾಙ್ಮಯದಲ್ಲಿ ಪ್ರಸಿದ್ಧಿಗೆ ಬಂದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಯೋಗ್ಯತೆಯು ಅತ್ಯಂತ ದೊಡ್ಡದೆಂಬುದು ನಿಃಸಂಶಯವು. ಅವನು ವೀರಶೈವ ಮತವನ್ನು ಆಂಧ್ರ ದೇಶದಲ್ಲಿ ಪ್ರಸಾರಗೊಳಿಸಿದನು. ಅವನು ನಿಜವಾಗಿ ಪಂಡಿತನೂ ಅನುಭಾವಿಯೂ ಆಗಿದ್ದನು. ಅವನು ಇಲ್ಲಿಯ ವೀರಶೈವ ಸಮಾಜದಲ್ಲಿ ಅನೇಕ ಕ್ರಾಂತಿಕಾರಕ ಕಾರ್ಯಗಳನ್ನು ಮಾಡಿದನು. ಅವನು ತನ್ನ ಪ್ರಚಾರ ಕಾರ್ಯ

ಗಳನ್ನು ಮಾಡಿದನು. ಅವನು ತನ್ನ ಪ್ರಚಾರ ಕಾರ್ಯದಲ್ಲಿ ಹಿಂಸೆಯನ್ನು ಹೊಂದಿದ್ದಾನೆ. ಅವನು ಧರ್ಮಕ್ಕೋಸ್ಕರ ಕಷ್ಟಪಟ್ಟಿದ್ದಾನೆ. ಅವನು ವೀರಶೈವ ಸಮಾಜದಲ್ಲಿ ನಿಜವಾಗಿ ಆಗಿ ಹೋದ ಐತಿಹಾಸಿಕ ಪುರುಷನು. ಅವನು ಕಾಲ್ಪನಿಕ ಪುರುಷನಲ್ಲ. ಆದ್ದರಿಂದ ಅವನು ವೀರಶೈವರೆಲ್ಲರಿಗೂ ಪೂಜ್ಯನು, ವಂದ್ಯನು ಎಂದು ನಾವು ಭಾವಿಸಿ ಅವನನ್ನು ವೀರಶೈವ ಮಹಾಪುರುಷರಲ್ಲಿ ಅನನ್ಯನಾಗಿ ಗಣಿಸಲೇ ಬೇಕು.

---

## ಪಾಲ್ಕುರಿಕೆ ಸೋಮೇಶ್ವರ.

ಪಾಲ್ಕುರಿಕೆ ಸೋಮೇಶ್ವರನು ಆಂಧ್ರ ಮತ್ತು ಕನ್ನಡ ವಾಙ್ಮಯದಲ್ಲಿ ಉಚ್ಚ ಸ್ಥಾನವನ್ನು ಹೊಂದಿದ್ದಾನೆ. ಅವನ ಗ್ರಾಮವು ಪಾಲ್ಕುರಿಕೆ ಅಥವಾ ಹಾಲುಕುರಿಕೆ ಎಂಬುದಾಗಿದೆ ಇದು ಮೈಸೂರು ಸಂಸ್ಥಾನದ ತುಮಕೂರು ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರಕ್ಕೆ ಸಮೀಪವಾಗಿರುತ್ತದೆ. ಅದು ಈಗ ಒಂದು ಚಿಕ್ಕ ಗ್ರಾಮವಾಗಿದೆ. ಆದರೆ ಹಿಂದಿನ ಕಾಲದಲ್ಲಿ ಇದು ಅತ್ಯಂತ ವಿಖ್ಯಾತಿಯನ್ನು ಹೊಂದಿದ ಪಟ್ಟಣವಾಗಿತ್ತು. ಅದು ಈಗ ಕನ್ನಡ ಭಾಷೆ ಇದ್ದ ಪ್ರದೇಶದಲ್ಲಿದ್ದರೂ, ಅದಕ್ಕೆ ಸಮೀಪ ವರ್ತಿಯಾಗಿ ಆಂಧ್ರ ದೇಶವಿರುತ್ತದೆ. ಅನಂತಪುರ, ಕಡಪಾ ಮತ್ತು ಉತ್ತರ ಅರ್ಕಾಟ ಜಿಲ್ಲೆಗಳು ಪಾಲ್ಕುರಿಕೆ ಇದ್ದ ಭಾಗವನ್ನು ಸುತ್ತಲೂ ಆವರಿಸಿರುತ್ತವೆ. ಇದರಿಂದ ಇದು ಕರ್ನಾಟಕದ ಮೇರೆಯ ಪ್ರದೇಶವೆಂದು ಹೇಳಬಹುದು.

ಆದರೆ ದಿವಂಗತ ಆರ್ ನರಸಿಂಹಾಚಾರ್ಯರು ಪಾಲ್ಕುರಿಕೆಯು ಗೋದಾವರೀ ಜಿಲ್ಲೆಯಲ್ಲಿರುತ್ತದೆಂದು ತಮ್ಮ ಕವಿಚರಿತೆಯಲ್ಲಿ ಹೇಳಿದ್ದಾರೆ. ಆದರೆ ಈ ಜಿಲ್ಲೆಯಲ್ಲಿ ಈ ಹೆಸರಿನ ಗ್ರಾಮವೇ ಇಲ್ಲ. ಸೋಮನಾಥ ಪುರಾಣವನ್ನು ರಚಿಸಿದ ತೋಂಟದ ಸಿದ್ಧಲಿಂಗ ದೇಶಿಕನು ಈ ಗ್ರಾಮವು ಶ್ರೀಶೈಲದ ಈಶಾನ್ಯದಿಕ್ಕಿನಲ್ಲಿದೆ ಎಂದು ತನ್ನ ಕಾವ್ಯದಲ್ಲಿ ಬರೆದಿದ್ದಾನೆ. ಆದರೆ ಹೈದರಾಬಾದ ಸಂಸ್ಥಾನದಲ್ಲಿ ಈ ಹೆಸರಿನ ಯಾವ ಗ್ರಾಮವೂ ಇರುವದಿಲ್ಲ. ಪಾಲುಕುರಿಕೆ ಅಥವಾ ಹಾಲುಕುರಿಕೆ ಈ ಶಬ್ದವು ಆಂಧ್ರ ಭಾಷೆಯದಿರದೆ ಕನ್ನಡವಾಗಿದೆಂಬುದು ಅವರ ಶಬ್ಧಗಳಿಂದ ಸ್ಪಷ್ಟವಿದೆ.

ಆದ್ದರಿಂದ ಈ ಹೆಸರಿನ ಗ್ರಾಮವು ಕರ್ನಾಟಕದಲ್ಲಿಯೇ ಇರಬೇಕು. ಆದರೆ ಅದನ್ನು ಹುಡಿಕಿದರೆ ಇದೊಂದೇ ಗ್ರಾಮವಿಲ್ಲಿರುವದು ಕಂಡು ಬರುತ್ತದೆ. ಆದ್ದರಿಂದ ಪಾಲ್ಕುರಿಕೆಯು ತುಮಕೂರು ಜಿಲ್ಲೆಯ ಗ್ರಾಮವೆಂದು ನಾವು ತಿಳಿಯಬೇಕಾಗುತ್ತದೆ. ಇಲ್ಲಿ ಸೋಮನಾಥ ದೇವಾಲಯವೂ ಉಂಟು.

ಪಾಲ್ಕುರಿಕೆಯು ಇದ್ದ ಪ್ರದೇಶವು ವೀರಶೈವೇತಿಹಾಸದಲ್ಲಿ ಯಾವಾಗಲೂ ಅತ್ಯಂತ ಪ್ರಸಿದ್ಧವಾಗಿರುತ್ತದೆ. ಪಾಲ್ಕುರಿಕೆಯಲ್ಲಿ ಬಸವೇಶ್ವರನ ಕಾಲದಲ್ಲಿದ್ದ ರೇಮನಾರಾಧ್ಯನು ಬಹು ಪ್ರಸಿದ್ಧಿಗೆ ಬಂದಿದ್ದನು. ಅವನಂತೆಯೇ ಕದಿರಿಯ ರೆಮ್ಮಯ್ಯ, ಬಿಜ್ಜಾವರದ ಅಮ್ಮವ್ವೆ ಅಥವಾ ಬಿಜ್ಜಾಂಬಿಕೆ ಈ ಶಿವಶರಣ ಶರಣೆಯರು ಈ ಭಾಗದವರೇ ಇರುತ್ತಾರೆ. ಅಲ್ಲದೆ ಈ ಭಾಗಕ್ಕೆ ಸಮೀಪವರ್ತಿಯಾಗಿ ಸಿದ್ಧಗಂಗೆ, ಕಕುದ್ಗಿರಿ, ಮೊದಲಾದ ಪ್ರಸಿದ್ಧ ವೀರಶೈವ ಕ್ಷೇತ್ರಗಳೂ ಉಂಟು. ಸ್ವಲ್ಪ ದೂರದಲ್ಲಿ ಬಳ್ಳಿಗಾವಿಯೂ ಇದೆ. ಈ ಪ್ರಕಾರ ವೀರಶೈವ ಸಂಸ್ಕೃತಿಯನ್ನು ರಕ್ಷಿಸಿದ ಅನೇಕ ಮಹಾತ್ಮರೂ ಪ್ರಸಿದ್ಧ ಗ್ರಂಥಕಾರರೂ, ಕವಿಗಳೂ ಈ ಭಾಗದಲ್ಲಿ ಆಗಿ ಹೋಗಿದ್ದಾರೆ.

ಈ ಕಾಲದಲ್ಲಿ ಕಲ್ಯಾಣ, ಕಂಚೀಪುರ, ಶ್ರೀಶೈಲ ಮತ್ತು ಓರುಗಲ್ಲು ಇವು ಅತ್ಯಂತ ಮಹತ್ವದ ಐತಿಹಾಸಿಕ ಸ್ಥಳಗಳು. ಈ ಸ್ಥಳಗಳಲ್ಲಿ ಅನೇಕ ವಿದ್ವಾಂಸರು ಉದಯವಾಗಿ ಅವರು ಆಗಿಂದಾಗ್ಗೆ ಆಯಾ ರಾಜರ ಆಸ್ಥಾನಗಳಿಗೆ ಹೋಗಿ ಧರ್ಮ ಚರ್ಚೆ ಮಾಡುತ್ತಾ ಇದ್ದುದು ಕಂಡು ಬರುತ್ತದೆ. ಈ ಪಟ್ಟಣಗಳಿಗೆ ಪಾಲ್ಕುರಿಕೆ ಇದ್ದ ಪ್ರದೇಶವು ಮಧ್ಯವರ್ತಿಯಾಗಿದ್ದು ಇದರೊಳಗಿಂದಲೇ ಹಾಯ್ದು ಆಯಾ ರಾಜಧಾನಿಗಳಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಅವುಗಳಲ್ಲಿ ನಡೆಯುತ್ತಿದ್ದ ಧಾರ್ಮಿಕ ಚಟುವಟಿಕೆಗಳು ಇಲ್ಲಿದ್ದವರ ಮೇಲೂ ಸ್ವಾಭಾವಿಕವಾಗಿ ಪರಿಣಾಮ ಮಾಡುವದರಿಂದ ಇಲ್ಲಿಯೂ ಅನೇಕ ಜನ ಶಿವಶರಣ ಶರಣೆಯರು ಆಗಿ ಹೋಗಿದ್ದಾರೆ.

ಸೋಮನಾಥನು ಉದಯವಾದ ಕಾಲದಲ್ಲಿ ಈ ಭಾಗವು ಗಣಪುರ ಎಂಬ ಗ್ರಾಮದ ಅರಸನ ಅಧೀನದಲ್ಲಿತ್ತು. ಆದರೆ ಈ ಗಣಪುರವು ಎಲ್ಲಿದೆ ಎಂಬುದು ನಮಗೆ ತಿಳಿದುಬಂದಿಲ್ಲ. ಈ ಅರಸನ ಹೆಸರು ಜನದೇಶವಲ್ಲನೆಂಬುದಾಗಿತ್ತು.

ಈ ಪಾಲ್ಕುರಿಕೆ ಗ್ರಾಮದಲ್ಲಿ ರಾಮಿತಂದೆ ಅಥವಾ ರಾಮಿದೇವಯ್ಯನೆಂಬ ಶಿವಶರಣನು ವಾಸ ಮಾಡುತ್ತಿದ್ದನು. ಅವನ ಹೆಂಡತಿಯ ಹೆಸರು ಮಹಾದೇವಿಯಮ್ಮ. ಆಕೆಗೆ ಮಕ್ಕಳಿಲ್ಲದ್ದರಿಂದ ಅವಳು ಪುತ್ರಾಪೇಕ್ಷೆಯಿಂದ ಸೋಮನಾಥನನ್ನು ದಿನಾಲು ಭಜಿಸುತ್ತ ಇದ್ದಳು. ಇದರಿಂದ ಅವಳು ಗರ್ಭಿಣಿಯಾಗಿ ಒಂದು ಗಂಡು ಮಗುವನ್ನು ಹೆತ್ತಳು. ಅವನೇ ಸೋಮನಾಥನು. ಅವನು ಸೋಮನಾಥನ ದಯೆಯಿಂದ ಹುಟ್ಟಿದ್ದರಿಂದ ತಾಯಿತಂದೆಗಳು ಅವನಿಗೆ ಸೋಮನಾಥ ಅಥವಾ ಸೋಮೇಶ್ವರನೆಂದು ನಾಮಕರಣ ಮಾಡಿದರು.

ಪಾಲ್ಕುರಿಕೆಯಲ್ಲಿ ಬಸವೇಶ್ವರನ ಕಾಲದಲ್ಲಿ ಅನೇಕ ಪವಾಡಗಳನ್ನು ಮಾಡಿ ಪ್ರಸಿದ್ಧಿಗೆ ಬಂದ ವೇಮಯ್ಯನು, ಅಥವಾ ವೇಮನಾರಾಧ್ಯನು ವಾಸಿಸಿದ್ದನು. ಅವನಿಗೆ ಲಿಂಗಣಾರಾಧ್ಯ ಅಥವಾ ಗುರುಲಿಂಗಾರ್ಯ ಎಂಬ ಮಗನಿದ್ದನು. ಈ ಗುರುಲಿಂಗಾರ್ಯನ ಹೆಂಡತಿಯ ಹೆಸರು ಮಂಗಳಾಂಬೆಯು. ಅವರಿಗೆ ಚತುರ್ಮುಖ ಬಸವ ಅಥವಾ ಬಸವೇಶನೆಂಬ ಮಗನು ಹುಟ್ಟಿದನು. ಅವನು ತನ್ನ ತಂದೆ ಮತ್ತು ಅಜ್ಜನಂತೆ ಶ್ರೇಷ್ಠ ಶಿವಾನುಭವಿಯಾಗಿದ್ದನು. ಅವನೇ ಸೋಮಾರಾಧ್ಯನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟನು. ಸೋಮಾರಾಧ್ಯನು ಅವನ ನಿದರ್ಶನದಲ್ಲಿ ಶೈವಾಗಮಗಳು, ಚತುರ್ವೇದಗಳು, ಉಪನಿಷತ್ತುಗಳು ಮೊದಲಾದ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಶ್ರೇಷ್ಠ ಪಂಡಿತನೆಂದು ನಾಡಿನಲ್ಲಿ ಪ್ರಸಿದ್ಧಿಗೆ ಬಂದನು.

ಈ ಕಾಲದಲ್ಲಿ ಕಟ್ಟಕೂರ ಪೋತಿದೇವಯ್ಯನೆಂಬವನು ಈ ಭಾಗದಲ್ಲಿ ಲಿಂಗಾಂಗ ಸಾಮರಸ್ಯದ ರೀತಿಯನ್ನು ಚನ್ನಾಗಿ ತಿಳಿದವನಾಗಿದ್ದನು. ಸೋಮಾರಾಧ್ಯನು ಅವನಿಂದಲೂ ವೀರಶೈವಾಚರಣೆಯನ್ನು ತಿಳಿದುಕೊಂಡು ಆಚರಿಸುವವನಾದನು. ಕೆಲವು ಗ್ರಂಥಗಳಲ್ಲಿ ಈತನೇ ಸೋಮಾರಾಧ್ಯನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟನೆಂದು ಹೇಳಿದೆ. ಆದರೆ ವೇಮನಾರಾಧ್ಯನ ಮೊಮ್ಮಗನಿಂದ ಸೋಮನಾಥನು ದೀಕ್ಷೆಹೊಂದಿದನೆಂದು ಅನೇಕ ಗ್ರಂಥಗಳಲ್ಲಿ ಹೇಳಿರುವದರಿಂದ ಈ ವಿಷಯದ ಸತ್ಯತೆಯನ್ನು ನಾವು ನಂಬಬೇಕಾಗುತ್ತದೆ. ಕೆಲವು ಗ್ರಂಥಗಳಲ್ಲಿ ಸೋಮನಾಥನು ವೇಮನಾರಾಧ್ಯನ ಮೊಮ್ಮಗನೆಂತಲೂ ಹೇಳಿದೆ. ಆದರೆ ಇದು ಸಂಶಯಾಸ್ಪದವಾಗಿದೆ. ಆದ್ದರಿಂದ ಅದನ್ನು ನಾವು ಅನುಸರಿಸಿಲ್ಲ.

ಈ ಕಾಲದಲ್ಲಿ ಕರ್ನಾಟಕದಲ್ಲಿ ಜೈನ, ವೈಷ್ಣವ ಸಮಾಜಗಳು ಬಹು ಮಹತ್ವದವಾಗಿದ್ದವು. ಅಲ್ಲದೆ ಬಹು ಜನ ಸಿದ್ಧರೂ ಯೋಗಾಭ್ಯಾಸಿಗಳೂ ಈ ನಾಡಿನಲ್ಲಿ ವಾಸವಾಗಿದ್ದರು. ಇವರಲ್ಲಿ ದೇವರ ಸ್ವರೂಪವಾವುದು ಮತ್ತು ದೇವರಾರು ಎಂಬುದರ ವಿಷಯವಾಗಿ ಆಗಿಂದಾಗ್ಗೆ ವಾಗ್ವಾದಗಳು ಉಂಟಾಗುತ್ತಿದ್ದವು. ಇವುಗಳಲ್ಲಿ ಸೋಮಾರಾಧ್ಯನು ಮುಂದಾಗಿ ವೀರಶೈವ ಮತದ ತತ್ವಗಳನ್ನು ಜನರಲ್ಲಿ ಪ್ರಸ್ಥಾಪಿಸುತ್ತ ಇದ್ದುದು ಅವನ ಚರಿತ್ರೆಯಲ್ಲಿ ಕಂಡು ಬರುತ್ತದೆ. ಈ ಕಾರ್ಯವನ್ನು ಅವನು ಕಡೆಯುವರೆಗೂ ಮಾಡುತ್ತ ಬಂದದ್ದರಿಂದ ಅವನು ವೀರಶೈವೇತಿಹಾಸದಲ್ಲಿ ಬಹು ಪ್ರಸಿದ್ಧನಾಗಿದ್ದಾನೆ.

ಪಾಲ್ಕುರಿಕೆ ಸೋಮಾರಾಧ್ಯನು ಆಂಧ್ರ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ದೊಡ್ಡ ವಿದ್ವಾಂಸನಾಗಿದ್ದನು. ಅವನು ಈ ಭಾಷೆಗಳಲ್ಲಿರುವ ವಾಙ್ಮಯವನ್ನು ಚನ್ನಾಗಿ ಅಭ್ಯಾಸ ಮಾಡಿದ್ದನು. ಈ ಎಲ್ಲ ಭಾಷೆಗಳಲ್ಲಿ ಅವನು ಅನೇಕ ಗ್ರಂಥಗಳನ್ನು ಬರೆದಿದ್ದಾನೆ. ಅವು ಈಗಲೂ ಪಂಡಿತರಿಗೆ ಮಾನ್ಯವಾಗಿರುತ್ತವೆ. ಈ ಗ್ರಂಥಗಳಲ್ಲಿ ಗಣ ಸಹಸ್ರ ನಾಮಾವಳಿ, ಪಂಡಿತಾರಾಧ್ಯ ಚರಿತ್ರೆ, ಬಸವ ಪುರಾಣ ಇವು ವೀರಶೈವ ಪುರಾತನ ಇತಿಹಾಸದ ದೃಷ್ಟಿಯಿಂದ ಬಹು ಮಹತ್ವದವಾಗಿರುತ್ತವೆ.

ಒಂದು ವೇಳೆ ಪಾಲ್ಕುರಿಕೆ ಸೋಮಾರಾಧ್ಯನು ಈ ಗ್ರಂಥಗಳನ್ನು ರಚಿಸದೆ ಹೋಗಿದ್ದರೆ ವೀರಶೈವೇತಿಹಾಸದ ಮೇಲೆ ಯಾವ ಪ್ರಕಾಶವೂ ಬೀಳುತ್ತಿದ್ದಿಲ್ಲ. ಅವನು ರಚಿಸಿದ ಬಸವ ಪುರಾಣವನ್ನು ಆಧಾರವಾಗಿಟ್ಟುಕೊಂಡು ಭೀಮ ಕವಿಯು ಕನ್ನಡ ಬಸವ ಪುರಾಣವನ್ನು ಬರೆದಿದ್ದಾನೆ. ಹಾಗೆಯೇ ಸೋಮಾರಾಧ್ಯನು ಆಂಧ್ರ ಭಾಷೆಯಲ್ಲಿ ಪಂಡಿತಾರಾಧ್ಯ ಚರಿತ್ರೆಯನ್ನು ಬರೆದಿದ್ದಾನೆ. ಈ ಚರಿತ್ರೆಯನ್ನು ಗುರುರಾಜ ಕವಿಯು ಸಂಸ್ಕೃತದಲ್ಲಿ ಭಾಷಾಂತರಿಸಿದ್ದಾನೆ. ಗಣಸಹಸ್ರವೆಂಬ ಗ್ರಂಥದಲ್ಲಿ ಶೈವಮತದಲ್ಲಿ ಉಚ್ಚ ಸ್ಥಾನವನ್ನು ಹೊಂದಿದ ಒಂದು ಸಾವಿರ ಜನರ ಹೆಸರುಗಳಿವೆ. ಅವರು ಯಾರೆಂದರೆ:—

೪೬೫ ಪ್ರಮಥಗಣಗಳು, ೧೭೧ ರುದ್ರಗಣಗಳು, ೨೮ ಯೋಗಾಚಾರ್ಯರು, ೬೩ ಪುರಾತನರು ಮತ್ತು ೨೭೩ ಜನ ಶಿವಶರಣರು ಇದ್ದಾರೆ. ಶಿವಶರಣರು ವೀರಶೈವ ಸಮಾಜಕ್ಕೆ ಪ್ರತ್ಯಕ್ಷ ಸಂಬಂಧಿಸಿದವರು. ಇವರಲ್ಲಿ ೧೬ ಜನರು ಷೋಡಶರು, ೧೩ ಜನರು ತೇರಸರು, ೧೦ ಜನರು

ದಶಗಣರು ಮತ್ತು ೨೩೪ ಜನರು ಅಮರಗಣಗಳು ಎಂದು ಸೋಮನಾಥನು ವರ್ಗೀಕರಣ ಮಾಡಿ ಅವರ ಹೆಸರುಗಳನ್ನು ಈ ಗ್ರಂಥದಲ್ಲಿ ಕೊಟ್ಟಿದ್ದಾನೆ. ಪಂಡಿತಾರಾಧ್ಯ ಚರಿತ್ರೆ, ಬಸವಪುರಾಣ ಇವುಗಳಲ್ಲಿ ಉಲ್ಲೇಖವಾದ ಶಿವಶರಣರ ಹೆಸರುಗಳು ಈ ಗಣಸಹಸ್ರದಲ್ಲಿ ಬಂದಿವೆ. ಆದರೆ ಪಂಡಿತಾರಾಧ್ಯ ಚರಿತ್ರೆ ಮತ್ತು ಬಸವಪುರಾಣ ಇವುಗಳಲ್ಲಿ ಶಿವಶರಣರು ಮಾಡಿದ ಪವಾಡಗಳ ಸವಿಸ್ತಾರವಾದ ವರ್ಣನೆಗಳು ಇವೆ. ಈ ಚರಿತ್ರೆಗಳ ಮೇಲಿಂದ ವೀರಶೈವ ಸಮಾಜದ ಪೂರ್ವೇತಿಹಾಸದ ಮೇಲೆ ಮಹತ್ವದ ಪ್ರಕಾಶವು ಬೀಳುತ್ತದೆ. ಪಾಲ್ಕುರಿಕೆ ಸೋಮಾರಾಧ್ಯನು ಬಸವೇಶ್ವರನ ತರುವಾಯ ೬೦-೭೦ ವರ್ಷಗಳ ಮೇಲೆ ಅಂದರೆ ೧೨೦೦ ನೇ ಇಸ್ವಿಯ ಸುಮಾರಕ್ಕೆ ಪ್ರಸಿದ್ಧಿಗೆ ಬಂದಿದ್ದಾನೆ. ಆದ್ದರಿಂದ ಅವನು ಸಂಗ್ರಹಿಸಿದ ಈ ಚರಿತ್ರೆಗಳು ಐತಿಹಾಸಿಕ ದೃಷ್ಟಿಯಿಂದ ವೀರಶೈವರಿಗೆ ಅತ್ಯಂತ ಮಹತ್ವದವಾಗಿವೆ.

ಈ ಚರಿತ್ರೆಗಳ ಮೇಲಿಂದ ಬಸವೇಶ್ವರನು ಐಕ್ಯಹೊಂದಿದ ಬಳಿಕ ಸ್ವಲ್ಪ ವರ್ಷಗಳಲ್ಲಿಯೇ ಪಾಲ್ಕುರಿಕೆ ಸೋಮಾರಾಧ್ಯನು ಉದ್ಭವಿಸಿ ಕರ್ನಾಟಕ ಮತ್ತು ಆಂಧ್ರ ದೇಶಗಳಲ್ಲಿ ಸಂಚರಿಸಿ ವೀರಶೈವ ಧರ್ಮಕ್ಕಾಗಿ ಪ್ರಯತ್ನಿಸಿದ ಮಹಾನುಭಾವರು ಯಾರು ಮತ್ತು ಅವರು ಎಲ್ಲಿಯವರು ಎಂಬುದನ್ನು ಸಂಶೋಧಿಸಲು ಪ್ರಯತ್ನಿಸಿದ್ದಾನೆಂದು ಸ್ಪಷ್ಟವದೆ. ಅವನು ಉಲ್ಲೇಖಿಸಿದ ೨೩೪ ಜನ ಶಿವಶರಣರು ಬಹು ಮಹತ್ವದ ಕಾರ್ಯಮಾಡಿದವರು. ಅವರಲ್ಲಿ ಬಹು ಜನರು ವಿಜಾಪುರ, ಕಲಬುರ್ಗಿ ಜಿಲ್ಲೆಯವರೂ ಉತ್ತರ ಆಂಧ್ರ ದೇಶದವರೂ ಇದ್ದಾರೆ. ನಾವು ಈ ವರೆಗೆ "ಶಿವಶರಣರ ಚರಿತ್ರೆಗಳು" ಭಾಗ ೧, ೨ ಇವುಗಳಲ್ಲಿ ೧೧೪ ಜನರು ಮತ್ತು ಮುಂದೆ ೩ನೇ ಭಾಗದಲ್ಲಿ ಈ ವರೆಗೆ ೧೬ ಜನರು ಹೀಗೆ ಒಟ್ಟು ೧೩೦ ಶಿವಶರಣರ ಚರಿತ್ರೆಗಳನ್ನು ಸಂಶೋಧಿಸಿ ಬರೆದಿದ್ದೇವೆ. ಪಾಲ್ಕುರಿಕೆ ಸೋಮಾರಾಧ್ಯನ ಗಣಸಹಸ್ರದಲ್ಲಿ ಶಿವಶರಣರು ಉಲ್ಲೇಖವಾದ ಗ್ರಾಮಗಳು ಯಾವವೆಂದರೆ:- ಮುಸುಟಿ, ವಿಜಾಪುರ, ಕೆಂಭಾವಿ, ಜಟ್ಟಿಪುರು, ಹೊಟ್ಟಿಲಕೆರೆ, ಮುದುನೂರ, ಬಾಹೂರು, ನಾವದಗಿ, ಕೋವೂರು, ಸಗರ, ಕೆರವೂರು, ಹೀರೂರು, ಕೆರುಕುಂಟೆ, ಹಾವಿನಹಾಳ, ಇಳಿಹಾಳ, ಬಾಹೂರು, ಏಲೇಶ್ವರ, ಇಂಡಿ, ವಣಿಪುರ, ನಿಂಗುಳಗೆ, ಗಂಗಾಪುರ, ಸರವೂರು, ಕೆರವೂರು, ನಿಂಬಾಣ, ಕೊಲ್ಲಿಪಾಕಿ,

ನಿಲುವಿಗೆ, ರೇಗೂರು, ಮೊರಟ, ಅಮರಗುಂಡ, ನೆಲೆಗೊಂಡ, ಉಡುತಡಿ, ಕವಿಲಿ ಈ ಗ್ರಾಮಗಳಿವೆ. ಈ ಗ್ರಾಮಗಳು ಈಗಿನ ಕಾಲದಲ್ಲಿ ಅಪ್ರಸಿದ್ಧವಾದವುಗಳು. ಆದರೂ ಇಂಥವುಗಳನ್ನು ಪಾಲ್ಕುರಿಕೆ ಸೋಮಾರಾಧ್ಯನು ತನ್ನ ಗ್ರಂಥಗಳಲ್ಲಿ ವಿವರವಾಗಿ ಹೇಳಿದ್ದರ ಮೇಲಿಂದ ಈ ಗ್ರಾಮಗಳಿಗೆ ಅವನು ಹೋಗಿ ಅಥವಾ ಅವುಗಳಿಗೆ ಸಮೀಪವರ್ತಿಯಾದ ಪ್ರದೇಶಗಳಲ್ಲಿ ಸಂಚರಿಸಿ ಆಯಾ ಶಿವಶರಣರು ಮಾಡಿದ ಮಹತ್ಕೃತ್ಯಗಳನ್ನು ತಿಳಿದುಕೊಂಡು ತನ್ನ ಬಸವ ಪುರಾಣ ಮತ್ತು ಪಂಡಿತಾರಾಧ್ಯ ಚರಿತ್ರೆಗಳಲ್ಲಿ ನಿರೂಪಿಸಿರುವನೆಂದು ನಮಗೆ ತೋರುತ್ತದೆ. ಈ ಶಿವಶರಣರ ಚರಿತ್ರೆಗಳು ಬಸವೇಶ್ವರನ ತರುವಾಯ ೫೦-೬೦ ವರ್ಷಗಳ ಮೇಲೆ ಅಂದರೆ ಒಂದೆರಡು ತಲಾಂತರಗಳಾದ ಮೇಲೆ ಸಂಗ್ರಹವಾದ್ದರಿಂದ ಅವುಗಳಲ್ಲಿ ಅನೇಕ ದಂತ ಕಥೆಗಳೂ ಪವಾಡಗಳೂ ಸ್ವಾಭಾವಿಕವಾಗಿ ಸೇರಿಕೊಂಡಿರಬಹುದು. ಆದರೂ ನಾವು ಬರೆದ ಶಿವಶರಣರ ಚರಿತ್ರೆಗಳನ್ನು ನೋಡಿದರೆ ಈ ಶಿವಶರಣರು ನಿಜವಾಗಿ ಆಗಿ ಹೋದವರೆಂಬುದು ಗೊತ್ತಾಗದೆ ಇರದು. ಇವರು ವೀರಶೈವ ಧರ್ಮದ ಜಾಗ್ರತೆಗೆ ಬಹಳ ಪ್ರಯತ್ನಿಸಿದವರು ಇದ್ದಾರೆ. ಇಂಥವರು ಮಾಡಿದ ಮಹತ್ಕಾರ್ಯಗಳನ್ನು ಪಾಲ್ಕುರಿಕೆ ಸೋಮಾರಾಧ್ಯನು ಸಂಶೋಧಿಸಿದ್ದು ವೀರಶೈವ ಸಮಾಜದ ಮೇಲೆ ಅವನು ಮಾಡಿದ ಮಹದುಪಕಾರವಾಗಿರುತ್ತದೆ.

ಪಾಲ್ಕುರಿಕೆ ಸೋಮಾರಾಧ್ಯನು ತನ್ನ ಪ್ರವಾಸ ಕಾಲದಲ್ಲಿ ಮರಾಠೀ ಭಾಷೆಯ ಪರಿಚಯವನ್ನು ಸಹ ಮಾಡಿಕೊಂಡಿದ್ದನೆಂದು ತೋರುತ್ತದೆ. ಅವನು ವೃಷಾಧಿಪಶತಕವೆಂಬ ಶತಕವನ್ನು ರಚಿಸಿದ್ದು ಅವನು ಅದರಲ್ಲಿ ಸಂಸ್ಕೃತ, ದ್ರಾವಿಡ, ಕನ್ನಡ ಮತ್ತು ಮರಾಠೀ ಈ ನಾಲ್ಕು ಭಾಷೆಗಳಲ್ಲಿ ಬಸವೇಶ್ವರನನ್ನು ಸ್ತುತಿಸಿರುತ್ತಾನೆ. ಮರಾಠಿಯಲ್ಲಿದ್ದ ಪದ್ಯವು ಕೆಳಗಿನಂತೆ ಇದೆ.

"ದೇವ ಪರೀ ತುಮ್ಹೀಚ ಗುರುದೇವ ವ್ಹಣೂನ ಪರೀ
ತುಮ್ಹೀಚ ಗೋ ।
ಸಾವಿ ತರೀ ತುಮ್ಹೀಚ ತುಮಚಾಚ ಪ್ರಸಾದ
ವಿಮ್ಹಾಚ ಕೃಪಾ ಕರಾ ॥

ಹೇ ವರದಾಯು ವಂಚು ನುತಿಯುಂಚವ ನಿನ್ನ್ನನ
ಸಾರೀ ಭಾಸತೆ ।

ವಾ ಏನ ತುರ್ಸ್ಟೀಲ ಬಸವಾ ಬಸವಾ ಬಸವಾ
ವೃಷಾಧಿಪಾ ॥

ಶ್ಲೋಕವು ಅಶುದ್ಧವಾಗಿರುವದರಿಂದ ಕೆಲವೆಡೆಗಳಲ್ಲಿ ಶಬ್ದಗಳ ಬೋಧವಾಗುವದಿಲ್ಲ. ಆದರೆ ಇದರಿಂದ ಸೋಮಾರಾಧ್ಯನು ಉತ್ತರ ಕರ್ನಾಟಕದಲ್ಲಿ ಕೆಲವು ದಿವಸಗಳಿದ್ದು ಮರಾಠೀ ಭಾಷೆಯ ಪರಿಚಯ ಮಾಡಿಕೊಂಡಿರಬಹುದೆಂದು ತೋರುತ್ತಿದೆ. ಮರಾಠೀ ಭಾಷೆ ಇಲ್ಲದ ತುಮಕೂರು ಜಿಲ್ಲೆಯಲ್ಲಿದ್ದುಕೊಂಡು ಮರಾಠೀ ಭಾಷೆಯನ್ನು ಹೀಗೆ ಕಲಿಯುವ ಸಂಭವವಿಲ್ಲ. ಆದ್ದರಿಂದ ಅವನು ಆಯಾ ಪ್ರದೇಶಗಳಲ್ಲಿ ಸಂಚರಿಸಿ ಶಿವಶರಣರ ಚರಿತ್ರೆಗಳನ್ನು ಸಂಗ್ರಹಿಸಿದನೆಂಬ ವಿಷಯವನ್ನು ಇದು ಬಲಪಡಿಸುತ್ತದೆ.

ಹನ್ನೆರಡನೇ ಶತಮಾನದ ಅಂತ್ಯಭಾಗದಲ್ಲಿ ದೇವಗಿರಿ ಯಾದವರು ಕರ್ನಾಟಕದ ಉತ್ತರ ಭಾಗವನ್ನು ಆಕ್ರಮಿಸಿದರು. ಆಗ ಅವರಿಗೆ ಮಾಂಡಲಿಕರಾಗಿ ಮಲ್ಲ, ಅವನ ತಮ್ಮ ಬೀಚಿಗಿ ಮತ್ತು ಮಲ್ಲನ ಮಗ ಚಾವುಂಡ ಇವರು ಪುಲಿಗೆರೆ ಎಂದರೆ ಲಕ್ಷ್ಮೇಶ್ವರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿ ರಾಜ್ಯವಾಳಿದರೆಂದು ಶಾಸನಗಳಿಂದ ತಿಳಿಯುತ್ತಿದೆ. ಇವರ ಕಾಲಕ್ಕೆ ಈ ಭಾಗದಲ್ಲಿ ಮರಾಠೀ ಭಾಷೆಯು ಪ್ರವೇಶವಾಗಿರಬೇಕು. ಇದೇ ಕಾಲಕ್ಕೆ ಪಾಲ್ಕುರಿಕೆ ಸೋಮೇಶ್ವರನು ಇದ್ದುದರಿಂದ ಅವನು ತನ್ನ ಸಂಚಾರ ಕಾಲದಲ್ಲಿ ಮರಾಠೀ ಭಾಷೆಯ ಪರಿಚಯವನ್ನು ಮಾಡಿಕೊಂಡಿರಬಹುದು.

ಕರ್ನಾಟಕದಲ್ಲಿಯಂತೆ ಅವನು ಉತ್ತರ ಆಂಧ್ರ ದೇಶದಲ್ಲಿಯೂ ಪ್ರವಾಸ ಮಾಡಿ ಅಲ್ಲಿ ಆಗಿಹೋದ ಶಿವಶರಣರ ಚರಿತ್ರೆಗಳನ್ನು ಸಂಗ್ರಹಿಸಿದ್ದಾನೆ. ಇವು ಅವನು ಆಂಧ್ರ ಭಾಷೆಯಲ್ಲಿ ರಚಿಸಿದ ಪಂಡಿತಾರಾಧ್ಯನ ಚರಿತ್ರೆಯಲ್ಲಿಯೂ ಬಸವ ಪುರಾಣದಲ್ಲಿಯೂ ಬಂದಿರುತ್ತವೆ.

ಈ ಪ್ರವಾಸದಲ್ಲಿ ಅವನು ಬಹುಜನ ವಿದ್ವಾಂಸರನ್ನೂ ಶಿವಾನುಭವಿಗಳನ್ನೂ ಕಂಡಿರಬಹುದು. ಉತ್ತರ ಕರ್ನಾಟಕದಲ್ಲಿ ಈ ಕಾಲಕ್ಕೆ ವೀರ

ಶೈವರ ದೊಡ್ಡ ಚಳವಳಿಯು ಉಂಟಾಗಿದ್ದಿತು. ಇದರಿಂದ ಸೋಮನಾರಾಧ್ಯನು ಅಲ್ಲಿ ವೀರಶೈವ ಧರ್ಮದ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು ಸಂಸ್ಕೃತ ಕನ್ನಡ ಮತ್ತು ಆಂಧ್ರ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವನು ಬರೆದ ಗ್ರಂಥಗಳು ಯಾವವೆಂದರೆ:—

(೧) ಬಸವಪುರಾಣ:— ತೆಲುಗು ಭಾಷೆಯಲ್ಲಿ ಇದ್ದ ಈ ಗ್ರಂಥವನ್ನು ಭೀಮಕವಿಯು ಕನ್ನಡದಲ್ಲಿ ಭಾಷಾಂತರಿಸಿದ್ದಾನೆ.

(೨) ಪಂಡಿತಾರಾಧ್ಯ ಚರಿತೆ- ಇದು ತೆಲುಗು ಭಾಷೆಯಲ್ಲಿ ಇದ್ದು ಇದನ್ನು ಗುರುರಾಜ ಕವಿಯು ಸಂಸ್ಕೃತದಲ್ಲಿ ಭಾಷಾಂತರಿಸಿದ್ದಾನೆ.

(೩) ಶೀಲಸಂಪಾದನೆ-ಕನ್ನಡದಲ್ಲಿ
(೪) ಸದ್ಗುರು ರಗಳೆ ,,
(೫) ಚೆನ್ನಬಸವ ರಗಳೆ ,,
(೬) ಶರಣಬಸವ ರಗಳೆ ,,
(೭) ಬಸವಪಂಚಗದ್ಯ
(೮) ಅನ್ಯವಾದ ಕೋಲಾಹಳ
(೯) ಅನುಭವಸಾರ
(೧೦) ರುದ್ರಭಾಷ್ಯ
(೧೧) ಗಂಗೋತ್ಪತ್ತಿ ರಗಳೆ
(೧೨) ನಮಸ್ಕಾರ ಗದ್ಯ
(೧೩) ವೃಷಾಧಿಪಶತಕ-ತೆಲುಗು
(೧೪) ಬಸವಾಷ್ಟಕ
(೧೫) ಬಸವಗೀತೆ
(೧೬) ಬಸವೋದಾಹರಣ
(೧೭) ಅಕ್ಷರಾಂಕ ಗದ್ಯ
(೧೮) ಲಿಂಗೋದ್ಭವ ಗದ್ಯ
(೧೯) ಇಷ್ಟಲಿಂಗ ಸ್ತೋತ್ರ
(೨೦) ಗಣಸಹಸ್ರ ನಾಮಾವಳಿ
(೨೧) ಪರ್ವತ ವರ್ಣನೆ
(೨೨) ಸೋಮನಾಥ ಭಾಷ್ಯ ಅಥವಾ ಬಸವರಾಜೀಯ:—ಸಂಸ್ಕೃತದಲ್ಲಿ
(೨೩) ಚತುರ್ವೇದಸಾರ.

ಈ ಗ್ರಂಥಗಳಲ್ಲಿ ಅನೇಕ ಗ್ರಂಥಗಳು ಬಸವೇಶ್ವರನ ವಿಷಯವಾಗಿವೆ. ಇದರಿಂದ ಸೋಮನಾಥನು ಬಸವೇಶ್ವರನ ವಿಷಯವಾಗಿ ಎಷ್ಟು ಗಾಢವಾದ ಭಕ್ತಿಯುಳ್ಳವನಾಗಿದ್ದನೆಂಬುವು ವ್ಯಕ್ತವಾಗುತ್ತವೆ. ಅವುಗಳಲ್ಲಿ ಕೆಲವು ಅಂದರೆ ಅನ್ಯವಾದ ಕೋಲಾಹಳ, ಸದ್ಗುರು ರಗಳೆ ಸೋಮನಾಥ ಭಾಷ್ಯ, ಅನುಭವಸಾರ, ಚತುರ್ವೇದಸಾರ ರುದ್ರಭಾಷ್ಯ ಇವು ತಾತ್ವಿಕ ಗ್ರಂಥಗಳಿರುತ್ತವೆ.

ಈ ಪ್ರಕಾರ ಸೋಮನಾರಾಧ್ಯನು ದೇಶದಲ್ಲಿ ಪಂಡಿತೋತ್ತಮನೆಂದು ಪ್ರಸಿದ್ಧಿಯನ್ನು ಹೊಂದಿದವನಾದನು. ಇದರಿಂದ ಅವನಿಗೆ ಶಸ್ತ್ರವಿದ್ಯಾ

ಕಲಾಪ, ಕವಿತಾಸಾರ, ಅನ್ಯದೇವಕೋಲಾಹಳ, ಪ್ರತ್ಯಕ್ಷಭೃಂಗೀಶನವತಾರ ಎಂಬ ಬಿರುದುಗಳು ಪ್ರಾಪ್ತವಾದವು.

ಈ ಪ್ರಕಾರ ಸೋಮಾರಾಧ್ಯನು ಮಹತ್ವದ ಗ್ರಂಥಗಳನ್ನು ರಚಿಸಲಾಗಿ, ಒಂದು ದಿನ ಪುರಜನರು ಅವನ ಮೆರವಣಿಗೆಯನ್ನು ತೆಗೆದು ಅವನನ್ನು ಸನ್ಮಾನಿಸಿದರು. ಆಗ ಶಂಕರನು ಸೋಮಾರಾಧ್ಯನಿಗೆ ಪ್ರತ್ಯಕ್ಷವಾಗಿ ಅವನಿಗೆ ನೀನು ಕೈಲಾಸಕ್ಕೆ ಬರಬೇಕೆಂದು ಕರೆಯಲು ಅವನು ಶಿವನಿಗೆ ನಮಿಸಿ—ಬಸವನಿಂದ ಪುನೀತವಾದ ಈ ಭೂಮಿಯೇ ನನಗೆ ಕೈಲಾಸವು. ನಾನು ಕೈಲಾಸಕ್ಕೆ ಬರಲು ಒಪ್ಪಲಾರೆನು. ಆದರೆ ನನಗೆ ಕ್ರಿಯಾಸಮಾಧಿಯಲ್ಲಿ ನಿರವಯಲ ಲಿಂಗೈಕ್ಯವು ಸ್ವಯವಾಗುವಂತೆ ಕರುಣಿಸಬೇಕೆಂದು ಬೇಡಿಕೊಂಡನು. ಶಿವನು ಹಾಗೆಯೇ ಆಗಲೆಂದು ಹೇಳಿ ಹೊರಟುಹೋದನು.

ಹೇಗೆ ಹರಿಹರ ಕವಿಯು ಕನ್ನಡ ಭಾಷೆಯಲ್ಲಿ ಮಹಾಕವಿ ಎಂದೆನಿಸಿಕೊಂಡಿರುವನೋ ಹಾಗೆಯೇ ಪಾಲ್ಕುರಿಕೆ ಸೋಮನಾಥನು ತೆಲುಗು ಭಾಷೆಯಲ್ಲಿ ಮಹಾಕವಿ ಎಂದೆನಿಸಿಕೊಂಡಿದ್ದಾನೆ. ಉಭಯ ಕವಿಗಳು ಬಹುಶಃ ಒಂದೇ ಕಾಲದವರಿದ್ದು ಸ್ವಲ್ಪ ಮಾತ್ರ ಅವರು ಹಿಂದುಮುಂದಾಗಿರಬಹುದು. ಸೋಮನಾಥನು ಬರೆದ ಗ್ರಂಥಗಳ ಮೇಲಿಂದ ಅವನು ವೇದವೇದಾಂತ ಆಗಮಪುರಾಣ ಶಾಸ್ತ್ರಗಳಲ್ಲಿ ಗಾಢವಾದ ಪಾಂಡಿತ್ಯವುಳ್ಳವನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಇವನು ರಚಿಸಿದ ಸೋಮನಾಥಭಾಷ್ಯ, ಚತುರ್ವೇದಸಾರ, ಪಂಡಿತಾರಾಧ್ಯ ಚರಿತ್ರದ ವಾದ ಪ್ರಕರಣ ಇವುಗಳನ್ನು ನೋಡಿದಲ್ಲಿ ಅವನು ಅನ್ಯ ಸಮಯಗಳನ್ನು ಶಾಸ್ತ್ರೀಯವಾಗಿ ಖಂಡಿಸಿ ಶಿವಜ್ಞಾನ ಸಿದ್ಧಾಂತವನ್ನು ಸ್ಥಾಪಿಸಿದ್ದು ಕಂಡು ಬರುತ್ತದೆ.

ಸೋಮನಾಥನು ದ್ವಿಪದಿಯಲ್ಲಿ ಕಾವ್ಯವನ್ನು ರಚಿಸಿದ್ದಾನೆ. ತೆಲುಗಿನಲ್ಲಿ ಇಂಥ ಕಾವ್ಯರಚಿಸಲು ಅವನೇ ಮೊದಲಿಗನು. ತೆಲುಗು ಪಂಡಿತರು ಸೋಮನಾಥನು ಆಂಧ್ರ ಸಾಹಿತ್ಯಕ್ಕೆ ಮಾಡಿದ ಈ ಉಪಕಾರವನ್ನು ಈಗಲೂ ನೆನೆಯುತ್ತಾರೆ. ಹಾಗೆಯೇ ಶತಕ ಸಾಹಿತ್ಯದಲ್ಲಿ ಅವನು ರಚಿಸಿದ ವೃಷಾಧಿಪಶತಕವು ಅಪೂರ್ವವಾಗಿರುತ್ತದೆ. ಈತನು

ಚತುರ್ವೇದಸಾರದಲ್ಲಿ ವೇದಸೂತ್ರಗಳನ್ನೂ ಅವುಗಳ ಮೇಲಿನ ವ್ಯಾಖ್ಯಾನವನ್ನೂ ಪದ್ಯರೂಪದಲ್ಲಿ ಬರೆದಿದ್ದಾನೆ. ಇದು ಬಹು ಕಠಿಣವಾದ ರಚನೆಯು. ಆದರೂ ಅವನು ತನ್ನ ಕವಿತಾ ಶಕ್ತಿಯಿಂದ ಇಂಥ ರಚನೆಯನ್ನು ಮಾಡಿ ಅದರಲ್ಲಿ ಯಶಸ್ವಿಯಾಗಿದ್ದಾನೆ.

ಅವನು ತನ್ನ ಸೋಮನಾಥ ಭಾಷ್ಯವನ್ನು ಬರೆಯುವಲ್ಲಿ ಬ್ರಹ್ಮಸೂತ್ರಗಳನ್ನು ತೆಗೆದುಕೊಂಡು ವ್ಯಾಖ್ಯಾನ ಬರೆಯುವ ಹಳೇ ಪದ್ಧತಿಯನ್ನು ಬಿಟ್ಟುಕೊಟ್ಟು ತನ್ನದೇ ಆದ ಹೊಸ ಮಾರ್ಗವನ್ನು ತುಳಿದಿದ್ದಾನೆ. ಅವನು ಸ್ಮೃತಿ ಆಗಮ ಪುರಾಣ ಇತಿಹಾಸಗಳನ್ನು ತೆಗೆದುಕೊಂಡು ಶಿವಮತೋತ್ಕರ್ಷವನ್ನೂ ಅಷ್ಟಾವರಣಗಳ ಮಹಾತ್ಮೆಯನ್ನೂ ಇದರಲ್ಲಿ ವಿಶದಪಡಿಸಿದ್ದಾನೆ. ಈ ಗ್ರಂಥದಲ್ಲಿ ವೃಷಭೇಂದ್ರಮಹಿಮೆ, ವಿಭೂತಿ ಮಹಿಮೆ, ಶಿವಲಿಂಗಧಾರಣ ಮಹಿಮೆ, ಲಿಂಗಾರ್ಚನವಿಧಿ, ಪಾದೋದಕಪ್ರಸಾದ ಮಹಿಮೆ, ಸರ್ವದೇವಪೂಜನಕತ್ವ, ದ್ವಿಮೂರ್ತಿವಾದನಿರಸನ, ಕರ್ಮವಾದನಿರಸನ, ಮಹಾದೇವ ನಿರ್ವಚನ ಮುಂತಾದ ವಿಷಯಗಳನ್ನು ವಿವೇಚಿಸಿದ್ದಾನೆ.

ಅವನು ಈ ಗ್ರಂಥಗಳಲ್ಲಿ ವೀರಶೈವ ಧರ್ಮವು ವೈದಿಕವಾದುದೆಂದು ಸ್ಥಾಪಿಸಲು ಯತ್ನಿಸಿದ್ದು ಅವನ ವೈಶಿಷ್ಟ್ಯವು. ವರ್ಣಾಶ್ರಮದ ಶೃಂಖಲೆಗಳನ್ನು ಬಿಸಾಟಿದ ಶಿವಶರಣರ ಮಾರ್ಗವು ವೈದಿಕ ಮಾರ್ಗಕ್ಕೆ ವಿರುದ್ಧವಲ್ಲೆಂದು ಅವನು ಇವುಗಳಲ್ಲಿ ಪ್ರತಿಪಾದಿಸಿದ್ದಾನೆ.

ಸೋಮನಾಥನು ಬಸವೇಶ್ವರನಿಗೋಸ್ಕರ ಅತ್ಯಂತ ಭಕ್ತಿಭಾವವುಳ್ಳವನಾಗಿದ್ದಾನೆಂಬುದು ಅವನ ಗ್ರಂಥಗಳೆಲ್ಲ ಹೇಳುತ್ತವೆ. ಅವನು ಬಸವೇಶ್ವರನನ್ನು ಮನಸಾರೆ ಯಾವಾಗಲೂ ಸ್ತುತಿಸುತ್ತಾನೆ. ಅವನು ಬಸವಾದಿ ಪ್ರಮಥರ ಬಗ್ಗೆ ನಿಸ್ಸೀಮ ಭಕ್ತಿಯುಳ್ಳವನು. ಅವನು ಬಸವೇಶ್ವರನನ್ನೇ ತನ್ನ ಆರಾಧ್ಯ ಮೂರ್ತಿಯನ್ನಾಗಿಟ್ಟುಕೊಂಡು ಅವನನ್ನು ಯಾವಾಗಲೂ ಸ್ತುತಿಸುವದುಂಟು.

ಈತನು ಆಂಧ್ರ ವಾಙ್ಮಯಕ್ಕೆ ಮಾಡಿದ ಮಹದುಪಕಾರವನ್ನು ಅಲ್ಲಿಯ ಪಂಡಿತರು ಈಗಲೂ ನೆನೆಯುತ್ತಾರೆ. ಅವನು ತನ್ನ ಕಾವ್ಯದಲ್ಲಿ ತೆಲುಗು ಭಾಷೆಯ ಸರಳತೆಯನ್ನೂ ಮಾಧುರ್ಯವನ್ನೂ ಚೆನ್ನಾಗಿ

ಹೊರಗೆಡಹಿದ್ದಾನೆ. ಮೊದಲಿನ ಕಾಲದ ತೆಲುಗು ಕಾವ್ಯಗಳಲ್ಲಿ ಸಂಸ್ಕೃತ ಪದಗಳು ತುಂಬಿ ಹೋಗಿರುತ್ತವೆ. ಆದರೆ ಸೋಮನಾಥನು ಅದ್ವಿತೀಯ ಸಂಸ್ಕೃತ ಪಂಡಿತನಾದರೂ ಕೂಡ ತೆಲುಗು ಭಾಷೆಯ ಸೌಂದರ್ಯವನ್ನು ಕಂಡು ಹಿಡಿದು 'ಜಾನು ತೆಲುಗಿನ' ಪ್ರಯೋಗಗಳನ್ನೇ ತನ್ನ ಕಾವ್ಯಗಳಲ್ಲಿ ಹೆಚ್ಚಾಗಿ ಇಟ್ಟುಕೊಂಡಿದ್ದಾನೆ. ಸಾಧಾರಣ ಹಳ್ಳಿಯ ಜನರು ಮಾತಾಡುವ ಮಾತುಗಳನ್ನೇ ಅವನು ಕಿವಿಗಿಂಪಾಗುವಂತೆ ಜೋಡಿಸಿ ಸಂಸ್ಕೃತ ಪದಗಳನ್ನು ಅಲ್ಲಲ್ಲಿ ಪ್ರಯೋಗಿಸುತ್ತ ತನ್ನ ಶೈಲಿಯನ್ನು ಸರ್ವಜನಾಕರ್ಷಕವಾಗಿ ಮಾಡಿದ್ದಾನೆ.

ಪಾಲ್ಕುರಿಕೆ ಸೋಮಾರಾಧ್ಯನು ನಾಡಿನಲ್ಲಿ ಸಂಚರಿಸುತ್ತಿರುವಾಗ ೭೮ ಶೀಲಗಳ ಕಟ್ಟಾಚರಣೆಗಳು ಹೆಚ್ಚುಹೆಚ್ಚು ರೂಢವಾಗುತ್ತಾ ಇದ್ದುದು ಅವನ ಲಕ್ಷ್ಯಕ್ಕೆ ಬಂದಿರಬಹುದೆಂದು ನಮಗೆ ತೋರುತ್ತದೆ. ಅವುಗಳು ಬಹು ಮಹತ್ವವಾದವುಗಳೆಂದು ಸೋಮಾರಾಧ್ಯನು ತಿಳಿದು ಅವನು ಅವುಗಳ ರೀತಿಯನ್ನು ನಿರೂಪಿಸುವ ಒಂದು ಮಹತ್ವದ ಗ್ರಂಥವನ್ನು ರಚಿಸಿದನು. ಅದಕ್ಕೆ ಶೀಲಸಂಪಾದನೆ ಎಂಬ ಹೆಸರು. ಹೀಗೆ ಅವುಗಳನ್ನು ನಿರೂಪಿಸಿದ ಬಳಿಕ ಅವುಗಳಂತೆ ತಾನೂ ನಡೆಯಬೇಕೆಂಬ ಇಚ್ಛೆಯು ಅವನಲ್ಲಿ ಪ್ರಬಲವಾಗಿರಬೇಕು.

ಈ ವಿಷಯವಾಗಿ ಅವನು ಮೊದಲು ತನ್ನ ಗುರುವಿನಾಜ್ಞೆಯನ್ನು ಹೊಂದಿ ಒಂದು ದಿವಸ ಭಕ್ತಮಾಹೇಶ್ವರರ ಸಭೆಯನ್ನು ನೆರಿಸಿದನು. ಸೋಮಾರಾಧ್ಯನು ಸಭೆಯಲ್ಲಿ ಎಲ್ಲರಿಗೆ ಕೈಮುಗಿದು ಇನ್ನುಮೇಲೆ ನಾನು ೭೮ ಶೀಲಗಳನ್ನು ನಡಿಸಲು ಅಪ್ಪಣೆಕೊಡಬೇಕೆಂದು ಕೇಳಿಕೊಂಡನು. ಹೀಗೆ ಅವರ ಅಪ್ಪಣೆಯನ್ನು ಹೊಂದಿ ವ್ರತಸ್ಥನಾಗಿ ಆಚರಿಸ ಹತ್ತಿದನು.

ಅವನು ಕೈಕೊಂಡ ವ್ರತಗಳಲ್ಲಿ ಲಿಂಗಮುದ್ರೆಯ ಭೂಮಿಯಲ್ಲದೆ ಮತ್ತೆಲ್ಲಿಯೂ ಸಂಚರಿಸಲಾರೆನೆಂಬುದು ಒಂದಾಗಿತ್ತು. ಇದನ್ನು ಶಿವನು ತಿಳಿದು ಗಣಪುರದರಸನ ಸ್ವಪ್ನದಲ್ಲಿ ಬಂದು—ನೀನು ಸೋಮಾರಾಧ್ಯನಿಗೆ ಲಿಂಗಮುದ್ರೆಯ ಭೂಮಿಯನ್ನು ಕೊಡೆಂದು ಅಜ್ಞಾಪಿಸಿದನು. ಆಗ ಅರಸನು ಸೋಮಾರಾಧ್ಯನ ವ್ರತವನ್ನು ತಿಳಿದುಕೊಂಡು ದೇಶ

ದಲ್ಲಿ ಗಾತ್ರದಕೊಂಡೂರಲ್ಲಿ ಲಿಂಗಮುದ್ರೆಯು ಭೂಮಿಯನ್ನು ಅವನಿಗೆ ದಯಪಾಲಿಸಿದನು. ಈ ಪ್ರಕಾರ ಸೋಮಾರಾಧ್ಯನು ೬೪ ಶೀಲಗಳಂತೆ ಆಚರಿಸಲು ಪ್ರಾರಂಭಿಸಿದನು.

ಸೋಮಾರಾಧ್ಯನು ಈ ಪ್ರಕಾರ ಕಟ್ಟಾಚರಣೆಯಲ್ಲಿರುವದನ್ನು ದೇಶದಲ್ಲಿಯ ಜನರು ತಿಳಿದು ಅವನಿಗೋಸ್ಕರ ಅತ್ಯಂತ ಭಕ್ತಿ ಭಾವವನ್ನು ತಾಳಿದವರಾದರು. ಇದರಿಂದ ಅವನಲ್ಲಿಯೂ ಒಂದು ಪ್ರಬಲವಾದ ಅಂತಃಶಕ್ತಿಯು ಉತ್ಪನ್ನವಾಯಿತು. ಇದು ಜನರ ಪ್ರತ್ಯಯಕ್ಕೆ ಆಗಿಂದಾಗ್ಗೆ ಬರಹತ್ತಿತು ಅವನ ಚರಿತ್ರೆಯಲ್ಲಿ ಈ ಬಗ್ಗೆ ಕಂಡುಬರುವ ಉದಾಹರಣೆಯೊಂದನ್ನು ನಾವು ಕೆಳಗೆ ವಿವರಿಸಿದ್ದೇವೆ.

ಸೋಮಾರಾಧ್ಯನು ಒಂದುದಿವಸ ಶ್ರೀಶೈಲಪರ್ವತದ ಮಹಿಮೆಯನ್ನು ಭಕ್ತಗಣಂಗಳಲ್ಲಿ ಹೇಳುತ್ತ ಇರಲಾಗಿ, ಅವನ ಬಾಯಿಂದ ಒಂದು ಮರ ಅದಕ್ಕೆ ಹಲವು ತೆರದ ಪುಷ್ಪ ಎಂಬ ಶಬ್ದಗಳು ಹೊರಟವು. ಆಗ ಅಲ್ಲಿದ್ದ ಅವನ ಅಳಿಯ ನಾದ ಗೂರಾಮಾತ್ಯನು ಇದನ್ನು ಕೇಳಿ ಹೀಗಿರುವದು ನಿಜವೇ ಎಂದು ಪ್ರಶ್ನೆ ಮಾಡಿದನು. ಅವನು ದಿನಾಲು ತನ್ನ ಪೂಜೆಯಲ್ಲಿ ಐದು ಬೇರೆ ಬೇರೆ ಪುಷ್ಪಗಳನ್ನು ತನ್ನ ಲಿಂಗಕ್ಕೆ ಅರ್ಪಿಸುವ ಕ್ರಮವನ್ನು ಇಟ್ಟುಕೊಂಡಿದ್ದನು. ಸೋಮಾರಾಧ್ಯನು ಇದನ್ನು ತಿಳಿದು ನಮ್ಮ ಹಿತ್ತಿಲಲ್ಲಿ ಒಂದು ಗಿಡವಿದೆ. ಅದರಲ್ಲಿ ಐದು ಪುಷ್ಪಗಳನ್ನೆ ತೆಗೆದುಕೊಂಡು ಬಾ. ಎಂದು ಹೇಳಿದನು. ಗೂರಾಮಾತ್ಯನು ಹಿತ್ತಲಲ್ಲಿ ಹೋಗಿ ತಿರುಗಿ ಬಂದು, ಅಲ್ಲಿ ಹತ್ತಿಯ ಗಿಡವೊಂದಿದೆ, ಬೇರೆ ಗಿಡಗಳಿಲ್ಲ ಎಂದು ಹೇಳಿದನು. ಅದಕ್ಕೆ ಸೋಮಾರಾಧ್ಯನು ಈ ಭಾವವನ್ನು ಬಿಟ್ಟು ನಾನು ಹೇಳಿದಂತೆ ನೋಡು ಎಂದು ನುಡಿದನು ಆಗ ಗೂರಾಮಾತ್ಯನು ಹಾಗೆಯೇ ಹಿತ್ತಲಲ್ಲಿ ಹೋಗಿ ನೋಡಲು ಆ ಗಿಡಕ್ಕೆ ಐದು ಹೂವುಗಳಿರುವದು ಕಂಡುಬಂದಿತು. ಅದರ ಬೇರೆ ಬೇರೆ ಕೊನೆಗಳಲ್ಲಿ ಜಾಜಿ, ಸಂಪಿಗೆ, ಮಲ್ಲಿಗೆ, ಪೊಂದಾವರೆ, ಕಣಗಿಲೆ ಪುಷ್ಪಗಳನ್ನು ಕಂಡು ಆಶ್ಚರ್ಯಪಟ್ಟು ಹೀಗಾದುದನ್ನು ಸಭಿಕರಿಗೆ ತಿಳಿಸಿದನು. ಸೋಮಾರಾಧ್ಯನಲ್ಲಿ ಶೀಲಗಳ ಮೂಲಕ ಒಂದು ವಿಲಕ್ಷಣ ಸಾಮರ್ಥ್ಯವು ಉಂಟಾಗಿದ್ದು, ಇದರ ಪರಿಣಾಮವೇ ಇದೆಂದು ಅಲ್ಲಿ ನೆರೆದವರು ಭಾವಿಸಿ ಅವನನ್ನು ಸ್ತುತಿಸುವವರಾದರು.

ಸೋಮಾರಾಧ್ಯನಿದ್ದುದು ವೀರಶೈವ ಮತಪ್ರಸಾರದ ಕಾಲವಲ್ಲಿ. ಆಗ, ಪರವಾದಿಗಳ ಮತಗಳನ್ನು ಖಂಡಿಸಿ ಶಿವಾನುಭವದ ತತ್ವಗಳನ್ನು ನೆಲೆಗೊಳಿಸುವ ಕಾರ್ಯಗಳು ಎಲ್ಲ ಕಡೆಗೂ ಭರದಿಂದ ನಡೆದಿದ್ದವು. ಇಂಥ ವಾದಗಳಲ್ಲಿ ಪಾಲ್ಕುರಿಕೆ ಸೋಮಾರಾಧ್ಯನು ಬಹು ಮುಂದುವರಿದವನಾಗಿದ್ದನು. ರೇವಣಾರಾಧ್ಯನ ಕಾಲದಿಂದಲೂ ಇಂಥ ಮತಪ್ರಸಾರದ ಕಾರ್ಯಗಳು ಕರ್ನಾಟಕಾಂಧ್ರದೇಶಗಳಲ್ಲಿ ಭರದಿಂದ ಸಾಗಿದ್ದವು. ಹೀಗಿರಲು ಒಂದು ದಿವಸ ವೈಷ್ಣವರಿಬ್ಬರು ಪಾಲ್ಕುರಿಕೆಗೆ ಬಂದು ಸೋಮಾರಾಧ್ಯನಿಗೆ ತಿಳಿಯದಂಥ ಪ್ರಶ್ನೆಗಳನ್ನು ಹಾಕಿ ಅವನನ್ನು ಸೋಲಿಸಬೇಕೆಂದು ಯೋಚಿಸಿ ಒಬ್ಬ ಚಾರನನ್ನು ಕರೆದು — ಪಟ್ಟಣಕ್ಕೆ ಮೊಸರು ಕುರಿಕೆ ಶಾಸ್ತ್ರಿಗಳು ಮತ್ತು ಆಜ್ಯ ಕುರಿಕೆ ಶಾಸ್ತ್ರಿಗಳು ಹೀಗೆ ಇಬ್ಬರು ಶಾಸ್ತ್ರಿಗಳು ವಾದ ಮಾಡಲು ಬಂದಿದ್ದಾರೆ ಪಾಲ್ಕುರಿಕೆಯಾರಾಧ್ಯರಿಗೆ ಹೇಳಬೇಕೆಂದು ಅವರು ಹಾಸ್ಯದಿಂದ ಅವನ ಕೂಡ ಹೇಳಿ ಕಳಿಸಿದರು. ಸೋಮಾರಾಧ್ಯನು ಇದಕ್ಕೆ ಉತ್ತರವಾಗಿ — ಹಾಲು ಕುರಿಕೆಯ ಮೇಲೆ ಮೊಸರೆಲ್ಲಿಯದು? ಮೊಸರು ಕುರಿಕೆಯ ಮೇಲೆ ಘೃತ (ಆಜ್ಯ) ಎಲ್ಲಿಂದ ಬಂದೀತು? ಮೊಸರು ಕುರಿಕೆಯ ಶಾಸ್ತ್ರಿಗಳು ಘೃತ ಕುರಿಕೆಯ ಶಾಸ್ತ್ರಿಗಳು ಪಾಲ್ಕುರಿಕೆ ಶಾಸ್ತ್ರಿಗಳಿಂದ ಹುಟ್ಟಿದವರು ಎಂದು ಹೇಳಿ ಕಳುಹಿದನು. ಚಾರನು ಹಾಗೆಯೇ ಉಭಯತರ ಕಡೆಗೆ ಹೋಗಿ ಹೇಳಲು, ಸೋಮಾರಾಧ್ಯನು ಬಲು ಗಟ್ಟಿಗನು ಚತುರನು, ಇಂಥವನ ಕೂಡ ನಮ್ಮ ವಾದ ಸಲ್ಲದು. ಎಂದು ಆ ವೈಷ್ಣವರಿಬ್ಬರೂ ನಾಚಿ ಸೋಮಾರಾಧ್ಯರನ್ನು ಭೆಟ್ಟಿಯಾಗದೆ ಪಟ್ಟಣದಿಂದ ಹಾಗೆಯೇ ಹೋಗಿ ಬಿಟ್ಟರು.

ಮುಂದೆ ಕರ್ನಾಟಕ ಆಂಧ್ರದೇಶಗಳಲ್ಲಿ ಸೋಮಾರಾಧ್ಯನ ಕೀರ್ತಿಯು ಎಲ್ಲ ಕಡೆಗೂ ಪಸರಿಸುತ್ತ ನಡೆಯಿತು. ಎಲ್ಲೆಲ್ಲಿಯೂ ಅವನು ಆಂಧ್ರ ಭಾಷೆಯಲ್ಲಿ ರಚಿಸಿದ ಬಸವ ಪುರಾಣದ ಪಠಣವು ನಡೆಯಹತ್ತಿತು.

ಹೀಗಿರುವಲ್ಲಿ ಓರುಗಲ್ಲಿ (ವರಂಗಲ್ಲು) ನಲ್ಲಿ ಕಾಕತೀಯ ವಂಶದ ರಾಜನಾದ ಪ್ರತಾಪರುದ್ರನು ಈ ಕಾಲದಲ್ಲಿ ರಾಜ್ಯವಾಳುತ್ತಿದ್ದನು. ಅವನು ಒಂದುದಿವಸ ಅಲ್ಲಿದ್ದ ಶಿವಾಲಯಕ್ಕೆ ದೇವರ ದರ್ಶನಕ್ಕೋಸ್ಕರ ಹೋಗಿರಲು ಅಲ್ಲಿ ಬಸವಪುರಾಣದ ಪ್ರವಚನವು ನಡೆದಿತ್ತು. ಅದನ್ನು ಕೇಳಲು ದೇವಾಲಯದಲ್ಲಿ ಜನರು ಕಿಕ್ಕಿರಿದಿದ್ದರು. ಅದನ್ನು ಅರಸನು ನೋಡಿ ಇಲ್ಲಿ ಏನು ನಡೆದಿದೆ ಎಂದು ಕೇಳಲು ಅಲ್ಲಿದ್ದ ಬ್ರಾಹ್ಮಣರು ಪಾಲ್ಕುರಿಕೆ ಸೋಮಾರಾಧ್ಯನೆಂಬೊಬ್ಬನು ಬಸವನೆಂಬುವನ ಪುರಾಣವನ್ನು ಹೊಸ್ತೆ

ತಾನೇ ರಚಿಸಿದ್ದಾನಂತೆ, ಉಂಡಾಡಿಗಳು ಇಲ್ಲಿ ನೆರೆದು ಅದನ್ನು ಕೇಳುತ್ತ ಕಾಲಕ್ಷೇಪಮಾಡುತ್ತಾ ಇದ್ದಾರೆ ಎಂದು ಹೇಳಿದರು. ಬ್ರಾಹ್ಮಣರು ಈ ಪ್ರಕಾರ ಬಸವೇಶ್ವರನನ್ನೂ ಸೋಮಾರಾಧ್ಯನನ್ನೂ ಪುರಾಣ ಕೇಳುತ್ತಲಿದ್ದವರನ್ನೂ ಜರಿದು ನುಡಿದದ್ದನ್ನು ಕೇಳಿ ಅದನ್ನು ಸೈರಿಸಲಾರದೆ ಅವರು ಪಾಲ್ಕುರಿಕೆಗೆ ಹೋಗಿ ಸೋಮಾರಾಧ್ಯನಿಗೆ ಆದ ಸಂಗತಿಗಳನ್ನು ನಿವೇದಿಸಿದರು. ಸೋಮಾರಾಧ್ಯನು ಅರಸನೆದುರು ಹೀಗೆ ನಡೆದದ್ದನ್ನು ತಿಳಿದು, ಶಿವಶರಣರ ತತ್ವಗಳ ಮಹತ್ವವನ್ನು ಅರಸನಲ್ಲಿ ಪ್ರಸ್ಥಾಪಿಸುವದು ಅವಶ್ಯವೆಂದು ಭಾವಿಸಿ ಓರುಗಲ್ಲಿಗೆ ಹೊರಡಲುದ್ಯುಕ್ತನಾದನು.

ಅವನು ಹೊರಡುವಾಗ ಬಂಡಿಗೆ ಮತ್ತು ಎತ್ತುಗಳಿಗೆ ಲಿಂಗಮುದ್ರೆಯನ್ನು ಒತ್ತಿಸಿದನು. ಆಮೇಲೆ ತಾನು ಒಳಗೆ ಕುಳಿತುಕೊಂಡು ಭವಿಗಳನ್ನು ನೋಡಬಾರದೆಂದು ಮೇಲೆ ಗುಡಾರದ ಮುಸುಕನ್ನು ಹಾಕಿಸಿ ಪ್ರವಾಸ ಮಾಡುತ್ತ ಓರುಗಲ್ಲಿನ ಹೆಬ್ಬಾಗಿಲಿಗೆ ಬಂದನು.

ಆಗ ಬಂಡಿಗೆ ಹೂಡಿದ ಬಸವಗಳು ಹೆಬ್ಬಾಗಿಲನ್ನು ಸಮೀಪಿಸಲು ಅವು ಪುರಪ್ರವೇಶವನ್ನು ಮಾಡದೆ ಅಲ್ಲಿಯೇ ನಿಂತುಕೊಂಡುಬಿಟ್ಟವು. ಪರಿಚಾರಕರು ಎಡಬಲ ನಿರೀಕ್ಷಿಸಲು ಯಾವ ಗಂಡಾಂತರವಿಲ್ಲೆಂದು ತಿಳಿದು ಅವರು ಬಸವಗಳನ್ನು ಮುಂದೆ ಹೊಡೆದರು. ಆದರೆ ಅವು ಮೂರುಮಾರು ಮಾತ್ರ ಮುಂದೆ ಹೋಗಿ ಪುನಃ ನಿಂತುಕೊಂಡುಬಿಟ್ಟವು. ಆಗ ಪರಿಚಾರಕರು ಮೇಲೆ ನೋಡುತ್ತಿರುವಲ್ಲಿ ಅಲ್ಲಿ ವಿಷ್ಣು ಪ್ರತಿಮೆಗಳಿರುವದನ್ನು ಕಂಡು ಅವುಗಳ ಕೆಳಗಿನಿಂದ ಗೂಳಿಗಳು ಹೋಗಲಿಲ್ಲವೆಂಬುದನ್ನು ತಿಳಿದರು ಇದನ್ನು ಅವರು ಸೋಮಾರಾಧ್ಯನಿಗೆ ಹೇಳಲು ಅವನು ಒಂದು ಚೀಟಿಯಲ್ಲಿ ಶಿವಮಂತ್ರವನ್ನು ಬರೆದು ತನ್ನ ಸಂಗ ಚತುರ್ಮುಖ ದೇಶಿಕನ ಕೈಯ್ಯಲ್ಲಿತ್ತು, ಅದನ್ನು ತತ್ ಪ್ರತಿಮೆಗಳಿದಿರಾಗಿ ಹಿಡಿ ಎನಲು ಅವರು ಹಾಗೆಯೇ ಹಿಡಿಯಲು ಆ ಬೊಂಬೆಗಳು ಘಟ್ಟನೆ ಧರೆಗುರುಳಿಬಿದ್ದವು. ಆ ಮೇಲೆ ಬಸವಗಳು ಅವುಗಳನ್ನು ತುಳಿಯುತ್ತ ಪುರಪ್ರವೇಶ ಮಾಡಿದವು.

ಪಾಲ್ಕುರಿಕೆ ಸೋಮಾರಾಧ್ಯನು ಪಟ್ಟಣಕ್ಕೆ ಬರುವನೆಂಬುದನ್ನು ಪರವಾದಿಗಳು ತಿಳಿದು ಅವನನ್ನು ಅಪಹಾಸ್ಯಕ್ಕೀಡುಮಾಡಬೇಕೆಂದು ಅವರು ಊರಲ್ಲಿದ್ದ ಉಂಡಾಡಿಗಳನ್ನು ವಿಭೂತಿ ರುದ್ರಾಕ್ಷಿಗಳಿಂದ ಅಲಂಕರಿಸಿ ಅವನನ್ನು ಕಾಣಲು ಮೊದಲು ಹೆಬ್ಬಾಗಿಲಿಗೆ ಕಳಿಸಿದ್ದರು. ಆದರೆ ಸೋಮಾರಾಧ್ಯನು ಅವರನ್ನು ಕಡೆಗಣಿಸಿ ಘನಮುಪ್ಯನೆಂಬ ತನ್ನ ಶಿಷ್ಯನ ಮನೆಗೆ ಬಂದು ಅಲ್ಲಿ ಇಳಿದನು.

ಮುಂದೆ ಸೋಮಾರಾಧ್ಯನು ಪಟ್ಟಣದಲ್ಲಿರುವ ವರೆಗೂ ತಾನು ಸರ್ವಾಂಗಲಿಂಗ ಪ್ರಸಾದಿಯಾಗಿ ತನ್ನ ಶೀಲದಲ್ಲಿ ಇರಹತ್ತಿದನು. ಪಟ್ಟಣದಲ್ಲಿಯ ಶಿಷ್ಯರೆಲ್ಲರೂ ಅವನನ್ನು ಭಕ್ತಿಯಿಂದ ಕಂಡು ಅವನ ಶುಶ್ರೂಷೆಯಲ್ಲಿ ತೊಡಗಿದವರಾದರು.

ಓರುಗಲ್ಲಿನ ರಾಜನಾದ ಪ್ರತಾಪರುದ್ರನು ದೇಶದಲ್ಲೆಲ್ಲ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಸೋಮಾರಾಧ್ಯನು ತನ್ನ ಪಟ್ಟಣಕ್ಕೆ ಬಂದಿರುವನೆಂಬುದನ್ನು ತಿಳಿದು ತನ್ನ ಓಲಗದಲ್ಲಿ ವಿದ್ವಾಂಸರಾದ ಪರವಾದಿಗಳನ್ನು ಬರಮಾಡಿಕೊಂಡು ಅವರ ಕೂಡ ವಿವಾದಗಳು ಜರಗುವಂತೆ ವ್ಯವಸ್ಥೆ ಮಾಡಿದನು. ಈ ವಿವಾದಗಳ ಕಾಲದಲ್ಲಿ ಸೋಮಾರಾಧ್ಯನು ಶಿವಶರಣರ ಧರ್ಮತತ್ವಗಳನ್ನು ವೇದ ವೇದಾಂತಗಳ ವಾಕ್ಯಗಳಿಂದ ಪ್ರಸ್ಥಾಪಿಸಿದನು. ಅರಸನು ಅವನ ವಿದ್ವತ್ತಿಗೆ ಪ್ರೀತನಾಗಿ ಅವನಿಗೆ ದೊಂಕಿಪರ್ತಿ ಮೊದಲಾದ ಗ್ರಾಮಗಳನ್ನು ಉಂಬಳಿ ಹಾಕಿಕೊಟ್ಟನು. ಹೀಗೆ ರಾಜಧಾನಿಯಲ್ಲಿ ಸೋಮನಾಥನು ಒಂಬತ್ತು ದಿವಸ ಕಳೆದು ಪಾಲ್ಕುರಿಕೆಗೆ ಮರಳಿ ಬಂದನು. ಅವನು ಬರುವ ಮುಂದೆ ಅರಸನಿಂದ ತನಗೆ ದೊರೆತ ಗ್ರಾಮಗಳನ್ನು ತನ್ನ ಶಿಷ್ಯರಿಗೆ ಕೊಟ್ಟುಬಿಟ್ಟನು.

ಓರುಗಲ್ಲಿನಲ್ಲಿ ಅರಸನ ಎದುರಿಗೆ ಸೋಮಾರಾಧ್ಯನು ತೋರಿಸಿದ ಮಹಾತ್ಮ್ಯ ಮತ್ತು ವಿದ್ವತ್ತೆ ಇವುಗಳ ವಾರ್ತೆಯು ಎಲ್ಲ ಕಡೆಗೂ ಹಬ್ಬಿತು. ಈ ಕಾಲದಲ್ಲಿ ಚಕ್ರಪಾಣಿ ರಂಗನಾಥನೆಂಬ ವೈಷ್ಣವಾಚಾರ್ಯನು ಒಬ್ಬ ವಿದ್ವಾಂಸನೆಂದು ದೇಶದಲ್ಲಿ ಪ್ರಸಿದ್ಧನಾಗಿದ್ದನು. ಅವನು ಸೋಮಾರಾಧ್ಯನ ವಾಕ್ ಪ್ರೌಢಿಮೆ ಮತ್ತು ಮಹಿಮಾತಿಶಯಗಳನ್ನೂ ಅವನು ಓರುಗಲ್ಲಿನಲ್ಲಿ ಅಚ್ಯುತ ಪ್ರತಿಮೆಯನ್ನು ಕೆಡಹಿದ್ದನ್ನೂ ಕೇಳಿ ಖತಿಗೊಂಡು ಅವನನ್ನು ವಾದದಲ್ಲಿ ಸೋಲಿಸಬೇಕೆಂಬ ಉತ್ಕಟೇಚ್ಛೆಯುಳ್ಳವನಾಗಿ ಪಾಲ್ಕುರಿಕೆಗೆ ಬಂದನು. ಅವನು ಬರುವ ಮುಂದ ಸೋಮಾರಾಧ್ಯನಿಗೆ ವಿರೋಧಿಗಳಾಗಿದ್ದ ಲೋಕಾಯತರು, ಬ್ರಹ್ಮವಾದಿಗಳು, ಬೌದ್ಧ ಜೈನರು ಮೊದಲಾದ ಪಂಗಡದವರನ್ನು ಕುರಿಗೊಳಿಸಿ ತನ್ನೊಡನೆ ಕರೆತಂದನು. ಹೀಗೆ ಪಟ್ಟಣದಲ್ಲಿ ಆಯಾ ಮತಸ್ಥರ ಒಂದು ದೊಡ್ಡ ತಂಡವೇ ಸಿದ್ಧವಾಯಿತು.

ಸೋಮಾರಾಧ್ಯನು ಹೀಗೆ ಅವರು ಕೂಡಿದ್ದನ್ನು ನೋಡಿ ಅತ್ಯಂತ ಆನಂದ ಭರಿತನಾದನು. ಅವನು ಅವರ ಸಭೆಯನ್ನು ಪಟ್ಟಣದಲ್ಲಿ ಸೇರಿಸಿದನು. ಆಗ ಪರವಾದಿಗಳು ತಮ್ಮ ಒಕ್ಕಣಿಕೆಗಳನ್ನು ಹೇಳುತ್ತ ಆರ್ಭಟಿಸುತ್ತ ಸಭೆಗೆ ಬರುತ್ತಾ ಇದ್ದರು. ಅವರೊಡನೆ ವಾದಿಸಲು ಸೋಮಾರಾಧ್ಯನು ಅಣಿಯಾಗಿ ನಿಂತನು. ಆಗ ವಾದವಿವಾದಗಳು ಹಲವು ದಿವಸಗಳ ವರೆಗೆ ನಡೆದವು. ಅವುಗಳಲ್ಲಿ ಸೋಮಾರಾಧ್ಯನು ಕ್ರಮ ಕ್ರಮವಾಗಿ ವಿರೋಧಿಗಳನ್ನು ವಾಗ್ವಾದದಲ್ಲಿ ಸೋಲಿಸುತ್ತ ಕಡೆಗೆ ಚಕ್ರಪಾಣಿ ರಂಗನಾಥನನ್ನು ಸೋಲಿಸಿದನು. ಆಗ ರಂಗನಾಥನು ಮ್ಲಾನ ಮುಖನಾಗಿ ಉಮ್ಮಳಿಸುತ್ತ ಪಟ್ಟಣವನ್ನು ಬಿಟ್ಟು ಸ್ವ ಗ್ರಾಮಕ್ಕೆ ತೆರಳುವವನಾದನು.

ಅವನು ತನ್ನ ಗ್ರಾಮಕ್ಕೆ ಹೋಗುವ ಮಾರ್ಗವು ಶ್ರೀಶೈಲ ಪರ್ವತದ ಮಗ್ಗುಲಿನಿಂದಲೇ ಇತ್ತು. ಆದರೆ ಅವನು ಆ ಪವಿತ್ರ ಪರ್ವತ ಶಿಖರವನ್ನು ನೋಡಬಾರದು, ನೋಡಿದರೆ ಅದು ದೋಷವೆಂದು ತಿಳಿದು ಪತ್ತಿಗೆಯನ್ನು ಅಡ್ಡ ಹಿಡಿಸಿ ಅದನ್ನು ಮರೆ ಮಾಡಿಕೊಳ್ಳುತ್ತ ಹೋದನು. ಆದರೆ ಇದಕ್ಕೆ ತಕ್ಕ ಪ್ರತಿಫಲವು ಅವನಿಗೆ ತತ್‌ಕ್ಷಣವೇ ದೊರಕಿತು. ಅವನ ಕಣ್ಣುಗಳು ಕೂಡಲೇ ಇಂಗಿ ಹೋಗಿ ಅವನು ಪೂರ್ಣ ಕುರುಡನಾದನು.

ರಂಗನಾಥನಿಗೆ ಈ ಸ್ಥಿತಿಯು ಉಂಟಾಗಲು ಅವನು ಸಂಕಟಪಡುತ್ತ ಹಾಗೆಯೇ ಅಹೋಬಲಕ್ಕೆ ಹೋಗಿ ನರಸಿಂಹನ ಮೊರೆಹೊಕ್ಕನು. ಅವನು ಅತ್ಯಂತ ದೈನ್ಯ ಬಟ್ಟು ನರಸಿಂಹನನ್ನು ಸ್ತುತಿಸುತ್ತಿರಲು ನರಸಿಂಹನು ಅವನಿಗೆ — ನಿನಗೇನು ಬೇಕು? ಬೇಡೆಂದು ಕೇಳಲು, ರಂಗನಾಥನು ನಡೆದ ಎಲ್ಲ ಸಂಗತಿಗಳನ್ನು ಅವನಿಗೆ ತಿಳಿಸಿದನು.

ಅದಕ್ಕೆ ನರಸಿಂಹನು — ನೀನು ತಪ್ಪು ಮಾಡಿದೆ. ನೀನು ಹೀಗೆ ಮಾಡತಕ್ಕದ್ದಿದ್ದಿಲ್ಲ. ನೀನು ಇನ್ನು ಮೇಲೆ ಆ ಮಲ್ಲಿಕಾರ್ಜುನ ಸ್ವಾಮಿಯ ಕಡೆಗೆಯೇ ಹೋಗಿ ಅವನಿಗೆ ಶರಣು ಹೋಗು ಎಂದು ಹೇಳಿ ಕಳುಹಿದನು. ಹಾಗೆಯೇ ರಂಗನಾಥನು ಶ್ರೀಶೈಲಕ್ಕೆ ಬಂದು ಮಲ್ಲಿಕಾರ್ಜುನ ಸ್ವಾಮಿಯನ್ನು ನಾನಾ ಪ್ರಕಾರವಾಗಿ ಸ್ತುತಿಸಿದನು. ಆಗ ಅವನ ಒಂದು ಕಣ್ಣು ಥಳಕ್ಕನೆ ಹೊಳೆಯಿತು. ಬಳಿಕ ರಂಗನಾಥನು ಮಲ್ಲಿಕಾರ್ಜುನನಿಗೆ — ನೀನು ನನಗೆ ಒಂದು ಕಣ್ಣು ಮಾತ್ರ ಕೊಟ್ಟೆ. ಇನ್ನೊಂದನ್ನು ಕೊಡಬೇಕು ಎಂದು ಕೇಳಿಕೊಂಡನು.

ಆಗ ಮಲ್ಲಿಕಾರ್ಜುನನು ನೀನು ಸೋಮಾರಾಧ್ಯನ ಕಡೆಗೆಯೇ ಹೋಗು. ಅವನೇ ಎರಡನೇ ಕಣ್ಣನ್ನು ಕೊಡುವನು ಎಂಬ ಶಬ್ದಗಳು ಮೂರ್ತಿಯೊಳಗಿಂದ ಹೊರಟವು. ಅದಕ್ಕೆ ರಂಗನಾಥನು ನೀನೇ ಏಕೆ ಕೊಡುವದಿಲ್ಲ ಎಂದುಕೇಳಲು ಅವನು ಉಳಿದ ಕಣ್ಣನ್ನು ಅವನಿಂದ ಪಡೆದು ಅವನಿಂದಲೇ ದೀಕ್ಷೆಯನ್ನು ಹೊಂದು ಎಂದು ಹೇಳಿದನು.

ಆಗ ರಂಗನಾಥನು ಹಾಗೆಯೇ ಆಗಲೆಂದು ಪಾಲ್ಕುರಿಕೆಗೆ ಹೋಗಿ ಸೋಮನಾಥನನ್ನು ಕಂಡು ನನ್ನಿಂದ ತಪ್ಪಾಗಿದೆ. ನಾನು ಮಲ್ಲಿಕಾರ್ಜುನ ಸ್ವಾಮಿಯೊಡನೆ ಅಹಂಕಾರದಿಂದ ನಡೆಯತಕ್ಕದ್ದಿದ್ದಿಲ್ಲ. ನನಗೆ ದೀಕ್ಷೆಯನ್ನಿತ್ತು ಎರಡನೆಯ ಕಣ್ಣನ್ನು ಕೊಟ್ಟು ರಕ್ಷಿಸು ಎಂದು ಹೇಳಿಕೊಂಡನು.

ಆಗ ಸೋಮಾರಾಧ್ಯನ ಅಪ್ಪಣೆಯಿಂದ ಅವನ ಕುಮಾರನಾದ ಚತುರ್ಮುಖ ಬಸವನು ಅವನ ಕಣ್ಣಿಗೆ ಭಸಿತವನ್ನು ಹಚ್ಚಲು, ಅದು ತಿರುಗಿ ಬಂದಿತು. ಆ ಮೇಲೆ ಚತುರ್ಮುಖ ಬಸವನು ತನ್ನ ತಂದೆಯ ಆಜ್ಞೆಯಂತೆ ರಂಗನಾಥನಿಗೆ ಲಿಂಗದೀಕ್ಷೆಯನ್ನು ಮಾಡುವವನಾದನು. ಅಂದಿನಿಂದ ರಂಗನಾಥನು ವೀರಶೈವಾಚಾರದಲ್ಲಿ ನಿರತನಾಗಿ ಸೋಮಾರಾಧ್ಯನ ಪ್ರೀತಿಯ ಶಿಷ್ಯನಾಗಿ ಉಳಿದನು.

ರಂಗನಾಥನು ಬಹಳ ದೊಡ್ಡ ವಿದ್ವಾಂಸನಾಗಿದ್ದನು. ಅವನು ಹೀಗೆ ದೀಕ್ಷೆಯನ್ನು ಹೊಂದಿದ ಬಳಿಕ ವೀರಭದ್ರ ವಿಜಯ ಮತ್ತು ಶರಭ ಚಾರಿತ್ರ ಎಂಬ ಎರಡು ಶ್ರೇಷ್ಠ ಗ್ರಂಥಗಳನ್ನು ರಚಿಸಿ ಸೋಮಾರಾಧ್ಯನಿಗೆ ಅರ್ಪಿಸಿದನು. ಅವನು ಪಂಚಾಕ್ಷರೀ ರಗಳೆಯನ್ನು ರಚಿಸಿದ್ದಾನೆ.

ಸೋಮಾರಾಧ್ಯನು ತನ್ನ ೬೪ ಶೀಲಗಳಲ್ಲಿ ದೃಢವಾದ ವಿಶ್ವಾಸವುಳ್ಳವನಾಗಿ ಅವುಗಳಂತೆ ಆಚರಿಸುತ್ತಲೇ ಬಂದನು. ಹೀಗಿರಲು ಕರ್ನಾಟಕದಲ್ಲಿ ಕಲ್ಲೆ, ಎಂಬ ಗ್ರಾಮದಲ್ಲಿ ಚೆನ್ನಮ್ಮನೆಂಬುವಳು ತನ್ನಂತೆಯೇ ೬೪ ಶೀಲಗಳನ್ನು ದೃಢ ಭಕ್ತಿಯಿಂದ ಆಚರಿಸುತ್ತಿದ್ದಾಳೆಂಬ ವಾರ್ತೆಯನ್ನು ಕೇಳಿ ಅವಳನ್ನು ಕಾಣಬೇಕೆಂದು ನಿರ್ಧರಿಸಿದನು. ಆಮೇಲೆ ಅವನು ತನ್ನ ಮಗ ಚತುರ್ಮುಖ ಬಸವ ಮತ್ತು ಕೆಲವು ಪರಿಚಾರಕರೊಂದಿಗೆ ಆ ಗ್ರಾಮದ ಕಡೆಗೆ ಹೊರಟನು.

ಅವನು ಮೊದಲು ಪಂಚನಂದಿಗೆ ಬಂದು ಅಲ್ಲಿಂದ ಈಗ ತುಮಕೂರ ಪಟ್ಟಣಕ್ಕೆ ಸಮೀಪವಿರುವ ಕಕುದ್ಗಿರಿ, ಅಲ್ಲಿಂದ ಕಲ್ಲೆಗ್ರಾಮಕ್ಕೆ ಬಂದನು. ಈ ಗ್ರಾಮವು ಪಾಲ್ಕುರಿಕೆಯಿಂದ ನೈಋತ್ಯದಿಕ್ಕಿಗೆ ಸುಮಾರು ೬೦-೭೦ ಮೈಲುಗಳ ಮೇಲೆ ಇರುತ್ತದೆ. ಕಕುದ್ಗಿರಿಯ ದಕ್ಷಿಣಕ್ಕೆ ಕೆಲವು ಅಂತರದ ಮೇಲೆ ತಾರಕಾಚಲವೆಂಬ ಪರ್ವತವಿದೆ. ಇದರ ಸಮೀಪದಲ್ಲಿ ಈ ಕಲ್ಲೆ ಗ್ರಾಮವಿದ್ದು ಈ ಪರ್ವತಪ್ರದೇಶದಲ್ಲಿ ತಾರಕಾಸುರನ ಮಕ್ಕಳು ಉಜ್ವಲ ಭಕ್ತಿಯಿಂದ ತಪಸ್ಸು ಮಾಡುತ್ತಿದ್ದರು. ಅವರ ಪ್ರಭಾವದಿಂದ ಕಲ್ಲೇಶ್ವರನೆಂಬ ಲಿಂಗವು ಇಲ್ಲಿ ಉದಯವಾಯಿತು. ಈ ಲಿಂಗವಿದ್ದಗ್ರಾಮಕ್ಕೆ ಕಲ್ಲೆ ಎಂಬ ಹೆಸರು ಬಂದಿತು. ಹೀಗೆ ಈ ಪ್ರದೇಶವು ಪವಿತ್ರವಾದುದೆಂದು ಪುರಾಣ ಪ್ರಸಿದ್ಧವಾಗಿರುತ್ತದೆ.

ಬೆಂಗಳೂರ ಪಟ್ಟಣದಿಂದ ಪಶ್ಚಿಮಕ್ಕೆ ಮಾಗಡಿ ಎಂಬ ಗ್ರಾಮವಿದ್ದು ಈ ಗ್ರಾಮದ ವಾಯುವ್ಯದಿಕ್ಕಿಗೆ ೫-೬ ಮೈಲುಗಳ ಮೇಲೆ ಈ ಕಲ್ಲೆಗ್ರಾಮವಿರುತ್ತದೆ ಈ ಗ್ರಾಮದಲ್ಲಿ ಈಗಲೂ ಕಲ್ಲೇಶ್ವರನ ದೇವಾಲಯವಿದೆ.

ಸೋಮಾರಾಧ್ಯನು ಈ ಕಲ್ಲೆ ಗ್ರಾಮಕ್ಕೆ ಬಂದು ಚನ್ನಮ್ಮನ ಗೃಹದಲ್ಲಿ ಶಿವಗಣ ಗೋಷ್ಠಿಗಳಲ್ಲಿ ಒಂದು ತಿಂಗಳು ಕಾಲ ಕಳೆದನು. ಆ ಮೇಲೆ ಅವನು ಸ್ವಗ್ರಾಮಕ್ಕೆ ಹೊರಡಲು ಸಿದ್ಧನಾಗಿ ಅವಕ್ಕೋಸ್ಕರ ಅವನು ಚನ್ನಮ್ಮನ ಅಪ್ಪಣೆಯನ್ನು ಕೇಳಿದನು. ಆದರೆ ಚನ್ನಮ್ಮನು ಆವ ಕಾರಣದಿಂದಲೋ ಏನೋ, ಇನ್ನೂ ಕೆಲವು ದಿವಸ ಇಲ್ಲಿಯೇ ಇರಲು ಅವನಿಗೆ ಕೇಳಿಕೊಂಡಳು. ಆದರೆ ಸೋಮನಾಥನು ತನ್ನಗ್ರಾಮಕ್ಕೆ ಹೋಗಲು ಆತುರಪಟ್ಟು ಅಲ್ಲಿರಲು ಒಪ್ಪದ್ದರಿಂದ ಅವಳು ಅದಕ್ಕೆ ಒಪ್ಪಿಕೊಂಡಳು.

ಆ ಮೇಲೆ ಸೋಮನಾಥನು ಬಂಡಿಯಲ್ಲಿ ಕುಳಿತುಕೊಂಡು ಗ್ರಾಮದಿಂದ ಹೊರಟನು. ಆದರೆ ವೃಷಭಗಳು ಮುಂದೆ ಹೆಜ್ಜೆಯನ್ನಿಡದೆ ಅಲ್ಲಿಯೇ ನಿಂತುಕೊಂಡು ಬಿಟ್ಟವು. ಅವು ಏನು ಮಾಡಿದರೂ ಮುಂದೆ ಹೋಗಲಿಲ್ಲ. ಹೀಗೇಕಾಯಿತೆಂದು ಸೋಮಾರಾಧ್ಯನು ಶರಣರನ್ನು ಕೇಳಲು ಅವರು ಭಸಿತವನ್ನು ಹಿಡಿದು ಅದಕ್ಕೆ ಏರಿ ಹೋಗುತ್ತಾ ಇದ್ದೀರಿ. ಹೀಗೆ ಹೋಗುವದು ಸಲ್ಲದೆಂದು ಹೇಳಿದರು. ವೃಷಭಗಳು ಮುಂದೆ

ಒಂದಡಿಯನ್ನಿಡದೆ ಹೋಗಲು ಭಕ್ತರೆಲ್ಲರೂ ಇದು ಚೋದ್ಯವೆಂದು ನುಡಿಯುತ್ತಿರಲು ಸೋಮಾರಾಧ್ಯನು ಸ್ವಗ್ರಾಮಕ್ಕೆ ಹೋಗಲು ಯುಕ್ತವಲ್ಲವೆಂದು ಹಿಂದಿರುಗಿ ಚನ್ನಮ್ಮನ ಮನೆಗೆಯೇ ತಿರುಗಿ ಬಂದನು.

ಕೆಲವು ದಿವಸಗಳಾದ ಮೇಲೆ ಶಂಕರನು ಸೋಮಾರಾಧ್ಯನಿಗೆ ಪ್ರತ್ಯಕ್ಷನಾಗಿ ಅವನಿಗೆ — ದುರ್ಘಟವಾದ ಸರ್ವ ಶೀಲಗಳನ್ನು ನೀನು ಈ ವರೆಗೆ ಆಚರಿಸುತ್ತ ಬಂದಿರುವಿ. ಹೀಗೆ ಆಚರಿಸುವವರು ಜಗತ್ತಿನಲ್ಲಿ ಯಾರೂ ಇಲ್ಲ ಆದ್ದರಿಂದ ನೀನು ನನ್ನೊಡನೆ ಕೈಲಾಸಕ್ಕೆ ಬರಬೇಕೆಂದು ಹೇಳಿದನು. ಅದಕ್ಕೆ ಸೋಮಾರಾಧ್ಯನು ಶಂಕರನಿಗೆ — ನನ್ನ ಅಂಗದಲ್ಲಿ ಆಚಾರವು ನೆಲಿಸಿರುತ್ತದೆ. ಇಂಥದನ್ನು ನಾನು ಬೇರೆ ಯಾವ ಲೋಕದಲ್ಲಿಯೂ ತರಲಾರೆನು ಶಿವಾಚಾರವು ನನ್ನ ಆತ್ಮನಲ್ಲಿ ಪೂರ್ಣವಾಗಿ ನೆಲಸಿರುವದರಿಂದ ಅದು ಲಿಂಗ ದೇಹವೆನಿಸಿಕೊಳ್ಳುತ್ತದೆ ಆದರಿಂದ ಶಿವಶರಣರು ಜೀವನ್ಮುಕ್ತರು. ಅವರು ಇಂಥ ದೇಹವನ್ನು ಬಿಟ್ಟು ಬೇರಾವ ಲೋಕಕ್ಕೆ ಹೋಗರು. ಆದ್ದರಿಂದ ಅಖಂಡಾದ್ವೈತ, ಸುಖರೂಪ, ನಿರ್ಗುಣ, ಪರಬ್ರಹ್ಮ ಸ್ವರೂಪರಾದ ಅವರು ತಮ್ಮ ಲಿಂಗದಲ್ಲಿಯೇ ಲಯವಾಗುವರು. ಆದ್ದರಿಂದ ಯಾವ ಕಾರಣದಿಂದಲೂ ನಾನು ಈ ದೇಹವನ್ನು ಬಿಟ್ಟು ನಿನ್ನ ಲೋಕಕ್ಕೆ ಬರಲಾರೆನು ಲಿಂಗದಲ್ಲಿ ಉದಯವಾದ ಶರಣನು ಲಿಂಗದಲ್ಲಿಯೇ ಲಯವಾಗುವನು. ಆದ್ದರಿಂದ ಭೂತಳದಲ್ಲಿಯೇ ಘನ ಸಮಾಧಿಯಲ್ಲಿ ನಾನು ನನ್ನ ಶರೀರವನ್ನು ಬಿಟ್ಟು ಇಲ್ಲಿಯೇ ಲಯವಾಗುವೆನು, ಎಂದು ಹೇಳಲು ಶಂಕರನು ಸೋಮಾರಾಧ್ಯನ ಉತ್ತರಕ್ಕೋಸ್ಕರ ಅತ್ಯಂತ ಆನಂದಬಟ್ಟು, ಅಲ್ಲಿಯೇ ಅಂತರ್ಧಾನನಾದನು.

ಮುಂದೆ ಸೋಮಾರಾಧ್ಯನು ಕೆಲ ದಿನಗಳು ಕಳೆದು ಹೋದಮೇಲೆ ಭಕ್ತರನ್ನು ಕರಿಸಿ ಅವರಿಗೆ — ನನಗೆ ಇನ್ನುಮುಂದೆ ೨೧ ದಿವಸಗಳಲ್ಲಿ ಸಮಾಧಿಯಾಗುವದೆಂದು ಹೇಳಿದನು.

ಮುಂದೆ ಸಮಾಧಿಯಾಗುವ ದಿನವು ಬರಲು ಸೋಮಾರಾಧ್ಯನು ಶಿವಶರಣರನ್ನು ಕರೆದು ಅವರಿಗೆ — ಈ ಪಟ್ಟಣವು ಮುಂದೆ ಕೂಷ್ಮಾಂಡ ಫಲನಿಮಿತ್ತವಾಗಿ ಹಾಳಾಗುವದು. ಇದನ್ನು ನೀವು ಮನಸ್ಸಿನಲ್ಲಿ ತಂದು ಕೊಳ್ಳಬಾರದು, ಎಂದು ಹೇಳಿ ಕಲ್ಲೇಶ್ವರನ ಸಭಾಂಗಣದಲ್ಲಿ ಮಕುಟಾ

ಗವುದಲ್ಲಿ ಹೇಳಿದ ಪ್ರಕಾರ ಘನತರವಾದ ಒಂದು ಸಮಾಧಿಯನ್ನು ನಿರ್ಮಿಸಿದನು. ಅದು ಮುಗಿದಬಳಿಕ ಸೋಮಾರಾಧ್ಯನು ತನ್ನ ಅವಸಾನದವೇಳೆಯು ಪ್ರಾಪ್ತವಾಗಲು ಅವನು ಸಮಾಧಿಯಲ್ಲಿಯ ಸೋಪಾನಗಳನ್ನಿಳಿದು ವೇದಿಕೆಯಲ್ಲಿ ಮೂರ್ತಗೊಂಡು ಭಸಿತವನ್ನು ಧರಿಸಿ ಲಿಂಗ ಪಾದೋದಕದಿಂದ ಪ್ರಕ್ಷಾಲನಗೈದು ಪಂಚಾಕ್ಷರ ಮಂತ್ರವನ್ನು ಉಚ್ಚರಿಸುತ್ತ ತನ್ನ ಲಿಂಗದಲ್ಲಿಯೇ ಲಯವಾದನು.

ಭಕ್ತಜನರು ಸಮಾಧಿಯನ್ನು ಮುಚ್ಚಿ ಅದರಮೇಲೆ ಎರಡು ವೃಷಭಗಳನ್ನು ನೆಲೆಗೊಳಿಸಿ ಪಾಲ್ಕುರಿಕೆ ಸೋಮಾರಾಧ್ಯನು ಘನಮಹಿಮನೆಂದು ಅವನನ್ನು ಸ್ತುತಿಸುವವರಾದರು. ಅವನ ಈ ಸಮಾಧಿಯು ಈ ಗ್ರಾಮದಲ್ಲಿ ಈಗಲೂ ಇದೆ.

ಸೋಮಾರಾಧ್ಯನು ಹೀಗೆ ಲಿಂಗೈಕ್ಯನಾದ ಬಳಿಕ ಭಕ್ತರೆಲ್ಲರೂ ಕೂಡಿ ಅವನ ಮಗನಾದ ಚತುರ್ಮುಖ ಬಸವನಿಗೆ ಗುರುಪಟ್ಟವನ್ನು ಕಟ್ಟಿದರು

ಪಾಲ್ಕುರಿಕೆ ಸೋಮಾರಾಧ್ಯನು ವೀರಶೈವ ಗ್ರಂಥ ಕಾರರಲ್ಲಿ ಮತ್ತು ಮಹಿಮರಲ್ಲಿ ಉಚ್ಚ ಸ್ಥಾನವನ್ನು ಹೊಂದಿರುತ್ತಾನೆಂಬುದು ನಿರ್ವಿವಾದ ವಾದದ್ದು. ಆದರೆ ಅವನಿಗೂ ಇತರ ಆಂಧ್ರ ವಿದ್ವಾಂಸರಿಗೂ ಕೆಲವು ವ್ಯತ್ಯಾಸಗಳಿರುವದು ಕಂಡು ಬರುತ್ತದೆ. ಆಂಧ್ರ ಪಂಡಿತರು ಬ್ರಾಹ್ಮಣ್ಯದ ರೀತಿಗಳಿಗೆ ಒಳಗಾಗಿ ಅವರ ಆಚರಣೆಗಳನ್ನಿಟ್ಟುಕೊಂಡಿರುವದು ಕಂಡು ಬರುತ್ತದೆ. ಮಲ್ಲಿಕಾರ್ಜುನ ಪಂಡಿತಾರಾಧ್ಯನು ತಾನು ಬ್ರಾಹ್ಮಣ್ಯವನ್ನು ಬಿಡಲಾರೆನೆಂದು ಬಸವೇಶ್ವರನಲ್ಲಿ ಹೇಳಿಕೊಂಡಿರುವದೇ ಇದಕ್ಕೆ ಉದಾಹರಣೆಯಾಗಿದೆ. ಹೀಗೆ ಆಂಧ್ರ ವೀರಶೈವರಲ್ಲಿಯ ಕೆಲ ಪಂಗಡಗಳು ಈಗಲೂ ಲಿಂಗ ಯಜ್ಞೋಪವೀತಗಳನ್ನು ಧರಿಸುವದೂ ಕಂಡುಬರುತ್ತದೆ. ಆದರೆ ಪಾಲ್ಕುರಿಕೆ ಸೋಮಾರಾಧ್ಯನು ಈ ಆಂಧ್ರ ಪಂಡಿತರಂತೆ ಆಚರಿಸದೆ ಶಿವಶರಣರ ಆಚರಣೆಗಳನ್ನು ಸಂಪೂರ್ಣವಾಗಿ ಮನ್ನಿಸಿದ್ದಾನೆ. ಉದಾ :— ಅವನು ಕೈಕೊಂಡ ೬೪ ಶೀಲಗಳಲ್ಲಿ ೪ನೇ ಶೀಲವು ಪಂಚ ಸೂತಕಗಳನ್ನು ಬಿಡುವದೆಂಬುದಿದೆ. ೫ನೇ ಶೀಲವು ತದ್ದಿನ ಮೊದಲಾದ ಕರ್ಮಗಳನ್ನು ಬಿಡುವದು ಇದೆ. ೭ನೇ ಶೀಲವು ತೀರ್ಥ ಕ್ಷೇತ್ರಸ್ನಾನ ಲಿಂಗಪೂಜೆಗಳನ್ನು ಬಿಡುವುದು ಇದೆ. ೧೩ನೇ ಶೀಲವು ಜಂಗಮ ಪಾದೋದಕದಿಂದ ಲಿಂಗಕ್ಕೆ ಮಜ್ಜನಮಾಡಿ

...ತ್ತ ಜಂಗಮದ ಶೇಷವನ್ನು ಲಿಂಗಕ್ಕೆ ನೈವೇದ್ಯ ಮಾಡಬೇಕೆಂದಿದೆ. ...ಆನೇ ಶೀಲವು ಶಿವಭಕ್ತರಲ್ಲಿ ಜಾತಿ ಸೂತಕಗಳನ್ನೆಣಿಸದಿರುವದಿದೆ. ಹೀಗೆ ಈ ಶೀಲಗಳಿಂದ ಸೋಮನಾರಾಧ್ಯರು ಶಿವಶರಣರ ತತ್ವಗಳನ್ನು ಅಕ್ಷರಶಃ ಮನ್ನಿಸುತ್ತಿದ್ದರೆಂಬುದು ಸ್ಪಷ್ಟವಾಗಿದೆ. ಆದರೆ ಇತರ ಆಂಧ್ರ ವೀರಶೈವ ಪಂಡಿತರು ಬಸವೇಶ್ವರನಿಗೆ ಮನ್ನಣೆ ಕೊಡುತ್ತಿದ್ದರೂ ಕೆಲವೊಂದು ಮಿಶ್ರ ಮಾರ್ಗವನ್ನು ಅನುಸರಿಸುತ್ತಿದ್ದರೆಂದು ಅವರ ಗ್ರಂಥಗಳಿಂದ ಮತ್ತು ಅವರ ನಡೆಯಿಂದ ಕಂಡುಬರುತ್ತವೆ.

ಆದರೆ ಬಸವೇಶ್ವರನ ಕಾಲದಲ್ಲಿದ್ದ ಶಿವಶರಣರು ಈ ಶೀಲಗಳ ಕಟ್ಟು-ತರಣೆಗಳನ್ನು ವ್ಯವಹಾರದಲ್ಲಿ ಕೆಲಮಟ್ಟಿಗೆ ಸಿಥಿಲಗೊಳಿಸಿದಂತೆ ಅವರ ವಚನಗಳಿಂದ ಮತ್ತು ನಡೆಯಿಂದ ಗೊತ್ತಾಗುತ್ತದೆ. ಈ ಶೀಲಗಳನ್ನು ಅಕ್ಷರಶಃ ಅವರು ಅನುಸರಿಸಿದಲ್ಲಿ ಅವರು ಭವಿಗಳ ಕೂಡ ಎಷ್ಟು ಮಾತ್ರವೂ ಸಂಬಂಧವನ್ನಿಡುವದು ಸಾಧ್ಯವಾಗುವದಿಲ್ಲ. ಆದರೆ ಬಸವೇಶ್ವರನ ಕಾಲದಲ್ಲಿ ಬಸವೇಶ್ವರ, ಸೊಡ್ಡಳ ಬಾಚರಸ, ಕೊಂಡಗುಳಿಯ ಕೇಶಿರಾಜ, ಮಧುವರಸ, ಮೊದಲಾದವರು ಭವಿಗಳಾದ ರಾಜರಲ್ಲಿ ನೌಕರಿಯಲ್ಲಿದ್ದದ್ದು ಕಂಡುಬರುತ್ತದೆ. ಮತ್ತು ಅನೇಕ ಶಿವಶರಣರು ಒಕ್ಕಲತನ, ಕುರಿ ಕಾಯುವದು, ತೊಗಲು ಹದಮಾಡುವದು ಇಂಥ ಶೀಲಾಚರಣೆಗೆ ವಿರೋಧವಾದ ಕಾಯಕಗಳನ್ನು ಕೈಕೊಂಡಿರುತ್ತಾರೆ. ಆದರೂ ಅವರು ಶಿವಾನುಭವಿಗಳೆಂದೆನಿಸಿಕೊಂಡಿದ್ದಾರೆ. ಇದರಿಂದ ಶೀಲಗಳ ಆಚರಣೆಯನ್ನು ಪಾಲಿಸುವಲ್ಲಿ ಬಸವಾದಿ ಪ್ರಮಥರು ಅವುಗಳ ಬಿಗಿತನವನ್ನು ಸಡಿಲು ಮಾಡಿದ್ದು ಕಂಡುಬರುತ್ತವೆ

ಬಸವಾದಿ ಪ್ರಮಥರು ಹೀಗೆ ಆಚರಿಸಿದ್ದು ಜಾಣತನದ ಸಂಗತಿಯಾಗಿದೆ. ಇದರಿಂದ ವೀರಶೈವ ಧರ್ಮವನ್ನು ಎಲ್ಲ ಸಮಾಜಗಳಲ್ಲಿ ಪ್ರಸಾರ ಮಾಡುವದು ಅವರಿಗೆ ಶಕ್ಯವಾಯಿತು. ಉದ್ಯೋಗಗಳ ಮೂಲಕ ಉಂಟಾಗಿರುವ ಜಾತಿಗಳು ಕಡಿಮೆ ಎಂದು ತಿಳಿಯಲು ಬಾರದಂತಾಯಿತು. ಅದರ ಬದಲು ನೀತಿ, ಧರ್ಮ, ಸದಾಚಾರ ಇವುಗಳಿಗೆ ಅವರು ಉನ್ನತ ಸ್ಥಾನವನ್ನು ಕೊಟ್ಟರು. ಇದರಿಂದ ಕಾಯಕದ ಮಹತ್ವವು ಹೆಚ್ಚಿತು. ಹೀಗೆ ಕರ್ನಾಟಕ ದೇಶದಲ್ಲಿ ವೀರಶೈವ ಧರ್ಮವು ಎಲ್ಲ ಸಮಾಜಗಳಲ್ಲಿ ಮತ್ತು ಎಲ್ಲ ಕಡೆಗೆ ಬೆಳೆಯಲು ಸಾಧ್ಯವಾಯಿತು. ಮತ್ತು ಅವರಲ್ಲಿ ಬಹು ಜನರು ವಚನಕಾರರಾದರು ಮತ್ತು ಅವರು ಶಿವಶರಣರೆಂದೆನಿಸಿಕೊಂಡರು.

ಆದರೆ ಆಂಧ್ರ ದೇಶದಲ್ಲಿ ಹೀಗಾದುದು ಕಂಡು ಬರುವದಿಲ್ಲ. ಅಲ್ಲಿ ಪಂಡಿತರು ಬ್ರಾಹ್ಮಣ್ಯದ ವಿಚಾರಗಳನ್ನು ಅನುಸರಿಸಿದ್ದರಿಂದ, ಅಲ್ಲಿ ವೀರಶೈವ ಧರ್ಮವು ಕರ್ನಾಟಕದಲ್ಲಿಯಂತೆ ಬೆಳೆಯಲಿಲ್ಲ. ಅಲ್ಲಿ ವಚನಗಳ ರೀತಿಯನ್ನನುಸರಿಸಿ ಯಾರೂ ಧರ್ಮ ಗ್ರಂಥಗಳನ್ನು ಬರೆಯಲಿಲ್ಲ. ಇದರಿಂದ ಅಲ್ಲಿ ಧಾರ್ಮಿಕ ಪ್ರಸಾರವು ಕರ್ನಾಟಕದಲ್ಲಿಯಂತೆ ಆಗಿರುವದಿಲ್ಲ.

ಪಾಲ್ಕುರಿಕೆ ಸೋಮಾರಾಧ್ಯನು ಅರವತ್ತುನಾಲ್ಕು ಶೀಲಗಳ ಆಚರಣೆಗಳಲ್ಲಿ ಸಿಲುಕಿಕೊಂಡಿದ್ದರಿಂದ ಅವನಿಗೆ ಜನಸಾಮಾನ್ಯರ ಸಂಬಂಧವು ತಪ್ಪಿಹೋಯಿತು. ಒಂದು ವೇಳೆ ಅವನು ಉತ್ತರ ಕರ್ನಾಟಕದ ಶಿವಶರಣರ ರೀತಿಯನ್ನು ಅನುಸರಿಸಿ ವರ್ತಿಸಿದ್ದರೆ, ಅವನಿಗೆ ಸಂಬಂಧವಿದ್ದ ಬೆಂಗಳೂರು, ತುಮಕೂರು, ಕೋಲಾರ ಜಿಲ್ಲೆಗಳು, ಹಾಗೆಯೇ ಅನಂತಪುರ, ಕಡಪಾ, ಅರ್ಕಾಟ ಜಿಲ್ಲೆಗಳು ಉತ್ತರ ಕರ್ನಾಟಕ ಜಿಲ್ಲೆಗಳಂತೆ ವೀರಶೈವ ಮಯವಾಗುತ್ತಿದ್ದವು.

ವಚನ ವಾಙ್ಮಯದ ರೀತಿಗಳು ಮತ್ತು ಅವರ ಪ್ರಸಾರ, ಉತ್ತರ ಕರ್ನಾಟಕ ದೇಶದಲ್ಲಿಯೂ ಕೂಡ ಬಹಳ ದಿವಸ ನಡೆದದ್ದು ಕಂಡು ಬರುವದಿಲ್ಲ. ಹರಿಹರನ ಕಾಲಕ್ಕೆಯೇ ಅವರ ಗತಿಯು ಬಹಳ ಮಂದವಾಗಹತ್ತಿತ್ತು. ಇಷ್ಟರಲ್ಲಿ ಸಮಾಜದಲ್ಲಿ ಜಾತಿಭೇದದ ವಿಚಾರಗಳೂ, ಕ್ಷತ್ರಿಯ ಕರ್ಮಠತನವೂ, ಹಿತ ಸಂಬಂಧಿಗಳ ಆಕ್ರಮಣಗಳೂ ಮುಂದುವರಿದವು. ಅದ್ದರಿಂದ ಇಲ್ಲಿಯೂ ಕೂಡ ಶ್ರೀ. ಶ. ೧೨೦೦ ರ ತರುವಾಯ ಧರ್ಮಪ್ರಸಾರದ ಕಾರ್ಯಗಳು ನಿಂತು ಹೋದದ್ದು ಕಂಡು ಬರುತ್ತದೆ.

ವಿಜಯನಗರದ ಅರಸರ ಕಾಲದಲ್ಲಿ ಸಹ ತೋಂಟದಾರ್ಯ ಮತ್ತು ಅವನ ಕೆಲವು ಶಿಷ್ಯರಹೊರತಾಗಿ ವಚನಗ್ರಂಥಗಳನ್ನು ಬಹುಜನರುಸ್ವತಂತ್ರವಾಗಿ ಬರೆದದ್ದು ಕಂಡು ಬರುವದಿಲ್ಲ. ಗಣಭಾಷ್ಯ ರತ್ನಮಾಲೆ, ಲಿಂಗಲೀಲವಿಲಾಸ, ಶೂನ್ಯ ಸಂಪಾದನೆ, ಈ ಹೀಗೆ ಕೆಲವು ಬಗೆಯ ವಚನಸಂಗ್ರಹ ಗ್ರಂಥಗಳು ಮಾತ್ರ ಉಂಟಾದವು.

ಒಟ್ಟಿಗೆ ವಚನ ಶಾಸ್ತ್ರದ ತತ್ತ್ವ ಪ್ರಸಾರ ಕಾರ್ಯಗಳು ಬಸವೇಶ್ವರನ ತರುವಾಯ ೬೦—೭೦ ವರ್ಷ ಮಾತ್ರ ನಡೆದು, ಮುಂದೆ ಅವು ಕುಂಠಿತವಾದಂತೆ ಕಂಡು ಬರುತ್ತದೆ

ಪಾಲ್ಕುರಿಕೆ ಸೋಮನಾರಾಧ್ಯನು ೧೨೯೫ ರಿಂದ ೧೩೨೩ ರ ವರೆಗೆ ಆಳಿದ ಪ್ರತಾಪ ರುದ್ರನ ಆಸ್ಥಾನದಲ್ಲಿ ಪ್ರಸಿದ್ಧಿ ಹೊಂದಿದನೆಂಬ ಕಥೆಯು ಅವನ ಚರಿತ್ರೆಯಲ್ಲಿ ಬರುವುದರಿಂದ ಅವನಿದ್ದ ಕಾಲವು ೧೩೦೦ ಎಂದು ಕೆಲವರು ತರ್ಕಿಸುವರುಂಟು. ಆದರೆ ೧೨೨೦ ರಲ್ಲಿ ಸೋಮರಾಜ ಕವಿಯು ಬರೆದಂಥ ಉದ್ಭಟ ಕಾವ್ಯದಲ್ಲಿ ಸೋಮನಾರಾಧ್ಯನ ಉಲ್ಲೇಖ ಇರುವುದರಿಂದ, ಅವನು ೧೧೯೫ ರಲ್ಲಿ ಇದ್ದಿರಬೇಕೆಂದು ಆರ್. ನರಸಿಂಹಾಚಾರ್ಯರು ಊಹಿಸಿ, ಕವಿಚರಿತೆಯಲ್ಲಿ ಹಾಗೆ ಬರೆದಿದ್ದಾರೆ. ಸೋಮನಾರಾಧ್ಯನು ಬಸವೇಶ್ವರನ ಸಮಕಾಲೀನನು. ಅವನ ಮೊಮ್ಮಗನ ಕಾಲದಲ್ಲಿ ಸೋಮನಾರಾಧ್ಯನು ಇದ್ದನೆಂಬ ಆಖ್ಯಾಯಿಕೆ ಇರುತ್ತದೆ. ಈ ಸಂಗತಿಯು ಆರ್. ನರಸಿಂಹಾಚಾರ್ಯರ ಅಭಿಪ್ರಾಯವನ್ನು ಬಲಪಡಿಸುತ್ತದೆ. ಬಸವೇಶ್ವರನು ೧೧೬೮ ರಲ್ಲಿ ಅಂತ್ಯವನ್ನು ಹೊಂದಿದ್ದು, ಅವನಿಂದ ಮೂರು ತಲೆಯ ತರುವಾಯ ಅಂದರೆ ೫೦ ೬೦ ವರ್ಷಗಳಲ್ಲಿ ಸೋಮನಾರಾಧ್ಯನು ಪ್ರಸಿದ್ಧಿಗೆ ಬಂದಿರಬಹುದೆಂದು ತೋರುತ್ತದೆ

ಪ್ರತಾಪ ರುದ್ರನು ಆಂಧ್ರ ದೇಶದಲ್ಲಿ ಬಹು ಪ್ರಸಿದ್ಧ ರಾಜನಾದ್ದರಿಂದ, ಪುರಾತನ ಕಾಲದಲ್ಲಿ ಆಗಿ ಹೋದ ವಿದ್ವಾಂಸರು, ಮುಖ್ಯನಾದ್ದವರು ಅವನ ಕಾಲಕ್ಕೆಯೇ ಆಗಿ ಹೋದರೆಂದು ಹೇಳುವ ಸಾಂಪ್ರದಾಯವಿದೆ. ಮಹಾ ಕವಿ ರಾಘವಾಂಕನ ವಿಷಯವಾಗಿಯೂ ಇದೇ ಆಖ್ಯಾಯಿಕೆಯು ಇದೆ. ಅದೇ ಪ್ರಕಾರ ಬಹು ಜನ ಶಿವಶರಣರಿಗೆ ಬಸವೇಶ್ವರನ ಸಂಬಂಧ ವಿಲ್ಲದಿದ್ದರೂ ಕೂಡ ಅವರು ಅವನ ಆಸ್ಥಾನದಲ್ಲಿದ್ದರೆಂದು ಆಖ್ಯಾಯಿಕೆಗಳು ಉಂಟಾಗಿರುತ್ತವೆ. ಐತಿಹಾಸಿಕ ಪ್ರತ್ಯಂತರ ಆಧಾರಗಳಿಲ್ಲದ ಹೊರತು ಅವುಗಳನ್ನು ನಂಬಲಿಕ್ಕೆ ಬರಲಾರದು.

ಹೀಗೆ ಸೋಮನಾರಾಧ್ಯನ ಚರಿತ್ರೆಯನ್ನು ಒಟ್ಟಾರೆ ನೋಡಲು ಅವನು ಕರ್ನಾಟಕ ಮತ್ತು ಆಂಧ್ರ ದೇಶಗಳಿಗೆ ಸಮೀಪವರ್ತಿಯಾದ ಕೆಲವೊಂದು ಗಡಿ ಪ್ರದೇಶದಲ್ಲಿಯ ಗ್ರಾಮದವನಿರಬೇಕೆಂಬ ಊಹೆಯು ದೃಢ ಪಡುತ್ತದೆ ಅವನು ಮಧ್ಯ ಆಂಧ್ರ ದೇಶದವನಿದ್ದಂತೆ ತೋರುವದಿಲ್ಲ. ಮತ್ತು ಅದು ಅವನು ಸಮಾಧಿಹೊಂದಿದ ಕಲ್ಲೆ ಗ್ರಾಮದಿಂದ ಬಹಳ ದೂರವಿರಬಾರದು. ಇಂಥ ಗ್ರಾಮಗಳು ಹುಡುಕಿದರೆ ಜಿಲ್ಲೆಯಲ್ಲಿ ಎರಡು ಮಾತ್ರ ದೊರೆಯುತ್ತವೆ. [೧] ಒಂದು ನಾವು ಹಿಂದೆ

(೧) ಈ ಸಂಗತಿಯು ನಮಗೆ ಈಚೆಗೆ ತಿಳಿದು ಬಂದಿತು.

ಹೇಳಿದಂತೆ ಚಿಕ್ಕ ಬಳ್ಳಾಪುರದ ಉತ್ತರಕ್ಕೆ ೫-೬ ಮೈಲುಗಳ ಮೇಲೆ ಇರುತ್ತದೆ. ಈ ಗ್ರಾಮದ ಉತ್ತರಕ್ಕೆ ಸುಲಿಕುಂಟೆ ಮತ್ತು ದಕ್ಷಿಣಕ್ಕೆ ಮರಸನಹಳ್ಳಿ ಎಂಬ ಗ್ರಾಮಗಳಿವೆ. ಹಾಲುಕುರಿಕೆ ಎಂಬ ಹೆಸರಿನ ಗ್ರಾಮವು ಈಗಿನ ಡಿಗ್ರಿ ನಕಾಶೆಯಲ್ಲಿ ದೊರೆಯುವದಿಲ್ಲ. ಆದರೆ ಅದು ಹಳೇ ನಕಾಶೆಯಲ್ಲಿ ದೊರೆಯುತ್ತದೆ. ಇದೇ ಹೆಸರಿನ ಇನ್ನೊಂದು ಗ್ರಾಮವು ಇದೇ ಜಿಲ್ಲೆಯಲ್ಲಿ ತಿಪಟೂರಿನ ಉತ್ತರಕ್ಕೆ ೯ ಮೈಲಿನ ಮೇಲೆ ಇದೆ. ಇದು ಈಗಿನ ನಕಾಶೆಯಲ್ಲಿದೆ. ಈ ಗ್ರಾಮದ ವಿಷಯವಾಗಿ ಹೆಚ್ಚಿಗೆ ಸಂಶೋಧಿಸಲು ತರಳಬಾಳ ಉಜ್ಜನಿ ಚರಪಟ್ಟಾಧಿಕಾರಿಗಳು ಇದೇ ಗ್ರಾಮದಲ್ಲಿ ಮೊದಲು ನೆಲೆಸಿದ್ದು ಅವರ ಪೀಠದಲ್ಲಿ ಪಟ್ಟಕ್ಕೆ ಬಂದ ಸರ್ವಭೂಷಣ ಸಿದ್ಧಲಿಂಗ ಒಡೆಯರು ಎಂಬವರ ಗದ್ದುಗೆಯು ಇಲ್ಲಿ ಇದೆ. ಅದರ ಮೇಲಿನ ಶಾಸನದಲ್ಲಿ "ಪಾಲ್ಕುರಿಕೆ" ಎಂಬ ಹೆಸರು ಇದೆ. ಈ ಶಾಸನವು ೨೭೨ ವರ್ಷ ಹಿಂದಿನದಿರುತ್ತದೆ. ಈ ಗ್ರಾಮದಲ್ಲಿ ಅನೇಕ ದೇವಾಲಯಗಳಿರುತ್ತವೆ. ಇದರಿಂದ ಇದು ಪುರಾತನ ಗ್ರಾಮವೆಂಬುದು ಸ್ಪಷ್ಟವು. ಆದರೆ ಈ ಗ್ರಾಮವು ಕನ್ನಡದೇಶದ ಮಧ್ಯದಲ್ಲಿರುತ್ತದೆ. ಮತ್ತು ಅದರಲ್ಲಿ ಸೋಮೇಶ್ವರನ ದೇವಾಲಯವಿಲ್ಲವೆಂದು ತಿಳಿದುಬರುತ್ತದೆ. ಆದ್ದರಿಂದ ಇದು ಸೋಮಾರಾಧ್ಯನ ಸ್ಥಳವೆಂಬುವದರ ಬಗ್ಗೆ ಸಂದೇಹವು ಉಂಟಾಗುತ್ತದೆ. ಆದರೆ ಚಿಕ್ಕಬಳ್ಳಾಪುರದ ಉತ್ತರಕ್ಕೆ ಇರುವ ಪಾಲಕುರ್ಕಿ ಗ್ರಾಮವು ಈಗಿನ ಡಿಗ್ರಿ ನಕಾಶೆಯಲ್ಲಿ ದೊರೆಯದಿದ್ದರೂ ಹಿಂದಿನ ನಕಾಶೆಯಲ್ಲಿ ದೊರೆಯುತ್ತದೆ. ಈ ಗ್ರಾಮದ ಹಿಂದಿನ ಅವಶೇಷಗಳು ಅಲ್ಲಿ ಇರಬಹುದು. ಇದು ಆಂಧ್ರ ದೇಶದ ಮೇರೆಗೆ ಸಮೀಪವಾಗುವದರಿಂದ ಮತ್ತು ಇಲ್ಲಿ ಸೋಮೇಶ್ವರನ ದೇವಾಲಯವಿರುತ್ತದೆಂದು ತಿಳಿದುಬರುವದರಿಂದ ಇದು ಸೋಮಾರಾಧ್ಯನ ಗ್ರಾಮವಿರಬಹುದೆಂದು ನಾವು ಊಹಿಸಿದ್ದೇವೆ. ಆದರೆ ಈ ವಿಷಯವು ಇನ್ನೂ ಹೆಚ್ಚಿಗೆ ಸಂಶೋಧನ ಮಾಡತಕ್ಕದ್ದಾಗಿದೆ. ಆದರೆ ಅದು ಯಾವ ಗ್ರಾಮವಿದ್ದರೂ ಸದ್ಯದ ಸ್ಥಿತಿಯಲ್ಲಿ ಅದು ತುಮಕೂರ ಜಿಲ್ಲೆಯಲ್ಲಿದೆಂದು ಊಹಿಸಲು ಯಾವ ಪ್ರತ್ಯವಾಯವು ಕಂಡುಬರುವದಿಲ್ಲ.

ಪಾಲ್ಕುರಿಕೆ ಸೋಮಾರಾಧ್ಯನು ಭೃಂಗೀಶನವತಾರವೆಂದು ಆಂಧ್ರ ಮತ್ತು ಕರ್ನಾಟಕ ಗ್ರಂಥಕಾರರು ತಮ್ಮ ಗ್ರಂಥಗಳಲ್ಲಿ ಹೇಳುವದುಂಟು. ಇವರಿಂದ ಇವನ ಮಹತ್ವವು ಎಷ್ಟಿದೆಂಬುದು ಕಂಡು ಬರುವದು.

# ಕಥಾಂತರಗಳು.

(೧) ಸೋಮಾರಾಧ್ಯನ ತಂದೆ ತಾಯಿಗಳ ವಿಷಯವಾಗಿ ಬೇರೆ ಬೇರೆ ಗ್ರಂಥಗಳಲ್ಲಿ ಬೇರೆ ಬೇರೆ ವಿವರಣೆಗಳಿರುತ್ತವೆ. ತೋಂಟದ ಸಿದ್ಧಲಿಂಗನು ತನ್ನ ಗ್ರಂಥದಲ್ಲಿ ವೇಮನನ ಮಗ ಗುರುಲಿಂಗಾರ್ಯ ಅಥವಾ ಲಿಂಗಣಾರಾಧ್ಯನು, ಅವನ ಹೆಂಡತಿಯ ಹೆಸರು ಮಂಗಲಾಂಬೆ, ಅವರ ಮಗ ಸೋಮಾರಾಧ್ಯನೆಂದು ಹೇಳಿದೆ; ಆದರೆ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಅವನ ತಂದೆಯು ರಾಮಿತಂದೆ ಮತ್ತು ತಾಯಿಯ ಹೆಸರು ಮಹಾದೇವಿಯಮ್ಮ ಎಂದು ಹೇಳಿದೆ. ಇದು ಹೆಚ್ಚಿಗೆ ಸಂಭವನೀಯವೆಂದು ತಿಳಿದು ಇದನ್ನು ನಾವು ಅನುಸರಿಸಿದ್ದೇವೆ.

(೨) ಒಂದು ಕಡೆಗೆ ಸೋಮಾರಾಧ್ಯನಿಗೆ ವೇಮನನ ಮೊಮ್ಮಗ ಬಸವೇಶನು ದೀಕ್ಷೆಯನ್ನಿತ್ತನೆಂತಲೂ ಅಲ್ಲದೆ ಕಟ್ಟಕೂರ ಪೋತಿದೇವನೆಂಬವನು ಅವನಿಗೆ ಲಿಂಗೋಪದೇಶ ಮಾಡಿದನೆಂತಲೂ ಹೇಳಿದೆ. ಬೇರೆ ಕಡೆಗೆ ವೇಮನನ ಮಗ ಗುರುಲಿಂಗಾರ್ಯನು ಅವನಿಗೆ ಶಾಸ್ತ್ರಗ್ರಂಥದ ಪರಿಚಯ ಮಾಡಿಕೊಟ್ಟು ಲಿಂಗಬೋಧೆ ಮಾಡಿದನೆಂದು ಹೇಳಿದೆ. ಇದು ಹೆಚ್ಚಿಗೆ ಸಂಶೋಧಿಸತಕ್ಕ ವಿಷಯವಾಗಿದೆ.

(೩) ಕಲ್ಯದಲ್ಲಿ ಸೋಮಾರಾಧ್ಯನು ಶಿವಶರಣೆ ವೀರಮ್ಮನೆಂಬವಳ ಮನೆಯಲ್ಲಿ ವಾಸ ಮಾಡಿದನೆಂದು ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರ ರತ್ನಾಕರದಲ್ಲಿ ಹೇಳಿದೆ. ಆದರೆ ತೋಂಟದ ಸಿದ್ಧಲಿಂಗನು ತನ್ನ ಗ್ರಂಥದಲ್ಲಿ ಆಕೆಯ ಹೆಸರು ಚನ್ನಮ್ಮನೆಂದು ಹೇಳಿದ್ದಾನೆ. ಇದು ಹೆಚ್ಚಿಗೆ ಸಂಶೋಧಿಸತಕ್ಕ ವಿಷಯವಿದೆ.

# ಗುಜರಾಥ ದೇಶದ ಶಿವಶರಣರು.

ಶಿವಶರಣರು ಕೇವಲ ಕರ್ನಾಟಕ ಮಾತ್ರವಲ್ಲ, ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ಉದಯವಾಗಿ, ಬಸವೇಶ್ವರನು ಮತ್ತು ಆವನ ಕಾಲದಲ್ಲಿದ್ದ ಶಿವಶರಣರು ನಡಿಸುತ್ತಿದ್ದ ಶಿವಾನುಭವ ಗೋಷ್ಠಿಗಳನ್ನು ತಿಳಿದುಕೊಳ್ಳಲು ಕಲ್ಯಾಣ ಪಟ್ಟಣಕ್ಕೆ ಆಗಿಂದಾಗ್ಗೆ ಬರುತ್ತಿದ್ದರೆಂಬುದು ನಾವು ಈ ವರೆಗೆ ಪ್ರಸಿದ್ಧಿಸುತ್ತ ಬಂದ ಶಿವಶರಣರ ಚರಿತ್ರೆಗಳಿಂದ ವಾಚಕರ ನಿದರ್ಶನಕ್ಕೆ ಬಂದಿರಬಹುದು. ಓಡಿಸಾ ಪ್ರಾಂತದ ನನ್ನಯ್ಯ, ಮುಜ್ಞಾನಿಗಳು, ಕಾಶ್ಮೀರ ದೇಶದ ಮೊಂತಾದೇವಿ, ಮಹಾದೇವರಾಜ, ಅಥವಾ ಮೋಳಿಗೆ ಮಾರಯ್ಯ, ಚಿಕ್ಕಯ್ಯಗಳು, ಕೇರಳ (ಮಲಬಾರ) ದೇಶದ ಗೊಗ್ಗವ್ವೆ, ಚಾರಮರಾಯ, ಭದ್ರಗಾಯಕ ಮೊದಲಾದವರು, ಕಾಶೀ ಕ್ಷೇತ್ರದ ಶಿವಲಿಂಗ ಮಂಚಣ್ಣಗಳು, ದ್ರಾವಿಡ (ತಮಿಳ) ದೇಶದ ಚನ್ನಯ್ಯ, ಸುರಿಮಿಂಡ ದೇವ, ಎಡೆಮಠದ ನಾಗಿದೇವ, ಮೊದಲಾದ ಅನೇಕರು, ಮಹಾರಾಷ್ಟ್ರ ದೇಶದ ಉರಿಲಿಂಗ ದೇವ, ಉರಲಿಂಗ ಪೆದ್ದಿ, ಕೋಲಂಬೆ, ಸೋಹಳಿಯ ಸೋಮವ್ವೆ, ಪರಿವಣಿಗೆ (ಪರಳಿಯ) ವೈಜವ್ವೆ, ಭಲ್ಲುಕೆ (ಭಾಲ್ಕಿ) ಯ ಕುಂಬಾರ ಗುಂಡಯ್ಯ ಮೊದಲಾದವರು, ಪರ ಪ್ರಾಂತದವರಿದ್ದಾರೆ. ಆಂಧ್ರ ದೇಶದಲ್ಲಂತೂ ಶ್ರೀಪತಿ ಪಂಡಿತ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ರೇವಣಾರಾಧ್ಯ, ಪಾಲ್ಕುರಿಕೆ ಸೋಮಾರಾಧ್ಯ ಹೀಗೆ ಬಹು ಜನ ಶಿವ ಶರಣರು ಆಗಿಹೋಗಿದ್ದಾರೆ. ನಾವು ಪ್ರಸಿದ್ಧ ಮಾಡುತ್ತ ಬಂದ ಶಿವ ಶರಣರ ಚರಿತ್ರೆಗಳಲ್ಲಿ ಇವರೆಲ್ಲರ ಕಥೆಗಳು ಬಂದಿರುತ್ತವೆ. ಇದಕ್ಕೆ ಗುಜರಾಥ ದೇಶವೂ ಅಪವಾದವಾಗಿಲ್ಲ. ಮಲಿಗೆರೆ ಅಂದರೆ ಈಗಿನ ಲಕ್ಷ್ಮೇಶ್ವರದ ಆದಯ್ಯ ಅಥವಾ ಆದಿಶೆಟ್ಟಿ, ನಾವದಿಗೆಯ ಗುಡ್ಡವ್ವೆ, ಸೊರಟೂರ (ಸೌರಾಷ್ಟ್ರ) ಬಾಚರಸ ಇವರೆಲ್ಲರು ಗುಜರಾಥದವರಿದ್ದು ಇವರು ಸೌರಾಷ್ಟ್ರ ಸೋಮೇಶ್ವರನ ಭಕ್ತರಾಗಿದ್ದಾರೆ ಅವರು ಸೋಮೇಶ್ವರನನ್ನು ಕರ್ನಾಟಕದಲ್ಲಿ ತಾವಿದ್ದ ಸ್ಥಳದಲ್ಲಿಯೇ ತಂದು ಸ್ಥಾಪಿಸಿದರೆಂದು ಅವರ ಚರಿತ್ರೆಗಳಿಂದ ಗೊತ್ತಾಗುತ್ತದೆ. ಅವರು ಸೋಮೇಶ್ವರನ ಹೆಸರಿನಿಂದ ಶಿವಾನುಭವದ ವಚನಗಳನ್ನು ರಚಿಸಿ ಹೋಗಿದ್ದಾರೆ. ಇವರೆಲ್ಲರ ಚರಿತ್ರೆಗಳನ್ನು ನಾವು ಈ ಮೊದಲಿಗೆಯೇ ಪ್ರಸಿದ್ಧಿಸುತ್ತ ಬಂದಿದ್ದೇವೆ. ಇನ್ನು ಮುಂದೆ ನಾವು ಸೌರಾಷ್ಟ್ರ ಅಂದರೆ ಗುಜರಾಥ ದೇಶದಲ್ಲಿ ಆಗಿ ಹೋದ

ಕೆಲವು ಶಿವಶರಣರ ಚರಿತ್ರೆಗಳನ್ನು ಇಲ್ಲಿ ವಿವರಿಸತಿರುವೆವು. ಇದರಿಂದ ಶಿವಶರಣರ ಪ್ರಭಾವವು ಹಿಂದಿನ ಕಾಲದಲ್ಲಿ ಬರೀ ಕರ್ನಾಟಕದಲ್ಲಿಯಷ್ಟೇಯಲ್ಲ, ಪರಪ್ರಾಂತಗಳಲ್ಲಿಯೂ ಕೂಡ ಹಬ್ಬಿತ್ತೆಂಬುದು ಕಂಡು ಬರುತ್ತದೆ.

ಈ ಶಿವಶರಣರ ಕೀರ್ತಿಯು ಹೀಗೆ ಹಬ್ಬಲಿಕ್ಕೆ ಕೆಲವು ವಿಶೇಷ ಕಾರಣಗಳಿವೆ. ೧೦ ನೇ, ೧೧ ನೇ, ೧೨ ನೇ ಶತಮಾನಗಳಲ್ಲಿ ಕರ್ನಾಟಕ ದೇಶದಲ್ಲಿ ಅಸಂಖ್ಯ ವೀರ ಪುರುಷರೂ, ಧರ್ಮ ಸಂಸ್ಥಾಪಕರೂ, ತತ್ತ್ವಜ್ಞಾನಿಗಳೂ, ರಾಜ್ಯ ಸ್ಥಾಪಕರೂ ಆಗಿಹೋದರು. ಅವರು ಮಾಡಿದ ಮಹತ್ಕಾರ್ಯಗಳ ಮೂಲಕ ಅವರು ಭರತಖಂಡದಲ್ಲೆಲ್ಲ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದವರಾದರು. ಅವರಲ್ಲಿ ಅನೇಕರು ಜೈನ, ಶೈವ, ಪಾಶುಪತ, ಕಾಳಾಮುಖ, ರಾಮಾನುಜ, ಅದ್ವೈತ ಮತಗಳಲ್ಲಿ ಪಂಡಿತರೆನ್ನಿಸಿಕೊಂಡು, ತಮ್ಮ ತಮ್ಮ ತತ್ವಗಳನ್ನು ಪ್ರತಿಪಾದಿಸುತ್ತ ಇಡೀ ಹಿಂದುಸ್ಥಾನದಲ್ಲಿ ಸಂಚರಿಸಿದ್ದಾರೆ. ಇದರಿಂದ ಕರ್ನಾಟಕದ ಪ್ರಸಿದ್ಧಿಯು ಸ್ವಾಭಾವಿಕವಾಗಿ ಎಲ್ಲ ಕಡೆಗೂ ಹಬ್ಬಲಿಕ್ಕೇ ಬೇಕು. ಕರ್ನಾಟಕ ದೇಶವು ಆಗ ಗೋದಾವರೀ ತೀರದ ವರೆಗೂ ಹಬ್ಬಿ ಅದಕ್ಕೆ ಗುಜರಾಥ ದೇಶವು ನೆರೆ ಪ್ರಾಂತವಾಗಿತ್ತು. ಈ ಕಾರಣದಿಂದಲೂ ಗುಜರಾಥ ದೇಶದಲ್ಲಿ ರಾಷ್ಟ್ರಕೂಟ ಚಾಲುಕ್ಯ ರಾಜರ ವಂಶಜರು ಕೆಲ ಕಾಲ ರಾಜ್ಯವಾಳುತ್ತಿದ್ದುದರಿಂದಲೂ, ಈ ಎರಡೂ ದೇಶಗಳಲ್ಲಿ ಪರಸ್ಪರ ಸಂಬಂಧವು ಬೆಳೆಯಲು ಕಾರಣವಾಯಿತು. ಇದಲ್ಲದೆ ಬಹು ಜನ ಗುರ್ಜರರು ಕರ್ನಾಟಕಕ್ಕೆ ವ್ಯಾಪಾರಕ್ಕೋಸ್ಕರ ಬರುತ್ತಾ ಇದ್ದುದು ಕಂಡು ಬರುತ್ತದೆ. ಅವರು ಬಹುಶಃ ಸಮುದ್ರ ಮಾರ್ಗವಾಗಿ ಕಾಠೇವಾಡ ಮತ್ತು ಗುಜರಾಥ ದೇಶಗಳ ಬಂದರಗಳಿಂದ ಕಾರವಾರ ಜಿಲ್ಲೆಯ ಬಂದರುಗಳಿಗೆ ಬಂದು, ಅಲ್ಲಿಂದ ಒಳದೇಶದೊಡನೆ ವ್ಯಾಪಾರ ನಡೆಸುತ್ತಿರಬೇಕು. ಅದ್ದರಿಂದ ಬನವಾಸಿ, ಹಾನಗಲ್ಲು, ಗೋವೆ, ಹಲಸಿ ಇಂಥಾ ಮಾರ್ಗಮಧ್ಯವಾದ ಅರಣ್ಯ ಪ್ರದೇಶಗಳಲ್ಲಿ ಕದಂಬ ರಾಜರ ರಾಜಧಾನೀ ಪಟ್ಟಣಗಳು ಉದಯವಾದವು. ಈ ಪಟ್ಟಣಗಳು ಪಶ್ಚಿಮ ಸಮುದ್ರದ ಬಂದರಗಳಿಗೆ ಹೋಗುವ ಮಾರ್ಗಗಳ ಮೇಲೆಯೇ ಇದ್ದು ಇವುಗಳ ಮೂಲಕವೇ ಕರ್ನಾಟಕದ ವ್ಯಾಪಾರವು ಗುಜರಾಥ, ಇರಾಣ, ಪೂರ್ವ ಆಫ್ರಿಕಾ ಮೊದಲಾದ ದೇಶಗಳ ಕೂಡ

ನಡಿಯುತ್ತಿತ್ತು. ಬಳ್ಳಿಗಾವಿಯ ಒಂದು ಕಾಳಾಮುಖರ ಶಿಲಾಶಾಸನದಲ್ಲಿ ಅಲ್ಲಿ ನೆಲಸಿದ್ದ ವೀರ ಬಣಂಜುಗಳು ಸಮುದ್ರ ಮಾರ್ಗವಾಗಿ ವ್ಯಾಪಾರ ನಡಿಸುತ್ತಿದ್ದರೆಂಬ ಉಲ್ಲೇಖವಿದೆ. ಇದು ಅತಿಶಯೋಕ್ತಿಯಲ್ಲ. ಇದು ಆಗಿನ ನಿಜ ಸ್ಥಿತಿಯನ್ನು ತೋರಿಸುತ್ತದೆ. ಶಿವಶರಣೆಯಾದ ಶಿವಪ್ರಿಯ ನಾಚಿಯ ಅಣ್ಣ ತಪ್ಪಂದಿರಾದ ನಾಚಯ್ಯ ಅರುಣಾದ್ರಿಯರು ಪರದೇಶ ವ್ಯಾಪಾರ ಮಾಡುತ್ತಿದ್ದರೆಂದು ಲಕೆಯ ಚರಿತ್ರೆಯಿಂದ ಕಂಡು ಬರುತ್ತದೆ. ಹೀಗೆ ಗುಜರಾಥಕ್ಕೂ, ಕರ್ನಾಟಕಕ್ಕೂ ಹಿತ ಸಂಬಂಧವಿದ್ದಿತು. ಆದ್ದರಿಂದ ಕರ್ನಾಟಕದಲ್ಲಿ ಉಂಟಾದ ಧಾರ್ಮಿಕ ಚಳವಳಿಗಳ ಪರಿಣಾಮಗಳು ಗುಜರಾಥ ದೇಶದ ಮೇಲೆಯೂ ಆಗುತ್ತಿರಬೇಕೆಂದು ಅನುಮಾನ ಮಾಡಲು, ಯಾವ ಪ್ರತ್ಯವಾಯವೂ ಇರುವದಿಲ್ಲ. ಇದರಿಂದ ಗುಜರಾಥ ದೇಶದಲ್ಲಿಯೂ ಶಿವಶರಣರು ಆಗಿಹೋಗಿರುವರೆಂಬುದ. ಅಸಂಭಾವ್ಯವಲ್ಲ.

ಗುಜರಾಥದೇಶದಲ್ಲಿ ಈಗ ಲಿಂಗಧಾರಿಗಳ ಸಂಖ್ಯೆಯು ಅತ್ಯಲ್ಪವಾಗಿರುತ್ತದೆ. ಆದರೂ ಈ ದೇಶವು ಒಂದು ಕಾಲದಲ್ಲಿ ಶೈವ ಸಾಂಪ್ರದಾಯದ ನಾಡಾಗಿತ್ತೆಂದು ತೋರುತ್ತದೆ. ಇಲ್ಲಿ ಸೌರಾಷ್ಟ್ರ ಸೋಮನಾಥನ ಪ್ರಸಿದ್ಧ ದೇವಾಲಯ ವಿದ್ದು, ಇದು ಇದರ ದ್ಯೋತಕವಾಗಿದೆ. ಈ ದೇವಾಲಯವು ಹಿಂದುಸ್ಥಾನದಲ್ಲಿ ಅತ್ಯಂತ ಪ್ರಸಿದ್ಧವಾದದ್ದು. ಈ ದೇವಾಲಯವನ್ನು ಅಸಂಖ್ಯಾತ ಭಕ್ತರು ಬಹು ಭಕ್ತಿಯಿಂದ ಯಾವಾಗಲೂ ಕಾಣುತ್ತ ಬಂದಿದ್ದಾರೆ. ಆದ್ದರಿಂದಲೇ ಗಜನಿ ಮಹಮ್ಮದನು ಈ ದೇವಾಲಯದ ಮೇಲೆ ದಾಳಿ ಮಾಡಿ ಅದರಲ್ಲಿಯ ಲಿಂಗ ಮೂರ್ತಿಯನ್ನು ಒಡೆದು ಹಾಕಿ, ಅಲ್ಲಿ ದೊರಕಿದ ಅಪರಿಮಿತ ಹಣವನ್ನು ದೋಚಿಗೊಂಡು ಹೋದನು. ಹೇಗೆ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯವು ದಕ್ಷಿಣ ದೇಶದಲ್ಲಿ ಪ್ರಸಿದ್ಧವಾದುದೋ ಹಾಗೆಯೇ ಈ ಸೋಮನಾಥ ದೇವಾಲಯವು ಈ ಭಾಗದಲ್ಲಿ ಬಹು ಪ್ರಸಿದ್ಧವಾದುದು. ಈ ಸೋಮನಾಥನನ್ನು ಬಹು ಭಕ್ತಿಯಿಂದ ಕಾಣುವವರು ಗುಜರಾಥದಲ್ಲಿ ಅನೇಕರಾಗಿ ಹೋಗಿದ್ದು ಇವರಲ್ಲಿ ಮಹಾತ್ಮಿಕರಾದವರನ್ನು ಬಸವೇಶ್ವರನ ಕಾಲದ ಶಿವಶರಣರು ತಮ್ಮ ಶರಣರ ಮಾಲಿಕೆಯಲ್ಲಿ ಸೇರಿಸಿ ಅವರನ್ನು ಸ್ತುತಿಸುತ್ತ ಬಂದಿದ್ದಾರೆ. ಅವರ ಹೆಸರುಗಳು ಗಣ ಸಹಸ್ರ ಗ್ರಂಥದಲ್ಲಿ ಬಂದಿವೆ.

ಬಸವೇಶ್ವರರ ಕಾಲದ ಶಿವಶರಣರು ಧರ್ಮಾಂಧರಲ್ಲ. ಅವರು ವೀರ ಶೈವರನ್ನಷ್ಟೇ ಅಲ್ಲ, ಶೈವ ಸಂಸ್ಕೃತಿಗೆ ಹೊಂದಿದ ಎಲ್ಲರನ್ನು ತಮ್ಮವರೆಂದು ಭಾವಿಸಿ ಆದರಿಸುತ್ತ ಬಂದಿದ್ದಾರೆ. ತಮಿಳು ದೇಶದ ಪುರಾತನರು ವೀರ ಶೈವರಲ್ಲ. ಆದರೂ ಅವರನ್ನು ಅವರು ಮನ್ನಿಸಿದ್ದಾರೆ. ಆಂಧ್ರ ದೇಶದ ವೀರಶೈವರಲ್ಲಿ ಮಿಶ್ರ ಆಚರಣೆಗಳು ಕಂಡು ಬರುತ್ತವೆ. ಆದರೂ ಅವರನ್ನು ಸನ್ಮಾನಿಸಿದ್ದಾರೆ. ಕಾಶ್ಮೀರ ಮತ್ತು ಕೇರಳ ದೇಶಗಳಲ್ಲಿಯ ಶರಣರನ್ನು ಸದ್ಭಾವನೆಯಿಂದ ಕಂಡಿದ್ದಾರೆ. ಹಾಗೆಯೇ ಅವರು ಸೌರಾಷ್ಟ್ರ ಅಂದರೆ ಗುಜರಾಥ ದೇಶದಲ್ಲಿ ಆಗಿ ಹೋದವರನ್ನು ತಮ್ಮವರೆಂದು ಭಾವಿಸಿ ಅವರನ್ನು ಕೊಂಡಾಡಿದ್ದಾರೆ. ಹೀಗೆ ಬಸವೇಶ್ವರರ ಕಾಲದಲ್ಲಿ ಆಗಿ ಹೋದ ಶಿವಶರಣರು ಉದಾರ ಸ್ವಭಾವಿಗಳಾಗಿ ಶಿವನಿಷ್ಠರಾದ ಎಲ್ಲರನ್ನೂ ಆದರಿಸುತ್ತ ಬಂದಿದ್ದಾರೆ.

ಸೌರಾಷ್ಟ್ರ ಸೋಮನಾಥ ದೇವಾಲಯವು ಈಗ ಕಾಠೇವಾಡದಲ್ಲಿ ಜುನಾಗಡ ಸಂಸ್ಥಾನದಲ್ಲಿದೆ. ಇದು ವೇರಾವಳ ಎಂಬ ಬಂದರದಿಂದ ಎರಡು ಮೈಲುಗಳ ಮೇಲೆ ಇದೆ. ಇದು ಇದ್ದ ಗ್ರಾಮಕ್ಕೆ ಪಟ್ಟಣ ಸೋಮನಾಥ, ದೇವ ಪಟ್ಟಣ, ಪ್ರಭಾಸ ಪಟ್ಟಣ, ಅಥವಾ ವೇರಾವಳ ಪಟ್ಟಣ ಎಂಬ ಹೆಸರುಗಳಿವೆ. ಈಗಲೂ ಅಲ್ಲಿ ಸೋಮನಾಥನ ದೊಡ್ಡ ದೇವಾಲಯವಿದೆ. ಆದರೆ ಅದರ ಸುತ್ತಲೂ ಪೂರ್ವಕಾಲದ ಹಾಳಾದ ಅವಶೇಷಗಳು ಹರಡಿವೆ. ಇವು ಅದರ ಪೂರ್ವಕಾಲದ ವೈಭವದ ಚಿಹ್ನೆಗಳಾಗಿವೆ. ಈ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಸದ್ಯ ಭಾರತ ಸರಕಾರದವರು ಈಚೆಗೆ ಕೈಕೊಂಡಿದ್ದಾರೆ.

# ಓಹಿಲ

ಗುಜರಾಥ ದೇಶದಲ್ಲಿ ವಿಳಾಸವತಿ ಎಂಬ ಪಟ್ಟಣವಿದೆ. ಅಲ್ಲಿ ಸಿಂಹಕುಂಭರಾಯನೆಂಬ ರಾಜನು ರಾಜ್ಯವಾಳುತ್ತಿದ್ದನು. ಈ ಪಟ್ಟಣವು ಸೌರಾಷ್ಟ್ರ ಸೋಮನಾಥ ದೇವಾಲಯದಿಂದ ೩೦ ಗಾವುದ ದೂರವಿರುತ್ತದೆ. ಅರಸನಿಗೆ ಮಕ್ಕಳಿಲ್ಲದ್ದರಿಂದ ಅವನು ದಿನಾಲು ಶಿವಾಲಯಕ್ಕೆ ಹೋಗಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಬಹು ಭಕ್ತಿಯಿಂದ ಲಿಂಗವನ್ನು ಪೂಜಿಸುವನು. ಮುಂದೆ ಕೆಲವು ದಿನಗಳಾದ ಮೇಲೆ ಶಿವನು ಅವನಿಗೆ ಪ್ರಸನ್ನನಾಗಿ— ನಿನಗೆ ಜ್ಞಾನ ಸ್ವರೂಪನಾದ ಮಾಯಾವಿಕಾರವನ್ನು ಹೊದ್ದದ ಒಬ್ಬ ಮಗನು ಜನಿಸುವನು ಎಂದು ಹೇಳಿ, ಲಿಂಗದೊಳಗೆ ಅಡಗಿದನು. ಅದರಂತೆಯೇ ಅವನ ಪಟ್ಟದರಸಿಯು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆತ್ತಳು. ತಾಯಿ ತಂದೆಗಳು ಅವನಿಗೆ ಓಹಿಲನೆಂಬ ಹೆಸರನ್ನಿಟ್ಟರು.

ಓಹಿಲನು ಚಿಕ್ಕಂದಿನಲ್ಲಿಯೂ ಕೇವಲ ಶಿವಭಕ್ತಿಯಲ್ಲಿ ಬೆಳೆಯುವವನಾದನು. ಅವನು ಸಚ್ಚರಿತ್ರನು ಮತ್ತು ಸದಾಚಾರಿಯು. ಅವನು ಮಾಯೆ ಎಂಬುದನ್ನೇನೂ ಅರಿಯನು. ಯಾವಾಗಲೂ ಶಂಕರಭಾವವುಳ್ಳವನಾದವನು. ಶಂಕರನ ಧ್ಯಾನದಲ್ಲಿಯೇ ಮಗ್ನನಾಗಿ ಕಾಲಕಳೆಯುವನು ಅಂತರಂಗದಲ್ಲಿ ಅರಿವುಳ್ಳವನು. ಆದರೂ ಜನರಿಗೆ ಅದು ಅರಿಯದಂತೆ ಇರುವನು. ಅವನು ತಾನಾಗಿ ಯಾರಿಗೂ ಬೇಕು ಬೇಡೆನ್ನನು. ಅವನನ್ನು ನೋಡಿ ಜನರು ಅವನು ಮುಗ್ಧನೆಂದು ತಿಳಿಯುವವರಾದರು. ಇದೇ ರೀತಿಯಾಗಿ ಓಹಿಲನು ೧೬ ವರ್ಷ ವಯಸ್ಸಿನವನಾಗುವವರೆಗೂ ಅರಮನೆಯಲ್ಲಿ ಬೆಳೆದನು.

ಆಮೇಲೆ ಸಿಂಹಕುಂಭರಾಯನು ಮರಣಹೊಂದಿದನು. ರಾಜನು ಸದಾಚಾರಿಯಾಗಿ ಎಲ್ಲರಿಗೂ ಪ್ರಿಯನಾಗಿದ್ದನು. ಆದ್ದರಿಂದ ಪುರ ಜನರೂ ಬಂಧು ಜನರೂ ಅತ್ಯಂತ ದುಃಖಪಟ್ಟರು. ಅವರು ಓಹಿಲನಿದ್ದಲ್ಲಿಗೆ ಬಂದು ಅವನಿಗೆ ಕುಮಾರನೇ ನಿನ್ನ ಜನಕನು ಮರಣಹೊಂದಿದನು. ನಮ್ಮೊಡನೆ ನಡೆ ಎಂದು ಹೇಳಲು ಅವನು— ರಾಜನಿಗೆ ಮರಣವಾಯ್ತೆನ್ನುವಿರಿ. ಮರಣದ ರೀತಿಯು ಹೇಗೆ ಎಂದು ಮುಗ್ಧಭಾವದಿಂದ ಕೇಳಲು ಅವರು ಮತ್ತಷ್ಟು ದುಃಖಿಸುತ್ತ ಅವನನ್ನು ಸ್ಮಶಾನ ಭೂಮಿಗೆ ಕರೆತಂದರು.

ಅಷ್ಟರಲ್ಲಿ ಅರಸನ ದೇಹವನ್ನು ಚಿತೆಯ ಮೇಲಿಟ್ಟಿದ್ದರು. ಅದರ ಮೇಲೆ ಚಂದನದ ಕೊರಡು, ಕಂದಗಿಲದ ಪಿಂಡಗಳನ್ನು ಒಟ್ಟಿದ್ದರು. ರಾಜಕುಮಾರನ ಕಯ್ಯಿಂದ ಮಂತ್ರಿಗಳು ಚಿತೆಗೆ ಕೊಳ್ಳಿಯನ್ನು ಕೊಡಿಸಿದರು. ಚಿತೆಯ ಮೇಲೆ ಅರಸನ ದೇಹವು ಸುಟ್ಟು ಭಸ್ಮವಾಯಿತು. ಆ ಮೇಲೆ ಓಹಿಲನು ಅಲ್ಲಿದ್ದವರಿಗೆ — ನನ್ನ ತಂದೆಯು ಎಂದು ತಿರುಗಿ ಬರುವನು ಎಂದು ಕೇಳಿದನು. ಅವರು— ಕುಮಾರನೆ! ನಿನ್ನ ತಂದೆಯು ಎಂದೂ ತಿರುಗಿ ಬಾರನು. ಅರಸನು ಮರಣ ಹೊಂದಿದನು. ಇನ್ನುಮೇಲೆ ಅವನು ಎಂದೂ ಬರುವದಿಲ್ಲ ಎಂದು ಹೇಳಿದರು. ಇದನ್ನು ಕೇಳಿ ಅವನು ಕೌತುಕಪಟ್ಟು ತನ್ನ ಮುಂದಿದ್ದ ಊಳಿಗದವರಿಗೆ ಅದೇ ಪ್ರಶ್ನೆಯನ್ನು ಕೇಳಿದನು. ಅವರೂ, ಅರಸನು ತಿರುಗಿ ಬರುವದಿಲ್ಲೆಂದು ಹೇಳಿದರು. ಮಗ್ಗುಲಲ್ಲಿದ್ದವರಿಗೆ ಹಿಂದಿದ್ದವರಿಗೆ ಇದೇ ಪ್ರಶ್ನೆಯನ್ನು ಕೇಳಿದನು. ಅವರು ಹಾಗೆಯೇ ಉತ್ತರ ಕೊಟ್ಟರು. ಆಮೇಲೆ ಅವನು- ನನಗೂ ಇಂಥ ಮರಣವೇ ಬರುವದೋ ಎಂದು ಕೇಳಲು ಅವರು ನಿನಗೂ ಹೀಗೆಯೇ ಸರಿ ಎಂದೆಂದರು. ಅದಕ್ಕೆ ಅವನು ಈ ಮರಣವನ್ನು ಬಿಡಿಸುವವರಾರು? ಅಂಥವರು ಯಾರಾದವರೂ ಇದ್ದಾರೆಯೋ ಎಂದು ಕೇಳಿದನು. ಎಲ್ಲರೂ ನಮ್ಮಿಂದಾಗದೆಂದು ಹೇಳಿದರು. ಆದರೆ ಅಲ್ಲಿ ಒಬ್ಬ ಶಿವಭಕ್ತನಿದ್ದ. ಅವನು — ಇಲ್ಲಿಂದ ಇಪ್ಪತ್ತು ಗಾವುದದ ಮೇಲೆ ಸೌರಾಷ್ಟ್ರ ಸೋಮೇಶ್ವರನಿದ್ದಾನೆ. ಅವನು ಮಾತ್ರ ಮರಣವನ್ನು ಬಿಡಿಸುವನು ಎಂದು ಹೇಳಿದನು. ಅದನ್ನು ಓಹಿಲನು ಕೇಳಿ ಸಂತೋಷಪಟ್ಟು ಇಂದು ನಾನು ಧನ್ಯನಾದೆನೆಂದು ನುಡಿದು ತನ್ನ ರಾಜ್ಯವನ್ನು ಬಿಟ್ಟುಕೊಟ್ಟು ಸೋಮನಾಥನಿದ್ದಲ್ಲಿಗೆ ಹೊರಡಲು ಸಿದ್ಧನಾದನು.

ಮರುದಿನ ಅವನು ತನ್ನ ಭವ್ಯವಾದ ರಾಜವೈಭವದ ವಸ್ತ್ರಗಳನ್ನು ತರಿದು ಹಾಕಿದನು. ಕೌಪೀನವನ್ನು ಧರಿಸಿಕೊಂಡನು. ತಾನು ಹೊದ್ದುಕೊಂಡಿದ್ದ ವಸ್ತ್ರಗಳನ್ನು ಚೆಲ್ಲಿ ಕೊಟ್ಟು ಭಸಿತವನ್ನು ಹೂಸಿಕೊಂಡನು. ಅವನ ಮನಸ್ಸಿನಲ್ಲಿ ಸೋಮನಾಥನ ಧ್ಯಾನವೇ ಧ್ಯಾನವಾಯಿತು. ಸೋಮನಾಥನನ್ನು ಎಂದು ಕಾಣುವೆನೆಂಬ ತವಕವು ಅವನಲ್ಲಿ ಹೆಚ್ಚಾಗಿ ಪುರವನ್ನು ಬಿಟ್ಟು ಅತ್ತಕಡೆಗೆ ಹೊರಟನು.

ಆಗ ಮಂತ್ರಿಗಳು ಹೀಗೆ ಹೋಗಬೇಡವೆಂದು ಅರಸನಡಿಯ ಮೇಲೆ ಬಿದ್ದು ಹೊರಳಾಡಿದರು. ಅಂತಃಪುರದ ಸ್ತ್ರೀಜನರು ಗೋಳಿಟ್ಟರು. ಆದರೆ ಬಿಬಿಲನು ಅವರನ್ನು ಕಡೆಗಣಿಸಿ ಸಂಪೂರ್ಣ ಶಿವ ಭಕ್ತಿಯಲ್ಲಿ ಮಗ್ನನಾಗಿ ಕಾಲ್ನಡಿಗೆಯಿಂದ ಸೋಮನಾಥನ ದೇವಾಲಯವಿದ್ದ ಗ್ರಾಮಕ್ಕೆ ಹೊರಟನು.

ಅವನು ಆ ಗ್ರಾಮವನ್ನು ಸಮೀಪಿಸುತ್ತಿರಲು, ದೂರದಿಂದ ದೇವಾಲಯದ ಕಳಸವನ್ನು ಕಂಡನು. ಕಂಡಕೂಡಲೆ ಅವನು ಭಕ್ತಿಯ ಉದ್ರೇಕದಲ್ಲಿ ಮೇಲೆ ಕೈಯೆತ್ತಿ — ಸೋಮನಾಥನೆ, ಇಂದು ನಾನು ಕೃತಾರ್ಥನಾದೆನು, ಎಂದು ನುಡಿಯುತ್ತ ಪುರವನ್ನು ಹೊಕ್ಕು ದೇವಾಲಯವಿದ್ದಲ್ಲಿಗೆ ಬಂದನು. ಅಲ್ಲಿಗೆ ಬಂದು — ಸೌರಾಷ್ಟ್ರ ಸೋಮನಾಥನೆ, ಎಂದು ಕೂಗುತ್ತ ಗರ್ಭ ಗುಡಿಯನ್ನು ಪ್ರವೇಶಿಸಿ, ದೇವರಮೂರ್ತಿಗೆ ಸಾಷ್ಟಾಂಗವೆರಗಿ ಮೂರ್ತಿಯನ್ನು ಬಿಗಿದಪ್ಪಿಕೊಂಡನು. ಸೋಮನಾಥನೆ, ನಿನ್ನವನು ನಾನು ನನ್ನ ಪುಣ್ಯದ ಸಿರಿಯು ನೀನು ಎಂದು ನುಡಿಯುತ್ತ ದೇವರಮುಂದೆ ಕುಳಿತುಕೊಂಡುಬಿಟ್ಟನು. ಹಗಲು ಹೋಗಿ ಸಂಜೆಯಾಯಿತು, ಕತ್ತಲಾಯಿತು. ಆದರೂ ಅವನು ಆ ಸನ್ನಿಧಿಯಿಂದ ಕದಲಲಿಲ್ಲ.

ಕೆಲ ಹೊತ್ತಿನ ಮೇಲೆ ಪರಿಚಾರಕನೊಬ್ಬನು ದೇವಾಲಯದಲ್ಲಿ ಬಂದು ಒಳಗೆ ಬಿಬಿಲನನ್ನು ಕಂಡು — ನೀನಾರು? ನೀನಿಲ್ಲೇಕೆ ಬಂದೆ? ಹೊರಗೆ ನಡೆ ಎಂದು ಗದ್ದರಿಸಲು, ಅವನು — ನಾನು ಸೋಮನಾಥನನ್ನು ಬಿಡೆನು, ಬಿಡೆನು ಎಂದು ಕೂಗುತ್ತ ಲಿಂಗವನ್ನು ಮತ್ತಷ್ಟು ಅಪ್ಪಿಕೊಂಡು ಕುಳಿತನು. ಆದರೆ ಪರಿಚಾರಕನು ಅವನ್ನು ಗದರಿಸಿ, — ನೀನು ಹೊರಗೆ ನಡೆ ಎಂದು ಬಲಾತ್ಕಾರದಿಂದ ಅವನನ್ನು ಹೊರಕ್ಕೆ ಎಳೆದೊಯ್ದು ಬಾಗಿಲುಗಳನ್ನು ಮುಚ್ಚಿ ಅವುಗಳಿಗೆ ಬೀಗ ಹಾಕಿಬಿಟ್ಟನು.

ಆದರೆ ಬಿಬಿಲನು ಗುಡಿಯ ಬಾಗಿಲಲ್ಲಿಯೇ ಕುಳಿತುಕೊಂಡು — ಎಲೋ ಪರಮಾತ್ಮನೇ, ನಿನ್ನನ್ನು ನೋಡದೆ ನಾನು ಎಂತಿರಲಿ ಎಂದು ರೋದಿಸುತ್ತ ಕುಳಿತನು. ಅವನು ಮಾಡುತ್ತಿದ್ದ ಆ ದುಃಖ ಮತ್ತು ಅವನಲ್ಲಿದ್ದ ಅಚಲವಾದ ದೇವಭಕ್ತಿ ಇವುಗಳು ಸೋಮನಾಥನನ್ನು ಕಾಡಲು ಅವನು ಅದೇ ದಿನ ರಾತ್ರಿ ಪೂಜಾರಿಯ ಕನಸಿನಲ್ಲಿ ಬಂದು — ನನ್ನ ಭಕ್ತನಾದ ಬಿಬಿಲನು ರಂಗಮಂಟಪದಲ್ಲಿದ್ದಾನೆ. ಅವನನ್ನು ಗರ್ಭ ಗುಡಿಯಲ್ಲಿರಿಸು ಎಂದು ಹೇಳುತ್ತ ಅವನನ್ನು ಬಲವಾಗಿ ತಿವಿದಂತಾಯಿತು. ಪೂಜಾರಿಯು ಬೆದರಿ ಎದ್ದು ಕತ್ತಲಲ್ಲಿ ನಡುಗುತ್ತ ದೇವಾಲಯದ ಬಾಗಿ

ಳಿಗೆ ಬಂದನು. ಬಾಗಿಲನ್ನು ತೆರೆದು ಒಳಗೆ ನೋಡುತ್ತಾನೆಯೇ ಓಹಿಲನು ಹಾಡುತ್ತ ಗರ್ಭ ಗುಡಿಯ ಬಾಗಿಲಲ್ಲಿ ಕುಳಿತಿದ್ದಾನೆ. ಅವನನ್ನು ಕಂಡು ಸೋಮನಾಥನ ಅಪ್ಪಣೆಯ ಮೇರೆಗೆ ಕದಗಳನ್ನು ತೆರೆದು ಓಹಿಲನನ್ನು ಒಳಗಿರಿಸಿದನು ಮತ್ತು ತಾನು ದೇವಾಲಯದಿಂದ ಹೊರಗೆ ಹೋಗಿಬಿಟ್ಟನು.

ಓಹಿಲನು ಸೋಮನಾಥನ ಇದಿರಿಗೆ ಬರಲು ಅವನಿಗೆ ಹೋದಜೀವ ತಿರುಗಿ ಬಂದಂತಾಯಿತು. ಅತ್ಯಂತ ಹರ್ಷಯುಕ್ತನಾಗಿ ಸೋಮನಾಥನನ್ನು ಅಪ್ಪಿಕೊಂಡು ಮೈಯ್ಯಲ್ಲಿ ಕಣ್ಣಲ್ಲಿ ಮನದಲ್ಲಿ ಸೋಮನಾಥನನ್ನೇ ಧ್ಯಾನಿಸುತ್ತ ಆನಂದದಲ್ಲಿ ಓಲಾಡಿದನು. ಇದೇ ರೀತಿ ಅವನು ಸೋಮನಾಥನ ಸಾನ್ನಿಧ್ಯದಲ್ಲಿ ಇಡೀ ರಾತ್ರಿ ಕಳೆದನು.

ಬೆಳಗಾದ ಮೇಲೆ ಭಕ್ತ ಜನರ ಸಂಕೀರ್ತನೆಗಳೂ ಪೂಜಾದಿ ಕಾರ್ಯಗಳೂ ದೇವಾಲಯದಲ್ಲಿ ಸಂಭ್ರಮದಿಂದ ನಡೆಯುತ್ತಿದವು ಬಹು ಜನರು ರಂಗಮಂಟಪದಲ್ಲಿ ನೆರೆದರು. ಆದರೆ ಓಹಿಲನು ಸೋಮನಾಥನ ಪಾದದಡಿಯಲ್ಲಿ ಭಕ್ತಿ ಭರದಲ್ಲಿ ಏನನ್ನರಿಯದೆ ಕುಳಿತುಕೊಂಡಿದ್ದನು ಆಗ ಸೋಮನಾಥ ಲಿಂಗದೊಳಗಿಂದ ಎಲ್ಲರೂ ಕೇಳುವಂತೆ— ಎಲೆ ಕಂದ ನೀನು ೧೨ ವರ್ಷ ಶ್ರಮ ವಹಿಸಿ ಗುಗ್ಗುಳವನ್ನು ತಂದು ನನಗಿಕ್ಕು. ಅಂದರೆ ನಾನು ನಿನ್ನನ್ನು ನಿನ್ನ ಶರೀರ ಸಹಿತ ನನ್ನೆಡೆಗೆ ಒಯ್ಯುವೆನು, ಎಂಬ ಧ್ವನಿಯು ಹೊರಟಿತು. ಓಹಿಲನು ಅದನ್ನು ಕೇಳಿ ಪರಮಾತ್ಮನು ತನಗೆ ಒಲಿದನೆಂದು ಭಾವಿಸಿ, ಹರ್ಷದಲ್ಲಿ ಓಲಾಡಿದನು.

ಈ ಸಂಗತಿಯು ವಿಲಾಸವತಿ ಪಟ್ಟಣದ ಜನರಿಗೆ ತಿಳಿಯಿತು. ಅವರು ಪರಮಾತ್ಮನು ನಮ್ಮ ರಾಜನಿಗೆ ಒಲಿದನೆಂದು ಹರ್ಷಯುಕ್ತರಾಗಿ ಅವನಿಗೋಸ್ಕರ ಗುಗ್ಗುಳವನ್ನು ತರಲು ಸಿದ್ಧರಾದರು. ಅಸಂಖ್ಯ ಬಲಿಷ್ಠ ಪುರುಷರೂ, ಪಸಾರದವರೂ ವ್ಯವಹಾರಿಗಳೂ ಕಂಬಿಕಾರರೂ ಗುಗ್ಗುಳವು ಸಿಗುವ ಸ್ಥಳಗಳಿಗೆ ಹೋಗಿ ಅವನ್ನು ಸಂಗ್ರಹಿಸುವಲ್ಲಿ ತೊಡಗಿದರು. ಹೀಗೆ ಅವನ್ನು ಸಂಗ್ರಹಿಸಿ ಸೋಮನಾಥನ ದೇವಾಲಯಕ್ಕೆ ತರುತ್ತಿರುವಾಗ್ಗೆ ಸೌರಾಷ್ಟ್ರ ದೇಶದ ಭಕ್ತರು ಅವರನ್ನು ಕಂಡು ಸನ್ಮಾನಿಸುತ್ತಾ ಇದ್ದರು. ಹೀಗೆ ಗುಗ್ಗುಳದ ರಾಶಿಯು ದೇವಾಲಯದ ಮುಂದೆ ಬಂದು

ಬಿದ್ದಿತು. ಓಹಿಲನು ಸುವಾಸಿತವಾದ ರಸಮಯವಾದ ಬೇರೆ ಕೆನೆ ಧೂಪವನ್ನು ಅದರಲ್ಲಿ ಬೆರೆಸಿ ಅದನ್ನು ಸೋಮನಾಥನ ಇದಿರಿಗೆ ಅಗ್ನಿಯಲ್ಲಿ ಹಾಕಲು ಅದರ ಕಂಪು ಎಲ್ಲ ಕಡೆಗೂ ಪಸರಿಸಿತು. ಅದರ ಕಂಪು ಶಿವನ ಮೈಯನ್ನು, ಮುಖ ನಾಸಿಕಕ್ಕೆ ತಗಲಿತು. ಆಗ ಸೋಮನಾಥನು ಶಿವಲಿಂಗದೊಳಗಿಂದ ತನ್ನ ಹಸ್ತವನ್ನು ಹೊರಗೆ ನೀಡಿ ಅವರ ಸೊಗಸನ್ನು ಸ್ವೀಕರಿಸಿದನು. ಅದನ್ನು ನೆರೆದ ಜನರು ನೋಡಿ ಚಕಿತರಾದರು. ಹೀಗೆ ಓಹಿಲನು ೧೨ ವರ್ಷ ಗುಗ್ಗುಳವನ್ನು ಪರಮಾತ್ಮನಿಗೆ ಅರ್ಪಿಸುತ್ತ ಬಂದನು. ಇದರಿಂದ ಅವನಿಗೆ 'ಧೂಪದೋಹಿಲ'ನೆಂಬ ಹೆಸರು ಪ್ರಾಪ್ತವಾಯಿತು.

ಓಹಿಲನು ಹೀಗೆ ಧೂಪವನ್ನು ೧೨ ವರ್ಷ ಸಮರ್ಪಿಸಿದ ಬಳಿಕ ತನಗೆ ಪರಮಾತ್ಮನು ಒಲಿಯುವನೆಂಬ ಭರವಸೆಯುಳ್ಳವನಾಗಿ, ಸೋಮನಾಥನಲ್ಲಿಗೆ ಬಂದು — ನಾನು ಕೈಕೊಂಡ ನಿಯಮವು ಇಂದಿಗೆ ಪೂರ್ಣವಾಯಿತು. ನನಗೆ ಮೋಕ್ಷವನ್ನು ಈಯು ಎಂದು ಕೇಳಿಕೊಂಡನು. ಆಗ ಪರಮಾತ್ಮನು — ನೀನು ಇಷ್ಟುದಿನ ಮಾಡಿದ ಭಕ್ತಿಯು ವ್ಯರ್ಥವಾಯಿತು. ಅದು ನಿನಗಾಗಲಿಲ್ಲ. ಅದು ನಿನ್ನಸಲುವಾಗಿ ಮಡಿದವರಿಗಾಯಿತು. ಆದ್ದರಿಂದ ಓಹಿಲನೇ ನೀನು ಅರಸನಾಗಿರುವಿ. ನೀನು ಅದರಲ್ಲಿಯೇ ಸಂತೋಷದಿಂದಿರು, ಎಂದು ನುಡಿಯಲು, ಓಹಿಲನು ಹಾಹಾಕಾರಿ ಧೊಪ್ಪನೆ ನೆಲಕ್ಕೆ ಬಿದ್ದು — ಸ್ವಾಮೀ ನನ್ನಿಂದೇನು ತಪ್ಪಾಯಿತು? ನಾನು ಇನ್ನುಮೇಲೆ ಹೇಗೆ ಜೀವಿಸಲಿ ? ಸೋಮನಾಥನೇ ನಿನ್ನಹೊರತು ನನಗೆ ಯಾರೂ ಗತಿ ಇಲ್ಲ. ನಿನ್ನ ಚರಣವನ್ನು ಬಿಟ್ಟು ನಾನಿರಲಾರೆನು ಎಂದು ಆಕ್ರೋಶ ಮಾಡಹತ್ತಿದನು ಆಗ ಪರಮಾತ್ಮನು ಅವನಿಗೆ— ನೀನಂಜದಿರು. ನಿನಗೆ ಹಿತೋಪದೇಶವನ್ನು ಮಾಡುವೆನು. ನೀನು ಈ ವರೆಗೆ ನಿನ್ನ ಕಾರ್ಯಕ್ಕೋಸ್ಕರ ಹೆರವರನ್ನು ಪ್ರೇರಣೆಮಾಡಿದೆ. ನೀನು ಶ್ರಮಪಡಲಿಲ್ಲ. ಎರಡನೆಯವರಿಗೆ ಶ್ರಮಪಡಿಸಿದೆ. ಪ್ರಸಾದದ ರೀತಿಯು ಇದಲ್ಲ. ಇನ್ನುಮೇಲೆ ನೀನು ಹೀಗೆ ಹೆರವರನ್ನವಲಂಬಿಸದೆ ನೀನೇ ಪ್ರವಾಸಮಾಡು. ನೀನೇ ಕಷ್ಟಪಟ್ಟು ಗುಗ್ಗುಳವನ್ನು ಸಂಗ್ರಹಿಸು. ದಾರಿಯಲ್ಲಿ ತೊರೆಗಳ ನೀರನ್ನೇ ಕುಡಿಯು. ಮರದ ನೆರಳಲ್ಲಿ ವಿಶ್ರಮಿಸು. ಗುಹೆಗಳಲ್ಲಿ ವಾಸಿಸು. ಹೀಗೆ ಗುಗ್ಗುಳದ ದ್ವೀಪಗಳಿಗೆ ಹೋಗಿ ಗುಗ್ಗುಳವನ್ನು ಆಯ್ದು ಅದನ್ನು ನೀನೇ ಹೊತ್ತು ತಂದು ನನಗರ್ಪಿಸು ಹೀಗೆ ಪುನಃ ಹನ್ನೆರಡು ವರ್ಷ

ಪ್ರಮುಪಡು. ಅಂದರೆ ನಿನ್ನ ಮನೋರಥವನ್ನು ನಾನು ಸಲ್ಲಿಸುವೆನು, ಎಂದು ನುಡಿದನು. ಓಹಿಲನು ಅದನ್ನು ಕೇಳಿ ಸಂತೋಷ ಭರಿತನಾಗಿ ಗುಗ್ಗುಳದ ಕಾಯಕದ ರೀತಿಯನ್ನು ಅರಿತವನಾಗಿ ಪರಮಾತ್ಮನ ಸೇವೆಯಲ್ಲಿರಲು ಸಿದ್ಧನಾದನು.

ಆಮೇಲೆ ಓಹಿಲನು ಹೊಸ ವೇಷವನ್ನು ಧರಿಸಿದನು. ತೊಡೆದ ವಸ್ತ್ರಗಳನ್ನು ಬದಿಗಿಟ್ಟನು. ಕಾವಡಿಯ ಕಂಬಿಗಳಲ್ಲಿ ಘನ ಪಾತ್ರೆಗಳನ್ನಿರಿಸಿದನು. ತನ್ನೊಡನೆ ಪರಿಚಾರಕರನ್ನು ತೆಗೆದುಕೊಳ್ಳಲಿಲ್ಲ. ಪಾದಚಾರಿಯಾಗಿ ಬಿಸಿಲೆನ್ನದೆ ಗಾಳಿ ಎನ್ನದೆ, ಹಸಿವು ನಿದ್ದೆಗಳನ್ನು ತೊರೆದು, ದ್ವೀಪಾಂತರಕ್ಕೆ ಹೊರಡಲುದ್ಯುಕ್ತನಾದನು. ಆಗ ಪ್ರವಾಸ ಮಾಡುವಲ್ಲಿ ಹರಿಯುವ ನೀರಿನ ಉದಕವನ್ನು ಶಂಕರನಿಗೆ ನೀಡಲು ಅರ್ಪಿಸಿ ಆಮೇಲೆ ತಾನು ಸೇವಿಸುವನು. ನೆಳಲ ತಂಪಿನಲ್ಲಿರಲಿ, ಕಂಪುಳ್ಳ ಗಾಳಿಯು ಮೇಲೆ ಹಾಯ್ದು ಬರಲಿ, ಅವೆಲ್ಲವೂ ಸೋಮನಾಥನಿಗೆ ಅರ್ಪಿತವು ಎಂದೆನ್ನುವನು. ಅರಣ್ಯದಲ್ಲಿ ಕಾಡು ಮೃಗಗಳನ್ನು ಕಂಡರೆ ಅವುಗಳನ್ನು ನಮಸ್ಕರಿಸುವನು. ಅವುಗಳನ್ನು ಹಿಂಸಿಸಲು ಹೋಗನು. ಹೀಗೆ ಧೂಪದ ದ್ವೀಪಕ್ಕೆ ಹೋಗಿ ಗುಗ್ಗುಳದ ಗಿಡಗಳಿಗೆ ನಮಸ್ಕರಿಸಿ ಅವುಗಳಿಗೆ ಬಿನ್ನವಿಸಿಕೊಂಡು ಅವುಗಳಲ್ಲಿಯ ಗುಗ್ಗುಳವನ್ನು ಕೆಳಗಿಳಿಸಿ ಅದನ್ನು ಅರ್ಪಣ ಭಾವದಿಂದ ಎತ್ತಿಕೊಂಡು ಸೌರಾಷ್ಟ್ರಕ್ಕೆ ಮರಳಿದನು.

ಅವನು ಮರಳುವಾಗ ಅವನ ಮೇಲೆ ಹಾಯ್ದು ಬಂದ ಗಾಳಿಯ ಪವಿತ್ರತೆಯು ಎಲ್ಲ ಕಡೆಗೂ ಪಸರಿಸಿತು. ಅವನ ಮೊದಲಿನ ಹೆಜ್ಜೆಗೆ ಬ್ರಹ್ಮನಂಜಿದನು. ಅದರ ಮುಂದಿನ ಹೆಜ್ಜೆಗೆ ಹರಿಯಂಜಿದನು. ಅದರ ಮುಂದಿನ ಹೆಜ್ಜೆಗೆ ಶಿವನಂಜಿದನು. ಅಂದಬಳಿಕ ಅವನ ಮುಂದೆ ಪಾಪಗಳು ಕೆಟ್ಟೋಡಿದವಲ್ಲಿ ಏನಾಶ್ಚರ್ಯ? ದುಷ್ಟರು ಅವನನ್ನು ಸಮೀಪಿಸಲು ಅಂಜಿದರು. ಹೀಗೆ ಓಹಿಲನು ಗುಗ್ಗುಳದ ಕಂಬಿಯನ್ನು ತಾನೇ ಹೊತ್ತುಕೊಂಡು ಸೋಮನಾಥನ ಆಲಯಕ್ಕೆ ಬಂದನು. ಅಷ್ಟರಲ್ಲಿ ಅವನ ಶರೀರ ಬಲವು ಕುಗ್ಗಿತ್ತು. ಅಂಗಾಲಿನಲ್ಲಿ ಉರಿಯು ಹೆಚ್ಚಿತ್ತು. ಆದರೂ ಸೋಮನಾಥನ ಧ್ಯಾನದಲ್ಲಿ ತನ್ನ ಕಷ್ಟವನ್ನು ಮರೆತನು. ಸೋಮನಾಥನ ನೆನಹೇ ಅವನಿಗೆ ಜೀವನವಾಯಿತು.

ಪರಮಾತ್ಮನು ತನ್ನವನೆಂದರೆ ಅವನು ಮೊದಲು ತನ್ನ ಭಕ್ತರನ್ನು ಸುಟ್ಟುನುರಿ ಮಾಡುವನು. ಅದನ್ನು ಸ್ವೀಕರಿಸಿದಲ್ಲಿ ಅವರನ್ನು ತನ್ನಂತೆ ಮಾಡುವನು. ಹೀಗೆ ಪ್ರಮಥರ ನುಡಿಯು ಇವೆ

ಈ ಪ್ರಕಾರ ಕಷ್ಟಪಡುತ್ತ ಓಹಿಲನು ಸೋಮನಾಥನ ಆಲಯವನ್ನು ಸಮೀಪಿಸಿದನು. ಆಗ ಓಹಿಲನ ಆಯಾಸವೆಲ್ಲ ತತ್‌ಕ್ಷಣ ಬಯಲಾಯಿತು. ಆಗ ಅವನು ತನ್ನ ಆಯಾಸವನ್ನು ಸೋಮನಾಥನೇ ದೂರ ಮಾಡಿದನೆಂದು ತಿಳಿದನು ಅವನು ಸೋಮನಾಥನಿದ್ದ ಗ್ರಾಮವನ್ನು ಪ್ರವೇಶಿಸಿದನು. ಆಗ ಅಸಂಖ್ಯ ಜನರು ಅವನನ್ನಿದಿರ್ಗೊಂಡು ಸತ್ಕರಿಸಿದರು.

ಆಮೇಲೆ ಓಹಿಲನು ಕಂಬಿಯನ್ನು ಹೊತ್ತುಕೊಂಡು ಸೋಮನಾಥಾಲಯಕ್ಕೆ ಬಂದು ಅದರಲ್ಲಿದ್ದ ಗುಗ್ಗುಳವನ್ನು ಸೋಮನಾಥನಿದಿರಿಗಿಟ್ಟು ಮನವಾರೆ ಕುಣಿದಾಡಿದನು. ಸೋಮನಾಥನೇ ಈ ಧೂಪವನ್ನು ಕೈಕೊಳ್ಳು ಎಂದು ಕೂಗುತ್ತ ಭಕ್ತಿಯುಕ್ತನಾಗಿ ಅದನ್ನು ಅವನೆದುರಿಗೆ ಉರಿಯಿಸಿದನು ಅದರ ಕಂಪು ಸುತ್ತಲೂ ಪಸರಿಸಿತು. ಅದು ಎಲ್ಲರನ್ನೂ ತಣಿಯಿಸಿತು.

ಇದೇ ರೀತಿಯಾಗಿ ಓಹಿಲನು ಹನ್ನೆರಡು ವರ್ಷಗಳವರೆಗೆ, ಅದು ಬೇಸಿಗೆ ಇರಲಿ, ಮಳೆ ಬರಲಿ, ಹೇಮಂತವಿರಲಿ ಯಾವುದಿದ್ದರೂ ಗಣಿಸದೆ ಗುಗ್ಗುಳವಿದ್ದ ದೇಶಕ್ಕೆ ಹೋಗಿ, ಗುಗ್ಗುಳವನ್ನು ತಂದು ಸೋಮನಾಥನಿಗರ್ಪಿಸುತ್ತ ಬಂದನು.

ಇಂಥ ಸೇವೆಯಲ್ಲಿ ಅವನಿಗೆ ಹನ್ನೆರಡು ವರ್ಷಗಳು ಮುಗಿಯಲು ಬಂದವು. ಆಗ ಪರಮಾತ್ಮನು ತನ್ನ ಸಮೀಪದಲ್ಲಿದ್ದ ನಂದಿ ವೀರಭದ್ರಾದಿಗಳನ್ನು ನೋಡಿ ಸೌರಾಷ್ಟ್ರದಲ್ಲಿ ಓಹಿಲನೆಂಬುವನಿದ್ದಾನೆ, ಅವನನ್ನು ನೀವು ಕರೆತರುವುದು, ಎಂದು ಹೇಳಿ ಕಳುಹಿದನು. ಅವರು ದೇವಾಲಯಕ್ಕೆ ಬಂದು ನೋಡಲಾಗಿ ಅದರ ಬಾಗಿಲು ಇಕ್ಕಿದ್ದು ಒಳಗೆ ಓಹಿಲನು ಸೋಮನಾಥನಿಗೆ ಧೂಪವನ್ನರ್ಪಿಸುತ್ತಿರುವನೆಂಬುದು ಅವರಿಗೆ ತಿಳಿಯಿತು. ಕದವನ್ನು ತೆರೆಯಲು ಅವರಿಗೆ ಧೈರ್ಯವಾಗಲಿಲ್ಲ. ಅವನು ಕೋಪಿಸುವ

ನೆಂದು ಅವರು ಅಂಜಿದರು. ಅವರು ಹಾಗೆಯೇ ಪರಮಾತ್ಮನ ಸಲ್ಲಿಗೆ ಬಂದು ಓಹಿಲನನ್ನು ನಾವು ಎತ್ತಲಾರೆವು ಎಂದು ಹೇಳಲು ಪರಮಾತ್ಮನು ಅವರಿಗೆ ದೇವಾಲಯದ ರಂಗಮಂಟಪದಲ್ಲಿ ಹೂವಿನ ಕಲ್ಲೊಂದಿದ್ದು ಅದನ್ನು ಪುಡಿಮಾಡಿ, ಓಹಿಲನನ್ನು ಶರೀರಸಹಿತವಾಗಿ ಎತ್ತಿಕೊಂಡು ಇಲ್ಲಿಗೆ ಬರುವುದಾಗಿ ಹೇಳಿದನು. ಅವರು ಹಾಗೆಯೇ ಗರ್ಭಗುಡಿಯನ್ನು ಪ್ರವೇಶಿಸಿ, ದೇವರೆದುರಿಗೆ ಇದ್ದ ಧೂಪದ ಪಾತ್ರೆಸಹಿತವಾಗಿ ಓಹಿಲನನ್ನು ಎತ್ತಿ ಕೈಲಾಸದತ್ತ ಹೊರಟರು. ಆಗ ಮೇರುಗಿರಿ, ಕೈಲಾಸಗಿರಿ, ಬ್ರಹ್ಮಾಂಡದಲ್ಲಿ ಎಲ್ಲೆಲ್ಲಿಯೂ ಓಹಿಲ ದೇವನು ಹಾಕಿದ ಗುಗ್ಗುಳದ ಸುಗಂಧವೇ ತುಂಬುತ್ತಿತ್ತು. ಅದು ಎಲ್ಲರನ್ನೂ ಮೋಹಿತರನ್ನಾಗಿ ಮಾಡಿತು. ಇಂಥ ಮಹತ್ತರವಾದ ಸೌಭಾಗ್ಯವನ್ನು ಪಡೆದವರು ಎಲ್ಲಿ ಯಾವರೂ ಉಂಟೇ, ಎಂದು ಓಹಿಲನನ್ನು ಎಲ್ಲರೂ ಹೊಗಳುವವರಾದರು. ಓಹಿಲನನ್ನು ನಂದಿ ವೀರಭದ್ರಾದಿಗಳು ಪರಮಾತ್ಮನ ಇದಿರಿಗೆ ತರಲು ಪರಮಾತ್ಮನು ಅವನಿಗೆ ಗಣಪದವಿಯನ್ನಿತ್ತನು.

ಓಹಿಲನ ಆಚರಣೆಯಲ್ಲಿ ಬಸವಾದಿ ಪ್ರಮಥರ ಕಾಯಕದ ತತ್ವವು ಅಡಕವಾಗಿದೆ. ಓಹಿಲನು ಗುರ್ಜರನು. ಆದರೆ ಅವನು ಪಾಲಿಸಿದ ಸಂಸ್ಕೃತಿಯು ಕರ್ನಾಟಕದ್ದಾಗಿದೆ. ಈ ಆಚರಣೆಯಲ್ಲಿ ಅವನು ಪೂರ್ಣತೆಯನ್ನು ಹೊಂದಿದ್ದಾನೆ. ಅವನಿಗೆ ಕಾಯಕವೇ ಧಾರ್ಮಿಕ ನಡೆಯಾಯಿತು. ಕಾಯಕವೇ ತಪಸ್ಸಾಯಿತು. ಇಂಥ ತಪಸ್ಸಿನ ಮಹತ್ವವನ್ನು ಓಹಿಲನು ಜಗತ್ತಿಗೆ ಪ್ರಕಟಿಸಿದ್ದಾನೆ.

........................

# ಉದ್ಭಟ

ಉದ್ಭಟನು ಗುಜರಾಥ ದೇಶದ ಶಿವಶರಣರಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದಾನೆ. ಕೆಲವು ವೀರಶೈವ ಗ್ರಂಥಕಾರರು ಇವನ ಚರಿತ್ರೆಯನ್ನು ಕವಿತಾರೂಪವಾಗಿ ಬರೆದಿದ್ದಾರೆ. ಮಹಾಕವಿ ಹರಿಹರನು ಇವನ ವಿಷಯವಾಗಿ ಒಂದು ರಗಳೆಯನ್ನು ಬರೆದಿದ್ದಾನೆ. ವೀರಶೈವ ಕವಿಯಾದ ಸೋಮರಾಜನು ಉದ್ಭಟ ಕಾವ್ಯವೆಂಬ ಕಾವ್ಯವನ್ನು ರಚಿಸಿದ್ದಾನೆ. ಅದಕ್ಕೆ 'ಶೃಂಗಾರಸಾರ'ವೆಂಬ ಹೆಸರಿದೆ. ಈ ಹೆಸರಿಗೆ ತಕ್ಕಂತೆಯೇ, ಇದು ಮನೋಹರವಾದ ಕಾವ್ಯವಿದೆ. ಈ ಕವಿಯು ೧೨೨೨ರಲ್ಲಿ ಇದ್ದನೆಂದು ಶ್ರೀಯುತ ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ೧೫೫೦ರಲ್ಲಿ ಆಗಿಹೋದ ಬಸವಾಂಕನೆಂಬ ಕವಿಯು 'ಉದ್ಭಟದೇವ ಚರಿತೆ' ಎಂಬ ಕಾವ್ಯವನ್ನು ಬರೆದಿದ್ದಾನೆ. ವೀರಶೈವರಲ್ಲಿ ಶಿವಶರಣರ ಚರಿತ್ರ ಗ್ರಂಥಗಳು ಕೆಲವಿದ್ದು ಅವುಗಳಲ್ಲಿ ಉದ್ಭಟನ ಚರಿತ್ರೆಯು ಸಾಮಾನ್ಯವಾಗಿ ಬರುವದುಂಟು. ಗಣಸಹಸ್ರದಲ್ಲಿ ಇವನ ಹೆಸರಿದೆ. ಹೀಗೆ ಉದ್ಭಟನು ಶಿವಶರಣರ ಮಾಲಿಕೆಯಲ್ಲಿ ಗಣಿಸಲ್ಪಟ್ಟಿರುತ್ತಾನೆ.

ಉದ್ಭಟನು ಗುಜರಾಥ ದೇಶದಲ್ಲಿ ಒಂದು ರಾಜವಂಶಕ್ಕೆ ಸೇರಿದವನಾಗಿದ್ದನು. ಇವನು ಮಂಗಳಪುರವೆಂಬಲ್ಲಿ ರಾಜ್ಯಾಳುತ್ತಿದ್ದನು. ಇವನು ಸೋಮವಂಶದವನು. ಇವನಿಗೆ 'ಕುಮಾರಪಾಲ ಭೂಪಾಲ' ಎಂಬ ಬೇರೊಂದು ಹೆಸರಿದೆ.

ಉದ್ಭಟನು ಕೇವಲ ಶಿವಭಕ್ತಿಯುಳ್ಳವನು. ಸೌರಾಷ್ಟ್ರ ಸೋಮನಾಥನ ಮೇಲೆ ಅತ್ಯಂತ ಭಕ್ತಿ ಭಾವವನ್ನು ಹೊಂದಿದವನು. ಇವನಿದ್ದ ಕಾಲದಲ್ಲಿ ದೇಶದಲ್ಲಿ ಪಾಶುಪತವೆಂಬ ಹೆಸರಿನ ಶೈವ ಸಂಪ್ರದಾಯಕ್ಕೆ ಹೊಂದಿದವರು ಅತ್ಯಂತ ವಿದ್ವಾಂಸರಾಗಿ ನಾಡಿನಲ್ಲಿ ಬಹು ಪ್ರಸಿದ್ಧರಾಗಿದ್ದರು. ಇವರು ಗುಜರಾಥ, ಬರೋಡೆ ಮತ್ತು ಭಡೋಚ ಜಿಲ್ಲೆಗಳಲ್ಲಿ ಮತ್ತು ರಜಪೂತ ಸ್ಥಾನದಲ್ಲಿ ಬಹು ಸಂಖ್ಯೆಯಾಗಿದ್ದು ಶೈವ ಮತವನ್ನು ಪಾಲಿಸುವವರಾಗಿದ್ದರು. ಇವರು ಉತ್ತರ ಕರ್ನಾಟಕ ಮತ್ತು ಮೈಸೂರು ಪ್ರಾಂತಗಳಲ್ಲಿಯೂ ಕೂಡ ಬಹು ವರ್ಚಸ್ವಿಗಳಾಗಿದ್ದರು. ಇವರಿಗೆ ಇಲ್ಲಿ ಕಾಳಾಮುಖರೆಂಬ ಹೆಸರುಂಟಾಗಿತ್ತು. ಇವರು ಕಟ್ಟಿಸಿದ ದೇವಾಲಯಗಳು ಮೈಸೂರು ಪ್ರಾಂತದಲ್ಲಿ ಬಳ್ಳಿಗಾವಿಯಲ್ಲಿ, ವಿಜಾಪುರ ಜಿಲ್ಲೆಯಲ್ಲಿ

ಮತ್ತು ಕಲ್ಲೇಶ್ವರ ಗ್ರಾಮಗಳಲ್ಲಿ, ಬೆಳಗಾವ ಜಿಲ್ಲೆಯಲ್ಲಿ ಶಿರಸಂಗಿ, ಗೊಕಾಕ ಗ್ರಾಮಗಳಲ್ಲಿ ಈಗಲೂ ದೊರೆಯುತ್ತವೆ. ಕರ್ನಾಟಕದ ಕಾಳಾಮುಖರು ನಾಗರಿಕತೆಯಲ್ಲಿ ಬಹು ಮುಂದುವರಿದವರಾಗಿದ್ದರು. ಇಲ್ಲಿಯ ಆಗಿನ ಅನೇಕ ಮಹತ್ವದ ಮಠಗಳು ಕಾಳಾಮುಖ ಮಠಗಳೇ ಆಗಿದ್ದವು. ವೀರ ಬಣಂಜುಗರೆಂಬುವರು ಕಾಳಾಮುಖ ಸಂಘವನ್ನು ಅನುಸರಿಸುವವರಾಗಿದ್ದರು. ಮುಂದೆ ಈ ಪಾಶುಪತರೆಲ್ಲರೂ ವೀರಶೈವ ಧರ್ಮವನ್ನು ಬೋಧಿಸಿದಂತೆ ತೋರುತ್ತದೆ.

ಈ ಕಾಲದಲ್ಲಿ ಕಾಶ್ಮೀರ, ಗುಜರಾಥ, ಕರ್ನಾಟಕ ಮತ್ತು ಚೋಳ ದೇಶ (ದ್ರಾವಿಡ ದೇಶ) ಇವು ಒಂದೇ ವಿಧದ ಧಾರ್ಮಿಕ ಸಂಸ್ಕೃತಿಯನ್ನು ಹೊಂದಿದ ದೇಶಗಳಾಗಿದ್ದವು. ಶೈವ ಧರ್ಮದ ತತ್ವಗಳೇ ಈ ಸಂಸ್ಕೃತಿಗೆ ತಳಹದಿಯಾಗಿದ್ದವು. ಈ ನಾಲ್ಕು ಪ್ರಾಂತಗಳಲ್ಲಿ ಪ್ರಚಲಿತವಿದ್ದ ಶೈವ ಧರ್ಮಗಳು ಬಾಹ್ಯದಲ್ಲಿ ಬೇರೆ ಬೇರೆ ಸ್ವರೂಪದವಾಗಿದ್ದರೂ ತತ್ವಗಳಲ್ಲಿ ಪರಸ್ಪರ ಸಾಮ್ಯತೆಯು ಬಹು ನಿಬಿಡವಾಗಿದ್ದಿತು. ಆದ್ದರಿಂದ ಈ ದೇಶಗಳಲ್ಲಿಯ ಮತಾಚಾರ್ಯರು ಪರಸ್ಪರರನ್ನು ಮನ್ನಿಸುತ್ತಿದ್ದುದು ಕಂಡುಬರುತ್ತದೆ.

ಉದ್ಭಟನು ಗುಜರಾಥದಲ್ಲಿ ರಾಜ್ಯವಾಳುತ್ತಿದ್ದಾಗ್ಗೆ ಕರ್ನಾಟಕದಲ್ಲಿ ದಾನ ಪಂಪಾ ಕ್ಷೇತ್ರದಲ್ಲಿ ನಿಜಧರ್ಮಸುಂದರನೆಂಬ ವೈಶ್ಯನು ಅಲ್ಲಿದ್ದ ಋಷಿಗಳಿಗೆ ಅನ್ನದಾನವನ್ನು ಕೊಡುತ್ತಿದ್ದನು. ಅವನಿಗೆ ತಿಳಿಯಬಂದಿತು. ಈ ಕ್ಷೇತ್ರದಲ್ಲಿ ದೇವಲ ಮಹರ್ಷಿಯು ಯಜ್ಞವನ್ನು ಮಾಡುವುದರಲ್ಲಿ ತೊಡಗಿದ್ದನು. ಆಗ ಉದ್ಭಟನು ಸೈನ್ಯ ಸಮೇತನಾಗಿ ದಕ್ಷಿಣಾಭಿಮುಖನಾಗಿ ಹೊರಟು ಮಾರ್ಗದಲ್ಲಿ ನಾನಾ ದೇಶ ತೀರ್ಥ ಕ್ಷೇತ್ರಾದಿಗಳನ್ನು ಪರ್ವತಗಳನ್ನು ದಾಟಿ ರೇವಾನದೀ ತೀರಕ್ಕೆ ಬಂದನು. ಅಲ್ಲಿಂದ ವಿಂಧ್ಯ ಪರ್ವತವನ್ನು ದಾಟಿ ಗೋದಾವರೀ ನದಿಗೆ ಬಂದು ಅಲ್ಲಿ ಕೆಲಕಾಲ ಕಳೆದು ಅಲ್ಲಿಂದ ಅವನು ಕುಂತಳ ದೇಶ ಅಂದರೆ ಕರ್ನಾಟಕವನ್ನು ಪ್ರವೇಶಿಸಿ ತುಂಗಭದ್ರಾ ನದೀ ತೀರದಲ್ಲಿರುವ ಪಂಪಾ ಕ್ಷೇತ್ರಕ್ಕೆ ಬಂದನು. ಈ ದೇಶವು ಆ ಕಾಲದಲ್ಲಿ ಪುಣ್ಯದ ಪುಂಜ, ಮುಕ್ತಿಯ ಮೂಲ, ಜ್ಞಾನದ ನಿಧಾನ, ಸಮಸ್ತ ಸಿದ್ಧಿಗಳ ಸೀಮೆ, ಎಂದು ಹೆಸರಾಗಿತ್ತು. ಈ ಕ್ಷೇತ್ರದಲ್ಲಿ ಅನೇಕ ತಪಸ್ವಿಗಳು ತಪಸ್ಸಿನಲ್ಲಿದ್ದುದನ್ನು ಅವನು ಕಂಡನು. ಉದ್ಭಟ

ದೇವನು ನದಿಯ ದಂಡೆಗುಂಟ ಇದ್ದ ಉದ್ಯಾನ ವನಗಳನ್ನು ನೋಡುತ್ತ ವಶಿಷ್ಠಾಶ್ರಮವಿದ್ದ ಸ್ಥಳದಲ್ಲಿ ಸ್ನಾನಮಾಡಿ ಮೊದಲು ಪಂಪಾದೇವಿಯನ್ನು ಭಕ್ತಿಯಿಂದ ಪೂಜಿಸಿ, ಆಮೇಲೆ ವಿರೂಪಾಕ್ಷಲಿಂಗವನ್ನು ಪೂಜಿಸಿ, ದೇವಲ ಮಹರ್ಷಿಯ ಆಶ್ರಮಕ್ಕೆ ಹೋದನು. ಅಲ್ಲಿ ಯಜ್ಞಕ್ಕೆ ವಿಘ್ನವನ್ನೊಡ್ಡಿದ ವಿಘುಜ್ಞಾಸುರನನ್ನು ಎದುರಿಸಿ ಅವನನ್ನು ಸಂಹರಿಸಿದನು.

ಆಮೇಲೆ ಉದ್ಭಟನು ದೇವಲ ಮುನಿಯ ಆಶ್ರಮದಲ್ಲಿ ಕೆಲಕಾಲ ಇದ್ದನು. ಆಗ ಬೇಟೆಗಾರರು ಒಂದು ಗಿಳಿಯನ್ನು ಬೆನ್ನಟ್ಟಿ ಬರಲು ಅದು ದೇವಲ ಮುನಿ ಇದ್ದಲ್ಲಿಗೆ ಬಂದು ಅವನ ಮೊರೆ ಹೊಕ್ಕಿತು. ಆಗ ಆ ಋಷಿಯು ಅದನ್ನು ರಕ್ಷಿಸಿ ಕೆಲವುಕಾಲ ಜೋಕೆಮಾಡುತ್ತ ಇದ್ದನು. ಒಂದು ದಿವಸ ಆ ಗಿಳಿಯು ಉದ್ಭಟ ದೇವನನ್ನು ಕುರಿತು— ಚೋಳ ರಾಜನಾದ ಸುಧರ್ಮನ ಮಗಳು ಸೌಂದರವತಿ ಎಂಬುವಳಿದ್ದಾಳೆ. ಅವಳು ನಿನಗೆ ಅನುರೂಪಳಾಗಿರುವಳು. ಅವಳನ್ನು ನೀನು ಲಗ್ನವಾಗು, ಎಂದು ಅದು ಹೇಳಿತು. ಆಗ ದೇವಲ ಮಹರ್ಷಿಯ ಮೂಲಕ ಚೋಳರಾಜನನ್ನು ಉದ್ಭಟ ದೇವನು ಆಶ್ರಮಕ್ಕೆ ಬರಮಾಡಿಕೊಂಡು ಸೌಂದರವತಿಯನ್ನು ಲಗ್ನವಾದನು. ಆಮೇಲೆ ಅವನು ತನ್ನ ಸೌರಾಷ್ಟ್ರಕ್ಕೆ ಬಂದು ವೈಭವ ದಿಂದ ರಾಜ್ಯವಾಳುತ್ತಿದನು.

ಸೌಂದರವತಿಗೆ ಮಂಗಳಾಂಬೆ, ಸೌಂದರ್ಯಸಾರ, ಮನೋವಲ್ಲಭೆ ಎಂಬ ಬೇರೆ ಹೆಸರುಗಳೂ ಇದ್ದಹಾಗೆ ಗ್ರಂಥಗಳಲ್ಲಿ ಉಲ್ಲೇಖಗಳಿವೆ. ಆದರೆ ಇವುಗಳಲ್ಲಿ ಮಂಗಳಾಂಬೆ ಎಂಬುವೇ ಈಕೆಯ ನಿಜವಾದ ಹೆಸರಿರಬೇಕೆಂದು ತೋರುತ್ತದೆ.

ಗುಜರಾಥ ದೇಶದ ಒಬ್ಬ ರಾಜನು ಈ ಪ್ರಕಾರ ಕರ್ನಾಟಕಕ್ಕೆ ಬಂದು ಇಲ್ಲಿ ಒಬ್ಬ ಚೋಳರಾಜನ ತರುಣಿಯನ್ನು ಲಗ್ನವಾದುದು ಈ ಕಾಲದಲ್ಲಿ ಅಸಂಭಾವ್ಯವಾಗಿದ್ದಿಲ್ಲ. ಚೋಳರಾಜರೂ ಕರ್ನಾಟಕದ ರಾಜರೂ ಗುಜರಾಥ ದೇಶದ ರಾಜರೂ ಒಂದೇ ಸಂಸ್ಕೃತಿಯವರಿದ್ದು, ಅವರಲ್ಲಿ ಈ ಪ್ರಕಾರ ಪರಸ್ಪರ ವಿವಾಹಗಳಾಗುತ್ತಿದ್ದುದು ವಾಡಿಕೆಯಾಗಿತ್ತು. ಕರ್ನಾಟಕದ ರಾಜರು ಮತ್ತು ಚೋಳರಾಜರು ಇವರಲ್ಲಿ ಲಗ್ನವಾದ ಉದಾಹರಣೆಗಳು ಅನೇಕವಿವೆ. ಹಾಗೆಯೇ ಕದಂಬ ರಾಜರು ಮತ್ತು ಮಧ್ಯ ಪ್ರಾಂತದ ಗುಪ್ತ ಅರಸರು ಇವರಲ್ಲಿಯೂ ಕೂಡ ಪರಸ್ಪರ ಲಗ್ನ

ಗಳಾಗಿರುತ್ತವೆ. ಗುಜರಾಥ ಮತ್ತು ಕರ್ನಾಟಕಗಳಲ್ಲಿ ನಿಬಿಡವಾದ ವ್ಯಾಪಾರ ಸಂಬಂಧವಿದ್ದು ಕರ್ನಾಟಕಕ್ಕೆ ಬಹುಜನ ಗುರ್ಜರರು ಈ ಕಾಲದಲ್ಲಿ ಬರುತ್ತಿದ್ದುದು ಕಂಡುಬರುತ್ತದೆ. ಹೀಗೆ ಕರ್ನಾಟಕ ಪ್ರಾಂತವು ಉತ್ತರ ಹಿಂದುಸ್ಥಾನ ಮತ್ತು ದಕ್ಷಿಣ ಹಿಂದುಸ್ಥಾನಗಳಲ್ಲಿಯವರಿಗೆ ಒಂದು ಸಂಗಮ ಸ್ಥಾನವಾಗಿ ಈ ಕಾಲದಲ್ಲಿ ಪರಿಣಮಿಸಿತ್ತು.

ಉಪ್ಪಟ ಅಥವಾ ಕುಮಾರಪಾಲ ಘೂರ್ಜರನು ಕರ್ನಾಟಕ ಪ್ರಾಂತದಲ್ಲಿ ಇದ್ದುದರಿಂದ ಅವನು ಶಿವಶರಣರ ನಡೆಯನ್ನು ತಿಳಿದುಕೊಂಡು ಅದರಂತೆ ಅವನು ತನ್ನ ಲಿಂಗಪೂಜೆಯನ್ನು ನಿರ್ವಹಿಸುವನು. ಹರಿಹರ ಕವಿಯು ಅವನ ನಡೆಯ ವಿಷಯವಾಗಿ ವರ್ಣಿಸಿರುವದು ಹೀಗೆಂದರೆ:— ಅವನ ಕರಣಗಳು ಶಿವನ ಉಪಕರಣಗಳಾಗಿದ್ದವು. ಅವನ ಇಂದ್ರಿಯಗಳೇ ಲಿಂಗೇಂದ್ರಿಯಗಳಾಗಿದ್ದವು. ಅವನ ಹೃದಯ ಕಮಲವೇ ಅವನಿಗೆ ಲಿಂಗಸಜ್ಜೆಯಾಗಿತ್ತು. ನಿರ್ಮಲ ಮನಸ್ಸೇ ಕುಸುಮವಾಗಿತ್ತು. ಅವನ ಪ್ರಾಣಲಿಂಗವೇ ಅವನಿಗೆ ಶಿವಲಿಂಗವು. ಅವನ ಪರಿಣಾಮ ಸುಖವೇ ಅವಕ್ಕೆ ಅಮೃತಾನ್ನವಾಗಿತ್ತು. ಈ ಪ್ರಕಾರ ಅವನು ಹಗಲು ಇರುಳೂ ಶಿವನ ಪೂಜೆಯಲ್ಲಿ ತೊಡಗಿರುವನು. ಇದರಿಂದ ಅವನ ನೋಟವೆಲ್ಲ ಶಿವನಲ್ಲಿರುವದು. ಅವನ ಬೇಟ ಕೂಟವೆಲ್ಲ ಶಿವನಲ್ಲಿ ಬೆರೆತಿರುವದು. ಅವನ ಮಾಡುವುದೆಲ್ಲ ಶಿವಪೂಜೆಯಾಗಿತ್ತು. ನೆನೆವುದೆಲ್ಲ ಪರಮಾತ್ಮನ ಧ್ಯಾನವಾಗಿತ್ತು. ಅವನ ಕ್ರಿಯೆಗಳೆಲ್ಲವು ಪರಮಾತ್ಮನಿಗರ್ಪಿತವಾದವು. ಹೀಗೆ ಭಕ್ತಿ ಮೂರ್ತಿ ತಾನಾಗಿ ಶಿವಭಕ್ತಿ ಸಾಮರ್ಥ್ಯವುಳ್ಳವನಾಗಿ, ಶಿವನಲ್ಲಿ ಸಾಮರಸ್ಯ ಭಾವವುಳ್ಳವನಾಗಿ, ಆಚರಿಸುತ್ತಿದ್ದನು. ಇದೇ ರೀತಿಯಾಗಿ ಅವನ ಹೆಂಡತಿಯಾದ ಮಂಗಳಾಂಬೆಯೂ ಕೂಡ ಆಚರಿಸುವಳು. ಈ ಪ್ರಕಾರ ಉಭಯತರು ಧಾರ್ಮಿಕ ವೃತ್ತಿಯವರಾಗಿ ರಾಜ್ಯಭಾರವನ್ನು ನಡಿಸುತ್ತ ಬಂದರು.

ಉಪ್ಪಟ ದೇವನು ಕವಿತಾ ಸಾಮರ್ಥ್ಯವುಳ್ಳವನೂ ಆಗಿದ್ದನು. ಅವನು 'ಶಿವಸ್ತುತಿ' ಎಂಬ ಹೆಸರಿನ ಒಂದು ಕಾವ್ಯವನ್ನು ರಚಿಸಿದನೆಂದು ತಿಳಿಯುತ್ತದೆ.

ಹೀಗಿರಲು ಒಂದು ದಿವಸ ಅವನು ತನ್ನ ಸತಿಯೊಡನೆ ಲೆತ್ತವನಾಡುತ್ತಾ ಇದ್ದನು. ಆಟದಲ್ಲಿ ಅವನು ಮಾಡದೇವ ಗಣಿತವು ಶಿವ

ತತ್ವವನ್ನೇ ಗಣಿಸುವವನಂತೆ ತೋರುತ್ತಿದ್ದನು. ಅವನಿಗೆ ಆಟವಾಡುವದೂ ಲಿಂಗಪೂಜೆಯಾಗಿತ್ತು. ಹೀಗೆ ಆಡುತ್ತಾಡುತ್ತ ಉದ್ಭಟ ದೇವನಿಗೆ ನಗೆ ಬರಲು ಅವನ್ನು ಸತಿಯು ನೋಡಿ ಮುನಿಸು ತಾಳಿ— ಹೀಗೇಕೆ ನಗುವುದು? ಲೆತ್ತವನಾಡುವುದು ಭಕ್ತ ನೀತಿಯಲ್ಲವೋ? ಲೆತ್ತವ ಹಾಕುತ್ತ ತಪ್ಪಿದೆನೆಂದೋ? ಪತರಲ್ಲಿ ಕುಂದು ಕಂಡು ನೀವು ನಗುತ್ತಿದ್ದೀರಿ, ಎಂದೆನ್ನಲು ಉದ್ಭಟನು - ಪ್ರಿಯಳೇ ನಾನು ನಕ್ಕಿದ್ದು ನಿನ್ನ ಕಾರಣವಲ್ಲ, ನಮ್ಮ ಶರಣರ ಕಾರಣ ಎಂದನು. ಅದೇನೆಂದರೆ, ಸೌರಾಷ್ಟ್ರದ ಓಬಲನು ಘೋರ ತಪಸ್ಸನ್ನು ಮಾಡಿ ತನ್ನ ತನುವನ್ನು ದಂಡಿಸಿ ಧೂಪವನ್ನು ಶಿವನಿಗಿತ್ತು ಶಿವನನ್ನೊಲಿಸಿದನು. ಆದರೆ ಅವನು ಶಿವನನ್ನೊಲಿಸಿ ತಾನೊಬ್ಬನೇ ಪರದೇಶಿಯಂತೆ ಶಿವಪುರಕ್ಕೆ ಹೋಗುತ್ತಿದ್ದಾನೆ. ಅವನು ಹೋಗುವ ವಿಮಾನದಲ್ಲಿ ಗಂಟೆಯು ನಾದಿಸಿದೆ. ಆದರೆ ಆ ಗಂಟೆ ಕೆಳಕ್ಕೆ ಬಿದ್ದರೂ ಅದರ ಅರಿವು ಅವನಿಗಿಲ್ಲ. ಅವನ ನೆಂಟರು ಸ್ನೇಹಿತರು ಕೆಳಗನಿಂತು ನೋಡುತ್ತಿದ್ದಾರೆ. ಆದರೆ ಅವನು ಅವರನ್ನು ಬಿಟ್ಟುಕೊಟ್ಟು ಏಕಾಕಿಯಾಗಿ ಒಬ್ಬನೇ ಹೋಗುತ್ತಿದ್ದಾನೆ. ಹೀಗೆ ಒಬ್ಬನೇ ಹೋಗುವದು ಆವೇತರ ಧರ್ಮ? ಧರ್ಮನಿರತನಾದವನು ಎಲ್ಲರನ್ನು ತನ್ನಂತೆ ಮಾಡಿ ಅವರೂ ಉದ್ಧಾರವಾಗುವಂತೆ ಮಾಡುವನು. ಹೀಗೆನ್ನುತ್ತ ಮತ್ತೆ ಗಹಗಹಿಸಿ ನಕ್ಕನು.

ಅದಕ್ಕೆ ಸತಿಯು ಓಬಲದೇವನು ಹೋಗುತ್ತಿರುವವನ್ನು ನನಗೆ ತೋರಿಸು ಎಂದೆನಲು ಉದ್ಭಟನು- ಅಗೋ ನೋಡು. ಆಕಾಶದಲ್ಲಿ ಅವನು ಹೋಗುತ್ತಿದ್ದಾನೆ, ಎನಲು ಸತಿಯು ಕಂಡು ಅವನಿಗೆ ಅಷ್ಟಾಂಗವೆರಗಿ ತನ್ನ ಪತಿಗೆ— ಒಲಿದರೆ ಕೊಂಡಾಡಿರಿ, ಇಲ್ಲದಿದ್ದರೆ ಸುಮ್ಮನಿರಿ. ಆತ ಯೋಗಿ, ನೀವು ಭೋಗಿ ಆತ ಸುರಲೋಕದ ತಪಸ್ವಿ, ನೀವು ನರಲೋಕದ ಅರಸು. ನೀವು ಕಾಮಿ, ಆತ ನಿಃಕಾಮಿ. ಆತನನ್ನು ಜರಿಯುವ ಕಾರಣವೇನು, ಎಂಬ ಮಾತಿಗೆ ಗುರ್ಜರದೇವನು— ಶಿವಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು, ಎಂಬುದನ್ನರಿಯೆಯಾ ಎಂದು ಪುನಃ ನಕ್ಕನು ಅದಕ್ಕೆ ಸತಿಯು— ಸಾಯುವೇಳೆ ನೀವು ಅವನಂತೆ ಶಿವೈಕ್ಯರಾದರೆ ಅವನಂತೆ ನೀವು ಹೋಗುವಿರಾ? ಎಂದೆನ್ನಲು ಅದಕ್ಕೆ ಉದ್ಭಟನು-, ಶಿವೈಕ್ಯರಿಗೆ ಹರಲೋಕವೇನು ? ನರಲೋಕವೇನು? ಅವರಿಗೆ ಈ ಎರಡೂ ಒಂದೇ ರೀತಿ. ಭಕ್ತಿಯ ಮರ್ಮವನ್ನು ನೀನೆತ್ತ ಬಲ್ಲೆ ? ಎಂದುದಕ್ಕೆ ಅವಳು ಅದನ್ನು ನಾನರಿಯೆ. ಹರಲೋಕ ನರ

ಲೋಕ ಒಂದೇಯಾದರೆ, ಎಷ್ಟುದಿವಸಕ್ಕೆ ನೀವು ನಮ್ಮೆಲ್ಲರನ್ನು ಕೈಲಾಸಕ್ಕೊಯ್ಯುವಿರಿ? ಎಂದು ಕೇಳಲು, ಆವನು ಇದೇ ರೀತಿಯಲ್ಲಿ ಈ ಊರ ಜನರನ್ನೆಲ್ಲ ಒಯ್ಯುವೆನು. ಬೇಕಾದರೆ ನೀನು ನೋಡು ಎನಲು ಅವಕ್ಕೆ ಅವಳು— 'ನಾನು ಒಯ್ಯುವೆನು, ಒಯ್ಯುವೆನು' ಎಂದು ಹೇಳುವದು ಬೇಡ. ಒಂದು ವಾರವನ್ನು ಗೊತ್ತುಪಡಿಸಿ ಹೇಳಬೇಕು ಎಂದು ನುಡಿದಳು. ಅವಕ್ಕೆ ಉದ್ಭಟನು — ಶಿವಶರಣರ ನುಡಿ ಬೇರೆ, ನಡೆ ಬೇರೆ ಹೀಗಾವುದು ಉಂಟೇ? ನಾಳಿನ ಸೋಮವಾರ ಕೈಲಾಸಕ್ಕೆ ಪಯಣವೆಂದು ಹೇಳಿದನು.

ಆಗ ಜನರು ಉದ್ಭಟದೇವನು ಸೋಮವಾರ ದಿವಸ ಕೈಲಾಸಕ್ಕೆ ಪಯಣಮಾಡುತ್ತಿದ್ದಾನೆ, ಎಲ್ಲರೂ ಬರಬೇಕೆಂದು ಐದು ಗ್ರಾಮದ ಸುತ್ತಲೆಲ್ಲ ಡಂಗುರವನ್ನು ಹೊಯಿಸಿದರು. ಆಗ ಪಾಪಿಗಳು ಸೀಪಾಪಿಗಳು, ಜನನದ ತಾಪತ್ರಯದಿಂದ ಬಳಲಿದವರು ಹೀಗೆ ಅನೇಕರು ತಂಡ ತಂಡವಾಗಿ ಮಂಗಳಪುರಕ್ಕೆ ಬಂದು ಕೂಡಿದರು

ಆಗ ಪತಿ ಮಂಗಳಾಂಬಿಯು ಉದ್ಭಟನು ಒಯ್ದರೆ ಕೈಲಾಸದಲ್ಲಿರುವೆನು. ಇಲ್ಲವಿದ್ದರೆ ಆತನನ್ನು ಭಕ್ತರಪ್ಪ ಹಂಗಿಸದೆ ಬಿಡೆನು ಎಂದು ನುಡಿಯುತ್ತ ಅವನಿಗೆ :- ಇಂದು ಸೋಮವಾರವು. ಪುರಜನರು ಇಲ್ಲಿ ನೆರೆದಿದ್ದಾರೆ. ಕೈಲಾಸಕ್ಕೆ ಹೋಗುವುದು ಯಾವಾಗ್ಗೆ ಎಂದು ಕೇಳಲು, ಗುರ್ಜರ ದೇವನು ಮೊದಲು ಭಕ್ತಿಪೂರ್ವಕವಾಗಿ ಲಿಂಗಾರ್ಚನೆಯನ್ನು ಮಾಡಿ, ಶಿವಸ್ತುತಿಯನ್ನು ಮಾಡಲು ಪ್ರಾರಂಭಿಸಿದನು. ಮೊದಲು ಮೃಡನ ಜಡೆ ಮುಡಿಗೆ ಒಂದು ಪದ್ಯವನ್ನು ರಚಿಸಿ ಉಚ್ಚರಿಸಿದನು. ಆಗ ಪುರವೆಲ್ಲ ಮೇಲಕ್ಕೆದ್ದು ಅಂತರಿಕ್ಷದಲ್ಲಿ ಹೋಗಹತ್ತಿತು. ಅದು ಹಾಗೆ ಹೋಗುತ್ತಿರುವದು ಪುರಜನರಿಗೆ ಗೊತ್ತಾಗಲಿಲ್ಲ. ಆದರೆ ಹೊರಗಿದ್ದವರು ಅದನ್ನು ನೋಡಿ ಆಶ್ಚರ್ಯಚಕಿತರಾಗಿ ಉದ್ಭಟನನ್ನು ಸ್ತುತಿಸುವವರಾದರು. ಉದ್ಭಟನು ಮೊದಲನೆಯ ಪದ್ಯವನ್ನು ಅನ್ನುವದನ್ನು ಮುಗಿಸುವಷ್ಟರಲ್ಲಿ ನಗರವು ಒಂದು ನೂರು ಯೋಜನ ಮೇಲಕ್ಕೆ ಹೋಯಿತು. ಆಗ ಪುರವು ಆಕಾಶವೆಂಬ ಶರಧಿಯಲ್ಲಿ ಒಂದು ಹರಿಗೋಲಿನಂತೆಯೂ ಗುರ್ಜರ ದೇವನು ಅಂಬಿಗನಂತೆಯೂ ತೋರುತ್ತಾ ಇದ್ದರು. ಹಾಗೆ ಪುರವು ಮೇಲೆ ಮೇಲೆ ಸಾಗಿಹೋಗುತ್ತಾ ಇತ್ತು.

ಉದ್ಭಟನು ಹರನ ಜಡೆಯ ಬಗೆಗೆ ಒಂದು ಪದ್ಯವನ್ನು ಮೊದಲು ರಚಿಸಿದ ಬಳಿಕ ಅನುಕ್ರಮವಾಗಿ ಅವನು ಶಿವನ ಅಂಘ್ರಿಪರಿಯಂತರವು ಒಂದೊಂದು ಪದ್ಯವನ್ನು ರಚಿಸುತ್ತ ಬಂದನು. ಹೀಗೆ ಶಿವನನ್ನು ಸ್ಮರಿಸುತ್ತ ಹೋದಹಾಗೆ ಮಂಗಳಪುರವು ಮೇಲೆ ಮೇಲೆ ಹೋಗುತ್ತಾ ಇತ್ತು. ಮತ್ತು ಅವನ ಅಂಘ್ರಿವಿಷಯಕ ಪದ್ಯವು ಮುಗಿಯುವಷ್ಟರಲ್ಲಿ ಅದು ಕೈಲಾಸದ ಅಡಿಯನ್ನು ಮುಟ್ಟಿತ್ತು.

ಆದರೆ ಪುರವು ಹೀಗೆ ಮೇಲೆ ಮೇಲೆ ಹೋದದ್ದು ಮಂಗಲಾಂಬೆಗೆ ಏನೂ ಗೊತ್ತಾಗಲಿಲ್ಲ. 'ಆಗ ಆವಳು ಉದ್ಭಟನಿಗೆ-ಈಗ ಮಧ್ಯಾಹ್ನವಾಯಿತು. ಕೈಲಾಸಕ್ಕೆ ಒಯ್ಯುವೆನೆಂಬ ನಿಮ್ಮ ಭಾಷೆ ಎಲ್ಲಿದೆ ? ಅದು ಸುಳ್ಳಾಯಿತಲ್ಲಾ, ಎಂದು ಅನ್ನಲು-ಅವನು ನಗುತ್ತಾ—ಬಾಲೆ ನೀನು ಮೇಲೆ ನೋಡು ಎಂದೆನ್ನಲು ಅವಳು ನೋಡಲಾಗಿ, ಅಲ್ಲಿ ಕೋಟಿ ಸೂರ್ಯ ಚಂದ್ರಾಗ್ನಿ ಪ್ರಕಾಶವನುಳ್ಳ ಶಿವನ ಒಡ್ಡೋಲಗವು ರಜತಾದ್ರಿಯಲ್ಲಿ ಪ್ರಕಾಶಿಸುತ್ತಿದ್ದುದನ್ನು ಅವಳು ಕಂಡಳು. ಅದನ್ನು ನೋಡಲು ಅವಳಿಂದ ಆಗದೆ ಅವಳು ಕಣ್ಣು ಮುಚ್ಚಿಕೊಂಡಳು. ಅವಳಲ್ಲಿ ಭಯವುಂಟಾಯಿತು. ಆಗ ಅವಳು ಉದ್ಭಟದೇವನಿಗೋಸ್ಕರ ಭಕ್ತಿಯುಳ್ಳವಳಾಗಿ ಅವನನ್ನು ನಮಸ್ಕರಿಸಿದಳು.

ಆ ಮೇಲೆ ಆ ಪುರವು ಮತ್ತೆ ಕೈಲಾಸಪರ್ವತದ ಗುಂಟ ಮೇಲಕ್ಕೆ ಸಾಗಿ ಅದರ ದ್ವಾರದ ಮುಂದೆಯೇ ಪಾರ್ವತಿಯ ಭವನದ ಇದಿರಿಗೆ ಬಂದು ನಿಂತಿತು. ಅದನ್ನು ಉಭಯತರು ಪ್ರವೇಶಿಸಿ ಅಲ್ಲಿದ್ದ ಪಾರ್ವತೀ ಪರಮೇಶ್ವರರಿಗೆ ನಮಸ್ಕರಿಸಿದರು. ಆಗ ಪರಮೇಶ್ವರನು ಅಲ್ಲಿದ್ದ ಗಣಾಧೀಶ್ವರರಿಗೆ ಹೀಗೆ ಉದ್ಭಟನಂತೆ ಎಂದಾದರೂ ಪುರಸಹಿತ ಕೈಲಾಸಕ್ಕೆ ಬಂದವರುಂಟೇ ? ಅವನಂತೆ ಯಾರಾದರೂ, ಸನಿಯದ ಜನರನ್ನೆಲ್ಲ ಉದ್ಧಾರ ಮಾಡಿದವರು ಇದ್ದಾರೆಯೇ? ಶರಣರು ಲೋಕದ ಜನರನ್ನೆಲ್ಲ ಉದ್ಧಾರ ಮಾಡುವವರು. ಅವರ ನಡೆಯೇ ಶರಣರ ನಡೆ ಎಂದು ಹೇಳುತ್ತ ಪರಮಾತ್ಮನು ಉದ್ಭಟನಿಗೆ ಶಾಶ್ವತವಾದ ಗಣಪದವಿಯನ್ನು ದಯಪಾಲಿಸಿದನು

# ಅಫಗಾಣಿಸ್ತಾನದಲ್ಲಿಯು ಶಿವಶರಣರು

ಒಂದುಕಾಲದಲ್ಲಿ ಶೈವ ಸಂಸ್ಕೃತಿಯು ಸಿಂಧೂ ನದಿಯ ಆಚೆಗಿರುವ ಪ್ರದೇಶಗಳಲ್ಲಿ ಅಂದರೆ ಯಾವಲ್ಲಿ ಅಫಗಾಣಿಸ್ತಾನ ಮತ್ತು ಮೋರಿಯಪ್ರಾಂತಗಳು ಈಗ ಇರುತ್ತವೋ ಅಲ್ಲಿಯೂ ಕೂಡ ಅದು ಪಸರಿಸಿತ್ತೆಂದು ಕಂಡು ಬರುತ್ತದೆ. ಬಸವೇಶ್ವರನು ತನ್ನ ಒಂದು ವಚನದಲ್ಲಿ 'ಕಾಳಿದಾಸನವ ನಾನು, ಬಾಣನವ ನಾನು, ಮಯೂರನವ ನಾನು' ಎಂದು ಹೇಳಿಕೊಂಡಿದ್ದಾನೆ. ಹರಿಹರನು ಬಾಣಕವಿಯಮೇಲೆ ಒಂದು ರಗಳೆಯನ್ನು ರಚಿಸಿದ್ದಾನೆ. ಅದರಲ್ಲಿ ಅವನು ಬಾಣನು ಕಂಧಾರವೆಂಬ ಪಟ್ಟಣದವನೆಂತಲೂ ಅವನೊಡನೆ ಕಾಳಿದಾಸ ಮಯೂರರಿದ್ದರೆಂತಲೂ ಹೇಳಿದ್ದಾನೆ. ಕಂಧಾರವು ಅಫಗಾಣಿಸ್ತಾನದಲ್ಲಿಯ ಪ್ರಸಿದ್ಧ ಪಟ್ಟಣವಾದ ಈಗಿನ ಕಂದಹಾರವಿರುತ್ತದೆ. ಈ ಮೂವರೂ ಕವಿಗಳು ಕೇವಲ ಶಿವಭಕ್ತಿಯುಳ್ಳವರೆಂದು ವೀರಶೈವ ಗ್ರಂಥಗಳಲ್ಲಿ ವರ್ಣನೆಗಳಿವೆ. ಇವರಲ್ಲಿ ಬಾಣನು ಒಬ್ಬ ಜಂಗಮನ ಭಕ್ತನಾಗಿ ಅವನಿಂದ ಆವನು ಶಿವಜ್ಞಾನ ಪಡೆದನೆಂದು ಅವನ ಚರಿತ್ರೆಯಲ್ಲಿ ಹೇಳಿದೆ. ಪುರಾತನ ಕಾಲದಲ್ಲಿ ಜಂಗಮರು ಇಡೀ ಹಿಂದುಸ್ತಾನವನ್ನು ಉತ್ತರಕ್ಕೆ ಕಾಶ್ಮೀರದಿಂದ ದಕ್ಷಿಣಕ್ಕೆ ರಾಮೇಶ್ವರದ ವರೆಗೂ ಮುಖ್ಯವಾಗಿ ಎಲ್ಲೆಲ್ಲಿ ಶಿವಕ್ಷೇತ್ರಗಳಿರುತ್ತವೆಯೋ ಅಲ್ಲಿಗೆ ಸಂಚರಿಸುತ್ತಿದ್ದರೆಂದು ಕಂಡುಬರುತ್ತದೆ. ಆದ್ದರಿಂದ ಅವರು ಅನೇಕ ಮಹತ್ವದ ಕ್ಷೇತ್ರಗಳಲ್ಲಿ ಈಗಲೂ ಅರ್ಚಕರಾಗಿದ್ದಾರೆ. ಅವರು ಈ ಕಾಲದಲ್ಲ ಜಟಾ ಭಸ್ಮಧಾರಿಗಳಾಗಿ ಲಿಂಗ ಚಿನ್ಹವುಳ್ಳವರಾಗಿ ಯೋಗಾಭ್ಯಾಸದಲ್ಲಿ ನಿರತರಾಗಿ ಸಿದ್ಧಿಗಳನ್ನು ಪಡೆದವರಾಗಿ ಔಷಧಿಗಳ ಜ್ಞಾನವನ್ನು ಹೊಂದಿ ಜನರಿಂದ ಬಹಳ ಮನ್ನಣೆಯನ್ನು ಹೊಂದಿದ್ದರು. ಅವರ ಸಂಖ್ಯೆಯು ಮುಖ್ಯವಾಗಿ ಕಾಶ್ಮೀರದಲ್ಲಿ ಬಹು ದೊಡ್ಡದಾಗಿತ್ತೆಂದು ವೀರಶೈವ ಗ್ರಂಥಗಳಿಂದ ತಿಳಿದುಬರುತ್ತದೆ.

ಹಿಂದುಸ್ತಾನವು ಪುರಾತನ ಕಾಲದಲ್ಲಿ ಈಗಿನ ಅಫಗಾಣಿಸ್ತಾನವನ್ನು ಸಹ ಒಳಕೊಂಡು ಭಾರತವರ್ಷವೆಂದು ಪ್ರಸಿದ್ಧವಾಗಿತ್ತು. ಅಫಗಾಣಿಸ್ತಾನ ಮತ್ತು ಕಾಶ್ಮೀರಗಳು ಅನೇಕ ವರ್ಷ ಕನಿಷ್ಕರಾಜನ ಅಧೀನದಲ್ಲಿದ್ದವು. ಈ ರಾಜ್ಯಗಳಲ್ಲಿ ಬೌದ್ಧ ಧರ್ಮವು ಆಗ ಹೆಚ್ಚಾಗಿ ಪ್ರಸಾರವಾಗಿತ್ತು. ಹಿಂದಿನ ಕಾಲದ ಅಫಗಾಣರೂ ಬೌದ್ಧಮತವನ್ನು ಪಾಲಿಸುವವರಾಗಿದ್ದರು. ಆದ್ದರಿಂದ ಅವರ ದೇಶದಲ್ಲಿ ಅನೇಕ ಬೌದ್ಧಾಲಯಗಳು ಉಂಟಾಗಿದ್ದವು. ಅವುಗಳ ಅವಶೇಷಗಳು ಈಗಲೂ ಕೂಡ ಅಲ್ಲಿ ದೊರೆಯುತ್ತವೆ.

ಮಹಾಭಾರತದ ಕಾಲದಲ್ಲಿ ಅಫಗಾಣಿಸ್ತಾನದಲ್ಲಿ ಆಳುತ್ತಿದ್ದ ರಾಜ ವಂಶಗಳು ಹಿಂದುಸ್ತಾನದಲ್ಲಿ ಆಳುತ್ತಿದ್ದ ರಾಜವಂಶಗಳೊಡನೆ ಶರೀರ ಸಂಬಂಧವನ್ನು ಮಾಡಿಕೊಂಡಿದ್ದವೆಂಬುದು ಕಂಡುಬರುತ್ತದೆ. ಪಾಂಡು ರಾಜನಿಗೆ ಕುಂತೀ, ಗಾಂಧಾರೀ ಎಂಬ ಇಬ್ಬರು ಹೆಂಡರಿದ್ದು ಇವರಲ್ಲಿ ಗಾಂಧಾರಿಯು ಕಂದಹಾರದವಳಾಗಿದ್ದಳು. ಆದ್ದರಿಂದ ಅವಳಿಗೆ ಆ ಪಟ್ಟಣದ ಹೆಸರೇ ಉಂಟಾಗಿದೆ. ಗಾಂಧಾರೀ ಎಂದರೆ ಕಂದಹಾರದವಳೆಂಬ ಅರ್ಥವು.

ಅಫಗಾಣಿಸ್ತಾನವು ಪುರಾತನಕಾಲದಲ್ಲಿ ಈಗಿನಂತೆ ಹಿಂದುಸ್ತಾನಕ್ಕೆ ಸಂಬಂಧವಿಲ್ಲದ ಬೇರೊಂದು ದೇಶವಾಗಿರಲಿಲ್ಲ. ಅದು ಹಿಂದುಸ್ತಾನದ ಒಂದು ಭಾಗವಾಗಿತ್ತು. ಅದರೊಳಗಿಂದ ಹಿಂದೂ ವ್ಯಾಪಾರಸ್ತರು ಹಾಯ್ದು ಮಧ್ಯ ಏಶಿಯದ ವರೆಗೂ ವ್ಯಾಪಾರವನ್ನು ನಡಿಸುತ್ತಿದ್ದರು.

ಹಿಂದೂ ಜನರ ಪುರಾತನ ಪುರಾಣಗಳಲ್ಲಿ ಉಲ್ಲೇಖವಾದ ಕಿಂಪುರುಷ, ಕುಬೇರ, ಯಮ ಮೊದಲಾದವರ ರಾಜ್ಯಗಳು ಮಧ್ಯ ಏಶಿಯದಲ್ಲಿದ್ದವು. ಈ ಲೋಕಗಳ ವಿಚಾರಗಳು ಪುರಾಣಗಳಲ್ಲಿ ಆಗಿಂದಾಗ್ಗೆ ಬರುತ್ತವೆ. ಇವು ಮಧ್ಯ ಏಶಿಯಕ್ಕೆ ಇದ್ದ ಹಿಂದೂಜನರ ಸಂಬಂಧವನ್ನು ತೋರಿಸುತ್ತವೆ.

ಅಫಗಾಣಿಸ್ತಾನದಲ್ಲಿ ಈಗ ಪುಷ್ಟು ಎಂಬ ಭಾಷೆಯು ಪ್ರಚಲಿತವಿದೆ. ಇದು ದ್ರವಿಡ ಭಾಷೆಗಳಿಗೆ ಬಹು ಸಮೀಪವರ್ತಿಯಾದ ಭಾಷೆಯು. ದ್ರಾವಿಡರು ಯಾವಾಗಲೂ ಶಿವಪೂಜಕರು ಆದ್ದರಿಂದ ಅವರ ಮೂಲಕ ಈ ಪ್ರದೇಶದಲ್ಲಿದ್ದ ಜನರು ಶಿವೋಪಾಸಕರಾಗಿರಬಹುದು.

ಈ ಕಾರಣದಿಂದಲೇ ಪಂಜಾಬ ಮತ್ತು ಸಿಂಧದೇಶಗಳಲ್ಲಿ ಶಿವೋಪಾಸನೆಯ ಚಿನ್ಹಗಳು ಕಂಡುಬಂದಿವೆ. ಈ ಸಂಗತಿಯು ಮಹೆಂಜೊದಾರೋ ಮುಂತಾದ ಕಡೆಗೆ ದೊರೆದ ಪುರಾತನ ಅವಶೇಷಗಳಿಂದ ಸ್ಪಷ್ಟವಾಗಿರುತ್ತದೆ. ಇವುಗಳು ಅಲ್ಲಿದ್ದ ಶೈವ ಸಂಸ್ಕೃತಿಯನ್ನು ತೋರಿಸುತ್ತವೆ.

ಈ ಭಾಗದಲ್ಲಿ ಬೌದ್ಧಧರ್ಮವು ಕೆಲಕಾಲದ ಮೇಲೆ ಅವನತಿಯನ್ನು ಹೊಂದಿತು. ಅದರ ತರುವಾಯ ಆದರ ಸ್ಥಾನದಲ್ಲಿ ‘ತ್ರಿಕ’ವೆಂಬ ಶೈವ ಮತವು ಜನರಲ್ಲಿ ಬೆಳವಣಿಗೆಯನ್ನು ಹೊಂದಿತು. ಈ ಧರ್ಮವು ವೀರ ಶೈವ ಮತಕ್ಕೆ ಬಹು ಸಮೀಪವರ್ತಿಯಾದದು. ಇದೇ ಕಾಲಕ್ಕೆಯೇ

ಕಾಶ್ಮೀರ ದೇಶದಲ್ಲಿ ಶಿವಶರಣರು ಉದಯವಾದರು. ಆದ್ದರಿಂದ ಅದಕ್ಕೆ ಸಮೀಪವರ್ತಿಯಾದ ಅಫಗಾಣಿಸ್ತಾನದಲ್ಲಿಯೂ ಕೂಡ ಶಿವಶರಣರು ಆಗಿ ಹೋಗಿರುವದು ಅಸಂಭಾವ್ಯವಲ್ಲ. ಹೇಗೆ ಕಾಶ್ಮೀರದಲ್ಲಿಯ ಈ ಕಾಲದ ಶಿವಶರಣರು ಬಸವೇಶ್ವರನ ತತ್ವಗಳನ್ನು ತಿಳಿಯಲು ಕಲ್ಯಾಣಕ್ಕೆ ಬರುತ್ತಿದ್ದರೋ ಹಾಗೆಯೇ ಅಫಗಾಣಿಸ್ತಾನದಲ್ಲಿಯ ಕೆಲವು ಶಿವಶರಣರು ಕರ್ನಾಟಕಕ್ಕೂ ಬಂದ ಹಾಗೆ ತಿಳಿದುಬರುತ್ತದೆ.

ಅಫಗಾಣಿಸ್ತಾನಕ್ಕೆ ಈ ಕಾಲದಲ್ಲಿ ಬರ್ಬರದೇಶವೆಂಬ ಹೆಸರಿತ್ತು. ಈ ಶಿವಶರಣರಲ್ಲಿ ಹಲಾಯುಧ ಮತ್ತು ಮರುಳುಶಂಕರದೇವ ಇವರು ಮುಖ್ಯರಾಗಿದ್ದಾರೆ. ಇವರಲ್ಲಿ ಮರುಳುಶಂಕರದೇವನು ಬಸವೇಶ್ವರನನ್ನು ಕಾಣಲಿಕ್ಕೆ ಕಲ್ಯಾಣಕ್ಕೆ ಬಂದು ಅವನಲ್ಲಿ ಅನೇಕ ವರ್ಷವಿದ್ದನು. ಇವರಿಬ್ಬರ ಚರಿತ್ರೆಗಳನ್ನು ನಾವಿಲ್ಲಿ ಕೊಡುತ್ತೇವೆ.

ಬಸವಾದಿಪ್ರಮಥರ ಮಾರ್ಗವು ಆಂಧ್ರ, ಕಾಶ್ಮೀರ, ಗುರ್ಜರ ಮೊದಲಾದ ದೇಶಗಳಲ್ಲಿಯ ಶೈವಮಾರ್ಗಗಳಿಗಿಂತ ಭಿನ್ನವಾಗಿ ತೋರಬಹುದು. ಆದರೆ ಶಿವಶರಣರ ಈ ಧರ್ಮವು ಎಲ್ಲಕ್ಕೂ ಉಚ್ಚತರವಾಗಿತ್ತು. ಇದು ಇತರ ಶೈವಧರ್ಮೀಯರಿಗೆ ಕಂಡು ಬರಲಾಗಿ ಅವರಲ್ಲಿ ಬಹುಜನರು ಕಲ್ಯಾಣಕ್ಕೆ ಬಂದು ಬಸವೇಶ್ವರನ ಸನ್ನಿಧಿಯಲ್ಲಿ ಅದರ ರೀತಿಯನ್ನು ತಿಳಿದುಕೊಳ್ಳಲು ಇಚ್ಛಿಸುತ್ತಿದ್ದರೆಂದು ಕಂಡು ಬರುತ್ತದೆ.

ಆದ್ದರಿಂದ ಅವರು ಬಸವಾದಿ ಪ್ರಮಥರಿಗೋಸ್ಕರ ಬಹು ಪೂಜ್ಯಭಾವವನ್ನು ತಾಳಿದವರಾಗಿದ್ದಾರೆ. ಬಸವಾದಿ ಪ್ರಮಥರೂ ಕೂಡ ಈ ಧರ್ಮೀಯರು ತಮ್ಮವರೆಂತಲೇ ಭಾವಿಸಿ ಅವರೊಡನೆ ವರ್ತಿಸಿದ್ದಾರೆ. ಆದ್ದರಿಂದ ಹಿಂದಿನ ಕಾಲದಲ್ಲಿ ಶೈವಧರ್ಮಗಳು ಆಯಾ ಪ್ರಾಂತಗಳ ಪ್ರಕಾರ ಭಿನ್ನ ಭಿನ್ನತೆರನಾಗಿ ತೋರಿದರೂ ಅವೆಲ್ಲವೂ ಒಂದೇ ಸಂಸ್ಕೃತಿಗೆ ಹೊಂದಿದವು ಎಂದು ಭಾವಿಸಿ ಅವುಗಳಿಗೆಲ್ಲ ನಾವು ಮಹತ್ವ ಕೊಡುವದು ಅವಶ್ಯವಾಗಿದೆ. ಬಸವೇಶ್ವರನ ಕೂಡ ಇದ್ದ ಶಿವಶರಣರು ಇಂಥವರೊಡನೆ ಉದಾರಭಾವದಿಂದ ವರ್ತಿಸಿದ್ದಾರೆ. ಆದರಿಂದ ಶರಣರ ವರ್ಚಸ್ಸು ಎಲ್ಲ ಕಡೆಗೂ ಬೆಳೆದಿರುವದು. ಇದರಿಂದ ವೀರಶೈವಮತವು ಬೆಳೆಯಲಿಕ್ಕೆ ಕಾರಣವಾಯಿತು.

# ಹಲಾಯುಧ

ಬರ್ಬರ ದೇಶದಲ್ಲಿ ನವಪುರವೆಂಬ ಪಟ್ಟಣವಿದ್ದು ಅಲ್ಲಿ ಹಲಾಯುಧನು ಶಿವಧರ್ಮ ನಿರತನೆಂದು ಪ್ರಸಿದ್ಧನಾಗಿದ್ದನು. ಈ ಪಟ್ಟಣದಲ್ಲಿ ಒಂಬತ್ತು ಉಪಗ್ರಾಮಗಳಿದ್ದು ಆ ಗ್ರಾಮಗಳ ಒಡೆಯರು ಸಹ ಶಿವಭಕ್ತಿಯುಳ್ಳವರಾಗಿ ಆಚರಿಸುತ್ತಿದ್ದರು.

ಹೀಗಿರುವಲ್ಲಿ ಸಿರಿಯಾಳನು ಕೈಲಾಸಕ್ಕೆ ಹೋದ ಬಳಿಕ ಅವನು ತಾನು ಕಾಂಚೀಪುರದಲ್ಲಿ ತನ್ನ ಸುತನನ್ನು ಹತಿಸಿ ಶಿವನಿಗಿಕ್ಕಿ ಕೈಲಾಸಕ್ಕೆ ಬಂದಿದ್ದೇನೆ, ನನ್ನಂಥವರು ಶಿವನೊಡ್ಡೋಲಗದಲ್ಲಿ ಯಾರೂ ಇಲ್ಲ, ಎಂದು ಎಲ್ಲರ ಕೂಡ ಅತ್ಯಂತ ಅಹಂಕಾರದಿಂದ ವರ್ತಿಸುತ್ತಿದ್ದನು. ಇದು ಶಿವನ ಲಕ್ಷಕ್ಕೆ ಬಂದು ಹೆಮ್ಮೆಂಬುದು ಕರ್ಮಕ್ಕೆ ಮೊದಲು, ಅದು ಭವದ ಬೀಜವು, ಇವನ್ನು ಸಿರಿಯಾಳನು ಅರಿಯನು. ಇವನ್ನು ಅವನಲ್ಲಿ ಹೇಗೆ ದೂರ ಮಾಡಬೇಕೆಂಬುದನ್ನು ಚಿಂತಿಸುತ್ತ ಇದನ್ನು ಭಕ್ತರಿಂದಲೇ ದೂರ ಮಾಡಿಸಬೇಕೆಂದು ಯೋಚಿಸಿ ಒಂದು ಉಪಾಯವನ್ನು ನೆನೆದು ಭೂತಳಕ್ಕೆ ತನ್ನೊಡನೆ ಬರಬೇಕೆಂದು ಶಿರಿಯಾಳನಿಗೆ ಹೇಳಿದನು. ಆಗ ಉಭಯತರು ಮಾಹೇಶ್ವರರ ವೇಷವನ್ನು ಧರಿಸಿಕೊಂಡು ನಾಡಿನಲ್ಲಿ ಶಿವಭಕ್ತರಿದ್ದ ಸ್ಥಾನಗಳನ್ನು ನೋಡಲಿಕ್ಕೆ ಹೊರಟರು.

ಅವರು ಮೊದಲು ಕೊಟ್ಟಣದ ನಿಂಬಿಯಕ್ಕನಿದ್ದ ಸ್ಥಾನಕ್ಕೆ ಹೋದರು. ಆವಳು ತನ್ನ ಮಗನನ್ನು ಹೇಗೆ ಶಿವನಿಗರ್ಪಿಸಿದಳೆಂಬುದನ್ನು ಶಿವನು ಶಿರಿಯಾಳನಿಗೆ ಹೇಳಿಕೊಟ್ಟನು. ಶಿರಿಯಾಳನು ಅದನ್ನು ಕೇಳಿ ಆಚ್ಚರಿಬಟ್ಟನು. ಹಾಗೆಯೇ ಶಿವನು ಚಾರಮರಾಯ, ಶ್ವಪಚಯ್ಯ, ಬಾಹೂರ ಬೊಮ್ಮಯ್ಯ, ದೇವರ ದಾಸಿಮಯ್ಯ ಇವರಿದ್ದ ಸ್ಥಾನಗಳನ್ನು ತೋರಿಸಿ ಅವರು ಮಾಡಿದ ಮಹತ್ತರ ಕಾರ್ಯಗಳನ್ನು ನಿವೇದಿಸಿದನು. ಕಡೆಗೆ ಉಭಯತರು ಹಲಾಯುಧನಿದ್ದ ನವಪುರಕ್ಕೆ ಬಂದು ಅವನಿಗೆ ಭೆಟ್ಟಿಯಾದರು. ಹಲಾಯುಧನು ಅವರಿಗೆ— ನೀವಾರು, ನೀವೆಲ್ಲಿಂದ ಬಂದಿರೆಂದು ಕೇಳಲು ಅವರು— ನಾವು ಇದ್ದುದು ಸಿರಾಳಪುರ, ಮೇದಿನಿಯಲ್ಲಿದ್ದ ಶಿವಶರಣರ ಸ್ಥಾನಗಳನ್ನು ನೋಡುತ್ತ ಈ ದೂರ ದೇಶಕ್ಕೆ ಬಂದಿದ್ದೇವೆ, ಎಂದು ಹೇಳಿ, ಅಮ್ಮವ್ವೆಯು ತಾಯಿಯೋಪಾದಿಯಲ್ಲಿ ಶಿವನಿಗೆ ಹಾಲನೆರೆದಳು, ಪರಮಾತ್ಮನು ಚನ್ನಯ್ಯನೊಡನುಂಡನು, ದಾಸಿಮಯ್ಯನು ಗಿರಿ

ವರ್ಷ ನೆಯ್ದ ಬಟ್ಟೆಯನ್ನು ಜಂಗಮನಿಗೆ ಉಡಲು ಕೊಟ್ಟನು. ಹೀಗೆ ಶಿವಶರಣರ ಚರಿತ್ರೆಗಳನ್ನು ಹೇಳುತ್ತ ನಾವು ಮೊನ್ನೆ ಕಂಚಿಗೆ ಹೋದಾಗ ಅಲ್ಲಿ ಸಿರಿಯಾಳನು ತನ್ನ ಮಗನನ್ನು ವಧಿಸಿ ಶಿವನಿಗಿಕ್ಕಿ ಕಂಚಿಪುರ ಸಹಿತ ಕೈಲಾಸಕ್ಕೆ ಹೋದನು. ಬರಿಯ ಮಾತನಾಡಬಹುದು. ಆದರೆ ಸಿರಿಯಾಳನಂತೆ ಶಿವನಿಚ್ಛೆಯ ಪದಾರ್ಥವನ್ನು ಹೀಗೆ ಮಾಡುವದು, ಕೊಡುವುದು ಅರಿದು ಎಂದು ಅವರು ನುಡಿದರು.

ಹಲಾಯುಧನು ಸಿರಿಯಾಳನ ಈ ಚರಿತ್ರೆಯನ್ನು ಕೇಳಿದ ಕೂಡಲೆ ತನ್ನ ಕಿವಿಗಳನ್ನು ಮುಚ್ಚಿ 'ಶಾಂತಂ ಪಾಪಂ, ಶಾಂತಂ ಪಾಪಂ' ಎಂದು ಅನ್ನುತ್ತ- ಏನು ? ಶಿವನು ಮನುಜರನ್ನು ಭಕ್ಷಿಸಲು ರಾಕ್ಷಸನಾದನೇ ? ಸಿರಿಯಾಳನು ಹಸುಳನನ್ನು ವಧಿಸಿದನೇ ? ಮಗನನ್ನು ಕೊಲ್ಲುವನು ಅವನೆಂತಹ ಸೆಟ್ಟಿಯು? ಇಂಥ ಭಕ್ತಿ ಹೀನರ ಮಾತು ನೀವೇಕೆ ಹೇಳುವಿರಿ? ಶಿವನು ಭಕ್ತರನ್ನು ಹೀಗೆ ವಧಿಸಿದನೇ? ಅವನು ಭಕ್ತದ್ರೋಹಿಯಾದನೇ? ಏತಕೀ ಮಾತು? ವೀರಶೈವರು ಮಾಂಸವನ್ನು ಮುಟ್ಟಬಾರದು, ನೋಡಲು ಸಹ ಬಾರದು. ಎಂದು ಸಿಟ್ಟಿನಿಂದ ನುಡಿದನು.

ಅದಕ್ಕೆ ಮಾಹೇಶ್ವರ ವೇಷದಲ್ಲಿದ್ದ ಶಿವನು ಜಗತ್ತಿನಲ್ಲಿ ಅನೇಕ ಪುರಾತನರು ಆಗಿಹೋಗಿದ್ದಾರೆ. ಅವರಲ್ಲಿ ಅನೇಕರು ತಮ್ಮ ಮಹಿಳೆಯರನ್ನು ಮಕ್ಕಳನ್ನು ಮತ್ತು ತಮ್ಮನ್ನು ಪರಮಾತ್ಮನಿಗೆ ಅರ್ಪಿಸಿದ್ದಾರೆ. ಹಲಾಯುಧನೇ, ನೀನಂದ ಮಾತು ಸಲ್ಲದು. ನಿರ್ಮಳ ಮನದ ಸಿರಿಯಾಳನನ್ನು ಭೂವಲಯದಲ್ಲಿ ಜನರೆಲ್ಲರು ನಾನಾ ಬಗೆಯಾಗಿ ಸ್ತುತಿಸುತ್ತಾರೆ. ಸಭಾಕಾಲದಲ್ಲಿ ಅವನ ಚರಿತೆಯನ್ನು ಕೇಳಿ ಆನಂದಿಸುತ್ತಾರೆ, ಎಂದು ಉತ್ತರ ಕೊಟ್ಟನು.

ಈ ನುಡಿಗಳನ್ನು ಕೇಳಿ ಹಲಾಯುಧನ ಕೋಪವು ಮತ್ತಿಷ್ಟು ಹೆಚ್ಚಿತು. ಅವನು ಅಬ್ಬರಿಸುತ್ತ— ಅಹುದಹುದು, ಉಮಾಪತಿಯು ಮಾಂಸವನ್ನು ಬೇಡಿದನೇ? ಸೆಟ್ಟಿಯು ಭಕ್ತವತ್ಸಲನೇ? ಅವನು ಭಕ್ತನಾದರೆ ತರಳನನ್ನು ಹೇಗೆ ಕೊಂದ? ಅವನ ಹೆಂಡತಿಯು ರಕ್ಕಸಿಯಾದಳೇ? ಶಿವನು ತರಳನನ್ನು ಕಾಮಿಸಿ ಹೇಗೆ ಅವನನ್ನು ಕೊಲ್ಲಿಸಿದನು? ಇದು ಭಕ್ತಾಚಾರವೇ? ನರಮಾಂಸವು ಮಲಹರನ ಗಂಟಲಲ್ಲಿ ಹೇಗೆ ಇಳಿಯಿತು? ಇದು ನಿರ್ಮಳದ ಕಥೆ, ಎಂದು ನೀವು ನನಗೆ ಹೇಳುತ್ತೀರಿ. ಇದು ಪಾಪದ ಕಥೆಯು,

ನೀವು ಪಾಪಿಷ್ಠರು. ನೀವು ಜಗತ್ತಿನಲ್ಲಿ ಇರಬಾರದು ಎಂದು ಅಬ್ಬರಿಸುತ್ತ ಕೈಕಾಳಂಗಳನ್ನು ಹೊಯ್ದನು.

ಆಗ ಉಭಯ ಮಹೇಶ್ವರರು ಹಲಾಯುಧನ ರೋಷವನ್ನು ನೋಡಿ ಭಯಗೊಂಡರು. ಅವರಿಗೆ ಪ್ರಾಣಭಯವು ಉಂಟಾಯಿತು. ಅವರ ಎದೆಯು ಡವಡವನೆ ಹಾರಹತ್ತಿತು. ಶಿವನು ಭಯದಿಂದ ವಿಹ್ವಲನಾದನು. ಆಗ ಉಭಯತರಿಗೆ ತಮ್ಮ ಕಾಂತೆಯರ ನೆನಪಾಯಿತು. ತಮ್ಮನ್ನು ಉಳಿಸಿಕೊಳ್ಳಬೇಕೆಂದು ಅವರನ್ನು ನೆನೆದರು. ಆಗ ಚಂಗಳೆ, ಪಾರ್ವತೀದೇವಿಯರು ಹಲಾಯುಧನಿದ್ದಲ್ಲಿಗೆ ಓಡಿಬಂದರು. ಅವರು ನಡೆದ ಸಂಗತಿಗಳನ್ನು ತಿಳಿದುಕೊಂಡು ಪಾರ್ವತಿದೇವಿಯು ಹಲಾಯುಧನಿಗೆ— ನೀನು ನಮಗೆ ಆಶೀರ್ವಾದವನ್ನು ಮಾಡು. ನಮ್ಮ ಆಶೆಯನ್ನು ನೀನು ಪೂರೈಸು. ಈಕೆ ಸಿರಿಯಾಳನ ಸತಿಯು ಚಂಗಳೆಯು. ನಾನು ಜಗದೀಶನ ರಾಣಿ. ನಾವು ಪತಿಬಾಹ್ಯರಾಗುವಂತೆ ಮಾಡಬೇಡ. ನೀವು ನಮ್ಮ ಪತಿಗಳನ್ನು ನಮಗೆ ಭಿಕ್ಷೆಯಾಗಿ ಕೊಡಬೇಕು ಎಂದು ಅವನಿಗೆ ಬೇಡಿಕೊಂಡರು.

ಆಗ ಹಲಾಯುಧನ ರೋಷವು ಅಡಗಿತು. ಅವರಿಗೆ— ನೀವು ಅಂಜಬೇಡಿರಿ, ಅಂಜಬೇಡಿರಿ ಎಂದು ಅಭಯವನ್ನು ಕೊಟ್ಟನು. ಆದರೆ ನಿಮ್ಮ ಪತಿಗಳು ಹಿಂಸಾಚಾರವನ್ನು ಬಿಡಬೇಕು, ಇದು ಅಧರ್ಮವು, ಎಂದು ನುಡಿದನು. ಆಗ ಶಿವನು ಹಲಾಯುಧನ ಸಾಧುಮಾರ್ಗಕ್ಕೆ ಪ್ರೀತನಾಗಿ ಅವನಿಗೆ ನಿಜರೂಪವನ್ನು ತೋರಿಸಿದನು. ಹಲಾಯುಧನು ಶಿವನ ರೂಪವನ್ನು ನೋಡಿ ಶಿವನನ್ನು ಹೊಗಳುವಲ್ಲಿ—ಶಿವನ ಅಗ್ನಿನೇತ್ರವು ಜ್ವಾಲೆಯಿಂದ ಪೂರಿತವಾದದ್ದೆಂದು ಹೇಳದೆ ಅದು ಕುಂಕುಮದ ಲಲಾಮವೆಂದು ಹೇಳಿದನು. ಅವನ ಸಿರದ ಗಂಗೆ ಜಟೆಯಲ್ಲಿ ಬಂಧಿಸಲ್ಪಟ್ಟವಳೆಂದು ಹೇಳದೆ, ಜಾಜಿಯ ನನೆಯು ಎಂದು ಹೇಳಿದನು. ಶಿವನ ಕಂಠದಲ್ಲಿ ಇದ್ದ ಕಪ್ಪನ್ನು ವಿಷವೆಂದು ಹೇಳದೆ ಅದು ಕಸ್ತೂರಿಯ ರೇಖೆ ಎಂದು ಹೇಳಿದನು. ಹಲಾಯುಧನು ಶಿವನನ್ನು ಹೀಗೆ ಮೃದುವಚನಗಳಿಂದ ಹೊಗಳುತ್ತ— ಶಂಕರನೇ, ಶುಭಾಕರನೇ, ವರದಭಯಕರನೇ, ನೀನೊಲಿದರೆ ಇರುವೆ ಬ್ರಹ್ಮನಾಗುವದು, ನೊರಜು ನಾರಾಯಣನಾಗುವದು, ಭಕ್ತರ ವಾಮಕ್ಷೇಮವು ನಿನ್ನದು. ಕರ್ತನೇ, ಭಕ್ತರ ನಿಧಿ ನಿಧಾನವೇ ಎಂದು ತನ್ನ ಶುದ್ಧ ಸಾತ್ವಿಕ ಅಹಿಂಸಾಮಯವಾದ ಉಕ್ತಿಗಳಿಂದ ಪರಮಾತ್ಮನನ್ನು ಸ್ತುತಿಸಿದನು.

ಆಗ ಪರಮಾತ್ಮನು ಹಲಾಯುಧನ ನೈಜವಾದ ಮತ್ತು ಶುದ್ಧವಾದ ಭಕ್ತಿಗೆ ಪ್ರೀತನಾಗಿ— ನಿನಗೇನು ಬೇಕು ಬೇಡು ಎನಲು ಅವನು ತನ್ನ ನವಪುರದ ಜನರನ್ನೊಡಗೊಂಡು ನನ್ನನ್ನು ನಿನ್ನ ಶಿವಪುರಕೆ ಒಯ್ಯು ಎಂದು ಹೇಳಲು ಶಿವನು ಅವನ ಒಂಬತ್ತು ಪುರಗಳು ಸಹಿತವಾಗಿ ಅವನನ್ನು ಕೈಲಾಸಕ್ಕೊಯ್ದನು. ಆಗ ಅವನೊಡನೆ ಸಿರಿಯಾಳನೂ ಚಂಗಳೆಯೂ ಇರಲು, ಶಿವನು ಸಿರಿಯಾಳನಿಗೆ — ನೋಡಿದೆಯಾ ಭಕ್ತರ ಮಹಾತ್ಮೆಯನ್ನು! ಮಗನನ್ನರ್ಪಿಸಿದೆನೆಂದು ನೀನು ಹೆಮ್ಮೆಯನ್ನು ತಾಳಿದ್ದೆ. ನಿನ್ನಕಿಂತಲೂ ಹೆಚ್ಚಿನ ಭಕ್ತರು ಜಗತ್ತಿನಲ್ಲಿ ಆಗಿಹೋಗಿರುವದನ್ನು ನೀನು ಪ್ರತ್ಯಕ್ಷ ಭೂಲೋಕದಲ್ಲಿ ಕಂಡೆಯಾ? ಎಂದು ನುಡಿಯಲು ಸಿರಿಯಾಳನು— ಅಹುದಹುದು? ನನ್ನಿಂದ ಅಪರಾಧವಾಗಿದೆ. ಕ್ಷಮಿಸೆಂದು ಬೇಡಿಕೊಳ್ಳಲು ಪರಮಾತ್ಮನು ಅವನನ್ನು ಕರೆದುಕೊಂಡು ಕೈಲಾಸಕ್ಕೆ ಹೋದನು.

---

## ವಿಮರ್ಶೆ

ಹಲಾಯುಧನು ಬೌದ್ಧ ಸಂಸ್ಕೃತಿಯು ಇದ್ದ ಅಫಗಾಣಿಸ್ತಾನದಲ್ಲಿ ವಾಸಿಸುವವನಾದ್ದರಿಂದ ಅವನ ಚರಿತ್ರೆಯಲ್ಲಿ ಇದೇ ಸಂಸ್ಕೃತಿಯ ಹೊಳಹನ್ನು ನಾವು ಕಾಣಬಹುದು. ಬೌದ್ಧ ಧರ್ಮವು ಮನುಷ್ಯನು ಜಗತ್ತಿನಲ್ಲಿ ಹೇಗೆ ನಡೆಯಬೇಕೆಂಬುದಕ್ಕೆ ಮಹತ್ವ ಕೊಟ್ಟು ಅವನು ಅಹಂ ಎಂಬುದನ್ನು ತೊರೆಯಬೇಕು, ಪ್ರಾಣಿಗಳಲ್ಲಿ ದಯಾಭಾವ ವುಳ್ಳವನಾಗಿರಬೇಕು. ಹಿಂಸಾಚಾರಿಯಾಗಿರಬಾರದು, ಎಂದು ಹೇಳುತ್ತಿದೆ. ಹೀಗೆಯೇ ಹಲಾಯುಧನು ನಡೆದದ್ದರಿಂದ ಅವನಿಗೆ ಪರಮಾತ್ಮನೇ ಶರಣು ಬರಬೇಕಾಯಿತು. ಈ ಪ್ರಕಾರ ಅವನ ಚರಿತ್ರೆಯು ಮನುಷ್ಯನು ನೀತಿ ಮತ್ತು ಸದಾಚಾರದಿಂದ ನಡೆಯಬೇಕೆಂಬ ಬೌದ್ಧ ಧರ್ಮದ ತಿರುಳನ್ನು ಹೇಳುತ್ತಿದೆ. ಹೀಗೆ ನಡೆಯುವವನಿಂದ ಇಡೀ ಜಗತ್ತೇ ಉದ್ಧಾರವಾಗುತ್ತದೆ. ಆದ್ದರಿಂದ ಹಲಾಯುಧನು ತನ್ನನ್ನಷ್ಟೇ ಅಲ್ಲ, ತಾನಿದ್ದ ನವ ಗ್ರಾಮಗಳನ್ನೆಲ್ಲವನ್ನು ಕೈಲಾಸಕ್ಕೊಯ್ಯಲು ಸಮರ್ಥನಾದನು.

ಆದರೆ ಓಹಿಲಯ್ಯನು ಕಾಯಕದಿಂದ ಮುಕ್ತಿಯನ್ನು ಹೊಂದಿದವನು. ಆದರೆ ಕಾಯಕವು ಅದನ್ನು ಮಾಡುವವನಿಗೆ ಮಾತ್ರ ಸಂಬಂಧಿಸುತ್ತದೆ. ಆದ್ದರಿಂದ ಓಹಿಲನೊಬ್ಬನೇ ಕೈಲಾಸಕ್ಕೆ ಹೋಗಬೇಕಾಯಿತು. ಆದರೂ ಕಾಯಕದ ಕ್ಷೇತ್ರವು ಸಾಕಷ್ಟು ವಿಸ್ತಾರವಾದದ್ದೂ ಪರಿಣಾಮಕಾರಿಯಾದದ್ದೂ

ಇರುತ್ತದೆಂಬುದು ನಿಃ ಸಂದೇಹವಾದದ್ದು. ಆದರೆ ಉದ್ಭಟನು ಶಿವಶರಣರ ಲಿಂಗಾಚಾರದ ರೀತಿಯನ್ನು ತಿಳಿದವನಾಗಿದ್ದನು. ಇಂಥವನ ಆಚಾರದ ಪ್ರಭಾವವು ಸುತ್ತಲಿನ ಜಗದ ಮೇಲೆಯೂ ಲೋಹಚುಂಬಕದಂತೆ ಪಸರಿಸುತ್ತದೆ. ಆದ್ದರಿಂದ ಉದ್ಭಟನು ತನ್ನನ್ನಷ್ಟೇ ಅಲ್ಲ, ತನ್ನ ಗ್ರಾಮವನ್ನು ಸಹ ಕೈಲಾಸಕ್ಕೆ ಒಯ್ಯಲು ಸಮರ್ಥನಾದನು. ಆದರೆ ಈ ಎಲ್ಲರ ರೀತಿಗಳಿಗಿಂತಲೂ ಸದಾಚಾರ ಸದ್ವರ್ತನೆಯಿಂದ ನಡೆಯುವವನ ರೀತಿಯೇ ಹೆಚ್ಚು ಪ್ರಭಾವವುಳ್ಳದ್ದಾಗಿದೆ. ಇದು ಹಲಾಯುಧನ ಚರಿತ್ರೆಯಿಂದ ತಿಳಿದುಬರುತ್ತದೆ.

ಓಹಿಲಯ್ಯನು ಕಾಯಕವನ್ನು ಆಚರಿಸುವ ದಾಸೋಹಿಯು. ಆದ್ದರಿಂದ ಅವನು ಪ್ರಸಾದಿಸ್ಥಲದವನು. ಅವನದು ಚನ್ನಬಸವಣ್ಣನ ಮಾರ್ಗವು. ಉದ್ಭಟನು ಲಿಂಗಶಕ್ತಿಯನ್ನು ಒಳಕೊಂಡು ಲಿಂಗದೊಳು ಇರುವವನು. ಅವನ ಮಾರ್ಗವು ಸಿದ್ಧರಾಮೇಶ್ವರನದು, ಪ್ರಾಣಲಿಂಗಿಯದು. ಆದರೆ ಹಲಾಯುಧನು ಸದ್ವರ್ತನೆಯುಳ್ಳವನು. ಅವನದು ಭಕ್ತಸ್ಥಲವು. ಅವನು ಬಸವೇಶ್ವರನ ಮಾರ್ಗದವನು. ಆದರೆ ಶಿವಶರಣರಲ್ಲಿ ಬಸವೇಶ್ವರನ ಸ್ಥಾನವು ಬಹಳ ಹೆಚ್ಚಿನದಾಗಿರುತ್ತದೆ. ಅವನು ಎಲ್ಲರನ್ನೂ ಪುನೀತರನ್ನಾಗಿ ಮಾಡಿದನು. ಇದರಿಂದ ಹಲಾಯುಧನು ತಾನು, ತನ್ನ ಗ್ರಾಮ, ಇಷ್ಟೇ ಅಲ್ಲ, ತನ್ನ ಸುತ್ತಲಿನ ಗ್ರಾಮಗಳನ್ನೆಲ್ಲವನ್ನು ಉದ್ಧಾರ ಮಾಡುವಷ್ಟು ಸಾಮರ್ಥ್ಯವನ್ನು ಹೊಂದಿದವನಾದನು. ಅವನದು ಸುಲಭವಾದ ಮಾರ್ಗವೆಂದು ಬಾಹ್ಯದಲ್ಲಿ ತೋರಿದರೂ ಕಠಿಣವಾದುದು.

ಆದರೆ ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಮನುಷ್ಯನು ಭಕ್ತ, ಮಹೇಶ, ಮೊದಲಾದ ಆರೂ ಸ್ಥಲಗಳನ್ನು ತನ್ನಲ್ಲಿ ಜಾಗ್ರತಪಡಿಸಿಕೊಳ್ಳುವದು ಅತ್ಯಾವಶ್ಯಕವಾದುದು.

ಒಂದೇ ಒಂದು ಸ್ಥಲವನ್ನು ಜಾಗ್ರತಗೊಳಿಸುವದರಿಂದ ಪೂರ್ಣವಿಕಾಸನನ್ನು ಮನುಷ್ಯನು ಹೊಂದಲಾರನು. ಷಟ್‌ಸ್ಥಲಗಳೆಲ್ಲವನ್ನು ಜಾಗ್ರತಗೊಳಿಸಿದಲ್ಲಿ ಭಕ್ತನ ಎಲ್ಲ ಕರಣಗಳು, ಎಲ್ಲ ಇಂದ್ರಿಯಗಳು, ಅವನ ಇಡೀ ಚೈತನ್ಯವು ಜಾಗ್ರತೆ ಹೊಂದುವವು. ಶಿವಶರಣರ ಈ ಮಾರ್ಗವನ್ನು ಅನುಸರಿಸಿದಲ್ಲಿ ಮನುಷ್ಯನಿಗೆ ಉಚ್ಚಸ್ಥಿತಿಯು ಪ್ರಾಪ್ತವಾಗುತ್ತದೆ.

# ಮರುಳು ಶಂಕರ ದೇವ.

ಒಬರ್ಗರ ದೇಶದಲ್ಲಿ ಕಣ್ಪುತ್ತೂರು ಎಂಬ ಗ್ರಾಮವಿದೆ. ಅಲ್ಲಿ ನೈಸರ ಎಂಬ ಹೆಸರಿನ ಒಬ್ಬ ವಿರಕ್ತನು ಭಿಕ್ಷುಕವೃತ್ತಿಯವನಾಗಿ ಒಂದು ಆಶ್ರಮವನ್ನು ಕಟ್ಟಿಕೊಂಡು ವಿರಕ್ತಾಶ್ರಮದ ನಡೆಗಳನ್ನು ಪಾಲಿಸುತ್ತಿದ್ದನು. ಮರುಳು ಶಂಕರನೆಂಬವನು ಅವನಿಗೆ ಸಹಾಯಕನಾಗಿ ಅವನ ಸೇವೆ ಮಾಡುತ್ತ ಅವನೊಡನೆಯೇ ವಾಸಿಸುತ್ತಿದ್ದನು. ಹೀಗಿರುವಲ್ಲಿ ಒಂದು ದಿವಸ ಒಂದು ಶ್ವಾನವು ಗಾಯವನ್ನು ಹೊಂದಿ ನೈಸರನ ಆಶ್ರಮದಲ್ಲಿ ಬಂದು ಬಿದ್ದಿತು. ನೈಸರನು ಅದನ್ನು ನೋಡಿ ದಯಾಭರಿತನಾಗಿ ಒಂದು ಪರ್ಣದಲ್ಲಿ ಭಿಕ್ಷಾನ್ನವನ್ನು ಹಾಕಿ ಆ ನಾಯಿಗೆ ಉಣ್ಣಿಸಿದನು ಆದರೆ ಆ ನಾಯಿಯು ಮುಂದೆ ಸ್ವಲ್ಪ ವೇಳೆಯಲ್ಲಿ ಮರಣ ಹೊಂದಿತು. ಅದು ಮರಣ ಹೊಂದುವವರೆಗೂ ನೈಸರನು ದಯಾರ್ದ್ರ ಭಾವವುಳ್ಳವನಾಗಿ ಅದರ ಆರೈಕೆ ಮಾಡಿದನು. ಆ ನಾಯಿಯು ತನ್ನ ಕೃತಜ್ಞತಾಭಾವವನ್ನು ತನ್ನ ದೃಷ್ಟಿಯಿಂದ ವ್ಯಕ್ತ ಮಾಡುತ್ತ ಆಶ್ರಮದಲ್ಲಿಯೇ ಮರಣ ಹೊಂದಿತು.

ಹೀಗೆ ಆ ನಾಯಿಯು ವಿರಕ್ತನಾದ ಆ ಭಿಕ್ಷುಕನು ಕೊಟ್ಟ ಪ್ರಸಾದವನ್ನು ಸೇವಿಸಿ ಮರಣಹೊಂದಿದ್ದರಿಂದ ಭೂಲೋಕದಲ್ಲಿ ರಾಜನಾಗಿ ಹುಟ್ಟುವ ಪ್ರಾರಬ್ಧವು ಅದಕ್ಕೆ ಒದಗಿತು. ಮತ್ತು ಅದು ಅದೇ ಕಣ್ಪುತ್ತೂರಲ್ಲಿ ರಾಜನ ಉಚ್ಚಸ್ಥಾನವನ್ನು ಹೊಂದಿತು.

ಹೀಗೆ ಆ ಶ್ವಾನವು ರಾಜನಾಗಿ ಆಳುತ್ತಿರುವಲ್ಲಿ ಅದಕ್ಕೆ ಪೂರ್ವಜನ್ಮದ ಸ್ಮರಣೆಯು ಉಂಟಾಯಿತು. ಆಗ ಆ ರಾಜನು ತನಗೆ ಈ ಶ್ರೇಷ್ಠ ಸ್ಥಾನವು ದೊರೆತದ್ದು ನೈಸರನ ಮೂಲಕ ಮತ್ತು ಅವನು ತನ್ನ ಮರಣ ಕಾಲದಲ್ಲಿ ಕೊಟ್ಟ ಪ್ರಸಾದದ ಮಹಿಮೆಯಿಂದ ಎಂದು ತಿಳಿದು ಅವನು ನೈಸರನ ಆಶ್ರಮಕ್ಕೆ ಹೋಗಿ ಅವನ ಪಾದಕ್ಕೆರಗಿದನು. ಆಗ "ನೀನಾರು" ಎಂದು ನೈಸರನು ಕೇಳಲಾಗಿ— ನಿಮ್ಮಿಂದ ನಾನು ರಾಜನಾದೆನೆಂದು ತನ್ನ ಪೂರ್ವಾಪರವನ್ನು ತಿಳಿಸಿದನು. ಅದಕ್ಕೆ ಆ ವಿರಕ್ತನು ನಾನು ಕೊಟ್ಟದ್ದನ್ನು ಪ್ರಸಾದಭಾವವುಳ್ಳವನಾಗಿ ನೀನು ಸೇವಿಸಿದ್ದೇನೋ ನಿಜವಿದೆ. ಆದರೆ ನಿನ್ನ ಈ ಪದಕ್ಕೆ ಮುಖ್ಯ ಕಾರಣನಾದವನು ನಾನಾಗಲಾರೆನು. ಆದಾರೆಂದು ಅವನನ್ನೇ ಕೇಳಲು, ಅವನು ನೈಸರನ ಉದ್ದೇ

ಶವನ್ನು ಊಹಿಸಿ, ಈ ಪಟ್ಟಣದ ನೀಲಕಂಠೇಶ್ವರನೇ ನನ್ನ ಈ ಪದಕ್ಕೆ ಕಾರಣನೆಂದು ಹೇಳಿದನು. ನೈಸರನು ಇದನ್ನು ಕೇಳಿ ಇದು ಸಟಿ ಎಂದು ನುಡಿದು ಆ ಉಭಯುತರು ಆ ಲಿಂಗವದ್ದಲ್ಲಿಗೆ ಹೋಗಿ ಕೇಳಲು ಆ ಲಿಂಗ ಮೂರ್ತಿಯು ನೈಸರನಿಗೆ- ಈ ಶ್ವಾನನಿಗೆ ಈ ಪದವು ಉಂಟಾದದ್ದು ನಿನ್ನ ಮೂಲಕ, ನನ್ನಿಂದಲ್ಲ, ಎಂದು ನುಡಿಯಿತು

ಅದನ್ನು ನೈಸರನು ಕೇಳಿ ಕುಪಿತನಾಗಿ ಅವನು— ಇದು ನನ್ನಿಂದಲ್ಲ. ಪ್ರಸಾದಿಗೆ ನಿತ್ಯಪದವನ್ನು ಕೊಡುವಂತಹದು ಆ ಪ್ರಸಾದವೇ ಸರಿ ಎಂದು ಅನ್ನುತ್ತ ಅವನು ತನ್ನ ಕಯ್ಯಲ್ಲಿದ್ದ ದಂಡದಿಂದ ಆ ಲಿಂಗವನ್ನು ತಿವಿದನು. ಇದಕ್ಕೆ ಆ ಲಿಂಗವು ಎಷ್ಟು ಕೋಪಿಸದೆ ನಿಜವಾಗಿ ಇವು ನಿನ್ನ ಭಾಂಡ ಪ್ರಸಾದದ ಮಹಿಮೆಯು. ಅವರಿಂದ ಪ್ರಸಾದ ಸ್ವೀಕರಿಸುವವನೂ ಪ್ರಸಾದ ಕೊಡುವವನೂ ಉಭಯತರು ನಿಜದಲ್ಲಿ ಮುಕ್ತರು, ಇದು ಜಗತ್ತಿನ ಜನರಿಗೆಲ್ಲ ತಿಳಿಯಲೆಂದು ಈ ಪವಾಡವು ಉಂಟಾಗಿರುತ್ತದೆ. ಇದರ ನಿದರ್ಶನವು ಜಗತ್ತಿಗೆ ಆಗಬೇಕೆಂದು ಪ್ರಸಾದವನ್ನು ಸ್ವೀಕರಿಸಿದ ರಾಜನೂ ಪ್ರಸಾದಕ್ಕೆ ಕಾರಣನಾದ ನೀನೂ ಪ್ರಸಾದದಲ್ಲಿಯೇ ನಿಜಮುಕ್ತರು. ಪ್ರಸಾದವು ಘನತರವಾದದ್ದು. ಎಂಬ ಶಬ್ದಗಳುಂಟಾದವು

ನೇಸರನಲ್ಲಿದ್ದ ಮರುಳು ಶಂಕರ ದೇವನು ಶಿವ ಪ್ರಸಾದದ ಈ ಮಹಿಮೆಯನ್ನು ಕಂಡು ಅವನೂ ಪ್ರಸಾದದಲ್ಲಿ ಭಕ್ತಿಯುಳ್ಳವನಾಗಿ ಪ್ರಸಾದಿಯಾಚರಣೆಯಲ್ಲಿರಹತ್ತಿದನು. ಅವನು ಶಿವಾರ್ಪಿತವಿಲ್ಲದೆ ಏನನ್ನೂ ಸೇವಿಸನು, ಅವುದನ್ನೂ ಭುಂಜಿಸನು. ಆಗ ಅವನು ಕಲ್ಯಾಣ ಪಟ್ಟಣದಲ್ಲಿ ಬಸವಾದಿ ಪ್ರಮುಥರು ಇದ್ದಾರೆ, ಅವರು ಪ್ರಸಾದದ ಆಚರಣೆಯನ್ನು ಸಾಧಿಸಿದ್ದಾರೆ, ಎಂಬುದನ್ನು ತಿಳಿದವನಾಗಿ ಅವನು ಕಲ್ಯಾಣ ಪಟ್ಟಣಕ್ಕೆ ಬಂದು ಬಸವೇಶ್ವರನ ಅರಮನೆಯಲ್ಲಿರಹತ್ತಿದನು.

ಆದರೆ ಅವನು ಕಲ್ಯಾಣದಲ್ಲಿ ಬಸವೇಶ್ವರನಲ್ಲಿರುವಾಗ, ಇವನಾರೆಂಬುದನ್ನು ಯಾರೂ ಅರಿಯರು. ಅವನು ಗೌಪ್ಯವಾಗಿ ಅಲ್ಲಿ ಕಾಲ ಕಳೆಯುತ್ತಿದ್ದನು. ಅವನು ಹನ್ನೆರಡು ವರ್ಷ ಇದರಂತೆ ಅಲ್ಲಿಯೇ ಇದ್ದನು. ಅವನು ಶಿವಶರಣರ ಪ್ರಸಾದದ ರೀತಿಗಳನ್ನು ತಿಳಿಯುವವನಾಗಿ ಪ್ರಸಾದದ ಮೂಲಕ ತನ್ನ ಅಂಗೇಂದ್ರಿಯಗಳನ್ನು ಲಿಂಗೇಂದ್ರಿಯಗಳನ್ನಾಗಿ ಮಾಡಿ ಅರ್ಪಿತ ಭಾವದಿಂದ ಆಚರಿಸುತ್ತ ಬಂದನು

ಹೀಗೆ ಅವನು ಅಲ್ಲಿ ವಾಸಿಸುತ್ತಿರುವಾಗ್ಗೆ ಅಲ್ಲಮ ಪ್ರಭುವು ಒಂದು ದಿವಸ ಬಹು ಸಡಗರದಿಂದ ಬಸವರಾಜದೇವರ ಭವನಕ್ಕೆ ಆಗಮಿಸಿದನು. ಅವರ ಅಂಗಣದಲ್ಲಿದ್ದ ಮರುಳ ಶಂಕರ ದೇವನು ಮುಂದೆ ಬಂದು ಪ್ರಭುದೇವರಿಗೆ ನಮಸ್ಕರಿಸಲು ಪ್ರಭುದೇವರು ಅವನನ್ನು ಕಂಡು— ಇಂದು ನಾನೊಂದು ಆಶ್ಚರ್ಯವನ್ನು ಕಂಡೆನೆಂದು ಬಸವರಾಜನಿಗೆ ತಿಳಿಸಿದನು. ಅದೇನೆಂದು ಅವನು ಕೇಳಲು ಮರುಳು ಶಂಕರನನ್ನು ತೋರಿಸಿ— ಈತನು ಒಕ್ಕು ಮಿಕ್ಕ ಪ್ರಸಾದವನ್ನು ಸೇವಿಸುತ್ತ ನಿನ್ನಲ್ಲಿ ಹನ್ನೆರಡು ವರುಷ ತನ್ನ ನಿಜ ಸ್ವರೂಪವನ್ನು ಅರಿಯಗೊಡದೆ ವಾಸಿಸಿದ್ದಾನೆ. ಇದು ಪ್ರಸಾದದ ರೀತಿಯು. ಆದರೆ ಇದನ್ನು ಆರೂ ಅರಿಯರು. ಹೂಳಿದ ನಿಧಿ ನಿಧಾನವು ಬೀದಿಯಲ್ಲಿ ಬಿದ್ದ ಮಾಣಿಕ್ಯವು ಆರಿಗೂ ಕಾಣಿಸುವದಿಲ್ಲ ಪಾಪಿಗಳ ಕಣ್ಣಿಗೆ ಪರುಷ ಕಲ್ಲಾಗಿ ಕಾಣುತ್ತದೆ. ಮರುಳು ಶಂಕರನ ನಿಲುವು ಇಂತಹದಿದೆ ಎಂದು ನುಡಿದನು.

ಅದಕ್ಕೆ ಮರುಳು ಶಂಕರನು ಉತ್ತರವಾಗಿ— ಬಸವೇಶ್ವರನ ದಯದಿಂದ ನಾನಿಂದು ಪ್ರಭುದೇವರ ಶ್ರೀಮೂರ್ತಿಯನ್ನು ಕಂಡೆನು. ನನ್ನ ಸಂಸಾರದ ಬಂಧನವೂ ಇಂದು ಹರಿಯಿತು ನಿತ್ಯ ನಿರಂಜನ ಪರಂಜ್ಯೋತಿಯ ಪ್ರಕಾಶವು ನನ್ನಲ್ಲಿ ಬೆಳಗಿತು ಎಂದು ನುಡಿದನು.

ಆಮೇಲೆ ಎಲ್ಲ ಶಿವಶರಣರು ಶಿವಾನುಭವ ಮಂಟಪಕ್ಕೆ ಆಗಮಿಸಿ ಮರುಳು ಶಂಕರ ದೇವನು ಆಚರಿಸಿದ ಪ್ರಸಾದದ ರೀತಿಯನ್ನು ತಿಳಿದವರಾಗಿ ಅವನನ್ನು ಹೊಗಳುವವರಾದರು.

ಆ ಮೇಲೆ ಮರುಳು ಶಂಕರ ದೇವನು ನನ್ನ ಜೀವಿತವು ಇಂದು ಸಫಲವಾಯಿತು ನಾನು ಸಂಸಾರವೆಂಬ ಸಾಗರವನ್ನು ಇಂದು ದಾಟಿದೆನು, ಎಂದು ನುಡಿಯುತ್ತ ತನ್ನ ಲಿಂಗದಲ್ಲಿಯೇ ಐಕ್ಯನಾದನು.

ಈ ಪ್ರಕಾರ ಮರುಳು ಶಂಕರ ದೇವನು ಶಿವಾನುಭವ ಮಂಟಪದಲಿ ಗೋಪ್ಯವಾಗಿ ಕಾಲ ಕಳೆಯುತ್ತ ಪ್ರಸಾದಿಯಾಗಿ ಆಚರಿಸುತ್ತ ಸಾಮರಸ್ಯತ್ವವನ್ನು ಹೊಂದಿದನು

ಪ್ರಸಾದಿಯು ಆತ್ಮಾರ್ಪಣ ಭಾವವುಳ್ಳವನಾಗಿ ಆಚರಿಸುತ್ತಾನೆ. ಆದ್ದರಿಂದ ಅವನು ಜನರ ಸ್ತುತಿ ನಿಂದೆಗಳನ್ನು ಅಲಕ್ಷಿಸಿ ಅವನು ತನ್ನ ಕಾರ್ಯದಲ್ಲಿ ಮಗ್ನನಾಗಿರುತ್ತಾನೆ. ಅವನು ಜನರಲ್ಲಿದ್ದರೂ ಒಂದು

ಬಗೆಯು ಏಕಾಂತ ವಾಸವು, ಎಂದು ಹೇಳಬಹುದು. ಆದ್ದರಿಂದ ಅವನು ನಿರ್ಜನ ಪ್ರದೇಶದಲ್ಲಿರಬೇಕೆಂದು ಅರಣ್ಯ ವಾಸವನ್ನು ಇಚ್ಛಿಸುವದಿಲ್ಲ. ಅವನು ಅರ್ಪಿತ ಭಾವವುಳ್ಳವನಾಗಿ ತಾನಿದ್ದ ಪ್ರಪಂಚದಲ್ಲಿಯೇ ಇರುತ್ತಾನೆ. ಈ ತೆರದ ಶಿವಾನುಭವದ ಆಚರಣೆಯಂತೆ ನೈಸರ ವಿರಕ್ತನು ಆಚರಿಸುವವನಾಗಿದ್ದನು. ರಾಜನಾದರೂ ಅವನಂತೆಯೇ ಆಚರಿಸಿದನು. ಹೀಗೆ ಉಭಯಂತರು ನಿಜಮೋಕ್ಷವನ್ನು ಹೊಂದಿದರು. ಜಪ ತಪ ಹೋಮ ನಿಯಮ ಯಜ್ಞ ಯಾಗಾದಿಗಳೂ ಅಷ್ಟಾಂಗ ಯೋಗ ಸಾಧನೆಗಳೂ, ನಿತ್ಯ ನೈಮಿತ್ತಿಕ ಕರ್ಮಗಳೂ, ದೇವಾಲಯಗಳಲ್ಲಿ ನಡಸಬೇಕಾದ ಪೂಜಾದಿ ಕಾರ್ಯಗಳೂ ಹಿಂದೂ ಧರ್ಮ ಶಾಸ್ತ್ರಗಳಲ್ಲಿ ಅಪರಿಮಿತವಾಗಿ ಹೇಳಲ್ಪಟ್ಟಿವೆ. ಆದರೆ ಶಿವಶರಣರು ಅವುಗಳನ್ನು ಅನುಸರಿಸದೆ ಗುರು ಲಿಂಗ ಜಂಗಮದ ರೀತಿಗಳನ್ನು ತಿಳಿದುಕೊಂಡು ತಮ್ಮಲ್ಲಿಯೇ ಗುರು ಲಿಂಗ ಜಂಗಮವನ್ನು ಒಳಕೊಂಡು ಪ್ರಸಾದದ ಅನುಭವದಲ್ಲಿ ಪ್ರತಿನಿಮಿಷ ಇರುತ್ತಾರೆ. ಇದು ಶ್ರೇಷ್ಠ ನಡೆಯು ಎಂದು ಅವರ ಉಕ್ತಿಗಳಿವೆ. ಹಾಗೆಯೇ ಮರುಳು ಶಂಕರದೇವನ ಉಕ್ತಿಗಳೂ ಇವೆ.

ಮರುಳು ಶಂಕರದೇವನು ವಚನಕಾರನಿದ್ದಾನೆ. ಅವನ ಮುದ್ರಿಕೆಯು "ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತ ಚನ್ನ ಮಲ್ಲಿಕಾರ್ಜುನಾ" ಎಂದಿದೆ.

ಅನೇಕರು ಮರುಳು ಶಂಕರದೇವನು ಬಸವೇಶ್ವರನ ಅರಮನೆಯಲ್ಲಿ ಜಂಗಮರ ಉಚ್ಛಿಷ್ಟವನ್ನು ತಿನ್ನುತ್ತ ಅಜ್ಞಾತವಾಸಮಾಡಿದನೆಂದು ತಿಳಿದಿದ್ದಾರೆ. ಆದರೆ ಶಿವಶರಣರು ತಮ್ಮ ಆಹಾರವನ್ನು ಲಿಂಗಕ್ಕೆ ಅರ್ಪಿಸದೆ ಊಟ ಮಾಡಕೂಡದು. ಅದನ್ನು ಅರ್ಪಿಸಿದ ಬಳಿಕ ಅದನ್ನು ಹೊರಗೆ ಎಷ್ಟುಮಾತ್ರವೂ ಚೆಲ್ಲಕೂಡದು. ಆದ್ದರಿಂದ ಅವರು ಉಚ್ಛಿಷ್ಟವನ್ನು ಉಂಟು ಮಾಡಲಾರರು. ಇದು ಅವರ ಕಟ್ಟಾಚರಣೆಯು ಇದೆ. ಆದ್ದರಿಂದ ಮರುಳು ಶಂಕರನು ಜಂಗಮರು ಉಂಡು ಚೆಲ್ಲಿಕೊಟ್ಟ ಉಚ್ಛಿಷ್ಟವನ್ನು ಕೆಲವೊಂದು ಕುಂಡದಲ್ಲಿ ಒಗೆದದ್ದನ್ನು ಸೇವಿಸುತ್ತ ಅದರಲ್ಲಿಯೇ ಮುಳುಗಾಡಿ ಹೋಗಿದ್ದನೆಂದು ತಿಳಿಯುವದು ತಪ್ಪಾದದ್ದು. ಇದು ಶಿವಶರಣರ ಆಚರಣೆಯಲ್ಲ.

ಪ್ರಸಾದಕ್ಕೆ ಷಟ್‌ಸ್ಥಲ ಶಾಸ್ತ್ರದಲ್ಲಿ ಬಹು ಹೆಚ್ಚಿನ ತರದ ಅರ್ಥ ಇದೆ. ಮರುಳು ಶಂಕರನು ತನ್ನ ವಚನಗಳಲ್ಲಿ ಇದರ ಉಚ್ಚ ವಿಚಾರಗಳನ್ನೇ ನಿರೂಪಿಸಿದ್ದಾನೆ. ನಮ್ಮಲ್ಲಿ ಅವನ ಇಪ್ಪತ್ತು ವಚನಗಳಿವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಉದಾಹರಣೆಗಾಗಿ ಕೆಳಗೆ ಕೊಟ್ಟಿದ್ದೇವೆ. ಅವು ಯಾವವೆಂದರೆ—

## ವಚನಗಳು

(೧) ಇಷ್ಟಲಿಂಗಕ್ಕೆ ಅಂಗವನರ್ಪಿತವ ಮಾಡಬೇಕು. ಪ್ರಾಣಲಿಂಗಕ್ಕೆ ಮನ ಸಮರ್ಪಿಸಬೇಕು. ಭಾವಲಿಂಗಕ್ಕೆ ತೃಪ್ತಿಯನರ್ಪಿತವ ಮಾಡಬೇಕು. ಈ ಮರ್ಮವನರಿದು ಮಾಡಬಲ್ಲೊಡೆ ಪ್ರಸಾದಿಯು. ಅದೆಂತೆಂದೊಡೆ-" ಇಷ್ಟಲಿಂಗಾರ್ಪಿತಂ ಅಂಗಂ ಪ್ರಾಣಲಿಂಗಾರ್ಪಿತಂ ಮನಃ । ಭಾವಲಿಂಗಾರ್ಪಿತಂ ತೃಪ್ತಿ ಇತಿ ಭೇದಂ ವರಾನನೇ || ಎಂದುದಾಗಿ ಲಿಂಗಕ್ಕೆಯೂ ತನಗೆಯೂ ಎಡೆದೆರಹಿಲ್ಲದೆ ಲಿಂಗ ಸಹಿತವಾಗಿಯೇ ಕೇಳುವ, ಲಿಂಗ ಸಹಿತವಾಗಿಯೇ ಘ್ರಾಣಿಸುವ, ಲಿಂಗ ಸಹಿತವಾಗಿಯೇ ರುಚಿಸುವ, ಲಿಂಗ ಸಹಿತವಾಗಿಯೇ ನೋಡುವ, ಲಿಂಗ ಸಹಿತವಾಗಿಯೇ ತೊಳಗುವ ಇಂತಪ್ಪ ಮಹಾ ಮಹಿಮ ಸದ್ಭಕ್ತನ ಅಂಗವೆಲ್ಲವೂ ಲಿಂಗ, ಸಂಗವೆಲ್ಲವೂ ಲಿಂಗ, ಅಂಗ ಸಂಗವೆಲ್ಲವೂ ಲಿಂಗಸಂಗವಾದ ಕಾರಣ ಅಂಗ ಕ್ರಿಯೆಗಳೆಲ್ಲವೂ ಲಿಂಗ ಕ್ರಿಯೆಗಳಾದ ಕಾರಣ ಅಂಗ ಭೋಗವೆಲ್ಲವೂ ಲಿಂಗ ಭೋಗವಾದ ಕಾರಣ ಇಂತಪ್ಪ ಮಹಾಮಹಿಮ ಸದ್ಭಕ್ತನ ಶ್ರೀಚರಣಕ್ಕೆ ಎನ್ನ ಶಿರವನರಿದು ಪೂಜಿಸುವೆ ಕಾಣಾ ಶುದ್ಧ ಸಿದ್ಧ ಪ್ರಸಿದ್ಧ ಪ್ರಭುವೇ ಶಾಂತ ಚನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಸದ್ಭಕ್ತನ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ.

(೨) ಗುರುಲಿಂಗ ಜಂಗಮಕ್ಕೆ ದಾಸೋಹವ ಮಾಡುವ ಸದ್ಭಕ್ತನ ಪರ್ಯಾಯವ ನೋಡಿರಯ್ಯಾ. ಶ್ರೀ ಗುರು ಶಿಷ್ಯಂಗೆ ಅನುಗ್ರಹವ ಮಾಡಲೊಡನೆ ಆ ಶಿಷ್ಯನ ಆ ಶ್ರೀ ಗುರುವ ಕೊಂದು ನುಂಗಿದ ಪರಿಯ ನೋಡಿರಯ್ಯಾ ಲಿಂಗ ಬಂದು ಪೂಜೆಯ ಮಾಡಿಸಿಕೊಂಡೆನೆಂದಡೆ ಆ ಸದ್ಭಕ್ತನು ಆ ಲಿಂಗವ ಕೊಂದು ನುಂಗಿದ ಪರಿಯ ನೋಡಿರಯ್ಯಾ. ಜಂಗಮವು ಬಂದು ಪೂಜೆಯ ಕೈಕೊಂಡೆನೆಂದಡೆ ಆ ಸದ್ಭಕ್ತನು ಜಂಗಮವ ಕೊಂದು

ನುಂಗಿದ ಪರಿಯ ನೋಡಯ್ಯಾ, ಇಂತೀ ಮೂವರ ಕೊಂದು ನುಂಗಿದವನೆಂತು ಭಕ್ತನೆಂಬೆನಯ್ಯಾ? ಆತನನಾಚಾರಿ. ಆತ ವ್ರತಗೇಡಿ, ಆತ ಕ್ರಿಯಾರಹಿತನು. ಇಂತಾತನ ನುಡಿಯ ಕೇಳಲಾಗದು, ಹೇಳಲಾಗದು. ಆತ ಮರ್ತ್ಯಲೋಕಕ್ಕೆ ಸಲ್ಲ ಆತ ದೇವಲೋಕಕ್ಕೆಯೂ ಸಲ್ಲ. ಆತನಾವ ಲೋಕಕ್ಕೆಯೂ ಸಲ್ಲ. ಇಂತೀ ನೀತಿ ಬಾಹಿರನನು ಭಕ್ತನೆಂದೆಂತೆಂಬೆನಯ್ಯಾ? ಅಂತಪ್ಪ ಸದ್ಭಕ್ತನು ನಿಂದ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ? ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಸನ್ನ ಪ್ರಭುವೇ ಶಾಂತ ಮಲ್ಲಿಕಾರ್ಜುನಯ್ಯಾ, ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ.

(೩) ಮಹಾ ಶ್ರೀಗುರುವೇ ತಂದೆ, ಮಹಾ ಜಂಗಮವೇ ತಾಯಿ. ಇವರಿಬ್ಬರ ಸಂಗ ಸಂಯೋಗದಿಂದ ಆನು ಹುಟ್ಟಿದೆ ನೋಡಯ್ಯ ಆನು ಹುಟ್ಟಿದ ಬಳಿಕ ಆ ತಂದೆ ತಾಯಿಗಳಿಬ್ಬರು ಲಿಂಗವೆಂಬ ಹೆಣ್ಣ ತಂದು ಎನ್ನ ಕೊರಳಲ್ಲಿ ಕಟ್ಟಿ ಮದುವೆಯ ಮಾಡಿದರಯ್ಯ ಆ ಹೆಣ್ಣಿನ ಕೈವಿಡಿದು ಆನು ಬದಕಿದೆನು. ಆ ಹೆಣ್ಣಿನ ಸಂಗ ಸಂಯೋಗದಿಂದ ಮಗನೆಂಬ ಮಹಾ ಲಿಂಗ ಹುಟ್ಟಿದನಯ್ಯಾ. ಆ ಮಗ ಹುಟ್ಟಿದ ಮುನ್ನವೇ ಎನಗೆ ಮರಣವಾಯಿತ್ತು. ಲಿಂಗವೆಂಬ ಹೆಂಡತಿ ಮುಂಡೆಯಾದಳು. ತಂದೆ ತಾಯಿಗಳಿಬ್ಬರೂ ಎನ್ನೊಂದಾಗಿ ಅಡಗಿ ಹೋದರು. ಇನ್ನು ಮುಂದಿನ ಪರಿಯೆಂತುಟಲ್ಲವಾಗಿ ಆನು ಬದುಕಿದೆನು ಕಾಣಾ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತ ಚನ್ನಮಲ್ಲಿಕಾರ್ಜುನ ದೇವಯ್ಯ ನಿಮ್ಮ ಶರಣರ ಕರುಣದಿಂದ ಎನ್ನ ಕರ್ಮ ನಿರ್ಮಳವಾಯಿತ್ತಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ

(೪) ಶ್ರೋತ್ರದಲ್ಲಿ ಕೇಳುವ ಸುವಾಕ್ಯದ ಪರಿಣಾಮವನು ಮನದ ಅವಧಾನದಲ್ಲಿ ಲಿಂಗಕ್ಕೆ ಸಮರ್ಪಿಸಬೇಕು ನೇತ್ರದಲ್ಲಿ ಕಂಡ ರೂಪನು ಮನದ ಅವಧಾನದಲ್ಲಿ ಲಿಂಗಕ್ಕೆ ಸಮರ್ಪಿಸಬೇಕು. ನಾಶಿಕದಲ್ಲಿ ಬಂದ ಸುಗಂಧದ ಪರಿಣಾಮವನು ಮನದ ಅವಧಾನದಲ್ಲಿ ಲಿಂಗಕ್ಕೆ ಅರ್ಪಿಸಬೇಕು. ಜಿಹ್ವೆಯಲ್ಲಿ ಬಂದ ಸುರುಚಿಯನು ಮನದ ಅವಧಾನದಲಿ ಲಿಂಗಕ್ಕೆ ಅರ್ಪಿಸಬೇಕು. ರತಿ ಸಂಗದಲ್ಲಿ ಬಂದ ಸುಖದ ಪರಿಣಾಮವನು ಮನದ ಅವಧಾನದಲ್ಲಿ ಲಿಂಗಕ್ಕೆ ಅರ್ಪಿಸಬೇಕು. ಇದೇ ಅರ್ಪಿತ ಮುಖ ಕೇಳಿರಣ್ಣಾ. ಅದೆಂತೆಂದಡೆ ಶ್ಲೋ॥ ಸಂಯೋಗೇ ಚ ವಿಯೋ

ಗೇಹ ಕ್ಷಣಾಬಿಂದು ಸುಖಾರ್ಪಿತಂ। ಯಃ ಕುರ್ಯಾದಿಷ್ಟಲಿಂಗೇತು ಸಾವಧಾನ ನಿರಂತರಂ॥ ಎಂದುದಾಗಿ ನಮ್ಮ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ, ಶಾಂತ ಚನ್ನಮಲ್ಲಿಕಾರ್ಜುನನಲ್ಲಿಯೂ ಈಯರ್ಪಿತ ಮುಖ ವರಿದು ಅರ್ಪಿಸ ಬಲ್ಲಡೆ ತೃಪ್ತಿಯನ್ನೈದುವನು

(೫) ಶಿಷ್ಯನೆಂಬ ಧರೆಯ ಮೇಲೆ ಶ್ರೀಗುರುವೆಂಬ ಬೀಜವ ಬಿತ್ತಿ, ಅರಿವೆಂಬ ಗೊಬ್ಬರವನಿಕ್ಕಿ, ಜ್ಞಾನವೆಂಬ ಉದಕವ ನೆರೆಯಲಿಕೆ, ಲಿಂಗವೆಂಬ ಆಕಾರ ಮೊಳೆದೋರಿತ್ತು ಕಾಣಿರೇ. ಜಂಗಮವೆಂಬ ಸಸಿ ಬಲಿದು ವೃಕ್ಷ ಪಲ್ಲವಿಸಿತ್ತು. ಸುಜ್ಞಾನವೆಂಬ ನನೆ ಬಿರಿಮುಗುಳಾಯಿತ್ತು. ಮಹಾಜ್ಞಾನವೆಂಬ ಪುಷ್ಪ ವಿಕಸಿತವಾಯಿತ್ತು. ಖಂಡಿತವೆಂಬ ಮಂಗಳವಾಯಿತ್ತು. ಅಖಂಡಿತವೆಂಬ ಕಾಯಿ ಬಲಿಯಿತ್ತು. ಪರಮ ಜ್ಞಾನವೆಂಬ ಹಣ್ಣಾಯಿತ್ತು ಆ ಹಣ್ಣು ಬಲಿದು ತೊಟ್ಟು ಬಿಟ್ಟು ಬಟ್ಟಬಯಲಲ್ಲಿ ಬಿದ್ದಿತ್ತು. ಆ ಹಣ್ಣ ಕಂಡು ನಾನು ಇದೆಲ್ಲಿಯದೆಂದು ನಾನು ವಿಚಾರ ಮಾಡಲ್ಕೆ ಬಿತ್ತಿದವರಾರೆಂದು ಹೇಳುವರಿಲ್ಲ. ಬಿತ್ತಿದವನ ಸೊಮ್ಮು ನಾವು ಕೇಳಬಾರದು ಆ ಹಣ್ಣ ಕೊಂಡು ನಾನು ಬಿತ್ತಿದಾತನನರಿಸಿಕೊಂಡು ಹೋಗಲ್ಕೆ ನಾನೆತ್ತ ಹೋದೆನೆಂದರಿಯೆನಯ್ಯ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತ ಚನ್ನಮಲ್ಲಿಕಾರ್ಜುನನ ದೇವಯ್ಯ ನಿಮ್ಮ ಬಿತ್ತಿದಾತನ ಪರಿಯ ನೀವೇ ಬಲ್ಲಿರಿ ನಾನೆತ್ತ ಬಲ್ಲೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ

(೬) ಇಷ್ಟಲಿಂಗಾರ್ಪಿತಂ ಪ್ರಾಣಂ ತೃಪ್ತಿ ಲಿಂಗಾರ್ಪಿತಂ ಭವೇತ್। ಲಿಂಗಾಂಕಿತ ಲಿಂಗಾಂಗಿನೆ ತ್ರಿವಿಧಲಿಂಗಮುಚ್ಯತೆ॥ ಇಂತೆಂದುದಾಗಿ ಲಿಂಗಕ್ಕು ತನಗೂ ಎಡೆತೆರಹಿಲ್ಲದಿಪ್ಪ ಲಿಂಗಸಹಿತವಾಗಿ ಕೇಳುವ, ಲಿಂಗಸಹಿತವಾಗಿಯೇ ರುಚಿಸುವ, ಲಿಂಗಸಹಿತವಾಗಿಯೇ ಅಳಲುವ, ಲಿಂಗಸಹಿತವಾಗಿಯೇ ಬಳಲುವ, ಇಂತಪ್ಪ ಮಹಾಮಹಿಮ ಲಿಂಗವಂತನ ಅಂಗಕ್ರಿಗಳೆಲ್ಲವು ಲಿಂಗಕ್ರಿಗಳಾದವು ಅಂಗಸಂಗವೆಲ್ಲ ಲಿಂಗಸಂಗಮವವು. ಅಂಗಭೋಗವೆಲ್ಲವು ಲಿಂಗಭೋಗವು. ಇಂತಪ್ಪ ಮಹಾಮಹಿಮ ಲಿಂಗವಂತನ ಚರಣಕ್ಕೆ ಎನ್ನ ಶಿರವರಿದು ಪೂಜಿಸುವೆನು ಕಾಣಾ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಚನ್ನಮಲ್ಲಿಕಾರ್ಜುನದೇವಯ್ಯ ನಿಮ್ಮ ಲಿಂಗವಂತನ ಪರಿಯ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ.

ಮರುಳ ಶಂಕರ ದೇವನು ತನ್ನ ಯಾವ ವಚನದಲ್ಲಿಯೂ ಉಚ್ಛಿಷ್ಟಕ್ಕೆ ಪ್ರಸಾದವೆಂದು ಹೇಳಿಲ್ಲ. ಮನುಷ್ಯನು ತನ್ನ ಇಂದ್ರಿಯಗಳ ಸುಖವನ್ನು ಹೇಗೆ ಲಿಂಗಕ್ಕರ್ಪಿಸಿ ಪ್ರಸಾದರೂಪವಾಗಿ ಅದನ್ನು ಗ್ರಹಿಸಬೇಕೆಂಬುದನ್ನು ಷಟ್‌ಸ್ಥಲ ಶಾಸ್ತ್ರಕ್ಕನುಸರಿಸಿ ಮೇಲೆ ನಾವು ಉದಹರಿಸಿದ ವಚನಗಳಲ್ಲಿ ಅತ್ಯಂತ ವಿಶದವಾಗಿ ಸುಂದರವಾಗಿ ನಿರೂಪಿಸಿದ್ದಾನೆ. ಗುರುಲಿಂಗ ಜಂಗಮಗಳು ತನ್ನಲ್ಲಿಯೇ ಇದ್ದು ಅವುಗಳ ಸಹಾಯದಿಂದಲೇ ಅವನು ತನ್ನನ್ನು ಹೇಗೆ ಉದ್ಧಾರ ಮಾಡಬೇಕೆಂಬುದನ್ನು ಇವುಗಳಲ್ಲಿ ಹೇಳಿದ್ದಾನೆ. ಈ ವಚನಗಳಲ್ಲಿ ಶಿವಾನುಭವ ಶಾಸ್ತ್ರದ ಉಚ್ಚ ತತ್ವಗಳು ನಿರೂಪಿತವಾಗಿರುತ್ತವೆ. ಆದರೆ ಉಚ್ಛಿಷ್ಟದಲ್ಲಿ ಮರುಳು ಶಂಕರನು ೧೨ ವರ್ಷ ಇದ್ದನೆಂಬ ವಿಚಾರಗಳು ಅವನ ಯಾವ ವಚನದಲ್ಲಿಯೂ ಇಲ್ಲ.

ಮರುಳು ಶಂಕರ ದೇವನು ಬೌದ್ಧ ಧರ್ಮದ ಸಂಸ್ಕೃತಿಯು ಇದ್ದ ಅಫಗಾಣಿಸ್ತಾನದವನಿದ್ದಾನೆ. ಅಹಿಂಸೆಯನ್ನು ಬೋಧಿಸುವ ಆ ಧರ್ಮದ ಛಾಯೆಯನ್ನು ನಾವು ಅವನ ಚರಿತ್ರೆಯ ಆರಂಭದ ಭಾಗದಲ್ಲಿ ಅಂದರೆ ನೈಸರ ವಿರಕ್ತನ ಆಚರಣೆಯಲ್ಲಿ ಕಾಣುತ್ತೇವೆ. ಹಿಂಸೆಯನ್ನು ಹೊಂದಿದ ಒಂದು ನಾಯಿಯ ಬಗ್ಗೆ ಅವನು ದಯೆಯನ್ನು ತೋರಿ ಅದಕ್ಕೆ ಪ್ರಸಾದವನ್ನಿಕ್ಕಲು ಅದು ಸತ್ತಬಳಿಕ ರಾಜ ಪದವಿಯನ್ನು ಹೊಂದಿತು. ಪ್ರಸಾದದ ಮಹಿಮೆಯ ಮೂಲಕ ಆ ರಾಜನೂ ಆ ವಿರಕ್ತಾಶ್ರಮಿಯೂ ಮುಕ್ತಿಯನ್ನು ಹೊಂದಿದರು. ಇದನ್ನು ಮರುಳು ಶಂಕರದೇವನು ಕಂಡು ಪ್ರಸಾದದ ರೀತಿಯನ್ನು ತಿಳಿಯಲು ಕಲ್ಯಾಣಕ್ಕೆ ಬರುವವನಾದನೆಂದು ಅವನ ಈ ಚರಿತ್ರೆಯಲ್ಲಿ ಹೇಳಿದೆ.

## ಇತರ ಹಿಂದುಸ್ತಾನದಲ್ಲಿಯ ಶಿವಶರಣರು

ಶಿವಶರಣರು ಇತರ ಹಿಂದುಸ್ತಾನ ಅಂದರೆ ವಿದರ್ಭ (ಮಧ್ಯದೇಶ) ಹಿಮಾಚಲ ಪ್ರದೇಶ, ಕಾಶ್ಮೀರ, ಮಗಧ (ಬಿಹಾರದ ದಕ್ಷಿಣಭಾಗ) ಕಾಶೀ ಕ್ಷೇತ್ರ, ಪಾಂಡ್ಯನಾಡು (ತಮಿಳುದೇಶ) ಸಿಂಧಪ್ರಾಂತ ಮುಂತಾದ ಕಡೆಗೂ ತಲೆದೋರಿದ್ದಾರೆ. ಅವರಲ್ಲಿ ಆಯಾ ಪ್ರಾಂತಗಳಲ್ಲಿ ಮುಖ್ಯರಾದವರ ಚರಿತ್ರೆಯನ್ನು ಮಾತ್ರ ನಾವು ಇಲ್ಲಿ ವಿವರಿಸುತ್ತೇವೆ.

---

## ಧನಸೇನಸೆಟ್ಟಿ

ಮಗಧ:— ಮಗಧ ದೇಶದಲ್ಲಿ ವಿಜಯಭೂಪಾಲನೆಂಬ ರಾಜನು ಆಳುತ್ತಿದ್ದ. ಜೈಮಿನಿಪುರವು ಆವನ ರಾಜಧಾನಿಯಾಗಿತ್ತು. ಅಲ್ಲಿ ಧನಸೇನಸೆಟ್ಟಿ ಎಂಬ ವರ್ತಕನು ಸಕಲೈಶ್ವರ್ಯದಿಂದ ಕೂಡಿಕೊಂಡಿರಲು ಆವನು ವ್ಯಾಪಾರಕ್ಕೋಸ್ಕರ ಪರದೇಶಕ್ಕೆ ಹೋದನು. ಆಗ ಅವನ ಹೆಂಡತಿ ಭಾವಕಿ ಎಂಬವಳು ಒಬ್ಬ ಮೋಟನಿಗೆ ಮರುಳಾಗಿ ಮನೆಯ ಕಾವಲುಗಾರನನ್ನು ಒಳಗು ಮಾಡಿಕೊಂಡು ಮನೆಯಲ್ಲಿ ಎರಡು ಹೆಣಗಳನ್ನಿಟ್ಟು ಮನೆಗೆ ಕಿಚ್ಚುಸಿಕ್ಕಿ ತಾವು ಸತ್ತರೆಂಬುವ ಮಾಡಿ ತಾವು ಕಾವಲುಗಾರನ ಸಹವಾಗಿ ಧರ್ಮರಾಜನೆಂಬ ಅರಸನು ಆಳುತ್ತಿದ್ದ ಮದನವತಿ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿ ವಾಸಿಸ ಹತ್ತಿದರು. ಇತ್ತ ಧನಸೇನಸೆಟ್ಟಿಯು ಜೈಮಿನಿಪುರಕ್ಕೆ ಮರಳಿ ಬರಲು ಅಲ್ಲಿ ತಳವಾರನನ್ನು ಅಕಸ್ಮಾತ್ತಾಗಿ ಕಂಡು ಆವನಿಂದ ತನ್ನ ಸತಿಯು ಒಬ್ಬ ಮೋಟನನ್ನು ಕೂಡಿಕೊಂಡು ಮದನವತಿ ಎಂಬ ಪಟ್ಟಣದಲ್ಲಿ ಇದ್ದಾಳೆಂಬುವದನ್ನು ತಿಳಿದನು. ಆಗ ಆವನು ಅಲ್ಲಿಗೆ ಹೋಗಿ ತನ್ನ ಸತಿ ಇರುವವದನ್ನು ಕಂಡನು. ಆದರೆ ಆವಳನ್ನು ನೋಡಿ ಆವನಿಗೆ ಎಷ್ಟು ಮಾತ್ರವೂ ಸಿಟ್ಟು ಬರಲಿಲ್ಲ. ಆವನಲ್ಲಿ ವೈರಾಗ್ಯವು ಉತ್ಪನ್ನವಾಯಿತು. ಆಗ ಆವನು ತನ್ನ ಧನವೆನ್ನೆಲ್ಲ ಧರ್ಮಾರ್ಥ ವೆಚ್ಚ ಮಾಡಿದನು ಮತ್ತು ತಪಸ್ಸನ್ನಾಚರಿಸಲು ಅರಣ್ಯಕ್ಕೆ ಹೋದನು. ಮತ್ತು ಶಿವಾನುಭವವನ್ನು ಆಚರಿಸುತ್ತ ಶಿವನಲ್ಲಿ ಐಕ್ಯಪದವನ್ನು ಹೊಂದಿದನು

ಮಗಧ ದೇಶವು ಬಿಹಾರ ಪ್ರಾಂತದ ದಕ್ಷಿಣ ಭಾಗವಾಗಿದೆ. ಸ್ತ್ರೀಹತ್ಯ ಮಾಡಕೂಡದೆಂಬದಕ್ಕೆ ಇದು ಶಿವಶರಣರ ಚರಿತ್ರೆಗಳಲ್ಲಿ ಒಂದು ಪ್ರಸಿದ್ಧ ಕಥೆಯಾಗಿದೆ. ಶಿವಶರಣರು ಸ್ತ್ರೀಯರನ್ನು ಎಂದೂ ಬಾಧಿಸಕೂಡದೆಂಬ ನಿಯಮವಿದೆ. ಗಟ್ಟಿವಾಳಯ್ಯನ ಚರಿತ್ರೆಯನ್ನು ನೋಡಿರಿ.

---

## ಘಂಟಾಕರ್ಣ

ಹಿಮಾಚಲ ಪ್ರದೇಶ:— ಕನಕಾದ್ರಿಯಲ್ಲಿ ಘಂಟಾಕರ್ಣನೆಂಬ ಗಣೇಶ್ವರನು ಪರಮ ವೀರಶೈವಾಚಾರನಿಷ್ಠನಾಗಿ ಸದ್ಭಕ್ತಿಯಿಂದ ಲಿಂಗಾರ್ಚನೆಯನ್ನು ಮಾಡುವಲ್ಲಿ ಮೊಲ್ಲೆ ಮಲ್ಲಿಗೆ ಸುರಹೊನ್ನೆ ಪಾರಿಜಾತ ಮೊದಲಾದ ಪುಷ್ಪಗಳಿಂದ ಶಿವಪೂಜೆಯನ್ನು ಮಾಡಿ ಪ್ರಸಾದವನ್ನು ಕೊಳ್ಳುತ್ತಾ ಇದ್ದನು. ಆಗ ಅವನ ಪೂಜೆಯ ಪುಷ್ಪಗಳು ಎಂದೂ ಬಾಡುತ್ತಿರಲಿಲ್ಲ. ಅವನಿದ್ದಲ್ಲಿ ಕಾಡ್ಗಿಚ್ಚು ಉರಿಯುತ್ತಿರಲಿಲ್ಲ. ಹೀಗಿರುವಲ್ಲಿ ಒಂದು ದಿವಸ ಅವನ ಪುಷ್ಪಗಳು ಸೂರ್ಯನ ಕಿರಣಗಳಿಂದ ಒಣಗಿದ್ದು ಅವನಿಗೆ ಕಂಡು ಬಂದಿತು. ಆಗ ಆ ಗಣೇಶ್ವರನು ಸೂರ್ಯನಿಗೆ ನಮ್ಮ ನಿರ್ಮಾಲ್ಯವನ್ನು ಈವರೆಗೂ ನೀವು ಒಣಗಿಸಲಿಲ್ಲ, ಈಗೇಕೆ ಒಣಗಿಸಿದೆ ಎಂದು ಕೇಳಲು ಸೂರ್ಯನು— ಸರ್ವಸಾರವನ್ನು ಒಣಗಿಸುವದೇ ನನ್ನ ಗುಣವು. ನಿಮ್ಮ ನಿರ್ಮಾಲ್ಯವೆಂದರಿಯದೆ ಒಣಗಿಸಿದೆನು ಎಂದು ಹೇಳಲು, ಆಗ ಮುನಿಯು ನಿನ್ನ ತಪ್ಪಿಗೋಸ್ಕರ ನೀನು ಕುಷ್ಠರೋಗಿಯಾಗು ಎಂದು ಶಪಿಸಿದನು. ಆಗ ಸೂರ್ಯನು ತನ್ನ ಅಜಾಗ್ರತೆಯನ್ನು ತಿಳಿದವನಾಗಿ ತನಗೆ ಶಾಪ ವಿಮೋಚನೆ ಹೇಗಾಗುವದೆಂದು ಕೇಳಿಕೊಳ್ಳಲು ಆಗ ಘಂಟಾಕರ್ಣ ಗಣೇಶ್ವರನು— ನೀನು ಮನೋಹರ ಗಣೇಶ್ವರನ ಪಾದೋದಕವನ್ನು ಸ್ವೀಕರಿಸಲು ಶುದ್ಧಾಂಗನಾಗುವಿ ಎಂದು ಹೇಳಲು ಸೂರ್ಯನು ಕಾಶಿಗೆ ಹೋಗಿ ಅಲ್ಲಿ ಬಾಲಾರ್ಕೇಶ್ವರನೆಂಬ ಲಿಂಗವನ್ನು ಸ್ಥಾಪಿಸಿ ಪೂಜಿಸಿ ತನ್ನ ರೋಗವನ್ನು ಪರಿಹಾರ ಮಾಡಬೇಕೆಂದು ಲಿಂಗಕ್ಕೆ ಕೇಳಿಕೊಳ್ಳಲು, ಆ ಲಿಂಗವು ಘಂಟಾಕರ್ಣ ಮುನೀಶ್ವರನು ಹೇಳಿದ ಮನೋಹರ ಗಣೇಶ್ವರನು ಮಂದಾರ ಪರ್ವತದಲ್ಲಿದ್ದಾನೆ, ಅಲ್ಲಿಗೆ ಹೋಗೆಂದು ಹೇಳಲು ಅಲ್ಲಿಗೆ ಹೋಗಿ ಮನೋ

ಕರ ಗಣೇಶ್ವರನನ್ನು ಕಂಡು ಅವನ ಪಾದಾರ್ಚನೆಯನ್ನು ಮಾಡಿ ಅವನ ಪಾದೋದಕವನ್ನು ಸ್ವೀಕರಿಸಿ ತನ್ನ ಮೈಗೆ ತೊಡೆದುಕೊಳ್ಳಲು ಅವನ ಕುಷ್ಠ ರೋಗವು ಹೋಗಿಬಿಟ್ಟಿತು.

ವಚನ ಶಾಸ್ತ್ರದಲ್ಲಿ ಘಂಟಾಕರ್ಣ ಮತ್ತು ಮನೋಹರ ಗಣೇಶ್ವರರ ಹೆಸರುಗಳು ಆಗಿಂದಾಗ್ಗೆ ಬರುತ್ತವೆ. ಅವರು ಮೇಲಿಂದ ಮೇಲೆ ಲೋಕೋದ್ಧಾರಕ್ಕೋಸ್ಕರ ಭೂಮಿಗವತರಿಸುವದುಂಟು. ಆದ್ದರಿಂದ ಅವರ ಚರಿತ್ರೆಗಳನ್ನು ನಾವು ಇಲ್ಲಿ ನಿರೂಪಿಸಿದ್ದೇವೆ.

---

## ಸೋಮಾಸಿಮಾರ

**ಕಾಶ್ಮೀರ:—** ಕಾಶ್ಮೀರದಲ್ಲಿ ಶಿವಾಚಾರ ಸಂಪನ್ನನೂ ಶಾಸ್ತ್ರಜ್ಞನೂ ಆದ ಸೋಮಾಸಿಮಾರನೆಂಬ ಶಿವಭಕ್ತನು ವಾಸಿಸುತ್ತಿದ್ದನು. ಅವನು ಶೈವ ಶಾಸ್ತ್ರದಲ್ಲಿ ಅತ್ಯಂತ ಪಂಡಿತನಾಗಿ ಧನವಂತನೂ ಆಗಿದ್ದನು. ಅವನು ಈ ಧನದಿಂದ ಏನೂ ಪ್ರಯೋಜನವಿಲ್ಲವೆಂದು ಅದನ್ನು ಬುಧಜನರಿಗೆಲ್ಲ ದಾನಮಾಡಿ ತನ್ನ ಗ್ರಂಥಗಳನ್ನು ೧೨ ಕುದುರೆಗಳ ಮೇಲೆ ಹೇರಿ ಕಾಶೀಯಾತ್ರೆಗೆ ಹೊರಟನು. ಅವನು ಕಾಶಿಗೆ ಬಂದು ವಿಶ್ವೇಶ್ವರ ದರ್ಶನವನ್ನು ಹೊಂದಿ ಅಲ್ಲಿದ್ದ ೧೬ ಸಾವಿರ ವಿಪ್ರರಿಗೆ ತನ್ನಲ್ಲಿದ್ದ ಧನವನ್ನೆಲ್ಲ ದಾನ ಮಾಡಿ ಬೇರೆ ಕ್ಷೇತ್ರಗಳಿಗೆ ಹೊರಟನು. ಅವನು ಕೇದಾರ ಕ್ಷೇತ್ರದ ಸಂದರ್ಶನ ಮಾಡಿ ಒಂದು ಅರಣ್ಯದಲ್ಲಿ ಬರುತ್ತಿರುವಾಗ್ಗೆ ದಾರಿಯಲ್ಲಿ ಸುಲಿಯಲಿಕ್ಕೆ ನಿಂತ ಒಬ್ಬ ಬೇಡನನ್ನು ಕಂಡು ಅವನನ್ನು ಮಾತಾಡಿಸಲು ಸೋಮಾಸಿಮಾರನ ಸಾನ್ನಿಧ್ಯದ ಬಲದಿಂದ ಆ ಬೇಡನಲ್ಲಿ ಜ್ಞಾನೋದಯವಾಗಿ ಅವನು ಕಯ್ಯಲ್ಲಿದ್ದ ಬಿಲ್ಲನ್ನು ಚೆಲ್ಲಿಕೊಟ್ಟು ಅವನಿಗೆ ನಮಸ್ಕರಿಸಿದನು. ಅದನ್ನು ನೋಡಿ–, ನೀನಾರು, ನಿನಗೇನುಬೇಕು, ಬೇಡು ಎಂದು ಸೋಮಾಸಿಮಾರನು ಕೇಳಲು ಅವನು ನನ್ನ ಹೆಸರು ಶ್ವಪಚನು. ನನಗೆ ಉಪದೇಶವನ್ನು ಕೊಡು ಎಂದು ನುಡಿದನು. ಅದಕ್ಕೆ ಅವನು— ವೇದಬಾಹಿರನಾದ ಶ್ವಪಚಕನಿಗೆ ಎಂದಾದರೂ ಉಪದೇಶವನ್ನು ಮಾಡಿದ್ದುಂಟೇ ಎಂದೆನ್ನಲು ಅವನು ನನಗೆ ವೇದಪಠಣವು ಬರುತ್ತದೆ ಎಂದು ಸ್ವರ ಸಹಿತ ವೇದ ಪಠಣ ಮಾಡಹತ್ತಿದನು. ಸೋಮಾಸಿಮಾರನು ಆಶ್ಚರ್ಯಬಟ್ಟು

ಅದನ್ನು ಕೇಳುವವನಾದನು. ಆಗ ಆ ಶ್ವಪಚನು ಉಪದೇಶವಿಲ್ಲದೆ ಇಂಥ ಪಠಣವು ನಿಷ್ಪ್ರಯೋಜನವಾದದ್ದು. ಆದ್ದರಿಂದ ನನಗೆ ಉಪದೇಶವನ್ನು ಕೊಡಬೇಕೆಂದು ಸೋಮಾಸಿಮಾರನಿಗೆ ಬಿನ್ನವಿಸಿಕೊಳ್ಳಲು ಇವನು ನನ್ನನ್ನು ಬಿಡುವದಿಲ್ಲ ಎಂದು ತಿಳಿದು ಅವನಿಗೆ ಉಪದೇಶವನ್ನು ಕೊಟ್ಟನು.

ಆಮೇಲೆ ಉಭಯತರು ಸ್ಥಾನಪುರವೆಂಬ ಗ್ರಾಮಕ್ಕೆ ಬರಲು ಅಲ್ಲಿದ್ದ ಬ್ರಾಹ್ಮಣರು-ವಿಪ್ರರು ಹೊಲೆಯನ ಕೂಡಿಕೊಂಡು ಬಂಬರುವದೇ ಎಂದು ಪ್ರಶ್ನಿಸಲು, ಸೋಮಾಸಿಮಾರನು ಒಂದು ಸಭೆಯನ್ನುಸೇರಿಸಿ ಶ್ವಪಚನಿಂದ ವೇದ ಪಠಣವನ್ನು ಮಾಡಿಸಲು ಅಲ್ಲಿದ್ದ ಗಂಸ ವಿರ ಬ್ರಾಹ್ಮಣರು ಅವನ ವಿದ್ವತ್ತೆಯನ್ನು ಕೊಂಡಾಡುವವರಾದರು.

ಅಲ್ಲಿಂದ ಸೋಮಾಸಿಮಾರನು ದಕ್ಷಿಣ ದೇಶಕ್ಕೆ ಹೊರಟು, ಶ್ರೀಶೈಲ ಮಲ್ಲಿಕಾರ್ಜುನನ್ನು ಕಂಡು, ಅಲ್ಲಿ ಪೂಜೆಯು ಮಾಡಿ ಅಲ್ಲಿಂದ ಪಂಪಾ ಕ್ಷೇತ್ರಕ್ಕೆ ಬಂದು, ವಿರೂಪಾಕ್ಷ ಸ್ವಾಮಿಯನ್ನು ಕಂಡು, ನಮಿಸಿ ಆತನ ರಾಣಿಯಾದ ಪಂಪಾದೇವಿಗೆ, ನಮಸ್ಕಾರ ಮಾಡಿ ಬರುತ್ತಿರಲು, ಆಗ ಒಬ್ಬ ವಿಪ್ರನು ಉತ್ತುಂಗ ಚೋಳನ ರಾಣಿಯು ಅಸ್ಥಿಗಳನ್ನು ತೆಗೆದು ಕೊಂಡು ಕಾಶಿಗೆ ಒಯ್ಯುತ್ತಿರಲು, ಅವನು ಸೋಮಾಸಿಮಾರನನ್ನು ಕಂಡು ತಾನು ಕಾಶಿಗೆ ಹೋಗಬೇಕಾದ ಸಂದರ್ಭವನ್ನು ತಿಳಿಸಿದನು. ಅವರ ಅಷ್ಟರಲ್ಲಿ ಸೋಮಾಸಿಮಾರನ ಮಹಿಮೆಯು ಮೂಲಕ ಆ ವಿಪ್ರನಲ್ಲಿದ್ದ ಅಸ್ಥಿಗಳೆಲ್ಲ ಚಂಗಣಿಗಿಲು ಪುಷ್ಪಗಳಾಗಿದ್ದವು. ಇದನ್ನು ಆ ಬ್ರಾಹ್ಮಣನು ನೋಡಿ ಇವನನ್ನು ಕಂಡದ್ದೇ ಕಾಶಿ ಎಂದು ತಿಳಿದು ಹಿಂದುರುಗಿ ಆದ ಸಂಗತಿಯನ್ನು ಚೋಳ ರಾಜನಿಗೆ ಅರಿಕೆ ಮಾಡಿಕೊಂಡನು

ಸೋಮಾಸಿಮಾರನು ಮುಂದೆ ಕಾವೇರಿ ತೀರದಲ್ಲಿದ್ದ ಪೊನ್ನಾಂಬಲ ಕ್ಷೇತ್ರಕ್ಕೆ ಬಂದು ಪೊನ್ನಾಂಬಲಾಧೀಶನನ್ನು ಸ್ವಲ್ಪಹಿಂದೆ ಪರಿಪರಿ ಕಂಡನು. ಅಲ್ಲಿ ಕಾವೇರೀ ಯುದಕವನ್ನು ಸಹಸ್ರ ಕೊಡಗಳಿಂದ ಲಿಂಗಕ್ಕೆಮಜ್ಜನವೆರೆದು ಪೂಜಿಸಿ ಕೆಲವು ಕಾಲ ಅಲ್ಲಿದ್ದನು.

ಹೀಗಿರಲು ಚೋಳರಾಜನು ಲಿಂಗವನ್ನು ಪೂಜಿಸಿದ ನಿರ್ಮಾಲ್ಯ ಪುಷ್ಪದಿಂದ ಸೋಮಾಸಿಮಾರನು ಲಿಂಗ ಪೂಜೆಯನ್ನು ಮಾಡುತ್ತಿರುವ ದನ್ನು ಸೇವಕರಿಂದ ತಿಳಿದು ರಾಜನು ಅವನನ್ನು ಬರಮಾಡಿಕೊಂಡು, ಇಂಥ ನಿರ್ಮಾಲ್ಯ ಕುಸುಮವು ಪೂಜೆಗೆ ಸಲ್ಲದೆನಲು ಅವಕ್ಕೆ ಸೋಮಾಸಿ

ಮಾರನು — ಪರಮಾತ್ಮನು ನೀನು ಅರ್ಪಿಸುವ ಪುಷ್ಪಗಳನ್ನು ಕೈಕೊಳ್ಳುವ ದಿಲ್ಲವೆಂದನಲು ಅದಕ್ಕೆ ಚೋಳನೇನು ಕಾರಣವೆನಲು ನಿನಗುಪದೇಶವಿಲ್ಲ ಆದ್ದರಿಂದ ನಿನ್ನ ಪೂಜೆಯನ್ನು ಕೈಕೊಳ್ಳನು ಎಂದೆನಲು, ಇದಕ್ಕೆ ದೃಷ್ಟಾಂತವನ್ನು ತೋರಿಸು ಎಂದು ರಾಜನು ಅವನಿಗೆ ಹೇಳಿದನು. ಆಗ ಸೋಮಾಸಿಮಾರನು — ನಿರ್ಮಾಲ್ಯ ಪುಷ್ಪಗಳಿಂದ ಲಿಂಗವನ್ನು ಮೊದಲು ಪೂಜಿಸಿ ನೂರೆಂಟು ನಮಃಶ್ಶಿವಾಯ ಮಂತ್ರಗಳಿಂದ ಪುಷ್ಪಗಳನ್ನು ಹೊಳೆಗೆ ಹಾಕಲಾಗಿ ಆ ಹೊಳೆಯು ಕಟ್ಟೇ ಕಟ್ಟಿದಂತೆ ಮುಂದೆ ಹರಿಯದೆ ವಿಶಾಲ ವಾದ ಸರೋವರವಾಗಿ ಅಲ್ಲಿಯೇ ನಿಂತಿತು. ಅದನ್ನು ಚೋಳರಾಜನು ಕಂಡು, ತಾನೂ ಹಾಗೆಯೇ ಮಾಡಬೇಕೆಂದು, ನೂರೆಂಟು ಬಂಡ ಪುಷ್ಪ ಗಳನ್ನು ತೆಗೆದುಕೊಂಡು ಹೊಳೆಗೆ ಹಾಕಲು ಅವು ಪ್ರವಾಹದಲ್ಲಿ ಹರಿದು ಹೋದವು. ಚೋಳನು ಆಶ್ಚರ್ಯಪಟ್ಟು, ಹೀಗೇಕೆಂದು ಕೇಳಲು, ನಿನಗೆ ಉಪದೇಶವಿಲ್ಲದ್ದರಿಂದ ಹೀಗಾಯಿತೆಂದನು. ಆಗ ಚೋಳರಾಜನು ಸೋಮಾಸಿ ಮಾರನಿಂದ ಉಪದೇಶವನ್ನು ಹೊಂದಿದವನಾದನು.

ಮುಂದೆ ಕೆಲವು ದಿವಸಗಳಾದ ಮೇಲೆ ಸೋಮಾಸಿಮಾರನ ಮನಸ್ಸಿ ನಲ್ಲಿ ಶಿವಯಾಗವನ್ನು ನಡಿಸಬೇಕೆಂತಲೂ ಈ ಯಾಗಕ್ಕೆ ಪರಶಿವನನ್ನೇ ಬರಮಾಡಿಕೊಳ್ಳಬೇಕೆಂತಲೂ ಒಂದು ಅಭಿಲಾಷೆಯು ಉಂಟಾಯಿತು. ಹಾಗೆಯೇ ಚಿಂತಿಸುತ್ತ ನಿದ್ರೆಹೋಗಿರಲು, ಇದು ಸುಂದರ ನಂಬೆಣ್ಣನಿಂದ ಆದೀತೆಂದು ಅವನಿಗೆ ಸ್ವಪ್ನವಾಯಿತು. ತಿರುವಾರೂರು ಪಟ್ಟಣದಲ್ಲಿ ನಂಬೆಣ್ಣನೂ ಅವನ ಪ್ರೀತಿಗೆ ಪಾತ್ರಳಾದ ಪರವೆನಾಚಿಯೂ ಇರುತ್ತಿರಲು ಸೋಮಾಸಿಮಾರನು ಅಲ್ಲಿಗೆ ಹೋಗಿ ಪರವೆನಾಚಿಗೆ ಮೂರುವರ್ಷ ಚೆಂಗಣೆ ಗಿಲು ಮತ್ತು ಇರುವಂತಿಗೆ ಪುಷ್ಪಗಳನ್ನು ತಂದು ಕೊಡುತ್ತ ಇದ್ದನು. ಇದನ್ನು ನಂಬೆಣ್ಣನು ನೋಡಿ ಅವನಿಗೆ ಹೊನ್ನು ಕೊಡೆಂದು ಪರಿಚಾರ ಕನಿಗೆ ಹೇಳಿದನು. ಅದನ್ನು ಸೋಮಾಸಿಮಾರನು ಕೇಳಿ — ನಾನು ಹೊನ್ನನ್ನೊಲ್ಲೆನು, ಯಜ್ಞಕ್ಕೆ ನೀವು ಶಿವನನ್ನು ಕರೆತರಬೇಕೆಂದು ವಿಜ್ಞಾಪಿಸಿ ಕೊಂಡನು. ಸೌಂದರ ನಂಬಿಯು ಇದಕ್ಕೆ ಒಪ್ಪಿಕೊಂಡು ತಿರುವಾರೂ ರೇಶ್ವರನ ಸನ್ನಿಧಿಗೆ ಬಂದು — ಶಂಕರನೇ ತಿರುವಂಬರದಲ್ಲಿ ಸೋಮಾಸಿ ಮಾರನು ಯಾಗವನ್ನು ನಡಿಸುತ್ತಾನೆ. ಅಲ್ಲಿ ನೀನು ಹೋಗಿ ಅವನಿಂದ ಪೂಜೆಯನ್ನು ಕೈಕೊಳ್ಳಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಈಶ್ವರನು ಒಪ್ಪಿಕೊಂಡು ಒಬ್ಬ ಹೊಲೆಯನ ವೇಷವನ್ನು ತಾಳಿ ತಲೆಯಲ್ಲಿ ಮಣಿ,

ಕಯ್ಯಲ್ಲಿ ಸಂಬಳಗೋಲು ಹಿಡಿದುಕೊಂಡು ಸೋಮಾಸಿಮಾರನು ತಿರುವಂಬರದಲ್ಲಿ ನಡಿಸಿದ ಯಾಗ ಮಂಟಪಕ್ಕೆ ಬಂದನು. ಅವನನ್ನು ಸೋಮಾಸಿಮಾರನು ಕಂಡು ಶಿವನು ಈ ವೇಷದಿಂದ ನನ್ನ ಮನವನ್ನು ಪರೀಕ್ಷೆ ಮಾಡಲು ಬಂದಿರುವನೆಂದು ತಿಳಿದು ಅವನನ್ನು ನಮಸ್ಕರಿಸಿದನು. ಆಗ ಶಿವನು— ನಾನು ಹೊಲೆಯನು, ಅಸ್ಪೃಶ್ಯನು ಎಂದು ಹೇಳಿದರೂ ಸೋಮಾಸಿಮಾರನು ಅದನ್ನು ಲಕ್ಷಿಸದೆ— ನಿಮ್ಮ ನಿಜವನ್ನು ನಾನು ಬಲ್ಲೆ. ನನಗೆ ಕೃಪೆ ಮಾಡಿರಿ, ಯಾಗ ಶಾಲೆಗೆ ನಡೆಯಿರಿ, ಎಂದು ಪೂಜಾಮಂಟಪಕ್ಕೆ ಕರೆತಂದನು. ಆಗ ವಿಪ್ರರು ಆ ಶ್ವಪಚನನ್ನು ನೋಡಿ ಇಲ್ಲಿ ನಾವು ಇರಕೂಡದೆಂದು ಎಲ್ಲರೂ ಹೊರಟು ಹೋದರು. ಆದರೆ ಸೋಮಾಸಿಮಾರನು ಅವನನ್ನು ಭಕ್ತಿ ಪೂರ್ವಕವಾಗಿ ಪೂಜಿಸಿ ಅವನ ಪಾದತೀರ್ಥವನ್ನು ಸ್ವೀಕರಿಸಿದನು. ಆಗ ಪರಮಾತ್ಮನು ಆತನ ನಿಷ್ಕಪಟ ಭಕ್ತಿಗೆ ಸಂತೋಷಪಟ್ಟು ತನ್ನ ನಿಜರೂಪದಿಂದ ವಿರಾಜಿಸಿದನು. ಆ ಸಮಯದಲ್ಲಿ ಆ ಯೋಗಶಾಲೆಯೇ ಪುಷ್ಪಕವಿಮಾನವಾಯಿತು. ಆ ವಿಮಾನದ ಮೂಲಕ ಶಿವನು ಸೋಮಾಸಿಮಾರನನ್ನು ಕೈಲಾಸಕ್ಕೆ ಕರದೊಯ್ದು ಅವನಿಗೆ ಗಣಪದವಿಯನ್ನು ಕೊಟ್ಟನು.

ಸೋಮಾಸಿಮಾರನ ಚರಿತ್ರೆಯು ಹರಿಹರ ಕವಿಯ ರಗಳೆಯಲ್ಲಿಯೂ ಇತರ ಶಿವಶರಣ ಚರಿತ್ರ ಗ್ರಂಥಗಳಲ್ಲಿಯೂ ಬರುತ್ತದೆ. ಸೋಮಾಸಿಮಾರನು ಬ್ರಾಹ್ಮಣನಿದ್ದರೂ ಅವನು ಅಸ್ಪೃಶ್ಯತ್ವವನ್ನು ಪೂರ್ಣವಾಗಿ ತೊರೆದವನಾಗಿದ್ದನು. ಅವನು ಕೇವಲ ಕರ್ಮಠತನದ ವ್ಯತ್ತಿಯನ್ನು ಹೋಗಲಾಡಿಸಿ ಭಕ್ತಿಗೆ ಮಹತ್ವಕೊಟ್ಟಿದ್ದನೆ. ಗುರೂಪದೇಶವು ಅವಶ್ಯವಾದುದೆಂದು ಅವನ ಚರಿತ್ರೆಯಲ್ಲಿ ಹೇಳಿದೆ ಸೋಮಾಸಿಮಾರನು ೬೩ ಪುರಾತನರಲ್ಲಿ ಒಬ್ಬನೆಂದು ಎಣಿಸಲ್ಪಟ್ಟಿದ್ದಾನೆ. ಆದರೆ ಅವನು ಕಾಶ್ಮೀರ ದೇಶದಿಂದ ಹೊರಟು ಚೋಳ ದೇಶದವರೆಗೆ ಬರುವವರೆಗೆ ನಡೆದ ಸಂಗತಿಗಳು ತಮಿಳು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಿಲ್ಲ ಶಿವಶರಣರ ಅನೇಕ ನಡೆಗಳು ಅವನ ಚರಿತ್ರೆಯಲ್ಲಿರುವದು ಕಂಡುಬರುತ್ತದೆ. ಆದರೆ ಉದ್ಭಟನ ಮತ್ತು ಈತನ ಚರಿತ್ರೆಗಳಿಂದ ಹಿಂದಿನ ಕಾಲದ ಶಿವಬ್ರಾಹ್ಮಣರು ಯಜ್ಞ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಕರ್ನಾಟಕದ ಶಿವಶರಣರು ಈ ಪದ್ಧತಿಯನ್ನು ಸಂಪೂರ್ಣವಾಗಿ ತ್ಯಜಿಸಿದ್ದಾರೆ.

# ಸಿಂಧುಮರಾಳ

**ಸಿಂಧುದೇಶ:**— ಕಾಶ್ಮೀರ ಅಫಗಾಣಿಸ್ತಾನ, ಗುಜರಾಥ ದೇಶಗಳಲ್ಲಿ ಒಂದುಕಾಲದಲ್ಲಿ ಹೇಗೆ ಹಿಂದೆ ಹೇಳಿದಂತೆ ಶಿವಶರಣರು ಉದಯವಾದರೋ ಹಾಗೆಯೇ ಸಿಂಧೂದೇಶದಲ್ಲಿಯೂ ಕೂಡ ಉದಯವಾಗಿದ್ದಾರೆ. ಇದು ಶಿವಶರಣರ ಚರಿತ್ರೆಗಳಲ್ಲಿ ಕಂಡುಬರುತ್ತದೆ. ಈಗ ಅಲ್ಲಿ ಇಸ್ಲಾಮ ಧರ್ಮವು ನೆಲೆಗೊಂಡಿರುತ್ತದೆ. ಆದರೆ ಪುರಾತನಕಾಲದಲ್ಲಿ ಅಲ್ಲಿ ಶಿವಧರ್ಮವಿತ್ತೆಂಬುದು ಅಲ್ಲಿಯ ಪ್ರದೇಶಗಳಲ್ಲಿ ಮುಖ್ಯವಾಗಿ ಮಹೆಂಜೊದಾರೋ ಮುಂತಾದಕಡೆಗೆ ದೊರೆತಿರುವ ಅವಶೇಷಗಳಿಂದ ತಿಳಿದುಬರುತ್ತದೆ. ಅಲ್ಲಿ ಕೆಲವು ಶಿವಶರಣರೂ ಉಂಟಾಗಿದ್ದಾರೆ. ಅವರಲ್ಲಿ ಸಿಂಧುಮರಾಯ ಅಥವಾ ಸಿಂಧುಮರಾಳ ಈತನು ಮುಖ್ಯನಾಗಿದ್ದಾನೆ. ಈತನ ಹೆಸರು ಶಿವಶರಣರ ಚರಿತ್ರ ಗ್ರಂಥಗಳಲ್ಲಿ ಯಾವಾಗಲೂ ಬರುವದುಂಟು.

ಸಿಂಧುಮರಾಯ ಅಥವಾ ಸಿಂಧುಮರಾಳನು ಸಿಂಧುದೇಶದ ಅರಸನಾಗಿದ್ದನು. ಅವನು ಸಕಲೈಶ್ವರ್ಯ ಸಂಪತ್ತಿನಿಂದ ಕೂಡಿದವನಾಗಿದ್ದನು. ಅವನು ಸದಾಚರಣೆಯುಳ್ಳವನಾಗಿ ಜಂಗಮಪ್ರೇಮಿಯಾಗಿದ್ದನು. ಅವನು ಬೇಡಿದವರಿಗೆ ಎಂದೂ ಇಲ್ಲೆನ್ನನು. ಹೀಗಿರಲು ಅವನ ದಾಯಾದಿಗಳು ಅವನ ರಾಜ್ಯವನ್ನು ಸಾಧಿಸಬೇಕೆಂದು ಅವನೊಡನೆ ಕದನ ಹೂಡಿದರು. ಆದರೆ ಅವನೊಡನೆ ಅವರು ಕಾದಲಾರದೆ ಕೆಟ್ಟೋಡಿದರು. ಹೀಗಿರಲು ಒಂದುದಿವಸ ಕೆಲವು ಚರಮೂರ್ತಿಗಳು ಅವನಲ್ಲಿಗೆ ಬಂದು ಈ ದೇಶವು ನಮಗರ್ಪಿತವಾದದ್ದು. ಆದ್ದರಿಂದ ಅಷ್ಟ ಮಹಾಭೋಗವನ್ನು ನಮಗೆ ಸಲ್ಲಿಸಬೇಕೆಂದು ಅವನಿಗೆ ಕೇಳಲು ಅವನು ಅದೆಲ್ಲವನ್ನು ಅವರಿಗೆ ಸಲ್ಲಿಸಿದನು. ಮುಂದೆ ಅವರು ಅವನ ದೇಶ ಕೋಶವನ್ನು ಸಹ ಬೇಡಿದರು. ಆಗ ಅವನು ಅವನ್ನೂ ಅವರಿಗೆ ಕೊಟ್ಟು ತಾನು ಒಬ್ಬ ಚರವೇಷ ಧಾರಣ ಮಾಡಿ ದೇಶಾಂತರವನ್ನು ಮಾಡುವೆನೆಂದು ರಾಜ್ಯ ಬಿಟ್ಟು ಹೊರಟನು. ಆಗ ಪರದೇಶಗಳಲ್ಲಿದ್ದ ಅವನ ದಾಯಾದಿಗಳು ಇದನ್ನು ತಿಳಿದು ತಾವು ಜಂಗಮ ವೇಷಧಾರಿಗಳಾಗಿ ಅವನೊಡನೆ ಹಿತವಚನಗಳನ್ನಾಡುತ್ತ ಅವನನ್ನು ಕಂಡರು. ಆದರೆ ಅವರ ಕೃತಕ ವೇಷವನ್ನು ಅರಸನು ತಿಳಿಯಲಾರದೆ ಹೋಗಿ, ನಿಮಗೇನುಬೇಕು ಬೇಡಿರಿ ಎಂದು ಕೇಳಲು ಅವರು ಅವನಿಗೆ — ನೀನು ನಿನ್ನ ರಾಜ್ಯವನ್ನು ಚರಮೂರ್ತಿಗಳಿಗೆ ಈ ಮೊದಲಿಗೆ

ಕೊಟ್ಟುಬಿಟ್ಟೆ. ಇನ್ನು ಮೇಲೆ ನಮಗೇನು ಕೊಡುವೆ ಎಂದು ಕೇಳಲು ಅವನು ಅವರಿಗೆ — ನನ್ನ ತಲೆಯನ್ನು ಶಿವಗೀವೆನು ಎಂದು ನುಡಿದನು. ಆಗ ಅವರು ಅವನಿಗೆ — ನೀನು ನಿನ್ನ ಅರ್ಧಾಂಗವನ್ನು ನಮಗೆ ಕೊಡಬೇಕು. ಅಂದರೆ ನೀನು ನಿಜವಾದ ಭಕ್ತನೆಂದೆನ್ನಲು ಅವನು ಹಾಗೆಯೇ ಆಗಲೆಂದು ಅನ್ನಲು, ಅವರು ಒಂದು ಕರಗಸವನ್ನು ತೆಗೆದುಕೊಂಡು ಅವನನ್ನು ಸೀಳ ಹತ್ತಿದರು. ಆಗ ಅವನ ಮೈಯ್ಯ ಎಡಭಾಗದಿಂದ ಕಂಬನಿಗಳು ಉದುರ ಹತ್ತಿದವು. ಅದಕ್ಕೆ ಅವರು ಹೀಗೇಕೆಂದು ಕೇಳಲು, ಅರಸನು ಅವರಿಗೆ — ಬಲಭಾಗವು ನಿಮಗೆ ಸಲ್ಲಿತೆಂದು ಸಂತೋಷದಲ್ಲಿದೆ. ಆದರೆ ವಾಮ ಭಾಗವು ತಾನು ವ್ಯರ್ಥವಾದೆನೆಂದು ಚಿಂತೆಯಲ್ಲಿದೆ ಎಂದು ನುಡಿದನು. ಇದನ್ನು ಕೇಳಿ ಶಿವನು ಅವನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಕರಗಸವನ್ನು ಹೊರಗೆ ತೆಗೆದು, ಎರಡೂ ಭಾಗಗಳನ್ನು ಕೂಡಿಸಲು ದಾಯಾದಿಗಳು ನಡಿಸಿದ ಕಾಪಟ್ಯವು ಅರಸನಿಗೆ ತಿಳಿದು ಬಂದಿತು. ಆಗ ಶಿವನು ಅರಸನಿಗೆ ನಿನಗೇನು ಬೇಕು ಬೇಡೆಂದು ಕೇಳಲು — ನನ್ನ ಬಂಧುಗಳು ಮಾಡಿದ ಅಪರಾಧವನ್ನು ಕ್ಷಮಿಸಬೇಕು, ಮತ್ತು ಅವರನ್ನೊಡಗೊಂಡು ನಮ್ಮೆಲ್ಲರನ್ನು ನಿನ್ನಲ್ಲಿ ಇಂಬಿಟ್ಟುಕೊಳ್ಳಬೇಕು ಎಂದು ಹೇಳಲು ಶಿವನು ಅವನ ಭಕ್ತಿಗೆ ಮೆಚ್ಚಿ ಎಲ್ಲರನ್ನೂ ಕೈಲಾಸಕೊಯ್ದನು

---

## ಸಿಂಧುಸೇನ.

ವಿದರ್ಭ :— ಮೊದಲಿನ ಕಾಲದಲ್ಲಿ ಈಗಿನ ವರ್ಹಾಡ ಪ್ರಾಂತಕ್ಕೆ ವಿದರ್ಭ ವೆಂಬ ಹೆಸರಿತ್ತು, ಇಲ್ಲಿ ಸೂರ್ಯಪುರವೆಂಬ ಪಟ್ಟಣದಲ್ಲಿ ಸಿಂಧುಸೇನನೆಂಬ ರಾಜನು ರಾಜ್ಯವಾಳುತ್ತಿದ್ದನು. ವಿದರ್ಭ ದೇಶಕ್ಕೆ ಹೊಂದಿಯೇ ವಿಂಧ್ಯ ದೇಶವಿದ್ದು ಅಲ್ಲಿ ಶ್ರೀ ಕಾಳಾಪುರ ವೆಂಬಲ್ಲಿ ಸಿಂಹರಾಜನೆಂಬ ರಾಜನು ಆಳುತಿದ್ದನು. ಆಗ ಉಭಯತರಲ್ಲಿ ಮನಸ್ತಾಪವು ಉಂಟಾಗಲು ಅವರಿಬ್ಬರೂ ಕಾಳಗವನ್ನು ಪ್ರಾರಂಭಿಸಿದರು. ಕಾಳಗವಾರಂಭವಾಗಲು ಸಿಂಧುಸೇನನು ಚತುರಂಗ ಬಲ ಸಮೇತವಾಗಿ ಕಾಳಗಕ್ಕೆ ಹೊರಟನು. ಆ ಕಾಲದಲ್ಲಿ ಒಬ್ಬ ಶಿವ ಭಕ್ತನು ಅವನಿಗೆ ಒಂದು ಮುತ್ತಿನ ಸರವನ್ನು ಕಾಣಿಕೆಯಾಗಿ ಕೊಟ್ಟನು. ಅದರಲ್ಲಿ ಒಂದು ರುದ್ರಾಕ್ಷಿಮಣಿಯು ಇತ್ತು.

ಇತ್ತ ಸಿಂಹರಾಜನು ವಿಷ್ಣುಭಕ್ತನಾಗಿ ಒಂದು ಚಕ್ರವನ್ನು ಪಡೆದವನಾಗಿದ್ದನು.

ಯುದ್ಧವು ಉಭಯತರಲ್ಲಿ ಪ್ರಾರಂಭವಾಯಿತು. ಸಿಂಹರಾಜನು ತನ್ನ ಚಕ್ರಾಯುಧವನ್ನು ಬಿಡಲು ಅದು ಸಿಂಧುಸೇನನ ಬಲವನ್ನೆಲ್ಲ ಕೊಂದುಹಾಕಿತು. ಹೀಗೆ ತನ್ನ ದಂಡು ಸಾಯಲು ಸಿಂಧುಸೇನನು ರಣಾಂಗಣದಿಂದ ಓಡಿಹೋಗಿ ಅರಣ್ಯದಲ್ಲಿ ತಪವನ್ನು ಮಾಡುತ್ತಿದ್ದ ಮುನಿಗಳಿಗೆ ಶರಣುಹೋದನು. ಅವನು ಅವರಿಗೆ ತನ್ನ ಬಲವು ಮಡಿದು ಹೋಯಿತು. ಇದಕ್ಕೆ ಕಾರಣವೇನೆಂದು ಕೇಳಲು ಅವರು ನಿನ್ನ ಸೈನ್ಯನಲ್ಲಿ ದೇವಭಕ್ತಿ ಇದ್ದವರ ಕುರುಹು ಎಷ್ಟುಮಾತ್ರವೂ ಇಲ್ಲ. ಆದರೆ ನಿನ್ನ ಕೊರಳಲ್ಲಿ ಶಿವಮಂತ್ರದಿಂದ ಪುನೀತವಾದ ಒಂದು ರುದ್ರಾಕ್ಷಿ ಮಾತ್ರ ಇದೆ. ಅದರ ಪ್ರಭಾವದ ಮೂಲಕ ನೀನೊಬ್ಬನು ಮಾತ್ರ ಪಾರಾಗಿ ಬಂದೆ ಎಂದು ನುಡಿದು ಇನ್ನು ಮೇಲೆ ನೀನು ಬಲವನ್ನು ಪುನಃ ಕೂಡಿಸಿ ಎಲ್ಲರೂ ಭಸಿತ ರುದ್ರಾಕ್ಷಿಗಳನ್ನು ಧರಿಸುವಂತೆ ಮಾಡು ಎಂದು ಬೋಧಿಸಿದರು.

ಅರಸನು ಆಮೇಲೆ ತನ್ನ ರಾಜಧಾನಿಗೆ ಬಂದು ತನ್ನ ಅರ್ಧ ಬಲಕ್ಕೆ ರುದ್ರಾಕ್ಷಿ, ಉಳಿದ ಅರ್ಧ ಬಲಕ್ಕೆ ಭಸಿತವನ್ನಿಟ್ಟು ಸಿಂಹರಾಜನೊಡನೆ ಕಾಳಗವನ್ನು ಪುನಃ ಪ್ರಾರಂಭಿಸಿದನು. ಆಗ ಸಿಂಹರಾಜನು ತನ್ನ ಚಕ್ರವನ್ನು ಬಿಡಲು ಅದು ಸಿಂಧುರಾಜನ ಬಲಕ್ಕೆಲ್ಲ ಪ್ರದಕ್ಷಿಣ ಹಾಕಿ ತಿರುಗಿ ಹೋಯಿತು.

ಇವನ್ನು ಸಿಂಹರಾಜನು ನೋಡಿ ಒಂದು ಉಪಾಯವನ್ನು ನೆನೆದು ಮತ್ತೊಮ್ಮೆ ಯುದ್ಧವನ್ನು ಪ್ರಾರಂಭಿಸಿದನು. ಯುದ್ಧವು ಪ್ರಾರಂಭವಾಗುವ ಪೂರ್ವದಲ್ಲಿ ಅವನು ವರುಣನನ್ನು ನೆನೆಯಲು ಒಂದು ದೊಡ್ಡ ಮಳೆಯು ಬಂದು ಸಿಂಧುರಾಜನ ಅರ್ಧ ಬಲವು ಧರಿಸಿದ್ದ ವಿಭೂತಿಯನ್ನು ಅಳುಕಿಸಿಬಿಟ್ಟಿತು. ಆಗ ಸಿಂಹರಾಜನು ಬಿಟ್ಟ ಚಕ್ರಾಯುಧವು ವಿಭೂತಿ ಅಳಿಸಿಹೋದವರನ್ನೆಲ್ಲ ಕೊಂದುಹಾಕಿ ಬಿಟ್ಟಿತು.

ಆಗ ಸಿಂಧುಸೇನನು ಈ ಸಂಗತಿಯನ್ನು ಮುನಿಗಳ ಕಡೆಗೆ ಹೋಗಿ ತಿಳಿಸಲಾಗಿ ಅವರು ದಂಡು ಅಳಿದ ಕಾರಣವನ್ನು ಅವನಿಗೆ ಹೇಳುವಲ್ಲಿ ನೀನು ಇನ್ನುಮೇಲೆ ನಿನ್ನ ಎಲ್ಲ ದಂಡು ವಿಭೂತಿ ರುದ್ರಾಕ್ಷಿ ಎರಡನ್ನೂ ಧರಿಸುವಂತೆ ಮಾಡು ಎಂದು ಸೂಚಿಸಲು ಅವನು ಹಾಗೆಯೇ ಮಾಡಿದನು.

ಮುಂದೆ ಯುದ್ಧವು ಪ್ರಾರಂಭವಾಯಿತು. ಆಗ ಸಿಂಹರಾಜನು ಮೊದಲಿನಂತೆ ಮಳೆ ಹುಯ್ಯುವಂತೆ ಮಾಡಿದನು. ಅದರಿಂದ ಸೈನ್ಯವು ಧರಿಸಿದ್ದ ವಿಭೂತಿಯು ಅಳಿಸಿಹೋಯಿತು. ಆದರೆ ರುದ್ರಾಕ್ಷಿಗಳು ಹಾಗೆಯೇ ಇದ್ದಮೂಲಕ ಚಕ್ರಾಯುಧವು ಅವರಿಗೆ ಏನೂ ಮಾಡಲಿಲ್ಲ. ಇಷ್ಟೇ ಅಲ್ಲ, ಅದು ಅವನ ಬಲಕ್ಕೆಲ್ಲ ಪ್ರದಕ್ಷಿಣೆಯನ್ನು ಹಾಕಿ ಹಿಂದಿರುಗಿ ಹೋಯಿತು

ಅಷ್ಟಾವರಣಗಳಲ್ಲಿ ಮಂತ್ರವು ಅತ್ಯಂತ ಮಹತ್ವವಾದದ್ದು. ಅದರ ಮೂಲಕವೇ ಉಳಿದ ಆವರಣಗಳು ಭಕ್ತನಲ್ಲಿ ದೃಢಪಡುತ್ತವೆ. ಆದ್ದರಿಂದ ಮಂತ್ರೋಪದೇಶಕ್ಕೆ ಬಹಳ ಮಹತ್ವದ ಸ್ಥಾನವಿದೆ. ಆದರೆ ಅದನ್ನು ಜಪಿಸಲು ರುದ್ರಾಕ್ಷಿಯೇ ಮುಖ್ಯ ಸಾಧನವಾಗಿರುತ್ತದೆ ಆದರೆ ವಿಭೂತಿಯು ಮಂತ್ರದ 'ಪ್ರಕಾಶವಾಗಿದೆ.

ಈ ಸಂಗತಿಯನ್ನು ಉಭಯರಾಜರು ತಿಳಿದವರಾಗಿ ಕಾಳಗ ಮಾಡುವವನ್ನು ಬಿಟ್ಟುಕೊಟ್ಟರು ಮತ್ತು ಅವರು ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದವರಾಗಿ ಧರ್ಮದಂತೆ ಆಚರಿಸುತ್ತ ಕೈಲಾಸಕ್ಕೆ ಹೋದರು.

---

# ಕಲಾವತಿ

**ಕಾಶೀಕ್ಷೇತ್ರ:—** ಕಾಶೀಕ್ಷೇತ್ರವು ವಿಶ್ವೇಶ್ವರನ ಸ್ಥಾನವಾಗಿದ್ದು ಅಲ್ಲಿ ಶಿವಭಕ್ತಿಯುತರಾದ ಅನೇಕ ಋಷಿಗಳು ವಾಸಮಾಡುತ್ತಿದ್ದರು. ಕಾಶೀ ರಾಜನಾದರೂ ಶಿವಭಕ್ತಿಯುಳ್ಳವನಾಗಿ ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುವವನಾಗಿದ್ದನು. ಅವನ ಮಗಳು ಕಲಾವತಿಯು ಎಂಬುವಳಿದ್ದು ಅವಳಾದರೂ ತಂದೆಯಂತೆ ಶಿವಭಕ್ತಿಯುಳ್ಳವಳಾಗಿದ್ದಳು. ಅವಳು ಈ ಕ್ಷೇತ್ರದಲ್ಲಿದ್ದ ದುರ್ವಾಸ ಮುನಿಯಿಂದ ಪಂಚಾಕ್ಷರೀ ಮಂತ್ರದ ಉಪದೇಶವನ್ನು ಹೊಂದಿ ಅದರ ಪ್ರಭಾವದಿಂದ ಆಚರಿಸುವವಳಾಗಿದ್ದಳು.

ಹೀಗಿರುವಲ್ಲಿ ದಕ್ಷಿಣ ದೇಶದಲ್ಲಿ ಶಿವಭಕ್ತರಾದ ಪಾಂಡ್ಯವಂಶದ ರಾಜರು ರಾಜ್ಯವಾಳುತ್ತಿದ್ದರು. ಅವರಲ್ಲಿ ದಾಶೋಹರಾಯನು ಈ ಕಾಲದಲ್ಲಿ

ಆಳುತ್ತಿದ್ದ ಅವನಿಗೆ ಕಾಶೀರಾಜನು ತನ್ನ ಮಗಳಾದ ಕಲಾವತಿಯನ್ನು ಕೊಟ್ಟು ಮದುವೆ ಮಾಡಿದನು.

ಲಗ್ನವಾದಬಳಿಕ ಉಭಯ ಸತಿಪತಿಗಳು ಏಕಾಂತದಲ್ಲಿರುವಾಗ ಕಲಾವತಿಯು ಗಂಡನನ್ನು ಬಿಟ್ಟು ಬೇರೆಕಡೆಗೆ ಮಲಗಲಾಗಿ ಹೀಗೇಕೆಂದು ಅವನು ಅವಳಿಗೆ ಕೇಳಲು ಕಲಾವತಿಯು ನಿನಗೆ ಪಂಚಾಕ್ಷರೀ ಮಂತ್ರೋಪದೇಶವಿಲ್ಲ. ನಾನು ಈ ಮಹಾಮಂತ್ರದ ಉಪದೇಶವನ್ನು ಹೊಂದಿದ್ದೇನೆ. ಆದ್ದರಿಂದ ನಾನು ಇತರರನ್ನು ಸ್ಪರ್ಶಿಸಕೂಡದೆಂಬ ನಿಯಮವಿದೆ ಎಂದೆನ್ನಲು ರಾಜನು ಬಲಾತ್ಕಾರದಿಂದ ಅವಳನ್ನು ಸ್ಪರ್ಶಿಸಿದನು. ಆಗ ಅವಳ ದೇಹವು ಅವನಿಗೆ ಕಾದ ಕಬ್ಬಿಣದಂತೆ ಭಾಸವಾಯಿತು. ಹೀಗಾಗಲು ಅರಸನು ಅಂಜಿ ಅವಳಿಗೆ— ನಿನ್ನ ಶರೀರವು ಬಹು ಮೃದುವಾದುದು. ಆದರೆ ನಿನ್ನ ದೇಹದಲ್ಲಿ ಹೀಗೆ ಜ್ವಾಲೆಯಂತೆ ಏಕಾಯಿತೆನಲು ಅವಳು ರೋಗಿಯು, ಸೂತಕಿಯು, ಗರ್ಭಿಣಿಯು, ರತಿ ಇಲ್ಲದವಳು, ವ್ರತಸ್ತೆಯು ಇವರನ್ನು ಮುಟ್ಟಬಾರದೆಂಬ ಶಾಸ್ತ್ರವಿದೆ. ನಾನು ಪಂಚಾಕ್ಷರೀ ಮಂತ್ರದಿಂದ ಪುನೀತಳಾಗಿದ್ದೇನೆ. ಆದ್ದರಿಂದ ಆ ಮಂತ್ರವು ನಿನ್ನನ್ನು ಸುಟ್ಟಿತು, ಎಂದು ಹೇಳಿದಳು. ಆಗ ದಾಸೋಹರಾಯನು ಆಶ್ಚರ್ಯಬಟ್ಟು ಮಂತ್ರದ ಮಹಿಮೆಯು ಇಷ್ಟು ಅಗಾಧವಾದುದೇ ಎಂದು, ಇನ್ನು ಮೇಲೆ ನಾನೂ ನಿನ್ನಂತೆ ಉಪದೇಶವನ್ನು ಹೊಂದುವೆನೆಂದು ಗಾರ್ಗ್ಯಮುನಿಯ ಕಡೆಗೆ ಹೋಗಿ ಅವನಿಂದ ಮಂತ್ರೋಪದೇಶವನ್ನು ಹೊಂದಿದನು. ಹೀಗೆ ಉಪದೇಶವನ್ನು ಹೊಂದಲಾಗಿ ಅವನಲ್ಲಿದ್ದ ಪಾಪಗಳು ಕಾಗೆಗಳ ರೂಪಾಗಿ ಹಾರಿ ಹೋದವು. ಅಂದಿನಿಂದ ಅವನ ದೇಹವು ಪರಿಶುದ್ಧವೂ ಪವಿತ್ರವೂ ಆಯಿತು. ಹೀಗಾಗಲು ಅವನು ತನ್ನ ಹೆಂಡತಿಗೆ— ನೀನು ನನಗೆ ಧರ್ಮಾಚರಣೆಯನ್ನು ಕೊಟ್ಟು ಪುನೀತನನ್ನಾಗಿ ಮಾಡಿದೆ, ಎಂದು ಅವಳನ್ನು ಸ್ತುತಿಸುವವನಾದನು. ಮುಂದೆ ಉಭಯತಲು ಪಂಚಾಕ್ಷರೀ ಮಂತ್ರಸ್ಮರಣೆಯಿಂದ ಪರಿಶುದ್ಧರಾಗಿ ಅದಕ್ಕನುಸರಿಸಿ ಆಚರಿಸುತ್ತ ಕೈಲಾಸಕ್ಕೆ ಹೋದರು. ಇದರಿಂದ ಕಲಾವತಿಯು ಮಧುರಾ ಪಟ್ಟಣ ಮತ್ತು ಕಾಶೀಕ್ಷೇತ್ರಗಳಲ್ಲಿ ಬಹು ಶ್ರೇಷ್ಠ ಶಿವಶರಣೆ ಎಂದು ಪ್ರಸಿದ್ಧಳಾಗಿದ್ದಾಳೆ. ಶಿವಶರಣರ ಚರಿತ್ರೆಗಳಲ್ಲಿ ಕಲಾವತಿಯ ಚರಿತ್ರೆಯು ತಪ್ಪದೆ ಬರುತ್ತದೆ.

# ಪರದೇಶಗಳಲ್ಲಿ ಶೈವ ಮತದ ಪ್ರಸಾರವು.

ಈವರೆಗೆ ನಾವು ಹಿಂದುಸ್ತಾನ ದೇಶದಲ್ಲಿಯ ಬೇರೆ ಬೇರೆ ಪ್ರಾಂತಗಳಲ್ಲಿ ಆಗಿ ಹೋದ ಶಿವಶರಣರ ಚರಿತ್ರೆಗಳನ್ನು ಉದಹರಿಸಿದೆವು. ಅವರ ಹೆಸರುಗಳು ವೀರಶೈವ ವಾಙ್ಮಯದಲ್ಲಿ ಆಗಿಂದಾಗ್ಗೆ ಬರುವವುಂಟು. ಅವುಗಳ ಮೇಲಿಂದ ಶೈವ ಮತವು ಒಂದು ಕಾಲದಲ್ಲಿ ಭರತಖಂಡವನ್ನೆಲ್ಲ ವ್ಯಾಪಿಸಿತ್ತೆಂದು ಕಂಡುಬರುತ್ತದೆ. ಪೂರ್ವಕಾಲದಲ್ಲಿ ಭರತಖಂಡ ಮತ್ತು ಅದಕ್ಕೆ ಸಮೀಪವರ್ತಿ ದೇಶಗಳಾದ ಸಿಂಹಲದ್ವೀಪವೂ ಜಾವಾ, ಬೋರ್ನಿಯೋ ಮೊದಲಾದ ಈಗಿನ ಇಂಡೋನೇಶಿಯದ ಭೂಭಾಗಗಳೂ ಅರಬಸ್ತಾನ ಪ್ಯಾಲೆಸ್ಟಾಯಿನ್ ಇಜಿಪ್ತ ಈ ದೇಶಗಳೂ ಇವುಗಳಲ್ಲಿ ಪರಸ್ಪರ ನಿಕಟ ಸಂಬಂಧವಿದ್ದು ಇಲ್ಲಿ ಶೈವ ಮತವು ಕೆಲವೊಂದು ಸ್ವರೂಪದಲ್ಲಿ ಅಸ್ತಿತ್ವದಲ್ಲಿತ್ತೆಂದು ಈಚಿಗಿನ ಶೋಧಗಳಿಂದ ಕಂಡುಬರುತ್ತಿದೆ. ಆದರೆ ಇದು ಸಾವಿರ ಎರಡು ಸಾವಿರ ವರ್ಷಗಳ ಮುಂಚಿತವಾದ ಕಾಲವು. ಆದ್ದರಿಂದ ಈ ವಿಷಯದ ಬಗ್ಗೆ ಅನೇಕ ದಂತಕಥೆಗಳುಂಟಾಗಿರುತ್ತವೆ. ಆದರೆ ಅವುಗಳನ್ನು ನಾವು ಸೂಕ್ಷ್ಮವಾಗಿ ನಿರೀಕ್ಷಿಸಿದಲ್ಲಿ ಶಿವಮತವು ಇಂಥ ದೂರ ದೇಶಗಳಲ್ಲಿ ಸಹ ಪ್ರಾದುರ್ಭವಿಸಿತ್ತೆಂದು ತಿಳಿಯಬರುತ್ತದೆ.

## ಸಿಂಹಲದ್ವೀಪ

ರೇಣುಕಃ— ಸಿಂಹಲದ್ವೀಪವು ಹಿಂದುಸ್ತಾನಕ್ಕೆ ತೀರ ಸಮೀಪವರ್ತಿಯಾದ ದೇಶವು. ಈಗ ಇಲ್ಲಿ ಬೌದ್ಧ ಧರ್ಮವು ಅಸ್ತಿತ್ವದಲ್ಲಿದೆ. ಆದರೂ ಒಂದು ಕಾಲದಲ್ಲಿ ಅಲ್ಲಿ ಶೈವ ಮತವು ಪ್ರಾದುರ್ಭವಿಸಿತ್ತೆಂದು ತಿಳಿದುಬರುತ್ತದೆ. ರಾವಣನು ಶಿವಮತಕ್ಕೆ ಹೊಂದಿದವನು. ಅವನ ಮೂಲಕವೇ ಗೋಕರ್ಣ ಕ್ಷೇತ್ರದಲ್ಲಿ ಶಿವಲಿಂಗವು ಸ್ಥಾಪಿತವಾದುದು. ಮುಂದೆ ವಿಭೀಷಣನು ಅವನ ತರುವಾಯ, ರಾಜ್ಯವಾಳಹತ್ತಿದನು. ಅವನ ಕಾಲಕ್ಕೆ ಸಿಂಹಲ ದ್ವೀಪದಲ್ಲಿ ಶೈವ ಮತವು ಮತ್ತಿಷ್ಟು ವೃದ್ಧಿ ಪಟ್ಟಿತು. ಇದು ಕರ್ನಾಟಕ ದೇಶದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ರೇಣುಕನ ಮೂಲಕವೇ ಆಯಿತೆಂದು ರೇಣುಕನ ಚರಿತ್ರೆಯಿಂದ ತಿಳಿದು ಬರುತ್ತದೆ. ಈ ಮಹಾನುಭಾವನ ಚರಿತ್ರೆಯನ್ನು ವಿವರಿಸುವ ಅನೇಕ ಗ್ರಂಥಗಳು ವೀರಶೈವ ವಾಙ್ಮಯದಲ್ಲಿ ಉಪಲಬ್ಧವಿವೆ. ಅವುಗಳಿಂದ ಕೆಳಗೆ ಕಾಣಿಸಿದ ಸಂಗತಿಗಳು ತಿಳಿದು ಬರುತ್ತಿವೆ.

ರೇಣುಕನ ಜನ್ಮಸ್ಥಾನವು ಆಂಧ್ರ ಮತ್ತು ಕರ್ನಾಟಕ ದೇಶಗಳ ಗಡಿಯಲ್ಲಿರುವ ಕೊಲ್ಲಿಪಾಕಿ ಅಥವಾ ಕೊಲನುಪಾಕಿ ಎಂಬುದಾಗಿದ್ದು ಇಲ್ಲಿ ಸೋಮೇಶ್ವರ ಲಿಂಗದ ಮಹತ್ವದ ದೇವಾಲಯವಿದೆ. ಅದರಲ್ಲಿಯ ಲಿಂಗದಲ್ಲಿ ರೇಣುಕನು ಪ್ರಾದುರ್ಭವಿಸಿದನು ಮುಂದೆ ಅವನು ಕರ್ನಾಟಕ ದೇಶಕ್ಕೆ ಬಂದು ಇಲ್ಲಿದ್ದ ಮಲಯ ಪರ್ವತದಲ್ಲಿ ವಾಸಿಸುವವನಾದನು. ಈಗ ಮೈಸೂರು ಸಂಸ್ಥಾನದಲ್ಲಿರುವ ಬಾಳೇಹಳ್ಳಿಯು ಇದೇ ಪ್ರದೇಶದಲ್ಲಿರುತ್ತದೆ. ಇಲ್ಲಿ ಅಗಸ್ತ್ಯ ಮಹಾಮುನಿಯು ಅನೇಕ ತಪಸ್ವಿಗಳೊಡನೆ ವಾಸಿಸುವವನಾಗಿದ್ದನು. ರೇಣುಕನು ಇಲ್ಲಿ ಇದ್ದಾಗ್ಗೆ ಅವನು ಅಗಸ್ತ್ಯಮುನಿಗೆ ಷಟ್‌ಸ್ಥಲ ಜ್ಞಾನವನ್ನುಂಟುಮಾಡಿಕೊಟ್ಟು ಅವನಿಗೆ ಲಿಂಗದೀಕ್ಷೆಯನ್ನಿತ್ತನು. ಆಮೇಲೆ ಉಭಯತರು ರಾಮೇಶ್ವರಕ್ಕೆ ಬಂದು ಅಲ್ಲಿ ಕೆಲಕಾಲವಿದ್ದರು. ಮುಂದೆ ರೇಣುಕನು ಕಂಚೀ ಪಟ್ಟಣಕ್ಕೆ ಬಂದು 'ಪಿಣ್ಯಾಕನ್ಯೆನಾರ' ಎಂಬ ಹೆಸರನ್ನು ಇಟ್ಟುಕೊಂಡು ಅಲ್ಲಿ ಅನೇಕ ಪವಾಡಗಳನ್ನು ನಡೆಯಿಸಿದನು. ಮುಂದೆ ಅವನು ಉತ್ತರ ಕರ್ನಾಟಕದಲ್ಲಿ ಅತಿ ಪ್ರಸಿದ್ಧ ಸ್ಥಳವಾದ ಮಂಗಳವಾಡದಲ್ಲಿ ಬಂದು ವಾಸಿಸುವವನಾದನು.

ಹೀಗೆ ಅವನು ಅಲ್ಲಿ ವಾಸಿಸುತ್ತಿರುವಾಗ ಸಿಂಹಲದ್ವಿಪಾಧಿಪತಿಯಾದ ವಿಭೀಷಣನು ಅವನನ್ನು ಕಂಡು ಅವನನ್ನು ತನ್ನ ದೇಶಕ್ಕೆ ಬರಮಾಡಿಕೊಂಡು ಅವನಿಂದ ಮೂರು ಕೋಟಿ ಶಿವಲಿಂಗಗಳನ್ನು ತನ್ನ ರಾಜ್ಯದಲ್ಲಿ ಸ್ಥಾಪಿಸಿದನು.

ಈ ಪ್ರಕಾರ ಸಿಂಹಲದ್ವಿಪದಲ್ಲಿ ಶಿವಮತವನ್ನು ದೃಢಪಡಿಸಿದ ಬಳಿಕ ರೇಣುಕನು ಈಗ ತುಮಕೂರು ಜಿಲ್ಲೆಯಲ್ಲಿರುವ ಕಕುದ್ಗಿರಿಗೆ ಬಂದು ಅಲ್ಲಿ ಋಷ್ಯಶೃಂಗ ಮುನಿಯನ್ನು ಕಂಡು ಅದರ ನೆರೆಯಲ್ಲಿರುವ ಕೂಷ್ಮಾಂಡ ಪರ್ವತಕ್ಕೆ ಬಂದನು. ಅಲ್ಲಿ ಕೆಲಕಾಲವಿದ್ದು ಅಲ್ಲಿಂದ ತುಂಗಭದ್ರಾ ನದೀ ತೀರದಲ್ಲಿದ್ದ ಪಂಪಾ ಕ್ಷೇತ್ರಕ್ಕೆ ಆಗಮಿಸಿದನು. ಅಲ್ಲಿ ಅವನು ವಿರೂಪಾಕ್ಷ ಸ್ವಾಮಿಯನ್ನು ಸಾಕ್ಷಾತ್ಕರಿಸಿಕೊಂಡನು. ಅವನು ವಾಸಮಾಡಿದ ಈ ಸ್ಥಳಗಳಲ್ಲೆಲ್ಲ ಅವನು ಶಿವಧರ್ಮವನ್ನು ನೆಲೆಗೊಳಿಸಿದನು.

ಆಮೇಲೆ ಅವನು ಶ್ರೀಶೈಲ ಕ್ಷೇತ್ರದಲ್ಲಿ ಅನೇಕ ಸಂವತ್ಸರ ಕಾಲ ಕಳೆದನು. ಮುಂದೆ ಕಾಶೀಕ್ಷೇತ್ರ, ಹಿಮಾಚಲ ಮೊದಲಾದ ಸ್ಥಳಗಳಲ್ಲಿ

ಧರ್ಮೋದ್ಧಾರ ಕಾರ್ಯಗಳನ್ನು ಮಾಡುತ್ತ ಕಡೆಗೆ ಕೊಲ್ಲಿಪಾಕಿಗೆ ಬಂದು ಅಲ್ಲಿಯ ಸೋಮನಾಥ ಲಿಂಗದಲ್ಲಿ ಐಕ್ಯ ಹೊಂದಿದನು. ಈ ಪ್ರಕಾರ ರೇಣುಕನ ಸಂಕ್ಷಿಪ್ತ ವೃತ್ತಾಂತವಿರುತ್ತದೆ.

ರೇಣುಕನ ತರುವಾಯ ೧೪೦೦ ವರ್ಷಗಳವರೆಗೆ ರೇವಣಸಿದ್ಧೇಶ್ವರನು ಬಿಜ್ಜಳನ ಕಾಲದಲ್ಲಿ ಪ್ರಸಿದ್ಧಿಗೆ ಬಂದನು. ಈ ಮಹಾಪುರುಷನು ಮಾಡಿದ ಧರ್ಮೋದ್ಧಾರ ಕಾರ್ಯಗಳು ರೇಣುಕನು ನಡಿಸಿದ ಕಾರ್ಯಗಳಿಗೆ ಬಹಳ ಹೋಲುವದರಿಂದಲೂ ಅವರಿದ್ದ ಅನೇಕ ಸ್ಥಳಗಳು ಕೂಡ ಒಂದೇ ಇರುವದರಿಂದಲೂ ರೇಣುಕನೇ ೧೪೦೦ ವರ್ಷಗಳ ತರುವಾಯ ರೇವಣಸಿದ್ಧೇಶ್ವರನೆಂಬ ಹೆಸರಿನಿಂದ ಪ್ರಾದುರ್ಭವಿಸಿದನೆಂದು ವೀರಶೈವ ಗ್ರಂಥಗಳಲ್ಲಿ ಉಲ್ಲೇಖಗಳಿರುತ್ತವೆ. ಆದರೆ ಐತಿಹಾಸಿಕ ದೃಷ್ಟಿಯಿಂದ ವಿಚಾರ ಮಾಡಲಾಗಿ ರೇಣುಕನು ಪುರಾತನ ಕಾಲದಲ್ಲಿ ಅಗಸ್ತ್ಯ ನಂತೆ ಶಿವಮತವನ್ನು ಹಿಂದುಸ್ತಾನದಲ್ಲಿಯೂ ನೆರೆ ದೇಶವಾದ ಸಿಂಹಲ ದ್ವೀಪದಲ್ಲಿಯೂ ಪ್ರಸ್ಥಾಪಿಸಿದನೆಂದು ತಿಳಿಯಲು ಯಾವ ಪ್ರತ್ಯವಾಯವೂ ತೋರುವದಿಲ್ಲ.

## ಇಂಡೋನೇಶಿಯಾ

ಅಗಸ್ತ್ಯ:— ಬ್ರಹ್ಮದೇಶ, ಸಯಾಮ ಮತ್ತು ಇಂಡೋಚಾಯನಾ ಈ ದೇಶಗಳು ಸಮೀಪವಾಗಿದ್ದು ಅವುಗಳ ದಕ್ಷಿಣಕ್ಕೆ ಆಸ್ಟ್ರೇಲಿಯಾ ಈ ದೇಶವು ಇದ್ದು ಇವುಗಳ ಮಧ್ಯದಲ್ಲಿ ಸಣ್ಣದೊಡ್ಡ ಅಸಂಖ್ಯ ದ್ವೀಪಗಳು ಪಸರಿಸಿರುತ್ತವೆ. ಇವುಗಳಿಗೆಲ್ಲ ಈಗ ಇಂಡೋನೇಶಿಯಾ ಎಂಬ ಹೆಸರು ಪ್ರಾಪ್ತವಾಗಿದೆ. ಇವುಗಳಲ್ಲಿ ಸುಮಾತ್ರಾ, ಜಾವಾ, ಬೋರ್ನಿಯೋ ಕಾಂಬೋಡಿಯಾ ಇವುಗಳು ಬಹು ಮಹತ್ವವಾದವುಗಳು. ಈಗ ಅಲ್ಲಿ ಮಹಮ್ಮದೀಯ ಧರ್ಮವು ಪ್ರಚಲಿತವಿದೆ. ಆದರೂ ೩-೪ ಶತಮಾನಗಳ ಹಿಂದೆ ಅಲ್ಲಿ ಶೈವ ಧರ್ಮವು ಪ್ರಬಲ ಸ್ಥಿತಿಯಲ್ಲಿತ್ತು. ಜಾವಾ ದ್ವೀಪದಲ್ಲಿರುವಷ್ಟು ಸುಂದರವಾದ ಶಿವ ದೇವಾಲಯಗಳು ಹಿಂದುಸ್ತಾನದಲ್ಲಿಯೂ ಕೂಡ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು .

ಈ ದ್ವೀಪಗಳಲ್ಲಿ ಶಿವಮತವನ್ನು ನೆಲೆಗೊಳಿಸಿದವನು ಅಗಸ್ತ್ಯ ಋಷಿಯೇ ಇದ್ದಾನೆ. ವೀರಶೈವ ಪುರಾಣಗಳಲ್ಲಿ ಮತ್ತು ಕಾವ್ಯಗಳಲ್ಲಿ ಅಗಸ್ತ್ಯ ಋಷಿಯ ಉಲ್ಲೇಖಗಳು ಆಗಿಂದಾಗ್ಗೆ ಬರುತ್ತಿದ್ದು ಅವನು ಅವುಗಳಲ್ಲಿ ಶೈವ ಋಷಿ ಎಂದು ಹೊಗಳಲ್ಪಟ್ಟಿರುತ್ತಾನೆ. ಅವನಿಗೆ ಷಟ್ ಸ್ಥಲ ಜ್ಞಾನವನ್ನು ಉಪದೇಶ ಮಾಡಿದವನು ರೇಣುಕನೆಂದು ಅವುಗಳಲ್ಲಿ ಹೇಳಲ್ಪಟ್ಟಿದ್ದು ಅಗಸ್ತ್ಯನಿಗೂ ವೀರಶೈವ ಇತಿಹಾಸಕ್ಕೂ ನಿಕಟ ಸಂಬಂಧವಿರುತ್ತದೆ.

ಅಗಸ್ತ್ಯನು ಕಾಶೀಪಟ್ಟಣ ವಾಸಿಯು. ಅವನು ಕೇವಲ ಶಿವಭಕ್ತನಾಗಿ ಶಿವಲಿಂಗಗಳನ್ನೇ ಯಾವಾಗಲೂ ಪೂಜಿಸುತ್ತಿದ್ದನು. ಆದರೆ ಅವನು ಬಹಳ ದಿವಸ ಉತ್ತರ ಹಿಂದುಸ್ತಾನದಲ್ಲಿದ್ದುದು ಕಂಡು ಬರುವದಿಲ್ಲ. ಅವನು ವಿಂಧ್ಯಾಟವಿಯನ್ನು ದಾಟಿ ದಕ್ಷಿಣಾಪಥದಲ್ಲಿ ಬಂದು ಇರಹತ್ತಿದನು. ಅವನು ರಾಮಚಂದ್ರನು ವಾಸಮಾಡಿಕೊಂಡಿದ್ದ ನಾಸಿಕ ಕ್ಷೇತ್ರಕ್ಕೆ ಸಮೀಪವಿರುವ ತ್ರ್ಯಂಬಕೇಶ್ವರಕ್ಕೆ ಬಂದು ಅಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿದನು ನಾಸಿಕ ಕ್ಷೇತ್ರವು ಅಗಸ್ತ್ಯಾಶ್ರಮವಿದ್ದ ಸ್ಥಾನವೆಂದು ಈಗಲೂ ಅದರ ಪ್ರಸಿದ್ಧಿ ಇದೆ.

ಇಲ್ಲಿ ಅಗಸ್ತ್ಯನು ಕೆಲಕಾಲವಿದ್ದು ಮುಂದೆ ಅವನು ದಕ್ಷಿಣಕ್ಕೆ ತೆರಳಿ ಬದಾಮಿ ಹತ್ತಿರವಿದ್ದ ಮಹಾಕೂಟ ಕ್ಷೇತ್ರಕ್ಕೆ ಬಂದು ಅಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿದನು. ಅವನು ಅಲ್ಲಿರುವಾಗ ಅವನು ರಾಕ್ಷಸರೊಡನೆ ಯುದ್ಧ ಮಾಡುವ ಪ್ರಸಂಗವು ಬಂದೊದಗಿತು. ವಾತಾಪಿಪುರ ಅಂದರೆ ಈಗಿನ ಬದಾಮಿಯಲ್ಲಿ ವಾತಾಪಿ ಎಂಬ ರಾಕ್ಷಸನೂ ಐಹೊಳೆಯಲ್ಲಿ ಇಲ್ವಲನೆಂಬ ರಾಕ್ಷಸನೂ ಇಬ್ಬರೂ ಬಂಧುಗಳಾಗಿ ಅಲ್ಲಿ ರಾಜ್ಯವಾಳುತ್ತಿದ್ದರು. ಅಗಸ್ತ್ಯನು ಅವರೊಡನೆ ಯುದ್ಧ ಮಾಡಿ ಅವರನ್ನು ಸಂಹರಿಸಿದನು. ಅವನು ಮಹಾಕೂಟವಿದ್ದಲ್ಲಿ ಆಶ್ರಮವನ್ನು ಸ್ಥಾಪಿಸಿದ್ದರಿಂದ ಈ ಸ್ಥಳವು ದೊಡ್ಡ ಕ್ಷೇತ್ರವೆಂದೆನಿಸಿಕೊಂಡಿತು. ಅದು ಈಗಲೂ ದಕ್ಷಿಣ ಕಾಶಿ ಎಂದೆನಿಸಿಕೊಂಡಿರುತ್ತದೆ.

ಆಮೇಲೆ ಅಗಸ್ತ್ಯನು ದಕ್ಷಿಣ ದೇಶಕ್ಕೆ ತೆರಳಿ ಅತ್ರಿ, ಭೃಗು ಮೊದಲಾದ ತಾಪಸರಿದ್ದ ಮಲಯ ಪರ್ವತಕ್ಕೆ ಬಂದನು. ಈಗ ಬಾಳೇಹಳ್ಳಿ ಗ್ರಾಮವಿದ್ದ ಸ್ಥಳಕ್ಕೆ ಮಲಯ ಪರ್ವತವೆಂಬ ಹೆಸರು ಪುರಾತನ

ಕಾಲದಲ್ಲಿ ಉಂಟಾಗಿತ್ತು. ಅಲ್ಲಿ ಅಗಸ್ತ್ಯನು ಇದ್ದ ಕಾಲದಲ್ಲಿ ರೇಣುಕನು ಇಲ್ಲಿಗೆ ಆಗಮಿಸಿ ಅವನಿಗೆ ಷಟ್‌ಸ್ಥಲ ಮಾರ್ಗವನ್ನು ಉಪದೇಶಿಸಿ ಅವನಿಗೆ ಲಿಂಗಧಾರಣೆಯನ್ನು ಮಾಡಿದನು. ಅಂದಿನಿಂದ ಉಭಯತರು ಕೂಡಿಕೊಂಡು ದೇಶದಲ್ಲಿ ಶಿವಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿದವರಾದರು.

ಉಭಯತರು ಮುಂದೆ ರಾಮೇಶ್ವರಕ್ಕೆ ಬಂದು ಅಲ್ಲಿ ಕೆಲಕಾಲ ಇದ್ದರು. ಆಮೇಲೆ ರೇಣುಕನು ಚೋಳ ರಾಜ್ಯಕ್ಕೂ ಅಗಸ್ತ್ಯನು ಪಾಂಡ್ಯ ರಾಜ್ಯಕ್ಕೂ ಬಂದರು. ಅಗಸ್ತ್ಯನು ಪಾಂಡ್ಯ ರಾಜ್ಯದಲ್ಲಿ ಇದ್ದಾಗ್ಗೆ ಅಲ್ಲಿಯ ರಾಜನು ಅವನನ್ನು ತನ್ನ ಗುರುವಾಗಿ ಮಾಡಿಕೊಂಡನು. ತಮಿಳು ದೇಶದಲ್ಲಿ ಶಿವಧರ್ಮವು ಮೊದಲು ಪ್ರಸಾರ ಹೊಂದಿದ್ದು ಇವನಿಂದಲೇ ಎಂದು ದ್ರಾವಿಡರು ತಿಳಿಯುತ್ತಾರೆ. ತಮಿಳು ಭಾಷೆಯಲ್ಲಿ ವ್ಯಾಕರಣವನ್ನು ಮೊದಲು ರಚಿಸಿದವನು ಅಗಸ್ತ್ಯನು. ಅವನು ಮಾಡಿದ ವ್ಯಾಕರಣಕ್ಕೆ 'ಅಗತ್ತಿಯಂ' ಎಂಬ ಹೆಸರಿದೆ. ಇವನು ದೇವಾಲಯ ರಚನೆಯ ವಿಷಯವಾಗಿಯೂ ಒಂದು ಗ್ರಂಥವನ್ನು ರಚಿಸಿದನು. ಇದಕ್ಕೆ 'ಅಗಸ್ತೀಯ ಸಕಲಾಧಿಕಾರ' ಎಂಬ ಹೆಸರಿದೆ. ಹೀಗೆ ಅಗಸ್ತ್ಯನು ದ್ರಾವಿಡ ಸಂಸ್ಕೃತಿಯ ಉತ್ಪಾದಕನೆಂದು ಅಲ್ಲಿಯ ಪಂಡಿತರು ಈಗಲೂ ತಿಳಿಯುವದುಂಟು.

ಅಗಸ್ತ್ಯನು ದ್ರಾವಿಡ ದೇಶದಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದನು. ಕನ್ಯಾಕುಮಾರಿಯ ಹತ್ತಿರ 'ಪೋಥೀಯ' ಎಂಬ ಹೆಸರಿನ ಬೆಟ್ಟವು ಇದೆ. ಇಲ್ಲಿ ಅಗಸ್ತ್ಯನು ಅದೃಶ್ಯ ರೂಪನಾಗಿ ಇನ್ನೂ ವಾಸಿಸುತ್ತಾನೆಂದು ದ್ರಾವಿಡರು ತಿಳಿಯುತ್ತಾರೆ.

ಅಗಸ್ತ್ಯನು ಹೀಗೆ ದಕ್ಷಿಣ ದೇಶದಲ್ಲಿ ಮಹತ್ತಾದ ಧಾರ್ಮಿಕ ಕ್ರಾಂತಿಯನ್ನು ಮಾಡಿದ ಕಾರಣ ಅವನು ಈ ಭಾಗದಲ್ಲಿ ಭಕ್ತಿಯಿಂದ ಪೂಜಿಸಲ್ಪಡುತ್ತಾನೆ. ಅವನ ಹೆಸರಿನ ಅನೇಕ ದೇವಾಲಯಗಳು ಅಲ್ಲಿ ಇವೆ. ಇವುಗಳಲ್ಲಿ ನಡೆಯತಕ್ಕ ಪೂಜೆಯ ಕ್ರಮಗಳು ಸ್ಕಂದಪುರಾಣ ಮತ್ತು ಅಗ್ನಿಪುರಾಣ ಇವುಗಳಲ್ಲಿ ಉಲ್ಲೇಖವಾಗಿವೆ. ಅವನ ಸಂಬಂಧದ ಮಂತ್ರಗಳೂ ಇವೆ. ಇವುಗಳಲ್ಲೊಂದರ ಅರ್ಥವು ಏನೆಂದರೆ :—

" ಎಲೋ ಕುಂಭಯೋಗಿಯಾದ ನಿನಗೆ ನಮಸ್ಕಾರವು. ನೀನು ಮಿತ್ರಾವರುಣರ ಮಗನಾಗಿ 'ಕಾಶ' ಹೂವಿಗಿಂತ ಶುಭ್ರವಾಗಿರುವಿ. ಆತಾಪಿ ವಾತಾಪಿಗಳನ್ನು ಸಂಹರಿಸಿದಂಥವನೂ ಸಮುದ್ರವನ್ನು ಕುಡಿದಂಥವನೂ ಆದ ಎಲೋ ಅಗಸ್ತ್ಯನೇ ನಿನ್ನನ್ನು ನಾನು ಆಹ್ವಾನಿಸುತ್ತೇನೆ "

ಇವನ ವಾಸಸ್ಥಾನವು ಪೋಧೀಯುಬೆಟ್ಟದಲ್ಲಿರುವಂತೆ ಪೂರ್ವ ಸಮುದ್ರದ ಆಗ್ನೇಯಮೂಲೆಯಲ್ಲಿರುವ 'ವೇದಾರಣ್ಯ' ಎಂಬಸ್ಥಳದಲ್ಲಿಯೂ ಇದ್ದು ಅಲ್ಲಿಯೂ ಅವನು ಸದಾ ವಾಸಿಸುತ್ತಾನೆಂದು ಜನರು ಭಾವಿಸಿ ಅವರು ಅವನನ್ನು ಪೂಜಿಸುತ್ತಾರೆ.

ಈ ಪ್ರಕಾರ ಅಗಸ್ತ್ಯನು ಶಿವಧರ್ಮವನ್ನು ದಕ್ಷಿಣ ಹಿಂದುಸ್ಥಾನದಲ್ಲಿ ನೆಲೆಗೊಳಿಸಿದ ಬಳಿಕ ಸಮುದ್ರವನ್ನು ದಾಟಿ ಪರದೇಶಗಳಲ್ಲಿಯೂ ಅದನ್ನು ಸ್ಥಾಪಿಸಲು ಉದ್ಯುಕ್ತನಾದನು.

ವಾಯು ಪುರಾಣ ಅಧ್ಯಾಯ ೪೮ ಇದರಲ್ಲಿ ಅವನು ಕೆಳಗೆ ಕಾಣಿಸಿದ ದ್ವೀಪಗಳಿಗೆ ಹೋದಂತೆ ಉಲ್ಲೇಖವಿದೆ. ಅವು ಯಾವವೆಂದರೆ:— ಬರ್ಹಿಣದ್ವೀಪ ಎಂದರೆ ಬೋರ್ನಿಯೋ, ಕುಶದ್ವೀಪ, ವರಾಹದ್ವೀಪ, ಶಾಖ್ಯದ್ವೀಪ, ಎಂಬವುಗಳು ಇರುತ್ತವೆ.

ಅವನು ಸಮುದ್ರವನ್ನು ದಾಟಿ ಕಾಂಬೋಡಿಯಾ ಎಂಬ ದೇಶಕ್ಕೆ ಹೋದದ್ದರ ಉಲ್ಲೇಖಗಳು ಇಲ್ಲಿಯ ಅನೇಕ ಶಾಸನಗಳಲ್ಲಿ ದೊರೆಯುತ್ತವೆ. ಈ ದೇಶದಲ್ಲಿ ಅಂಕೋರವಾಟ ಎಂಬ ಸ್ಥಳದಲ್ಲಿ ಈ ಶಾಸನಗಳಿರುತ್ತವೆ ಆ ಶಾಸನ ಒಂದರಲ್ಲಿ — " ಆರ್ಯದೇಶಲ್ಲಿ ಹುಟ್ಟಿದಂಥ ಬ್ರಾಹ್ಮಣನಾದ ಅಗಸ್ತ್ಯನು ಶಿವಪೂಜೆಯಲ್ಲಿ ನಿರತನಾಗಿ ತನ್ನ ಅಲೌಕಿಕ ಶಕ್ತಿಯಿಂದ ಕಾಂಬೋಡಿಯಾ ದೇಶಕ್ಕೆ ಬಂದು ಶ್ರೀ ಭದ್ರೇಶ್ವರನೆಂಬ ಶಿವಲಿಂಗವನ್ನು ಪೂಜಿಸಿದನು. ಮತ್ತು ಆ ದೇವರನ್ನು ಅವನು ಬಹು ದಿವಸ ಪೂಜಿಸಿ ಮೋಕ್ಷವನ್ನೈದಿದನು " ಎಂದು ಹೇಳಿದೆ.

ಅಗಸ್ತ್ಯನು ಈ ಪ್ರದೇಶದಲ್ಲಿದ್ದಾಗ್ಗೆ ಅಲ್ಲಿಯ ಒಬ್ಬ ರಾಜಕನ್ನಿಕೆಯನ್ನು ಮದುವೆಯಾಗಿ ಒಂದು ರಾಜವಂಶವನ್ನು ಸ್ಥಾಪಿಸಿದನೆಂದು ಮತ್ತೊಂದು ಶಿಲಾಶಾಸನದಿಂದ ತಿಳಿದುಬರುತ್ತದೆ. ಆ ಶಿಲಾಲೇಖದಲ್ಲಿ

ಹೇಳಿರುವದೇನೆಂದರೆ:— "ಆರ್ಯಾವರ್ತದೇಶದಿಂದ ಬಂದಂಥ ಮತ್ತು ವೇದ ಗಳಲ್ಲಿ ಪಾರಂಗತನಾದಂಥ ಅಗಸ್ತ್ಯನೆಂಬ ಹೆಸರಿನಿಂದ ಪ್ರಸಿದ್ಧನಾದಂಥ ಬ್ರಾಹ್ಮಣನು 'ಮಹಿಸಿದ್ಧ' ಮನೆತನಕ್ಕೆ ಹೊಂದಿದ ಯಶೋವತಿ ಎಂಬ ಕನ್ಯೆಯನ್ನು ಮದುವೆಯಾದನು. ಮತ್ತು ಆಕೆಯಿಂದ ನರೇಂದ್ರವರ್ಮ ನೆಂಬ ಎಂಬ ಮಗನನ್ನು ಪಡೆದನು. ಎಂದು ಬರೆದಿದೆ. ಈ ಸಂಗತಿಯು ಬೇರೆ ಅನೇಕ ಶಿಲಾಶಾಸನಗಳಲ್ಲಿರುವದು ಕಂಡು ಬಂದಿದೆ. ಕಾಂಬೋಡಿಯಾ ದೇಶದಲ್ಲಿ ಸುಂದರವಾದ ಅಸಂಖ್ಯ ದೇವಾಲಯಗಳು ಈಗಲೂ ಇದ್ದು ಅವುಗಳನ್ನು ಈ ರಾಜವಂಶಕ್ಕೆ ಸಂಬಂಧಿಸಿದ ರಾಜರೇ ಕಟ್ಟಿ ಸಿದ್ದಾರೆ.

ಕಾಂಬೋಡಿಯಾ ದೇಶದಂತೆಯೇ 'ಶ್ಯಾಮ' ದೇಶ ಎಂದರೆ ಸಿಯಾಮ ಪ್ರಾಂತದಲ್ಲಿಯೂ ಶಿವಾಲಯಗಳು ಈಗಲೂ ಇರುತ್ತವೆ. ಇವು ಗಳು ದಕ್ಷಿಣ ಹಿಂದುಸ್ತಾನದಲ್ಲಿರುವ ಶಿವಾಲಯಗಳಂತೆಯೇ ಇರುತ್ತವೆ. ಇದರಿಂದ ಈ ದೇಶದಲ್ಲಿದ್ದ ಶೈವಧರ್ಮವು ಹಿಂದುಸ್ತಾನದಿಂದಲೇ ಬಂದಿ ತೆಂದು ನಿರ್ವಿವಾದವಾಗಿ ಹೇಳಬಹುದು.

ಮಧ್ಯ ಜಾವಾದಲ್ಲಿ ದಕ್ಷಿಣ 'ಕೋಡೋ' ಎಂಬ ಹೆಸರಿನ ಪಟ್ಟಣ ವಿದ್ದು ಕ್ರಿ ಶಕ ೭೩೨ ಇಸ್ವಿಯ ಒಂದು ಸಂಸ್ಕೃತ ಶಿಲಾಶಾಸನವು ದೊರೆತಿದೆ. ಇದರಲ್ಲಿ ಈ ನಡುಗಡ್ಡೆಯನ್ನು ವಶಾಹತ್ತು ಮಾಡಿದವನು ಸಂಜಯನೆಂಬ ರಾಜನೆಂದು ಹೇಳಿದೆ. ಅದರಲ್ಲಿರುವ ವರ್ಣನೆ ಏನೆಂ ದರೆ—"ಜಾವಾ ಎಂಬ ಹೆಸರಿನ ಅತ್ಯುತ್ತಮ ದ್ವೀಪವು ಇಲ್ಲಿ ಇದೆ. ಇಲ್ಲಿ ಬಂಗಾರದ ಕಣಗಳು ಇವೆ. ಅಕ್ಕಿ ಮೊದಲಾದ ಧಾನ್ಯಗಳು ಹೇರಳವಾಗಿ ಬೆಳೆಯುತ್ತವೆ. ಈ ದ್ವೀಪದಲ್ಲಿ ಒಂದು ಸುಂದರವಾದ ಮತ್ತು ಅದ್ಭುತವಾದ ಶಿವಾಲಯವು ಇದ್ದು ಈ ಶಿವಾಲಯದಲ್ಲಿಯ ಮೂರ್ತಿಯನ್ನು ಪುಣ್ಯ ಭೂಮಿಯಾದ 'ಕುಂಜರಕುಂಜ' ದೇಶದ ಜನರು ಸ್ಥಾಪಿಸಿದರು"

ಈ ಕುಂಜರಕುಂಜ ದೇಶವು ದಕ್ಷಿಣ ಹಿಂದುಸ್ತಾನದಲ್ಲಿಯೇ ಇದ್ದಿರ ಲಿಕ್ಕೆ ಬೇಕು. ಕುಂಜರಕುಂಜ ಈ ದೇಶವು ಈಗಿನ ಆನೆಗೊಂದಿಯಾಗಿರ ಬಹುದು. ಹದಿಮೂರನೇ ಶತಮಾನದ ಕೆಲ ಶಿಲಾ ಶಾಸನಗಳಲ್ಲಿ ಕುಂಜರಕೋಣ' ಎಂಬ ದೇಶದ ಉಲ್ಲೇಖವಿದ್ದು, ಅವುಗಳಿಂದ ಈ

ಪ್ರದೇಶವು ಹಂಪಿಯ ಉತ್ತರಕ್ಕೆ ತುಂಗಭದ್ರಾ ನದೀ ತೀರದಲ್ಲಿರಬೇಕೆಂದು ತಿಳಿದುಬರುತ್ತದೆ. ಹರಿವಂಶದಲ್ಲಿ 'ಅಗಸ್ತ್ಯನ ಶುಭಕರವಾದ ಆಶ್ರಮವು ಕುಂಜರ ಪರ್ವತದಲ್ಲಿ ಇತ್ತು ಎಂದು ಬರೆದಿದೆ. ಇದರಿಂದ ಪಂಪಾಕ್ಷೇತ್ರದಲ್ಲಿ ಅಗಸ್ತ್ಯಾಶ್ರಮವು ಇದ್ದುದು ತಿಳಿದುಬರುತ್ತದೆ. ಇಲ್ಲಿಯೇ ಅವನು ವಾಸಿಸುತ್ತಿರುವಾಗ ಕರ್ನಾಟಕಸ್ತರು ಸಮುದ್ರ ಮಾರ್ಗವಾಗಿ ಅಗಸ್ತ್ಯನೊಡನೆ ಜಾವಾದ್ವೀಪಕ್ಕೆ ಹೋಗಿ ಅಲ್ಲಿ ಶಿವಾಲಯವನ್ನು ಸ್ಥಾಪಿಸಿರಬಹುದೆಂಬ ಅನುಮಾನವು ಉಂಟಾಗುತ್ತದೆ.

ಈ ಮೇರೆಗೆ ಅಗಸ್ತ್ಯನು ಜಾವಾ ಮತ್ತು ಅದರ ನೆರೆಯ ದ್ವೀಪಗಳಲ್ಲಿ ಶಿವಧರ್ಮವನ್ನು ನೆಲೆಗೊಳಿಸಿ ಶಿವಾಲಯಗಳನ್ನು ಸ್ಥಾಪಿಸಿ ಧರ್ಮೋದ್ಧಾರ ಕಾರ್ಯ ಮಾಡಿದ್ದರಿಂದ ಸ್ವಾಭಾವಿಕವಾಗಿ ಅಲ್ಲಿಯ ಜನರು ಅವನಿಗೆ ದೇವಾವತಾರನೆಂದು ತಿಳಿಯುತ್ತಿದರು. ಪೂರ್ವ ಜಾವಾ ದ್ವೀಪದಲ್ಲಿ 'ದಿನಯ' ವೆಂಬ ಗ್ರಾಮವಿದೆ. ಅಲ್ಲಿ ಕ್ರಿ. ಶಕ ೭೬೦ ನೇ ಇಸ್ವಿಯ ಒಂದು ಶಿಲಾಲೇಖವಿದ್ದು ಅದರಲ್ಲಿ ಅಗಸ್ತ್ಯನ ಹೆಸರಿನಿಂದ ಒಂದು ಮೂರ್ತಿಯು ಮಾಡಲ್ಪಟ್ಟಿದೆಂಬ ಉಲ್ಲೇಖವಿದೆ. ಅಗಸ್ತ್ಯಮುನಿಗೆ ಈ ಪ್ರಾಂತದಲ್ಲಿ 'ಶಿವಗುರು' ಅಥವಾ 'ಭಟ್ಟಾರಕ ಗುರು' ಎಂಬ ಹೆಸರುಗಳು ಇರುತ್ತವೆ.

ಈ ಎಲ್ಲ ಸಂಗತಿಗಳಿಂದ ಅಗಸ್ತ್ಯನು ದಕ್ಷಿಣಹಿಂದುಸ್ಥಾನದಲ್ಲಿ ಶಿವಧರ್ಮವನ್ನು ನೆಲೆಗೊಳಿಸಿದ ಬಳಿಕ ಪರದೇಶಗಳಿಗೆ ಸಹ ಹೋಗಿ ಅಲ್ಲಿಯೂ ಅದನ್ನು ಪ್ರಕಾಶಗೊಳಿಸಿದನೆಂಬುದು ಸ್ಪಷ್ಟವಾಗುತ್ತದೆ.

ಬಹು ಪುರಾತನ ಕಾಲದಲ್ಲಿ ದಕ್ಷಿಣದೇಶದಲ್ಲಿ ಶೈವಧರ್ಮವು ಪ್ರಸಾರ ಹೊಂದಿದ ಹಾಗೆ ತೋರುತ್ತದೆ. ಅದು ಅಲ್ಲಿ ವೈಭವ ಸ್ಥಿತಿಯನ್ನು ಹೊಂದಿರಬೇಕು. ಅದು ಬಹು ದಿವಸಗಳವರೆಗೆ ಈ ದ್ವೀಪಾಂತರಗಳಲ್ಲಿ ಪ್ರಚಲಿತವಿದ್ದು ಮುಂದೆ ಮುಹಮ್ಮದೀ ಧರ್ಮವು ಅದರ ಸ್ಥಾನದಲ್ಲಿ ಪ್ರಸಾರಹೊಂದಿತು, ಅದು ಈಗಲೂ ಅಲ್ಲಿ ಇದೆ. ಆದರೆ ಈ ಮುಸಲ್ಮಾನರ ಮೇಲೆಯೂ ಹಿಂದೂ ಸಂಸ್ಕೃತಿಯು ಪರಿಣಾಮ ಮಾಡಿದ್ದು ಕಂಡುಬರುತ್ತದೆ ಅಲ್ಲಿಯ ಜನರು ಮುಸಲ್ಮಾನರು ಇದ್ದು ಅವರು ಈಗಲೂ 'ಸುಕರ್ಣ' 'ಸುದರ್ಶನ ಎಂಬ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ

ಸುಕರ್ಣ ಇದು ಈಗಿನ ಇಂಡೋನೇಶಿಯಾದ ಅಧ್ಯಕ್ಷನ ಹೆಸರು. ಅಲ್ಲಿಯ್ಕೆ ಮುಸಲ್ಮಾನರು 'ನೀಲಕಂಠ' 'ಶಿವ' ಎಂಬ ಹೆಸರುಗಳಿಂದ ಪರಮಾತ್ಮನನ್ನು ಭಜಿಸುವದೂ ಉಂಟು.

ಅಗಸ್ತ್ಯಮುನಿಯು ನಿರಾತಂಕವಾಗಿ ಸಮುದ್ರವನ್ನು ದಾಟಿ ಪರದೇಶಗಳಿಗೆ ಹೋದವನಾದ್ದರಿಂದ ಆವನು ಸಮುದ್ರವನ್ನು ಕುಡಿದುಬಿಟ್ಟನೆಂಬ ಆಖ್ಯಾಯಿಕೆಯು ಉಂಟಾಗಿರಬಹುದು.

ಈ ಚರಿತ್ರೆಯನ್ನು ನಾವು ಮಿ|| ಓ. ಸಿ. ಗಂಗೋಳಿ ಎಂಬ ಪ್ರಸಿದ್ಧ ಬಂಗಾಲೀ ಪಂಡಿತರು 'ರೂಪಂ' ಎಂಬ ಹೆಸರಿನ ಬಂಗಾಲೀ ಭಾಷೆಯಲ್ಲಿ ಹೊರಡುವ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ ಒಂದು ಮಹತ್ವದ ಲೇಖವನ್ನು ಆಧಾರವಾಗಿಟ್ಟುಕೊಂಡು ಬರೆದದ್ದಾಗಿದೆ. ಈ ಲೇಖವು ಮಹಾಕವಿಗಳಾದ ಸರ್ ರವೀಂದ್ರನಾಥ ಟಗೋರ ಇವರ ನಿವರ್ಶನದಲ್ಲಿ ಪ್ರಕಟವಾಗುತ್ತಲಿದ್ದ "ವಿಶ್ವಭಾರತಿ" ಎಂಬ ಪತ್ರಿಕೆಯ ೧೯೨೬ನೇ ಜುಲೈ ಸಂಚಿಕೆಯಲ್ಲಿ ಕೊಡಲ್ಪಟ್ಟಿರುತ್ತದೆ.

---

## ಅರಬಸ್ತಾನದ ಮಕ್ಕೇಶ್ವರ.

ಹೇಗೆ ಹಿಂದುಸ್ತಾನ ದೇಶದ ಆಗ್ನೇಯ ದಿಕ್ಕಿಗಿರುವ ದೇಶಗಳಲ್ಲಿ ಶೈವ ಧರ್ಮದ ಕುರುಹುಗಳು ಇವೆಯೋ, ಹಾಗೆಯೇ ಪಶ್ಚಿಮ ದೇಶಗಳಾದ ಅರಬಸ್ತಾನ ಮೊದಲಾದವುಗಳಲ್ಲಿಯೂ ಕೂಡ ಇರುತ್ತವೆಂಬುವರ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಈ ದೇಶಗಳಲ್ಲಿ ಇಸ್ಲಾಮೀ ಧರ್ಮವು ಈಗ ಪೂರ್ಣವಾಗಿ ನೆಲಿಸಿದ್ದರೂ ಅವಕ್ಕೂ ಮೊದಲು ಇಲ್ಲಿ ಹಿಂದೂ ಸಂಸ್ಕೃತಿಯು ಪ್ರಾದುರ್ಭವಿಸಿತ್ತೆಂದು ತೋರಿಬರುತ್ತದೆ. ಪ್ರಸಿದ್ಧ ಇತಿಹಾಸಕಾರನಾದ ಎಡವರ್ಡ ಗಿಬ್ಬನ್ನ ಈತನು ತನ್ನ ರೋಮನ್ನ ಸಾಮ್ರಾಜ್ಯದ ಇತಿಹಾಸದ ೫೦ ನೇ ಅಧ್ಯಾಯದಲ್ಲಿ ಹೇಳಿರುವದೇನಂದರೆ — ಅರಬರ ಮೊದಲಿನ ಕಾಲದ ಧರ್ಮವು ಹಿಂದೂ ಜನರಂತೆಯೇ ಇತ್ತು. ಅವರು ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳನ್ನು ಪೂಜಿಸುತ್ತಿದ್ದರು. ಪ್ರಕಾಶಮಾನವಾದ ಈ ಗ್ರಹಗಳು ಪರಮಾತ್ಮನ ಪ್ರತ್ಯಕ್ಷರೂಪವೆಂದು ಇವರು ಭಾವಿಸುತ್ತಿದ್ದರು. ಸೃಷ್ಟಿಯು ಶಾಶ್ವತವಾದದ್ದು. ಅದಕ್ಕೆ

ಕೇಡಿಲ್ಲ, ಅದು ವ್ಯವಸ್ಥಿತವಾಗಿ ನಡಿಯುತ್ತದೆ. ಆದ್ದರಿಂದ ಅದರ ನಿಯಂತ್ರಕನಿಗೆ ಬುದ್ಧಿ ಎಂಬುದಿದೆ. ಅವರ ಪ್ರುಥ್ವಿಯಲ್ಲಿರುವವರನ್ನು ಕಾಯುತ್ತಾನೆ. ಎಂಬಿವೇ ಮೊದಲಾದ ಹಿಂದೂಜನರ ವಿಚಾರಗಳು ಅವರಲ್ಲಿದ್ದುದು ಕಂಡುಬರುತ್ತದೆ. ಅರಬರು ಖಗೋಲ ಮತ್ತು ಜ್ಯೋತಿಷ ಶಾಸ್ತ್ರಗಳನ್ನು ಸಹ ಹಿಂದೂ ಜನರಿಂದಲೇ ಕಲಿತುಕೊಂಡಿರಬಹುದೆಂದು ಅನುಮಾನವು ಉಂಟಾಗಲು ಪ್ರಬಲ ಕಾರಣಗಳಿವೆ.

ಆದರೆ ಅರಬಸ್ತಾನದಲ್ಲಿಯ ನಿವಾಸಿಗಳು ನಾಗರಿಕತೆಯಲ್ಲಿ ಮುಂದು ವರಿದವರಿರಲಿಲ್ಲ. ಮಕ್ಕಾಪಟ್ಟಣದಲ್ಲಿ ಲಿಂಗಾಕೃತಿಯುಳ್ಳ ಒಂದು ಪ್ರತಿಮೆ ಇದ್ದು, ಅದು ಇದ್ದ ದೇವಾಲಯವು ಅವರಿಗೆ ಪವಿತ್ರಸ್ಥಾನವಾಗಿದ್ದಿತು. ಅದರ ಇತಿಹಾಸವು ಕ್ರಿಸ್ತಶಕದ ಪೂರ್ವದಲ್ಲಿಯೇ ಪ್ರಾರಂಭವಾಗುತ್ತದೆ. ಅದರಲ್ಲಿ ಕಪ್ಪುಕಾಂತಿಯುಳ್ಳ ಒಂದು ಲಿಂಗ ಪ್ರತಿಮೆ ಇದ್ದು ಅದನ್ನು ಅರಬರು ಬಹು ಭಕ್ತಿಯಿಂದ ಪೂಜಿಸುತ್ತಿದ್ದರು. ಮೈಲಿಗೆ ಬಟ್ಟೆಯನ್ನು ಹೊದ್ದುಕೊಂಡು ಅದನ್ನು ಸಮೀಪಿಸುತ್ತಿರಲಿಲ್ಲ. ಅವರು ಅದನ್ನು ಅನೇಕ ರೀತಿಯಿಂದ ಪೂಜಿಸು ತ್ತಿದ್ದರು. ಮುಹಮ್ಮದ ಪೈಗಂಬರನ ಹಿಂದಿನ ಪೂರ್ವ ಜರು ಈ ದೇವಾಲಯದ ಪೂಜಾರಿಗಳಾಗಿ ಕೆಲಸಮಾಡುತ್ತಿದ್ದರು. ಈ ಪ್ರತಿಮೆಯ ಹೆಸರು 'ಅಲ್ ಲಾತ್' ಅಥವಾ 'ಅಲ್ ಉಜಾ' ಎಂಬು ದಾಗಿತ್ತು. ಅರಬರು ಕಾಠೇವಾಡಕ್ಕೆ ಬಂದಾಗ್ಗೆ ಅಲ್ಲಿದ್ದ ಸೋಮನಾಥ ದೇವಾಲಯದಲ್ಲಿದ್ದ ಲಿಂಗಮೂರ್ತಿಯನ್ನು ಸಹ "ಲಾತ್" ಎಂಬ ಹೆಸರಿ ನಿಂದ ಕರೆಯುತ್ತಿದ್ದದ್ದು ಕಂಡುಬರುತ್ತದೆ.

ಈಗಿನ ಇಸ್ಲಾಮ ಧರ್ಮದಲ್ಲಿ ಮೂರ್ತಿ ಪೂಜೆಯು ಇರುವದಿಲ್ಲ. ಆದರೆ ಮುಸ್ಲೀಮರು ಮಕ್ಕಾ ಮಶೀದೆಗೆ ಹೋದ ಕಾಲದಲ್ಲಿ ಅಲ್ಲಿ ಅವರು ಈಗ ಅನುಸರಿಸುವ ಧಾರ್ಮಿಕ ಪದ್ಧತಿಗಳಲ್ಲಿ ಪುರಾತನ ಕಾಲ ದಲ್ಲಿ ಅರಬರು ತಮ್ಮ ಲಿಂಗಾಲಯಕ್ಕೋಸ್ಕರ ಅನುಸರಿಸುತ್ತಿದ್ದವುಗಳನ್ನು ಕೆಲಮಟ್ಟಿಗೆ ಕಾಣಬಹುದಾಗಿದೆ. ಮೊದಲು ಅಲ್ಲಿದ್ದ ಕಪ್ಪು ಲಿಂಗಾ ಕಾರ ಮೂರ್ತಿಯನ್ನು ಈಗಲೂ ಮಕ್ಕಾ ಮಶೀದಿಯಲ್ಲಿ ಇಟ್ಟಿರುವರು. ಅದನ್ನು ಮುಸ್ಲೀಮರು ಚುಂಬಿಸಿ ಅದಕ್ಕೋಸ್ಕರ ತಮ್ಮ ಭಕ್ತಿಭಾವ ವನ್ನು ಈಗಲೂ ತೋರಿಸುತ್ತಾರೆ.

ಹಿಂದುಸ್ತಾನದಲ್ಲಿ ವೇದಕಾಲದಲ್ಲಿ ಅಗ್ನಿ, ವರುಣ ಮೊದಲಾದ ನಿಸರ್ಗ ಶಕ್ತಿಗಳ ಪೂಜೆಯು ಇದ್ದು ಹಿಂಸಾತ್ಮಕ ಯಜ್ಞ ಕಾರ್ಯಗಳು ಅನಿರ್ಬಂಧವಾಗಿ ಅವರಿಂದ ನಡಿಸಲ್ಪಡುತ್ತಿದ್ದವು. ಅದೇ ಕಾಲದಲ್ಲಿ ಶಿವಶಕ್ತಿಗಳ ಆರಾಧನೆಯು ಕೂಡ ಈ ಲಿಂಗ ಪೂಜೆಯ ಮೂಲಕ ನಡೆಯುತ್ತಲಿದ್ದವು. ಇದೇ ಕ್ರಮವು ಅರಬಸ್ತಾನದಲ್ಲಿಯೂ ಉಂಟಾಗಿರಬಹುದು. ಈ ಪ್ರದೇಶದಲ್ಲಿ ಶಿವಚಿನ್ಹವು ಹೇಗೆ ಬಂದಿತೆಂಬುವದರ ಬಗ್ಗೆ ಕೆಲವು ದಂತಕಥೆಗಳು ನಮ್ಮ ದೇಶದಲ್ಲಿ ಪ್ರಚಲಿತವಿದ್ದು ಇವುಗಳನ್ನು ವಾಚಕರು ಲಕ್ಷಿಸುವದು ಅವಶ್ಯವಿರುತ್ತದೆ.

## ಶಿಶುನಾಗ.

ಪಾಂಡವ ವಂಶದ ಮಗಧ ರಾಜರು ಪಾಟಲಿಪುತ್ರ ಅಂದರೆ ಪಾಟಣಾದಲ್ಲಿ ರಾಜ್ಯವಾಳುತ್ತಿದ್ದರು. ಅವರ ವಂಶದಲ್ಲಿ ಶಿಶುನಾಗನೆಂಬ ರಾಜನು ಜನಿಸಿದನು. ಅವನು ಧಾರ್ಮಿಕ ಬುದ್ಧಿಯುಳ್ಳವನಾಗಿ ಅನೇಕ ಯಜ್ಞಯಾಗಾದಿಗಳನ್ನು ನೆರವೇರಿಸಿದನು. ಹೀಗಿರುವಲ್ಲಿ ನೆರೆ ಪ್ರಾಂತದಲ್ಲಿ ಚೇದಿವಂಶದ ರಾಜರು ಆಳುತ್ತಿದ್ದರು. ಅವರಿಗೂ ಮಗಧ ರಾಜರಿಗೂ ಮನಸ್ತಾಪಗಳಿದ್ದು ಅವರಲ್ಲಿ ಯಾವಾಗಲೂ ಯುದ್ಧಗಳು ನಡೆಯುತ್ತಿದ್ದವು. ಒಂದು ಕಾಲದಲ್ಲಿ ಚೇದಿವಂಶದ ರಾಜರು ಪಾಟಲಿಪುತ್ರ ನಗರವನ್ನು ಕೈವಶ ಮಾಡಿಕೊಂಡು ಅದನ್ನು ಲೂಟಿ ಮಾಡಿದರು. ಆಗ ಶಿಶುನಾಗನು ತನ್ನ ರಾಜ್ಯವನ್ನು ಬಿಟ್ಟುಕೊಟ್ಟು ಸಿಂಧೂನದಿಯನ್ನು ದಾಟಿ ಅದರ ಪಶ್ಚಿಮಕ್ಕೆ ಒಂದು ರಾಜ್ಯವನ್ನು ಸ್ಥಾಪಿಸಿದನು ಆದರೆ ಅವನು ಅಲ್ಲಿ ಬಹಳ ದಿವಸಗಳಿರದೆ ಅವನು 'ಅದರ ಪಶ್ಚಿಮಕ್ಕಿರುವ ಮಕ್ಕಾ ಪ್ರಾಂತಕ್ಕೆ ಹೋಗಿ ಅಲ್ಲಿ ಆಳಹತ್ತಿದನು. ಅವನೇ ಮಕ್ಕೇಶ್ವರ ಲಿಂಗವನ್ನು ಸ್ಥಾಪಿಸಿದನು. ಅದಕ್ಕೋಸ್ಕರ ಅವನು ಅಲ್ಲಿ ಒಂದು ಸುಂದರ ದೇವಾಲಯವನ್ನು ಕಟ್ಟಿಸಿದನು. ಅದರಲ್ಲಿ ಅನೇಕ ಸುಂದರ ಮೂರ್ತಿಗಳು ಅವನಿಂದ ರಚಿಸಲ್ಪಟ್ಟವು. ಈ ದೇವಾಲಯದ ಖ್ಯಾತಿಯು ಈ ಶಾಸನ ಮೂಲಕ ಎಲ್ಲ ಕಡೆಗೂ ಹಬ್ಬಿತು. ಅಸಂಖ್ಯ ಯಾತ್ರಿಕರು ಅಲ್ಲಿಗೆ ಬಂದು ಅಲ್ಲಿದ್ದ ಲಿಂಗಮೂರ್ತಿಯನ್ನು ಸಂದರ್ಶಿಸುವರು. ಶಿಶುನಾಗನ ತರುವಾಯ ಅವನ ವಂಶಜರು ಅಲ್ಲಿಯೇ ರಾಜ್ಯವಾಳಹತ್ತಿದರು. ಈ

ಮಕ್ಕೇಶ್ವರ ಲಿಂಗದ ಪೂಜೆಯನ್ನು ಮಹಮ್ಮದ ಪೈಗಂಬರನ ಪೂರ್ವಜರು ಅವನು ಇಸ್ಲಾಮು ಧರ್ಮವನ್ನು ಸ್ಥಾಪಿಸುವ ವರೆಗೂ ನಡಿಸುತ್ತ ಬಂದರು.

ಮಹಮ್ಮದ ಪೈಗಂಬರನು ತನ್ನ ಇಸ್ಲಾಮು ಧರ್ಮವನ್ನು ನೆಲೆಗೊಳಿಸಿದ ಬಳಿಕ ಅವನು ನಾಡಿನಲ್ಲಿದ್ದ ಈ ಮೂರ್ತಿ ಪೂಜೆಯನ್ನು ನಿಲ್ಲಿಸಿದನು. ಮೊದಲಿದ್ದ ಮೂರ್ತಿಗಳನ್ನು ಒಡೆದು ಹಾಕಿಸಿದನು. ಆದರೆ ಶಿಶುನಾಗನು ಸ್ಥಾಪಿಸಿದ ಮಕ್ಕೇಶ್ವರ ಲಿಂಗವು ಮಾತ್ರ ಮಕ್ಕಾಮಸೀದೆಯಲ್ಲಿ ಇಡಲ್ಪಟ್ಟಿತು. ಯಾತ್ರಿಕರು ಅದರ ಚುಂಬನ ಮಾಡುತ್ತಿದ್ದರು. ಅದರ ಪೂಜೆಯು ಮಾತ್ರ ನಡಿಯುತ್ತಿರಲಿಲ್ಲ. ಕೆಲವೊಂದು ಕಾಲದಲ್ಲಿ ಈ ಲಿಂಗವು ಯಾರಿಗೂ ಕಾಣದಂತೆ ಗುಪ್ತವಾಗಿ ಇಡಲ್ಪಟ್ಟಿತ್ತೆಂದು ತಿಳಿದು ಬರುತ್ತದೆ.

ಮುಂದೆ ಮ್ಲೇಂಛರ ಪ್ರಾಬಲ್ಯವು ಆಯಾ ದೇಶಗಳಲ್ಲಿ ಹೆಚ್ಚುತ್ತ ಹೋಗಿ ಅವರು ಅಗ್ನಿ ಪೂಜಕರು ವಾಸವಾಗಿದ್ದ ಇರಾಣವನ್ನು ಮತ್ತು ಶೈವ ಸಾಂಪ್ರದಾಯವಿದ್ದ ಅಫಗಾಣಿಸ್ತಾನ, ಸಿಂಧೂ ದೇಶಗಳನ್ನು ಗೆದ್ದು ಅವುಗಳನ್ನು ತಮ್ಮ ಪಾದಾಕ್ರಾಂತ ಮಾಡಿಕೊಂಡರು. ಆದ್ದರಿಂದ ಈ ದೇಶಗಳಲ್ಲಿ ಇಸ್ಲಾಂ ಧರ್ಮವು ಬಲಿಯಹತ್ತಿತು. ಇದೇ ಕಾಲಕ್ಕೆ ಶಕ, ಹೂಣ ಮೊದಲಾದ ಕಾಡು ಜನರು ದೇಶದ ಒಳನುಗ್ಗಿದರು. ಈ ಕಠಿಣ ಕಾಲಗಳಲ್ಲಿ ಶಾಲಿವಾಹನ ಮತ್ತು ವಿಕ್ರಮಾದಿತ್ಯರು ಜನಿಸಿ ಮ್ಲೇಂಛರನ್ನುಗೆದ್ದು ದೇಶವನ್ನು ಸಂರಕ್ಷಿಸಿದರು.

ವಿಕ್ರಮಾದಿತ್ಯನ ವಂಶದಲ್ಲಿ ಭೋಜರಾಜನು ಉದಿಸಿ ಅವನು ಉಜ್ಜಯಿನಿಯಲ್ಲಿ ರಾಜ್ಯವಾಳುತ್ತಿದ್ದನು. ಅವನು ಮಹಮ್ಮದೀಯರ ಉಪಟಳವನ್ನು ಸಹಿಸಲಾರದೆ ೧೦ ಸಾವಿರ ಶೂರ ಸೈನಿಕರೊಡನೆ ಸಿಂಧೂ ನದಿಯನ್ನು ದಾಟಿ ಇಲ್ಲಿದ್ದ ಮ್ಲೇಂಛರನ್ನು ಶಿಕ್ಷಿಸಿ ಅವರ ಮೂಲಸ್ಥಾನವಾದ ಮರುಭೂಮಿಗೆ ( ಅರಬ್ಬೀ ದೇಶಕ್ಕೆ ) ನುಗ್ಗಿದನು ಮತ್ತು ಅಲ್ಲಿ ಮಕ್ಕೇಶ್ವರನಿದ್ದ ಸ್ಥಾನವನ್ನು ಸಂದರ್ಶಿದನು. ಆಗ ಮಕ್ಕೇಶ್ವರನು ಅಶರೀರ ವಾಣಿಯಿಂದ — " ಎಲೈ ಭೋಜರಾಜನೇ ಬಾಹ್ಲೀಕ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ಭೂಮಿಯು ಮ್ಲೇಂಛರಿಂದ ದೂಷಿತವಾಗಿರುತ್ತದೆ. ಈ ದಾರುಣ ದೇಶದಲ್ಲಿ ಆರ್ಯಧರ್ಮವು ಸ್ವಲ್ಪವೂ

ಇರುವದಿಲ್ಲ. ಆದ್ದರಿಂದ ನೀನು ಮಹಾ ಕಾಲೇಶ್ವರನಿರುವಲ್ಲಿಗೆ ( ಉಜ್ಜಯಿನಿಗೆ ) ಹೋಗು ಎಂದು ಅಪ್ಪಣೆ ಮಾಡಿದನು. ಆಗ ಭೋಗರಾಜನು ಸ್ವದೇಶಕ್ಕೆ ಹಿಂದಿರುಗಿದನು.

ಮಕ್ಕೇಶ್ವರ ಲಿಂಗದ ಪ್ರಖ್ಯಾತಿಯು ದಕ್ಷಿಣ ಹಿಂದುಸ್ತಾನದಲ್ಲಿ ಅನೇಕ ಕಡೆಗೆ ಇತ್ತೆಂದು ತೋರುತ್ತದೆ. ಆದ್ದರಿಂದ ಕೆಲವು ಶಿವಶರಣರು ಮುಖ್ಯವಾಗಿ ಮಳೆಯರಾಜ, ಮಲ್ಲನೃಪ ಎಂಬವರು ಈ ದೇಶಕ್ಕೆ ಹೋಗಿ ಮಕ್ಕೇಶ್ವರ ಲಿಂಗದರ್ಶನ ಹೊಂದಿದರೆಂದು ಆಖ್ಯಾಯಿಕೆಗಳಿವೆ. ಹಾಗೆಯೇ ತಿರುವಾಂಕೂರಿನ ರಾಜರ ಪೂರ್ವಜನೊಬ್ಬನು ಈ ನಾಡಿಗೆ ಹೋದಹಾಗೆ ಅಲ್ಲಿ ಐತಿಹ್ಯಗಳಿವೆ.

ದಕ್ಷಿಣ ಹಿಂದುಸ್ತಾನದಲ್ಲಿ ಮುಖ್ಯವಾಗಿ ಕರ್ನಾಟಕ, ತಮಿಳದೇಶ, ಮತ್ತು ಗುಜರಾಥ ಈ ದೇಶಗಳಿಗೂ ಅರಬಸ್ತಾನ ಇಜಿಪ್ತ ದೇಶಗಳಿಗೂ ನಿಕಟ ಸಂಬಂಧವಿದೆ. ಆದ್ದರಿಂದ ರೋಮನ್ನರ ನಾಣ್ಯಗಳು ದ್ರಾವಿಡದೇಶದಲ್ಲಿ ದೊರೆತಿರುತ್ತಿವೆ. ಮತ್ತು ಕ್ರಿಸ್ತಶಕದ ಪೂರ್ವದಲ್ಲಿ ೨ ಶತಮಾನಗಳಾಚೆ ಒಂದು ಗ್ರೀಕ ನಾಟಕದಲ್ಲಿ ಕನ್ನಡ ನುಡಿಗಳು ಇರುವದು ಕಂಡು ಬಂದಿದೆ. ಇದರಂತೆ ಕೆಲವು ಶೈವ ಸಾಂಪ್ರದಾಯಗಳು ಇಜಿಪ್ತ ಮತ್ತು ಅರಬಸ್ತಾನ ದೇಶಗಳಲ್ಲಿ ದೊರೆತ.ದಕ್ಕೋಸ್ಕರ ನಾವು ಆಶ್ಚರ್ಯಪಡುವ ಕಾರಣವಿಲ್ಲ.

ಈ ಎಲ್ಲ ಸಂಗತಿಗಳನ್ನು ನಿದರ್ಶಿಸಿದಲ್ಲಿ ಶೈವಧರ್ಮ ಮತ್ತು ಅದರ ಸಂಸ್ಕೃತಿ ಒಂದು ಕಾಲದಲ್ಲಿ ಬಹು ದೂರದ ವರೆಗೆ ಹಬ್ಬಿತ್ತೆಂದು ತಿಳಿಯಲು ಯಾವ ಪ್ರತ್ಯವಾಯವಿರುವದಿಲ್ಲ.

ಶಿವಶರಣರ ಚರಿತ್ರೆಗಳ ಇನೆಯ ಭಾಗವನ್ನು ನಾವು ಇಲ್ಲಿಗೆ ಪೂರ್ತಿಗೊಳಿಸಿ ಮುಂದೆ ೪ನೇ ಭಾಗವನ್ನು ಪ್ರಾರಂಭಿಸುವೆವು. ಹೀಗೆ ಪೂರ್ತಿಗೊಳಿಸುವ ಪೂರ್ವದಲ್ಲಿ ಜಂಗಮರು ಶೈವ ಮತ್ತು ವೀರಶೈವ ಸಂಸ್ಕೃತಿಯ ಪ್ರಸಾರಕ್ಕೋಸ್ಕರ ಮಾಡಿದ ಪ್ರಯತ್ನಗಳನ್ನು ಕುರಿತು ನಾವು ವಿವೇಚಿಸಲೆಣಿಸುವೆವು. ನಾವು ಪ್ರಕಟಿಸಿದ ಶಿವಶರಣರ ಚರಿತ್ರೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಜಂಗಮವರ್ಗದರು ಈ ವಿಷಯವಾಗಿ ಘನತರವಾದ ಕಾರ್ಯಗಳನ್ನು ಮಾಡಿದ್ದು ವಾಚಕರ ಲಕ್ಷಕ್ಕೆ ಬರದೆ ಇರಲಾರದು. ಇವುಗಳನ್ನು ನಾವು ಇಲ್ಲಿ ವಿವರಿಸುವೆವು.

ನಾವು ಈ ಶಿವಶರಣರ ಚರಿತ್ರೆಗಳ ೧ ನೇ ಭಾಗದಲ್ಲಿ ೫೧ ಜನರ ಚರಿತ್ರೆಗಳನ್ನು ಪ್ರಸಿದ್ಧಿಸಿದ್ದೇವೆ. ಅವರಲ್ಲಿ ಅನೇಕ ಶಿವಶರಣರೂ, ವಚನಕಾರರೂ, ಸ್ತ್ರೀಯರೂ ಬಾಲ ಬಾಲಿಕೆಯರೂ ಇದ್ದಾರೆ. ಅವರೆಲ್ಲರೂ ಶಿವಾನುಭವಿಗಳಾಗಿ ಶಿವಾನುಭವದ ತತ್ವಗಳಂತೆ ಆಚರಿಸಿದ್ದಾರೆ. ಇದಕ್ಕೋಸ್ಕರ ಅವರು ಅನೇಕ ತರದ ಹಿಂಸೆಗೆ ಸಹ ಒಳಗಾಗಿದ್ದಾರೆ. ಹೀಗಿದ್ದರೂ ಕೂಡಾ ಅವರು ತಮ್ಮ ನಿಷ್ಠೆಯನ್ನುಬಿಡದೆ ಅಚಲಮನಸ್ಕರಾಗಿ ತಮ್ಮ ಕರ್ತವ್ಯವನ್ನು ಮಾಡಿದ್ದು ಕಂಡುಬರುತ್ತದೆ.

ಈ ಚರಿತ್ರೆಗಳ ೨ ನೇ ಭಾಗದಲ್ಲಿ ೬೩ ಜನ ಶಿವಶರಣ ಶರಣೆಯರ ಚರಿತ್ರೆಗಳು ಬಂದಿವೆ. ಹೀಗೆ ಇವರು ಒಟ್ಟು ೧೧೪ ಜನರಾಗುತ್ತಿದ್ದು ಇವರಲ್ಲಿ ೫೫ ಜನ ವಚನಕಾರರಿದ್ದಾರೆ. ಈ ಮಹಾನುಭಾವರ ಮಹತ್ಕಾರ್ಯಗಳನ್ನು ಕುರಿತು ನಾವು ೨ ನೇ ಭಾಗದ ಪ್ರಸ್ತಾವನೆಯಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದೇವೆ. ಇವರಲ್ಲಿ ಈ ಶಿವಶರಣ ಸಾಮಾನ್ಯ ನಿರೂಪಣೆಗಳು ಬಂದಿರುತ್ತವೆ.

ಈಗಿನ ೩ ನೇ ಭಾಗದ ಗ್ರಂಥದಲ್ಲಿ ೨೮ ಜನ ಶಿವಶರಣರ ಚರಿತ್ರೆಗಳು ಮಾತ್ರ ಬಂದಿವೆ. ಹೀಗೆ ೧೪೨ ಜನ ಶಿವಶರಣರ ಚರಿತ್ರೆಗಳು ಈ ಮೂರುವಿಭಾಗಗಳಲ್ಲಿ ಬಂದಿವೆ. ಇವರು ಕೇವಲ ಕರ್ನಾಟಕ ಮಾತ್ರವಲ್ಲ, ಆಂಧ್ರದೇಶ, ಗುಜರಾಥ, ಸಿಂಧೂದೇಶ ಇವುಗಳಲ್ಲಿಯೂ ಪರದೇಶಗಳಾದ ಅಫಗಾಣಿಸ್ಥಾನ ಇಂಡೋನೇಶಿಯಾ ಅರಬಸ್ಥಾನ ಇಲ್ಲಿಯೂ ಕೂಡ ಪ್ರಸಿದ್ಧರಾಗಿದ್ದಾರೆ. ಶೈವ ಸಂಸ್ಕೃತಿಯು ಒಂದುಕಾಲದಲ್ಲಿ ಹಿಂದುಸ್ತಾನ ಮಾತ್ರವಲ್ಲ, ಪರದೇಶಗಳಲ್ಲಿಯೂ ಕೂಡಾ ಪಸರಿಸಿತ್ತೆಂದು ಕಂಡುಬರುತ್ತದೆ.

ಇನ್ನು ಮುಂದೆ ನಾವು ಈ ಶಿವಶರಣರ ಚರಿತ್ರೆಗಳ ೪ ನೇ ಭಾಗವನ್ನು ಪ್ರಾರಂಭಿಸುವೆವು. ಇವರಲ್ಲಿ ರೇವಣ ಸಿದ್ಧೇಶ್ವರ, ಮರುಳ ಸಿದ್ಧೇಶ್ವರ, ಏಕೋರಾಮ ಮೊದಲಾದವರ ಮತ್ತು ಬಸವೇಶ್ವರನ ಸಮಕಾಲೀನರಾದ ಅಲ್ಲಮಪ್ರಭು, ಸಿದ್ಧರಾಮ, ಮಡಿವಾಳ ಮಾಚಿದೇವ, ಕಿನ್ನರೀ ಬ್ರಹ್ಮಯ್ಯ ಮಹಾದೇವಿಯಕ್ಕ ಮೊದಲಾದವರ ಚರಿತ್ರೆಗಳನ್ನು ಕೊಡು

ವೆವು. ಮುಂದೆ ೫ ನೇ ಭಾಗದಲ್ಲಿ ಕೇವಲ ಬಸವೇಶ್ವರನ ಚರಿತ್ರೆಯನ್ನು ಪ್ರಸಿದ್ಧಿಸಬೇಕೆಂದು ಸಂಕಲ್ಪಿಸಿದ್ದೇವೆ.

ಈ ವರೆಗೆ ಪ್ರಸಿದ್ಧವಾದ ಚರಿತ್ರೆಗ್ರಳನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಜಂಗಮವರ್ಗದವರು ವೀರಶೈವ ಧರ್ಮ ಪ್ರಸಾರಕಾರ್ಯದಲ್ಲಿ ಕೆಲವೊಂದು ಮಹತ್ವದ ಭಾಗವನ್ನು ವಹಿಸಿ ಕಾರ್ಯವಮಾಡುತ್ತ ಬಂದರೆಂಬುದು ತಿಳಿದುಬರುತ್ತದೆ. ಇದನ್ನು ನಾವು ಇಲ್ಲಿ ಸ್ಥೂಲ ತೆರನಾಗಿ ವಿವರಿಸುತ್ತೇವೆ.

## ಜಂಗಮರು

ಜಂಗಮರೆಂಬ ಕೆಲವೊಂದು ವರ್ಗವು ಬಸವೇಶ್ವರನಕಿಂತಲೂ ಮೊದಲು ಸಹ ಇತ್ತೆಂದು ಈ ಶಿವಶರಣರ ಚರಿತ್ರೆಗಳಿಂದ ತಿಳಿದುಬರುತ್ತದೆ. ಹಿಂದುಸ್ಥಾನದಲ್ಲಿ ಬೇರೆ ಬೇರೆ ಪಂಥಗಳಲ್ಲಿ ಹೇಗೆ ಧಾರ್ಮಿಕ ವರ್ಗಗಳು ಕಂಡುಬರುತ್ತವೆಯೋ ಹಾಗೆಯೇ ವೀರಶೈವರಲ್ಲಿಯೂ ಜಂಗಮರೆಂಬ ಮಹತ್ವದ ವರ್ಗವು ಪುರಾತನ ಕಾಲದಿಂದಲೂ ಇತ್ತೆಂದು ಕಂಡುಬರುತ್ತದೆ. ಶಂಕರಾಚಾರ್ಯನು ಜಂಗಮರನ್ನು ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಹಾಗೆಯೇ ಶೈವನಾದ ಬಾಣ ಕವಿಯೂ ಕೂಡ ಅವರನ್ನು ವರ್ಣಿಸಿದ್ದಾನೆ. ಜಂಗಮ ಮತವೆಂತಲೂ ಉಲ್ಲೇಖಗಳು ಪರಧರ್ಮೀಯರ ಗ್ರಂಥಗಳಲ್ಲಿ ದೊರೆಯುತ್ತವೆ.

### ಜಂಗಮರ ಹೆಸರುಗಳು.

ಆದರೆ ಜಂಗಮರಿಗೆ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಹೆಸರುಗಳು ಇದ್ದುದು ಕಂಡುಬರುತ್ತದೆ. ಇವುಗಳನ್ನು ಕೆಳಗೆ ವಿವರಿಸಿದ್ದೇವೆ.

ಪುರಾತರು, ಪುರಾತನರು, ಆದ್ಯರು :- ವಚನಕಾರರು ಬಹುಕಡೆಗೆ ಜಂಗಮರನ್ನು ಈ ಹೆಸರುಗಳಿಂದ ಕರೆದಿದ್ದಾರೆ. ತಮಿಳ ದೇಶದಲ್ಲಿ ಅನೇಕ ಧಾರ್ಮಿಕ ಪುರುಷರು ಆಗಿ ಹೋಗಿದ್ದಾರೆ. ಅವರಿಗೆ ಪುರಾತನರೆಂಬ ಹೆಸರು ಇದೆ. ಅವರು ೬೩ ಜನರು ಇದ್ದಾರೆ. ಪಿರಿಯ-ಪುರಾಣವೆಂಬ ತಮಿಳ ಗ್ರಂಥದಲ್ಲಿ ಅವರ ಚರಿತ್ರೆಗಳಿವೆ. ಅವರು ಶಿವಭಕ್ತ

ರಾಗಿ ಆಗಮ ಧರ್ಮವನ್ನು ಪಾಲಿಸುತ್ತಿದ್ದದರಿಂದ ವೀರಶೈವರು ಅವರನ್ನು ಮನ್ನಿಸುತ್ತ ಬಂದಿದ್ದಾರೆ. ವೀರಶೈವ ವಚನಕಾರರು ತಮ್ಮ ವಚನಗಳಲ್ಲಿ ಜಂಗಮರನ್ನು 'ಪುರಾತ' ರೆಂಬ ಹೆಸರಿನಿಂದ ಕರೆದಿದ್ದಾರೆ. ತಮಿಳು ದೇಶದ ಪುರಾತನರಿಗೋಸ್ಕರ ಅವರು ವಹಿಸಿದ ಭಕ್ತಿಯ ಮೂಲಕ ಅವರು ಜಂಗಮರನ್ನು ಹೀಗೆ ಕರೆದಿರಬಹುದು.

ಪ್ರಮಥರು, ಗಣಂಗಳು, ಗಣಾಧೀಶ್ವರರು — ಗ್ರಂಥಕಾರರು ಈ ಹೆಸರುಗಳಿಂದಲೂ ಜಂಗಮರನ್ನು ಸಂಬೋಧಿಸಿದ್ದಾರೆ. ಜಂಗಮರಲ್ಲಿ ಅನೇಕರು ತಮ್ಮ ವಿದ್ವತ್ತಿಯ ಮೂಲಕ ಜನರ ಮನ್ನಣೆಗೆ ಪಾತ್ರರಾದರು. ಆಗ ಅವರು ಪರಮೇಶ್ವರನ ನೆರೆಯಲ್ಲಿರುವ ಗಣಗಳು ಅಥವಾ ಪ್ರಮಥರು ಜನರ ಉದ್ಧಾರಾರ್ಥವಾಗಿ ಪೃಥ್ವಿಯಲ್ಲಿ ಹೀಗೆ ಜನ್ಮ ತಾಳಿದರೆಂದು ಜನರು ಭಾವಿಸಿ ಅವರನ್ನು ಪ್ರಮಥರೆಂತಲೂ ಗಣಗಳೆಂತಲೂ ಕರೆದಿರಬಹುದು.

**ಶರಣರು:**— ಷಟ್ ಸ್ಥಲಗಳಲ್ಲಿ ಶರಣಸ್ಥಲವೆಂದಿದ್ದು ಇದು ಐನೆಯ ಸ್ಥಲವು. ಇದು ಐಕ್ಯಸ್ಥಲದ ಹಿಂದಿನ ಸ್ಥಲವು. ಶರಣಸ್ಥಲದವರು ಜ್ಞಾನಿಗಳು. ಆದ್ದರಿಂದ ಜಂಗಮರಲ್ಲಿ ಜ್ಞಾನಿಗಳಾದವರನ್ನು ವಚನಕಾರರು ಹೀಗೆ ಶರಣರೆಂದು ಕರೆದಿದ್ದಾರೆಂದು ತೋರುತ್ತದೆ.

**ಒಡೆಯರು, ಮಹಂತರು:**— ಜಂಗಮರು ಅನೇಕ ಕಡೆಗೆ ಮಠಗಳನ್ನು ಸ್ಥಾಪಿಸಿದ್ದು ಕಂಡುಬರುತ್ತದೆ. ಈ ಮಠಗಳಲ್ಲಿ ಅಧಿಕಾರಿಗಳಾಗಿ ನಿಯೋಜಿಸಲ್ಪಟ್ಟವರಿಗೆ ಈ ಹೆಸರುಗಳು ಬಂದಿರಬಹುದು.

ಹೀಗೆ ಜಂಗಮರಿಗೆ ಬೇರೆ ಬೇರೆ ಹೆಸರುಗಳು ಉಂಟಾಗಿರುತ್ತವೆ. ಈ ಹೆಸರುಗಳು ವೀರಶೈವ ವಾಙ್ಮಯದಲ್ಲಿಯೂ ಶಿಲಾಶಾಸನಗಳಲ್ಲಿಯೂ ದೊರೆಯುತ್ತವೆ.

## ಶೈವ ಭೇದಗಳು ಮತ್ತು ಜಂಗಮರು

ಜಂಗಮರೆಲ್ಲರೂ ಎಲ್ಲಕಡೆಗೂ ಶಿವೋಪಾಸಕರು ಮತ್ತು ಶಿವಚಿನ್ಹಗಳನ್ನು ಧರಿಸಿದವರು ಆಗಿದ್ದರು. ಶೈವರಲ್ಲಿ ಅನೇಕ ಪಂಗಡಗಳಿದ್ದುದು

ಆಗಮ ಗ್ರಂಥಗಳಿಂದ ತಿಳಿದು ಬರುತ್ತದೆ. ಐತಿಹಾಸಿಕದ ಕಾಲದಲ್ಲಿ ಪಾಶುಪತರು, ಕಾಳಾಮುಖರು, ವೀರಶೈವರು, ಕಾಪಾಲಿಕರು, ಶಿವಸಿದ್ಧಾಂತಿಗಳು, ತಾಂತ್ರಿಕರು, ಕಾಶ್ಮೀರೀ ಶೈವರು ( ತ್ರಿಕರು ), ವೀರಬಣಂಜುಗಳು ಎಂಬ ಅನೇಕ ಭೇದಗಳಿದ್ದುದು ಕಂಡುಬರುತ್ತದೆ. ಈ ಮತಸ್ಥರಿಗೆಲ್ಲ ಸ್ವತಂತ್ರ ಧರ್ಮಗ್ರಂಥಗಳೂ ಕೂಡ ಇರುತ್ತವೆ. ಇವರ ಧಾರ್ಮಿಕ ವರ್ಗದವರಿಗೂ ಕೂಡ ಗಣಂಗಳು, ಜಂಗಮರು ಎಂಬ ಹೆಸರುಗಳಿವೆ.

ಹಿಂದುಸ್ತಾನದಲ್ಲಿ ಶಿವಮತವನ್ನು ಪಾಲಿಸುವವರ ಸಂಖ್ಯೆಯು ಬಹು ದೊಡ್ಡದಾಗಿದೆ. ವಿಷ್ಣುಭಕ್ತರಿಗಿಂತಲೂ ಶಿವಭಕ್ತರ ಸಂಖ್ಯೆಯು ಅನೇಕ ಮಡಿ ಹೆಚ್ಚಿಗೆ ಇದ್ದುದು ಕಂಡು ಬಂದಿದೆ.

ಹಿಂದಿನಕಾಲದಲ್ಲಿ ಅನೇಕ ರಾಜರೂ ಕೂಡ ಶಿವಮತವನ್ನು ಅಂಗೀಕರಿಸಿದ್ದಾರೆ. ದಕ್ಷಿಣ ದೇಶದಲ್ಲಿ ಚೋಳರಾಜರು, ಪಾಂಡ್ಯ ಕೇರಳ ರಾಜರು, ಚಾಲುಕ್ಯ ರಾಜರಲ್ಲಿ ಬಹುಜನರು, ಉತ್ತರದೇಶದಲ್ಲಿ ಕಾಶೀ ರಾಜರು, ಕಾಶ್ಮೀರ ರಾಜರು ಶೈವ ಮತಾವಲಂಬಿಗಳಾಗಿದ್ದರು.

## ಜಂಗಮರು ದೇಶ ಪರ್ಯಟನ ಮಾಡುವರು

ನಾವು ಪ್ರಸಿದ್ಧಿಸಿದ ಚರಿತ್ರೆಗಳಿಂದ ಬಹು ಜನ ಜಂಗಮರು ಯಾವಾಗಲೂ ಸಂಚಾರದಲ್ಲಿ ಇರುತ್ತಿದ್ದ ಹಾಗೆ ಕಂಡುಬರುತ್ತದೆ. ಅವರು ಸಂಚರಿಸುತ್ತಲಿರುವಾಗ ಬೋಧೆಮಾಡುವದೇ ಅವರ ಮುಖ್ಯ ಕಾರ್ಯವಾಗಿತ್ತು. ಕೆಲವು ವಚನಕಾರರು ಜಂಗಮರನ್ನು ತಮ್ಮ ವಚನಗಳಲ್ಲಿ ದೇಶಾಂತರಿಗಳೆಂತಲೂ, ಪರದೇಶಿಯ್ಯಗಳೆಂತಲೂ, ದೇಶಿಕರೆಂತಲೂ ಕರೆದಿದ್ದಾರೆ. ಜಂಗಮರು ದೇಶಗಳಲ್ಲಿ ತಿರುಗಾಡುತ್ತಿದ್ದುದರಿಂದ ಅವರಿಗೆ ಈ ಬಗೆಯ ಹೆಸರುಗಳು ಬಂದಿರಬಹುದು.

ಪುರಾತನ ಕಾಲದಲ್ಲಿ ಜಂಗಮರಲ್ಲಿ ಎಲ್ಲರಿಗೂ ಮಠಗಳಿದ್ದವೆಂದು ಹೇಳಲು ಬರಲಾರದು. ಆದರೆ ಅವರಲ್ಲಿ ಕೆಲವರು ಸ್ಥಾಯಿಕವಾಗಿ ಕೆಲವೊಂದು ಸ್ಥಳದಲ್ಲಿ ಉಳಿದು ತಮ್ಮಗೋಸ್ಕರ ಮಠಗಳನ್ನು

ಕಟ್ಟಿಸಿಕೊಂಡು ಅಲ್ಲಿ ಇದ್ದುದು ಕಂಡುಬರುತ್ತದೆ. ಉರಿಲಿಂಗಪೆದ್ದಿಯ ಗುರುವಾದ ಉರಿಲಿಂಗನು ಕಂಧಾರವೆಂಬ ಗ್ರಾಮದಲ್ಲಿ ಒಂದು ಮಠ ವನ್ನು ಕಟ್ಟಿಸಿಕೊಂಡು ವಾಸಮಾಡುತ್ತಿದ್ದನು. ಅವನು ಗುರುವೆನಿಸಿಕೊಂಡು ಭಕ್ತರಿಗೆ ದೀಕ್ಷಾದಿ ಕಾರ್ಯಗಳನ್ನು ಮಾಡುತ್ತಿದ್ದನೆಂದು ಅವನ ಚರಿತ್ರೆ ಯಿಂದ ತಿಳಿದುಬರುತ್ತದೆ. ಅದರಂತೆಯೇ ನಿರ್ಲಜ್ಜ ಶಾಂತಯ್ಯನೂ, ಸಕಳೇಶ ಮಾದರಸನೂ ಮಠಾಧಿಪತಿಗಳಾಗಿದ್ದರು. ಇವರೆಲ್ಲರು ಬಸವೇಶ್ವ ರನ ಕಿಂತಲೂ ಸ್ವಲ್ಪ ಹಿಂದಿನವರು. ಆದರೆ ಅಸಂಖ್ಯ ಜಂಗಮರು ಹೀಗೆ ಒಂದೆಡೆಗೆ ಇರದೆ ಒಂದುಸ್ಥಾನದಲ್ಲಿಲ್ಲ ಪ್ರವಾಸಮಾಡುತ್ತ ಮುಖ್ಯ ಮುಖ್ಯ ಶಿವಕ್ಷೇತ್ರಗಳಿದ್ದಲ್ಲಿಗೆ ಹೋಗಿ ತೀರ್ಥಾಟನ ಮಾಡುವದರ ಕಡೆಗೆ ಹೆಚ್ಚಾಗಿ ಲಕ್ಷ್ಯಕೊಡುತ್ತಿದ್ದಹಾಗೆ ಕಂಡುಬರುತ್ತದೆ. ಇದು ಕೆಳಗೆ ಕಾಣಿಸಿದ ಉದಾಹರಣೆಗಳಿಂದ ತಿಳಿದುಬರುವದು.

ಶಿರಿಯಾಳ ಚೆಂಗಳೆಯರ ಚರಿತ್ರೆಯು ವೀರಶೈವರಲ್ಲಿ ಪ್ರಸಿದ್ಧ ವಾಗಿದೆ. ಈ ಉಭಯತರ ಉಲ್ಲೇಖಗಳು ವಚನ ಗ್ರಂಥಗಳಲ್ಲಿ ಆಗಿಂದಾಗ್ಗೆ ಬರುತ್ತವೆ. ಈ ಉಭಯತರನ್ನು ಕಂಡು ಅವರಿಂದ ದಾನ ಬೇಡಿದವನು ಜಂಗಮನು. ಶಿರಿಯಾಳ ಚೆಂಗಳೆಯರಿದ್ದ ಪಟ್ಟಣವು ಕಾಂಚೀನಗರವು. ಅಮ್ಮವ್ವೆ ಅಥವಾ ಬಿಜ್ಜ ಮಹಾದೇವಿಯನ್ನು ಕಂಡು ಅವಳಿಗೆ ಪರಮಾ ತ್ಮನ ಸ್ವರೂಪವನ್ನು ಹೇಳಿಕೊಟ್ಟವನು ಒಬ್ಬ ಜಂಗಮನಾಗಿರುವನು ಅಮ್ಮವ್ವೆಯ ಗ್ರಾಮವು ಮೈಸೂರು ಪ್ರಾಂತದಲ್ಲಿರುವ ಬಿಜ್ಜಾವರವು. ಬಳ್ಳಿಗಾವಿ ಬನವಾಸಿ ಪ್ರಾಂತದಲ್ಲಿ ಅನೇಕ ಶಿವಶರಣರು ಆಗಿಹೋಗಿದ್ದು ಇಲ್ಲಿಗೆ ಜಂಗಮರು ಯಾವಾಗಲೂ ಬರುತ್ತಿದ್ದರು. ಬನವಾಸಿಯು ಪ್ರಸಿದ್ಧ ಶೈವ ಕ್ಷೇತ್ರವಾಗಿದೆ. ಆದಯ್ಯನು ಪುಲಿಗೆರೆ ಅಂದರೆ ಈಗಿನ ಲಕ್ಷ್ಮೇಶ್ವರ ದಲ್ಲಿದ್ದಾಗ್ಗೆ ಅನೇಕ ಜಂಗಮರು ಪಟ್ಟಣದ ಹೊರಗಿನ ಉದ್ಯಾನದಲ್ಲಿ ಬಂದಿಳಿದಿದ್ದರು. ಅವರನ್ನು ಕಂಡು ಆದಯ್ಯನು ಅವರನ್ನು ಉಪಚರಿ ಸುವದಕ್ಕೋಸ್ಕರ ತನ್ನ ಮನೆಗೆ ಬರಮಾಡಿಕೊಂಡನು. ಇವರು ಸಂಚಾ ರದಲ್ಲಿದ್ದ ಜಂಗಮರೆಂದು ಆದಯ್ಯನ ಚರಿತ್ರೆಯಲ್ಲಿ ಹೇಳಿದೆ. ದೇವರ ದಾಸಿಮಯ್ಯನು ಮುದನೂರಲ್ಲಿ ತನ್ನ ನೆಯ್ಗೆಯ ಕಾಯಕವನ್ನು ಮಾಡು ವಾಗ್ಗೆ ತಾನು ನೆಯ್ದ ಸುಂದರವಾದ ಬಟ್ಟೆಯನ್ನು ಬೇಡಿ ಅದನ್ನು ಹರಿ ದುಹಾಕಿದವನು ಒಬ್ಬ ಜಂಗಮನಾಗಿದ್ದಾನೆ. ಈ ಜಂಗಮನಿಗೋಸ್ಕರ ದಾಸಿ ಮಯ್ಯನೂ ಅವನ ಹೆಂಡತಿಯೂ ಬಹಳ ಭಕ್ತಿಯನ್ನು ವಹಿಸಿದವರು. ಬಸ

ವೇಶ್ವರನು ಕಲ್ಯಾಣ ಪಟ್ಟಣದಲ್ಲಿದ್ದಾಗ್ಗೆ ಅವನ ಖ್ಯಾತಿಯು ಎಲ್ಲ ಕಡೆಗೂ
ಪಸರಿಸಲು ಅನೇಕ ದೇಶಗಳಲ್ಲಿ ಸಂಚಾರಮಾಡುತ್ತಿದ್ದ ಜಂಗಮರು
ಅವನಿದ್ದಲ್ಲಿಗೆ ಬರುವವರಾದರು. ಉದ್ಭಟ ಅಥವಾ ಕುಮಾರಪಾಲ
ಘೂರ್ಜರನು ಗುಜರಾಥ ದೇಶವನ್ನು ಆಳಿದ್ದಾನೆ. ಜಂಗಮರು ಅವನ
ಲ್ಲಿದ್ದುದು ಅವನ ಚರಿತ್ರೆಯಲ್ಲಿ ಹೇಳಿದೆ. ಸಿಂಧುದೇಶದ ಸಿಂಧುಮರಾ
ಳನ ಚರಿತ್ರೆಯಲ್ಲಿ ಒಬ್ಬ ಜಂಗಮನು ಅವನನ್ನು ಕಂಡು ಅವನ ಅರ್ಧ
ಶರೀರವನ್ನು ಬೇಡಿದ್ದರ ಉಲ್ಲೇಖವಿದೆ. ಬಹು ಜನ ಜಂಗಮರು ಕಾಶೀ
ಪಟ್ಟಣಕ್ಕೆ ಆಗಿಂದಾಗ್ಗೆ ಬರುವರು. ಅವರ ಉಲ್ಲೇಖಗಳು ಶಿವಶರಣರ
ಚರಿತ್ರೆಗಳಲ್ಲಿ ಆಗಿಂದಾಗ್ಗೆ ಬರುತ್ತವೆ. ಕಾಶೀ ವಿಶ್ವೇಶ್ವರ ದೇವಾಲ
ಯವು ಶೈವ ಧರ್ಮೀಯರಿಗೆಲ್ಲ ಪೂಜ್ಯ ಸ್ಥಾನವಾಗಿರುತ್ತದೆ. ಹಲಾ
ಯುಧನೆಂಬ ಶಿವಶರಣನು ಬರ್ಬರದೇಶ್ಚ ಅಂದರೆ ಈಗಿನ ಅಫಗಾಣಿಸ್ತಾನ
ದಲ್ಲಿಯವನು. ಜಂಗಮರು ಅವನನ್ನು ಕಂಡಾಗ್ಗೆ ಅವನು ಅವರೊಡನೆ
ವಾದಿಸಿದ್ದಾನೆ. ಅಫಗಾಣಿಸ್ಥಾನಕ್ಕೆ ಸಮೀಪವಾಗಿರುವ ಕಾಶ್ಮೀರ ದೇಶವು
ಒಂದುಕಾಲದಲ್ಲಿ ಶೈವ ಧರ್ಮೀಯರ ಮುಖ್ಯ ಸ್ಥಾನವಾಗಿತ್ತು. ಅಲ್ಲಿ
ಅಸಂಖ್ಯ ಜಂಗಮರು ವಾಸಮಾಡುತ್ತಿದ್ದರು. ಅವರ ಉಲ್ಲೇಖಗಳು
ವೀರಶೈವ ಗ್ರಂಥಗಳಲ್ಲಿ ಆಗಿಂದಾಗ್ಗೆ ಬರುತ್ತವೆ. ಕಾಶ್ಮೀರಕ್ಕೆ ಸಮೀಪ
ವಾಗಿ ಕೇದಾರನಾಥ ದೇವಾಲಯವಿರುತ್ತದೆ. ಈ ದೇವಾಲಯದ ಆಡಳಿ
ತೆಯು ಪುರಾತನಕಾಲದಿಂದಲೂ ಜಂಗಮರಕಡೆಗೆಯೇ ಇದ್ದುದು ಗ್ರಂಥ
ಗಳಿಂದ ತಿಳಿದುಬರುತ್ತದೆ. ಶ್ರೀಪತಿ ಪಂಡಿತನು ಆಂಧ್ರ ದೇಶದವನು.
ಅವನ ಗ್ರಾಮವು ಬೆಜವಾಡವು. ಮಲ್ಲಿಕಾರ್ಜುನ ಪಂಡಿತಾರಾಧ್ಯನು
ಆಂಧ್ರ ದೇಶದಲ್ಲಿಯ ದ್ರಾಕ್ಷಾರಾಮ ಕ್ಷೇತ್ರದವನು. ಇವರಿಬ್ಬರ ಮೂಲಕ
ಆಂಧ್ರ ದೇಶದಲ್ಲಿ ವೀರಶೈವ ಧರ್ಮದ ಪ್ರಸಾರವು ಕೆಲವು ಕಾಲ ಬಹು
ಒತ್ತರದಿಂದ ನಡೆಯಿತು. ಆಗ ವೇಮನಾರಾಧ್ಯ, ಪಾಲ್ಕುರಿಕೆ ಸೋಮಾ
ರಾಧ್ಯರು ಇಲ್ಲಿ ಉದಯವಾದರು. ಇವರ ಕಾಲದಲ್ಲಿ ಇತರ ಧರ್ಮೀ
ಯರ ಕೂಡ ಯುದ್ಧಗಳುಂಟಾದವು. ಅವುಗಳಲ್ಲಿ ಜಂಗಮರು ಮುಖ್ಯ
ಭಾಗವನ್ನು ವಹಿಸಿದವರಾಗಿದ್ದರು. ಹೀಗೆ ಜಂಗಮರು ಅನೇಕ ದೇಶ
ಗಳಲ್ಲಿ ಸಂಚರಿಸುತ್ತ ಧರ್ಮಬೋಧೆ ಮಾಡುತ್ತಿದ್ದುದು ಕಂಡುಬರುತ್ತದೆ.

ಆದರೆ ಜಂಗಮರ ಸಂಚಾರಗಳು ಓಡಿಸಾ, ಬಂಗಾಲ, ಬಿಹಾರಗಳಲ್ಲಿ
ಹೆಚ್ಚಾಗಿ ಇದ್ದುದು ಶಿವಶರಣರ ಚರಿತ್ರೆಗಳಿಂದ ಕಂಡುಬರುವದಿಲ್ಲ.

ನನ್ನಯ್ಯ ಮತ್ತು ಸುಜ್ಞಾನಿ ದೇವರು ಮಾತ್ರ ಓಡಿಸಾ ಪ್ರಾಂತದವರೆಂದು ಹೇಳಲ್ಪಟ್ಟಿದೆ. ಸುಜ್ಞಾನಿದೇವನು ಮಠಾಧಿಕಾರಿಯಾಗಿ ಲಿಂಗದೀಕ್ಷೆಯನ್ನು ಕೊಡುವ ಕಾರ್ಯ ಮಾಡುತ್ತಿದ್ದನೆಂದು ಅವನ ಚರಿತ್ರೆಯಿಂದ ತಿಳಿದು ಬರುತ್ತದೆ. ಆದರೆ ಈ ದೇಶದಲ್ಲಿ ಜಂಗಮರಿದ್ದುದರ ಉದಾಹರಣೆಗಳು ಹೆಚ್ಚಿಗೆ ದೊರೆಯುವದಿಲ್ಲ. ಬಂಗಾಲ ಬಿಹಾರಗಳಲ್ಲಿ ಜಂಗಮರು ಸಂಚರಿಸುತ್ತಿದ್ದುದು ಶಿವಶರಣರ ಚರಿತ್ರೆಗಳಲ್ಲಿ ಕಂಡುಬರುವದಿಲ್ಲ.

ಮಹಾರಾಷ್ಟ್ರದಲ್ಲಿ ಹರಿಯುವ ಗೋದಾವರೀ ತೀರ ಪ್ರದೇಶಗಳಲ್ಲಿ ಜಂಗಮರು ಸಂಚರಿಸುತ್ತಿದ್ದುದರ ಬಗ್ಗೆ ಉಲ್ಲೇಖಗಳು ಕೆಲವು ಕಡೆಗೆ ದೊರೆಯುತ್ತಿವೆ. ಪರಲಿಗೆ ಅಥವಾ ಈಗಿನ ಪರಳಿ ಇಲ್ಲಿ ವೈಜವ್ವೆಯು ವಾಸವಾಗಿದ್ದಳು. ಅವಳು ಜಂಗಮರನ್ನು ಆದರಿಸಿದ್ದಕ್ಕೋಸ್ಕರ ತನ್ನ ಗಂಡನಿಂದ ಹಿಂಸೆಯನ್ನು ಹೊಂದಿದಳು. ವೈಜನಾಥ ದೇವಾಲಯವು ಇಲ್ಲಿ ಅವಳ ಹೆಸರಿನಿಂದ ಉಗಮಿಸಿದೆ. ಇದು ಗೋದಾವರೀ ತೀರ ಪ್ರದೇಶವಾಗಿದೆ. ಈ ಭಾಗದಲ್ಲಿ ಕೋಲಂಬೆ, ಉರಿಲಿಂಗ, ಉರಿಲಿಂಗಪೆದ್ದಿ, ಕುಂಬಾರ ಗುಂಡಯ್ಯ ಇವರು ಪ್ರಸಿದ್ಧರಾಗಿದ್ದಾರೆ.

## ಜಂಗಮರ ಸಂಚಾರದ ಮಾರ್ಗಗಳು.

ಒಟ್ಟಿಗೆ ಪುರಾತನ ಕಾಲದಲ್ಲಿ ಜಂಗಮರು ದೇಶದಲ್ಲಿ ಯಾವಾಗಲೂ ಪ್ರವಾಸ ಮಾಡುತ್ತಿದ್ದುದು ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ. ಅವರ ಸಂಚಾರದ ದಾರಿಗಳು ಕೆಳಗಿನಂತೆ ಇದ್ದುದಾಗಿ ತೋರುತ್ತದೆ. ಉತ್ತರ ಪ್ರಾಂತವಾದ ಕಾಶ್ಮೀರದಿಂದ ದಕ್ಷಿಣಕ್ಕೆ ಕಾಂಚೀಪಟ್ಟಣದ ವರೆಗೂ ಅವರು ಪ್ರವಾಸಮಾಡುತ್ತಿದ್ದರು.

ಕಾಶ್ಮೀರದಲ್ಲಿ ಸಪಾದ ಲಕ್ಷ ಅಂದರೆ ಸವ್ವಾಲಕ್ಷ ದೇಶದಲ್ಲಿ ಶಿವ ಧರ್ಮೀಯ ರಾಜರು ಆಳುತ್ತಿದ್ದರು. ಇವರಲ್ಲಿ ಜಂಗಮರ ಬಹು ದೊಡ್ಡ ಗುಂಪು ವಾಸಮಾಡುತ್ತಿದ್ದಿತು. ಇವರು ಈ ಭಾಗದಿಂದ ಪಶ್ಚಿಮಕ್ಕೆ ಅಫಗಾಣಿಸ್ತಾನದಲ್ಲಿರುವ ಕಂದಹಾರದ ವರೆಗೆ ಮತ್ತು ಪೂರ್ವಕ್ಕೆ ಕೇದಾರದ ವರೆಗೆ ಹೋಗುವರು. ಮುಂದೆ ಕಾಶ್ಮೀರದಿಂದ ಕಾಶೀಕ್ಷೇತ್ರದ ವರೆಗೂ ಹೋಗಿ ಅಲ್ಲಿ ನಿಲ್ಲುವರು. ಮುಂದೆ ಅವರು ದಕ್ಷಿಣಕ್ಕೆ ಮಾಳವಾ ದೇಶದಲ್ಲಿರುವ ಉಜ್ಜಯಿನಿಯ ವರೆಗೂ ಮಾರ್ಗಕ್ರಮಣ ಮಾಡುವರು.

ಉಜ್ಜಯಿನಿಯು ಶೈವರ ಪ್ರಸಿದ್ಧ ಕ್ಷೇತ್ರವಾಗಿದೆ. ಇಲ್ಲಿಂದ ಜಂಗಮರ ಕೆಲವು ತಂಡಗಳು ಪಶ್ಚಿಮಕ್ಕೆ ಗುಜರಾಥದೇಶವನ್ನು ಪ್ರವೇಶಿಸಿ. ಸೌರಾಷ್ಟ್ರ ಸೋಮನಾಥನ ಸ್ಥಾನದ ವರೆಗೂ ತೆರಳುತ್ತಿದ್ದವು. ಆದರೆ ಅವರ ಮುಖ್ಯ ತಂಡಗಳು ಉಜ್ಜಯಿನಿಯಿಂದ ಮುಂದೆ ಸಾಗಿ ಉದ್ಭಟದೇವನ ಚರಿತ್ರೆಯಲ್ಲಿ ಹೇಳಿದಂತೆ ರೇವಾನದಿ ಅಂದರೆ ಈಗಿನ ನರ್ಮದಾ ನದಿಯನ್ನು ದಾಟಿ 'ವರಹಾಟಕ' ಅಂದರೆ ಈಗಿನ ವರ್ಹಾಡವನ್ನು ಪ್ರವೇಶಿಸಿ ಗೋದಾವರೀ ನದಿಯನ್ನು ಪೈಠಣದ ಹತ್ತಿರ ದಾಟಿ ಕರ್ನಾಟಕವನ್ನು ಪ್ರವೇಶಿಸಿ ಕಲ್ಯಾಣಕ್ಕೆ ಬರುವವು. ಪೈಠಣದಿಂದ ಕೆಲವು ತಂಡುಗಳು, ಪಶ್ಚಿಮಕ್ಕೆ ಮಹಾರಾಷ್ಟ್ರವನ್ನು ಪ್ರವೇಶಿಸಿ ಕೊಲ್ಹಾಪುರದ ವರೆಗೂ ಹೋಗುತ್ತಿರ ಬಹುದು.

ಆದರೆ ಕಲ್ಯಾಣಕ್ಕೆ ಬಂದ ತಂಡಗಳು ಕರ್ನಾಟಕದಲ್ಲಿ ಜಂಗಮರ ಸ್ಥಾನಗಳು ಬಹು ವಿಪುಲವಾಗಿದ್ದದರಿಂದ ಅಲ್ಲಿಗೆ ಅವು ಹೋಗುತ್ತಿರಬಹುದು. ಈ ಸ್ಥಾನಗಳಲ್ಲಿ ಪೊನ್ನಲಿಗೆ, ಮಂಗಳವಾಡ, ಮುದನೂರು, ಕಪ್ಪಡಿಸಂಗಮ, ಪಟ್ಟದಕಲ್ಲು, ಪುಲಿಗೆರೆ, ಬನವಾಸಿ, ಬಳ್ಳಿಗಾವಿ, ಸಿದ್ಧಗಂಗಾ ಪ್ರದೇಶ ಇವು ಮುಖ್ಯವಾದವುಗಳು. ಇಲ್ಲಿ ಜಂಗಮರ ದೊಡ್ಡ ದೊಡ್ಡ ಮಸಾಹತ್ತುಗಳು ಇದ್ದ ಹಾಗೆ ತೋರುತ್ತದೆ

ಈ ಭಾಗಗಳಿಂದ ಜಂಗಮರ ತಂಡಗಳು ಪೂರ್ವಕ್ಕೆ ಪಂಚಾಕ್ಷೇತ್ರ ಶ್ರೀ ಶೈಲ, ಅಲ್ಲಿಂದ ಮುಂದೆ ಅಮರಗುಂಡ ಮತ್ತು ದಾಕ್ಷಾರಾಮ ಕ್ಷೇತ್ರ ಈ ಪಟ್ಟಣಗಳ ವರೆಗೂ ತೆರಳುತ್ತಿರಬಹುದು. ಯಾಕಂದರೆ ಇಲ್ಲಿ ಜಂಗಮರಿದ್ದ ಉಲ್ಲೇಖಗಳು ಆಗಿಂದಾಗ್ಗೆ ಗ್ರಂಥಗಳಲ್ಲಿ ಬರುತ್ತವೆ.

ಕಲ್ಯಾಣಪಟ್ಟಣಕ್ಕೆ ಬಂದ ತಂಡಗಳು ಮುಂದೆ ಸಾಗಿ ಮುಂದೆ ದಕ್ಷಿಣಕ್ಕೆ ಪಾಲ್ಕುರಿಕೆಯ ಭಾಗ ಅಂದರೆ ಈಗಿನ ಮೈಸೂರ ಸಂಸ್ಥಾನದ ಪೂರ್ವಭಾಗದೊಳಗಿಂದ ಹಾಯ್ದು ಕಪಿಲಾ ಕಾವೇರೀ ಸಂಗಮದ ವರೆಗೂ ಹೋಗುವವು. ಈ ಭಾಗಗಳಲ್ಲೆಲ್ಲ ಶಿವಶರಣರ ಸ್ಥಾನಗಳು ಅಸಂಖ್ಯಾತವಾಗಿವೆ. ಅವು ತುಮಕೂರ, ಅನಂತಪುರ ಜಿಲ್ಲೆಗಳಲ್ಲಿ ಹೆಚ್ಚಾಗಿ ಇವೆ.

ಇಲ್ಲಿಂದ ಜಂಗಮರು ಕಾಂಚೀಪುರದ ವರೆಗೆ ಹೋಗಿ ಅದು ಶೈವ ಧರ್ಮಕ್ಕೆ ಮುಖ್ಯ ಸ್ಥಾನವಾಗಿದ್ದದರಿಂದ ಅಲ್ಲಿ ಅವರು ಹೆಚ್ಚಿಗೆ ಕಾಲ ಕಳೆಯುವರು. ಅಲ್ಲಿಂದ ಅವರು ಪಶ್ಚಿಮಕ್ಕೆ ಕೇರಳದೇಶ ಅಂದರೆ ಮಲ ಯಾಳ ದೇಶವನ್ನು ಪ್ರವೇಶಿಸುವರು. ಇಲ್ಲವೆ ಅವರು ಮುಂದೆ ರಾಮೇ ಶ್ವರದ ವರೆಗೂ ಹೋಗುವರು. ಈ ದೇಶಗಳಲ್ಲೆಲ್ಲ ಪುರಾತನ ಪ್ರಸಿದ್ಧ ಶಿವಕ್ಷೇತ್ರಗಳಿರುತ್ತವೆ. ಈ ಪ್ರಕಾರ ಹಿಂದಿನ ಕಾಲದಲ್ಲಿ ಜಂಗಮರು ಕಾಶ್ಮೀರದಿಂದ ರಾಮೇಶ್ವರದ ವರೆಗೂ ತಮ್ಮ ಹೆಸರಿಗೆ ತಕ್ಕಂತೆ ಪ್ರವಾಸ ಮಾಡುತ್ತ ಜನತೆಯಲ್ಲಿ ಶಿವಧರ್ಮವನ್ನು ಪ್ರಸಾರಮಾಡುತ್ತ ನಾಡಿನಲ್ಲಿ ಧರ್ಮ ಜಾಗ್ರತಿಯನ್ನು ಮಾಡುತ್ತಿದ್ದರೆಂದು ತೋರುತ್ತದೆ. ನಾವು ವಿವರಿಸಿದ ಸಂಚಾರ ಮಾರ್ಗಗಳು ಕೆಳಗೆ ಕಾಣಿಸಿದ ಶಿವಶರಣರ ಚರಿತ್ರೆ ಗಳಿಂದಲೂ ಸ್ಪಷ್ಟಪಡುತ್ತವೆ.

ಉದ್ಭಟ ಕಾವ್ಯವನ್ನು ಸೋಮರಾಜ ಕವಿಯು ೧೨೨೨ ರಲ್ಲಿ ಬರೆ ದಿದ್ದಾನೆ. ಅದರಿಂದ ತಿಳಿಯುವದೇನೆಂದರೆ— ಉದ್ಭಟ ರಾಜನು ಗುಜ ರಾಥ ದೇಶವನ್ನು ಆಳುತ್ತಿರುವಾಗ್ಗೆ ಪಂಪಾಕ್ಷೇತ್ರದಲ್ಲಿ ವಾಸಿಸುತ್ತಿದ್ದ ದೇವಲ ಮಹರ್ಷಿಯನ್ನು ವಿರೋಧಿಗಳು ಪೀಡಿಸುತ್ತಿರುವದನ್ನು ಕೇಳಿ ಅವನನ್ನು ಸಂರಕ್ಷಿಸಬೇಕೆಂದು ತನ್ನ ದಂಡಿನೊಡನೆ ಪಂಪಾಕ್ಷೇತ್ರಕ್ಕೆ ಹೊರಟನು. ಹಾದಿಯಲ್ಲಿ ಅವನಿಗೆ ರೇವಾನದಿ ಅಂದರೆ ನರ್ಮದಾ ನದಿಯು ಹತ್ತಿತು. ಅದನ್ನು ದಾಟಿ ಮುಂದೆ ವಿಂಧ್ಯ ಪರ್ವತದೊಳ ಗಿಂದ ಹಾಯ್ದು ಗೋದಾವರೀ ನದಿಯನ್ನು ದಾಟಿ ಪಂಪಾಕ್ಷೇತ್ರಕ್ಕೆ ಬಂದನು. ಇದರಿಂದ ಅವನು ಯಾವ ಮಾರ್ಗದಿಂದ ಬಂದನೆಂಬುದು ತಿಳಿಯುತ್ತದೆ.

ಸೋಮನಾಥಾರಾಧ್ಯನೆಂಬ ಮತ್ತೊಬ್ಬ ಶಿವಶರಣನು ಕಾಶ್ಮೀರ ದೇಶ ದವನಾಗಿದ್ದ. ಅವನು ಅಲ್ಲಿಂದ ಹೊರಟು ಮೊದಲು ಸ್ಥಾನಪುರ ಅಂದರೆ ಸ್ಥಾನೇಶ್ವರಕ್ಕೆ ಬಂದು ಅಲ್ಲಿಂದ ಕಾಶೀಕ್ಷೇತ್ರಕ್ಕೆ ಬರುವನು. ಅಲ್ಲಿಂದ ಪಟ್ಟಣಕ್ಕೆ ತೆರಳಿ ಶ್ರೀಶೈಲ ಕ್ಷೇತ್ರವನ್ನು ಸಂದರ್ಶಿಸಿ ಪಂಪಾಕ್ಷೇತ್ರಕ್ಕೆ ಬರುತ್ತಾನೆ. ಅಲ್ಲಿಂದ ಅವನು ದಕ್ಷಿಣದೇಶಕ್ಕೆ ಹೊರಟು ಪೊನ್ನಾಂಬಲಕ್ಕೆ ಬಂದು ಅಲ್ಲಿ ತನ್ನ ನಿವಾಸವನ್ನು ಮಾಡುತ್ತಾನೆ.

ಶಂಕರ ದಾಸಿಮಯ್ಯನು ಈಗ ಇಳಕಲ್ಲಿನ ಹತ್ತಿರವಿರುವ ಕಂದಗಲ್ಲಿ ( ಕಂದಶಿಲೆ ) ನಲ್ಲಿ ವಾಸಿಸುತ್ತಿದ್ದು ಅವನು ಮೊದಲು ನವಿಲೆ, ಅಲ್ಲಿಂದ ಉತ್ತರಕ್ಕೆ ಮುದನೂರು, ಅಲ್ಲಿಂದ ಕಲ್ಯಾಣಕ್ಕೆ ಬರುತ್ತಾನೆ. ಅಲ್ಲಿ ಜಯಸಿಂಹ ರಾಜನಮುಂದೆ ತನ್ನ ಪವಾಡವನ್ನು ಮಾಡಿ ಉತ್ತರಕ್ಕೆ ತೆರಳಿ ಉಜ್ಜಯಿನಿಗೆ ಬಂದು ಅಲ್ಲಿದ್ದ ಸಿದ್ಧರನ್ನು ಜಯಿಸುತ್ತಾನೆ. ಆಮೇಲೆ ಅವನು ದಕ್ಷಿಣಕ್ಕೆ ಮಹಾರಾಷ್ಟ್ರ ದೇಶದೊಳಗಿಂದ ಹಾಯ್ದು ಈಗ ಸಾತಾರಾ ಜಿಲ್ಲೆಯಲ್ಲಿರುವ ಪಂಬೇರಕ್ಕೆ ಬಂದು ಅಲ್ಲಿಂದ ಅವನು ಕೊಲ್ಹಾಪುರಕ್ಕೆ ಹೋಗಿ ಅಲ್ಲಿಯ ಸಿದ್ಧರನ್ನು ಜಯಿಸಿ ನವಿಲೆ ಗ್ರಾಮಕ್ಕೆ ಬರುತ್ತಾನೆ.

ವರದಾನಿ ಗುಡ್ಡವ್ವೆಯು ವಿಜಾಪುರ ಪಟ್ಟಣದ ಪಶ್ಚಿಮಕ್ಕೆ ೩೫ ಮೈಲುಗಳ ಮೇಲೆ ಇರುವ ಗುಡ್ಡಾಪುರದವಳು. ಅವಳು ಮೊದಲು ಕಲ್ಯಾಣಕ್ಕೆ ಬಂದು ಅಲ್ಲಿಂದ ಆದವಾನಿ, ಅಲ್ಲಿಂದ ಅಲಂಪುರ ( ರಾಯಚೂರ ಜಿಲ್ಲೆ ) ದಲ್ಲಿ ವೈರಿಗಳನ್ನು ಸೋಲಿಸಿ, ಅಲ್ಲಿಂದ ದಕ್ಷಿಣಕ್ಕೆ ತೆರಳಿ ಕಪಿಲಾ ಕಾವೇರೀ ಸಂಗಮಸ್ಥಾನಕ್ಕೆ ಬರುತ್ತಾಳೆ. ಅಲ್ಲಿ ಅವಳು ಕೆಲವು ಕಾಲ ಕಳೆದು ರಾಮೇಶ್ವರಕ್ಕೆ ಹೋಗಿ ಅಲ್ಲಿಂದ ಹಿಂದಿರುಗಿ ಕಂಚೀಪಟ್ಟಣಕ್ಕೆ ಬರುತ್ತಾಳೆ. ಆಮೇಲೆ ಅವಳು ಕಾಶೀ ಪಟ್ಟಣಕ್ಕೆ ಹೋಗಿ ಅಲ್ಲಿಂದ ಸೊಲ್ಲಾಪುರ, ಆಮೇಲೆ ಕಪ್ಪಡಿಸಂಗಮ, ಆಮೇಲೆ ಬಸವೇಶ್ವರನು ಜನಿಸಿದ ಬಾಗೇವಾಡಿ, ಆಮೇಲೆ ಮನಗೂಳಿ ಈ ಸ್ಥಳಗಳಿಗೆ ಹೋಗಿ ಪುನಃ ಸ್ವಗ್ರಾಮಕ್ಕೆ ಬರುತ್ತಾಳೆ.

ಏಕಾಂತದ ರಾಮಯ್ಯನು ಈಗ ಕಲಬುರ್ಗಿ ಜಿಲ್ಲೆಯಲ್ಲಿರುವ ಆಲಂದೆ ( ಆಲ್ದಿ ) ಯವನು. ಅವನು ತೀರ್ಥಾಟನ ಮಾಡಬೇಕೆಂದು ಬಯಸಿ ಮೊದಲು ಕಲ್ಯಾಣಕ್ಕೆ ಬರುತ್ತಾನೆ. ಅಲ್ಲಿ ಪಟ್ಟಣಕ್ಕೆ ಸಮೀಪವಿದ್ದ ಶಿವಪುರವೆಂಬ ಅದರ ಶಾಖಾ ನಗರಕ್ಕೆ ಬಂದು ಅಲ್ಲಿಂದ ಪುಲಿಗೆರೆ ( ಲಕ್ಷ್ಮೇಶ್ವರ ) ಆಮೇಲೆ ಅಬ್ಬಲೂರಿಗೆ ಬರುತ್ತಾನೆ.

ರೇವಣಸಿದ್ಧನು ಮೊದಲು ಬಹಳ ದಿವಸ ಮಂಗಳವಾಡದಲ್ಲಿ ಇದ್ದು ಈ ಭಾಗದಲ್ಲಿ ಅವನು ವಾಸಿಸಿದ ಸ್ಥಳಗಳಾದ ಇಂಗಳೇಶ್ವರ, ಹೊರ್ತಿ ( ಇಂಡಿತಾಲೂಕು ) ರೇಣಾವಿ ( ಸಾತಾರಾಜಿಲ್ಲೆ ) ಈ ಗ್ರಾಮಗಳಲ್ಲಿ

ಈಗಲೂ ಅವನ ಹೆಸರಿನ ಕುರುಹುಗಳು ಇವೆ. ಆಮೇಲೆ ಅವನು ಬನವಾಸೀ ಪ್ರಾಂತಕ್ಕೆ ಬಂದು ಅಲ್ಲಿಂದ ದಕ್ಷಿಣಕ್ಕೆ ತೆರಳಿ ಬೆಂಗಳೂರು ಜಿಲ್ಲೆಯಲ್ಲಿರುವ ಕೋಲಾರದ ಪೇಟೆಕ್ಕೆ ಬಂದು ಅಲ್ಲಿಂದ ಕಂಚಿಗೆ ಆಗಮಿಸಿ ಮುಂದೆ ಅವನು ಸಿಂಹಲ ದ್ವೀಪಕ್ಕೆ ಹೋಗಿ ತಿರುಗಿ ಮಂಗಳವಾಡಕ್ಕೆ ಬಂದು ಅಲ್ಲಿಂದ ಪೊನ್ನಲಿಗೆ ( ಕೊಲ್ಲಾಪುರ ), ಆಮೇಲೆ ತಾನು ಜನಿಸಿದ್ದ ಕೊಲ್ಲಿಪಾಕಿಗೆ ಬರುತ್ತಾನೆ.

ದೇವರ ದಾಸಿಮಯ್ಯನು ಮುದನೂರಿನವನು. ಅವನು ಮೊದಲು ಶ್ರೀಶೈಲಕ್ಕೆ ಬಂದು ಅಲ್ಲಿ ಉಪದೇಶವನ್ನು ಹೊಂದಿ, ಅಲ್ಲಿಂದ ಪೊಟ್ಟಲಕೆರೆ ಆಮೇಲೆ ಪುನಃ ತನ್ನ ಗ್ರಾಮವಾದ ಮುದನೂರಿಗೆ ತೆರಳಿ ಅಲ್ಲಿಯ ಸುತ್ತಲಿನ ಪ್ರದೇಶಗಳಲ್ಲಿ ತನ್ನ ಸೋಪಾಡಗಳನ್ನು ನಡೆಸುತ್ತಾನೆ.

ಶಿವಲೆಂಕ ಮಂಚಣ್ಣನು ಕಾಶೀಪಟ್ಟಣದವನಾಗಿದ್ದು ಅಲ್ಲಿಂದ ಕಲ್ಯಾಣಕ್ಕೆ ಬರುತ್ತಾನೆ. ಮೋಳಿಗೆ ಮಾರಯ್ಯನು ಕಾಶ್ಮೀರ ದೇಶದವನಾಗಿದ್ದು ಅವನು ಮುಂದೆ ಕಲ್ಯಾಣಕ್ಕೆ ಬರುವವನಾದನು. ಸಕಳೇಶ ಮಾದರಸನು ಕಲ್ಲುಕುರಿಕೆಯ ರಾಜನಾಗಿದ್ದು, ಅವನು ಮೊದಲು ಶ್ರೀಶೈಲ, ಆಮೇಲೆ ಕಲ್ಯಾಣಕ್ಕೆ ಬರುವವನಾದನು.

ಪಂಡಿತಾರಾಧ್ಯನು ಆಂಧ್ರದೇಶದಲ್ಲಿರುವ ದ್ರಾಕ್ಷಾರಾಮದವನು. ಅವನು ಮೊದಲು ಆಂಧ್ರ ಮತ್ತು ತಮಿಳು ದೇಶಗಳಲ್ಲಿ ಸಂಚರಿಸುತ್ತ ಪೋರಾಂಡಲಕ್ಕೆ ಬರುತ್ತಾನೆ. ಇಲ್ಲಿಂದ ಪಾಲ್ಕುರಿಕೆಗೆ ಬಂದು ಸೋಮಯ್ಯನನ್ನು ಕಂಡು, ಆ ಮೇಲೆ ಅನಂತಪುರ ಜಿಲ್ಲೆಯಲ್ಲಿರುವ ಕದಿರೆ ಗ್ರಾಮದಲ್ಲಿ ರೇಮಯ್ಯನ ಸ್ಥಾನವನ್ನು ಸಂದರ್ಶಿಸಿ, ಶ್ರೀಶೈಲ, ಆ ಮೇಲೆ ಸ್ವಗ್ರಾಮವಾದ ದ್ರಾಕ್ಷಾರಾಮಕ್ಕೆ ತಿರುಗಿ ಬರುತ್ತಾನೆ.

ಹೀಗೆ ಶಿವಶರಣರ ಸಂಚಾರಗಳಿದ್ದು ಇವೆಲ್ಲವುಗಳನ್ನು ನಾವು ಪರೀಕ್ಷಿಸಿದಲ್ಲಿ, ಹಿಂದಿನ ಕಾಲದಲ್ಲಿ ಕಾಶ್ಮೀರದೇಶದಿಂದ ಶಿವಶರಣರು ಮುಖ್ಯವಾಗಿ ಜಂಗಮರು ಕಾಶಿ, ಉಜ್ಜಿನಿ, ಕಲ್ಯಾಣ, ಬನವಸೆ, ಕಂಚೀ ಮಾರ್ಗವಾಗಿ ನಾಡುಗಳಲ್ಲಿ ಸಂಚರಿಸುತ್ತ ಅಲ್ಲಲ್ಲಿ ಶಿವಭಕ್ತರನ್ನು ಕಾಣುತ್ತ

ನಾವು ಹಿಂದೆ ಹೇಳಿದಂತೆ ಶಿವಕ್ಷೇತ್ರಗಳಿಗೆ ಆಗಿಂದಾಗ್ಗೆ ಸಂಚಾರಮಾಡುತ್ತಿದ್ದರೆಂದು ತಿಳಿದುಬರುತ್ತದೆ.

ಸಾಂಪ್ರತ ಕಾಲದಲ್ಲಿ ವೃತ್ತ ಪತ್ರಿಕೆಗಳು ಯಾವ ಕಾರ್ಯಗಳನ್ನು ಮಾಡುತ್ತವೆಯೋ ಅವೇ ಕಾರ್ಯಗಳನ್ನು ಜಂಗಮರು ಪುರಾತನಕಾಲದಲ್ಲಿ ಮಾಡುತ್ತಿದ್ದರೆಂದು ಹೇಳಬಹುದು. ವೃತ್ತಪತ್ರಿಕೆಗಳು ಹೇಗೆ ನಾಡಿನಲ್ಲಿ ನಡೆದ ವೃತ್ತಾಂತಗಳನ್ನು ತಿಳಿಸುತ್ತವೆಯೋ ಹಾಗೆಯೇ ಜಂಗಮರು ಹಿಂದಿನಕಾಲದಲ್ಲಿ ಒಂದು ದೇಶದಲ್ಲಿ ಶಿವಭಕ್ತರಿಗೆ ಉಂಟಾದ ಹಿತಾಹಿತದ ಸಂಗತಿಗಳನ್ನು ಇತರ ನಾಡಿನವರಿಗೂ ತಿಳಿಯಪಡಿಸುತ್ತಿದ್ದರು. ಇದರಿಂದ ಭರತಖಂಡದಲ್ಲಿರುವ ದೇಶಗಳಲ್ಲಿ ವಾಸಮಾಡುತ್ತಿದ್ದ ಶಿವಭಕ್ತರಲ್ಲಿ ಪರಸ್ಪರ ಸಂಬಂಧಗಳು ಬೆಳೆಯಲು ಸಂಚಾರದಲ್ಲಿರುತ್ತಿದ್ದ ಈ ಜಂಗಮರೇ ಕಾರಣರಾಗಿದ್ದರೆಂದು ತಿಳಿಯಲು ಪ್ರತ್ಯವಾಯವಿಲ್ಲ.

ಜಂಗಮರು ಶಿವಧರ್ಮವನ್ನು ತಿಳಿದವರಾಗಿ ಧರ್ಮಬೋಧೆಮಾಡುತ್ತಿದ್ದುದು ನಿಃಸಂಶಯವು. ಅವರು ಧರ್ಮಜ್ಞಾನವನ್ನು ಜನರಿಗೆ ಹೇಗೆ ಮಾಡಿಕೊಡುತ್ತಿದ್ದರೆಂಬುದನ್ನು ಶಿವಶರಣರ ಚರಿತ್ರೆಗಳಿಂದ ಊಹಿಸಬಹುದಾಗಿದೆ. ಅಲ್ಲಯ್ಯನೆಂಬ ಶಿವಶರಣನು ಮತ್ತು ನಿಂಬಾಣದ ಗಣೇಶ್ವರನು ಗಾಯನದ ಮೂಲಕವಾಗಿಯೂ ಇಂಡಿಯ ಶಾಂತಯ್ಯನು ಪಾಠ ಹೇಳುವದರ ಮೂಲಕವಾಗಿಯೂ ವೀರದೇವಯ್ಯನು ಉಕ್ತಿಗಳನ್ನು ಉಘ್ಘಟಿಸುವದರ ಮೂಲಕವಾಗಿಯೂ ಧರ್ಮಬೋಧೆ ಮಾಡುತ್ತಿದ್ದು ಇದೇ ಪದ್ಧತಿಯನ್ನು ಜಂಗಮರು ಪ್ರವಾಸಕಾಲದಲ್ಲಿ ಕೈಕೊಂಡಿರಬಹುದೆಂದು ತೋರುತ್ತದೆ. ಉಕ್ತಿಗಳನ್ನು ಹೇಳುವ ಜಂಗಮರನ್ನು 'ಸಾರುವ ಅಯ್ಯ'ಗಳೆಂದು ಕೆಲವು ಗ್ರಂಥಗಳಲ್ಲಿ ಉಲ್ಲೇಖಗಳಿವೆ. ಕೆಲವು ಜಂಗಮರು ಸಿದ್ಧರಸವನ್ನು ಸಿದ್ಧಮಾಡುವಲ್ಲಿ ಪ್ರವೀಣರಾಗಿ ಅದರ ಮೂಲಕ ಅವರು ವಸ್ತುಗಳ ರೂಪಾಂತರ ಮಾಡುವರು ( ಮೋರನ ವೇಮಯ್ಯನ ಚರಿತ್ರೆ ನೋಡಿರಿ ). ಢಕ್ಕೆಯ ಮಾರಯ್ಯ, ಕಂಕರೀ ಕಕ್ಕಯ್ಯ ಈ ಶಿವಶರಣರಂತೆ ಕೆಲವೊಂದು ಕಾಯಕವನ್ನು ಅವರು ಕೈಕೊಂಡು ಬಾರಿಸುತ್ತ ಹಾಡುತ್ತ ಶಿವಶರಣರ ತತ್ವಗಳನ್ನು ಜನರಿಗೆ ತಿಳಿಸಿ ಹೇಳುವರು.

ಕೆಲವು ಜಂಗಮರು ಶಿವಜ್ಞಾನವನ್ನು ಚೆನ್ನಾಗಿ ಹೊಂದಿದವರಾಗಿ ತಮ್ಮ ಪ್ರವಾಸದಲ್ಲಿ ರಾಜರನ್ನು ಸಹ ಕಾಣುವರು ಮತ್ತು ಅವರ ಸನ್ನಿಧಿಯಲ್ಲಿ ಧರ್ಮತತ್ವಗಳನ್ನು ಕುರಿತು ಇತರ ಮತೀಯರೊಡನೆ ಚರ್ಚೆ ನಡಿಸುವರು. ಜಗತ್ತಿನಲ್ಲಿ ಎಲ್ಲೆಲ್ಲಿಯೂ ಶಿವನಿದ್ದಾನೆಂದು ಪ್ರಮಥರ ತತ್ವವಿದೆ. ಇದನ್ನು ಜೈನರೂ ಬೌದ್ಧರೂ ಅಲ್ಲಗಳೆಯುವವರಾಗಿದ್ದರು. ಆಗ ಜಂಗಮರು ತಮ್ಮ ಸಿದ್ಧಿಯ ಮೂಲಕ ಪರಮಾತ್ಮನನ್ನು ಜಡ ವಸ್ತುಗಳಲ್ಲಿ ಸಹ ಪ್ರಕಟಗೊಳಿಸಿದ್ದಾರೆ. ಹಾಗೆಯೇ ಹರಿಹರರ ವಿಷಯವಾಗಿ ವಾಗ್ವಾದಗಳಾಗುತ್ತಿದ್ದವು. ಆಗ ಜಂಗಮರು ಹರನೇ ಸರ್ವೋತ್ತಮನೆಂದು ಪ್ರತಿಪಾದಿಸುವರು. ಚಾತುರ್ವರ್ಣಗಳ ಸಂಬಂಧವಾಗಿಯೂ ಚರ್ಚೆಗಳೇಳುವವು. ಇವು ಮುಖ್ಯವಾಗಿ ಬ್ರಾಹ್ಮಣರೊಡನೆ. ಆಗ ಜಂಗಮರು ವರ್ಣಗಳೆಂಬುವಿಲ್ಲ, ಶಿವಭಕ್ತರೇ ಶ್ರೇಷ್ಠರೆಂದು ಪ್ರತಿಪಾದಿಸುವರು. ಹೀಗೆ ಜಂಗಮರು ತಾವು ಹೋದಲ್ಲೆಲ್ಲ ವೀರಶೈವ ಮತತತ್ವಗಳ ವಿಷಯವಾಗಿ ವಾದಗಳನ್ನು ಮಾಡುತ್ತ ನಾಡಿನಲ್ಲಿ ಒಂದು ಉಚ್ಚ ಧಾರ್ಮಿಕ ವಾತಾವರಣವನ್ನು ಹುಟ್ಟಿಸುತ್ತಿದ್ದರು.

ಜಂಗಮರು ಅವಶ್ಯ ತೋರಿದಲ್ಲಿ ಸಜ್ಞಾನಿದೇವ, ದೇವರದಾಸಿಮ್ಯಯ್ಯಗಳಂತೆ ಭವಿಗಳಿಗೆ ತತ್ವವನ್ನು ಬೋಧಿಸಿ ಅವರಿಗೆ ದೀಕ್ಷೆಯನ್ನು ಕೊಡುವರು. ಲಿಂಗದ ನೆಲೆಕಲೆಗಳನ್ನು ತಿಳಿಸಿ ಹೇಳುವರು. ಯೋಗ್ಯ ಮಾರ್ಗದಲ್ಲಿ ತಪ್ಪು ದಿಶೆಯಿಂದ ಅನುಸರಿಸುವವರಿಗೆ ಲಿಂಗಾಂಗದ ರೀತಿ ನಡೆಗಳನ್ನು ತಿಳಿಸಿ ಹೇಳುವರು.

ಈ ಪ್ರಕಾರ ಜಂಗಮರು ಬಹು ಪುರಾತನಕಾಲದಿಂದಲೂ ಹಿಂದುಸ್ಥಾನದಲ್ಲಿ ಸಂಚರಿಸುತ್ತ ಬಂದಿದ್ದಾರೆ. ಇದರಿಂದ ಅವರು ಜನರ ಮನ್ನಣೆಗೆ ಪಾತ್ರರಾದರು. ಬಸವೇಶ್ವರನ ವಚನಗಳಲ್ಲಿ ಜಂಗಮರ ವಿಷಯವಾಗಿ ಅಸಂಖ್ಯವಚನಗಳು ಇದ್ದು ಅವುಗಳಮೇಲಿಂದ ಅವನು ಅವರಲ್ಲಿ ಎಷ್ಟು ದೃಢವಾದ ಭಕ್ತಿ ವಿಶ್ವಾಸವುಳ್ಳವನಾಗಿದ್ದನೆಂಬುದು ಒಡೆದು ಕಾಣುತ್ತಿದೆ. ಅದರಂತೆಯೇ ದೇವರ ದಾಸಿಮಯ್ಯ, ಬಹುರೂಪಿ ಚೌಡಯ್ಯ ಮೊದಲಾದ ಅನೇಕ ಶಿವಶರಣರು ಸಹ ಆಚರಿಸಿದ್ದುದು ತಿಳಿದು ಬರುತ್ತದೆ. ಇದಕ್ಕೆ ಜಂಗಮರು ಮಾಡುತ್ತಿದ್ದ ಸಾಮಾಜಿಕ ಕಾರ್ಯಗಳೇ ಕಾರಣವಾಗಿವೆ.

ಜಂಗಮರು ಕೆಲವೊಂದು ವರ್ಗ ಅಥವಾ ಒಂದೇ ಪ್ರಾಂತದವರಿರದೆ ಅವರಲ್ಲಿ ಎಲ್ಲ ವರ್ಗದವರೂ ನಾಡಿನವರೂ ಸಮಾವೇಶವಾಗುತ್ತಿದ್ದರು. ಇದರಿಂದ ಅವರಲ್ಲಿ ಮಾಂಸಾಹಾರಿಗಳೂ ಕೂಡ ಇದ್ದರೆಂಬುದು ಕಂಡುಬರುತ್ತದೆ. ತೆಲುಗು ಜೊಮ್ಮಯ್ಯ, ಗಾಣದ ಕನ್ನಪ್ಪ, ಶ್ವಪಚಯ್ಯ, ಬೇಡರ ಕನ್ನಪ್ಪ, ಶಿರಿಯಾಳ-ಚಂಗಳೆ ಇವರಲ್ಲಿ ಯಾರೂ ಶಾಕಾಹಾರಿಗಳಲ್ಲ. ಆದರೂ ಅವರು ಶ್ರೇಷ್ಠತರದ ಶಿವಶರಣರೆಂದು ವೀರಶೈವರಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದಾರೆ.

ಜಂಗಮರು ಲಗ್ನವಾಗದವರಿರಲೇಬೇಕೆಂಬ ನಿಯಮವಿದ್ದ ಹಾಗೆ ತೋರುವದಿಲ್ಲ. ಲಗ್ನವಾಗುವದು ಅಥವಾ ಬಿಡುವದು ಅವರವರ ಇಷ್ಟದ ಮೇಲೆ ಇದ್ದಿತು. ರೇವಣಸಿದ್ಧ, ಪಂಡಿತಾರಾಧ್ಯ ಇವರು ಉಚ್ಚತರಗತಿಯ ಜಂಗಮರೆಂದು ಈಗಲೂ ಭಾವಿಸಲ್ಪಟ್ಟಿರುತ್ತಾರೆ. ಆದರೆ ಇವರೆಲ್ಲರೂ ಲಗ್ನವಾದವರಿದ್ದರು. ಆದರೂ ಅವರು ನಾಡಿನಲ್ಲಿ ಶ್ರೇಷ್ಠ ಶಿವಾನುಭವಿಗಳೆಂದು ಹೆಸರಾದರು. ಹಾಗೆಯೇ ವೇಮನಾರಾಧ್ಯ, ದೇವರ ದಾಸಿಮಯ್ಯ, ವರದಾನಿ ಗುಡ್ಡಮ್ಮ, ಬಸವೇಶ್ವರ, ಉರಿಲಿಂಗಪೆದ್ದಿ, ಇವರೆಲ್ಲರೂ ಲಗ್ನವಾದವರಿದ್ದರು. ಇವರಲ್ಲಿ ಕೆಲವರು ಭಕ್ತಸ್ಥಲದವರೂ ಕೆಲವರು ಜಂಗಮಸ್ಥಲದವರೂ ಇದ್ದಾರೆ. ಆದರೆ ಜನತೆಯ ದೃಷ್ಟಿಯಲ್ಲಿ ಅವರೆಲ್ಲರೂ ಉಚ್ಚತರಗತಿಯವರೆಂದು ಭಾವಿಸಲ್ಪಟ್ಟಿರುತ್ತಾರೆ.

ಈ ಜಂಗಮರ ಮೂಲಕವಾಗಿ ಹಿಂದಿನಕಾಲದಲ್ಲಿ ಲಿಂಗಾಂಗಿಗಳಾದ ವೀರಶೈವರಲ್ಲಿ ಒಂದು ಸಂಘಟನೆ ಯುಂಟಾಗಿತ್ತೆಂದು ತೋರುತ್ತದೆ. ಈ ಸಂಘಟನೆಗೋಸ್ಕರ ಕೆಲ ಕೇಂದ್ರಸ್ಥಾನಗಳಾಗಿದ್ದು ಅವು ಕಾಶ್ಮೀರದಲ್ಲಿದ್ದ ಮಾಂಡವ್ಯಪುರ, ಕಾಶೀಪಟ್ಟಣ, ಗುಜರಾಥದಲ್ಲಿ ಸೋಮೇಶ್ವರ, ಕರ್ನಾಟಕದಲ್ಲಿ ಕಲ್ಯಾಣ, ಪಟ್ಟದಕಲ್ಲು, ಪುಲಿಗೆರೆ, ಬನವಾಸಿ, ಮಂಗಳವಾಡ, ಮುದನೂರು, ಸಿದ್ಧಗಂಗಾ, ಆಂಧ್ರದೇಶದಲ್ಲಿ ದ್ರಾಕ್ಷಾರಾಮ, ಶ್ರೀಪರ್ವತ ಮತ್ತು ದ್ರಾವಿಡ ದೇಶದಲ್ಲಿ ಕಂಚಿ ಈ ಸ್ಥಳಗಳು ಇದ್ದಹಾಗೆ ಕಂಡು ಬರುತ್ತದೆ. ಜಂಗಮರ ದೊಡ್ಡ ವಸಾಹತುಗಳು ಈ ಸ್ಥಳಗಳಲ್ಲಿದ್ದು ಅಲ್ಲಿ ಅವರು ಶಿವಧರ್ಮವನ್ನು ಕುರಿತು ಯಾವಾಗಲೂ ಚರ್ಚಿಸುವರು.

ಮತ್ತು ಆಗಿಂದಾಗ್ಗೆ ದೇಶ ಸಂಚಾರ ಮಾಡುತ್ತ ವೀರಶೈವ ಧರ್ಮವನ್ನು ಎಲ್ಲಕಡೆಗೂ ಪ್ರಸಾರ ಮಾಡುವರು. ಈ ಕಾರ್ಯವು ಬಸವೇಶ್ವರನ ಕಿಂತಲೂ ಕೆಲವು ಶತಮಾನಗಳ ಹಿಂದೆಯೇ ನಡೆದು ಬಂದಿತ್ತು.

ಯಾವ ಸ್ಥಳದಲ್ಲಾದರೂ ವೀರಶೈವರಿಗೆ ಗಂಡಾಂತರಗಳು ಉಂಟಾಗಿದ್ದುದು ಕಂಡುಬಂದರೆ ಅಲ್ಲಿಯ ಜನರು ತಿಳಿಸಿದಕೂಡಲೇ, ಸುತ್ತಲಿನ ಪ್ರದೇಶಗಳಲ್ಲಿಯ ಜಂಗಮರು ಕೂಡಲೆ ಅಲ್ಲಿ ನೆರೆದು ಸ್ಥಳೀಯ ಜನರ ಸಹಾಯವನ್ನು ಹೊಂದಿ ಎಲ್ಲರೂ ಕೂಡಿ ಒಕ್ಕಟ್ಟಿನಿಂದ ಇದಿರಾಳಿಗಳನ್ನು ಇದಿರಿಸುವರು. ಪ್ರಸಂಗಬಂದರೆ ಕಾಳಗಮಾಡುವರು, ಇಲ್ಲವೇ ತಮ್ಮ ಧರ್ಮತತ್ವಗಳನ್ನು ಬಹಿರಂಗವಾಗಿ ಚರ್ಚಿಸಿ ಅವುಗಳನ್ನು ಪ್ರಸ್ಥಾಪಿಸುವರು. ಆಗ ಪೋವಾಡಗಳು ಹೇಳಲ್ಪಡುವದುಂಟು. ಇಂಥ ಪ್ರಸಂಗಗಳಲ್ಲಿ ಭಕ್ತಜಂಗಮರು ಶಸ್ತ್ರವನ್ನುಸಹ ಧರಿಸಿ ವೈರಿಗಳೊಡನೆ ಹೋರಾಡಿದ್ದುಂಟು. ಇಂಥ ಉದಾಹರಣೆಗಳು ಶಿವಶರಣರ ಚರಿತ್ರೆಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಕೆಳಗೆ ಉದಹರಿಸುತ್ತೇವೆ.

**ಬಾಳೇಹಳ್ಳಿಯ ಕಾಳಗ :—** ಮಲೆನಾಡಿನಲ್ಲಿದ್ದ ಈ ಗ್ರಾಮದಲ್ಲಿ ವೀರೇಶ ದೇವಾಲಯವಿದ್ದು ಅದರಲ್ಲಿಯ ಲಿಂಗವನ್ನು ಪರಧರ್ಮಿಗಳು ಕಿತ್ತು ಹೊಳೆಯಲ್ಲಿ ಬಿಸುಟಬಿಟ್ಟಿದ್ದರು. ಆಗ ರೇವಣ ಸಿದ್ಧೇಶ್ವರನ ಮಗನಾದ ರುದ್ರಮುನಿಯ ಶಿಷ್ಯನಾದ ಮುಕ್ತಿಮುನಿಯು ಶ್ರೀಶೈಲದಲ್ಲಿದ್ದು ಅವನು ಇದನ್ನು ಕೇಳಿ ತನ್ನ ಶಿಷ್ಯನಾದ ದಿಗಂಬರಸು ಮುಕ್ತಿಮುನಿಯನ್ನು ಈ ಮಲೆದೇಶಕ್ಕೆ ಕಳುಹಿಸಲು ಅವನು ಅನೇಕ ಚರಪತಿಗಳನ್ನು ಕೂಡಿಕೊಂಡು ಅಲ್ಲಿಗೆ ಬಂದು ಹೊಳೆಯಲ್ಲಿ ಬಿಸಾಟದ ವೀರೇಶನನ್ನು ಹೊನ್ನೂರಿನ ಬಳಿಯಲ್ಲಿ ಎತ್ತಿತಂದು ಅಲ್ಲಿ ಗುಡಿಯಲ್ಲಿ ಪ್ರತಿಷ್ಠಿಸಿದನು. ಆಗ ಅವನು ಕಾಳಗದಲ್ಲಿ ವೈರಿಗಳನ್ನು ಸೋಲಿಸಬೇಕಾಯಿತು. ಆಮೇಲೆ ಅವನು ಬಾಳೆಹಳ್ಳಿ ಎಂಬ ಪುರವನ್ನು ಕಟ್ಟಿಸಿ ಅಲ್ಲಿ ಅವನು ಸಿಂಹಾಸನಾಧೀಶನಾದನು ಈ ದಿಗಂಬರ ಮುಕ್ತಿಮುನಿಯ ತರುವಾಯ ಸುಕುಮಾರ ಚನ್ನಬಸವೇಶ್ವರನು ಸಿಂಹಾಸನಾಧೀಶನಾಗಿ ಶರಣರನ್ನು ಪಾಲಿಸುತ್ತ ಬಂದನು.

**ಮೂರುಡಿಗೆಯ ಕಾಳಗ :—** ವಿಜಾಪೂರ ಜಿಲ್ಲೆಯಲ್ಲಿರುವ ಸಿಂದಿಗಿ ಗ್ರಾಮದ ಪೂರ್ವಕ್ಕೆ ೨೪ ಮೈಲುಗಳ ಮೇಲೆ ಶಿವಪುರವೆಂಬ ಗ್ರಾಮವು ಇದೆ. ಅಲ್ಲಿಂದ ಮೂರುಡಿಗೆಯು ೨೦ ಮೈಲುಗಳಿದ್ದು ಅಲ್ಲಿ ಪುರಾತನ ಕಾಲದಲ್ಲಿ ಜೈನರ ದೊಡ್ಡ ಮಠಾಧಿಪತಿಯಿತ್ತು. ಅವರು ವೀರಶೈವರನ್ನು ಬಹಳ ಹಿಂಸೆಮಾಡುತ್ತಾ ಇದ್ದರು. ಇದನ್ನು ಶಿವಪುರದಲ್ಲಿದ್ದ ವೀರ ಶೈವರು ತಿಳಿದು ಜೈನರು ಮೊದಲು ಈ ಗ್ರಾಮದಲ್ಲಿದ್ದ ಶಿವಾಲಯವನ್ನು ತೆಗೆದು ಹಾಕಿದ್ದು ಅದನ್ನು ಪುನಃ ಪ್ರತಿಷ್ಠಿಸಬೇಕೆಂದು ನಿಶ್ಚಯಿಸಿ ಆ ಪುರವನ್ನು ಪ್ರವೇಶಿಸಿದರು. ಆದರೆ ಮೊದಲು ಅಲ್ಲಿಗೆ ಹೋದವರು ಜೈನರಿಂದ ಘಾತಿಸಲ್ಪಟ್ಟರು. ಇದನ್ನು ಸುತ್ತಲಿನ ಪ್ರದೇಶಗಳಲ್ಲಿದ್ದ ಭಕ್ತ ಜಂಗಮರು ತಿಳಿದು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಮೂರುಡಿಗೆಯ ಗ್ರಾಮವನ್ನು ಪ್ರವೇಶಿಸಲಾಗಿ ಅಲ್ಲಿ ತುಮುಲ ಯುದ್ಧವು ಉಭಯಪಕ್ಷಗಳಲ್ಲಿ ಎಸಗಿತು. ಅದರಲ್ಲಿ ಭಕ್ತರು ಜಯಶೀಲರಾದರು. ಮೂರುಡಿಗೆಯಲ್ಲಿದ್ದ ಮೊದಲಿನ ಶಿವದೇವಾಲಯಗಳನ್ನು ಪುನಃ ಪ್ರತಿಷ್ಠಿಸಿದರು. ಅಲ್ಲದೆ ಈ ಭಾಗದಲ್ಲಿದ್ದ ಅನೇಕ ಬಸದಿಗಳು ಶಿವಾಲಯಗಳಾಗಿ ಮಾಡಲ್ಪಟ್ಟವು. ಹೀಗೆ ಭಕ್ತರಿಗೆ ಮುಂದಾಳುವಾಗಿ ಯುದ್ಧ ಮಾಡಿದವನು ನಾಚಿದೇವನು. ಅವನು ವಚನಕಾರನಿದ್ದಾನೆ ಈ ಪ್ರಕಾರ ಭಕ್ತ ಜಂಗಮರು ಕೂಡಿಕೊಂಡು ಈ ಭಾಗದಲ್ಲಿ ವೀರಶೈವ ಮತವನ್ನು ಪ್ರತಿಷ್ಠಾಪಿಸಿದ್ದಾರೆ.

**ಅಲಂಪುರದ ಕಾಳಗ:–** ಈ ಕಾಳಗದಲ್ಲಿ ಮುಖ್ಯಸ್ಥಳಾಗಿ ತುಮುಲ ಯುದ್ಧವನ್ನೆಸಗಿದವಳು ಒಬ್ಬ ಸ್ತ್ರೀಯಳು. ಅವಳ ಹೆಸರು ವರದಾನಿ ಗುಡ್ಡಮ್ಮೆಯು. ಅವಳ ವಾಸಸ್ಥಳವು ವಿಜಾಪುರ ಪಟ್ಟಣದ ಪಶ್ಚಿಮಕ್ಕೆ ೬೫ ಮೈಲುಗಳಮೇಲೆ ಇರುವ ಗುಡ್ಡಾಪುರವು. ರಾಯಚೂರ ಜಿಲ್ಲೆಯಲ್ಲಿರುವ ಅಲಂಪುರವು ಒಂದು ಪ್ರಸಿದ್ಧ ಕ್ಷೇತ್ರಸ್ಥಳವಾಗಿದೆ. ಅಲ್ಲಿ ಜಾಲಬ್ರಹ್ಮೇಶ ಲಿಂಗವು ಬಹು ಪ್ರಸಿದ್ಧವಾದದ್ದು. ಈ ದೇವಸ್ಥಾನವು ಈಗಲೂ ಅಲ್ಲಿ ಇದೆ. ಅದರಲ್ಲಿಯ ಲಿಂಗವನ್ನು ವೈಷ್ಣವರು ಕಿತ್ತಿಹಾಕಿ ತುಂಗಭದ್ರಾ ನದಿಯಲ್ಲಿ ಬೀಸಾಟಿದ್ದರು. ಆಗ ಈ ದೇವಾಲಯದ ಪೂಜಾರಿಯಾದ ವೀರ ಮಾಚಯ್ಯನು ವರದಾನಿ ಗುಡ್ಡಮ್ಮೆಯಲ್ಲಿಗೆ ಹೋಗಿ ಅವಳಿಗೆ ಈ ಸಂಗತಿಯನ್ನು ಅರುಹಿದನು. ಅಷ್ಟರಲ್ಲಿ ಈ

ಭಾಗದಲ್ಲಿ ಅವಳಿಗೆ ಬಹುಜನ ಭಕ್ತರಾಗಿದ್ದರು. ಅವಳು ಅವರದೊಂದು ಸೇನೆಯನ್ನು ಅಣಿಮಾಡಿಕೊಂಡು ಅಲಂಪುರ ಗ್ರಾಮದಮೇಲೇರಿಹೋದಳು. ಆಗ ಅಲ್ಲಿ ಉಭಯ ಪಕ್ಷಗಳಲ್ಲಿ ಕಡುತರವಾದ ಕಾಳಗವೆಸಗಿತು. ಅದರಲ್ಲಿ ಭಕ್ತರು ಜಯಶೀಲರಾದರು. ಆಗ ಅವರು ಬಾಲ ಬ್ರಹ್ಮೇಶ ಲಿಂಗವನ್ನು ಪುನಃ ಸ್ವಸ್ಥಳದಲ್ಲಿ ಪ್ರತಿಷ್ಠಾಪಿಸಿದರು. ಇವರಿಂದ ವರದಾನಿಯಮ್ಮನು ಒಬ್ಬ ಶ್ರೇಷ್ಠ ಶಿವಶರಣೆಯು ಎಂಬ ಕೀರ್ತಿಯು ಸುತ್ತಲೂ ಹಬ್ಬಿತು. ಮತ್ತು ಅವಳಿಂದ ಬಹಳ ಜನರು ಲಿಂಗ ದೀಕ್ಷೆಯನ್ನು ಹೊಂದಿದರು.

ವರದಾನಿಯಮ್ಮನ ಸ್ಮರಣಾರ್ಥವಾಗಿ ದೇವಗಿರಿ ಯಾದವರ ವಂಶದವನಾದ ಮಹಾದೇವ ರಾಜನ ಮಾಂಡಲಿಕನಾದ ಸಾಯಿದೇವನು 'ವಾತಾಪ್ಯಪುರ' ಎಂಬ ಪಟ್ಟಣವನ್ನು ಭೀಮಾನದೀ ತೀರದಲ್ಲಿ ಹೊಸದಾಗಿ ಕಟ್ಟಿಸಿದನು. ಈ ಗ್ರಾಮಕ್ಕೆ ಈಗ 'ವಾಡಪುರ' ಎಂಬ ಹೆಸರು ಇದೆ. ಇದು ವಿಜಾಪುರ ಪಟ್ಟಣದ ಉತ್ತರಕ್ಕೆ ೫೦ ಮೈಲುಗಳ ಮೇಲೆ ಇದೆ. ಹೀಗೆ ಈ ಕಾಲದಲ್ಲಿ ಸ್ತ್ರೀಯರೂ ಭಕ್ತ ಜಂಗಮರೂ ಕೂಡಿಕೊಂಡು ಧರ್ಮಯುದ್ಧದಲ್ಲಿ ಎಸಗಿದ್ದಾರೆ.

**ಸಗರದ ಕಾಳಗ:**— ಸಗರವೆಂಬ ಗ್ರಾಮವು ಕಲಬುರ್ಗಿ ಜಿಲ್ಲೆಯಲ್ಲಿರುವ ಶಹಾಪುರ ಗ್ರಾಮಕ್ಕೆ ಸಮೀಪವಿರುತ್ತದೆ. ಇಲ್ಲಿ ಬ್ರಹ್ಮಯ್ಯನೆಂಬ ಶಿವಶರಣನು ವಾಸಮಾಡುತ್ತಿದ್ದನು. ಅವನು ಶಿವನೇ ದೈವತವೆಂದು ಭಾವಿಸಿ ಆಚರಿಸುತ್ತಿರಲು ಆ ಗ್ರಾಮದಲ್ಲಿದ್ದ ಜೈನರು ಜಿನನೇ ದೈವವೆಂದು ವಾದಿಸುತ್ತಿದ್ದರು. ಆಗ ಭಕ್ತರಿಗೂ ಜೈನರಿಗೂ ಕಾಳಗವಾಗಲು ಅವುಗಳಲ್ಲಿ ಭಕ್ತರು ಜಯಶೀಲರಾದರು. ಮುಂದೆ ಈ ಪ್ರಾಂತವಲ್ಲೆಲ್ಲ ಬಹುಜನರು ವೀರಶೈವ ಮತವನ್ನು ಸ್ವೀಕರಿಸಿದರು. ಸಗರದ ಬ್ರಹ್ಮಯ್ಯನು ವಚನಕಾರನಿದ್ದಾನೆ.

**ಕೊಪ್ಪೂರಿನ ೧ನೇ ಕಾಳಗ:**—ಕೊಪ್ಪೂರೆಂಬಲ್ಲಿ ಬ್ರಹ್ಮಯ್ಯನೆಂಬ ರಾಜನು ರಾಜ್ಯವಾಳುತ್ತಿದ್ದ. ಅವನು ಕೇವಲ ಶಿವಭಕ್ತನಾಗಿದ್ದನು. ಅವನ ರಾಜಧಾನಿಯಲ್ಲಿ ಜೈನರು ಬಹು ಪ್ರಬಲರಾಗಿದ್ದು ಅವರು ಅವನನ್ನು ಅತ್ಯಂತವಾಗಿ ವಿರೋಧಿಸುತ್ತಿದ್ದರು. ಅವರ ಸಂಖ್ಯೆಯು ಗ್ರಾಮ

ದಲ್ಲಿ ಬಹು ದೊಡ್ಡದಾಗಿತ್ತು. ಅವರು ರಾಜನು ಶಿವಾನುಭವ ಗೋಷ್ಠಿಯಲ್ಲಿ ಕೆಲವುಕಾಲ ಏಕಾಂತವಾಗಿ ಇರುವ ಸಮಯವನ್ನು ಸಾಧಿಸಿ ಅವನ ಮಗನನ್ನು ಕೊಂದುಹಾಕಿದರು. ಇದಾದ ಮೇಲೆ ಅರಸನು ಗ್ರಾಮದಲ್ಲಿ ಬಹು ವಿಜೃಂಭಣೆಯಿಂದ ಗಣಾರಾಧನೆಯನ್ನು ನಡಿಸುತ್ತಿರುವಾಗ ಅಸಂಖ್ಯ ಜಂಗಮರು ಮತ್ತು ಭಕ್ತರು ಪಟ್ಟಣದಲ್ಲಿ ನೆರೆದರು. ಆ ಸಮಯದಲ್ಲಿ ಅರಸನು ತನ್ನ ಅರಮನೆಯಲ್ಲಿ ಲಿಂಗ ಪ್ರತಿಷ್ಠೆಯನ್ನು ಮಾಡಿದನು. ಜೈನರು ಇದನ್ನು ನೋಡಿ ಸಹಿಸಲಾರದೆ ಅರಸನ ಅರಮನೆಯನ್ನು ಮುತ್ತಿ ಯುದ್ಧವನ್ನು ಪ್ರಾರಂಭಿಸಿದರು. ಆದರೆ ಅರಸನು ಬಹುಜನ ಭಕ್ತರನ್ನು ಆಗ ಬರಮಾಡಿಕೊಂಡಿದ್ದರಿಂದ ಅವನು ಜೈನರನ್ನು ಹಿಮ್ಮೆಟ್ಟಿಸಿ ಅವರ ಬಸದಿಗಳಲ್ಲಿದ್ದ ಜೈನ ಮೂರ್ತಿಗಳನ್ನು ಒಡೆಯಿಸಿದನು. ಆವರೆ ಮುಂದೆ ಕೆಲ ಘಟನೆಗಳಾದಂತೆ ತೋರುತ್ತದೆ. ಅವು ಅವನ ಚರಿತ್ರೆಯಲ್ಲಿ ಹೇಳಲ್ಪಟ್ಟಿಲ್ಲ. ಮುಂದೆ ಬ್ರಹ್ಮಯ್ಯನು ಕೈಲಾಸಕ್ಕೆ ತನ್ನ ಭಕ್ತ ಜನರೊಡನೆ ಬರಬೇಕೆಂದು ಒಂದು ಶಿವಲಿಖಿತವು ಅವನ ಇದಿರಿಗೆ ಬೀಳಲಾಗಿ ಅರಸನು ಭಕ್ತರನ್ನು ಕೂಡಿಕೊಂಡು ತನ್ನ ಕುಲದೈವತವಾದ ರಾಮನಾಥನ ದೇವಾಲಯಕ್ಕೆ ಹೋಗಿ ಅಲ್ಲಿ ದೇವರಿದುರಿಗೆ ಅವರೆಲ್ಲರು ತಮ್ಮನ್ನು ಕಡಿದುಕೊಂಡು ತಮ್ಮ ಪ್ರಾಣವನ್ನು ದೇವರಿಗೆ ಅರ್ಪಿಸಿ ಶಿವಪದವನ್ನು ಹೊಂದಿದರು. ಒಟ್ಟಿಗೆ ಈ ಗ್ರಾಮದಲ್ಲಿ ಘೋರ ಯುದ್ಧಗಳು ನಡೆದು ಅವುಗಳಲ್ಲಿ ಶಿವಶರಣರು ಕಡೆಗೆ ಮೃತಿಯನ್ನು ಹೊಂದಿದಹಾಗೆ ನಮಗೆ ಕಾಣುತ್ತದೆ. ನಾವು ಮೊದಲು ತಿಳಿದಂತೆ ಕೋವೂರು ಜತ್ತಿ ತಾಲೂಕಿನಲ್ಲಿಯು ಕೋಹಳ್ಳಿಯಾಗಿರದೆ, ಅದು ಬೀದರ ಪಟ್ಟಣದ ಸಮೀಪದಲ್ಲಿರುತ್ತದೆಂದು ನಾವು ಕೇಳಿದ್ದೇವೆ.

**ಕೋವೂರಿನ ೨ನೇ ಕಾಳಗ:—** ಈ ಕಾಲದಲ್ಲಿ ಕೋವೂರಲ್ಲಿ ಮಾಧವನೆಂಬ ವಿಷ್ಣುಭಕ್ತನು ರಾಜ್ಯವನ್ನಾಳುತ್ತಿದ್ದನು. ಅವನಿಗೆ ಭಾಸ್ಕರನೆಂಬ ಮಗನಿದ್ದನು. ಈ ಗ್ರಾಮದಲ್ಲಿ ಭೀಮಯ್ಯನೆಂಬ ಶಿವಭಕ್ತನಿದ್ದು ಅವನು ತನ್ನ ಮಗಳು ಚಂದ್ರಾಣಿಯನ್ನು ಬದಿರುಕೋಟೆ (ಬೀದರ) ಯಲ್ಲಿದ್ದ ವೀರ ಸಂಗಯ್ಯನಿಗೆ ಕೊಟ್ಟು ಲಗ್ನಮಾಡಬೇಕೆಂದಿದ್ದನು. ಆದರೆ ಭಾಸ್ಕರನು ಅವಳನ್ನು ತನಗೆ ಕೊಡಬೇಕೆಂದು ಆಗ್ರಹ ಮಾಡಲು ಅದಕ್ಕೆ ಭೀಮಯ್ಯನು ಒಪ್ಪದೆ, ವೀರ ಸಂಗಯ್ಯನನ್ನು ಬರಮಾಡಿಕೊಂಡು ಲಗ್ನ

ಸಮಸ್ತಾರಂಭವನ್ನು ನಡಿಸಿ ಅದನ್ನು ಮುಗಿಸಿದನು. ಆಗ ಭಾಸ್ಕರನು ಮತ್ತಿಷ್ಟು ಕೆರಳಿದವನಾಗಿ ತನ್ನ ಸೈನ್ಯದೊಂದಿಗೆ ವೀರ ಸಂಗಯ್ಯನು ಹಿಂದಿರುಗಿ ಹೋಗುವ ಕಾಲದಲ್ಲಿ ಅವನ ಜನರ ಮೇಲೆ ಬಿದ್ದು ಕಾಳಗವನ್ನು ಪ್ರಾರಂಭಿಸಿದನು. ಅದರಲ್ಲಿ ಭಾಸ್ಕರನು ಸೋತು ಓಡಿಹೋದನು. ಆದರೆ ಆತನು ಮುಂದೆ ಒಬ್ಬ ಜಂಗಮನ ವೇಷ ಧಾರಣ ಮಾಡಿಕೊಂಡು ವೀರಸಂಗಯ್ಯನನ್ನು ಕಂಡಾಗ್ಗೆ ಅವನನ್ನು ವೀರಸಂಗಯ್ಯನು ನಮಸ್ಕರಿಸುತ್ತಿರಲು ಕಠಾರಿಯಿಂದ ಅವನನ್ನು ತಿವಿದನು. ಆಗ ವೀರಸಂಗಯ್ಯನು ಅವನ ಜಂಗಮ ವೇಷವನ್ನು ನೋಡಿ ಅವನು ಮಾಡಿದ ತಪ್ಪನ್ನು ಕ್ಷಮಿಸಿದನು. ಭಾಸ್ಕರನು ವೀರಸಂಗಯ್ಯನ ಈ ವೃತ್ತಿಗೆ ಪಶ್ಚಾತ್ತಾಪವನ್ನು ಹೊಂದಿ ಅವನೂ ಅವನ ಬಂಧು ಬಳಗದವರೂ ವೀರಶೈವ ದೀಕ್ಷೆಯನ್ನು ಹೊಂದಿದರು.

**ಪುಲಿಗೆರೆಯ ಕಾಳಗ :—** ಗುಜರಾಥ ದೇಶದಲ್ಲಿ ಆದಿಶೆಟ್ಟಿ ಎಂಬ ವ್ಯಾಪಾರಸ್ಥನು ಸೌರಾಷ್ಟ್ರ ಸೋಮೇಶ್ವರನ ಕೇವಲ ಭಕ್ತನಾಗಿದ್ದನು. ಅವನು ವ್ಯಾಪಾರಕ್ಕೋಸ್ಕರ ಧಾರವಾಡ ಜಿಲ್ಲೆಯಲ್ಲಿರುವ ಅಣ್ಣಿಗೇರಿಗೆ ಬಂದು ಅಲ್ಲಿ ಕೆಲವು ದಿವಸವಿದ್ದು ಆ ಮೇಲೆ ಈ ಭಾಗದ ಮುಖ್ಯ ಪಟ್ಟಣವಾದ ಪುಲಿಗೆರೆ ಅಂದರೆ ಲಕ್ಷ್ಮೇಶ್ವರಕ್ಕೆ ಬಂದನು. ಅವನು ಅಲ್ಲಿರುವಾಗ ಪದ್ಮಾವತಿ ಎಂಬ ಜೈನ ಸ್ತ್ರೀಯಳಿಗೆ ಮೋಹಿತನಾಗಿ ಅವಳ ತಾಯಿತಂದೆಗಳ ಒಪ್ಪಿಗೆಯಿಂದ ಆಕೆಯ ಲಗ್ನವಾದನು. ಉಭಯ ದಂಪತಿಗಳು ಶಿವಭಕ್ತರಾಗಿ ಪುಲಿಗೆರೆಯಲ್ಲಿಯೇ ವಾಸವಾಡುತ್ತಿದ್ದರು. ಹೀಗಿರಲು ಕೆಲವು ಜಂಗಮರು ಪಟ್ಟಣಕ್ಕೆ ಬಂದಿರಲು ಆದಯ್ಯನು ಅವರಿಗೋಸ್ಕರ ಮನೆಯಲ್ಲಿ ಭೋಜನವನ್ನು ಏರ್ಪಡಿಸಿದನು. ಆದರೆ ಅಷ್ಟರಲ್ಲಿ ಕೆಲವು ಜೈನ ಯತಿಗಳು ಪದ್ಮಾವತಿಯ ತಾಯಿಯ ಮನೆಗೆ ಬರಲು ಜಂಗಮರ ಸಲುವಾಗಿ ಪದ್ಮಾವತಿಯು ಸಿದ್ಧಪಡಿಸಿದ ಆಹಾರ ಪದಾರ್ಥಗಳನ್ನು ಅವಳ ತಾಯಿಯು ಕಸೆದುಕೊಂಡು ಹೋಗಿ ಜೈನ ಯತಿಗಳಿಗೆ ನೀಡಿದಳು. ಇದರಿಂದ ಆದಯ್ಯನ ಮನೆಗೆ ಬಂದ ಜಂಗಮರು ಭೋಜನವಿಲ್ಲದೆ ಹಿಂದಿರುಗಬೇಕಾಯಿತು. ಇದರಿಂದ ಆದಯ್ಯನ ಮನಸ್ಸು ನೊಂದವನಾಗಿ ತನ್ನ ಹೆಂಡತಿಯ ತಂದೆಯಾದ ಪಾರಿಸಶೆಟ್ಟಿಯನ್ನು ಕೇಳಲಾಗಿ

ಅವನು-ನೀನೇತರ ಭಕ್ತ ? ಅವರೆಲ್ಲಿಯ ಜಂಗಮರು ? ನೀನು ನಿನ್ನ ಸೋಮೇಶ್ವರನನ್ನು ಇಲ್ಲಿಗೆ ತಂದರೆ ನೀನು ಭಕ್ತನು, ಇಲ್ಲದಿದ್ದರೆ ಇಲ್ಲ, ಎಂದು ನಿಂದಿಸಿ ನುಡಿದನು. ಆದಯ್ಯನು ಅದಕ್ಕೆ ಖತಿಗೊಂಡು ಒಂದು ತಿಂಗಳಲ್ಲಿ ಸೌರಾಷ್ಟ್ರ ಸೋಮೇಶ್ವರನನ್ನು ಇಲ್ಲಿಯ ಸುರಹೊನ್ನೆ ಬಸದಿಯಲ್ಲಿ ಸ್ಥಾಪಿಸಿಬಿಡುವೆನೆಂದು ಪ್ರತಿಜ್ಞೆ ಮಾಡಿದನು. ಆ ಮೇಲೆ ಅವನು ಉತ್ತರಾಭಿಮುಖನಾಗಿ ಸೌರಾಷ್ಟ್ರ ಸೋಮೇಶ್ವರನನ್ನು ತರಲು ಹೊರಟನು. ಆಗ ಒಂದು ಪವಾಡವಾಗುತ್ತದೆ. ಶಿವನು ಆದಯ್ಯನ ಪ್ರವಾಸದ ಕಷ್ಟಕ್ಕೆ ಮನಸ್ಸು ನೊಂದವನಾಗಿ, ಅವನಿಗೆ ಪ್ರತ್ಯಕ್ಷನಾಗಿ ನಾನೇ ಪುಲಿಗೆರೆಗೆ ಬಂದು ಸುರಹೊನ್ನೆ ಬಸದಿಯಲ್ಲಿ ನೆಲಿಸುವೆನು, ಎಂದು ಹೇಳುವನು. ಆ ದಿವಸ ರಾತ್ರಿ ಆದಯ್ಯನು ಅಲ್ಲಿಯೇ ನಿದ್ರೆ ಹೋಗಿರಲಾಗಿ ಮರುದಿನ ಮುಂಜಾವಿನಲ್ಲಿ ಅವನು ಪುಲಿಗೆರೆಯಲ್ಲಿ ಎಚ್ಚರಾದನು. ಆ ದಿನ ಬೆಳಗ್ಗೆ ಸುರಹೊನ್ನೆ ಬಸ್ತಿಯನ್ನು ಜೈನರು ತೆರೆದುನೋಡಲಾಗಿ ಅದರಲ್ಲಿಯ ಜೈನ ಮೂರ್ತಿಗಳೆಲ್ಲವೂ ಭಗ್ನವಾಗಿದ್ದವು ಮತ್ತು ಒಂದು ಉಜ್ವಲ ಲಿಂಗವು ಅವುಗಳ ಮಧ್ಯದಲ್ಲಿ ಉದ್ಭವಿಸಿತ್ತು. ಪಟ್ಟಣದಲ್ಲಿಯ ಜೈನರು ಇದನ್ನು ನೋಡಿ ಖತಿಗೊಂಡು ಇದು ಆದಯ್ಯನ ಕೃತಕವೆಂದು ತಿಳಿದು ಅವರು ಅವನ ಮೇಲೇರಿ ಹೋದರು. ಆದರೆ ಅಷ್ಟರಲ್ಲಿ ಅವನ ಸಹಾಯಕ್ಕೋಸ್ಕರ ಇಬ್ಬರು ಗಣಾಧೀಶ್ವರರು ಖಡ್ಗಧಾರಿಗಳಾಗಿ ದೇವಾಲಯದೊಳಗಿಂದ ಹೊರಗೆ ಬಂದು ನಿಂತರು. ಈ ಮೂವರು ಬಾಗಿಲಲ್ಲಿ ಜೈನರನ್ನು ತಡೆದು ಅವರಲ್ಲಿ ಮುಂದೆ ಬಂದವರನ್ನು ಸಂಹರಿಸಹತ್ತಿದರು. ಹೀಗೆ ಎರಡು ಸಾವಿರ ಜೈನರು ದೇವಾಲಯದ ಮುಂದೆ ಮಡಿಯಲು, ಉಳಿದವರು ಓಡಿಹೋದರು.

ಹೀಗೆ ರಾಘವಾಂಕನ ಸೋಮನಾಥ ಪುರಾಣದಲ್ಲಿ ಕಥೆ ಇದೆ. ಆದರೆ ಇದರಲ್ಲಿಯ ಪವಾಡ ವಿಷಯಗಳನ್ನು ಬಿಟ್ಟು ಬಿಟ್ಟರೆ, ಆದಯ್ಯನು ಒಂದು ತಿಂಗಳ ತನಕ ಸುತ್ತಲೂ ಪ್ರವಾಸ ಮಾಡಿ ವೀರಶೈವರ ಬಲವನ್ನು ಶೇಖರಿಸಿ, ಅವರೊಡನೆ ಪುಲಿಗೆರೆಗೆ ಬಂದು ಅಲ್ಲಿಯ ಜೈನರೊಡನೆ ಕಾಳಗವನ್ನು ಪ್ರಾರಂಭಿಸಿರಬೇಕು, ಆಗ ಅವರು ಜೈನರನ್ನು ಸೋಲಿಸಿ ಸುರಹೊನ್ನೆ ಬಸ್ತಿಯನ್ನು ಶಿವಾಲಯವನ್ನಾಗಿ ಮಾಡಿರಬೇಕೆಂದು ಊಹಿಸಬಹುದಾಗಿದೆ. ಆದರೆ ಯಾವ ಕಥೆಯನ್ನು ತೆಗೆದುಕೊಂ

ಗರೂ ಉಗ್ರರು ಪಕ್ಷಗಳಲ್ಲಿ ಕಾಳಗನಾಗಿರಬೇಕು ಮತ್ತು ಅದರಲ್ಲಿ ಜೈನರು ಸೋತುಹೋಗಿರಬೇಕು ಎಂದು ತಿಳಿಯಲು ಯಾವ ಪ್ರತ್ಯವಾಯುವಿಲ್ಲ. ಪುಲಿಗೆರೆಯು ಈ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಒಬ್ಬ ಮಂಡಲಾಧಿಪತಿಯ ಮಹತ್ವದ ರಾಜಧಾನಿಯಾಗಿತ್ತು. ಅಲ್ಲಿ ಜೈನರು ಬಹು ಸಂಖ್ಯಾಕರಾಗಿ ಬಲಿಷ್ಠರಾಗಿದ್ದರು. ಆದರೆ ಯುದ್ಧದಲ್ಲಿ ಅವರು ಸೋತದ್ದರಿಂದ ಪಟ್ಟಣದಲ್ಲಿಯ ಎಲ್ಲ ಜಿನಾಲಯಗಳು ಶಿವಾಲಯಗಳಾದವು. ಇದರ ತರುವಾಯ ಈಭಾಗದಲ್ಲಿ ವೀರಶೈವ ಧರ್ಮವು ತೀವ್ರವಾಗಿ ಪ್ರಸಾರ ಹೊಂದಿರಬೇಕೆಂದು ತೋರುತ್ತದೆ.

**ಪಾನುಗಲ್ಲಿನ ಕಾಳಗ :—** ಪಾನುಗಲ್ಲು ಈಗ ಹೈದ್ರಾಬಾದ ಇಲಾಖೆಯಲ್ಲಿ ಮಹಬೂಬನಗರ ಜಿಲ್ಲೆಯಲ್ಲಿರುತ್ತದೆ. ಅಲ್ಲಿ ಉದಯ ಭೂಪಾಲನೆಂಬ ರಾಜನು ಆಳುತ್ತಿದ್ದನು ಅವನು ಶಿವಭಕ್ತರನ್ನು ಅತೀವ ಪೀಡಿಸುವವನಾಗಿದ್ದನು.

ಮಲ್ಲಿಕಾರ್ಜುನ ಪಂಡಿತಾರಾಧ್ಯನು ಬಸವೇಶ್ವರನನ್ನು ಕಾಣಲು ಬಯಸಿ ಅಮರಗುಂಡ ಕ್ಷೇತ್ರದಿಂದ ಹೊರಟು ನಡುಗೂಡಿನ ಮಾರ್ಗವಾಗಿ ಪಾನುಗಲ್ಲಿನಲ್ಲಿ ಬಂದು ತಳುವಿದನು. ಇಲ್ಲಿಂದ ಅವನು ವನಿಪುರಕ್ಕೆ ಹೋಗಿ ಅಲ್ಲಿಂದ ಕಲ್ಯಾಣ ಪಟ್ಟಣಕ್ಕೆ ಬರತಕ್ಕವನಾಗಿದ್ದನು.

ಪಂಡಿತಾರಾಧ್ಯನು ಪಾನುಗಲ್ಲಿನಲ್ಲಿರುವಾಗ್ಗೆ ಅಲ್ಲಿ ಧವಳೇಶ್ವರನೆಂಬ ಅವನ ಶಿಷ್ಯನು ಅವನಿಗೆ ಬಹಳ ಉಪಚರಿಸಿದನು. ಧವಳೇಶ್ವರನು ಅರಸನ ಊಳಿಗದವನಾಗಿದ್ದನು. ಅವನು ಉಪಚರಿಸುವದನ್ನು ಪಂಡಿತಾರಾಧ್ಯನ ವಿರೋಧಿಗಳು ಕಂಡು ತಡೆಹಿಡಿಸಲಾರದೆ ಅರಸನಿಗೆ ದೂರು ಹೇಳಲು ಅರಸನು ಧವಳೇಶ್ವರನನ್ನು ಕರಿಸಿ ಪಂಡಿತಾರಾಧ್ಯನನ್ನು ನೀನು ಸೇವಿಸಬಾರದೆಂದು ಎಚ್ಚರಿಸಿದನು. ಅದಕ್ಕೆ ಧವಳೇಶ್ವರನು ನಿನ್ನ ಸೇವೆಯಲ್ಲಿದ್ದ ಈ ಶರೀರವನ್ನು ನೀನು ತೆಗೆದುಕೋ, ಎಂದು ತನ್ನ ಖಡ್ಗದಿಂದ ತನ್ನ ಶಿರಸ್ಸನ್ನು ಕತ್ತರಿಸಿ ಅರಸನಿಗೊಪ್ಪಿಸಿದನು. ಆದರೆ ಅವನಲ್ಲಿದ್ದ ಗಣಾಚಾರವು ರೂಪುಗೊಂಡು ಅರಸ ಕೈಯಲ್ಲಿದ್ದ ಖಡ್ಗದಿಂದಲೇ ಅರಸನನ್ನು ಕೊಂದುಹಾಕಿತು. ಆಗ ಉಭ

ಯುಪಕ್ಷಗಳಲ್ಲಿ ತುಮುಲ ಯುದ್ಧವು ಪ್ರಾರಂಭವಾಯಿತು. ಅದರಲ್ಲಿ ಅರಸನ ಸೈನ್ಯವು ಸೋತು ಮುರಿದುಹೋಯಿತು. ಸೈನ್ಯವು ಮುರಿದದ್ದು ಧವಳೇಶ್ವರನೊಬ್ಬನಿಂದಲೇ ಎಂದು ಕಥೆಯಲ್ಲಿ ಹೇಳಿದೆ. ಆದರೂ ಪಂಡಿತಾರಾಧ್ಯನು ಬಸವೇಶ್ವರನನ್ನು ಕಾಣಲು ಹೊರಟಾಗ ಅಸಂಖ್ಯ ಭಕ್ತರು ಅವನೊಡನೆ ಅಲ್ಲಿ ಇದ್ದುದು ಗ್ರಂಥಗಳಲ್ಲಿದೆ. ಇವರು ತಮ್ಮನ್ನು ಇದಿರಿಸಿದ ಉಪಯಭೂಪಾಲನ ಸೈನ್ಯದೊಂದಿಗೆ ಕಾದಿ ಅದನ್ನು ಸೋಲಿಸಿ ಅರಸನನ್ನು ಕೊಂದುಹಾಕಿರಬೇಕೆಂದು ನಮಗೆ ತೋರುತ್ತದೆ. ಈ ಕಾಲದಲ್ಲಿ ಧವಳೇಶ್ವರನೂ ಕೂಡ ಮಡಿದಿರಬೇಕು.

ಇಲ್ಲಿಂದ ಪಂಡಿತಾರಾಧ್ಯನು ಕಲ್ಯಾಣಕ್ಕೆ ಹೊರಟನು. ಅವನು ವನಿಪುರಕ್ಕೆ ಬಂದಾಗ್ಗೆ ಬಸವೇಶ್ವರನು ಕಪ್ಪಡಿ ಸಂಗಮನಾಥನಲ್ಲಿ ಐಕ್ಯವಾದನೆಂಬ ವಾರ್ತೆಯನ್ನು ಕೇಳಿ ಅವನು ಹಿಂದಿರುಗಿದನೆಂದು ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ.

**ಪರಳಿಯ ಕಾಳಗ:—** ಗೋದಾವರೀ ತೀರಕ್ಕೆ ಸಮೀಪವಾಗಿ ಪರಳೀ ಎಂಬ ಗ್ರಾಮವಿರುತ್ತದೆ. ಪರವಳಗೆ ಎಂಬುವು ಇದರ ಪುರಾತನ ಕನ್ನಡ ಹೆಸರು. ಇದು ಮೈಡವ್ವೆಯು ಇದ್ದ ಗ್ರಾಮವು. ಇಲ್ಲಿ ಕಾಳಗವಾಯಿತೆಂದು ಸ್ಪಷ್ಟ ಉಲ್ಲೇಖವು ದೊರೆಯದಿದ್ದರೂ ಅಲ್ಲಿ ಕಾಳಗವಾಗಿರಬೇಕೆಂದು ನಮ್ಮ ಊಹೆ ಇದೆ. ಮೈಡವ್ವೆಯು ಶಿವಭಕ್ತಳು. ಆದರೆ ಆಕೆಯ ತಾಯಿತಂದೆಗಳು ಅವಳನ್ನು ನೇಮಿಸೆಟ್ಟಿ ಎಂಬ ಜೈನನಿಗೆ ಕೊಟ್ಟು ಲಗ್ನ ಮಾಡಿದರು. ಆದರೆ ಮೈಡವ್ವೆಯು ಗುಪ್ತ ಭಕ್ತೆಯುಳ್ಳವಳಾಗಿ ಲಿಂಗಾರಾಧನೆಯಲ್ಲಿರುತ್ತಿದ್ದಳು. ಒಂದುದಿನ ಆಕೆಯು ಪತಿಯು ಹೇಳಿದಂತೆ ಜೈನರಿಗೋಸ್ಕರ ಸಿದ್ಧಪಡಿಸಿದ ಆಹಾರ ಪದಾರ್ಥಗಳನ್ನು ಜಂಗಮರಿಗೆ ಕೊಟ್ಟಿದ್ದನ್ನು ಆಕೆಯ ಗಂಡನು ನೋಡಿ ಕುಪಿತನಾಗಿ ಆಕೆಯನ್ನು ಹೊಡೆದು ಬಡಿದು ಬಹಳ ಹಿಂಸಿಸಿದನು. ಆ ಗ್ರಾಮದಲ್ಲಿ ಒಂದು ಪ್ರಸಿದ್ಧ ಜಿನಾಲಯವಿದ್ದಿತು. ಮೈಡವ್ವೆಯ ಹಿಂಸೆಯ ಮೂಲಕ ಮಾರನೆದಿನ ಅದರ ಬಾಗಿಲು ತೆರೆಯದಿರಲು ಜೈನರು ಮೈಡವ್ವೆಯನ್ನು ಪ್ರಾರ್ಥಿಸಿದ್ದರಿಂದ ಅವಳು ಬಾಗಿಲನ್ನು ಮುಟ್ಟಿದ ಕೂಡಲೆ ಬಾಗಿಲುಗಳು ತಾವಾಗಿಯೇ ತೆರೆದವು. ಆಗ ಒಳಗಿದ್ದ ಜೈನ ಪ್ರತಿಮೆಗಳೆಲ್ಲ

ಉರುಳಿ ಬಿದ್ದದ್ದನ್ನೂ ಮಧ್ಯದಲ್ಲಿ ಒಂದು ಶಿವಲಿಂಗವು ಮೂಡಿದ್ದನ್ನೂ ಜೈನರು ಕಂಡು ಚಕಿತರಾಗಿ ಅವರೆಲ್ಲರೂ ಲಿಂಗಧಾರಿಗಳಾದರು. ಆದರೂ ವೈಜವ್ವೆಯು ಆ ಲಿಂಗದಲ್ಲಿಯೇ ಐಕ್ಯಳಾದಳು. ಅಂದಿನಿಂದ ವೈಜನಾಥ ದೇವಾಲಯುವೆಂದು ಅದು ಪ್ರಸಿದ್ಧವಾಯಿತು. ಹೀಗೆ ಈಕೆಯ ಕಥೆಯು ಇದೆ. ಆದರೆ ಪೂರ್ವಾಪರವು ಹೀಗಿದ್ದರೂ ಸೋಮನಾಥನು ವೈಜವ್ವೆಯನ್ನು ಕೊಂದುಹಾಕಿರಬೇಕೆಂದು ನಮ್ಮ ಊಹೆ ಇದೆ. ವೈಜವ್ವೆಯ ಮೇಲೆ ಈ ಕ್ರೂರ ಕೃತ್ಯವು ಜರಗಿದ್ದರಿಂದ ಸುತ್ತಲಿನ ಪ್ರದೇಶಗಳಲ್ಲಿದ್ದ ವೀರ ಶೈವರು ಕುಪಿತರಾಗಿ ಪರವಳಿಗೆಯ ಮೇಲೇರಿ ಬಂದು ಜೈನರನ್ನು ಸೋಲಿಸಿ ಅಲ್ಲಿದ್ದ ದೇವಾಲಯಗಳಲ್ಲಿದ್ದ ಜಿನ ಮೂರ್ತಿಗಳನ್ನು ಒಡೆದು ಹಾಕಿ ಅವುಗಳನ್ನು ಶಿವಾಲಯಗಳನ್ನಾಗಿ ಮಾಡಿರಬೇಕೆಂದು ತೋರುತ್ತದೆ. ವೈಜವ್ವೆಯು ಪ್ರಾಣಕೊಟ್ಟದ್ದರಿಂದ ಆಕೆಯ ಹೆಸರಿನಿಂದ ವೈಜನಾಥ ಲಿಂಗವನ್ನು ವೀರಶೈವರು ಇಲ್ಲಿ ಸ್ಥಾಪಿಸಿರಬೇಕು. ಈ ಘಟನೆಯ ಮೂಲಕ ಈ ದೇವಾಲಯವು 'ಪರಳೀ ವೈಜನಾಥ' ಎಂದು ಮಹಾ ರಾಷ್ಟ್ರ ದೇಶದಲ್ಲೆಲ್ಲ ಈಗಲೂ ಅತ್ಯಂತ ಪ್ರಸಿದ್ಧಿಯನ್ನು ಹೊಂದಿರುತ್ತದೆ. ಹರಿಹರ ಕವಿಯು ವೈಜವ್ವೆಯ ರಗಳೆಯನ್ನು ರಚಿಸಿದ್ದಾನೆ. ವೈಜ ವ್ವೆಯು ತನ್ನ ಧರ್ಮದಂತೆ ನಡೆಯುವಲ್ಲಿ ತನ್ನ ಪ್ರಾಣ ಕೊಟ್ಟದ್ದರಿಂದ ಜೈನರಿಗೂ ವೀರಶೈವರಿಗೂ ಇಲ್ಲಿ ಕಾಳಗವಾಗಿರಬೇಕು.

**ಧನದ ಮರದ ಕಾಳಗ:** — ಗುಂಟೂರ ಜಿಲ್ಲೆಯಲ್ಲಿ ಚಂದ್ರ ವ್ರೋಲು ಎಂಬ ಹೆಸರಿನ ಗ್ರಾಮವು ಈಗಲೂ ಇರುತ್ತದೆ. ಧನದ ಮರ ವೆಂದು ಇದರ ಪುರಾತನ ಹೆಸರು. ಇಲ್ಲಿ ವೆಲ್ನಾಡ ಚೋಳನು ರಾಜ್ಯ ವಾಳುತ್ತಿದ್ದನು. ಅವನು ಬೌದ್ಧ ಧರ್ಮದಂತೆ ಆಚರಿಸುವವನಾಗಿದ್ದನು. ಮಲ್ಲಿಕಾರ್ಜುನ ಪಂಡಿತಾರಾಧ್ಯನು ಶಿವನೇ ದೈವವು, ಅವನೊಬ್ಬನೇ ಇದ್ದಾನೆಂದು ಅರಸನ ಗುರುವಾದ ಬೌದ್ಧಾಚಾರ್ಯನೊಡನೆ ವಾದಿಸಿ ಅವನನ್ನು ಸೋಲಿಸಿದನು. ಅದಕ್ಕೆ ಬೌದ್ಧರು ಕುಪಿತರಾಗಿ ಪಟ್ಟಣ ದಲ್ಲಿದ್ದ ಮಲ್ಲಿಕಾರ್ಜುನ ದೇವಾಲಯದ ಮುಂದೆ ಇದ್ದ ದೀಪಮಾಲೆಯ ಕಂಭವನ್ನು ಕಿತ್ತು ಅದರ ಅರ್ಚಕನನ್ನು ಕೊಂದುಹಾಕಿದರು ಮತ್ತು ಆ ಕಂಭವನ್ನು ದೀವೀ ಖಂಡವೆಂಬ ಹೆಸರಿನ ನೆರೆಯ ದ್ವೀಪದಲ್ಲಿದ್ದ

ಬುದ್ಧ ದೇವಾಲಯದ ಮುಂದೆ ನಡೆಸಿದರು. ಇದು ಮಲ್ಲಿಕಾರ್ಜುನ ಪಂಡಿತಾರಾಧ್ಯನಿಗೆ ತಿಳಿಯಿತು. ಆಗ ಅವನ ಅಪ್ಪಣೆಯ ಪ್ರಕಾರ ಅವನ ಶಿಷ್ಯನಾದ ರೇವಯ್ಯ ದೇವನು ಧನದ ಮರಕ್ಕೆ ಹೋಗಿ ಬೌದ್ಧಾಚಾರ್ಯನನ್ನು ಕೊಂದುಹಾಕಿ ಆ ಕಂಭವನ್ನು ಮೊದಲಿನಂತೆ ಶಿವಾಲಯದ ಇದಿರಿಗೆ ನಡೆಸಿದನು. ಆಗ ವೆಲ್ನಾಡ ಚೋಳನು ರೇವಯ್ಯ ದೇವನ ಕಣ್ಣುಗಳನ್ನು ಕೀಳಿಸಿದನು. ಈ ಕಾಲಕ್ಕೆ ಯುದ್ಧವಾಗಿರಬೇ ಕೆಂದು ನಮ್ಮ ಊಹೆ ಇದೆ. ಆದರೆ ಹೀಗೆ ಕಣ್ಣುಗಳನ್ನು ಕೀಳಿಸಿದ ಬಳಿಕ ಒಂದು ಪವಾಡವಾಯಿತೆಂದು ಚರಿತ್ರೆಯಲ್ಲಿ ಹೇಳಲ್ಪಟ್ಟಿದೆ. ಅದರ ಪ್ರಕಾರ ರೇವಯ್ಯನ ಕಣ್ಣುಗಳು ತಿರುಗಿ ಬಂದವು. ಆದರೆ ಉಭಯ ಪಕ್ಷಗಳಲ್ಲಿ ಕಾಳಗವಾದದ್ದರ ಸ್ಪಷ್ಟ ಉಲ್ಲೇಖವಿಲ್ಲ. ರೇವಯ್ಯ ದೇವನನ್ನು ಪೀಡಿಸಿದ್ದರಿಂದ ವೆಲ್ನಾಡ ಚೋಳನಿಗೆ ಶರೀರದಲ್ಲಿ ಹುಣ್ಣು ಗಳು ಹುಟ್ಟಿದವು. ಅವುಗಳಿಂದ ಅವನು ಪರಿತಪಿಸುತ್ತ ಮರಣಹೊಂದಿದ ನೆಂದು ಈ ಕಥೆಯಲ್ಲಿ ಹೇಳಿದೆ. ಒಟ್ಟಾರೆ ನೋಡಿದಲ್ಲಿ ಈ ಕಾಲದಲ್ಲಿ ಕಾಳಗವಾಗಿರಬೇಕೆಂದು ನಮ್ಮ ಊಹೆ ಇದೆ.

**ಅಬ್ಬಲೂರು ಕಾಳಗ:—** ಅಬ್ಬಲೂರು ಗ್ರಾಮವು ಪುಲಿಗೆರೆಯಿಂದ ದಕ್ಷಿಣಕ್ಕೆ ೪೦ ಮೈಲುಗಳ ಮೇಲೆ ಇದೆ. ಇದು ಹಿಂದಿನಕಾಲದಲ್ಲಿ ಸಂಪೂರ್ಣವಾಗಿ ಜೈನರ ಪಟ್ಟಣವಾಗಿತ್ತು. ಶಿವಶರಣನಾದ ಏಕಾಂತದ ರಾಮಯ್ಯನು ತನ್ನ ಪ್ರವಾಸದಲ್ಲಿ ಈ ಗ್ರಾಮಕ್ಕೆ ಬಂದಿರಲು ಅವನಿಗೂ ಜೈನರಿಗೂ ವಾಗ್ವಾದವಾಗಿ ಅವನು ತನ್ನ ಕತ್ತನ್ನು ಕತ್ತರಿಸಿ ಪುನಃ ಪಡೆದುಕೊಂಡರೆ ಜೈನರು ತಮ್ಮ ಜಿನಾಲಯಗಳನ್ನು ಲಿಂಗಾಲಯಗಳ ನ್ನಾಗಿ ಮಾಡುವೆವೆಂದು ಅವರಿಂದ ಭಾಷಾ ಪತ್ರವನ್ನು ಬರೆಯಿಸಿ ಕೊಂಡನು ಆಮೇಲೆ ಏಕಾಂತದ ರಾಮಯ್ಯನು ತನ್ನ ತಲೆಯನ್ನು ಕೊಯ್ದುಕೊಂಡು ಅದನ್ನು ಪುನಃ ಹತ್ತಿಸಿಕೊಂಡನು. ಆದರೆ ಜೈನರು ತಾವು ಬರೆದು ಕೊಟ್ಟಂತೆ ಜಿನಾಲಯಗಳನ್ನು ಶಿವಾಲಯಗಳನ್ನಾಗಿ ಮಾಡಲಿಲ್ಲ. ಆಗ ಭಕ್ತರು ಖಡ್ಗಗಳನ್ನು ಹಿಡಿದು ಇದಿರ್ಗೊಂಡ ಜೈನರನ್ನು ಸಂಹರಿ ಸುತ್ತ ಬಸದಿಗಳನ್ನು ಪ್ರವೇಶಿಸಿ ಅವುಗಳಲ್ಲಿಯ ಮೂರ್ತಿಗಳನ್ನು ತೆಗೆದು ಹಾಕಿ ಅಲ್ಲಿ ಲಿಂಗಗಳನ್ನು ಪ್ರತಿಷ್ಠಿಸಿದರು. ಈ ಕಾಲದಲ್ಲಿ ಭಕ್ತರಿಗೂ ಜೈನರಿಗೂ ಕಾಳಗವಾದದ್ದು ಅಲ್ಲಿದ್ದ ಶಿಲಾಶಾಸನದಲ್ಲಿ ಹೇಳಲ್ಪಟ್ಟಿದೆ.

ಆಗ ಬಿಜ್ಜಳನು ಚಾಲುಕ್ಯರ ಮಾಂಡಲಿಕನಾಗಿ ಬನವಾಸಿಯಲ್ಲಿ ರಾಜ್ಯವಾಳುತ್ತಿದ್ದನು. ಜೈನರು ಅವನಲ್ಲಿಗೆ ಹೋಗಿ ದೂರು ಹೇಳಲು, ಜೈನರು ಬರಕೊಟ್ಟಿದ್ದ ಭಾಷಾ ಪತ್ರವನ್ನು ಆವನು ನೋಡಿ ಅವರ ದೂರನ್ನು ಕಡೆಗಣಿಸಿಬಿಟ್ಟು, ಏಕಾಂತದ ರಾಮಯ್ಯನಿಗೆ ಏನೂ ಮಾಡಲಿಲ್ಲ.

**ಪೊಟ್ಟಲಕೆರೆಯಲ್ಲಿಯ ಘಟನೆಗಳು:—** ಪೊಟ್ಟಲಕೆರೆಯಲ್ಲಿ ಚಾಲುಕ್ಯಜಯಸಿಂಹ ರಾಜನು ೧೦೧೮ ರಿಂದ ೧೦೪೦ ವರೆಗೆ ರಾಜ್ಯವಾಳಿದನು. ಅವನು ಜೈನಧರ್ಮದಂತೆ ನಡೆಯುವವನಾಗಿದ್ದನು. ಆದರೆ ಅವನ ಹೆಂಡತಿಯಾದ ಸುಗ್ಗಲೆಯು ಶಿವಶರಣನಾದ ದೇವರದಾಸಿಮಯ್ಯನಿಂದ ವೀರಶೈವ ದೀಕ್ಷೆಯನ್ನು ಹೊಂದಿದ್ದಳು. ಮುಂದೆ ದೇವರದಾಸಿಮಯ್ಯನು ರಾಜಧಾನಿಯಲ್ಲಿರುವಾಗ್ಗೆ ಜೈನರು ಅವನನ್ನು ಘಾತಿಸಬೇಕೆಂದು ಅನೇಕ ಉಪಾಯಗಳನ್ನು ಯೋಜಿಸಿದರು. ಆದರೆ ಅವೆಲ್ಲವೂ ನಿಷ್ಫಲವಾದವು. ಮುಂದೆ ದೇವರದಾಸಿಮಯ್ಯನಿಗೂ ಇತರ ಮತಾನುಯಾಯಿಗಳಿಗೂ ಅರಸನ ಸಮ್ಮುಖದಲ್ಲಿ ವಾದಗಳಾಗಲು ಅವುಗಳಲ್ಲಿ ದೇವರದಾಸಿಮಯ್ಯನು ಶಿವನು ವಿಶ್ವಗತನಾಗಿದ್ದಾನೆಂಬುದನ್ನು ಸಿದ್ಧಪಡಿಸಿದ್ದಲ್ಲದೆ ಆ ಬಗ್ಗೆ ಒಂದು ಪವಾಡವನ್ನು ಮಾಡಿದನು. ಆಗ ಪಟ್ಟಣದಲ್ಲಿದ್ದ ೭೦೦ ಬಸದಿಗಳು ಶಿವಾಲಯಗಳಾದವು. ಮತ್ತು ೨೦ ಸಾವಿರ ಜೈನರು ವೀರಶೈವ ದೀಕ್ಷೆಯನ್ನು ತೆಗೆದುಕೊಂಡರು. ಆದರೆ ಆ ಕಾಲದಲ್ಲಿ ಕಾಳಗವಾದದ್ದರ ಉಲ್ಲೇಖಗಳಿಲ್ಲ. ಅರಸನೂ ಅವನ ಹೆಂಡತಿಯೂ ದೇವರದಾಸಿಮಯ್ಯನನ್ನು ಪುರಸ್ಕರಿಸಿದ್ದರಿಂದ ಕಾಳಗವಾದಂತೆಯೂ ತೋರುವದಿಲ್ಲ.

**ಕಲ್ಯಾಣದ ಮೊದಲನೆಯ ಕಾಳಗ:—** ಕಲ್ಯಾಣದಲ್ಲಿ ಒಬ್ಬ ಜಂಗಮನಿಗೋಸ್ಕರ ಕಾಳಗವು ಸಂಭವಿಸಿತೆಂದು ಬಸವೇಶ್ವರನು ತನ್ನ ಒಂದು ವಚನದಲ್ಲಿ ಸ್ವತಃ ಹೇಳಿದ್ದಾನೆ. ಆ ವಚನವು ಯಾವುದೆಂದರೆ:—

" ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವ. ಕೆಟ್ಟಿತ್ತು, ಕಲ್ಯಾಣ ಹಾಳಾಯಿತ್ತು ನೋಡಾ. ಒಬ್ಬ ಜಂಗಮನ ಅಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು, ಸಂದಿತ್ತು, ಕೂಡಲ ಸಂಗಮದೇವ ನಿಮ್ಮ ಕಳವಳಿಕೆಗೆ "

ಇಲ್ಲಿ ಚಾಲುಕ್ಯರಾಯನಾರೆಂಬುದನ್ನು ಬಸವೇಶ್ವರನು ಸ್ಪಷ್ಟವಾಗಿ ಉಲ್ಲೇಖಿಸಿರುವದಿಲ್ಲ. ಈತನು ೧೧೫೦ ರಿಂದ ೧೧೬೫ ರ ವರೆಗೆ ಆಳಿದ ನೂರ್ಮಡಿ ತೈಲಪ ಅಥವಾ ತ್ರೈಲೋಕ್ಯಮಲ್ಲನಾಗಿರಬಹುದೆಂದು ತೋರುತ್ತದೆ. ಬಿಜ್ಜಳನು ೧೧೫೫ ರಿಂದ ೧೧೬೨ ವರೆಗೆ ಅವನಿಗೆ ಸಾಮಂತನಾಗಿ ಆಡಳಿತೆಯನ್ನು ವಹಿಸಿದ್ದನು. ಆದರೂ ಅವನು ಆಗ ಸರ್ವಾಧಿಕಾರಿಯಾಗಿ ರಾಜ್ಯವನ್ನು ತಾನೇ ನಡೆಸಿದ್ದನು. ಮತ್ತು ತೈಲಪನು ಹೆಸರಿಗೆ ಮಾತ್ರ ರಾಜನಾಗಿದ್ದನು. ಆದರೆ ೧೧೬೨ ತರುವಾಯ ೧೧೬೮ ವರೆಗೆ ಬಿಜ್ಜಳನು ರಾಜನಾಗಿ ರಾಜ್ಯವಾಳಹತ್ತಿದನು. ಮೊದಲು ರೇವಣಸಿದ್ಧೇಶ್ವರನೂ ಅವನ ತರುವಾಯ ಬಸವೇಶ್ವರನೂ ಬಿಜ್ಜಳನ ಆಸ್ಥಾನದಲ್ಲಿದ್ದು ಅವನಿಗೆ ಸಹಾಯಮಾಡುತ್ತಬಂದರೆಂಬುದು ಅವರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಈ ಕಾರಣಕ್ಕೋಸ್ಕರ ಚಾಲುಕ್ಯರಾಜನು ರೇವಣಸಿದ್ಧೇಶ್ವರ ಬಸವೇಶ್ವರರನ್ನೂ ಅವರ ಅನುಯಾಯಿಗಳಾದ ವೀರಶೈವರನ್ನೂ ಹಿಂಸಿಸುತ್ತಿರಬಹುದೆಂದು ಮೇಲಿನ ವಚನದಿಂದ ನಾವು ಊಹಿಸಬಹುದಾಗಿದೆ. ಇದರಿಂದ ಒಂದುಕಡೆಗೆ ರೇವಣಸಿದ್ಧೇಶ್ವರ ಬಿಜ್ಜಳರು ಮತ್ತು ಅವರಿಗೆ ಇದಿರಾಳಿಯಾಗಿ ಚಾಲುಕ್ಯರಾಜನು ಹೀಗೆ ಉಭಯ ಪಕ್ಷಗಳಲ್ಲಿ ಕಾಳಗವು ಕಲ್ಯಾಣದಲ್ಲಿ ಒಂದುಕಾಲದಲ್ಲಿ ಸಂಭವಿಸಿರಬಹುದು. ಇದರಲ್ಲಿ ಚಾಲುಕ್ಯರಾಜನು ಸೋತುಹೋಗಲು ಆಗ ಕಲ್ಯಾಣ ಪಟ್ಟಣವು ಹಾಳಾಗಿರಬೇಕು. ಮತ್ತು ಚಾಲುಕ್ಯರಾಜನು ಪದಚ್ಯುತನಾಗಿರಬೇಕು. ಈ ಕಾಳಗವನ್ನು ಬಸವೇಶ್ವರನು ಮೇಲಿನ ವಚನದಲ್ಲಿ ಉಲ್ಲೇಖಿಸಿರಬಹುದೆಂದು ತೋರುತ್ತದೆ. ಈ ಪ್ರಕಾರ ಚಾಲುಕ್ಯರಾಜನು ಪದಚ್ಯುತನಾದಬಳಿಕ ಬಿಜ್ಜಳನು ರಾಜ್ಯಭಾರವನ್ನು ವಹಿಸಿರಬೇಕೆಂದು ಈ ವಚನದಿಂದ ಕಂಡುಬರುತ್ತದೆ. ಆದ್ದರಿಂದ ಇದು ಶಿವಶರಣರೊಡನೆ ಆದ ಕಲ್ಯಾಣದ ಮೊದಲನೆಯ ಕಾಳಗವೆಂದು ನಾವು ಊಹಿಸುತ್ತೇವೆ.

**ಕಲ್ಯಾಣದಲ್ಲಿಯ ಘಟನೆಗಳು:** — ತೆಲುಗು ಜೊಮ್ಮಯ್ಯ, ಕೇಶಿರಾಜರು ಚಾಲುಕ್ಯ ರಾಜ್ಯವನ್ನು ೧೦೭೬ ರಿಂದ ೧೧೨೬ ವರೆಗೆ ಸುಮಾರು ೫೦ ವರ್ಷ ಅತ್ಯಂತ ವೈಭವದಿಂದ ಆಳಿದ ವಿಕ್ರಮಾದಿತ್ಯ ಅಥವಾ ಪೆರ್ಮಾಡಿರಾಯನಿಗೆ ಕೆಲವುಕಾಲ ಮಂತ್ರಿಗಳಾಗಿದ್ದರು. ಆದರೆ ಅವರ ಇದಿರಾಳಿಗಳ ವರ್ಚಸ್ಸಿನ ಮೂಲಕ ಅವರ ಅಮಾತ್ಯ ಪದವಿಯು ಬಹಳ

ದಿವಸ ಉಳಿಯಲಿಲ್ಲ. ಆದರೆ ಬಸವೇಶ್ವರನು ಬಿಜ್ಜಳನ ಮಂತ್ರಿಯಾಗಿ ಬಹು ಜಾಣತನದಿಂದ ರಾಜ್ಯಭಾರ ನಡಿಸುತ್ತಬಂದನು. ಅವನ ಕಾಲ ದಲ್ಲಿ ದೇಶದಲ್ಲಿದ್ದ ಅಸಂಖ್ಯ ಶಿವಶರಣರೂ ಜಂಗಮರೂ ಎಲ್ಲಕಡೆಯಿಂದ ಅವನ ಸನ್ನಿಧಿಯನ್ನು ಸೇರಿದರು. ಆಗ ಕಲ್ಯಾಣ ಪಟ್ಟಣದಲ್ಲಿ ಅನೇಕ ತರದ ಮತಭೇದಗಳೂ, ಮನಸ್ತಾಪಗಳೂ ಹೊಡೆದಾಟಗಳೂ ಸಂಭವಿಸು ತ್ತಲೇ ಬಂದವು. ಆದರೆ ಬಸವೇಶ್ವರನು ಬಹು ಜಾಣತನದಿಂದ ಇವು ಗಳನ್ನು ಪರಿಹರಿಸುತ್ತ ತನ್ನ ವರ್ಚಸ್ಸನ್ನು ರಾಜ್ಯದಲ್ಲಿ ಕಾಯ್ದುಕೊಂಡು ರಾಜ್ಯವನ್ನಾಳುತ್ತಬಂದನು. ಇವುಗಳ ವಿವರಗಳನ್ನು ನಾವು ಮುಂದೆ ಬಸವೇಶ್ವರನ ಚರಿತ್ರೆಯಲ್ಲಿ ವಿಸ್ತರಿಸುವೆವು. ಮುಂದೆ ಹರಳಯ್ಯ ಮತ್ತು ಮಧುವಯ್ಯಗಳು ಬಿಜ್ಜಳನಿಂದ ಹಿಂಸೆಯನ್ನು ಹೊಂದಲಾಗಿ ಇನ್ನು ಶಾಂತತಾಯುಕ್ತ ರಾಜ್ಯಭಾರವು ನಡೆಯಲಾರದೆಂದು ಬಸವೇಶ್ವರನು ಭಾವಿಸಿ ಶರಣರ ಪಕ್ಷವನ್ನು ಪ್ರಬಲಗೊಳಿಸಬೇಕೆಂಬ ಉದ್ದೇಶವನ್ನು ತಾಳಿ ಸಿದ್ಧರಾಮೇಶ್ವರನು ವಾಸಿಸುತ್ತಿದ್ದ ಸೊನ್ನಲಿಗೆ ( ಸೊಲ್ಲಾಪುರ ) ಗೆ ಮೊದಲು ಬಂದನೆಂದು ಗ್ರಂಥಗಳಿಂದ ತಿಳಿಯುತ್ತದೆ. ಮುಂದೆ ಅವನು ಮಂಗಳ ವಾಡವಿದ್ದ ತರ್ದವಾಡಿ ನಾಡಿಗೆ ಬಂದು ವಾಸಿಸಿರಬಹುದು. ಯಾಕಂದರೆ ಇಲ್ಲಿ ಸಾಮಂತನಾಗಿ ಆಳುತ್ತಿದ್ದ ಬಿಜ್ಜಳನ ಮಗನಾದ ರಾಯಮುರಾರಿ ಸೋವಿದೇವನು ಬಸವೇಶ್ವರನಿಗೆ ವಿರೋಧಿಯಾಗಿರಲಿಲ್ಲ. ಅವನು ಬಸವೇ ಶ್ವರನಿಗೆ ಅನುಕೂಲನಾಗಿದ್ದನು. ಆದ್ದರಿಂದ ಬಸವೇಶ್ವರನು ಮಂಗಳವಾಡ ದಲ್ಲಿ ಕೆಲಕಾಲ ನಿಂತು ಮೊದಲು ಕರ್ಹಾಡದ ಶಿಲಾಹಾರನೊಡನೆ ಕಿಳ್ಳೇ ಗಾವಿ ಗ್ರಾಮದಲ್ಲಿದ್ದುಕೊಂಡು ಸಂಧಾನ ನಡಿಸಿ, ಆಮೇಲೆ ಕಡಪಟ್ಟಿ ಯಲ್ಲಿದ್ದುಕೊಂಡು ಜಮಖಂಡಿ ಮುಧೋಳ ಪ್ರಾಂತದಲ್ಲಿ, ಆಮೇಲೆ ಸ್ವ ಗ್ರಾಮವಾದ ಬಾಗೇವಾಡಿ, ಆಮೇಲೆ ಮುದ್ದೇಬಿಹಾಳಕ್ಕೆ ಸಮೀಪವಿರುವ ಕುಂಟೋಜಿ, ಈ ಗ್ರಾಮಗಳಲ್ಲಿ ನಿಂತು ತನ್ನ ಪಕ್ಷವನ್ನು ಬಲಪಡಿಸಲು ಯತ್ನಿಸಿದಹಾಗೆ ತೋರುತ್ತದೆ. ಅವನು ಈ ಸ್ಥಳಗಳಲ್ಲಿದ್ದುದರಿಂದ ಅಲ್ಲಿ ಮಹತ್ವದ ಬಸವೇಶ್ವರನ ದೇವಾಲಯಗಳಾಗಿವೆ. ಆದರೆ ಬಸವೇಶ್ವರನ ಈ ಪ್ರಯತ್ನಗಳು ಸಾಧ್ಯವಾಗದೆ ಹೋಗಲು ಅವನು ಕಡೆಗೆ ಸಂಗಮ ಗ್ರಾಮಕ್ಕೆ ಬಂದು ಅಲ್ಲಿಯೇ ಸಮಾಧಿಸ್ಥನಾದನು. ಹರಳಯ್ಯ ಮಧು ವಯ್ಯಗಳು ಹಿಂಸೆಯನ್ನು ಹೊಂದಿದಬಳಿಕ ಅವನು ಅಂಜಿಕೊಂಡು ಸಂಗಮಕ್ಕೆ ಓಡಿ ಹೋಗಿಲ್ಲ. ಅವನು ತನ್ನ ಪಕ್ಷವನ್ನು ದೇಶದಲ್ಲಿ ಬಲಪಡಿ

ಸಲು ಬಹಳ ಪ್ರಯತ್ನಿಸಿದ್ದಾನೆಂದು ನಮಗೆ ತೋರುತ್ತದೆ. ಅವನ ಅಂತ್ಯವು ಹೇಗಾಯಿತೆಂಬುದು ಇನ್ನೂ ಸಂಶೋಧಿಸತಕ್ಕ ವಿಷಯವಾಗಿದೆ. ಆದರೆ ಅವನ ಸಮಾಧಿಯು ಮಲಾಪಹಾರೀ ನದಿಯು ಕೃಷ್ಣಾನದಿಗೆ ಕೂಡುವ ಸ್ಥಳದಲ್ಲಿ ಒಂದು ದೊಡ್ಡ ಕಲ್ಲುಬಂಡೆ ( ಕರ್+ಪಡೆ=ಕಪ್ಪಡೆ, ದೊಡ್ಡ ಪಡೆ ) ಇದ್ದು ಅದರಲ್ಲಿ ಒಂದು ಗವಿಯನ್ನು ಹೊರೆದು ಅಲ್ಲಿಯೇ ಬಸವೇಶ್ವರನನ್ನು ಹೂಳಿದಹಾಗೆ ತೋರುತ್ತದೆ. ಈ ಗವಿಯ ಪ್ರವೇಶ ದ್ವಾರವನ್ನು ಒಂದು ದೊಡ್ಡ ಕಲ್ಲಿನಿಂದ ಬಹು ಭದ್ರವಾಗಿ ಮುಚ್ಚಿದ್ದುಂಟು. ಇದನ್ನು ನಾವು ಈಗಲೂ ಅಲ್ಲಿ ಕಾಣಬಹುದು. ಬಸವೇಶ್ವರನು ಕಪ್ಪಡೆಯಲ್ಲಿ ಐಕ್ಯನಾದನೆಂದು ಯಾವಾಗಲೂ ವೀರಶೈವ ಗ್ರಂಥಗಳಲ್ಲಿ ಉಲ್ಲೇಖಗಳು ಬರುತ್ತವೆ. ಈ ಕಪ್ಪಡೆಯು ಇದೇ ಇರಬಹುದು. ಈ ಎಲ್ಲ ಸಂಗತಿಗಳ ಸವಿಸ್ತಾರವಾದ ವಿವರಗಳನ್ನು ನಾವು ಮುಂದೆ ಬಸವೇಶ್ವರನ ಚರಿತ್ರೆಯಲ್ಲಿ ಕೊಡುವೆವು.

ಬಸವೇಶ್ವರನು ಪ್ರಚಾರಪಡಿಸುತ್ತಿದ್ದ ತತ್ವಗಳು ಈ ಆರಂಭ ಕಾಲದಲ್ಲಿ ಜನತೆಯಲ್ಲಿ ಅಷ್ಟು ಪ್ರಬಲವಾಗಿ ಪ್ರಸಾರ ಹೊಂದಿದ್ದಿಲ್ಲೆಂದು ತೋರುತ್ತದೆ. ಆದ್ದರಿಂದ ಅವನಿಗೆ ಜನತೆಯಿಂದ ಸಾಕಷ್ಟು ಬೆಂಬಲವು ಈ ಕಾಲದಲ್ಲಿ ದೊರೆಯಲಿಲ್ಲವೆಂತಲೂ ಆಗಿನ ಸಾಮಂತರಾಜರಾದ ಶಿಲಾಹಾರರು, ತೊರಗಲ್ಲು, ಬನವಾಸಿ ಮುಂತಾದ ನಾಡುಗಳ ಮಾಂಡಲಿಕ ರಾಜರು ಬಲಿಷ್ಠನಾದ ಬಿಜ್ಜಳರಾಜನನ್ನು ಎದುರಿಸಲು ಧೈರ್ಯಮಾಡಿಲ್ಲೆಂತಲೂ ನಾವು ಊಹಿಸುತ್ತೇವೆ.

**ಕಲ್ಯಾಣದ ೨ ನೇ ಕಾಳಗ:—** ಶಿವಶರಣರಾದ ಮಧುವರಸ ಹರಳಯ್ಯಗಳನ್ನು ಬಿಜ್ಜಳನು ಘಾತಿಸಿದ್ದರಿಂದ ಕಲ್ಯಾಣ ಪಟ್ಟಣದಲ್ಲಿದ್ದ ಶಿವಶರಣರು ಬಿಜ್ಜಳನನ್ನು ಕೊಲೆಮಾಡಬೇಕೆಂದು ನಿಶ್ಚಯಿಸಿದರು. ಈ ಕಾರ್ಯವನ್ನು ಮಾಡಲು ಅವರು ಜಗದೇವ ಮಲ್ಲಿಬೊಮ್ಮಣ್ಣ ಇವರನ್ನು ನಿಯಮಿಸಿದರು. ಆಗ ಅವರು ಬಿಜ್ಜಳನನ್ನು ಮುಚ್ಚುಮರೆ ಇಲ್ಲದೆ ಬಹಿರಂಗವಾಗಿ ಕೊಂದುಹಾಕಿದರು. ಆಗ ಬಿಜ್ಜಳನ ಬೆಂಗಾವಲಿಗರೊಡನೆ ಜಗದೇವ ಮಲ್ಲಿಬೊಮ್ಮಣ್ಣಗಳೂ ಅವರ ಜೋಡಿಗರೂ ಕಾದಾಡುವ ಪ್ರಸಂಗವು ಉಂಟಾಯಿತು. ಆಗ ಚನ್ನಬಸವಣ್ಣನ ಅರ

ಮನೆಯಲ್ಲಿ ಕಾದುಕೊಂಡಿದ್ದ ಶಿವಶರಣರು ಅವರಿಗೆ ಸಹಾಯವಾಗಿ ಬಿಜ್ಜಳನ ದಂಡಿನೊಡನೆ ಯುದ್ಧವನ್ನು ಪ್ರಾರಂಭಿಸಿದರು. ಆದರೆ ಬಹುಸಂಖ್ಯಾಕರಾಗಿದ್ದ ಬಿಜ್ಜಳನ ದಂಡಿನ ಮುಂದೆ ಶಿವಶರಣರು ಹಿಂದೆಗೆಯಬೇಕಾಯಿತು.' ಆಗ ಕಲ್ಯಾಣಪಟ್ಟಣದಲ್ಲಿ ಎಲ್ಲೆಲ್ಲಿಯೂ ಕಾದಾಟಗಳು ಪ್ರಾರಂಭವಾದವು. ಈ ಸ್ಥಿತಿಯುಂಟಾಗಲು ಶಿವಶರಣರು ಕಲ್ಯಾಣವನ್ನು ತೊರೆದು ಹೊರಬೀಳಬೇಕಾಯಿತು. ಇದು 'ಕಲ್ಯಾಣದ ೨ ನೇ ಕಾಳಗವು.

**ಶ್ರೀಶೈಲಪ್ರಾಂತದಲ್ಲಿಯ ಕಾಳಗಗಳು:—** ಕಲ್ಯಾಣ ಪಟ್ಟಣದಲ್ಲಿ ಹೀಗೆ ಅನಾಹುತಗಳಾಗಲು ಅಲ್ಲಿ ನೆಲಸಿದ್ದ ಬಹುಜನ ಜಂಗಮರೂ ಶಿವಶರಣರೂ ಭದ್ರವಾದ ಶ್ರೀ ಶೈಲ ಪ್ರಾಂತದ ಕಾಡಿನಲ್ಲಿ ಹೋಗಿ ನೆಲಸಿದರು. ಇವರಿಗೆ ರೇವಣಸಿದ್ಧೇಶ್ವರನ ಪುತ್ರನಾದ ರುದ್ರಮುನಿಯು ಮೊದಲು ಮುಂದಾಳಾಗಿ ನಿಂತನು. ಅವನು ತನ್ನ ಶಿಷ್ಯನಾದ ಮುಕ್ತಿಮುನಿಗೆ " ಸಕಲ ದೇಶಗಳನ್ನು ಚರಿಸುತ್ತ ದುಷ್ಟಪರವಾದಿಗಳನ್ನು ಸಂಹರಿಸಿ ಶರಣರನ್ನು ರಕ್ಷಿಸು " ಎಂದು ಆಜ್ಞಾಪಿಸಿದನು. ಆಗ ಮುಕ್ತಿಮುನಿಯು ಅಜಾತಭಿಕ್ಷಾವರ್ತಿ ಎಂಬವನಿಗೆ ಶ್ರೀಶೈಲದಲ್ಲಿ ಪಟ್ಟಗಟ್ಟಿ ತನ್ನ ಇನ್ನೊಬ್ಬ ಶಿಷ್ಯನಾದ ದಿಗಂಬರಮುಕ್ತಿ ಮುನಿಗೆ ನೀನೂ ಹೀಗೆಯೇ ಪರವಾದಿಗಳನ್ನು ಸಂಹರಿಸುತ್ತ ಹೋಗೆಂದು ಆಜ್ಞೆಯನ್ನಿತ್ತನು. ಈ ಮುಕ್ತಿಮುನಿಯ ವಂಶದಲ್ಲಿ ಕುಮಾರ ಚನ್ನಬಸವೇಶ್ವರನೆಂಬ ಇನ್ನೊಬ್ಬ ಪ್ರತಾಪಶಾಲಿಯು ಉದ್ಭವಿಸಲು ಅವನೂ ಕೂಡ ಶಿವಶರಣರ ರಕ್ಷಣೆಯಲ್ಲಿ ತೊಡಗಿದವನಾದನು. ಹೀಗೆ ಈ ಮಹಾನುಭಾವರೆಲ್ಲರು ಕೂಡಿಕೊಂಡು ಪರವಾದಿಗಳ ಕೂಡ ಶ್ರೀಶೈಲ ಮೊದಲಾದ ಪ್ರಾಂತದಲ್ಲಿ ಯುದ್ಧಗಳನ್ನು ಮಾಡುತ್ತ ಗಂಡಾಂತರದಲ್ಲಿದ್ದ ವೀರಶೈವ ಸಮಾಜವನ್ನು ರಕ್ಷಿಸಿದರು.

**ತೊರಗಲ್ಲು ಪ್ರಾಂತದಲ್ಲಿಯ ಕಾಳಗಗಳು:—** ಕಲ್ಯಾಣದ ೨ ನೇ ಕಾಳಗವಾದ ಬಳಿಕ ಕೆಲವರು ಶ್ರೀ ಶೈಲಕ್ಕೆ ಹೋಗಲು ಅವರಂತೆ ಬಹುಜನ ಶರಣರೂ ಜಂಗಮರೂ ಚನ್ನಬಸವೇಶ್ವರ ಮಡಿವಾಳ ಮಾಚಿದೇವ ಇವರ ನೇತೃತ್ವದಲ್ಲಿ ಪಶ್ಚಿಮಕ್ಕೆ ತೊರಗಲ್ಲು ನಾಡಿಗೆ ಹೋಗುವವರಾದರು. ಈ ಕಾಲದಲ್ಲಿ ಚಾಲುಕ್ಯರ ರಾಜ್ಯದಲ್ಲಿ ಮಂಗಳವಾಡ, ಬನವಾಸಿ ಪ್ರಾಂತಗಳು ಹೇಗೆ ಮಹತ್ವದ ಪ್ರಾಂತಗಳಾಗಿದ್ದವೋ! ಹಾಗೆಯೇ

ತೊರಗಲ್ಲು ನಾಡೂ ಒಂದು ಮಹತ್ವದ ಪ್ರಾಂತವಾಗಿತ್ತು. ಇವರಲ್ಲಿ ಈಗಿನ ಬೈಲಹೊಂಗಲ ಸವದತ್ತಿತಾಲೂಕುಗಳು ಸಮಾವೇಶವಾಗುತ್ತವೆ. ಇಲ್ಲಿಯು ಆಗಿನ ಮಂಡಲಾಧೀಶ್ವರನ ಸಹಾಯವನ್ನು ಬಯಸಿ ಈ ಪ್ರಾಂತಕ್ಕೆ ಶಿವಶರಣರು ಮೊದಲು ಆಗಮಿಸಿರಬಹುದೆಂದು ತೋರುತದೆ. ಬಿಜ್ಜಳ ನಿಗೆ ಸಿರಿಯಾದೇವಿ ಎಂಬ ಮಗಳಿದ್ದು ಅವಳನ್ನು ಅವನು ಎರೆಯಂಬರಗೆ (ಯಲಬುರ್ಗಿ ) ಯ ಸಿಂದ ವಂಶದ ರಾಜನಾಗ ಚಾವುಂಡರಾಜ ನಿಗೆ ಕೊಟ್ಟು ಲಗ್ನಮಾಡಿದ್ದನು. ಇವನೇ ಅಳಿಯ ಬಿಜ್ಜಳನು. ಬಿಜ್ಜಳನ ಮಗನಾದ ರಾಯಮುರಾರಿ ಸೋವಿದೇವನು ವೀರಶೈವರಿಗೆ ಅನುಕೂಲ ನಾಗಿದ್ದರಿಂದ ಅವನು ಶರಣರ ಕೂಡ ಯುದ್ಧಮಾಡಿಲ್ಲ. ಆದರೆ ಅಳಿಯ ನಾದ ಚಾವುಂಡರಾಯನು ಬಿಜ್ಜಳನ ಸೈನ್ಯಾಧಿಪತ್ಯವನ್ನು ವಹಿಸಿ ಶಿವಶರಣ ರನ್ನು ಬೆನ್ನಟ್ಟಿದ್ದಾನೆ. ಇದರಲ್ಲಿ ಅವನಿಗೆ ಜೈನರು ಸಹಾಯ ವಾಗಿದ್ದಾರೆ. ಉಭಯ ಪಕ್ಷಗಳಲ್ಲಿ ಈ ಪ್ರಾಂತದಲ್ಲಿರುವ ಕಡಕೋಳ, ಸತ್ತೀಗೇರಿ, ತಲ್ಲೂರು, ಮೊದಲೂರು, ಮುರಗೋಡ, ಇಂಚಲ, ಮೂಗಬಸವ, ಸಂಪ ಗ್ಗಾವಿ, ನಾಗಳಾಪುರ, ಇಲ್ಲಿ ಹೋರಾಟಗಳಾಗುತ್ತ ಕಡೆಗೆ ಕಾದ್ರೋಳಿ ಎಂಬಲ್ಲಿ ತುಮುಲ ಯುದ್ಧವಾಯಿತು. ಅಳಿಯ ಬಿಜ್ಜಳನು ಈ ಕಾಳಗದಲ್ಲಿ ಶಿವಶರಣರತಂಡವನ್ನು ಪೂರ್ಣವಾಗಿ ಮುರಿಬಡಿಯಬೇಕೆಂದು ಇಚ್ಛಿಸಿದ್ದನು. ಆದರೆ ಅವನ ಈ ಪ್ರಯತ್ನಗಳು ನಿಷ್ಫಲವಾದವು. ಈ ಕಾಲದಲ್ಲಿ ಶಿವಶರಣರು ಕಾಳಗದಲ್ಲಿ ಅದ್ಭುತವಾಗಿ ಹೋರಾಡಿದರು. ಆದರೆ ಮಡಿವಾಳ ಮಾಚಿ ದೇವನು ಈ ಕಾಲದಲ್ಲಿ ಮರಣ ಹೊಂದಿರಬೇಕೆಂದು ನಮಗೆ ತೋರು ತ್ತದೆ. ಅವನ ಸಮಾಧಿಸ್ಥಳವು ಹಿಪ್ಪರಗಿಯಾಗಿರವೆ ಈ ಭಾಗದಲ್ಲಿ ಸೊಗಲತೀರ್ಥದ ಪಶ್ಚಿಮಕ್ಕೆ ಕಾರೀಮನೆ ಎಂಬ ಗ್ರಾಮವಿದ್ದು ಅಲ್ಲಿ ಆಗಿರ ಬೇಕೆಂದು ಸ್ಥಾನಿಕ ಐತಿಹ್ಯಗಳಿವೆ. ಈ ಭಾಗದಲ್ಲಿ ದಟ್ಟವಾದ ಅಡವಿ ಇವೆ. ಇದರ ಆಶ್ರಯದಲ್ಲಿ ಶಿವಶರಣರು ಕಾಳಗಮಾಡಿದ್ದಾರೆ. ಇಲ್ಲಿಯೇ ಮಾಚಿದೇವನು ಅಂತ್ಯವನ್ನು ಹೊಂದಿದ್ದಾನೆ. ಮುಂದ ಕಾತರವಳ್ಳಿ ಯಲ್ಲಿ ತುಮುಲ ಯುದ್ಧವಾಗಲು ಅಲ್ಲಿ ಶಿವಶರಣರು ವೈರಿಗಳನ್ನು ಹಿಮ್ಮೆ ಟ್ಟಿಸಿದರು.

ಕಾತರವಳ್ಳಿಯ ಯುದ್ಧವಾದ ಬಳಿಕ ಶಿವಶರಣರ ದಂಡಿನಲ್ಲಿ ಎರಡು ಭಾಗಗಳು ಮಾಡಲ್ಪಟ್ಟವು. ಅವುಗಳಲ್ಲಿ ಒಂದು ಪಶ್ಚಿಮಕ್ಕೆ ಹಲ

ಸಿಯು ಕದಂಬರ ಪ್ರಾಂತದಲ್ಲಿರುವ ಕಕ್ಕೇರಿ, ಲಿಂಗನಮಠ, ಜಗಳಬೆಟ್ಟ ಇಲ್ಲಿಗೆ ಹೋಗಿ ಅಲ್ಲಿಂದ ಸಾಂಬ್ರಾಣಿ ಮಾರ್ಗವಾಗಿ ಮೆಲುಗ್ಯೆಯಲ್ಲಾಪುರಕ್ಕೆ ಹೋಗಿರುತ್ತದೆ. ಈ ಸ್ಥಳಗಳಲ್ಲೆಲ್ಲ ಶಿವಶರಣರ ಕುರುಹುಗಳು ಈಗಲೂ ಇವೆ. ಇನ್ನೊಂದು ಭಾಗವು ತಡಕೋಡ, ಎತ್ತಿನಗುಡ್ಡ, ಇಲ್ಲಿಂದ ಧಾರವಾಡ, ಅಲ್ಲಿಂದ ಸತ್ತೂರು, ಅಮರಗೋಳ, ಉಣಕಲ್ಲ, ಮುಂದೆ ಕಲಘಟಗಿ ತಾಲೂಕಿನಲ್ಲಿರುವ ಹೊನ್ನಿಹಳ್ಳಿ, ತಂಬೂರು ಮಾರ್ಗವಾಗಿ ಮೆಲುಗ್ಯೆಯಲ್ಲಾಪುರಕ್ಕೆ ಹೋಗಿರುತ್ತದೆ. ಈ ಸ್ಥಳಗಳಲ್ಲೆಲ್ಲ ಚನ್ನಬಸವೇಶ್ವರ ಮೊದಲಾದ ಶಿವಶರಣರ ಕುರುಹುಗಳು ಈಗಲೂ ಹೇರಳವಾಗಿ ದೊರೆಯುತ್ತವೆ. ಅಳಿಯ ಬಿಜ್ಜಳನ ದಂಡುಗಳು ಈ ಎಲ್ಲ ಸ್ಥಳಗಳಲ್ಲಿ ಶಿವಶರಣರನ್ನು ಬೆನ್ನಟ್ಟುತ್ತ ಅವರೊಡನೆ ಯುದ್ಧಮಾಡುತ್ತಲೇ ಬಂದಿರುತ್ತವೆ. ಹೀಗೆ ಈ ಪ್ರಾಂತಗಳಲ್ಲೆಲ್ಲ ಅನೇಕ ಕಾಳಗಗಳು ಸಂಭವಿಸಿರುತ್ತವೆ. ಈ ಕಾಲದಲ್ಲಿ ಚನ್ನಬಸವೇಶ್ವರ, ಕಿನ್ನರೀ ಬ್ರಹ್ಮಯ್ಯ, ಕೂಗಿನ ಮಾರಿತಂದೆ ಇವರು ಶಿವಶರಣರಿಗೆ ಮುಖ್ಯಸ್ಥರಾಗಿ ಕಾದಾಡುತ್ತ ಬಂದಿದ್ದಾರೆ.

**ಉಳಿವಿಯ ಕಾಳಗ:**—ಉಳವಿಯು ಇದ್ದ ಸ್ಥಳವು ಬಹುಬಿಕ್ಕಟ್ಟಿನದಾಗಿರುತ್ತದೆ. ಅದರ ಸುತ್ತಲೂ ಉನ್ನತವಾದ ಪರ್ವತಗಳು ಹಬ್ಬಿವೆ. ಅವುಗಳ ಮಧ್ಯದಲ್ಲಿ ಕಾಳೀನದಿ ಮತ್ತು ಕಿನ್ನರೀ ಬ್ರಹ್ಮಯ್ಯನ ಹೊಳೆ ಎಂಬ ಎರಡು ಹೊಳೆಗಳು ಹರಿಯುತ್ತವೆ. ಈ ಪ್ರದೇಶಕ್ಕೆ ಈಗ 'ಗುಂಡ ಫಾರೆಸ್ಟ' ಎಂಬ ಹೆಸರು ಇದ್ದು ಇದು ಅತ್ಯಂತ ಭೀಕರವಾದ ಅರಣ್ಯವಾಗಿದೆ. ಇದರ ಮಧ್ಯದಲ್ಲಿ 'ಮಹಾಮನೆ' ಗವಿಯು ಇದೆ. ಕಡಿದಾದ ಎರಡು ಪರ್ವತಗಳ ಮಧ್ಯದಲ್ಲಿ ಕಿನ್ನರೀ ಬ್ರಹ್ಮಯ್ಯನ ಹೊಳೆಯು ತಡಸಲು ತಡಸಲುಗಳಾಗಿ ಇಳಿಜಾರು ಪ್ರದೇಶದಲ್ಲಿ ಹರಿಯುತ್ತ ಬರುತ್ತದೆ. ಅದು ಗವಿಯ ದ್ವಾರದಿಂದ ೨೦೦ ಫೂಟು ಅಂತರದಲ್ಲಿ ಬರಲು ಅಲ್ಲಿ ಭೂಮಿಯನ್ನು ಅಗಿದು ಅದರ ಪ್ರವಾಹವನ್ನು ಗವಿಯ ದ್ವಾರಕ್ಕೆ ತಿರುವಿ ದ್ವಾರದಲ್ಲಿ ಅದು ಬೀಳುವಂತೆ ಮಾಡಿದ್ದಾರೆ. ಈ ನೀರಿನಿಂದ ಈ ಗವಿಯ ಮುಂದೆ ಒಂದು ಅಗಳತವನ್ನು ಕಲ್ಪಿಸಿದಂತೆ ಆಗಿದೆ. ಇದರೊಳಗೆ ಬಿದ್ದ ನೀರು ಗವಿಯೊಳಗಿನ ಗೋಡೆಯಲ್ಲಿ ಎಡಕ್ಕೆ ಕೆಡಹಿದ ಒಂದು ತೂತಿನೊಳಗಿಂದ ಹಾಯ್ದು ಮುಖ್ಯ ಪ್ರವಾಹಕ್ಕೆ ಕೂಡುತ್ತದೆ. ಈ ತೂತನ್ನು

ನಾನು ಸ್ವತಃ ಪರೀಕ್ಷಿಸಿದ್ದು ಅದು ೩ ಫೂಟು ಅಗಲ ೪ ಫೂಟು ಎತ್ತರ ಇರುತ್ತದೆ. ಗವಿಯೊಳಗಿಂದ ನೀರಿನ ಪ್ರವಾಹವು ಅತ್ಯಂತ ಬಲವಾಗಿ ಹೊರಬೀಳುತ್ತದೆ. ಹೀಗೆ ಶಿವಶರಣರು ಮಹಾಮನೆ ಗವಿಯನ್ನು ಒಂದು ಬಹು ಭದ್ರವಾದ ಕೋಟೆಯಂತೆ ಮಾಡಿದ್ದಾರೆ. ಇಲ್ಲಿ ಒಬ್ಬಿಬ್ಬರು ಯೋಧ್ಧರು ನಿಂತುಕೊಂಡಲ್ಲಿ ನೂರಾರು ಜನ ಸೈನಿಕರನ್ನು ಸುಲಭವಾಗಿ ತಡೆಯಬಹುದು. ಇಂಥ ಪ್ರದೇಶದಲ್ಲಿ ಬಿಜ್ಜಳನ ದಂಡಾಳುಗಳು ಶಿವಶರಣರನ್ನು ಮುತ್ತಿದ್ದಾರೆ. ಆದರೆ ಶಿವಶರಣರು ಅವರಿಗೆ ಮೊರೆ ಹೊಗದೆ ಕಡೆಯವರೆಗೆ ಕಾದಾಡುತ್ತ ಇಲ್ಲಿಯೇ ದೇಹವಿಟ್ಟಿದ್ದಾರೆಂದು ನಾವು ಊಹಿಸುತ್ತೇವೆ. ಇವರಲ್ಲಿ ಚನ್ನಬಸವ, ಕೂಗಿನಮಾರಿತಂದೆ, ಕಿನ್ನರೀ ಬ್ರಹ್ಮಯ್ಯ ಇವರೇ ಮುಖ್ಯರಾಗಿರುತ್ತಾರೆ. ನಾಗಲಾಂಬಿಕೆಯು ಈ ಕಾಲದಲ್ಲಿ ಶರಣರೊಡನೆ ಇದ್ದು ಅವಳು ಯಾವಾಗಲೂ ತನ್ನ ಮಗ ಚನ್ನಬಸವನನ್ನು ಹಿಂಬಾಲಿಸುತ್ತ ಉಳಿವಿಯಲ್ಲಿ ದೇಹವಿಟ್ಟಿದ್ದಾಳೆ.

ಈ ಮಹಾಮನೆ ಗವಿಯು ಇದ್ದ ಎಡಕಿನ ಪರ್ವತ ಪ್ರದೇಶದ ಉನ್ನತ ಸ್ಥಾನದಲ್ಲಿ ಕಿನ್ನರೀ ಬ್ರಹ್ಮಯ್ಯನ ಸಮಾಧಿ ಇದೆ. ಇದರ ಮೇಲೆ ‘ಕಿನ್ನರಯ್ಯ’ ಎಂಬ ಹೆಸರುಳ್ಳ ಒಂದು ಶಿಲಾ ಶಾಸನವಿದೆ. ಅದನ್ನು ನಾನು ಕಣ್ಣಾರೆ ನೋಡಿದ್ದೇನೆ. ಈ ಸ್ಥಳದಿಂದ ಎತ್ತಕ್ಕೆ ಸಾಲು ಸಾಲಾಗಿ ಕಲ್ಲು ಮಣ್ಣಿನಿಂದ ಕಟ್ಟಿದ ಅನೇಕ ಗುಂಪಿಗಳಿವೆ. ಅವುಗಳು ಸಮಾಧಿ ಸ್ಥಳಗಳೆಂದು ನನಗೆ ತೋರುತ್ತದೆ. ಇಷ್ಟೇ ಅಲ್ಲ, ಈ ಭಾಗದಲ್ಲಿ ಮಹಾಮನೆಯ ಗವಿಯು ಇದ್ದು ಅದರಮೇಲೆ ೬ ಫೂಟು ಎತ್ತರವಾದ ಒಂದು ಅಳವೇರಿ ಗೋಡೆಯು ಇದ್ದು ಅದನ್ನು ಈ ಕಂದರದ ಪಶ್ಚಿಮ ಉತ್ತರ ಭಾಗಗಳಲ್ಲಿ ಹಾಯಿಸಿ ನದಿಯ ದಂಡೆಯ ವರೆಗೆ ಪೂರ್ವಕ್ಕಿರುವ ಕೆಳಗಿನ ತಗ್ಗು ಪ್ರದೇಶದಲ್ಲಿ ಒಯ್ದಿದ್ದಾರೆ. ಹೀಗೆ ಈ ಭಾಗವೆಲ್ಲ ಅತ್ಯಂತ ಭದ್ರವಾದ ಕೋಟೆಯಂತೆ ಆಗಿದೆ. ಈ ಗೋಡೆಗಳು ಆತ್ಮ ರಕ್ಷಣೆಗಾಗಿ ರಚಿಸಿರುವುಗಳೆಂಬುದು ಸ್ಪಷ್ಟವಿದೆ. ಆದರೆ ಯಾವಾಗ್ಗೆ ಇವು ನಿರ್ಮಿತವಾದುವೆಂಬುದು ಇನ್ನೂ ಸಂಶೋಧಿಸತಕ್ಕ ವಿಷಯವಾಗಿದೆ. ಆದರೆ ಅವು ಬುದ್ಧಿ ಪುರಸ್ಸರವಾಗಿ ಕಟ್ಟಿದ ಗೋಡೆಗಳಾಗಿವೆ.

ಈಗಿನ ಮಹಾಮನೆ ಗವಿಯಲ್ಲಿ ೧೫೦-೨೦೦ ಜನರು ಮಾತ್ರ ಹಿಡಿಯಬಹುದು. ಕಲ್ಯಾಣವನ್ನು ಬಿಟ್ಟಸಾವಿರಾರು ಜನರಲ್ಲಿ ಇಷ್ಟು ಜನರು

ಮಾತ್ರ ಕಡಿಯುವರೆಗೆ ಉಳಿದು ಅವರು ಈ ಗುಹೆಯಲ್ಲಿ ಧರ್ಮರಕ್ಷಣೆಗಾಗಿ ಶಸ್ತ್ರಗಳೊಡನೆ ಹೋರಾಡುತ್ತ ತಮ್ಮ ಪ್ರಾಣವನ್ನು ಕೊಟ್ಟಿದ್ದಾರೆ.

ಈ ಪ್ರದೇಶವೆಲ್ಲ ಅತ್ಯಂತ ಭವ್ಯವಾದುದು. ಇದರ ಫೋಟೋ ತೆಗೆದುಕೊಳ್ಳಬೇಕೆಂದು ನಾನು ಬಹಳಸಾರೆ ಪ್ರಯತ್ನಿಸಿದೆನು. ಆದರೆ ಇದು ಬಹು ಖರ್ಚಿನ ಕಾರ್ಯವಾಗಿದೆ. ಆದ್ದರಿಂದ ನಾನು ಈ ಪ್ರಯತ್ನವನ್ನು ಬಿಟ್ಟು ಕೊಡಬೇಕಾಯಿತು. ಗವಿಯ ಮೇಲೂ ಸುತ್ತಲೂ ಶಿಲಾಶಾಸನಗಳಿವೆ ಎಂದು ನಾನು ಅನೇಕರ ಮುಖದಿಂದ ಕೇಳಿದ್ದೇನೆ. ಈ ಪ್ರದೇಶವನ್ನು ಸೂಕ್ಷ್ಮವಾಗಿ ಸಂಶೋಧಿಸುವದು ಬಹು ಅವಶ್ಯವೆಂದು ನನಗೆ ತೋರುತ್ತದೆ.

**ವೀರಶೈವರಿಗೊದಗಿದ ವಿಪತ್ಕಾಲ:—** ಉಳಿವಿಯ ಸಂಗ್ರಾಮದ ತರುವಾಯ ವೀರಶೈವರಿಗೆ ಅತ್ಯಂತ ಭೀಕರ ಕಾಲವು ಒದಗಿತೆಂಬುದು ಸ್ಪಷ್ಟವಿದೆ. ವೀರಶೈವ ಧರ್ಮಕ್ಕಾಗಿ ಅತ್ಯಂತ ಶ್ರಮಿಸಿದಂಥ ಬಸವೇಶ್ವರ, ಚನ್ನಬಸವ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯ, ಅಲ್ಲಮಪ್ರಭು, ಮಹಾದೇವಿಯಕ್ಕ, ಕಕ್ಕಯ್ಯ, ಇವರೆಲ್ಲಾರೂ ಈ ಕಾಲದಲ್ಲಿ ಉಳಿಯಲಿಲ್ಲ. ಶಿವಶರಣರು ಬಲಾಢ್ಯ ಶತ್ರುವಿನ ಮುಂದೆ ಹಿಂದೆಗೆಯಬೇಕಾಯಿತು. ಆದರೆ ಉಚ್ಚ ತತ್ವಗಳ ಪ್ರಚಾರದ ಪರಿಣಾಮಗಳು ಯಾವಾಗಲೂ ಸ್ಥಾಯಿಕವಾಗಿರುತ್ತವೆ. ಶಿವಶರಣರು ಹೀಗೆ ನಾಶ ಹೊಂದಿದರೂ ಅವರ ತತ್ವಗಳು ನಾಶಹೊಂದಲಿಲ್ಲ. ಜೈನ ಗ್ರಂಥಕಾರರು ಉಳಿವಿಯ ಸಂಗ್ರಾಮವನ್ನು ವರ್ಣಿಸುತ್ತ ತಾವು ಗೆದ್ದೆವೆಂದು ಬಹು ಆಢ್ಯತೆಯಿಂದ ಹೇಳಿಕೊಳ್ಳುವದುಂಟು. ಆದರೆ ಹೀಗೆ ವರ್ಣಿಸುತ್ತ ಅವರು ಈ ಸಂಗ್ರಾಮದ ತರುವಾಯ 'ದುಷ್ಟ' ಜಂಗಮರು ಎಲ್ಲಕಡೆಗೂ ಪಸರಿಸಿ ಬಸವನ ತತ್ವಗಳನ್ನು ಸಾರುತ್ತ ತಿರುಗಹತ್ತಿದರೆಂದು ಹೇಳುತ್ತಾರೆ. ಇದರಿಂದ ಶಿವಶರಣರ ತತ್ವಗಳು ಮುಳುಗದೆ ಅವುಗಳನ್ನು ಪ್ರಚಾರಗೊಳಿಸುವಂಥ ಬಹುಜನರು ದೇಶದಲ್ಲಿ ಹೊರಟರೆಂಬುದು ಸ್ಪಷ್ಟವಾಗುತ್ತದೆ. ಹೇಗೆ ಬಸವೇಶ್ವರನ ಕಾಲದಲ್ಲಿ ಅನೇಕ ವಚನಕಾರರು ಉಂಟಾದರೋ ಹಾಗೆಯೇ ಅನೇಕ ವಚನಕಾರರು ಅವನ ತರುವಾಯ ಎಲ್ಲಕಡೆಗೂ ಉಂಟಾಗಿ ಪ್ರಮು

ಥರ ತತ್ವಗಳನ್ನು ಹೆಚ್ಚಾಗಿ ಪ್ರಚಾರಪಡಿಸಹತ್ತಿದರೆಂದು ಕಂಡುಬರುತ್ತದೆ. ಸತ್ವಶಾಲಿಗಳನ್ನು ಹಿಂಸಿಸಿದ್ದರ ಪರಿಣಾಮವು ಇದಾಗಿದೆ. ಅಷ್ಟರಲ್ಲಿ ಕೆಳಗೆ ಕಾಣಿಸಿದ ಘಟನೆಗಳು ದೇಶದಲ್ಲಿ ಸಂಭವಿಸಿದವು.

ರೇವಣಸಿದ್ಧೇಶ್ವರನ ಮಗನಾದ ರುದ್ರಮುನಿಯು ಉಳಿವಿಯ ಸಂಗ್ರಾಮ ಕಾಲದಲ್ಲಿ ಕೆಲಕಾಲ ಉಳಿವಿಯಲ್ಲಿದ್ದು ಅಲ್ಲಿಯ ಶರಣರನ್ನು ಸಂದರ್ಶಿಸಿ ಕೂಡಲೆ ಕಲ್ಯಾಣಕ್ಕೆ ಹೋಗಿ ಅಲ್ಲಿಂದ ಶ್ರೀ ಶೈಲಕ್ಕೆ ಹೋದನೆಂದು ಶಿವಶರಣರ ಚರಿತ್ರೆಗಳಲ್ಲಿ ಉಲ್ಲೇಖಗಳಿವೆ. ಈ ಕಾಲದಲ್ಲಿ ಶ್ರೀಶೈಲ ಪ್ರದೇಶದಲ್ಲಿ ಶಿವಶರಣರು ಹೆಚ್ಚಿಗೆ ಜಯಶೀಲರಾಗಿದ್ದರು. ಆದ್ದರಿಂದ ಆಗ ಅಲ್ಲಿಗೆ ಬಂದ ರುದ್ರಮುನಿಯ ಪ್ರೇರಣೆಯಿಂದ ಅವರು ಮೊದಲು ಬಾಳೇಹಳ್ಳಿಗೆ ಹೋಗಿ ಅಲ್ಲಿ ಪರವಾದಿಗಳ ಕೂಡ ಯುದ್ಧವನ್ನು ಹೂಡಿ ಅದರಲ್ಲಿ ಜಯವನ್ನು ಸಂಪಾದಿಸಿದರು. ಇದೇ ಸಮಯದಲ್ಲಿ ಶಿವಶರಣರು ಪುಲಿಗೆರೆ, ಅಬ್ಬಲೂರು, ಮಾರುಡಿಗೆ, ಪಾನುಗಲ್ಲು, ಅಲಂಪುರ ಮುಂತಾದ ಕಡೆಗಳ ಯುದ್ಧಗಳಲ್ಲಿ ಜಯವನ್ನು ಹೊಂದಿದವರಾಗಿದ್ದರು. ಈ ಗೆಲವುಗಳಿಂದ ತೊರಗಲ್ಲ ಪ್ರಾಂತ ಮತ್ತು ಉಳಿವಿಯ ಕಡೆಗೆ ಶಿವಶರಣರಿಗುಂಟಾದ ಸೋಲುಗಳು ಅವರ ಮೇಲೆ ಯಾವ ಪರಿಣಾಮಗಳನ್ನುಂಟು ಮಾಡಲಿಲ್ಲ. ಆದರೆ ಇಲ್ಲಿ ಶಿವಶರಣರಿಗೆ ಉಂಟಾದ ಹಿಂಸೆಗಳ ಮೂಲಕ ವೀರಶೈವರು ಮತ್ತಿಷ್ಟು ಕೆರಳಿದವರಾಗಿ ಹೆಚ್ಚು ತೀವ್ರತರವಾದ ಉಪಾಯಗಳನ್ನು ಕೈಕೊಂಡು ತಮ್ಮ ಧರ್ಮಪ್ರಸಾರ ಕಾರ್ಯಗಳಲ್ಲಿ ತೊಡಗಿದರೆಂದು ಶಿವಶರಣರ ಚರಿತ್ರೆಗಳಿಂದ ತೋರಿ ಬರುತ್ತದೆ.

**ಪೀಠಾಧಿಪತಿಗಳು**:— ಜಂಗಮರು ಉಳಿವಿಯ ಸಂಗ್ರಾಮದ ತರುವಾಯ ಎಲ್ಲಕಡೆಗೂ ಪಸರಿಸಿ ತಮ್ಮ ಪ್ರಚಾರಕಾರ್ಯಗಳನ್ನು ಕೈಕೊಳ್ಳುವಲ್ಲಿ ಅವರು ಮೊದಲು ನಾಲ್ಕು ಸ್ಥಳಗಳನ್ನು ತಮ್ಮ ಮುಖ್ಯ ಕೇಂದ್ರಗಳನ್ನಾಗಿ ಮಾಡಿದರೆಂದು ತೋರುತ್ತದೆ. ಅವು ಯಾವವೆಂದರೆ:—

ಉತ್ತರ ಕರ್ನಾಟಕದಲ್ಲಿ ಏಕೋರಾಮಾಧ್ಯನು ಮುದನೂರ (ಚನ್ನಮುದ್ರಾಪುರ) ದಲ್ಲಿ ಇದ್ದುಕೊಂಡು ಈ ಕಡೆಗೆ ಅವನು ವೀರಶೈವ ಧರ್ಮವನ್ನು ವಿಸ್ತರಿಸಿದ್ದಾನೆ. ಮುದುನೂರು ಕಲಬುರ್ಗಿ ಜಿಲ್ಲೆಯಲ್ಲಿರುತ್ತದೆ. ಇದು ೧ನೇ ಕೇಂದ್ರವು.

ಬಾಳೇಹಳ್ಳಿಯಲ್ಲಿ ರುದ್ರಮುನಿಯ ಶಿಷ್ಯನಾದ ಮುಕ್ತಿಮುನಿಗೆ ಶಿಷ್ಯನಾದ ದಿಗಂಬರ ಮುಕ್ತಿಮುನಿ, ಆತನ ಶಿಷ್ಯರು ಕುಮಾರ ಚನ್ನಬಸವೇಶ್ವರ, ಅಜಾತಭಿಕ್ಷಾವರ್ತಿಗಳು ನೆಲಿಸಿ ವೀರಶೈವ ಧರ್ಮವನ್ನು ಪಶ್ಚಿಮ ಕರ್ನಾಟಕದಲ್ಲೆಲ್ಲ ವಿಸ್ತಾರಗೊಳಿಸಿದರು. ಇದು ಶಿವಶರಣರ ೨ ನೇ ಕೇಂದ್ರವು.

ಮಧ್ಯಕರ್ನಾಟಕವಾದ ಚಿತ್ರಕಲ್‌ದುರ್ಗ ಜಿಲ್ಲೆ, ಹರಪನಹಳ್ಳಿ ಮತ್ತು ಕೂಡ್ಲಿಗಿ ತಾಲೂಕುಗಳು ತುಮಕೂರ ಜಿಲ್ಲೆ ಇಲ್ಲಿ ಮರುಳಸಿದ್ಧನು ರೇವಣಸಿದ್ಧೇಶ್ವರನಿಂದ ದೀಕ್ಷೆಯನ್ನು ಹೊಂದಿ ವೀರಶೈವ ಧರ್ಮದ ತಿರುಳನ್ನು ಈ ಕಾಲದಲ್ಲಿ ಪ್ರಚಾರಪಡಿಸಿದ್ದಾನೆ. ಬಳ್ಳಾರಿ ಜಿಲ್ಲೆಯಲ್ಲಿರುವ ಉಜ್ಜನಿಯೇ ಈತನ ಮುಖ್ಯಸ್ಥಾನವಾಗಿದೆ. ಇದು ವೀರಶೈವರ ೩ ನೇ ಕೇಂದ್ರವು.

ಪೂರ್ವ ಕರ್ನಾಟಕ ಮತ್ತು ಆಂಧ್ರದೇಶಗಳಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಪಂಡಿತಾರಾಧ್ಯನ ಹೆಸರಿನಿಂದ ಶಿವಶರಣರು ಶ್ರೀಶೈಲ ಪೀಠವನ್ನು ತಮ್ಮ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಇವರ ಸುತ್ತಲಿನ ಪ್ರದೇಶಗಳಲ್ಲಿ ವೀರಶೈವ ಧರ್ಮವನ್ನು ವಿಸ್ತರಿಸಿದರು. ಇದು ಅವರ ೪ ನೇ ಕೇಂದ್ರವು.

ಕೇದಾರ ಮತ್ತು ಕಾಶೀಕ್ಷೇತ್ರಗಳು ಇವಾದರೂ ಸಿಂಹಾಸನ ಸ್ಥಳಗಳಾಗಿದ್ದು ಇಲ್ಲಿಂದಲೂ ಬಸವೇಶ್ವರನ ಕಾಲದಲ್ಲಿ ಧರ್ಮಪ್ರಸಾರ ಕಾರ್ಯಗಳು ನಡೆದಿವೆಂದು ಅನೇಕರ ತಿಳಿವಳಿಕೆ ಇದೆ. ಆದರೆ ಇಲ್ಲಿಂದ ಹೀಗೆ ಯಾವ ಕಾರ್ಯಗಳು ಜರಿಗಿದವು ಮತ್ತು ಯಾರಿಂದ ಎಂಬುದು ಏನೂ ತಿಳಿದುಬಂದಿಲ್ಲ. ಆದರೆ ಇಲ್ಲಿ ವೀರಶೈವರ ಮಹತ್ವದ ಮಠಗಳಿದ್ದು ಅವುಗಳಿಗೆ ರಾಜರಿಂದ ಬೇರೆ ಬೇರೆ ಕಾಲಗಳಲ್ಲಿ ಉಂಬಳಿಗಳು ಸಿಕ್ಕಿದ್ದು ಮಾತ್ರ ಕಂಡುಬಂದಿದೆ. ಆದರೆ ಕರ್ನಾಟಕದಲ್ಲಿ ಶಿವಶರಣರಿಗೆ ಒದಗಿದ ಘೋರ ಪ್ರಸಂಗಗಳಲ್ಲಿ ಬಹು ದೂರದಲ್ಲಿರುವ ಈ ಮಠಗಳಿಂದ ಅವರಿಗೆ ಯಾವ ಸಹಾಯವು ದೊರಕಿಲ್ಲೆಂದು ಕಂಡುಬರುತ್ತದೆ.

ಅಲ್ಲಮ ಪ್ರಭುವು ಬಸವೇಶ್ವರನಿದ್ದ ಕಾಲದಲ್ಲಿ ಅನೇಕ ಮಹತ್ವದ ಕಾರ್ಯಗಳನ್ನು ಮಾಡಿದನು. ಆದರೆ ಕಲ್ಯಾಣದ ೨ನೇ ಯುದ್ಧವಾದ

ಬಳಿಕ ಅವನು ಕಲ್ಯಾಣವನ್ನು ಬಿಟ್ಟು ಶ್ರೀಶೈಲ ಪ್ರಾಂತಕ್ಕೆ ಹೋಗಿ ಅಲ್ಲಿಯೇ ಸಮಾಧಿಸ್ಥನಾದನು. ಅವನು ರುದ್ರಮುನಿ, ಮುಕ್ತಿಮುನಿ, ಮೊದಲಾದವರೊಂದಿಗೆ ಶ್ರೀಶೈಲದ ಕಾಳಗಗಳಲ್ಲಿ ಅಂಗವಹಿಸಿರುವದಿಲ್ಲ. ಆದರೆ ಅನಾದಿ ಗಣನಾಥ, ಆದಿ ಗಣನಾಥ ಎಂಬವರು ಅವನ ತರುವಾಯ ಕೆಲಕಾಲದ ನಂತರ ಶೂನ್ಯ ಸಿಂಹಾಸನಕ್ಕೆ ಅಧಿಪತಿಗಳಾದರೆಂತಲೂ ಅವರಾದರೂ ಅನೇಕ ಪ್ರಚಾರ ಕಾರ್ಯಮಾಡಿದರೆಂತಲೂ ಅವರ ಚರಿತ್ರೆಗಳಲ್ಲಿ ಹೇಳಿದೆ. ಆದರೆ ಅವರು ಉಳಿವಿಯ ಸಂಗ್ರಾಮದ ತರುವಾಯ ಕೆಲಕಾಲ ಗತಿಸಿದ ಬಳಿಕ ಇಂಥ ಕಾರ್ಯಗಳನ್ನು ಮಾಡಿದ್ದಾಗಿ ತೋರುತ್ತದೆ. ಆದರೆ ಅವರು ಆರಂಭದ ಕಾಲದಲ್ಲಿ ಇರಲಿಲ್ಲ.

ಈ ಪ್ರಕಾರ ಶಿವಶರಣರು ನಾಲ್ಕು ಕೇಂದ್ರಗಳನ್ನು ಸ್ಥಾಪಿಸಿಕೊಂಡು ಮುಂದೆ ದೇಶದಲ್ಲಿ ಅವುಗಳಮೂಲಕ ಹೇಗೆ ತಮ್ಮ ಮತವನ್ನು ಬೆಳಸಿದರೆಂಬುದನ್ನು ತಿಳಿಯುವದು ಬಹು ಮಹತ್ವದ ವಿಷಯವಾಗಿದೆ. ಇದು ಕೆಳಗೆ ಹೇಳಲ್ಪಟ್ಟಿದೆ.

**ಮಠಗಳ ಸ್ಥಾಪನೆ:—** ಶಿವಶರಣರು ಮೊದಲು ಜಂಗಮೋದ್ಧಾರಗೊಂಡು ಗ್ರಾಮಾಂತರಗಳಲ್ಲಿ ಮಠಗಳನ್ನು ಸ್ಥಾಪಿಸುತ್ತ ಹೋದದ್ದು ಕಂಡುಬರುತ್ತದೆ. ಉಳಿವಿಯ ಸಂಗ್ರಾಮದ ತರುವಾಯ ವಶರಣರು ದೇಶದಲ್ಲಿ ಜೀವಿಸಿರುವದು ಸಹ ಅವರಿಗೆ ಕಠಿಣವಾಯಿತು. ಆಗ ಅವರಿಗೆ ತಮ್ಮ ಮತ ತತ್ವ ಪ್ರಚಾರಕ್ಕೆ ಮತ್ತು ಆತ್ಮ ರಕ್ಷಣೆಗೆ ಕೆಲವೊಂದು ಸಹಾಯವು ಬೇಕಾಗಿದ್ದಿತು. ಆದರೆ ಅವರಿಗೆ ಬಸವೇಶ್ವರನಂಥ ಯಾವ ರಾಜಕೀಯ ವ್ಯಕ್ತಿಯೂ ಸಹಾಯಕ್ಕೆ ಉಳಿಯಲಿಲ್ಲ. ಇದಿರಾಳಿಗಳು ವೀರಶೈವರನ್ನು ನಾಶ ಮಾಡಲು ಎಲ್ಲಕಡೆಗೂ ಹಾತೊರೆಯುತ್ತಿದ್ದರು. ಆಗ ಶಿವಶರಣರು ಸ್ವಾವಲಂಬಿಗಳಾಗಿ ಹೋರಾಡುವ ಪ್ರಸಂಗವು ಉಂಟಾಯಿತು. ಆಗ ಅವರು ಸ್ವಾವಲಂಬಿಗಳಾದರು. ಅವರು ದೇಶದಲ್ಲೆಲ್ಲ ಮಠಗಳನ್ನು ಸ್ಥಾಪಿಸಿ ವೀರಶೈವ ಧರ್ಮವನ್ನು ಮತ್ತು ಸಮಾಜವನ್ನು ರಕ್ಷಿಸಿದರು.

ಶಿವಶರಣರು ಈ ಕಾಲದಲ್ಲಿ ಜನತೆಯ ಮನಸ್ಸನ್ನು ತಮ್ಮಕಡೆಗೆ ಮೊದಲು ಎಳೆದುಕೊಳ್ಳುವ ಕಾರ್ಯಗಳನ್ನು ಪ್ರಾರಂಭಿಸಿದರು. ಅವರು ವಚನಗಳನ್ನು ಸಾರುತ್ತ ಹಳ್ಳಿ ಹಳ್ಳಿಗಳಲ್ಲಿ ಅವುಗಳನ್ನು ಪ್ರಚಾರಮಾಡುವ

ಕಾರ್ಯವನ್ನು ಕೈಕೊಂಡರು. ಜೈನ ಗ್ರಂಥಕಾರರು ಹೀಗೆ ಅವರು ಮಾಡಿದರೆಂದು ಹೇಳುತ್ತಾರೆ. ಶಿವಶರಣರು ಕೆಲವೊಂದು ಗ್ರಾಮಕ್ಕೆ ಹೋದಬಳಿಕ ಅವರು ಜನರಿಗೆ ವಚನಗಳ ಮೂಲಕ ಮೊದಲು ಬೋಧಿಸುವರು. ಅವುಗಳ ವಿಶಾಲ ತತ್ವಗಳು, ವಿಶೇಷವಾಗಿ ಎಲ್ಲರೂ ಸಮಾನರೆಂಬ ಅವರ ಬೋಧೆಗಳು ಜನರ ಮನಸ್ಸನ್ನು ಹಿಡಿಯುವವು. ಇದರಿಂದ ಕೆಲವೊಂದು ಗ್ರಾಮದಲ್ಲಿ ವೀರಶೈವರಾಗಲು ಜನರು ಒಪ್ಪಲು ಅವರು ಅವರಿಗೆ ದೀಕ್ಷೆಯನ್ನು ಕೊಡುವರು ಮತ್ತು ತಮ್ಮ ಪ್ರಚಾರ ಕಾರ್ಯಕ್ಕೋಸ್ಕರ ಅಲ್ಲಿ ಒಂದು ಮಠವನ್ನು ಸ್ಥಾಪಿಸುವರು. ಆ ಮಠಕ್ಕೆ ಆ ಗ್ರಾಮದಲ್ಲಿಯ ವೀರಶೈವರೇ ಶಿಷ್ಯರು. ಹೀಗೆ ಜಂಗಮರೂ ಶಿವಶರಣರೂ ಗ್ರಾಮ ಗ್ರಾಮಗಳಲ್ಲಿ ಸಂಚರಿಸುತ್ತ ಮಠಗಳ ಮೂಲಕ ವೀರಶೈವ ಧರ್ಮವನ್ನು ಈ ಕಾಲದಲ್ಲಿ ದೇಶದಲ್ಲೆಲ್ಲ ಸ್ಥಾಪಿಸುತ್ತ ಹೋದರು.

ಶಿವಶರಣರು ಏರ್ಪಡಿಸಿದ ಮಠಗಳ ರಚನೆಯು ಅವರ ಜಾಣ್ಮೆಯನ್ನು ತೋರಿಸುತ್ತದೆ. ಇಂಥ ವ್ಯವಸ್ಥೆಯು ಜೈನ ಬೌದ್ಧರ ವಿಹಾರ ಮತ್ತು ಮಠಗಳಲ್ಲಿ ಸಹ ಕಂಡುಬರುವದಿಲ್ಲ. ಒಂದು ರಾಜ್ಯವನ್ನು ಕಟ್ಟಲು ಯಾವ ವ್ಯವಸ್ಥೆಯು ಬೇಕೋ ಅದನ್ನೆಲ್ಲ ಅವರು ಈ ಮಠಗಳಲ್ಲಿ ಇಟ್ಟಿದ್ದಾರೆ. ಮಠಗಳ ವ್ಯವಸ್ಥೆ ಹೇಗೆಂದರೆ:—

ಮಠಕ್ಕೆ ಅಧಿಪತಿಯೊಬ್ಬನಿದ್ದು ಅವನಿಗೆ ಪಟ್ಟಾಧಿಕಾರಿ ಅಥವಾ ಮಹಂತ ಎಂಬ ಹೆಸರು ಇದೆ. ಅವನಿಗೆ ಸಹಾಯಕನಾಗಿ ಒಬ್ಬ ಅಥವಾ ಅನೇಕ ಚರಂತಿಗಳು ಇರುತ್ತಾರೆ. ಇವರೆಲ್ಲರೂ ಜ್ಞಾನಿಗಳು. ಇವರು ಮಠದಲ್ಲಿದ್ದುಕೊಂಡು ಧರ್ಮ ಪ್ರಚಾರ ಮಾಡುವರು. ಇಂಥ ಪ್ರಚಾರ ಕಾರ್ಯ ಮಾಡುವಲ್ಲಿ ಇದಿರಾಳಿಗಳು ಮಠದ ಮೇಲೆ ದಾಳಿಯನ್ನು ಮಾಡಿ ಬೋಧೆಮಾಡುವವರನ್ನು ನಾಶಮಾಡುವ ಕಠಿಣ ಪ್ರಸಂಗಗಳು ಈ ಕಾಲಕ್ಕೆ ಉಂಟಾಗುತ್ತಿದ್ದವು. ಉಳಿವಿಯ ಕಾಳಗದ ತರುವಾಯ ಈ ಸ್ಥಿತಿಯು ಉಂಟಾಗಿತ್ತು. ಆಗ ಮಠಾಧಿಕಾರಿಗಳು ಕೆಲ ಸೈನಿಕರನ್ನು ಮಠದಲ್ಲಿ ಇಟ್ಟುಕೊಳ್ಳುತ್ತಿದ್ದರು. ಈ ಸೈನಿಕರಿಗೆ ಮಠಪತ್ತಿ (ಪತ್ತಿ – ಸೈನಿಕ) ಗಳೆಂಬ ಹೆಸರು. ಈ ಮಠಪತ್ತಿಗಳನ್ನು ಕಾಳಗಕ್ಕೆ ನಡೆಸಿಕೊಂಡು ಹೋಗತಕ್ಕವರು ಗಣಾಚಾರಿಗಳು. ವೀರಶೈವ ಸಿದ್ಧಾಂತದಲ್ಲಿ ಇದಿರಾಳಿಗಳು ವಿರೋ

ಧಿಸಿದಲ್ಲಿ ಅವರನ್ನು ಸದೆಬಡೆಯಬೇಕೆಂದು ಸ್ಪಷ್ಟ ಸಲಹೆಗಳು ಇವೆ. ಹೀಗೆ ಮಾಡುವದು ಗಣಾಚಾರವೆಂದು ಹೇಳಲ್ಪಡುತ್ತದೆ. ಗಣ ಚಾರಿಯು ಮಠಪತ್ತಿಗಳನ್ನು ಕಾಳಗಕ್ಕೆ ನಡಿಸಿಕೊಂಡು ಹೋಗುವನು. ಅವನಿಗೆ ಸಹಾಯಕರಾಗಿ ಕೆಲವು ಗಣಕುಮಾರರ ಏರ್ಪಡೂ ಮಠಗಳಲ್ಲಿದ್ದಿತು. ಇವರಲ್ಲದೆ ಸ್ಥಾವರವೆಂಬ ಮಠದ ಇನ್ನೊಬ್ಬ ಅಧಿಕಾರಿಯು ಇದ್ದು ಅವನು ಬಹುಶಃ ಗ್ರಾಮದ ಗೌಡನಾಗಿರುತ್ತಿದ್ದನು. ಅವನ ಮೂಲಕ ಮಠಾಧಿಕಾರಿಗಳು ಅಪ್ರತ್ಯಕ್ಷವಾಗಿ ರಾಜಕೀಯ ಬೆಂಬಲವನ್ನು ಸಹ ಪಡೆಯುತ್ತಿದ್ದರು. ಹೀಗೆ ಹಿಂದಿನ ಕಾಲದಲ್ಲಿ ಮಠಗಳ ವ್ಯವಸ್ಥೆ ಇದ್ದಿತು.

ಹೀಗೆ ಹಿಂದಿನ ಕಾಲದ ಮಠಗಳು ಕೇವಲ ಧರ್ಮಬೋಧೆ ಮಾತ್ರ ವಲ್ಲ, ಅವುಗಳ ಮೂಲಕ ವೀರಶೈವರು ಆತ್ಮರಕ್ಷಣೆಯನ್ನು ಸಹ ಮಾಡಿ ಕೊಂಡಿದ್ದಾರೆ. ಎಲ್ಲಾದರೂ ಪರವಾದಿಗಳು ವೀರಶೈವರನ್ನು ಹಿಂಸೆ ಮಾಡಿದುದು ತಿಳಿದ ಕೂಡಲೆ, ಸುತ್ತಲಿನ ಗ್ರಾಮಗಳಲ್ಲಿದ್ದ ಮಠಾಧಿಪತಿ ಗಳೂ ಮಠಗಳಿಗೆ ಸಂಬಂಧಿಸಿದ ಮಠಪತ್ತಿ (ಕಾಲಾಳು) ಗಳೂ ಗ್ರಾಮ ಗಳಲ್ಲಿದ್ದ ಭಕ್ತರೂ ಎಲ್ಲರೂ ಏಕಮನದಿಂದ ಮಿಲಿತರಾಗಿ ಯಾವಲ್ಲಿ ಇಂಥ ಹಿಂಸೆಗಳು ನಡೆದಿರುತ್ತವೆಯೋ ಅಲ್ಲಿಗೆ ಹೋಗಿ ಶತ್ರುಗಳ ಮೇಲೆ ಹೋಗಿ ಬೀಳುವರು. ಅವಶ್ಯತೋರಿದರೆ ಯುದ್ಧಮಾಡುವರು. ಹೀಗೆ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕ ಪ್ರದೇಶಗಳಲ್ಲಿ ನಾವು ಹಿಂದೆ ವಿಸ್ತರಿಸಿದ ಪ್ರಕಾರ ಅನೇಕ ಕಾಳಗಗಳಾಗಿವೆ.

ಮಠಗಳ ಮೂಲಕ ಸಾಮಾನ್ಯ ಜನತೆಯಲ್ಲಿ ವೀರಶೈವ ಧರ್ಮವು ಮೇಲೆ ಹೇಳಿದಂತೆ ಪಸರಿಸಿತು. ಆಗ ಸಮಾಜದಲ್ಲಿ ಒಂದು ಪ್ರಬಲ ವಾದ ಸಾಮರ್ಥ್ಯವು ಉಂಟಾಯಿತು. ಆ ಸಾಮರ್ಥ್ಯದ ಮುಂದೆ ಬಿಜ್ಜ ಳನಂಥ ಬಲಾಢ್ಯ ಚಕ್ರವರ್ತಿಯ ರಾಜ್ಯಾಧಿಕಾರಿಗಳು ಏನನ್ನೂ ಮಾಡ ಲಾರದವರಾದರು. ಕರ್ನಾಟಕದಲ್ಲಿ ಅಲ್ಲಲ್ಲಿ ಪ್ರಬಲರಾದ ಸಾಮಂತ ರಾಜರು ಈ ಕಾಲಕ್ಕೆ ಆಳುತ್ತಿದ್ದರು. ಅವರು ನವದತ್ತಿ ರಟ್ಟರು, ಹಲಸಿಯ ಮತ್ತು ಹಾನಗಲ್ಲಿನ ಕದಂಬರು, ಮೈಸೂರ ದೇಶದಲ್ಲಿ ನೊಳಂಬ ಪಲ್ಲವರು, ಸಾಂತರರು, ಮಲೆನಾಡಿನ ಮಲಪರು ಇವರೇ ಮುಖ್ಯರಾಗಿ ದ್ದರು. ಅವರಲ್ಲಿ ಅನೇಕ ರಾಜಮನೆತನಗಳು ಪರಧರ್ಮಗಳಾಗಿದ್ದರೂ

ಶಿವಶರಣರು ಪ್ರಸಾರಮಾಡುತ್ತಿದ್ದ ಧರ್ಮ ತತ್ವಗಳನ್ನು ಅವರೂ ಅವರ ಪ್ರಜೆಗಳೂ ಅಂಗೀಕರಿಸಿ ವೀರಶೈವರಾದುದು ಕಂಡುಬರುತ್ತದೆ. ಹೀಗೆ ಈ ಮತಗಳ ಮೂಲಕ ದೇಶದಲ್ಲಿ ಒಂದು ಅದ್ಭುತ ಕ್ರಾಂತಿಯುಂಟಾಯಿತು. ಆಗ ಶರಣರಲ್ಲಿ ಇವನು ಸ್ಪೃಶ್ಯನು ಇವನು ಅಸ್ಪೃಶ್ಯನು, ಇವನು ಜಂಗಮನು, ಇವನು ಭಕ್ತನು ಇವನು ಈ ಜಾತಿಯವನು, ಅವನು ಆ ಜಾತಿಯವನು ಎಂಬ ಭೇದ ಭಾವಗಳು ಅಳಿದು ಹೋದವು. ಎಲ್ಲರೂ ಒಂದು ಗುಟ್ಟಾಗಿ ಪರಧರ್ಮಿಗಳೊಡನೆ ಹೋರಾಡಿದರು.

ಶಿವಶರಣರು ಮಾಡಿದ ಇಂಥ ಅದ್ಭುತ ಚಳವಳಿಯು ಹಿಂದುಸ್ಥಾನದ ಬೇರೆ ಯಾವ ಭಾಗದಲ್ಲಿಯೂ ಆದದ್ದು ಕಂಡುಬರುವದಿಲ್ಲ. ಬಸವೇಶ್ವರ, ಚನ್ನಬಸವೇಶ್ವರ, ಮಡಿವಾಳ ಮಾಚಿದೇವ, ಕಿನ್ನರೀ ಬ್ರಹ್ಮಯ್ಯ ಕಕ್ಕಯ್ಯ ಇಂಥ ಮಹಾ ವಿಭೂತಿಗಳು ವೈರಿಗಳೊಡನೆ ಹೋರಾಡುತ್ತ ತಮ್ಮ ರಕ್ತವನ್ನು ಸೂರೆಮಾಡಿದ್ದರ ಪರಿಣಾಮವು ಇದಾಗಿದೆ.

ಹೀಗೆ ಕಾದಾಡಲಿಕ್ಕೆ ಈ ಧೈರ್ಯಶಾಲಿಗಳು ಈ ಕಾಲದಲ್ಲಿ ಹಿಂದೆಗೆಯಲಿಲ್ಲ. ಅವರ ಈ ವರ್ತನೆಯಿಂದ ನಾಡಿನಲ್ಲಿ ಒಂದು ಅದ್ಭುತ ಧರ್ಮ ಕ್ರಾಂತಿ ಯುಂಟಾಯಿತು.

ಶಿವಶರಣರ ಈ ಹೋರಾಟಗಳು ಉತ್ತರಕ್ಕೆ ಗೋದಾವರೀ ತೀರದಲ್ಲಿರುವ ಪರಿವಳಿಗೆ ಅಥವಾ ಪರಳಿಯಿಂದ ದಕ್ಷಿಣಕ್ಕೆ ತುಂಗಭದ್ರಾ ತೀರ ಪ್ರದೇಶದಲ್ಲಿದ್ದ ಬಾಳೇಹಳ್ಳಿ, ಪುಲಿಗೆರೆ ಮತ್ತು ಅಬ್ಬಲೂರು ಈ ಗ್ರಾಮಗಳ ವರೆಗೆ ಮತ್ತು ಪಶ್ಚಿಮಕ್ಕೆ ಬಾಳೇಹಳ್ಳಿ, ಉಳಿವಿ, ಮಂಗಳವಾಡಗಳಿಂದ ಪೂರ್ವ ಸಮುದ್ರ ತೀರಕ್ಕೆ ಸಮೀಪವಿರುವ ದ್ರಾಕ್ಷಾರಾಮ ಬೆಜವಾಡ ಈ ಪಟ್ಟಣಗಳ ವರೆಗೆ ಅನೇಕ ಕಡೆಗೆ ನಡೆದವು. ಇಲ್ಲಿ ಆಗಾಗ್ಗೆ ಧರ್ಮಯುದ್ಧಗಳು ಆಗಿವೆ. ಈ ಕಾಲದಲ್ಲಿ ಭಕ್ತಮಾಹೇಶ್ವರರು ಸುಸಂಘಟಿತರಾಗಿ ಅತ್ಯಂತ ಧೈರ್ಯ ಸಾಹಸಗಳಿಂದ ತಮ್ಮನ್ನು ಸಂರಕ್ಷಿಸಿಕೊಂಡರು. ಇಂಥ ಅದ್ಭುತ ವಾತಾವರಣದಲ್ಲಿ ವಚನ ವಾಙ್ಮಯವು ಬೆಳೆದಿರುತ್ತದೆ. ಇದರಿಂದ ವಚನಕಾರರ ನುಡಿಗಳಲ್ಲಿ ಒಂದು ಮಹತ್ವದ ಶಕ್ತಿಯು ಹೊರಹೊಮ್ಮುತ್ತಿರುವದನ್ನು ನಾವು ನೋಡುತ್ತೇವೆ.

ಈ ಭೀಕರವಾದ ಹೋರಾಟಗಳಲ್ಲಿ ಕಾದಾಡಿದ ಕೆಳಗೆ ಕಾಣಿಸಿದ ಶೂರರು ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತಾರೆ. ಕರ್ನಾಟಕದ

ಧಾರ್ಮಿಕ ಇತಿಹಾಸದಲ್ಲಿ ಅವರ ಹೆಸರುಗಳು ಚಿರಸ್ಥಾಯಿಯಾಗಿ ಉಳಿಯದೆ ಇರಲಾರವು.

ಬಸವೇಶ್ವರ, ನೀಲಾಂಬಿಕೆ, ಹಡಪದಪ್ಪಣ್ಣಗಳು ಮೊದಲನೆಯ ಆಘಾತದಲ್ಲಿ ಸಿಲ್ಕಿದವರಾಗಿ ಕೂಡಲಸಂಗಮ ಅಥವಾ ಕಪ್ಪಡಿಸಂಗಮ ದಲ್ಲಿರುವ ದೊಡ್ಡ ಗುಡಿಯಲ್ಲಿ ಸಮಾಧಿಯನ್ನು ಹೊಂದಿದರು.

ತರುವಾಯ ಜಗದೇವ ಮಲ್ಲಿಬೊಮ್ಮಣ್ಣಗಳು ಬಿಜ್ಜಳನು ಶಿವಶರಣರಾದ ಹರಳಯ್ಯ ಮಧುವರಸರನ್ನು ಹಿಂಸಿಸಿದ್ದರ ಮೂಲಕ ಅವನನ್ನು ಘಾತಿಸಿದರು. ಅಂದಿನಿಂದ ಶಿವಶರಣರ ಧರ್ಮಯುದ್ಧವು ಪ್ರಾರಂಭವಾಯಿತೆಂದು ಹೇಳಬಹುದು.

ಮುಂದೆ ಮಡಿವಾಳಮಾಚಿದೇವ, ಚನ್ನಬಸವ, ಕಿನ್ನರಿ ಬ್ರಹ್ಮಯ್ಯ ಕೂಗಿನ ಮಾರಿತಂದೆ, ಕಕ್ಕಯ್ಯ, ನಾಗಲಾಂಬಿಕೆಯರು ಸಹಸ್ರಾರು ಶಿವಶರಣರನ್ನು ಕೂಡಿಕೊಂಡು ಅಳಿಯ ಬಿಜ್ಜಳ ಮತ್ತು ಜೈನರ ದಂಡಾಳುಗಳ ಕೂಡ ಯುದ್ಧಗಳನ್ನು ಅನೇಕ ಕಡೆಗೆ ಮಾಡುತ್ತ ಸಹ್ಯಾದ್ರಿಯ ಘೋರಾರಣ್ಯವನ್ನು ಪ್ರವೇಶಿಸಿ ಕಡೆಗೆ ಉಳವಿಯಲ್ಲಿ ದೇಹವಿಟ್ಟರು. ಅವರ ಸಮಾಧಿ ಸ್ಥಳಗಳು ಈಗಿನ ಬೈಲಹೊಂಗಲ, ಕಲಘಟಗಿ, ಖಾನಾಪುರ, ಹಲ್ಯಾಳ ಮತ್ತು ಯಲ್ಲಾಪುರ ತಾಲೂಕುಗಳಲ್ಲಿ ಪಸರಿಸಿರುತ್ತವೆ.

ಹೀಗೆ ಶಿವಶರಣರು ಚದುರಿಸಲ್ಪಟ್ಟ ಬಳಿಕ, ವೀರಶೈವ ಸಮಾಜಕ್ಕೆ ಅಳಿಗಾಲವು ಪ್ರಾಪ್ತವಾಯಿತೋ ಏನೋ ಎಂದು ಭಾಸವಾಗುವ ಪ್ರಸಂಗಗಳು ಒದಗಿದವು.

ಆಗ ರೇವಣಸಿದ್ಧೇಶ್ವರನ ಮಗನಾದ ರುದ್ರಮುನಿಯು ಶಿವಶರಣರಿಗೆ ಮುಂದಾಳುವಾಗಿ ನಿಂತು ಯುದ್ಧಕ್ಕೆ ಎಲ್ಲರನ್ನು ಪ್ರೋತ್ಸಾಹಿಸಿದನು. ಅವನು ಶ್ರೀಶೈಲ ಪ್ರಾಂತದಲ್ಲಿ ಹೋರಾಡುತ್ತಿದ್ದ ಮುಕ್ತಿಮುನಿಗೆ ಸಹಾಯಕನಾಗಿ ಶಿವಶರಣರು ಅಲ್ಲಿ ಗೆಲ್ಲುವಂತೆ ಮಾಡಿದನು. ಮತ್ತು ಅಲ್ಲಿ ವೀರಶೈವರ ಸಿಂಹಾಸನವನ್ನು ಸ್ಥಿರಪಡಿಸಿದನು.

ಇಷ್ಟೇ ಅಲ್ಲ, ಅವನು ಶ್ರೀಶೈಲ ಪ್ರಾಂತದಿಂದ ಪಶ್ಚಿಮದ ಮಲೆನಾಡುಸೀಮೆಯಲ್ಲಿ ಹೋರಾಡುತ್ತಿದ್ದ ವೀರಶೈವರಿಗೆ ಸಹಾಯವನ್ನು ಸಲ್ಲಿಸಿ ಅವರು ಜಯವನ್ನು ಹೊಂದುವಂತೆ ಮಾಡಿ ಬಾಳೇಹಳ್ಳಿಯ ಪೀಠವು ಸ್ಥಿರಪಡುವಂತೆ ಮಾಡಿದನು.

ಇದೇ ಕಾಲಕ್ಕೆ ವರದಾನಿ ಗುಡ್ಡವ್ವೆಯು ರಾಯಚೂರ ಜಿಲ್ಲೆ ಅಲಂಪುರದಲ್ಲಿ ವೈರಿಗಳನ್ನು ಸೋಲಿಸಿ ವೀರಶೈವ ಧರ್ಮವು ಪೂರ್ವ ಬಳ್ಳಾರಿ ಜಿಲ್ಲಾ ಮತ್ತು ಕಡಪಾ ಕರ್ನೂಲ ಪ್ರಾಂತಗಳಲ್ಲಿ ನೆಲೆಗೊಳ್ಳುವಂತೆ ಮಾಡಿದಳು.

ಮುಂದೆ ಸ್ವಲ್ಪ ದಿವಸಗಳಲ್ಲಿ ಪುಲಿಗೆರೆಯಲ್ಲಿ ಆದಯ್ಯನು ಮತ್ತು ಅಬ್ಬಲೂರಿನಲ್ಲಿ ಏಕಾಂತದ ರಾಮಯ್ಯನು ಪರವಾದಿಗಳನ್ನು ಸೋಲಿಸಿ ವೀರಶೈವ ಧರ್ಮವನ್ನು ಧಾರವಾಡ ಜಿಲ್ಲೆಯ ದಕ್ಷಿಣಭಾಗ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿಷ್ಠಾಪಿಸಿದರು.

ಇದೇ ಕಾಲಕ್ಕೆ ಮಾರುಡಿಗೆಯ ನಾಚಯ್ಯ, ಕೋವೂರ ಬ್ರಹ್ಮಯ್ಯ, ಬಿದರಕೋಟೆ (ಬೀದರ) ಯ ವೀರಸಂಗಯ್ಯ ಇವರು ವೈರಿಗಳನ್ನು ಸೋಲಿಸಿ ವಿಜಾಪೂರ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ವೀರಶೈವ ಸಮಾಜದ ಮೇಲೆ ನಡೆಯುತ್ತಿದ್ದ ಆಘಾತಗಳನ್ನು ತಪ್ಪಿಸಿದರು.

ಪಂಡಿತಾರಾಧ್ಯನೂ ಅವನ ತರುವಾಯ ಅವನ ಶಿಷ್ಯರೂ ಗುಂಟೂರು ಗೋದಾವರಿ ಜಿಲ್ಲೆಗಳಲ್ಲಿ ಮತ್ತು ವರಂಗಲ್ಲ ಪ್ರಾಂತದಲ್ಲಿ ವೀರಶೈವರ ಮೇಲೆ ನಡೆಯುತ್ತಿದ್ದ ಹಿಂಸೆಗಳನ್ನು ತಪ್ಪಿಸಿದರು. ಆಗ ಅವರು ಅನೇಕ ಕಡೆಗೆ ವೈರಿಗಳೊಡನೆ ಕಾದಾಡುವ ಪ್ರಸಂಗಗಳು ಬಂದವು.

ಹೀಗೆ ರೇವಣಸಿದ್ಧೇಶ್ವರ, ದೇವರದಾಸಿಮಯ್ಯ, ಅಲ್ಲಮ ಪ್ರಭು, ಶಂಕರ ದಾಸಿಮಯ್ಯ, ಮಹಾದೇವಿಯಕ್ಕ, ಬಸವೇಶ್ವರ, ಸಿದ್ಧರಾಮೇಶ್ವರ ಈ ಮಹಾ ವಿಭೂತಿಗಳ ಮೂಲಕ ಪ್ರಸಾರ ಹೊಂದಿದ ಶಿವಶರಣರ ಸಂಸ್ಕೃತಿಗೆ ಮುಂದೆ ವಿಪತ್ಕಾಲವು ಪ್ರಾಪ್ತವಾಗಲು. ಅಂಥ ಸಮಯದಲ್ಲಿ ಮೇಲೆ ಹೇಳಿದ ಶಿವಶರಣರೂ, ಜಂಗಮವರ್ಗದವರೂ, ಭಕ್ತರೂ ಎಲ್ಲರೂ ಸುಸಂಘಟಿತರಾಗಿ ತಮ್ಮ ಧರ್ಮವನ್ನು ಕಾಪಾಡಿಕೊಂಡಿದ್ದಾರೆ

ಆದರೆ ಕೆಲಕಾಲದ ಮೇಲೆ ವೀರಶೈವರಿಗೆ ಹೀಗೆ ಯುದ್ಧಮಾಡುವ ಪ್ರಸಂಗಗಳು ಉಳಿಯಲಿಲ್ಲ. ಯಾಕಂದರೆ ವೀರಶೈವ ಜನಾಂಗವು ಅಷ್ಟರಲ್ಲಿ ಎಲ್ಲ ಕಡೆಗೂ ಬಲವಾಗಿ ಬೆಳೆಯಿತು. ಅದರ ಸಂಖ್ಯೆಯು ದೇಶದಲ್ಲಿ ಹೆಚ್ಚಿದ ಹಾಗೆ, ವೀರಶೈವರನ್ನು ಯಾರೂ ಕೆಣಕಲಾರದವರಾದರು.

## ಮಠಾಧಿಕಾರಿಗಳ ಹೆಸರುಗಳಲ್ಲಿ ಬದಲಾವಣೆಗಳು

ಮಠಗಳಲ್ಲಿದ್ದ ಅಧಿಕಾರಿಗಳ ಹೆಸರುಗಳಲ್ಲಿ ಕೆಲವು ಬದಲಾವಣೆಗಳಾದದ್ದನ್ನು ನಾವು ಈಗ ಕಾಣುತ್ತೇವೆ. 'ಮಠಪತ್ತಿ' ಎಂಬ ಶಬ್ದವು ಹೋಗಿ 'ಮಠಪತಿ' ಎಂದಾಯಿತು. ಅವನು ಅಂತ್ಯ ಕ್ರಿಯೆಗಳನ್ನು ಈಗ ಮಾಡುವವನಾಗಿದ್ದಾನೆ. ಮಠಗಳಿಗೆ ಸೈನ್ಯಾಧಿಕಾರಿಯು ಅನವಶ್ಯಕವಾಗತೊಡಗಲು ಗಣಾಚಾರಿಯು ಹೆಸರಿಗೆ ಮಾತ್ರ ಉಳಿದನು. ಅವನು ಊರ ದೈವದವರನ್ನು ಸಭೆಗಳಿಗೆ ಕರೆಯುವ ಕಾರ್ಯವನ್ನು ಈಗ ಮಾಡುತ್ತಾನೆ. ಪಟೇಲನಾದ ಸ್ಥಾವರನಿಗೆ ಕೆಲವು ಕಡೆ ಬಾಬುಗಳು ದೊರೆಯುತ್ತವೆ, ಕೆಲವು ಕಡೆಗೆ ದೊರೆಯುವದಿಲ್ಲ. ಹೀಗೆ ಮಠಗಳ ವ್ಯವಸ್ಥೆಯಲ್ಲಿ ಕಾಲಕ್ಕನುಗುಣವಾಗಿ ಕೆಲವು ಬದಲಾವಣೆಗಳಾಗಿವೆ.

ಮಠಾಧಿಕಾರಿಗಳು ಬಿಕ್ಕಟ್ಟಿನ ಈ ಸಮಯದಲ್ಲಿ ಮಹತ್ವದ ಕಾರ್ಯಗಳನ್ನು ಮಾಡಿದ್ದರಿಂದ ಅನೇಕ ಕಡೆಗೆ ಅವರು ಬಹು ಬಲಶಾಲಿಗಳಾದರು. ಅಲ್ಲದೆ ಅವರಿಗೆ ಅಸಂಖ್ಯ ಶಿಷ್ಯ ಮನೆತನಗಳು ಉಂಟಾದವು. ಅವರ ಕೆಳಗೆ ಅನೇಕ ಮಹತ್ವದ ಮಠಗಳು ಸಹ ಸ್ಥಾಪಿಸಲ್ಪಟ್ಟವು. ಇಂಥ ಮಠಗಳಿಗೆ ಕಟ್ಟಿಮಠ, ಸಾವಿರದೇವರಮಠ, ಪಂಚಗೃಹಮಠ, ಎಂಬ ಹೆಸರುಗಳು ಉಂಟಾದವು.

## ಜಂಗಮರ ಜೀವನ ಕ್ರಮದಲ್ಲಿ ಬದಲಾವಣೆಗಳು

ಬಸವೇಶ್ವರನ ತರುವಾಯ ಜಂಗಮರ ಜೀವನ ಕ್ರಮದಲ್ಲಿ ಮಹತ್ವದ ಬದಲಾವಣೆಗಳಾದವು. ಜಂಗಮರು ಮೊದಲು ಕಾಶ್ಮೀರ ದೇಶದಿಂದ ದಕ್ಷಿಣದಲ್ಲಿ ರಾಮೇಶ್ವರದ ವರೆಗೂ ಯಾವಾಗಲೂ ಸಂಚಾರದಲ್ಲಿರುತ್ತಿದ್ದರು. ಅವರು ಶಿವಶಾಸ್ತ್ರಗಳನ್ನು ಬೋಧಿಸುತ್ತ ಪ್ರವಾಸಮಾಡುವರು.

ಆದರೆ ಬಸವೇಶ್ವರನ ತರುವಾಯ ಕರ್ನಾಟಕ ದೇಶದಲ್ಲೆಲ್ಲ ಅಸಂಖ್ಯ ಮಠಗಳುಂಟಾಗಲು ಆಗ ಜಂಗಮರು ಈ ಮಠಗಳಲ್ಲಿ ಅಧಿಕಾರಿಗಳಾಗಹತ್ತಿದರು. ಈ ಮಠಗಳಿಗೆ ಭಕ್ತರು ಬಹುತರವಾಗಿ ಭೂಸ್ವಾಸ್ಥ್ಯದ ವ್ಯವಸ್ಥೆ ಮಾಡಿದ್ದರಿಂದ ಜಂಗಮರು ಭಿಕ್ಷೆಯನ್ನು ಬೇಡುತ್ತ ದೇಶದಲ್ಲಿ ಸಂಚಾರ ಮಾಡುವದು ಅನವಶ್ಯಕವಾಯಿತು. ಶಿವಶರಣರು ತಮ್ಮ ವಚನಗಳಲ್ಲಿ ಜಂಗಮರು ಭಿಕ್ಷೆಯನ್ನು ಬೇಡದೆ ಕೆಲವೊಂದು ಕಾಯಕವನ್ನು ಮಾಡಿ ಜೀವಿಸಬೇಕೆಂದು ಪ್ರತಿಪಾದಿಸುತ್ತ ಬಂದಿದ್ದಾರೆ. ಆದ್ದರಿಂದ ಮಠಾಧಿಪತಿಗಳು ಕೆಲವೊಂದು ಉದ್ಯೋಗ ಮಾಡಿ ತಮ್ಮ ಜೀವನ ನಡಿಸಿದರೆ ಅದು ಹೊಸ ವೃತ್ತಿಯೆಂದು ಈ ಕಾಲಕ್ಕೆ ಯಾರೂ ಭಾವಿಸಲಿಲ್ಲ. ಇದರಿಂದ ಜಂಗಮರು ಸ್ವತಂತ್ರ ವೃತ್ತಿಯುಳ್ಳವರಾಗಲು ಶಕ್ಯವಾಯಿತು. ಅವರು ತಮಗೆ ಬೇಕಾದಕಡೆಗೆ ಹೋಗಿ ತಮ್ಮ ಧರ್ಮವೃದ್ಧಿಯ ಕಾರ್ಯಗಳನ್ನು ಮಾಡಲಿಕ್ಕೆ ಸಂಧಿಯು ದೊರಕಿತು. ಇದರ ಉಪಯೋಗವನ್ನು ಅವರು ಪೂರ್ಣವಾಗಿ ಮಾಡಿಕೊಂಡರು. ಅವರು ಬೇಕಾದಲ್ಲಿಗೆ ಹೋಗುವರು, ವಚನಗಳನ್ನು ರಚಿಸುವರು, ಅವುಗಳನ್ನು ಸಾರುವರು, ಮಠಗಳಲ್ಲಿದ್ದು ಜನರಿಗೆ ಶಿಕ್ಷಣವನ್ನು ಕೊಡುವರು. ಅವರು ವಿದ್ವಾಂಸರಿದ್ದರೆ ಬಹುಜನರು ಅವರಲ್ಲಿಗೆ ಬಂದು ಅವರಿಂದ ಶಿಕ್ಷಣಕೊಂಡು ವರು. ಹೀಗೆ ಶಿಕ್ಷಣ ಕೊಡುವ ಮಠಾಧಿಪತಿಗಳಿಗೆ ಭಕ್ತರು ವಿಪುಲವಾಗಿ ಅನ್ನದಾನ ಮಾಡುವರು. ಇಂಥವುಗಳು ದಾಸೋಹ ಮಠಗಳೆಂದೆನಿಸಿಕೊಂಡವು. ಮಠದ ಶಿಷ್ಯರು ವಿದ್ಯಾರ್ಥಿಗಳ ಪೋಷಣೆಗಾಗಿ 'ಕೋರಾನ್ನ' ಭಿಕ್ಷೆಯನ್ನು ದೊರಕಿಸಿಕೊಂಡು ಬರುವರು. ಬ್ರಾಹ್ಮಣನಾದ ಬಿಬ್ಬಿ ಬಾಚಯ್ಯನು ( ಶಿ. ಚ. ಭಾಗ ೨ ಪು. ೨೬೭ ) ಬಂದು ಬಂಡಿಯನ್ನು ಮಾಡಿಕೊಂಡು ಸುತ್ತಲಿನ ಗ್ರಾಮಗಳಿಂದ ಆಹಾರ ಪದಾರ್ಥಗಳನ್ನು ತಂದು ಈ ಬಗೆಯ ದಾಸೋಹ ಕಾಯಕ ಮಾಡುವನು. ಹೀಗೆ ಬಸವೇಶ್ವರನ ತರುವಾಯ ಜಂಗಮರು ವಿದ್ಯಾ ಪ್ರಸಾರದ ಮಹತ್ವದ ಕಾರ್ಯವನ್ನು ನಾಡಿನಲ್ಲಿ ಮಾಡುತ್ತ ಬಂದರು. ಇವರಿಂದ ವಚನಶಾಸ್ತ್ರವು ಮತ್ತಿಷ್ಟು ಬೆಳವಣಿಗೆಯನ್ನು ಹೊಂದಿತು. ಅಸಂಖ್ಯ ವಚನಕಾರರು ಉಂಟಾದರು. ವೀರಶೈವ ವಾಙ್ಮಯದ ಮಹತ್ವದ ಭಾಗಗಳು, ಅಂದರೆ ಸಾಂಗತ್ಯಗಳು, ಶತಕಗಳು ಮುಂತಾದವುಗಳು ಬಸವೇಶ್ವರನ ತರುವಾಯ ಈ ಕಾಲದಯೇ ರಚಿಸಲ್ಪಟ್ಟಿರುತ್ತವೆ. ಆಗ ಮಠಾಧಿಕಾರಿಗಳು ಮಠಗಳಲ್ಲಿದ್ದುಕೊಂಡು ವಚನ

ಗಳನ್ನು ರಚಿಸುವದೂ ಇದ್ದವುಗಳ ನಕಲುಮಾಡುವದೂ ಅಥವಾ ಮಾರಿಸುವದೂ ಈ ತೆರದ ಕಾರ್ಯಗಳನ್ನು ಮಾಡುವರು. ಇದರಿಂದ ವೀರಶೈವ ಮಠಗಳಲ್ಲಿ ಅಸಂಖ್ಯಾತ ಹಸ್ತಲಿಖಿತ ಗ್ರಂಥಗಳು ಸಂಗ್ರಹವಾಗಹತ್ತಿದವು. ಅವು ಈಗಲೂ ಅಲ್ಲಿ ದೊರಕುತ್ತವೆ.

ಅಲ್ಲದೆ ಮಠಾಧಿಪತಿಗಳು ಗ್ರಾಮದಲ್ಲಿ ಶುಭಾಶುಭ ಕಾರ್ಯಗಳನ್ನು ಭಕ್ತರಿಗಾಗಿ ನೆರವೇರಿಸುವರು. ಕರ್ನಾಟಕದಲ್ಲಿ ಈ ಕಾಲದಲ್ಲಿ ಪರನಾಡು ಮತ್ತು ಪರದೇಶಗಳ ಕೂಡ ದೊಡ್ಡ ವ್ಯಾಪಾರವು ನಡೆಯುತ್ತಿದ್ದಿತು. ಇದರಲ್ಲಿ ಮುಖ್ಯ ಭಾಗವಹಿಸಿದವರು ವೀರಶೈವರೇ ಆಗಿದ್ದರು. ಇವರು ತಮ್ಮ ಪ್ರವಾಸಕಾಲದಲ್ಲಿ ಮಠಗಳ ಉಪಯೋಗವನ್ನು ಪೂರ್ಣವಾಗಿ ಮಾಡಿಕೊಳ್ಳಹತ್ತಿದರು. ಹೀಗೆ ಬಸವೇಶ್ವರನ ತರುವಾಯ ಮಠಗಳ ಸಂಖ್ಯೆಯೂ ಅವುಗಳ ಉಪಯುಕ್ತತೆಯೂ ದೇಶದಲ್ಲಿ ಬಹಳ ಬೆಳೆಯಲಾಗಿ ಜಂಗಮರ ಜೀವನ ಕ್ರಮದಲ್ಲಿ ಮೇಲೆ ಹೇಳಿದಂತೆ ಬಹಳ ಬದಲಾವಣೆಗಳಾದವು.

### ಜಂಗಮರು ವಿವಾಹಿತರಿರಬಹುದು.

ಮಠಾಧಿಕಾರಿಗಳು ಈ ಕಾಲಕ್ಕೆ ಅವಿವಾಹಿತರಾಗಿ ಉಳಿಯಬೇಕೆಂಬ ನಿರ್ಬಂಧವಿರಲಿಲ್ಲ. ಅವರು ವಿವಾಹಿತರಾಗುವದು ಅಥವಾ ಬಿಡುವದು ಅವರ ಇಚ್ಛೆಯಮೇಲೆ ಅವಲಂಬಿಸಿತ್ತು. ಆದ್ದರಿಂದ ಮಠಾಧಿಕಾರಿಗಳೆಂದು ಹೆಸರುವಾಸಿಗಳಾದ ಎಡೆಮಠದ ನಾಗಿದೇವ, ನಿರ್ಲಜ್ಜ ಶಾಂತಯ್ಯ, ಸಕಳೇಶ ಮಾದರಸ, ರೇವಣಸಿದ್ಧೇಶ್ವರ, ಪಂಡಿತಾರಾಧ್ಯ, ವೇಮನಾರಾಧ್ಯ, ಇವರೆಲ್ಲರೂ ವಿವಾಹಿತರಾಗಿದ್ದರು. ಆದರೂ ಇದರಿಂದ ಅವರ ಧಾರ್ಮಿಕ ಉಚ್ಚಸ್ಥಾನಕ್ಕೆ ಎಷ್ಟು ಮಾತ್ರವೂ ಕುಂದುಂಟಾಗಲಿಲ್ಲ. ಆದರೆ ಜೈನ ಬೌದ್ಧರಲ್ಲಿ ಭಿಕ್ಷುಗಳು ಅವಿವಾಹಿತರಾಗಿ ಉಳಿಯಬೇಕೆಂಬ ನಿರ್ಬಂಧವಿದ್ದದರಿಂದ ಆ ಸಮಾಜಗಳಲ್ಲಿ ಕೆಲವು ಕಾಲದ ಮೇಲೆ ಅನೈತಿಕಾಚಾರವು ಬಹಳ ಬೆಳೆಯಿತು ಮತ್ತು ಆ ಸಮಾಜಗಳು ಬಹು ಬೇಗನೆ ಅವನತ ಸ್ಥಿತಿಯನ್ನು ಹೊಂದಿದವು. ಆದರೆ ವೀರಶೈವ ಸಮಾಜಕ್ಕೆ ಈ ಸ್ಥಿತಿಯು ಪ್ರಾಪ್ತವಾಗಲಿಲ್ಲ.

## ಭಕ್ತ ಜಂಗಮರಲ್ಲಿ ದುರಾಚರಣೆಗಳು.

ನಾವು ವಚನ ಶಾಸ್ತ್ರ ಗ್ರಂಥಗಳ ಪ್ರಕಟನೆಯಲ್ಲಿ ಮತ್ತು ಶಿವ ಶರಣರ ಚರಿತ್ರೆಗಳನ್ನು ಸಂಗ್ರಹಿಸುವಲ್ಲಿ ಅವುಗಳ ನಿರೂಪಣೆಯಲ್ಲಿ ಶರಣರ ಶುದ್ಧ ನಡೆಗಳಿಗೆ ಮತ್ತು ಉಚ್ಚ ತತ್ವಗಳಿಗೆ ಪ್ರಾಧಾನ್ಯವನ್ನು ಕೊಡುತ್ತ ಬಂದಿದ್ದೇವೆ. ನಾವು ಅನಾಚಾರಗಳಿಗೆ ಯಾವತರದ ಸ್ಥಾನವನ್ನು ಕೊಟ್ಟಿರುವದಿಲ್ಲ. ಆದರೆ ಸಮಾಜವು ಎಂಥ ಉಚ್ಚ ಸ್ಥಿತಿಯನ್ನು ಹೊಂದಿದ್ದರೂ ಅದರಲ್ಲಿ ದೋಷಗಳು ತಲೆದೋರಹತ್ತುತ್ತವೆ. ಯಾಕಂದರೆ ಕೆಡುಕರು ಮತ್ತು ದುರ್ಜನರು ಎಲ್ಲಕಡೆಗೆ ಯಾವಾಗಲೂ ಇರುತ್ತಾರೆ. ಇಂಥ ಜನರು ಕೆಲಕಾಲದ ಮೇಲೆ ವೀರಶೈವ ಸಮಾಜದಲ್ಲಿದ್ದುದು ಶಿವಶರಣರ ಚರಿತ್ರೆಗಳಲ್ಲಿಯೂ ವಚನ ಗ್ರಂಥಗಳಲ್ಲಿಯೂ ನೋಡುತ್ತೇವೆ. ಇಂಥವರ ದುರ್ನಡೆಗಳಿಗೆ ನಮ್ಮ ಗ್ರಂಥಗಳ ಲ್ಲಿಯಾವಾಗಲೂ ಸ್ಥಾನ ಕೊಟ್ಟಿರುವದಿಲ್ಲ.

## ಜಾರತನ.

ವಚನಕಾರರು ಜಾರತನವನ್ನು ಯಾವಾಗಲೂ ನಿಷೇಧಿಸುತ್ತ ಬಂದಿದ್ದಾರೆ ಲಿಂಗ ಭಕ್ತಿಯನ್ನು ಅವರು ಸ್ತ್ರೀ ಪುರುಷರ ಪ್ರೀತಿಗೆ ಹೋಲಿಸುತ್ತಾರೆ. ಇದರಲ್ಲಿ ಅವರು ಜಾರಿಣೀ ಸ್ತ್ರೀಯರ ಉದಾಹರಣೆಯನ್ನು ಎಂದೂ ತೆಗೆದುಕೊಂಡಿಲ್ಲ. ಲಿಂಗಧಾರಣವು ಲಗ್ನವಿಧಿ ಎಂದು ತಿಳಿದು ಅದರ ವರ್ಣನೆಯನ್ನು ಅವರು ಮಾಡುವದುಂಟು. ಆದರೆ ಶಿವಶರಣರ ಚರಿತ್ರೆಗಳಲ್ಲಿ ಸೂಳೆಯರು ವೀರಶೈವ ಧರ್ಮವನ್ನು ಸ್ವೀಕರಿಸಿ ಅವರು ತಮ್ಮ ಸೂಳೆತನವನ್ನು ಜಂಗಮರು ಅಥವಾ ಭಕ್ತರೊಡನೆ ನಡಿಸುತ್ತಿದ್ದದರ ಉಲ್ಲೇಖಗಳು ಆಗಿಂದಾಗ್ಗೆ ದೊರೆಯುತ್ತವೆ. ಅನೇಕ ಪುರಾಣಗಳಲ್ಲಿ ವಿಟಜಂಗಮರ ಅಥವಾ ಮಿಂಡ ಜಂಗಮರ ಉಲ್ಲೇಖಗಳು ಇರುತ್ತವೆ. ಆದರೆ ಈ ರೀತಿಗಳು ಶಿವಶರಣರ ಆಚರಣೆಗೆ ವಿರೋಧವಾದವುಗಳು. ಆದರೂ ಕೂಡ ಸೂಳೆಯರು ಶಿವಶರಣರ ಮಾಲಿಕೆಯಲ್ಲಿ ಬಂದಿರುವದನ್ನು ನೋಡುತ್ತೇವೆ! ಈ ಸೂಳೆಯರ ಹೆಸರುಗಳು ಯಾವವೆಂದರೆ:—

ಸೂಳೆ ನಿಂಬಿಯಕ್ಕ, ಸೂಳೆ ಸಂಕಲದೇವಿ, ಸೂಳೆ ಚಾಮಲದೇವಿ, ಸೂಳೆ ಬೊಂತಾದೇವಿ, ಸೂಳೆಸಚಿತಕಮಳವ್ವೆ, ಸೂಳೆ ಸೊಡ್ಡಳದೇವಿ,

ಸೂಳೆ ಬಾಚಲದೇವಿ, ಸೂಳೆ ಚೋಳಾದೇವಿ, ಸೂಳೆ ಸುಗ್ಗವ್ವೆ, ಸೂಳೆ ಪದ್ಮಲದೇವಿ, ಸೂಳೆ ಚೋಳಿಯಕ್ಕ, ಸೂಳೆ ವೀರಸಂಗವ್ವೆ, ಈ ಮೊದಲಾದವರು ಇದ್ದಾರೆ.

ಇಂಥ ಸೂಳೆಯರ ಸಹವಾಸ ಮಾಡಿದಂಥ ಅನೇಕ ಶಿವಶರಣರ ಚರಿತ್ರೆಗಳೂ ಇವೆ. ಇವರಲ್ಲಿ ಜೋಧರ ಮಾಯಣ್ಣ, ಮಿಂಡ ಸಂಗಯ್ಯ ಇವರು ಬರುತ್ತಾರೆ. ಹೀಗೆ ಜಾರತನವನ್ನು ಪ್ರೋತ್ಸಾಹಿಸಿದವರಲ್ಲಿ ಸಿಂಧು ಬಲ್ಲಾಳನು ಸಹ ಬರುತ್ತಾನೆ. ಇಂಥ ಚರಿತ್ರೆಗಳು ನಿಜವಾದವುಗಳೋ ಅಥವಾ ಕೃತಕತನದಿಂದ ಹಿಂದೆ ಜೋಡಿಸಿದವುಗಳೋ ಎಂಬುದನು ನಿರ್ಧರಿಸುವ ಗೊಡವೆಗೆ ನಾವು ಹೋಗದೆ ಇವು ತಿರಸ್ಕರಣೀಯವಾದವುಗಳು ಮತ್ತು ಉಲ್ಲೇಖಕ್ಕೆ ಅಯೋಗ್ಯವಾದವುಗಳೆಂದು ತಿಳಿದು ನಾವು ಇವುಗಳಿಗೆ ನಮ್ಮ ಗ್ರಂಥಗಳಲ್ಲಿ ಸ್ಥಾನವನ್ನು ಕೊಟ್ಟಿರುವದಿಲ್ಲ.

## ಚೌರ್ಯ

ಕೆಲವು ಶಿವಶರಣರು ಚೌರ್ಯವನ್ನು ಮಾಡಿದರೂ ಕೂಡ ಅವರಿಗೆ ಶಿವಶರಣರಲ್ಲಿ ಸ್ಥಾನವು ಉಂಟಾಗಿರುತ್ತದೆ. ಜನರು ಭಕ್ತರಿರಲಿ ಅಥವಾ ಭವಿಗಳಿರಲಿ, ಯಾರಿದ್ದರೂ ಅವರ ಮನೆಯಲ್ಲಿ ಕನ್ನವನ್ನು ಕೊರೆದು ಅವರ ದ್ರವ್ಯವನ್ನು ಅಪಹರಣ ಮಾಡುವದು ಯಾವಾಗಲೂ ಚೌರ್ಯವೆನಿಸಿಕೊಳ್ಳುತ್ತದೆ. ಈ ಕಾರ್ಯವು ಗರ್ಹ್ಯವಾದದ್ದು. ಆದರೆ ಚೌರ್ಯವನ್ನು ಮಾಡಿದ ಪಡಿಹಾರಿ ಬಸವಯ್ಯ, ಗುಂಡ ಬ್ರಹ್ಮಯ್ಯ, ಕನ್ನದ ಬ್ರಹ್ಮಯ್ಯ, ಪೆರ್ಮಾಡಿರಾಯ ಇವರು ಶಿವಶರಣರ ಮಾಲಿಕೆಯಲ್ಲಿ ಬಂದಿದ್ದಾರೆ. ಇದು ಒಂದು ಕಾಲಕ್ಕೆ ಉಂಟಾದ ಸಮಾಜದ ಅವನತಿಯನ್ನು ತೋರಿಸುತ್ತದೆ. ಆದರೆ ಶಿವಶರಣರು ತಮ್ಮ ಉಕ್ತಿಗಳಲ್ಲಿ ಇಂಥ ವರ್ತನೆಯನ್ನು ಸಮರ್ಥನೆ ಮಾಡಿದ್ದು ಎಂದೂ ಕಂಡುಬರುವದಿಲ್ಲ. ಇಂಥ ಉಕ್ತಿಗಳು ಅಥವಾ ಕಥೆಗಳು ಎಲ್ಲಾದರೂ ಕಂಡುಬಂದರೆ ಅವು ಹಿಂದಿನಿಂದ ಸೇರಿಸಲ್ಪಟ್ಟವೆಂದು ನಾವು ತಿಳಿಯಬೇಕಾಗುತ್ತದೆ.

## ಭವಿಗಳ ಸಂಪರ್ಕ

ಬಸವೇಶ್ವರನ ಕಾಲದಲ್ಲಿ ಭವಿಯ ಸೇವೆಯನ್ನು ಕೆಲವೊಂದು ಧಾರ್ಮಿಕ ಸೇವಾಬುದ್ಧಿಯಿಂದ ಮಾಡಿದ್ದಾದರೆ ಅದು ದೋಷವೆಂದು

ಎಣಿಸಲ್ಪಡುತ್ತಿಲ್ಲ. ಆದರೂ ಶಿವಶರಣರ ಚರಿತ್ರೆಗಳಲ್ಲಿ ಹಲವರು ಭವಿಯ ಸಂಪರ್ಕ ಮಾಡಿದಕೂಡಲೆ ಪ್ರಾಣ ತ್ಯಾಗಮಾಡಿದ್ದು ಕಂಡುಬಂದಿದೆ. ಆದರೂ ಇವರು ಶರಣರ ಮಾಲಿಕೆಯಲ್ಲಿ ಬಂದಿದ್ದಾರೆ. ವೀರ ಶಂಕರಯ್ಯ, ಪ್ರಸಾದಿ ದಾಸಯ್ಯ, ನಿಜಲಿಂಗದೇವ ಇವರೇ ಮೊದಲಾದವರು ಇಂಥವರಲ್ಲಿ ಬರುತ್ತಾರೆ. ಇದು ಆಚಾರದ ಅತಿರೇಕವೆಂತಲೇ ಹೇಳಬೇಕಾಗುತ್ತದೆ.

## ವ್ರತಭಂಗ

ಕೆಲವು ಶರಣರು ಕೆಲವೊಂದು ವ್ರತವನ್ನು ಇಟ್ಟುಕೊಂಡು ಅದಕ್ಕೆ ವ್ಯತ್ಯಯ ಬಂದಲ್ಲಿ ತಮ್ಮ ಪ್ರಾಣವನ್ನು ಕೊಟ್ಟಿದ್ದುಂಟು. ಇದು ಸಹ ಆಚಾರದ ಅತಿರೇಕವು. ಲಿಂಗಕ್ಕೆ ದೂಪವನ್ನು ಸಮರ್ಪಿಸುವದು, ಚಂದನವನ್ನು ಅರ್ಪಿಸುವದು, ಒರತೆಯ ನೀರನ್ನು ಲಿಂಗಕ್ಕೆ ಉಪಯೋಗಿಸುವದು, ಗಂಧಲೇಪಿಸುವದು ಹೀಗೆ ವ್ರತಗಳನ್ನು ಶರಣರು ಇಟ್ಟುಕೊಂಡು ಅದಕ್ಕೆ ಭಂಗವಾದ ಕೂಡಲೆ ಅವರು ಪ್ರಾಣಾರ್ಪಣ ಮಾಡಿದ ಉದಾಹರಣೆಗಳಿವೆ. ಇವರು ಒರತೆಯ ಬೊಪ್ಪದೇವ, ಸೋಮವರ್ಮ, ಶಂಕಿದೇವ, ಅಣುಮೂರ್ತಿ, ಅರವಿಂದಯ್ಯ ಹೀಗೆ ಅನೇಕರು ಇದ್ದಾರೆ. ಇವರೆಲ್ಲರೂ ಹೀಗೆ ತಮ್ಮ ಪ್ರಾಣವನ್ನು ನೀಗಿದ್ದರಿಂದ ಇವರು ಶರಣ ಮಾಲಿಕೆಯಲ್ಲಿ ಸೇರಿಸಲ್ಪಟ್ಟಿದ್ದಾರೆ. ಇದಾದರೂ ಆಚಾರದ ಅತಿರೇಕವಾಗಿರುತ್ತದೆ. ಶಿವಶರಣರ ಚರಿತ್ರೆಗಳಲ್ಲಿ ಇಂಥ ಉದಾಹರಣೆಗಳು ಅನೇಕಾನೇಕ ಬಂದಿರುತ್ತವೆ. ಆದರೆ ವಚನಕಾರರು ತಮ್ಮ ವಚನಗಳಲ್ಲಿ ಶರಣರು ಕಾಯಕ ಮಾಡುವಲ್ಲಿ ಲಿಂಗದರ್ಶನ, ಗುರುದರ್ಶನ, ಮೊದಲಾದವೆಲ್ಲವನ್ನೂ ಬಿಡಬಹುದೆಂದು ಹೇಳಿದ್ದಾರೆ. ಇದೇ ನಿಜವಾದ ಶಿವಶರಣರ ನಡೆ ಎಂದು ನಮಗೆ ತೋರುತ್ತದೆ. ಇಂಥ ಕಥೆಗಳಿಗೆ ನಾವು ಶಿವಶರಣರ ಚರಿತ್ರೆ ಗ್ರಂಥಗಳಲ್ಲಿ ಸ್ಥಾನ ಕೊಟ್ಟಿಲ್ಲ. ಇಂಥ ನಡೆಗಳು ಆಚಾರದ ಅತಿರೇಕಗಳಾಗಿರುತ್ತವೆ.

## ಲಿಂಗ ಹೋದರೆ ಆತ್ಮಘಾತ ಮಾಡಿಕೊಳ್ಳುವದು.

ಅನೇಕರು ಲಿಂಗವು ಕಳೆದು ಹೋದರೆ ಆತ್ಮಘಾತಮಾಡಿಕೊಂಡಿದ್ದುಂಟು. ಇದು ತಪ್ಪುಮಾರ್ಗವೆಂದು ನಾವು ವಚನಶಾಸ್ತ್ರಸಾರ ಗ್ರಂಥದಲ್ಲಿ ವಚನಕಾರರ ಅನೇಕ ಉಕ್ತಿಗಳನ್ನು ಉದಹರಿಸಿ ಹೇಳಿದ್ದೇವೆ.

ಪ್ರಮಾದ ವಶಾತ್ ಹೀಗೆ ವ್ರತಭಂಗವು ಆದಲ್ಲಿ ಪ್ರಾಣಕಳೆದುಕೊಳ್ಳುವದು ಆತ್ಮಘಾತವೆನಿಸಿಕೊಳ್ಳುತ್ತದೆಂದು ಅವರು ಹೇಳಿದ್ದಾರೆ. ಶಿವಶರಣರು ಹೀಗೆ ಮಾಡದೆ ಉಂಟಾದ ಚ್ಯುತಿಯನ್ನು ಸರಿಪಡಿಸಿಕೊಂಡು ತಮ್ಮ ಮೊದಲಿನ ವ್ರತವನ್ನು ಪಾಲಿಸುತ್ತ ಹೋಗುವದೇ ಯೋಗ್ಯವೆಂದು ಅವರು ಹೇಳುತ್ತಾರೆ.

## ಸ್ಥಾವರ ದೇವತೆಗಳ ಪೂಜೆ.

ಶಿವಶರಣರ ತತ್ವಗಳ ಪ್ರಕಾರ ಸ್ಥಾವರ ಲಿಂಗಗಳನ್ನೂ ಇತರ ದೇವತೆಗಳನ್ನೂ ವೀರಶೈವರು ಎಂದೂ ಪೂಜಿಸ ಕೂಡದು. ಆದರೆ ಉಳಿವಿಯ ಸಂಗ್ರಾಮದ ತರುವಾಯ ಜಂಗಮರು ಜನತೆಯಲ್ಲಿ ದೊಡ್ಡ ಪ್ರಚಾರಕಾರ್ಯಮಾಡಿದ್ದರಿಂದ ಬಹು ಜನರು ವೀರಶೈವರಾದರು. ಅವರಲ್ಲಿ ಮೊದಲಿನ ಪಾಶುಪತರೂ, ಕಾಳಾಮುಖರೂ, ದೇವಾಲಯಗಳ ಅರ್ಚಕರೂ ಕೂಡ ಇದ್ದರು. ಇವರು ತಮ್ಮ ಮಹತ್ವದ ದೇವಾಲಯಗಳಲ್ಲಿ ಅರ್ಚನೆ, ಪೂಜೆ ಮೊದಲಾದವುಗಳನ್ನು ಕೂಡಲೆ ಬಿಟ್ಟು ಕೊಡುವದು ಅವರಿಗೆ ಆಗಲಿಲ್ಲ. ಅವರಂತೆಯೇ ಸಾಮಾನ್ಯ ಜನರೂ ಕೂಡ ವರ್ತಿಸಹತ್ತಿದರು. ಅವರೂ ಸ್ಥಾವರ ದೇವರನ್ನು ಬಿಡಲಿಲ್ಲ. ಹೀಗೆ ಸ್ಥಾವರಲಿಂಗಗಳ ಮತ್ತು ಇತರ ದೇವತೆಗಳ ಪೂಜೆಯು ಪುರಾತನ ಕಾಲದಿಂದ ಈ ವರೆಗೂ ದೇಶದಲ್ಲಿ ನಡೆದಿರುತ್ತದೆ. ಆದರೆ ಹೀಗೆ ವರ್ತಿಸುವದು ಷಟ್‌ಸ್ಥಲ ಮಾರ್ಗವಲ್ಲ. ವೀರಶೈವರು ಇಷ್ಟಲಿಂಗ ಒಂದನ್ನೇ ನಂಬಿಕೊಂಡು ಅದರ ಮೂಲಕ ತಮ್ಮಲ್ಲಿ ತ್ರಿಲಿಂಗ, ಷಡ್‌ಲಿಂಗಗಳನು ಜಾಗ್ರತಪಡಿಸಿಕೊಳ್ಳತಕ್ಕದ್ದು. ಇದೇ ಅವರಿಗೆ ಯುಕ್ತಮಾರ್ಗವಾಗಿರುತ್ತದೆ. ಆದರೆ ಸ್ಥಾವರ ಲಿಂಗಗಳು ಶಿವನಿಗೆ ಸಂಬಂಧಿಸಿದವುಗಳೆಂದು ಭಾವಿಸಿ ಬಹುಜನರು ಅವುಗಳಿಗೆ ಮನ್ನಣೆಯನ್ನು ಮಾತ್ರ ತೋರುತ್ತ ಬಂದಿದ್ದಾರೆ.

## ಮಾಂಸಾಹಾರ

ವಚನಶಾಸ್ತ್ರದ ಬೋಧೆಯು ಬಸವೇಶ್ವರನ ತರುವಾಯ ನಾಡಿನಲ್ಲಿ ಎಲ್ಲಕಡೆಗೂ ಬಹು ಬಲವಾಗಿ ಕೆಲಕಾಲ ನಡೆಯಿತು. ಇದರಿಂದ ಬಹು ಜನರು ವೀರಶೈವ ಧರ್ಮವನ್ನು ಸ್ವೀಕರಿಸುವವರಾದರು. ಇದರಿಂ

ಮಾಂಸಾಹಾರಿಗಳಾದವರೂ ಮಾಂಸಹಾರ ಮಾಡುವಂಥ ಬೇಡ, ಕುರುಬ ಅಸ್ಪೃಶ್ಯ ಮೊದಲಾದ ಸಮಾಜದವರೂ ವೀರಶೈವ ಧರ್ಮವನ್ನು ಪಾಲಿಸುವವರಾದರು. ಆದರೆ ಇವರಲ್ಲಿ ಬಹು ಜನರು ಉಚ್ಚ ಭಕ್ತಿಯುಳ್ಳವರಾದ್ದರಿಂದ ಶಿವಶರಣರು ಅಂಥವರನ್ನು ತ್ಯಜಿಸದೆ ಅವರಿಗೆ ಮನ್ನಣೆಯನ್ನು ಕೊಡುತ್ತ ಬಂದಿದ್ದಾರೆ. ಇಂಥ ಕೆಲವು ಉದಾಹರಣೆಗಳನ್ನು ನಾವು ಕೆಳಗೆ ಕೊಡುತ್ತೇವೆ.

ತೆಲಗು ಜೊಮ್ಮಯ್ಯನು ಬೇಟೆಯಾಡಿ ಉಪಜೀವಿಸುವವನಾಗಿದ್ದನು. ಆದರೂ ಅವನು ಶಿವಶರಣರ ಮಾಲಿಕೆಯಲ್ಲಿ ಸೇರ್ಪಡೆಹೊಂದಿದ್ದಾನೆ. ಅವನು ವಚನಕಾರನೂ ಇದ್ದಾನೆ. ಗಾಣದ ಕನ್ನಪ್ಪನು ಮೀನು ಬಲೆಗಾರನು. ಅವನು ಬಸವೇಶ್ವರನ ಸಮಕಾಲೀನನು. ಆದರೂ ಕೂಡ ಅವನು ಶಿವಶರಣರಲ್ಲಿ ಎಣಿಸಲ್ಪಟ್ಟಿದ್ದಾನೆ. ಅವನು ವಚನಕಾರನೂ ಇದ್ದಾನೆ. ಶ್ವಪಚಯ್ಯನು ಉಚ್ಚ ತರಗತಿಯ ಶಿವಶರಣನೆಂದು ಬಸವೇಶ್ವರನು ಅವನನ್ನು ತನ್ನ ವಚನಗಳಲ್ಲಿ ಯಾವಾಗಲೂ ಹೊಗಳುತ್ತಾನೆ. ಆದರೆ ಅವನು ನಾಯಿಯ ಮಾಂಸವನ್ನು ತಿನ್ನುವವನಾಗಿದ್ದನು. ಇಂಥ ಅನೇಕರ ಚರಿತ್ರೆಗಳು "ಶಿವಶರಣರ ಚರಿತ್ರೆಗಳು" ಈ ಗ್ರಂಥಗಳಲ್ಲಿ ಬಂದಿದ್ದು ಅವುಗಳನ್ನು ವಾಚಕರು ನೋಡಬಹುದು. ಇವರು ಪೂರ್ವಾಶ್ರಯದಲ್ಲಿ ಹಿಂಸಾಚಾರಿಗಳಾಗಿದ್ದರೂ ಅವರು ವೀರಶೈವರಾದ ಒಳಿಕ ಮಾಂಸಾಹಾರವನ್ನು ತ್ಯಜಿಸಿರಬಹುದೆಂದು ಊಹಿಸಲು ನಮಗೆ ಅವಕಾಶವಿದೆ. ಆದರೆ ಬೇಡರ ಕಣ್ಣಪ್ಪನು, ಶಿರಿಯಾಳನ, ಅಲ್ಲದೆ ತಮಿಳದೇಶದಲ್ಲಿಯ ಪುರಾತನರಲ್ಲಿ ಬಹು ಜನರು ಕಡೆವರೆಗೂ ಪೂರ್ಣ ಮಾಂಸಾಹಾರಿಗಳಾಗಿದ್ದರು. ಆದರೂ ಅವರು ಶಿವಭಕ್ತರೆಂದು ಅವರಿಗೆ ಮನ್ನಣೆಯನ್ನು ವೀರಶೈವ ಗ್ರಂಥಕಾರರು ಕೊಟ್ಟಿದ್ದು ಕಂಡುಬರುತ್ತದೆ.

ಪುರಾತನ ಕಾಲದಲ್ಲಿ ಈ ಸ್ಥಿತಿಯು ಹೇಗಿದ್ದರೂ ಕರ್ನಾಟಕದ ಶಿವಶರಣರು ಮಾತ್ರ ಮಾಂಸಾಹಾರವು ನಿಷಿದ್ಧವಾದುದೆಂದು ತಮ್ಮ ಉಕ್ತಿಗಳಲ್ಲಿ ಸ್ಪಷ್ಟವಾಗಿ ಸಾರಿದ್ದಾರೆ. ದೇವರ ದಾಸಿಮಯ್ಯನು ತನ್ನ ಉಕ್ತಿಯಲ್ಲಿ "ನಾನೊಂದು ಸುರಿಗೆಯನೇನೆಂದು ಹಿಡಿವೆನು? ಏನ ಕಿತ್ತೇನನಿರಿವೆನು? ಜಗವೆಲ್ಲ ನೀನಾಗಿಪ್ಪೆ ಕಾಣಾ ರಾಮನಾಥಾ" ಎಂದು ಹೇಳಿದ್ದಾನೆ. ಅವನು ಶ್ರೀಶೈಲದಿಂದ ಹೊರಟು ಒಂದು ನಿಬಿಡವಾದ

ಅರಣ್ಯದಲ್ಲಿ ಬರುತ್ತಿರುವಾಗ್ಗೆ ಹಿಂಸಾಚಾರಿಗಳಾದ ಕಾಡುಜನರು ಅವನಿಗೆ ಭೆಟ್ಟಿಯಾದರು. ಆಗ ಅವರಿಗೆ ಅಹಿಂಸಾಚಾರದಲ್ಲಿರಲು ಬೋಧಿಸಿ ಅವರಿಗೆ ಲಿಂಗಧಾರಣೆಯನ್ನು ಮಾಡಿ ಅವರಿಗೆ ಗಾಣವನ್ನಾಡಿಸಿ ತೈಲವನ್ನು ತೆಗೆದು ಶ್ರೀಮಲ್ಲಿಕಾರ್ಜುನ ಲಿಂಗಕ್ಕೆ ಅರ್ಪಿಸುವ ಕಾಯಕವನ್ನು ನಿಯಮಿಸಿಕೊಟ್ಟನು. ಬಸವೇಶ್ವರನ ಕಾಲದಲ್ಲಿ ಬ್ರಾಹ್ಮಣರು ಯಜ್ಞಯಾಗಾದಿಗಳನ್ನು ಬಹು ಹೆಚ್ಚಾಗಿ ಮಾಡುತ್ತಿದ್ದರೆಂದು ತೋರುತ್ತದೆ. ಬಸವೇಶ್ವರನು ಬ್ರಾಹ್ಮಣರು ಹೀಗೆ ಆಚರಿಸದ ಅಹಿಂಸಾಚಾರಿಗಳಾಗಿರಬೇಕೆಂದು ಬಹು ಮಾರ್ಮಿಕ ಶಬ್ದಗಳಿಂದ ತನ್ನ ವಚನಗಳಲ್ಲಿ ಹೇಳಿದ್ದಾನೆ. ಅವನು ಕ್ಷುದ್ರದೇವತೆಗಳನ್ನು ನಂಬಿ ಅವುಗಳಿಗೆ ಬಲಿ ಕೊಡುವದನ್ನು ತನ್ನ ವಚನಗಳಲ್ಲಿ ಟೀಕಿಸಿದ್ದಾನೆ. "ದಯವೇ ಧರ್ಮದ ಮೂಲವಯ್ಯ" ಎಂದು ಹೇಳುತ್ತ "ದಯವಿಲ್ಲದ ಧರ್ಮವದಾವುದಯ್ಯ" ಎಂದು ನುಡಿದಿದ್ದಾನೆ. ಹೀಗೆಯೇ ಕರ್ನಾಟಕದ ಶಿವಶರಣರು ಯಾವಾಗಲೂ ಆಚರಿಸುತ್ತ ಬಂದಿರುವರು. ದಸರಯ್ಯನೆಂಬ ಶಿವಶರಣನು ಗಿಡ್ಡಗಳು ನೊಂದಾವೆಂದು ಅವುಗಳನ್ನು ಬಿರುಸಾಗಿ ಬಾಗಿಸಿ ಅವುಗಳಲ್ಲಿದ್ದ ಪುಷ್ಪಗಳನ್ನು ಹರಿಯುತ್ತಿದ್ದಿಲ್ಲ. ಗಿಡಗಳ ಕೆಳಕ್ಕೆ ಬಿದ್ದ ಪುಷ್ಪಗಳಿಂದಲೇ ಅವನು ತನ್ನ ಲಿಂಗಾರ್ಚನೆಯನ್ನು ನೆರವೇರಿಸಿಕೊಳ್ಳುವನು. ಈ ರೀತಿಯಾಗಿ ಶಿವಶರಣರು ಮಾಂಸಾಹಾರದ ನಡೆಯನ್ನು ತೀರ ನಿಲ್ಲಿಸಿದ್ದಾರೆ. ಇದು ಅವರು ಮಾಡಿದ ಮಹತ್ವದ ಸಮಾಜ ಸುಧಾರಣೆಯ ಕಾರ್ಯವೆಂದು ನಾವು ಹೇಳಬಹುದು.

ಇಂಥ ಅನೇಕ ದೋಷಗಳು ಉಂಟಾದುದನ್ನು ನಾವು ವೀರಶೈವ ಸಮಾಜದಲ್ಲಿ ಕಾಣಬಹುದು. ಬಹು ದೊಡ್ಡ ಪ್ರಮಾಣದಿಂದ ಜನರನ್ನು ವೀರಶೈವ ಮತಾನುಯಾಯಿಗಳನ್ನಾಗಿ ಮಾಡಿದ್ದರ ಪರಿಣಾಮವು ಇದಾಗಿದೆಂದು ಹೇಳಬಹುದು. ಆದರೆ ವಚನಕಾರರು ತಮ್ಮ ತತ್ವಗಳನ್ನು ಸಾರುವಲ್ಲಿ ಮಾತ್ರ ಹೀಗೆ ತಪ್ಪು ದಾರಿಯನ್ನು ಹಿಡಿದ ಇಂಥ ಭಕ್ತರನ್ನೂ ಜಂಗಮರನ್ನೂ ಅತ್ಯಂತ ಕಟು ಶಬ್ದಗಳಿಂದ ತಮ್ಮ ವಚನಗಳಲ್ಲಿ ಟೀಕಿಸಿದ್ದಾರೆ. ಅವರ ಇಂಥ ಅಸಂಖ್ಯ ವಚನಗಳನ್ನು ನಾವು ಅವರ ವಚನಗಳಲ್ಲಿ ಕಾಣಬಹುದು. ನಾವು ಪ್ರಕಟಪಡಿಸಿದ ಪ್ರತಿಯೊಂದು ವಚನ ಗ್ರಂಥದಲ್ಲಿ ಇವು ಇರುತ್ತವೆ. ಹಾಗೆಯೇ

ಬಸವೇಶ್ವರನ ಕಾಲದಲ್ಲಿದ್ದ ಶಿವಶರಣರು ಸಹ ಜಂಗಮರ ಸ್ವೈರ ವೃತ್ತಿಯನ್ನು ಬಹು ಸ್ಪಷ್ಟ ಶಬ್ದಗಳಿಂದ ಹಳಿದಿರುವರು. ಈ ವಿಷಯವಾಗಿ ವಾಚಕರು ಗಟ್ಟಿವಾಳಯ್ಯನ ಚರಿತ್ರೆ (ಶಿವಶರಣರ ಚರಿತ್ರೆಗಳು ಭಾಗ ೨ ಪುಟ ೧೬೭) ಇದನ್ನು ನೋಡಬೇಕು.

## ವಚನಗಳನ್ನು ಗೌಪ್ಯವಾಗಿಟ್ಟದ್ದು.

ನಾವು ಮೇಲೆ ಉಲ್ಲೇಖಿಸಿದ ದೋಷಗಳನ್ನು ಪರೀಕ್ಷಿಸಿದಲ್ಲಿ ಅವು ಗಳುಂಟಾಗಲಿಕ್ಕೆ ಜನರಲ್ಲಿದ್ದ ಮತ ತತ್ವಗಳ ಜ್ಞಾನದ ಅಭಾವವೇ ಮುಖ್ಯಕಾರಣವೆಂದು ಹೇಳಬಹುದು. ವಚನ ಗ್ರಂಥಗಳಲ್ಲಿರುವ ತತ್ವಗಳ ಪ್ರಸಾರವು ಉಳಿವಿಯ ಕದನವಾದ ಬಳಿಕ ಕೆಲವು ಕಾಲ ಅಂದರೆ ೬೦-೭೦ ವರ್ಷಗಳ ವರೆಗೆ ಮಾತ್ರ ಬಹಿರಂಗವಾಗಿ ನಡೆಯಿತೆಂದು ತೋರುತ್ತದೆ. ಆವರೆ ಮುಂದೆ ಅವುಗಳ ಜ್ಞಾನವು ಸಮಾಜದಲ್ಲಿ ಕಡಿಮೆಯಾಗುತ್ತ ನಡೆಯಿತು. ಜಂಗಮರು ಮುಖ್ಯವಾಗಿ ಮಠಾಧಿಕಾರಿಗಳು ವಚನಗಳನ್ನು ಗುಪ್ತವಾಗಿ ಇಡಲಿಕ್ಕೆ ಹತ್ತಿದರು. ಜಂಗಮರಿಂದ ಉಪದೇಶ ಹೊಂದಿದವರು ಮಾತ್ರ ವಚನಗಳನ್ನು ಅರಿಯಲು ಪಾತ್ರರೆಂದು ಅವರು ಪ್ರಚಾರ ಮಾಡಹತ್ತಿದರು. ಆದ್ದರಿಂದ ವಚನಗಳನ್ನು ಓದುವದು ಕಡಿಮೆಯಾಗಹತ್ತಿತು. ವಚನಗಳನ್ನು ತಿಳಿಯಲಪೇಕ್ಷಿಸುವವನು ಮೊದಲು ಕೆಲವೊಬ್ಬ ಗುರುವಿನಿಂದ ಉಪದೇಶವನ್ನು ಹೊಂದಬೇಕು, ಆ ಮೇಲೆ ಲಿಂಗದ ನೆಲೆ ಕಲೆಗಳನ್ನು ಅರಿಯಲು ಅವನು ಅರ್ಹನು ಎಂಬ ಕಟ್ಟುಗಳನ್ನು ಇಡಹತ್ತಿದರು. ಇದರಿಂದ ವಚನಗಳ ಅಭ್ಯಾಸವು ಕೆಲವು ಕಾಲದ ವರೆಗೆ ಕುಂಠಿತವಾಗುತ್ತ ನಡೆಯಿತು. ಅವುಗಳ ಪರಿಚಯವು ಹೀಗೆ ಕಡಿಮೆಯಾಗಹತ್ತಿದ ಕೂಡಲೆ ಬಸವಾದಿ ಪ್ರಮಥರ ವಿಶಾಲ ಮಾರ್ಗವನ್ನು ಜನರು ಅರಿಯದೆ ಹೋದರು. ಮಠಾಧಿಕಾರಿಗಳು ಅಜ್ಞಾನಿಗಳಾದ ಜನರಲ್ಲಿ ಅಂಧ ಶ್ರದ್ಧೆಯನ್ನು ಹೆಚ್ಚಿಸಲು ಪ್ರಯತ್ನಮಾಡಹತ್ತಿದರು. ಇದರಿಂದ ಷಟ್ ಸ್ಥಲ ಶಾಸ್ತ್ರದ ತತ್ವಗಳು ಯಾವವು, ಶಿವಾನುಭವ, ಪಂಚಾಚಾರಗಳ ರೀತಿ ಏನು, ಅಷ್ಟಾವರಣಗಳ ರೀತಿ ನಡೆಗಳ ಸ್ವರೂಪ ಯಾವುದು, ಇವುಗಳು ತೀರ ಮರೆತು ಹೋಗಲಿಕ್ಕೆ ಹತ್ತಿದವು. ೧೪-೧೫ ನೇ ಶತಮಾನಗಳಲ್ಲಿ ಬರೆದ ಷಟ್ ಸ್ಥಲ ಗ್ರಂಥಗಳಲ್ಲಿ ಸಹ, ಷಟ್ ಸ್ಥಲ ಶಾಸ್ತ್ರದಲ್ಲಿ ಬರುವ ಶಬ್ದಗಳ ಉಲ್ಲೇಖಗಳು

ಮಾತ್ರ ದೊರೆಯುತ್ತವೆಯೇ ಹೊರತು ಅವುಗಳ ಅರ್ಥ ಮತ್ತು ಸಂಬಂಧ ಇವುಗಳ ಪೂರ್ಣ ವಿವೇಚನೆ ಇರುವದಿಲ್ಲ. ಹೀಗೆ ಬಸವೇಶ್ವರನ ತರುವಾಯ ೧೦೦-೧೫೦ ವರ್ಷಗಳಲ್ಲಿ ಶಿವಶರಣರ ತತ್ವಗಳ ಪರಿಚಯವೇ ಜನರಲ್ಲಿ ಉಳಿಯಲಿಲ್ಲ.

ಹರಿಹರನ ರಗಳೆಗಳಲ್ಲಿ ಅಲ್ಲಲ್ಲಿ ವಚನಗಳು ಉದಹರಿಸಲ್ಪಟ್ಟರೂ ಕೂಡ ವಚನಕಾರರ ತತ್ವಗಳ ಪೂರ್ಣ ನಿರೂಪಣೆ ಅವುಗಳಲ್ಲಿ ಕಂಡು ಬರುವದಿಲ್ಲ. ಭೀಮ ಕವಿಯ ಬಸವ ಪುರಾಣ, ಚನ್ನಬಸವ ಪುರಾಣ ಗುಬ್ಬಿ ಮಲ್ಲಹಣನ ವೀರಶೈವಾಮೃತ ಮಹಾ ಪುರಾಣ, ಗಣಭಾಷ್ಯರತ್ನ ಮಾಲೆ ಇವುಗಳಲ್ಲಿ ಷಟ್ ಸ್ಥಲಗಳ ವಿಚಾರಗಳು ಕಂಡುಬಂದರೂ ಅವುಗಳಲ್ಲಿ ಸಾದ್ಯಂತ ವಿವೇಚನೆಯು ಇರುವದಿಲ್ಲ. ಮಠಾಧಿಪತಿಗಳು ಶಿವಾನುಭವಶಾಸ್ತ್ರದ ತತ್ವಗಳನ್ನು ಗುಪ್ತವಾಗಿಟ್ಟು ಕೊಂಡಿದ್ದರ ಪರಿಣಾಮವು ಇದಾಗಿದೆ.

## ಜಂಗಮರು ಬೋಧಮಾಡುವ ರೀತಿಗಳು

ಬಹುಜನರು ಬಸವೇಶ್ವರನೂ ಶಿವಶರಣರೂ ಜನರಿಗೆ ಅನೇಕ ಆಶೆ ಆಮಿಷಗಳನ್ನು ತೋರಿಸಿ ಅಥವಾ ಅವರ ಮೇಲೆ ಬಲಾತ್ಕಾರಮಾಡಿ ಅವರನ್ನು ವೀರಶೈವ ಧರ್ಮದಲ್ಲಿ ಸೇರಿಸಿಕೊಳ್ಳುತ್ತಿದ್ದರೆಂದು ಹೇಳುವದುಂಟು. ಆದರೆ ಇಂಥ ಪ್ರಯತ್ನಗಳು ಹಿಂದುಸ್ತಾನದಲ್ಲಿ ಯಾವ ಸಮಾಜದಲ್ಲಿಯೂ ನಡೆದಿರುವದಿಲ್ಲ. ಇಂಥವುಗಳು ಫಲಕಾರಿಯಾಗಲಾರವು. ಒಂದು ಕಾಲದಲ್ಲಿ ಬೌದ್ಧ, ಜೈನ, ಶೈವ ಧರ್ಮಗಳು ದೇಶದಲ್ಲಿ ಬಹು ವಿಸ್ತಾರ ಹೊಂದಿದ್ದವು. ಆದರೆ ಅವುಗಳ ತತ್ವಗಳಿಗೆ ಜನರು ಒಲಿದು ಆ ಧರ್ಮಗಳನ್ನು ಸ್ವೀಕರಿಸಿದರೇ ಹೊರತು ಬಲಾತ್ಕಾರ ಅಥವಾ ಆಶೆ ಆಮಿಷಗಳ ಮೂಲಕವಲ್ಲ. ಶಿವಶರಣರಾದರೂ ಇದಕ್ಕೆ ಅಪವಾದವಾಗಿರುವದಿಲ್ಲ.

ಜಂಗಮರು ಹೇಗೆ ಬೋಧ ಮಾಡುತ್ತಿದ್ದರೆಂಬುದನ್ನು ನಾವು ನನ್ನಯ್ಯ ಸುಜ್ಞಾನಿದೇವ ಇವರ ಚರಿತ್ರೆಯಿಂದ ಚನ್ನಾಗಿ ತಿಳಿಯಬಹುದಾಗಿದೆ. ಗುರುವಾದ ಸುಜ್ಞಾನಿ ದೇವನು ಬೇಡರವನಾದ ನನ್ನಯ್ಯನನ್ನು

ಹೇಗೆ ಬೋಧಿಸಿ ಅವನನ್ನು ಸನ್ಮಾರ್ಗಕ್ಕೆ ಹಚ್ಚಿದನೆಂಬುದನ್ನು ನೋಡಿದಲ್ಲಿ ಈಗಿನ ಸುಧಾರಣೆಯ ಕಾಲದಲ್ಲಿ ಸಹ ಪುರಾತನ ಜಂಗಮರ ರೀತಿಗಳು ಅನುಸರಿಸಲು ಯೋಗ್ಯವಾದವುಗಳೆಂದು ಯಾರಾದರೂ ಕೂಡ ಒಪ್ಪಿಕೊಳ್ಳುವಂತೆ ಇದೆ. ವೀರಶೈವ ಧರ್ಮವು ಕೇವಲ ಶಿವಶರಣರ ಪವಾಡಗಳ ಮೂಲಕ ಬೆಳೆದುಬಂದಿಲ್ಲ. ಅದರಲ್ಲಿರುವ ಉಚ್ಚ ತತ್ವಗಳು ಜನತೆಗೆ ಪ್ರಿಯವಾದ್ದರಿಂದ ಅದು ಬೆಳೆದುಬಂದಿದೆ. ಅದರಲ್ಲಿ ಪ್ರಸಿದ್ಧಿಗೆ ಬಂದ ಮಹಾಪುರುಷರು ಪರಧರ್ಮಿಗಳಿಂದ ಹಿಂಸೆಯನ್ನು ಹೊಂದಿದ್ದಾರೆ. ಇದರಿಂದ ಅವರು ಮಾಡಿದ ಕಾರ್ಯಗಳು ಜನರ ಮನಸ್ಸಿನ ಮೇಲೆ ಬಹು ಬಲವಾದ ಪರಿಣಾಮಗಳನ್ನು ಮಾಡಿದವು. ಹೀಗೆ ವೀರಶೈವ ಧರ್ಮವು ಬೆಳೆದಿರುತ್ತದೆ.

ಶಿವಶರಣರು ತಮ್ಮ ಸುತ್ತಲಿನವರು ದುರ್ಮಾರ್ಗಿಗಳೆಂದು ಅವರನ್ನು ಅವರು ಉಪೇಕ್ಷಿಸಿರುವದಿಲ್ಲ. ಅಂಥವರಿಗೂ ಅವರು ಬೋಧೆ ಮಾಡಿ, ಸನ್ಮಾರ್ಗಕ್ಕೆ ಎಳೆದಿದ್ದಾರೆ. ಅವರು ಭವಿಗಳೆಂದು ಅವರನ್ನು ನಿರಾಕರಿಸಿಲ್ಲ. ಇದು ಹೆಂಡದ ಮಾರಯ್ಯನ ಚರಿತ್ರೆಯಿಂದ ಚೆನ್ನಾಗಿ ತಿಳಿದುಬರುತ್ತದೆ. ಮಾರಯ್ಯನು ತನ್ನ ಅರವಟಗೆಯಲ್ಲಿ ಹೆಂಡವನ್ನು ಇಟ್ಟು ಭವಿಗಳನ್ನು ತನ್ನಲ್ಲಿ ಬರಮಾಡಿಕೊಳ್ಳುವನು. ಅವರು ತನ್ನಲ್ಲಿ ಬಂದಕಾಲಕ್ಕೆ ಅವರಿಗೆ ತತ್ವೋಪದೇಶವನ್ನು ಮಾಡುವನು ಈ ಪ್ರಕಾರ ಅವನು ಆಚರಿಸುತ್ತ ಸದಾಚಾರ ನೀತಿಗಳು ಸಮಾಜದಲ್ಲಿ ನೆಲೆಗೊಳ್ಳಲು ಪ್ರಯತ್ನಿಸಿದ್ದಾನೆ.

ಶಿವಶರಣರು ಜನರಲ್ಲಿ ಹಾಸ್ಯ ಮಾಡುತ್ತಲೂ, ಕುಣಿದು ಬಾರಿಸುತ್ತಲೂ, ಪುರಾತನರ ಚರಿತ್ರೆಗಳನ್ನು ಪದ ಪದ್ಯಗಳಿಂದ ಹಾಡುತ್ತಲೂ ಬಹುರೂಪಿಗಳಾಗಿ ಶರಣರ ನಡೆಯನ್ನು ವರ್ಣಿಸುತ್ತಲೂ ಇಂಡಿಯ ಶಾಂತಯ್ಯನಂತೆ ಜನತೆಗೆ ಪಾಠ ಹೇಳುತ್ತಲೂ ನಿಂಬಾಣದ ಗಣೇಶ್ವರನಂತೆ ಕೀರ್ತನೆಗಳನ್ನು ಮಾಡುತ್ತಲೂ ದೇಶದಲ್ಲಿ ಬೋಧ ಮಾಡಿದ್ದಾರೆ. ಈ ಕಾಲದಲ್ಲಿ ಜಂಗಮರೂ ಭಕ್ತರೂ ಭಿಕ್ಷುಕರೂ ಎಲ್ಲರೂ ಕೂಡಿಕೊಂಡು ಧರ್ಮಾಭಿವೃದ್ಧಿಯ ಕಾರ್ಯಗಳನ್ನು ಮಾಡಿದ್ದಾರೆ. ಇದರಿಂದ ವೀರಶೈವ ಧರ್ಮವು ದೇಶದಲ್ಲಿ ಪ್ರಸಾರ ಹೊಂದಿರುತ್ತದೆ.

ಈ ಕಾಲದಲ್ಲಿ ಭಕ್ತವರ್ಗ, ಜಂಗಮವರ್ಗ ಎಂಬ ಸ್ವತಂತ್ರ ವರ್ಗಗಳಿರಲಿಲ್ಲ. ಗುರು, ಲಿಂಗ, ಜಂಗಮವೂ, ಪಾದೋದಕ, ಪ್ರಸಾದ, ಮಂತ್ರಗಳೂ ವಿಭೂತಿ ರುದ್ರಾಕ್ಷಿಗಳೂ ತಮ್ಮಲ್ಲಿಯೇ ಇದ್ದು ಅವುಗಳನ್ನು ಅಲ್ಲಿಯೇ ಜಾಗ್ರತಪಡಿಸುವದೇ ಶಿವಶರಣರ ಮಾರ್ಗವಾಗಿದೆ. ಈ ಆವರಣಗಳಿದ್ದ ಭಕ್ತರಲ್ಲಿ ಭೇದಾಭೇದವನ್ನು ಎಣಿಸಕೂಡದು. ಆದ್ದರಿಂದ ಬಸವೇಶ್ವರನ ಕಾಲದಲ್ಲಿ ಭಕ್ತ ಜಂಗಮರೆಂಬ ಭಿನ್ನ ಭಾವನೆ ಇರದೆ ಅವರಲ್ಲಿ ಸಮರಸಾಚರಣೆಯು ಇದ್ದಿತು. ವೀರಶೈವರು ಗ್ರಹಿಸುವ ಪಾದೋದಕ ಪ್ರಸಾದಗಳಲ್ಲಿ ಇದೇ ಭಾವವು ಇರುತ್ತದೆ. ಇದರಿಂದ ನಾಡಿನ ಜನತೆಯಲ್ಲಿ ಒಂದು ಬಲವಾದ ಐಕ್ಯವು ಪ್ರಾಪ್ತವಾಯಿತು. ಹಿಂದಿನ ಕಾಲದಲ್ಲಿ ಲಿಂಗಧಾರಣೆ ಹೊಂದಿದ ಹೊಲೆಯ, ಬ್ರಾಹ್ಮಣ, ಮೊದಲಾದವರಲ್ಲಿ ಭಿನ್ನಭಾವವಿರಲಿಲ್ಲ. ಹೊಲೆಯರಾದ ಉರಿಲಿಂಗಪೆದ್ದಿ, ಚನ್ನಯ್ಯ, ಕಕ್ಕಯ್ಯಗಳು ಉಚ್ಚ ಸ್ಥಾನವನ್ನು ಹೊಂದಿದರು. ಅಸ್ಪೃಶ್ಯನಾದ ಮಗಳಸಿದ್ಧನು ಜಗದ್ಗುರುವಾದನು. ಇಂಥ ಮಹತ್ತರವಾದ ಸಮಾಜ ಕ್ರಾಂತಿಯು ಬಸವೇಶ್ವರನ ಕಾಲದಲ್ಲಿ ಉಂಟಾದ್ದರಿಂದ ದೇಶದಲ್ಲಿ ವೀರಶೈವ ಧರ್ಮವು ಎಲ್ಲ ಸಮಾಜಗಳಲ್ಲಿ ಬೆಳೆದಿರುತ್ತದೆ.

ಆದರೆ ಕೆಲವು ಕಾಲ ಹೋದಬಳಿಕ ದೇಶದಲ್ಲಿ ಮಠಗಳ ಸಂಖ್ಯೆಯು ಅಪರಿಮಿತವಾಗಿ ಬೆಳೆಯಿತು. ಆಗ ಮಠಾಧಿಕಾರಿಗಳ ವರ್ಗವು ಉಂಟಾಯಿತು. ಈ ಮಠಗಳಿಗೆ ಭೂದಾನಗಳೂ ಕಾಣಿಕೆಗಳೂ ಹೇರಳವಾಗಿ ಬರಹತ್ತಿದವು. ಆಗ ಮಠಾಧೀಶ್ವರರು ಸ್ವಾಭಾವಿಕವಾಗಿ ಮಠಗಳು ತಮ್ಮಲ್ಲಿ ವಂಶಪರಂಪರೆಯಾಗಿ ಇರಬೇಕೆಂದು ಅಪೇಕ್ಷಿಸಹತ್ತಿದರು. ಇದರಿಂದ ಹಿಂದಿನ ಕಾಲದಲ್ಲಿದ್ದ ಉಚ್ಚ ನೀತಿಮತ್ತೆಯು ಜಂಗಮರಲ್ಲಿಯೂ ಕಡಿಮೆಯಾಗಲು ಕಾರಣವಾಯಿತು. ಆದರೆ ಹಾಗೆ ತಪ್ಪು ದಾರಿಯಿಂದ ಆಚರಿಸುವ ಜಂಗಮರನ್ನು ವಚನಕಾರರು ಅತ್ಯಂತ ಸ್ಪಷ್ಟ ಶಬ್ದಗಳಿಂದ ಹಳಿದಿದ್ದಾರೆ. ನಾವು ಪ್ರಕಟಪಡಿಸಿದ ವಚನ ಗ್ರಂಥಗಳಲ್ಲಿ ಶರಣಸ್ಥಲದಲ್ಲಿ 'ತಾಮಸ ಜಂಗಮ' ಎಂಬ ಶಿರೋಲೇಖದಲ್ಲಿ ದುಃಶೀಲರಾದ ಇಂಥ ಜಂಗಮರ ನಡೆಗಳನ್ನು ಹೇಗೆ ಟೀಕಿಸಿದ್ದಾರೆಂಬುದನ್ನು ವಾಚಕರು ನೋಡಬಹುದು.

## ಶೈವರು ವೀರಶೈವರು

ಜಂಗಮರು, ಶಿವಭಕ್ತಿಯುಳ್ಳವರು, ಶಿವಜ್ಞಾನಿಗಳು, ಶಿವಮತವನ್ನು ಪ್ರಸಾರ ಮಾಡುವವರು ಎಂದು ಯಾವಾಗಲೂ ಹೇಳಲ್ಪಡುವದುಂಟು. ಆದರೆ 'ಶಿವ' ಈ ಶಬ್ದದ ಅರ್ಥದಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾಗುತ್ತ ಬಂದಿವೆ. ಪುರಾತನ ಕಾಲದಲ್ಲಿ 'ಶಿವ' ಎಂಬವನು ಒಬ್ಬನೇ ಇದ್ದು ಅವನು ಸರ್ವವ್ಯಾಪಿಯು, ಅವನೇ ಜಗತ್ತನ್ನು ಸಾಗಿಸಿಕೊಂಡು ಹೋಗುವವನು, ಅವನ ನಿಯಂತ್ರಣದಲ್ಲಿಯೇ ಗಣಾಧೀಶ್ವರರು ಕಾರ್ಯ ಮಾಡುವರು ಎಂಬ ವಿಚಾರಗಳಿದ್ದವು. ಇವನಿಗೆ ತತ್ಪುರುಷ ವಾಮದೇವಾದಿ ಪಂಚ ಮುಖಗಳು ಇದ್ದು ಈ ಪಂಚ ಮುಖಗಳಿಂದ ಪಂಚಾಕ್ಷರಗಳ ಉತ್ಪತ್ತಿಯು ಈ ಮೊದಲಾದ ವಿಚಾರಗಳಿದ್ದವು. ಈ ವಿಚಾರಗಳನ್ನು ಹೇಳುವಂಥದೇ ಶಿವಧರ್ಮವು. ವಚನಕಾರರು ಶಿವನ ವಿಷಯವಾಗಿ ತಮ್ಮ ಉಕ್ತಿಗಳಲ್ಲಿ ನಿರೂಪಿಸುವದುಂಟು. ಈ 'ಶಿವ' ಶಬ್ದವು 'ಪರಬ್ರಹ್ಮ' ಈ ಶಬ್ದಕ್ಕೆ ಪ್ರತಿಯಾಗಿ ಇರುತ್ತದೆಂದು ನಾವು ಹೇಳಬಹುದು.

ಆದರೆ ಮುಂದೆ ವೇದಾಂತಿಗಳ ಮತ್ತು ಪುರಾಣಿಕರ ಕಾಲದಲ್ಲಿ ತ್ರಿಮೂರ್ತಿಗಳ ವಿಚಾರಗಳು ಪ್ರಾಬಲ್ಯವನ್ನು ಹೊಂದಹತ್ತಿದವು. ಆಗ 'ಶಿವ' ಎಂದರೆ ತ್ರಿಮೂರ್ತಿಗಳಲ್ಲಿ ಒಬ್ಬನು ಎಂಬ ಅಭಿಪ್ರಾಯವು ಸಮಾಜದಲ್ಲಿ ರೂಢವಾಯಿತು. ತ್ರಿಮೂರ್ತಿಗಳಲ್ಲಿ ಬ್ರಹ್ಮನು ಹುಟ್ಟಿಸುವವನು, ವಿಷ್ಣುವು ಕಾಯುವವನು, ಶಿವನು ಸಂಹಾರ ಮಾಡುವವನು, ಎಂಬ ವಿಚಾರಗಳು ಇರುತ್ತವೆ. ಆದರೆ ಶೈವ ಧರ್ಮದಲ್ಲಿ ಈ ತಿಳುವಳಿಕೆಯು ಇರಲಿಲ್ಲ. ಈ ಮೂರೂ ಕಾರ್ಯಗಳನ್ನು ಮಾಡುವವನು ಶಿವನೊಬ್ಬನೇ ಹೊರ್ತು ಬೇರಾವ ದೇವತೆಯು ಮಾಡುವದಿಲ್ಲ ಎಂಬ ವಿಚಾರವು ಇರುತ್ತದೆ. ಆದರೆ ತ್ರಿಮೂರ್ತಿಗಳ ಕಲ್ಪನೆಯು ಪ್ರಬಲವಾಗಹತ್ತಲು ವೀರಶೈವರು ತಾವು ಈ ತ್ರಿಮೂರ್ತಿಗಳಲ್ಲೊಬ್ಬನಾದ ಶಿವನ ಅನುಯಾಯಿಗಳು ಎಂದು ಹೇಳಿಕೊಳ್ಳಹತ್ತಿದರು. ಉಳಿದ ಇಬ್ಬರಾದ ಬ್ರಹ್ಮ ವಿಷ್ಣು ಇವರ ಅನುಯಾಯಿಗಳು ತಾವಲ್ಲವೆಂದು ತಿಳಿಯಹತ್ತಿದರು. ಆದ್ದರಿಂದ ತಾವು ವೀರಶೈವರೆಂದು ಕರೆದುಕೊಳ್ಳಹತ್ತಿದರು. ಆದರೆ ಒಬ್ಬನೇ ಆದ ಶಿವನನ್ನು ಶೈವರು ಲಿಂಗರೂಪದಿಂದ ಪೂಜಿಸುತ್ತಾರೆ.

ಈ ಲಿಂಗದಲ್ಲಿ ಉಚ್ಚ ತಾತ್ವಿಕ ವಿಚಾರಗಳಿರುತ್ತವೆ. ಆದರೆ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನನ್ನು ಶಿವಭಕ್ತರು ವಿಗ್ರಹ ರೂಪದಲ್ಲಿ ಪೂಜಿಸುವದುಂಟು. ಅಂದರೆ ಅವನು ರುಂಡಮಾಲಾಧರನು, ಜಡೆಯಲ್ಲಿ ಗಂಗೆ, ಖಟ್ವಾಂಗಧರನು, ನಂದಿವಾಹನನು ಎಂದು ಪುರಾಣಗಳಲ್ಲಿ ಕಥೆಗಳಿದ್ದು ಅವುಗಳಿಗನುಸರಿಸಿ ಶಿವನ ವಿಗ್ರಹಗಳನ್ನು ಇವರು ಮಾಡಿ ಪೂಜಿಸುವವರಾದರು. ಆದರೆ ಇದು ಲಿಂಗಾಂಗಿಗಳ ಧರ್ಮಕ್ಕೆ ಹೊರತಾದುದು. ಇವರು ತಾವು ಶಿವಭಕ್ತರು, ಶೈವರು ಎಂದು ಮಾತ್ರ ಹೇಳಿಕೊಳ್ಳುವರು

ಪುರಾತನ ವಚನ ಗ್ರಂಥಗಳಲ್ಲಿ ವೀರಶೈವ ಈ ಶಬ್ದವು ಬರುವದಿಲ್ಲ. ಬಸವೇಶ್ವರನ ವಚನಗಳಲ್ಲಿ "ವೀರಶೈವ" ಈ ಶಬ್ದವು ಎಲ್ಲಿಯೂ ಬಂದಿಲ್ಲ. ಆದರೆ ಈ ಶಬ್ದವು ೧೪ ನೆಯ ಶತಮಾನದ ತರುವಾಯ ವೀರಶೈವ ಗ್ರಂಥಗಳಲ್ಲಿ ಬರಹತ್ತುತ್ತದೆ. ಅಷ್ಟರಲ್ಲಿ ವಚನ ಶಾಸ್ತ್ರದ ವಿಚಾರಗಳು ಸಮಾಜದಲ್ಲಿ ಲುಪ್ತವಾಗುತ್ತ ನಡೆದಿದ್ದವು. ಈ ಕಾಲದಲ್ಲಿ ಶಿವ ಹೆಚ್ಚೋ ವಿಷ್ಣು ಹೆಚ್ಚೋ ಎಂಬ ವಾಗ್ವಾದಗಳು ದೇಶದಲ್ಲಿ ನಡೆಯುತ್ತಾ ಇದ್ದವು. ಅವುಗಳಲ್ಲಿ ವೀರಶೈವರು ಶಿವನು ಶ್ರೇಷ್ಠನೆಂದು ತಿಳಿಯುವ ಪಂಗಡಕ್ಕೆ ಹೊಂದಿದವರಾಗಿದ್ದರು. ಆದ್ದರಿಂದ ವೀರಶೈವ ಶಬ್ದವು ಆಗ ಅವರ ಗ್ರಂಥಗಳಲ್ಲಿ ಪ್ರಚಾರದಲ್ಲಿ ಬರಹತ್ತಿತು. ಆದರೆ ಶಿವಶರಣರ ತತ್ವಗಳನ್ನು ಮನ್ನಿಸುವವರು ತಾವು ಲಿಂಗವಂತರು, ಲಿಂಗಾಯತರು, ಲಿಂಗಾಂಗಿಗಳು ಲಿಂಗಿಗಳು ಎಂದು ಹೇಳಿಕೊಳ್ಳುವದೇ ಸರಿಯಾದ ಮಾರ್ಗವೆಂಬ ಅಭಿಪ್ರಾಯಗಳು ಪುರಾತನ ವಚನ ಗ್ರಂಥಗಳಲ್ಲಿರುತ್ತವೆ.

'ಜಂಗಮರು' ಎಂಬ ಶಿರೋಲೇಖದ ಕೆಳಗೆ ನಾವು ವಿವರಿಸಿದ ಮೇಲಿನ ಸಂಗತಿಗಳ ಮೇಲಿಂದ ವೀರಶೈವ ಸಮಾಜದಲ್ಲಿ ಕಾಲಕಾಲಕ್ಕೆ ಅನೇಕ ಮಾರ್ಪಾಡುಗಳಾಗುತ್ತ ಬಂದವೆಂಬುದು ವಾಚಕರ ನಿದರ್ಶನಕ್ಕೆ ಬಂದಿರಬಹುದು. ಮೊದಲು ಜಂಗಮರು, ಹಿಂದುಸ್ತಾನದಲ್ಲೆಲ್ಲ ಶಿವ ಮತವನ್ನು ಸಾರುತ್ತ ಸಂಚರಿಸುವವರಾಗಿದ್ದರು. ಅವರು ವೀರಶೈವರಿದ್ದ ಸ್ಥಾನಗಳಿಗೆ ಆಗಿಂದಾಗ್ಗೆ ಹೋಗಿ ಅವರಿಗೆ ಉತ್ತೇಜನ ಕೊಡುವರು. ಮತ್ತು ಅವರ ಬಿಕ್ಕಟ್ಟುಗಳಲ್ಲಿ ಸಹಾಯಕರಾಗಿ ನಿಲ್ಲುವರು.

ಬಸವೇಶ್ವರನು ಕಲ್ಯಾಣದಲ್ಲಿದ್ದಾಗ್ಗೆ ಅವರ ದೊಡ್ಡ ಸಮುದಾಯವು ಅವನಲ್ಲಿ ನೆರೆಯಿತು. ಮುಂದೆ ಅಲ್ಲಿ ಶಿವಾನುಭವ ಮಂಟಪವು ಸ್ಥಾಪಿತವಾಯಿತು. ಈ ಮಂಟಪದಲ್ಲಿದ್ದ ಶಿವಶರಣರ ನಿರೀಕ್ಷಣೆಯಲ್ಲಿ ಜಂಗಮರು ಕಾರ್ಯಮಾಡಹತ್ತಿದರು. ಮುಂದೆ ಬಿಜ್ಜಳನೊಡನೆ ಹಗೆತನವು ಉಂಟಾಗಲು ಅನೇಕ ಯುದ್ಧಗಳಾದವು ಅವುಗಳಲ್ಲಿ ಜಂಗಮರೂ ಭಕ್ತರೂ ಭಾಗವಹಿಸಿ ಕಾದಾಡಿದರು. ಅವುಗಳಲ್ಲಿ ಅವರು ಕಡೆಗೆ ಜಯಶೀಲರಾದರು. ಮುಂದೆ ಜಂಗಮರು ಶಿವಶರಣರ ತತ್ವಗಳನ್ನು ದೇಶದಲ್ಲೆಲ್ಲ ಸಾರುತ್ತ ಅದನ್ನು ಪ್ರಸಾರಮಾಡಿದರು. ಅವುಗಳನ್ನು ಪ್ರಸಾರ ಮಾಡಿದಹಾಗೆ ಎಲ್ಲ ಕಡೆಗೂ ಮಠಗಳು ಸ್ಥಾಪಿಸಲ್ಪಡಹತ್ತಿದವು. ಆಗ ಅವುಗಳಲ್ಲಿ ಜಂಗಮರು ಮಠಾಧೀಶರಾದರು. ಇದರಿಂದ ಅವರು ನಾಡಿನಲ್ಲಿ ಸ್ಥಾಯಿಕವಾದರು. ಆಗ ಅವರು ಗ್ರಾಮಗಳಲ್ಲಿದ್ದುಕೊಂಡು ಶಿವಶರಣರ ವಿಚಾರಗಳ ಬೋಧೆ ಮಾಡುವದರಲ್ಲಿ ತೊಡಗಿದರು. ಈ ಬಿಕ್ಕಟ್ಟಿನ ಕಾಲದಲ್ಲಿ ಸಮಾಜದ ಸ್ಥಿರತೆಗೋಸ್ಕರ ಕೆಲವು ಕಟ್ಟುಗಳು ಶಿವಶರಣರಿಂದ ಮಾಡಲ್ಪಟ್ಟವು. ಇವುಗಳ ಪ್ರಭಾವದಿಂದ ವೀರಶೈವ ಸಮಾಜವು ಸ್ಥಿರಗೊಂಡಿರುತ್ತದೆ.

ಒಂದು ಸಮಾಜವು ಸಾಮರ್ಥ್ಯವುಳ್ಳದಾಗ ಬೇಕಾದರೆ, ಅದಕ್ಕೊಂದು ಸಿದ್ಧಾಂತ, ಉಚ್ಚ ಧಾರ್ಮಿಕ ಆಚಾರಗಳು ಮತ್ತು ಕೆಲವು ಸಾಮಾಜಿಕ ನಿಯಮಗಳು ಅವಶ್ಯವಾದವುಗಳು. ವೀರಶೈವ ಸಮಾಜಕ್ಕೆ ಇವೆಲ್ಲವುಗಳನ್ನು ಶಿವಶರಣರು ಗೊತ್ತುಪಡಿಸಿದ್ದಾರೆ-

ಅವರ ತತ್ವಗಳ ಪ್ರಕಾರ ವೀರಶೈವ ಸಮಾಜಕ್ಕೆ ಷಟ್‌ಸ್ಥಲ ಶಾಸ್ತ್ರವೇ ಸಿದ್ಧಾಂತವಾಗಿರುತ್ತದೆ. ಅಷ್ಟಾವರಣಗಳೇ ಅದಕ್ಕೆ ಮಹತ್ವದ ಆಚರಣೆಗಳು. ಪಂಚಾಚಾರಗಳೇ ಸಾಮಾಜಿಕ ಕಟ್ಟುಗಳಾಗಿವೆ. ಈ ಪ್ರಕಾರ ವೀರಶೈವರೆಲ್ಲರೂ ಈ ಮೂರೂ ವಿಷಯಗಳನ್ನು ಪಾಲಿಸತಕ್ಕದ್ದಾಗಿದೆ.

ಹೇಗೆ ಚಾತುರ್ವರ್ಣಗಳು ಬ್ರಾಹ್ಮಣೇ ಸಮಾಜಕ್ಕೆ ಮಹತ್ವವಾದವುಗಳೋ ಹಾಗೆಯೇ ಪಂಚಾಚಾರಗಳು ವೀರಶೈವ ಸಮಾಜಕ್ಕೆ ಮಹತ್ವವಾದವುಗಳು. ಪಂಚಾಚಾರಗಳ ಕಟ್ಟಿಗೆ ಪ್ರತಿಯೊಬ್ಬ ವೀರಶೈವನು ಒಳಗಾಗಿ ನಡೆಯತಕ್ಕದ್ದು. ಮಠಗಳು ಈ ಆಚಾರಗಳು ಸಮಾಜದಲ್ಲಿ ನೆಲೆಗೊಳ್ಳುವಂತೆ ಯಾವಾಗಲೂ ಜಾಗ್ರತೆ ವಹಿಸತಕ್ಕದ್ದು. ಅವು ಶಿಥಿಲ

ವಾದರೆ ಸಮಾಜದ ಕಟ್ಟು ಉಳಿಯಲಾರದು. ಬಸವೇಶ್ವರನ ಕಾಲದಲ್ಲಿ ಮತ್ತು ಅವನ ತರುವಾಯ ಈ ಐದು ಕಟ್ಟುಗಳು ಪಾಲಿಸಲ್ಪಡುತ್ತ ಬಂದಿದ್ದರಿಂದ ವೀರಶೈವ ಸಮಾಜವು ಅನೇಕ ಬಿಕ್ಕಟ್ಟುಗಳೊಳಗಿಂದ ಪಾರಾಗಿ ಬಂದಿತು. ಈ ಕಟ್ಟುಗಳು ಸಮಾಜಕ್ಕೆ ಯಾವಾಗಲೂ ಅನ್ವಯಿಸುವಂಥವು ಇವೆ. ಅವುಗಳನ್ನು ನಮ್ಮ ಪೂರ್ವಿಕರು ಬಹು ಜಾಣತನದಿಂದ ಕಂಡುಹಿಡಿದಿದ್ದಾರೆ. ಅವು ಯಾವವೆಂದರೆ :—

**ಸದಾಚಾರ** :— ಇದು ಇಲ್ಲದಿದ್ದರೆ ಸಮಾಜದ ಕಟ್ಟು ಉಳಿಯಲಾರದು. ಆದರಿಂದಲೇ ಅದಕ್ಕೆ ಬಲವು ಉತ್ಪನ್ನವಾಗುತ್ತದೆ. ಸದಾಚಾರವು ಸಂಘಟನೆಗೆ ತಳಹದಿಯಾಗಿದೆಂದು ಹೇಳಬಹುದು. **ಭೃತ್ಯಾಚಾರ** — ಪ್ರತಿಯೊಬ್ಬನು ತಾನು ಸೇವಕನೆಂಬ ಭಾವನೆಯಿಂದ ವರ್ತಿಸತಕ್ಕದ್ದು. ಸಮಾಜದಲ್ಲಿ ತಾನು ಒಬ್ಬ ನೇತಾರನೆಂದು ಭಾವಿಸಿದಲ್ಲಿ ಸಮಾಜದ ಕಟ್ಟು ಉಳಿಯಲಾರದು. ಅದು ಕೂಡಲೆ ಕಳಚಿಬೀಳುವದು. **ಶಿವಾಚಾರ** — ಜಾತಿಭೇದವನ್ನು ಎಣಿಸದಿರುವದೇ ಶಿವಾಚಾರವು. ಭಕ್ತರೆಲ್ಲರೂ ಶಿವಸ್ವರೂಪಿಗಳೆಂದು ಭಾವಿಸಿ ಅವರಲ್ಲಿ ಹೆಚ್ಚು ಕುಂದುಗಳನ್ನು ಎಣಿಸದೆ ವರ್ತಿಸಬೇಕು. ಈ ಭಾವವು ಇಲ್ಲದ್ದರಿಂದಲೇ ಹಿಂದುಸ್ತಾನವು ದುರ್ಬಲ ರಾಷ್ಟ್ರವಾಗಿದೆ. **ಲಿಂಗಾಚಾರ** — ಶಿವನನ್ನು ಲಿಂಗರೂಪದಲ್ಲಿ ಅರ್ಚಿಸುತ್ತ, ಅವನಲ್ಲಿ ವಿಶ್ವಾಸವನ್ನಿಟ್ಟು ಆಚರಿಸುವದೇ ಲಿಂಗಾಚಾರವು. ಅಂದರೆ ಧರ್ಮದಲ್ಲಿ ವಿಶ್ವಾಸವನ್ನಿಟ್ಟು ವೀರಶೈವನು ವರ್ತಿಸುವದು ಅವನ ಕರ್ತವ್ಯವು. **ಗಣಾಚಾರ** — ತನ್ನನ್ನು ನಿಂದಿಸುವ ಮತ್ತು ಹಿಂಸಿಸುವ ವಿರೋಧಿಗಳನ್ನು ಶಿಕ್ಷಿಸುವದೇ ಗಣಾಚಾರವು ಗಣಾಚಾರವಿರದಿದ್ದರೆ ಸಮಾಜದ ಅಸ್ತಿತ್ವವು ಉಳಿಯಲಾರದು. ಈ ಪ್ರಕಾರ ವೀರಶೈವ ಸಮಾಜಕ್ಕೋಸ್ಕರ ಶಿವಶರಣರು ಕೆಲವು ಕಟ್ಟುಗಳನ್ನು ಮಾಡಿದ್ದಾರೆ. ಇದರಿಂದ ಇದಕ್ಕೆ ಅನೇಕ ಆಘಾತಗಳು ಕಾಲಕಾಲಕ್ಕೆ ಒದಗಿದರೂ ಅವುಗಳೊಳಗಿಂದ ಅದು ಪಾರಾಗಿಬಂದಿರುತ್ತದೆ.

ಈ ಪ್ರಕಾರ ಜಂಗಮರು ವೀರಶೈವ ಸಮಾಜಕ್ಕೋಸ್ಕರ ಮಾಡಿದ ಪ್ರಯತ್ನಗಳನ್ನು ಇಲ್ಲಿ ವಿವರಿಸಿದ್ದೇನೆ. ಈ ವಿವರಣೆಗಳಿಗೆ " ಶಿವಶರಣರ ಚರಿತ್ರೆ " ಗಳು ಭಾಗ ೧, ೨, ೩, ಇವುಗಳಲ್ಲಿ ನಾವು ವಿಶದಪಡಿಸಿದ ಚರಿತ್ರೆಗಳೇ ಆಧಾರಗಳಾಗಿವೆ.